ಬಾಲಬಸಪ್ಪಗಳ ಮೌಖಿಕ ಸಾಹಿತ್ಯ : ಸಾಂಸ್ಕೃತಿಕ ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯದ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧಕರು

ಚೌಡೇಶ ಸಮಾದೇವನವರ

ಮಾರ್ಗದರ್ಶಕರು

ಡಾ. ವೆಂಕಟೇಶ ಇಂದ್ವಾಡಿ

ಪ್ರಾಧ್ಯಾಪಕರು

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೨೦

ಬಾಲಬಸಪ್ಪಗಳ ಮೌಖಿಕ ಸಾಹಿತ್ಯ : ಸಾಂಸ್ಕೃತಿಕ ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯದ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗಕ್ಕೆ ಪಿಎಚ್.ಡಿ.
ಪದವಿಗಾಗಿ ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧಕರು
ಚೌಡೇಶ ಸಮಾದೇವನವರ

ಮಾರ್ಗದರ್ಶಕರು
ಡಾ. ವೆಂಕಟೇಶ ಇಂದ್ವಾಡಿ
ಪ್ರಾಧ್ಯಾಪಕರು

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩೨೭೬
೨೦೨೦

ಸಂಶೋಧಕರ ಪ್ರಮಾಣ ಪತ್ರ

"ಬಾಲಬಸಪ್ಪಗಳ ಮೌಖಿಕ ಸಾಹಿತ್ಯ : ಸಾಂಸ್ಕೃತಿಕ ಅಧ್ಯಯನ " ಎಂಬ ಈ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ **ಡಾ. ವೆಂಕಟೇಶ ಇಂದ್ವಾಡಿ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು, ಯಾವುದೇ ಪದವಿ ಅಥವಾ ಇತರೇ ಉದ್ದೇಶಗಳಿಗೆ ಬಳಸಿಕೊಂಡಿರುವುದಿಲ್ಲವೆಂದು ಈ ಮೂಲಕ ಘೋಷಿಸುತ್ತೇನೆ.

ಸಂಶೋಧಕರು

ಚೌಡೇಶ ಸಮಾದೇವನವರ
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ದಿನಾಂಕ :

ಸ್ಥಳ :

ಮಾರ್ಗದರ್ಶಕರ ದೃಢೀಕರಣ ಪ್ರಮಾಣ ಪತ್ರ

ಚೌಡೇಶ ಸಮಾದೇವನವರ ಇವರು ಪಿಎಚ್.ಡಿ. ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ **"ಬಾಲಬಸಪ್ಪಗಳ ಮೌಖಿಕ ಸಾಹಿತ್ಯ : ಸಾಂಸ್ಕೃತಿಕ ಅಧ್ಯಯನ"** ಎಂಬ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ **ಕನ್ನಡ ಸಾಹಿತ್ಯ ಅಧ್ಯಯನ ವಿಭಾಗಕ್ಕೆ** ಸಲ್ಲಿಸುತ್ತಿದ್ದಾರೆ. ಪ್ರಸ್ತುತ ಈ ಮಹಾಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಭಾಗವನ್ನು, ಯಾವುದೇ ಪದವಿ ಅಥವಾ ಯಾವುದೇ ಇತರೇ ಉದ್ದೇಶಗಳಿಗೆ ಬಳಸಿ ಕೊಂಡಿರುವುದಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ಮಾರ್ಗದರ್ಶಕರು

ಡಾ. ವೆಂಕಟೇಶ ಇಂದ್ವಾಡಿ
ಪ್ರಾಧ್ಯಾಪಕರು
ಕನ್ನಡ ಸಾಹಿತ್ಯಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ದಿನಾಂಕ :

ಸ್ಥಳ :

ಪರಿವಿಡಿ

ಅಧ್ಯಾಯ : ೧
ಅಧ್ಯಯನದ ಉದ್ದೇಶ, ವಿಧಾನ ಮತ್ತು ವ್ಯಾಪ್ತಿ

ಅಧ್ಯಯನದ ಸ್ವರೂಪ ಮತ್ತು ಅಧ್ಯಯನದ ಮಹತ್ವ
ಅಧ್ಯಯನದ ಸಾಂಸ್ಕೃತಿಕ ಪರಿಕಲ್ಪನಾತ್ಮಕ ಚರ್ಚೆ

ಅಧ್ಯಾಯ : ೧

ಬಾಲಬಸಪ್ಪಗಳ ಮೌಖಿಕ ಸಾಹಿತ್ಯ : ಸಾಂಸ್ಕೃತಿಕ ಅಧ್ಯಯನ

ಪ್ರಸ್ತಾವನೆ :

ಜನಪದರ ಮೌಖಿಕ ಸಾಹಿತ್ಯವು ಸಮಾಜಮುಖಿಯಾಗಿರುವುದರಿಂದ ಅದು ಜನಸಂಸ್ಕೃತಿಗೆ ಹೆಚ್ಚು ಹತ್ತಿರವಾಗಿರುತ್ತದೆ. ಜನಸಂಸ್ಕೃತಿಯ ಆಚರಣೆಗಳು ಸಮಾಜದ ಸಂಸ್ಕೃತಿಯ ಭಾಗವಾಗಿರುತ್ತವೆ. ಜನಪದ ಆಚರಣೆಯ ವಿವಿಧ ಪ್ರಕಾರಗಳಾದ ಹಾಡು, ಕುಣಿತ, ಬೇಟೆ, ಜಾತ್ರೆ, ಪರಿಸೆ, ವಿವಿಧ ಧಾರ್ಮಿಕ ಆಚರಣೆಗಳು, ವಿಧಿವಿಧಾನಗಳು, ಸಾಂಪ್ರದಾಯಿಕ ಆಚಾರ ವಿಚಾರಗಳು ಹತ್ತು ಹಲವು ಬಗೆಯ ನಂಬಿಕೆಗಳು ಜನಪದರ ಧಾರ್ಮಿಕತೆ ಮತ್ತು ಮನೋರಂಜನೆಯ ಭಾಗವಾಗಿ ಬೆಳೆದು ಬಂದಿವೆ. ಜನಪದರು ತಮ್ಮ ಗ್ರಾಮ ಸಂಸ್ಕೃತಿಯನ್ನು ಮುನ್ನೆಲೆಗೆ ತರುವ ಪ್ರಯತ್ನದಲ್ಲಿ ಈ ಎಲ್ಲಾ ಬಗೆಯ ಪ್ರಕಾರಗಳನ್ನು ಒಟ್ಟಾಗಿ ಆಚರಿಸುತ್ತಾ, ಜನಸಾಮಾನ್ಯರನ್ನು ಒಂದುಗೂಡಿಸುವ ಮಹತ್ವದ ಕಾರ್ಯವನ್ನು ಅನಾದಿಕಾಲದಿಂದಲೂ ಮಾಡಿಕೊಂಡು ಬಂದಿದ್ದಾರೆ.

ಜನಪದರು ಮೌಖಿಕ ಕಾವ್ಯಗಳನ್ನು ಕಥನವಾಗಿಸುವ ಕಲೆಗಾರಿಕೆಯಲ್ಲಿ ತಮ್ಮದೇ ಆದ ಕುಶಲತೆಯನ್ನು ತಲೆಮಾರಿನಿಂದ ತಲೆಮಾರಿಗೆ ವರ್ಗಾಯಿಸಿಕೊಂಡು ಬಂದಿದ್ದಾರೆ. ಜನಪದರಲ್ಲಿ ಹಾಡುವ ಪರಂಪರೆಯು ಮೌಖಿಕವಾಗಿದ್ದು, ಅದು ಅಕ್ಷರ ರೂಪದ ಓದುವ ಸಾಮಗ್ರಿಗಳನ್ನು ಬಳಸಿಕೊಳ್ಳದಿರುವುದು ಇವರ ಮತ್ತೊಂದು ವೈಶಿಷ್ಟ್ಯವಾಗಿದೆ. ಮೌಖಿಕ ಕಾವ್ಯಗಳನ್ನು ಹಾಡುವಾಗ ಜನಪದ ಕಲಾವಿದರು ಮೌಖಿಕ ಕಾವ್ಯದ ವಿಸ್ತಾರತೆಗೆ ಕಾವ್ಯದಲ್ಲಿನ ಸಿದ್ಧವರ್ಣನೆಗಳು, ಉಪಕತೆಗಳು, ಅಸಂಖ್ಯಾತ ನುಡಿಗಟ್ಟುಗಳನ್ನು ಬಳಸಿಕೊಳ್ಳುವ ಮೂಲಕ, ಕಾವ್ಯವನ್ನು ಕುಗ್ಗಿಸುವ ಮತ್ತು ಹಿಗ್ಗಿಸುವ ಕಲೆಯನ್ನು ಕರಗತ ಮಾಡಿಕೊಂಡಿರುತ್ತಾರೆ. ಜೊತೆಗೆ ಇಡೀ ಕಾವ್ಯವನ್ನು ನೆನಪಿನಲ್ಲಿಟ್ಟುಕೊಂಡಿರುವ ಅವರ ಸರಳ ತಂತ್ರಗಾರಿಕೆಯು ಅತ್ಯಂತ ಮಹತ್ವದ್ದಾಗಿರುತ್ತದೆ. ಈ ರೀತಿಯ ತಂತ್ರಗಾರಿಕೆಗಳನ್ನು ಬಹುತೇಕ ಅನಕ್ಷರಸ್ಥ ಗಾಯಕರು ಬಳಸಿಕೊಂಡಿದ್ದರಿಂದ ಮೌಖಿಕ ಪರಂಪರೆಯು ಜೀವಂತವಾಗಿ ಉಳಿಯಲು ಜನಪದರ ಗಾಯನ ಜ್ಞಾನಮೀಮಾಂಸೆಯೇ ಪ್ರಮುಖ ಕಾರಣವಾಗಿದೆ.

ಜನಪದರು ತಮ್ಮ ಸುತ್ತಮುತ್ತಲಿನ ಸಮಾಜದಲ್ಲಿ ಕಂಡದ್ದನ್ನು, ಕೇಳಿದ್ದನ್ನು ಹಾಡಿನ ರೂಪದಲ್ಲಿ ಕಥೆ ಕಟ್ಟಿ ಮೌಖಿಕತೆಯ ಮೂಲಕ ಹೇಳುವ ಕಥನಕ್ರಮದ ಮಾದರಿಯಲ್ಲಿ ನಿರೂಪಿಸುವ ತಂತ್ರವನ್ನು ಕಂಡುಕೊಂಡಿದ್ದಾರೆ. ಮೌಖಿಕ ಕಥೆಗಳು, ಕಾವ್ಯಗಳು, ಹಾಡುಗಳು, ಸಮಾಜಮುಖಿಯಾಗಿದ್ದು ಅವುಗಳಲ್ಲಿ ಶ್ರೀಸಾಮಾನ್ಯನ ಬದುಕಿನ ಅನುಭವಗಳು, ಪವಾಡಪುರುಷರ, ಧಾರ್ಮಿಕ ನಾಯಕರ, ಚಾರಿತ್ರಿಕ ನಾಯಕರ ಜೀವನ ಸಂಘರ್ಷವನ್ನು ಕಾವ್ಯಗಳ ಪ್ರಧಾನ ಕಥಾವಸ್ತುಗಳನ್ನಾಗಿಸಿಕೊಂಡು ಮೌಖಿಕ ಕಾವ್ಯಗಳನ್ನು ಹಾಡುತ್ತಾ ಬಂದಿದ್ದಾರೆ. ಈ ರೀತಿಯಾಗಿ ಹಾಡುವ ಮೌಖಿಕ ಪರಂಪರೆಯನ್ನು ವೃತ್ತಿಗಾಯಕರು ಎಂದು ಕರೆಯುತ್ತಾರೆ.

ಕರ್ನಾಟಕದಲ್ಲಿ ಪ್ರಮುಖವಾಗಿ ಎರಡು ರೀತಿಯಾದ ಮೌಖಿಕ ಗಾಯಕರಿದ್ದಾರೆ. ಇವರಲ್ಲಿ ಹಾಡುವುದರಿಂದಲೇ ಜೀವನ ಮಾಡುವ ವೃತ್ತಿಗಾಯಕ ಪರಂಪರೆಯೇ ಹೆಚ್ಚಾಗಿ ಕಂಡುಬರುತ್ತದೆ. ವೃತ್ತಿಗಾಯಕರ ಕುರಿತು ಜನಪದ ವಿದ್ವಾಂಸರಾದ ಜೀಶಂಪ ಅವರು ಈ ರೀತಿಯಾಗಿ ಹೇಳುತ್ತಾರೆ. "ವೃತ್ತಿಗಾಯಕರು ಯಾವುದೋ ಒಂದು ವಿಶಿಷ್ಟ ಮತದವರೋ, ಯಾವುದೋ ದೈವದ ಆರಾಧಕರೋ ಹಾಡುವುದನ್ನೋ, ಕಥೆ ಮಾಡುವುದನ್ನೋ ವೃತ್ತಿಯಾಗಿ ಸ್ವೀಕರಿಸಿರಬಹುದು ಅಥವಾ ಯಾವ ದೈವದ ವಲಯಕ್ಕೂ ಒಳಪಡದೆ ಸ್ವತಂತ್ರವಾಗಿ ಎಲ್ಲಾ ದೇವರ, ಎಲ್ಲಾ ಪಂಥದ, ಎಲ್ಲಾ ಬಗೆಯ ಸಾಹಿತ್ಯವನ್ನು ಹಾಡಬಹುದು. ಈ ಎರಡು ಗುಂಪುಗಳನ್ನು ವೃತ್ತಿಗಾಯಕರು ಅಥವಾ ಕಥೋಪಜೀವಿಗಳು ಎಂದು ಕರೆಯಬಹುದು"[೧] ಎಂದು ವೃತ್ತಿಗಾಯಕರ ಲಕ್ಷಣಗಳನ್ನು ಗುರುತಿಸುತ್ತಾರೆ.

ಹಿರಿಯ ಜನಪದ ವಿದ್ವಾಂಸರಾದ ಅಂಬಳಿಕೆ ಹಿರಿಯಣ್ಣನವರು ವೃತ್ತಿಗಾಯಕರನ್ನು ಕುರಿತು ಹೀಗೆ ಹೇಳುತ್ತಾರೆ. "ಹಾಡುವುದನ್ನೇ ವೃತ್ತಿಯಾಗಿರಿಸಿಕೊಂಡ ಹಾಡುಗಾರರು ಯಾವುದೇ ವಾದ್ಯವನ್ನು ಹಿಡಿದು ಅದರ ಶೃತಿಗೆ ತಕ್ಕಂತೆ ಹಾಡನ್ನು ಹಾಡುತ್ತಾರೆ. ಕೆಲವೊಮ್ಮೆ ಒಬ್ಬನೇ ಗಾಯಕ ಹಾಡಬಹುದು. ಹಿಮ್ಮೇಳದವರನ್ನು ಜೊತೆ ಮಾಡಿಕೊಂಡು ಒಂದು ಗಾಯನ ಮೇಳವನ್ನು ನಡೆಸಬಹುದು. ಇಂಥವರು ಬಿಡಿ ಹಾಡಿಗಿಂತಲೂ ಕಥೆಗಳನ್ನು ಮಾಡುವುದು ಅಥವಾ ಹಾಡುವುದೇ ಹೆಚ್ಚು. ತಲೆಮಾರಿನಿಂದ ತಲೆಮಾರಿಗೆ ಗುರುಮುಖೇನ ಹಾಡುಗಾರಿಕೆಯನ್ನು ಉಳಿಸಿಕೊಂಡು ಬರುವಾಗ ತಮ್ಮ ಪರಂಪರೆಗೆ ತಕ್ಕಂತೆ ಲಾಂಛನಗಳನ್ನು ಧರಿಸುವುದು, ವೇಷಭೂಷಣ ಧರಿಸುವುದು, ವಾದ್ಯಗಳ ವಿಶೇಷಗಳನ್ನು ಬಳಸುವುದು ಭಸಿತಗಾಥ ಅಥವಾ ನಾಮಗಳನ್ನು ಧರಿಸುವುದು ಒಂದು ಸಂಪ್ರದಾಯವಾಗಿಯೇ ಉಳಿದುಬರುತ್ತದೆ."[೨] ಹಾಡುವ ಗಾಯಕರನ್ನು ಎರಡು ರೀತಿಯಲ್ಲಿ ಕಾಣಬಹುದು. ಒಂದು, ಹಾಡುವುದನ್ನೇ ಪ್ರಧಾನ ವೃತ್ತಿಯನ್ನಾಗಿ ಮಾಡಿಕೊಂಡು ಅದರಿಂದ ಜೀವನ ನಡೆಸುವ ವೃತ್ತಿಗಾಯಕರು. ಎರಡು, ಜೀವನೋಪಾಯಕ್ಕಾಗಿ ಬೇರೊಂದು ವೃತ್ತಿಯನ್ನು ಅವಲಂಬಿಸಿ ಕೇವಲ ಸಂತೋಷಕ್ಕಾಗಿ ಹಾಡುವ ಗಾಯಕರು.

ವೃತ್ತಿಗಾಯಕರ ಲಕ್ಷಣಗಳಿರುವ ಮಧ್ಯ ಕರ್ನಾಟಕದ ಮೌಖಿಕ ಸಮುದಾಯವೆಂದರೆ ಅದು ಬಾಲಬಸವರ ಪರಂಪರೆ. ಜೀಶಂಪ ಅವರು ಹೇಳಿದ ಎಲ್ಲಾ ಲಕ್ಷಣಗಳು ಈ ಬಾಲಬಸವ ಪರಂಪರೆಯಲ್ಲಿ ಕಂಡುಬರುತ್ತವೆ. ಆದರೆ ಇದುವರೆಗೂ ಯಾವ ಜನಪದ ವಿದ್ವಾಂಸರು ಇವರನ್ನು ವೃತ್ತಿಗಾಯಕರೆಂದು ಗುರುತಿಸುವ ಪ್ರಯತ್ನ ಮಾಡಿಲ್ಲ. ಇವರನ್ನು ಲೌಕಿಕ ವೃತ್ತಿಗಾಯಕರೆಂದು ಸಹ ಕರೆದಿಲ್ಲ. ಇವರು ವೇದಿಕೆ ಮತ್ತು ಜನಪ್ರಿಯತೆಗಾಗಿ ಹಾಡುವುದಿಲ್ಲ, ಸಮಾಜದ ಹಿತಕ್ಕಾಗಿ ಮಾತ್ರ ಹಾಡುವ ಜನಪದ ಗಾಯಕರಾಗಿದ್ದಾರೆ. ದುಡಿಯುವ ಕೆಳವರ್ಗದ ಶ್ರಮಿಕರು, ದಲಿತರು ಕರ್ನಾಟಕದಲ್ಲಿ ಮೌಖಿಕ ಕಥನಗಳನ್ನು ಕಥೆ ಕಟ್ಟಿ ಹಾಡುವ ಪ್ರಮುಖ ಗಾಯಕರಾಗಿ ಕಂಡುಬರುತ್ತಾರೆ. ಕೆಳವರ್ಗದ ಶ್ರಮಿಕ ಸಮುದಾಯಗಳು ತಮ್ಮ ಶ್ರಮದ ಭಾರವನ್ನು ಕಳೆಯಲು ಕಥೆ ಕಟ್ಟಿ ಹಾಡುವ ಪರಿಪಾಟವನ್ನು ಕಂಡುಕೊಂಡಿದ್ದಾರೆ. ಇದರಿಂದಾಗಿ ತಮ್ಮ ಸಮುದಾಯಗಳ ಸಾಂಸ್ಕೃತಿಕ ನಾಯಕರು, ತಮ್ಮ ಸಮುದಾಯದ ಆಸ್ತಿತ್ವವನ್ನು ತಾವು ಹಾಡುವ, ನಿರೂಪಿಸುವ ಕಾವ್ಯಗಳಲ್ಲಿ ಲಿಖಿತ ಚರಿತ್ರೆಯಲ್ಲಿ ನಿರ್ಮಿಸಲಾಗದ ಸ್ಥಳೀಯ ಸಾಂಸ್ಕೃತಿಕ ಚರಿತ್ರೆಯನ್ನು ಸಮುದಾಯಗಳ ಸಾಂಸ್ಕೃತಿಕ ಕೊಡುಗೆಯನ್ನು ತಮ್ಮ ಮೌಖಿಕ ಕಾವ್ಯಗಳಲ್ಲಿ ಕಟ್ಟಿಕೊಡುವ ಕಾರ್ಯವನ್ನು ಮಾಡುತ್ತಾರೆ. ಕರ್ನಾಟಕದಲ್ಲಿ ಪ್ರಮುಖ ಮೌಖಿಕ ಕಾವ್ಯಗಳನ್ನು ಆಯಾ ಸಮುದಾಯಗಳ ಹಿನ್ನೆಲೆಯಲ್ಲಿ ನೋಡಿದಾಗ ನೀಲಗಾರರು, ದೇವರಗುಡ್ಡದವರು, ಬಾಲಬಸವರು, ಆಸಾದಿಗಳು, ಎಲ್ಲಮ್ಮನ ಕಾವ್ಯ ಹಾಡುವ ತಂಬೂರಿಯವರು, ಗೊಂದಲಿಗರು, ಕುರುಬರು, ಗೊಲ್ಲರು, ಬೇಡ ಸಮುದಾಯದವರು ಹೀಗೆ ಹತ್ತು ಹಲವು ಕಾವ್ಯಗಳನ್ನು ಹಾಡುವ ಸಮುದಾಯಗಳು ತಮ್ಮ ಸಮುದಾಯಗಳ ಸಾಂಸ್ಕೃತಿಕ ಸ್ಥಳೀಯ ಚರಿತ್ರೆಯನ್ನು ತಮ್ಮ ಮೌಖಿಕ ಕಾವ್ಯಗಳಲ್ಲಿ ವ್ಯಕ್ತಪಡಿಸಿರುವುದನ್ನು ಕಾಣಬಹುದಾಗಿದೆ. ಕರ್ನಾಟಕದಲ್ಲಿ ಮೌಖಿಕ ಕಾವ್ಯಗಳನ್ನು ಹಾಡುವ ಲೌಕಿಕ ವೃತ್ತಿಗಾಯಕರು ಮತ್ತು ಅಲೌಕಿಕ ವೃತ್ತಿಗಾಯಕರು ಕೂಡ ತಮ್ಮ ಸಮುದಾಯಗಳ ಅಸ್ತಿತ್ವವನ್ನು ಆಯಾ ಮೌಖಿಕ ಕಾವ್ಯಗಳಲ್ಲಿ ಕಟ್ಟಿಕೊಡುವುದರ ಮೂಲಕ ತಮ್ಮ ಸಮುದಾಯಗಳ ಜಾಗೃತಿ ಅಥವಾ ಸಮುದಾಯಗಳನ್ನು ಒಂದುಗೂಡಿಸುವ ಕಾರ್ಯ ಮಾಡಿಕೊಂಡು ಬಂದಿದ್ದಾರೆ.

ಮೌಖಿಕ ಸಾಹಿತ್ಯ ಚರಿತ್ರೆಯಲ್ಲಿ ತಮ್ಮ ಸಮುದಾಯಗಳ ಅಸ್ತಿತ್ವ ಉಳಿಸಿಕೊಳ್ಳಲು ತಮ್ಮ ತಮ್ಮ ಸಮುದಾಯಗಳ ಸಾಂಸ್ಕೃತಿಕ ನಾಯಕರನ್ನು ಮುನ್ನೆಲೆಗೆ ತಂದು ಅವರ ಮೂಲಕ ಚರಿತ್ರೆಯಲ್ಲಿ ದಾಖಲಾಗದ ಸಾಮಾನ್ಯ ಜನರ ಜೀವನದ ವಿವರಗಳನ್ನು ಮೌಖಿಕ ಸಾಹಿತ್ಯವು ದಾಖಲು ಮಾಡುವ ಪ್ರಯತ್ನ ಮಾಡುತ್ತಾ ಬಂದಿದೆ. ಹೀಗೆ ಕರ್ನಾಟಕದ ತುಂಬೆಲ್ಲಾ ಹಲವಾರು ಸಮುದಾಯ ಕೇಂದ್ರಿತವಾದ ವೃತ್ತಿಗಾಯಕರು ಕಂಡುಬರುತ್ತಾರೆ. ಅವರ ರೀತಿಯಲ್ಲಿ ಅಲಕ್ಷಿತವಾಗಿ ಮೌಖಿಕತೆಯ ಮೂಲಕವೇ ೧೨ನೇ ಶತಮಾನದ ಶಿವಶರಣರಂತೆ ಬದುಕುವ ಅಲಕ್ಷಿತ ಗಾಯಕ ಸಮುದಾಯವೆಂದರೆ ಅದು ಬಾಲಬಸವ ಪರಂಪರೆ. ಈ ಪರಂಪರೆಯು ವಚನ ಚಳುವಳಿಯಲ್ಲಿ ಬೆಳೆದು ಇಂದಿಗೂ ನಮ್ಮೊಂದಿಗೆ ಜೀವಂತವಿರುವ ಪರಂಪರೆಯಾಗಿದೆ. ಮೌಖಿಕ ಪರಂಪರೆಯ

ಜ್ಞಾನಮೀಮಾಂಸೆಯು ಸಮಾಜದ ಒಳಿತನ್ನು ಬಯಸುವ ಹಾಗೂ ಸಮಾಜದಲ್ಲಿ ನೈತಿಕತೆಯನ್ನು ಹೆಚ್ಚಿಸುವ, ಮುಂದೊದಗಬಹುದಾದ ಸತ್ಯ ಸಂಗತಿಗಳನ್ನು ತನ್ನ ಆತ್ಮಬಲದಿಂದ ತಿಳಿದು, ಅದರಿಂದ ಪಾರಾಗುವ ಸಂಗತಿಗಳನ್ನು ಸಮಾಜಕ್ಕೆ ಹೇಳುತ್ತಾ ಬಂದಿದೆ. ಬಾಲಬಸವ ಪರಂಪರೆಯು ಕೂಡ ಒಂದು ಹಾಡುವ ವೃತ್ತಿಗಾಯಕ ಸಮುದಾಯವಾಗಿದೆ. ವಚನ ಚಳುವಳಿಯಲ್ಲಿ ಮಾದಿಗರು ಮೇಲ್ಮುಖ ಚಲನೆ ಹೊಂದಿ, ಲಿಂಗದೀಕ್ಷೆ ಪಡೆದಿದ್ದರೂ ಅಲಕ್ಷಿತರಾಗಿದ್ದಾರೆ. ಮೂಲತಃ ಮಾದಿಗರೆಂಬ ಒಂದೇ ಕಾರಣದಿಂದಾಗಿ ವೀರಶೈವರು ಅವರನ್ನು ವೀರಶೈವರೆಂದು ಒಪ್ಪಿಕೊಂಡಿಲ್ಲ. ಇದರಿಂದಾಗಿ ಇವರು ಧಾರ್ಮಿಕವಾಗಿ ಅತಂತ್ರ ಸ್ಥಿತಿಯಲ್ಲಿ ಜೀವನ ನಿರ್ವಹಣೆ ಮಾಡುತ್ತಿದ್ದಾರೆ. ಕರ್ನಾಟಕದ ಕೆಲವು ಭಾಗಗಳಲ್ಲಿ ಮಾತ್ರ ಕಂಡುಬರುವ ಈ ಬಾಲಬಸವ ಪರಂಪರೆ ತನ್ನದೇ ಆದ ಮೌಖಿಕ ಜ್ಞಾನಮೀಮಾಂಸೆಯನ್ನು ಹೊಂದಿದೆ. ಬಾಲಬಸವ ಪರಂಪರೆಯು ೧೨ನೇ ಶತಮಾನದಲ್ಲಿನ ಶರಣತತ್ವದ ಕಾಯಕ ಪರಿಕಲ್ಪನೆಯಲ್ಲಿ ಬೆಳೆದುಬಂದಿದೆ. ಬಾಲಬಸವರು ಮೂಲತಃ ಮಾದಿಗ ಕುಲದವರು. ಬಸವಣ್ಣನು ಮಾದಿಗ ಕುಲದವರನ್ನು ದತ್ತು ತೆಗೆದುಕೊಂಡು ಅವರಿಗೆ ಶಿವದೀಕ್ಷೆ ಕೊಟ್ಟು, ಅವರನ್ನು ಶಿವಶರಣರಂತೆ ಸಮಾಜದ ಮುಖ್ಯವಾಹಿನಿಗೆ ತರಲು ಪ್ರಯತ್ನಿಸಿದನು. ಮುಂದೆ ಕಲ್ಯಾಣದ ಕ್ರಾಂತಿಯಾದ ಬಳಿಕ ಬಾಲಬಸವ ಪರಂಪರೆಯವರು ಬಸವಣ್ಣ ತಮ್ಮನ್ನು ವೀರಶೈವ ತತ್ವಪರಿಪಾಲನೆಗೆ ನೇಮಿಸಿದ್ದಾನೆ ಎಂದು ಅವರು ಬಸವಣ್ಣನ ಪವಾಡಗಳನ್ನು ಮತ್ತು ಕಾಲಜ್ಞಾನವನ್ನು ಸಾರುವ/ಹಾಡುವ ಕಾಯಕವನ್ನಾಗಿ ಮಾಡಿಕೊಂಡು ಜೀವನ ಸಾಗಿಸುತ್ತಾ ಬಂದಿದ್ದಾರೆ. ಮುಂದೆ ಕಾಲ ಗತಿಸಿದಂತೆ ಬಾಲಬಸವ ಪರಂಪರೆಯವರು ಅಂದಿನ ಸಾಮಾಜಿಕತೆ ಮತ್ತು ರಾಜಕೀಯತೆಗೆ ಅನುಗುಣವಾಗಿ ಜನಪದ ಕಾವ್ಯಗಳನ್ನು ಸಾಮಾಜಿಕತೆಯೊಂದಿಗೆ ಸಮೀಕರಿಸಿ ಕಾವ್ಯಗಳನ್ನು ಹಾಡುವ ಮತ್ತು ಕಾಲಜ್ಞಾನವನ್ನು ಸಾರುವುದರೊಂದಿಗೆ ಈ ಮೌಖಿಕ ಪರಂಪರೆಯನ್ನು ತಲೆಮಾರಿನಿಂದ ತಲೆಮಾರಿಗೆ ಮುಂದುವರಿಸಿಕೊಂಡು ಬಂದಿದ್ದಾರೆ.

ಬಾಲಬಸವ ಪರಂಪರೆಯು ಹೆಚ್ಚಾಗಿ ಉತ್ತರ ಕರ್ನಾಟಕದ ಬಳ್ಳಾರಿ, ಚಿತ್ರದುರ್ಗ, ದಾವಣಗೆರೆ, ಹಾವೇರಿ, ಗದಗ, ಶಿವಮೊಗ್ಗ, ಚಿಕ್ಕಮಗಳೂರು, ಜಿಲ್ಲೆಗಳಲ್ಲಿ ಮಾತ್ರ ಕಂಡುಬರುತ್ತದೆ. ಬಾಲಬಸವ ಪರಂಪರೆಯವರು ಬಸವಣ್ಣನ ಪ್ರಭಾವಕ್ಕೆ ಒಳಗಾಗಿರುವುದರಿಂದ ತಮ್ಮ ಜೀವನಕ್ರಮದಲ್ಲಿ ವೀರಶೈವ ತತ್ವಗಳನ್ನು ಪರಿಪಾಲಿಸಿಕೊಂಡು, ಲಿಂಗಧಾರಿಗಳಾಗಿರುವುದರಿಂದ ಮಾಂಸಾಹಾರವನ್ನು ತ್ಯಜಿಸಿದ್ದಾರೆ. ಬಾಲಬಸವರು ಮಾದಿಗ ಸಮುದಾಯದಿಂದ ಪ್ರತ್ಯೇಕಗೊಂಡು ಮಾದಿಗ ಕುಲಕ್ಕೆ ಗುರು ಸ್ಥಾನದಲ್ಲಿದ್ದಾರೆ. ಬಸವಣ್ಣ ಮತ್ತು ಕಾಲಜ್ಞಾನದಿಂದಾಗಿ ಲಿಂಗಾಯತರಿಂದಲೂ ಸಾಂಸ್ಕೃತಿಕ ಮನ್ನಣೆ ಪಡೆದುಕೊಂಡಿರುವ ಇವರು ೧೨ನೇ ಶತಮಾನದ ಕಾಯಕತತ್ವವನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿದ್ದಾರೆ. ಕರ್ನಾಟಕದ ಬಹುತೇಕ ಭಾಗಗಳಲ್ಲಿ ಬಾಲಬಸವರು ಪರಂಪರೆಯ ಕಾಲಜ್ಞಾನ ಸಾರುವ ಕಾಯಕದಿಂದಲೇ ಜೀವನ ನಿರ್ವಹಿಸುವುದನ್ನು ಇಂದಿಗೂ ಕಾಣಬಹುದಾಗಿದೆ.

ಕರ್ನಾಟಕದಲ್ಲಿರುವ ಬಾಲಬಸವ ಪರಂಪೆರಯ ಮೌಖಿಕ ಸಾಹಿತ್ಯವು ಎರಡು ಬಗೆಯಲ್ಲಿ ಕಂಡುಬರುತ್ತದೆ. ಒಂದು: ಬಾಲಬಸವ ಪರಂಪರೆಯ ಮೂಲ ಕುಲವೃತ್ತಿಯಾದ ಕಾಯಕವಾದ ಕಾಲಜ್ಞಾನ ಸಾಹಿತ್ಯ. ಈ ಕಾಲಜ್ಞಾನ ಸಾಹಿತ್ಯವು ಬಾಲಬಸವರ ಪ್ರಧಾನ ಮೌಖಿಕ ಸಾಹಿತ್ಯವಾಗಿದೆ. ಎರಡು: ಬಾಲಬಸವ ಪರಂಪರೆಯಲ್ಲೇ ವಿಶಿಷ್ಟವಾದ ಬಾಲಬಸವ ತುಮನೆಪ್ಪ ಹಾಡುವ ಮೌಖಿಕ ಕಾವ್ಯಗಳು. ಈ ಮೌಖಿಕ ಕಾವ್ಯಗಳು ಕರ್ನಾಟಕದಲ್ಲಿ ಹರಪನಹಳ್ಳಿ ಮತ್ತು ಬೈರದೇವರಗುಡ್ಡದ ಬಾಲಬಸವರ ಪರಂಪರೆಯಲ್ಲಿ ಮಾತ್ರ ಕಂಡುಬರುತ್ತದೆ. ಉಳಿದ ಬಾಲಬಸವ ಪರಂಪರೆಯಲ್ಲಿ ಈ ಮೌಖಿಕ ಕಾವ್ಯಗಳು ಕಂಡುಬರುವುದಿಲ್ಲ.

ಬಾಲಬಸವರ ಮೌಖಿಕ ಸಾಹಿತ್ಯವಾದ ಕಾಲಜ್ಞಾನ ಸಾಹಿತ್ಯವು ಸಮಾಜದ ವಿನಾಶಕಾಲದ ಸೂಚನೆಯನ್ನು ಮತ್ತು ಎಚ್ಚರಿಕೆಯ ನೀತಿ ಬೋಧನೆಯನ್ನು ಬೋಧಿಸುವ ಮೌಖಿಕ ಸಾಹಿತ್ಯವಾಗಿದೆ. ಮನುಷ್ಯ ತನ್ನ ನೈತಿಕ ಅಧಃಪತನ ಮತ್ತು ಸಾಮರ್ಥ್ಯವನ್ನು ಯಾವಾಗ ಕಳೆದುಕೊಳ್ಳುತ್ತಾನೋ, ಅ ಸಮಯಕ್ಕೆ ಮುಂದೆ ಸಂಭವಿಸಬಹುದಾದ ಘಟನೆಗಳನ್ನು ಕುರಿತು ಸಾಮಾನ್ಯ ತಿಳುವಳಿಕೆ ಮೂಡಿಸುವ ಸಾಹಿತ್ಯವಾಗಿದೆ. ಕಾಲಜ್ಞಾನ ಸಾಹಿತ್ಯವನ್ನು ಕುರಿತು ವಿ. ಶಿವಾನಂದ ಅವರು "ಮನುಷ್ಯನಿಗೆ ಹಿಂದಿನ ಜೀವಿತದ ಘಟನೆಗಳನ್ನು ಸ್ಮೃತಿಗೆ ತಂದುಕೊಟ್ಟು ಮುಂದಿನ ಜೀವನದ ಅಸ್ತಿತ್ವಕ್ಕೆ ಭರವಸೆ ಹುಟ್ಟಿಸುವಲ್ಲಿ ನೆರವಾಗುವ ಜ್ಞಾನವೇ ಕಾಲಜ್ಞಾನ ಸಾಹಿತ್ಯ"[೩] ಎಂದು ಕಾಲಜ್ಞಾನದಲ್ಲಿರುವ ಜ್ಞಾನ ಮೀಮಾಂಸೆಯನ್ನು ಹೇಳುವ ಪ್ರಯತ್ನ ಮಾಡುತ್ತಾರೆ. ಕಾಲಜ್ಞಾನ ಸಾಹಿತ್ಯದ ಪ್ರಮುಖ ಉದ್ದೇಶವೆಂದರೆ ಸಮಾಜದಲ್ಲಿ ನೀತಿ ಪ್ರತಿಪಾದನೆ ಮಾಡುವುದಾಗಿದೆ. ಕಾಲಾನುಕಾಲಕ್ಕೆ ಸಮಾಜದಲ್ಲಿ ಸ್ವಾರ್ಥ ಹೆಚ್ಚಾಗಿ, ನೀತಿ ನಿಯಮಗಳು ಏರುಪೇರಾಗಿ, ಸಾಮಾಜಿಕ-ಕೌಟಂಬಿಕ ಸ್ವಾಸ್ಥ್ಯ ಕೆಟ್ಟು ಹೋದಾಗ, ಪರಸ್ಪರ ವಿಶ್ವಾಸ ಇರಬೇಕಾಗಿದ್ದ ಸಂಗತಿಗಳಲ್ಲಿ ಅವಿಶ್ವಾಸ ತಾಂಡವವಾಡುತ್ತಿರುವ ಸ್ಥಿತ್ಯಂತರ ಕಾಲದಲ್ಲಿ ಸಾಮಾಜಿಕ ಸ್ವಾಸ್ಥ್ಯವನ್ನು ಮನಃ ಪ್ರತಿಷ್ಠಾಪನೆ ಮಾಡುವ ಸಾಮಾಜಿಕ ಹೊಣೆಗಾರಿಕೆಯು ಬಾಲಬಸವರ ಮೌಖಿಕ ಸಾಹಿತ್ಯವಾದ ಕಾಲಜ್ಞಾನ ಸಾಹಿತ್ಯದಲ್ಲಿದೆ. ಬಾಲಬಸವರು ಜನಸಮುದಾಯದ ಮಧ್ಯದಲ್ಲಿದ್ದುಕೊಂಡು ಸಮಾಜವನ್ನು ಸೂಕ್ಷ್ಮವಾಗಿ ಗಮನಿಸಿ, ಅಲ್ಲಿ ಸಿಗಬಹುದಾದ ಅನೇಕ ಸಾಮಗ್ರಿಗಳನ್ನು ಬಳಸಿಕೊಂಡು ಜನಪದದ ಹಾಡು ಮಾತಿನ ಧಾಟಿಯಲ್ಲಿ ತಮ್ಮ ಮೌಖಿಕ ಸಾಹಿತ್ಯವಾದ ಕಾಲಜ್ಞಾನವನ್ನು ಬಿತ್ತರಿಸುವ ಕಾರ್ಯ ಮಾಡುವುದರಿಂದ ಇವರು ಶ್ರೀ ಸಾಮಾನ್ಯನಿಗೆ ಹೆಚ್ಚು ಹತ್ತಿರವಾಗಿರುತ್ತಾರೆ. ಅವರ ಮೌಖಿಕ ಸಾಹಿತ್ಯದಲ್ಲಿ ಮಾನವನ ಬದುಕಿನ ವೈವಿಧ್ಯಮಯ ಜೀವನದಲ್ಲಿ ಎಚ್ಚರಿಕೆ ಮತ್ತು ಜಾಗೃತಿ ಮೂಡಿಸುವ ಅಂಶಗಳನ್ನು ನಾವು ಕಾಣಬಹುದಾಗಿದೆ.

ಬಾಲಬಸವರು ಕಾಲಜ್ಞಾನದ ಜೊತೆಗೆ ಮಧ್ಯಕಾಲೀನ ಶಿವಶರಣರ ಸಂಘರ್ಷಮಯ ಜೀವನದ ಮುಖ್ಯ ಘಟನೆಗಳನ್ನು, ಸ್ಥಳೀಯ ಚಾರಿತ್ರಿಕ, ಸಾಂಸ್ಕೃತಿಕ, ಧಾರ್ಮಿಕ ನಾಯಕರ ಕಥೆಗಳನ್ನು ಕಥನವಾಗಿ ಕಟ್ಟಿ ಹಾಡುವ ಮೌಖಿಕ ಕಾವ್ಯಗಳನ್ನು ಹಾಡುತ್ತಾರೆ. ಈ ಪರಂಪರೆಯಲ್ಲಿ

ಮೌಖಿಕ ಕಾವ್ಯಗಳನ್ನು ಹಾಡುವ ಕಲಾವಿದನೆಂದರೆ ಬಾಲಬಸವ ತುಮನೆಪ್ಪನವರು. ಇವರು ಬಾಲಬಸವರಲ್ಲಿ ಹಿರಿಯರು ಮತ್ತು ಕಥೆ ಮಾಡುವ ಮುಖ್ಯ ಕಥನಕಾರರು. ಅವರು ಹಾಡಿರುವ ಪ್ರಮುಖ ಕಾವ್ಯಗಳೆಂದರೆ ಗೋಣಿಬಸಪ್ಪನ ಕಾವ್ಯ, ಮರುಳಸಿದ್ಧನ ಕಾವ್ಯ, ಇಗ್ನಾವತಿ ಕಾವ್ಯ, ಸಂಡೂರು ರಾಜನ ಕಾವ್ಯ, ದೊರೆ ಲಕ್ಷಾಪತಿ ರಾಜನ ಕಾವ್ಯ, ಚಂದ್ರ ಭೂಷಣ ಕುಮಾರನ ಕಾವ್ಯ, ಸಿಂಕಿಣಿ ಕುಮಾರನ ಕಾವ್ಯ, ಸತಿ ಸುಲೋಚನ ದೇವಿ ಕಾವ್ಯ, ಬಸವಲಿಂಗ ಕುಮಾರನ ಕಾವ್ಯ, ರಾಜ ಮಾರ್ತಾಂಡನ ಕಾವ್ಯ, ಬಳಾಭಿಕ್ಷುಕ ರಾಜನ ಕಾವ್ಯ, ಮುಂತಾದವುಗಳಲ್ಲದೆ ಬಾಲಬಸವ ಪರಂಪರೆಯ ಮೂಲ ಮೌಖಿಕ ಸಾಹಿತ್ಯವಾದ ಕಾಲಜ್ಞಾನವನ್ನು ಹಾಡುತ್ತಾರೆ. ಬಾಲಬಸವ ತುಮನೆಪ್ಪ ಹಾಡುವ ಮೌಖಿಕ ಕಾವ್ಯಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಪುರಾಣ, ಜನಪದ ಕಥೆಗಳು, ರಾಜರ ಕಥೆಗಳು, ಸ್ಥಳೀಯ ಪಾಳೇಗಾರರ ಚರಿತ್ರೆ, ಸಾಮಾಜಿಕತೆ, ಧಾರ್ಮಿಕತೆ, ಅಧಿಕಾರ, ಸಾಂಸ್ಕೃತಿಕ ನಾಯಕರ ಜೀವನವಿಧಾನ ಮುಂತಾದ ಸಾಮಾಜಿಕ ಸಂಗತಿಗಳು ಅವರ ಮೌಖಿಕ ಕಾವ್ಯಗಳಲ್ಲಿ ಚಿತ್ರಿತವಾಗಿವೆ. "ಭೌತಿಕ ಶೂನ್ಯತೆಗಳು ಉಂಟಾದಾಗ ಸಾಂಸ್ಕೃತಿಕ ಅವಲಂಬನೆಗಳು ಪರಂಪರೆಯನ್ನು ಕಟ್ಟುವಲ್ಲಿ ಬಹುದೊಡ್ಡ ಪಾತ್ರ ವಹಿಸುತ್ತವೆ. ಇಲ್ಲದ ಅಗತ್ಯಗಳನ್ನು ಮರೆತು ಇರುವ ಅಗತ್ಯಗಳಲ್ಲೇ ಬದುಕುವ ಜೀವನವಿಧಾನವನ್ನು ಮೌಖಿಕ ಕಾವ್ಯ ಕಲಿಸಿರುತ್ತದೆ"[೪] ಎನ್ನುವ ವೆಂಕಟೇಶ ಇಂದ್ವಾಡಿ ಅವರ ಮಾತುಗಳಲ್ಲಿ ಸಾಂಸ್ಕೃತಿಕ ಅಧ್ಯಯನಗಳ ಮಹತ್ವವನ್ನು ತಿಳಿಸುತ್ತಾರೆ. ಮೌಖಿಕ ಕಾವ್ಯಗಳ ಮೂಲಕ ಅಧ್ಯಯನ ಮಾಡಿದಾಗ ಮಾತ್ರ ಅವುಗಳಲ್ಲಿರುವ ಸಾಂಸ್ಕೃತಿಕ ತಿಳುವಳಿಕೆಗಳು ಮನುಷ್ಯನ ಜೀವನ ವಿಧಾನವನ್ನು ಕಲಿಸುತ್ತವೆ ಎನ್ನುತ್ತಾರೆ. ಬಾಲಬಸವರ ಮೌಖಿಕ ಕಾವ್ಯದಲ್ಲಿರುವ ಸಾಂಸ್ಕೃತಿಕ ಆಯಾಮಗಳನ್ನು ಸಾಂಸ್ಕೃತಿಕ ನೆಲೆಯಲ್ಲಿ ಅಧ್ಯಯನ ಮಾಡುವುದು ಈ ಸಂಶೋಧನೆಯ ಮುಖ್ಯ ಉದ್ದೇಶವಾಗಿದೆ.

ಅಧ್ಯಯನದ ಉದ್ದೇಶ :

'ಬಾಲಬಸವರ ಮೌಖಿಕ ಸಾಹಿತ್ಯ: ಸಾಂಸ್ಕೃತಿಕ ಅಧ್ಯಯನ' ಎಂಬ ಸಂಶೋಧನ ಪ್ರಬಂಧದ ಮುಖ್ಯ ಉದ್ದೇಶವೆಂದರೆ,

೧. ಸಮಸ್ಯಾತ್ಮಕ ಕುಲವೆನಿಸಿಕೊಂಡಿರುವ ಬಾಲಬಸವ ಪರಂಪರೆಯು ತಾವು ಮುಂದುವರಿಸಿಕೊಂಡು ಬಂದಿರುವ ಮೌಖಿಕ ಜ್ಞಾನಮೀಮಾಂಸೆಯ ಕುರಿತು ಇದುವರೆಗೆ ಯಾರೂ ಕೂಡ ಸಾಂಸ್ಕೃತಿಕವಾಗಿ ಅಧ್ಯಯನ ಮಾಡಿರುವುದಿಲ್ಲ. ಬಾಲಬಸವರು ಎದುರಿಸುವ ಸಾಂಸ್ಕೃತಿಕ, ಧಾರ್ಮಿಕ ಮತ್ತು ಆರ್ಥಿಕ ಬಿಕ್ಕಟ್ಟುಗಳಾವುವು ಮತ್ತು ಈ ಪರಂಪರೆಯು ಹಾಡುವ ಮೌಖಿಕ ಸಾಹಿತ್ಯವನ್ನು ಸಂಪಾದನೆ ಮಾಡಿ, ಅವರ ಮೌಖಿಕ ಸಾಹಿತ್ಯದ ಮಹತ್ವವನ್ನು ಅಧ್ಯಯನ ಮಾಡುವುದು.

೨. ಬಾಲಬಸವರ ಮೌಖಿಕ ಸಾಹಿತ್ಯದಲ್ಲಿರುವ ವಿವಿಧ ಆಯಾಮಗಳಾದ ಸಾಹಿತ್ಯ, ಸಮಾಜ, ವಿಜ್ಞಾನ, ಪ್ರಕೃತಿ, ಚರಿತ್ರೆ, ಮಾನವಶಾಸ್ತ್ರ, ತತ್ವಮೀಮಾಂಸೆ ಮತ್ತು ದಲಿತ ಸಮುದಾಯಗಳ ಅಲಕ್ಷಿತ ಜ್ಞಾನಮೀಮಾಂಸೆಯನ್ನು ಅಧ್ಯಯನ ಮಾಡುವುದು.

೩. ಕರ್ನಾಟಕದ ಸಂಸ್ಕೃತಿಯ ಭಾಗವಾಗಿರುವ ಬಾಲಬಸವ ಪರಂಪರೆಯಲ್ಲಿ ಬರುವ ದಲಿತರು ಅದರಲ್ಲೂ ಮಾದಿಗರು ಹಾಡುವ ಮೌಖಿಕ ಕಾವ್ಯಗಳ ಮೂಲಕ ಮಾದಿಗ ಸಮುದಾಯಗಳ ಸಾಂಸ್ಕೃತಿಕ ಚರಿತ್ರೆ ಮರು ಓದುವುದು ಮತ್ತು ದಲಿತತತ್ವದ ನೆಲೆಯಲ್ಲಿ ದಲಿತ ಸಮುದಾಯಗಳ ಸಾಂಸ್ಕೃತಿಕ ಅನನ್ಯತೆಯನ್ನು ಅಧ್ಯಯನ ಮಾಡುವುದು.

೪. ಕನ್ನಡ ಸಾಹಿತ್ಯಲೋಕದಲ್ಲಿ ಮಧ್ಯಕಾಲೀನ ಎನ್ನುವ ಅಸಮರ್ಪಕ ವಿಭಾಗೀಕರಣದಲ್ಲಿ ಬದುಕಿರುವ ಕೆಲವು ವ್ಯಕ್ತಿಗಳ ಬದುಕು ದೈವೀಕರಣಗೊಂಡಿದೆ. ಈ ಕಾಲಘಟ್ಟದ ಅನೇಕ ವ್ಯಕ್ತಿಗಳನ್ನು ಸಮುದಾಯಗಳು ತಮ್ಮ ಸಾಂಸ್ಕೃತಿಕ ನಾಯಕರೆಂದು ಆರಾಧಿಸುವ ಕ್ರಿಯೆಯು ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ ಬಾಲಬಸವರ ಮೌಖಿಕ ಸಾಹಿತ್ಯದಲ್ಲಿರುವ ಸ್ಥಳೀಯ ಸಾಂಸ್ಕೃತಿಕ ನಾಯಕರ ಸಂಘರ್ಷಮಯ ಜೀವನಚರಿತ್ರೆ ಮತ್ತು ಅವರ ಬದುಕಿನ ವಿವರಗಳನ್ನು ಬಾಲಬಸವರ ಮೌಖಿಕ ಆಕರಗಳು ನೀಡುವ ಸಂಗತಿಗಳಿಂದ ಅಲ್ಲಿನ ಸಾಮಾಜಿಕ, ರಾಜಕೀಯ ಮತ್ತು ಧಾರ್ಮಿಕ ವಿಷಯಗಳನ್ನು ಅಧ್ಯಯನ ಮಾಡುವುದು.

೫. ಬಾಲಬಸವರ ಮೌಖಿಕ ಸಾಹಿತ್ಯವು ಒಂದು ಕಾಲದ ಸಾಮಾಜಿಕ ಸಂಗತಿಗಳನ್ನು ಪಠ್ಯವಾಗಿ, ಆ ಪಠ್ಯವು ಸಾಂಸ್ಕೃತಿಕ ಪಠ್ಯವಾಗಿ ನಿರ್ಮಾಣವಾಗುವುದರ ಹಿಂದಿರುವ ಸಾಂಸ್ಕೃತಿಕ ಒತ್ತಡಗಳನ್ನು, ಪ್ರೇರಣೆ ಪ್ರಭಾವಗಳನ್ನು ಅಧ್ಯಯನ ಮಾಡುವುದು. ಬಾಲಬಸವರ ಬದುಕಿನ ವಿವರಗಳಿಗೂ ಕಾವ್ಯದಲ್ಲಿರುವ ಅಂಶಗಳಿಗೂ ಇರುವ ಸಂಘರ್ಷದ ನೆಲೆಗಳನ್ನು ಅಧ್ಯಯನಕ್ಕೆ ಒಳಪಡಿಸುವ ಉದ್ದೇಶ ಈ ಸಂಶೋಧನೆಗಿದೆ.

ಅಧ್ಯಯನದ ವಿಧಾನ :

'ಬಾಲಬಸವರ ಮೌಖಿಕ ಸಾಹಿತ್ಯ: ಸಾಂಸ್ಕೃತಿಕ ಅಧ್ಯಯನ' ಎಂಬ ಈ ಸಂಶೋಧನೆಯು 'ಸಾಂಸ್ಕೃತಿಕ ಅಧ್ಯಯನ'ವನ್ನು ತನ್ನ ಪರಿಕಲ್ಪನೆಯಾಗಿಸಿಕೊಂಡಿದೆ. ಕ್ಷೇತ್ರ ಕಾರ್ಯದಿಂದ ಸಂಗ್ರಹಿಸಿದ ಮೌಖಿಕ ಆಕರಗಳನ್ನು ಈ ಸಂಶೋಧನೆಯಲ್ಲಿ ಬಹುಶಿಸ್ತೀಯ ಅಧ್ಯಯನ ಮಾದರಿಯ ವೈಧಾನಿಕತೆಯನ್ನು ಬಳಸಿಕೊಂಡು ಅಧ್ಯಯನ ಮಾಡಲಾಗಿದೆ. ಬಹುಶಿಸ್ತೀಯ ಅಧ್ಯಯನ ಮಾದರಿಯು ಆಕರದೊಳಗಿನ ಲೋಕ ಬದುಕಿನ ಸಮಸ್ತ ಸಂಗತಿಗಳೂ, ಹಲವು ಆಯಾಮಗಳೂ ಸೇರಿಕೊಂಡಿರುತ್ತವೆ. ಆಕರಗಳನ್ನು ಬಹುಮುಖಿ ನೆಲೆಯಲ್ಲಿ ಅಧ್ಯಯನ ಮಾಡಬೇಕಾಗಿರುತ್ತದೆ. ಹಾಗಾಗಿ ಮೌಖಿಕ ಆಕರಗಳನ್ನು ಚಾರಿತ್ರಿಕ, ಸಾಹಿತ್ಯಿಕ, ಸಾಮಾಜಿಕ, ಆರ್ಥಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಬಾಲಬಸವರ ಮೌಖಿಕ ಸಾಹಿತ್ಯವನ್ನು ಅಧ್ಯಯನ ಮಾಡಲು ಈ

ವಿಧಾನವನ್ನು ಬಳಸಿಕೊಳ್ಳಲಾಗಿದೆ. ಹಾಗೆಯೇ ಬಾಲಬಸವರ ಮೌಖಿಕ ಸಾಹಿತ್ಯವಾದ ಕಾಲಜ್ಞಾನ ಮತ್ತು ಮೌಖಿಕ ಕಾವ್ಯಗಳನ್ನು ಆಯಾ ಪರಿಕಲ್ಪನೆಗೆ ಅನುಗುಣವಾಗಿ ವಿಶ್ಲೇಷಣಾತ್ಮಕ ಮಾದರಿಯನ್ನು ಬಳಸಿಕೊಂಡಿದ್ದೇನೆ. ಒಟ್ಟಾರೆಯಾಗಿ ಈ ಸಂಶೊಧನೆಯು ಕ್ಷೇತ್ರಕಾರ್ಯ, ಬಹುಶಿಸ್ತೀಯ ಮತ್ತು ವಿಶ್ಲೇಷಣಾತ್ಮಕ ವಿಧಾನಗಳನ್ನು ಒಳಗೊಂಡಿದೆ.

ಅಧ್ಯಯನದ ಮಹತ್ವ :

ಕರ್ನಾಟಕ ಸಂಸ್ಕೃತಿಯನ್ನು ಅಧ್ಯಯನ ಮಾಡಲು ನಮಗೆ ಅನೇಕ ಬಗೆಯ ಲಿಖಿತ ಆಕರಗಳು ಸಿಗುತ್ತವೆ. ಅದರಲ್ಲಿ ಮೌಖಿಕ ಕಾವ್ಯಗಳ ಆಶಯವು ಬಹುದೊಡ್ಡ ಪರಿಕಲ್ಪನೆಯನ್ನು ನಮ್ಮ ಮುಂದೆ ತೆರೆದಿಡುತ್ತದೆ. ಮೌಖಿಕ ಆಕರಗಳಲ್ಲಿರುವ ಜನತೆಯ ಆಚಾರ-ವಿಚಾರ, ವೇಷ-ಭೂಷಣ, ಆಹಾರ ಪದ್ಧತಿ, ಸಂಪ್ರದಾಯ, ಆಚರಣೆ ಮುಂತಾದವುಗಳು ಲಿಖಿತ ಚರಿತ್ರೆಯ ಆಕರಗಳಿಗಿಂತ ಹೆಚ್ಚು ಭಿನ್ನವಾಗಿವೆ. ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯನ್ನು ಮೌಖಿಕ ಮಹಾಕಾವ್ಯಗಳ ಮೂಲಕ ಕಟ್ಟಿಕೊಟ್ಟರೆ ಕರ್ನಾಟಕದ ಚರಿತ್ರೆಯ ಮತ್ತೊಂದು ಮಗ್ಗಲು ತೆರೆದುಕೊಳ್ಳುತ್ತದೆ. ಸ್ಥಳೀಯ ಸಾಂಸ್ಕೃತಿಕ ಚರಿತ್ರೆಯನ್ನು ಸಮುದಾಯಕೇಂದ್ರಿತ ಮತ್ತು ಜನಕೇಂದ್ರಿತ ನೆಲೆಯಲ್ಲಿ ನಾವು ಮೌಖಿಕ ಕಾವ್ಯಗಳ ಮೂಲಕ ಅಧ್ಯಯನ ಮಾಡಬೇಕಿದೆ. ಈ ಸಂಶೋಧನೆಯಲ್ಲಿ ಬಾಲಬಸವರ ಚಾರಿತ್ರಿಕ ಸಂಗತಿಗಳನ್ನು ಅವರ ಬದುಕಿನ ಬವಣೆಗಳನ್ನು ವಚನ ಚಳುವಳಿಯ ಹಿನ್ನೆಲೆಯಲ್ಲಿ ತಿಳಿಯಬಹುದಾಗಿದೆ. ಬಾಲಬಸವರ ಮೌಖಿಕ ಕಾವ್ಯದೊಳಗಿರುವ ಬಹುಮುಖಿ ನೆಲೆಗಳಾದ ಸಮಾಜ, ಸ್ಥಳೀಯ ಸಾಂಸ್ಕೃತಿಕ ಚರಿತ್ರೆ, ಸಾಹಿತ್ಯ, ವಿಜ್ಞಾನ, ಪ್ರಕೃತಿ, ಮಾನವಶಾಸ್ತ್ರ, ತತ್ವ ಮೀಮಾಂಸೆ, ಸಾಂಸ್ಕೃತಿಕ ನಾಯಕರು, ಜೀವನ ಮೀಮಾಂಸೆ, ದಲಿತ ಸಮುದಾಯಗಳ ಅಲಕ್ಷಿತ ಜ್ಞಾನಮೀಮಾಂಸೆ ಮುಂತಾದ ಅನೇಕ ಸಂಗತಿಗಳನ್ನು ಸಾಂಸ್ಕೃತಿಕ ಆಯಾಮಗಳಿಂದ ತಿಳಿಯುವುದು ಈ ಸಂಶೋಧನೆಯ ಮಹತ್ವವಾಗಿದೆ.

ಅಧ್ಯಯನದ ವ್ಯಾಪ್ತಿ :

ಕರ್ನಾಟಕದಲ್ಲಿರುವ ಬಾಲಬಸವ ಪರಂಪರೆಯ ಸಾಂಸ್ಕೃತಿಕ ನೆಲೆಗಳನ್ನು 'ಬಾಲಬಸವರ ಮೌಖಿಕ ಸಾಹಿತ್ಯ: ಸಾಂಸ್ಕೃತಿಕ ಅಧ್ಯಯನ' ತನ್ನ ಸಂಶೋಧನಾ ವ್ಯಾಪ್ತಿಯಾಗಿಸಿಕೊಂಡಿದೆ. ಬಾಲಬಸವ ಸಂಪ್ರದಾಯವು ಹಾಡುವ ಮೌಖಿಕ ಸಾಹಿತ್ಯವನ್ನು ಪ್ರಮುಖ ಆಕರವಾಗಿ ಬಳಸಿಕೊಳ್ಳಲಾಗಿದೆ. ಬಾಲಬಸವ ಪರಂಪರೆಯ ಪ್ರಧಾನ ಸಾಹಿತ್ಯವಾದ ಕಾಲಜ್ಞಾನವನ್ನು ಹಾಗೂ ಬಾಲಬಸವ ತುಮನೆಪ್ಪ ಹಾಡಿರುವ ಗೋಣಿಬಸಪ್ಪನ ಕಾವ್ಯ, ಮರುಳಸಿದ್ಧನ ಕಾವ್ಯ, ಇಗ್ನಾವತಿ ಕಾವ್ಯ, ಸಂಡೂರ ರಾಜನ ಕಾವ್ಯ ಮುಂತಾದವುಗಳನ್ನು ಈ ಸಂಶೋಧನೆಯ ಮುಖ್ಯ ಆಕರವಾಗಿ ಬಳಸಿಕೊಂಡು ಅಧ್ಯಯನ ಮಾಡಲಾಗಿದೆ. ಈ ಸಂಶೋಧನೆಯು ಹೆಚ್ಚು ಕ್ಷೇತ್ರಕಾರ್ಯವನ್ನು ಅವಲಂಬಿಸಿರುವುದರಿಂದ ಕರ್ನಾಟಕದಲ್ಲಿರುವ ಪ್ರಮುಖ ಬಾಲಬಸವ ಪರಂಪರೆಯ ಬಾಲಬಸವರನ್ನು ಸಂದರ್ಶನದ ಮೂಲಕ ಮಾಹಿತಿ ಮತ್ತು ಮೌಖಿಕ ಸಾಹಿತ್ಯವನ್ನು ಸಂಗ್ರಹಿಸಿ ಅವುಗಳನ್ನು ಈ ಸಂಶೋಧನೆಯ ವ್ಯಾಪ್ತಿಯನ್ನಾಗಿಸಿಕೊಂಡು ಅಧ್ಯಯನ ಮಾಡಲಾಗಿದೆ.

ಅಧ್ಯಯನದ ಸ್ವರೂಪ :

'ಬಾಲಬಸವರ ಮೌಖಿಕ ಸಾಹಿತ್ಯ: ಸಾಂಸ್ಕೃತಿಕ ಅಧ್ಯಯನ' ಎಂಬ ಸಂಶೋಧನೆಯಲ್ಲಿ ಅಧ್ಯಯನದ ಅನುಕೂಲಕ್ಕಾಗಿ ಒಟ್ಟು ಎಂಟು ಅಧ್ಯಾಯಗಳನ್ನು ಮಾಡಿಕೊಳ್ಳಲಾಗಿದೆ. ಒಂದೊಂದು ಅಧ್ಯಾಯದ ವಿಸ್ತೃತ ಅಧ್ಯಯನಕ್ಕಾಗಿ ಆ ಅಧ್ಯಾಯದೊಳಗೆ ಉಪಘಟಕಗಳಾಗಿ ವಿಭಾಗಿಸಿಕೊಂಡು ಅಧ್ಯಯನವನ್ನು ಮಾಡಲಾಗಿದೆ. ಇದರಿಂದ ಸಂಶೋಧನೆಯಲ್ಲಿ ಹೇಳುವ ಸಂಗತಿಗಳನ್ನು ಸ್ಪಷ್ಟವಾಗಿ ಹೇಳುವುದಕ್ಕೆ ಈ ರೀತಿಯಾದ ವಿಭಾಗಕ್ರಮವು ತುಂಬಾ ಸಹಾಯಕವಾಗಿದೆ.

ಮೊದಲನೇ ಅಧ್ಯಾಯದಲ್ಲಿ ಸಂಶೋಧನೆಯ ಪ್ರಧಾನ ರೂಪುರೇಷೆಗಳಾದ ಅಧ್ಯಯನದ ಉದ್ದೇಶ, ವಿಧಾನ, ವ್ಯಾಪ್ತಿ, ಮಹತ್ವ, ಸ್ವರೂಪ, ಅಧ್ಯಯನದ ಪರಿಭಾಷೆ ಮತ್ತು ಅಧ್ಯಯನದ ಪರಿಕಲ್ಪನೆಯಾದ 'ಸಾಂಸ್ಕೃತಿಕ ಅಧ್ಯಯನ' ಮಾದರಿಯ ಪರಿಕಲ್ಪನಾತ್ಮಕ ಚರ್ಚೆ ಮಾಡಲಾಗಿದೆ.

ಅಧ್ಯಾಯ ಎರಡರಲ್ಲಿ ಬಾಲಬಸವರ ಜೀವನವಿಧಾನಕ್ಕೆ ಸಂಬಂಧಿಸಿದಂತೆ ನಡೆದ ಅಧ್ಯಯನಗಳು, ಬಾಲಬಸವರ ಮೌಖಿಕ ಸಾಹಿತ್ಯವಾದ ಮೌಖಿಕ ಕಾವ್ಯಗಳು ಹಾಗೂ ಕಾಲಜ್ಞಾನ ಸಾಹಿತ್ಯ ಪರಂಪರೆಯ ಕುರಿತು ಇದುವರೆಗೆ ನಡೆದಿರುವ ಅಧ್ಯಯನಗಳ ತಾತ್ವಿಕ ಸಮೀಕ್ಷೆಯನ್ನು ಮಾಡಲಾಗಿದೆ.

ಅಧ್ಯಾಯ ಮೂರರಲ್ಲಿ ಬಾಲಬಸವರ ಚಾರಿತ್ರಿಕ ನೋಟವನ್ನು, ಅವರ ಮೌಖಿಕ ಕಥೆಗಳು, ಪುರಾಣಗಳು, ಬಾಲಬಸವರ ಕುರಿತು ನಡೆಸಿರುವ ಸಂಶೋಧನೆಗಳನ್ನು ಆಧಾರವಾಗಿಸಿಕೊಂಡು ಅವರ ಚಾರಿತ್ರಿಕ ಹಿನ್ನೆಲೆಯನ್ನು ಅಧ್ಯಯನ ಮಾಡಲಾಗಿದೆ. ಮುಂದುವರಿದು ಕರ್ನಾಟದಲ್ಲಿರುವ ಬಾಲಬಸವರ ಸಾಂಸ್ಕೃತಿಕ ನೆಲೆಗಳು ಮತ್ತು ಆ ಸ್ಥಳಗಳಲ್ಲಿ ಅವರ ಕಾಯಕತತ್ವದ ಮಹತ್ವವನ್ನು ಚರ್ಚಿಸಲಾಗಿದೆ. ಬಾಲಬಸವರ ಸಾಂಸ್ಕೃತಿಕ ಹಕ್ಕುದಾರಿಕೆಯ ಸ್ಥಳಗಳೊಂದಿಗೆ ಇರುವ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ, ಆರ್ಥಿಕ ಸಂಬಂಧ ಹಾಗೂ ಬಾಲಬಸವ ಪರಂಪರೆಯಲ್ಲಿರುವ ಮಹಿಳೆಯ ಸಾಮಾಜಿಕ ಸ್ಥಿತಿಗತಿ ಕುರಿತು ಉಪಘಟಕಗಳಲ್ಲಿ ಅಧ್ಯಯನ ಮಾಡಲಾಗಿದೆ. ಕರ್ನಾಟಕದಲ್ಲಿರುವ ದಲಿತ ಸಮುದಾಯಗಳ ಅಲಕ್ಷಿತ ಮೌಖಿಕ ಜ್ಞಾನಮೀಮಾಂಸೆ ಎಂಬ ಉಪ ಅಧ್ಯಾಯದಲ್ಲಿ ಕರ್ನಾಟಕದ ಪ್ರಮುಖ ದಲಿತ ಮೌಖಿಕ ಪರಂಪರೆಗಳಾದ ದೇವರಗುಡ್ಡದವರು, ನೀಲಗಾರರು ಮತ್ತು ಬಾಲಬಸವರ ನಡುವಿನ ಸಾಮೀಪ್ಯತೆಯ ಅಂಶಗಳಾದ ಕಾಲಜ್ಞಾನ, ಮೌಖಿಕ ಕಾವ್ಯ, ಕಥನ ಮಾದರಿ, ನಾಟಕೀಯ ನಿರೂಪಣೆಗಳು, ಮುಂತಾದ ಅಂಶಗಳಲ್ಲಿ ಇವರುಗಳ ನಡುವೆ ಇರುವ ಸಾಮೀಪ್ಯತೆಯ ಅಂಶಗಳನ್ನು ಗುರುತಿಸಿ ತೌಲನಿಕ ಮಾದರಿಯನ್ನು ಬಳಸಿಕೊಂಡು ಈ ಸಂಶೋಧನೆಯನ್ನು ಮಾಡಲಾಗಿದೆ. ಬಾಲಬಸವ ಪರಂಪರೆಯು ಆಧುನಿಕತೆಗೆ ಮುಖಾಮುಖಿಯಾದ ಈ ಸಂದರ್ಭದಲ್ಲಿ ಆ ಪರಂಪರೆಯು ಹೇಗೆ ತನ್ನ ಮೂಲ ಕುಲ ವೃತ್ತಿಯಿಂದ ಹಿಮ್ಮುಖವಾಗುತ್ತಿದೆ. ಇದರ ಪರಿಣಾಮವಾಗಿ ಅವರ ಮೌಖಿಕ ಸಾಹಿತ್ಯದಲ್ಲಾದ, ಸಾಮಾಜಿಕ ಜೀವನದಲ್ಲಾದ ಮತ್ತು ಆರ್ಥಿಕ ಬದುಕಿನಲ್ಲಾದ ಬದಲಾವಣೆಗಳನ್ನು ಈ ಸಂಶೋಧನೆಯ ಮೂರನೇ ಅಧ್ಯಾಯದಲ್ಲಿ ವಿಸ್ತೃತವಾಗಿ ಅಧ್ಯಯನ ಮಾಡಲಾಗಿದೆ.

ಅಧ್ಯಾಯ ನಾಲ್ಕರಲ್ಲಿ ಅಧ್ಯಯನಕ್ಕೆ ಪೂರಕವಾಗಿ ಬಾಲಬಸವ ಪರಂಪರೆಯ ಮೌಖಿಕ ಸಾಹಿತ್ಯವಾದ ಕಾಲಜ್ಞಾನ ಮತ್ತು ಬಾಲಬಸವ ತುಮನೆಪ್ಪ ಹಾಡುವ ಮೌಖಿಕ ಕಾವ್ಯಗಳಾದ ಗೋಣಿಬಸಪ್ಪನ ಕಾವ್ಯ, ಮರುಳಸಿದ್ಧನ ಕಾವ್ಯ, ಸಂಡೂರು ರಾಜನ ಕಾವ್ಯ ಮತ್ತು ಇಗ್ಗಾವತಿಯ ಕಾವ್ಯಗಳ ಕಥಾ ಸಾರಾಂಶವನ್ನು ಸಂಕ್ಷಿಪ್ತವಾಗಿ ನೀಡಲಾಗಿದೆ. ಬಾಲಬಸವರ ಮೌಖಿಕ ಸಾಹಿತ್ಯದ ನಿರೂಪಣ ಕ್ರಮಗಳಲ್ಲಿ ಬಳಸಲಾಗಿರುವ ಹಾಡಿನ ಸೊಲ್ಲುಗಳನ್ನು ಚರ್ಚಿಸಲಾಗಿದೆ.

ಅಧ್ಯಾಯ ಐದರಲ್ಲಿ ಬಾಲಬಸವರ ಮೌಖಿಕ ಸಾಹಿತ್ಯದಲ್ಲಿರುವ ಸಾಮಾಜಿಕ ಸಂಗತಿಗಳಾದ ಕೃಷಿ, ಮಳೆ, ಪ್ರಕೃತಿಯಲ್ಲಾದ ಬದಲಾವಣೆ, ವಿಜ್ಞಾನ, ವಿಡಂಬನೆ, ಮಹಿಳೆ ಮತ್ತು ವಚನ ಚಳುವಳಿ ಮುಂತಾದವುಗಳಲ್ಲಿ ವ್ಯಕ್ತಗೊಂಡಿರುವ ಸಾಮಾಜಿಕ ಅಂಶಗಳು ಸಮಾಜದಲ್ಲಿನ ಜನಸಮುದಾಯಗಳ ನೈತಿಕತೆಯನ್ನು ಎಚ್ಚರಿಸುವ ಕಾರ್ಯವನ್ನು ಹೇಗೆ ಮಾಡುತ್ತದೆ ಹಾಗೂ ಬಾಲಬಸವರ ಮೌಖಿಕ ಸಾಹಿತ್ಯದಲ್ಲಿರುವ ನೀತಿ ನಿಯಮಗಳು, ರೀತಿ ರಿವಾಜುಗಳು ಕಾವ್ಯದಲ್ಲಿ ಹೇಗೆ ವ್ಯಕ್ತಗೊಂಡಿವೆ ಎನ್ನುವುದರ ಕುರಿತು ಅಧ್ಯಯನ ಮಾಡಲಾಗಿದೆ.

ಅಧ್ಯಾಯ ಆರರಲ್ಲಿ ಬಾಲಬಸವರ ಮೌಖಿಕ ಸಾಹಿತ್ಯದಲ್ಲಿರುವ ಧಾರ್ಮಿಕ ನಾಯಕರ ಜೀವನ ಸಂಘರ್ಷಮಯ ಬದುಕನ್ನು ಗೋಣಿಬಸಪ್ಪನ ಕಾವ್ಯ, ಮರುಳಸಿದ್ಧನ ಕಾವ್ಯ ಮತ್ತು ಸಂಡೂರು ರಾಜನ ಕಾವ್ಯದೊಳಗಿರುವ ಆಕರಗಳಿಂದ ಸಾಂಸ್ಕೃತಿಕ ನಾಯಕರ ಜೀವನ ಚರಿತ್ರೆಯನ್ನು ಕಟ್ಟಿಕೊಡಲಾಗಿದೆ. ಸಾಂಸ್ಕೃತಿಕ ನಾಯಕರ ಕುರಿತು ಲಿಖಿತ ಚರಿತ್ರೆಗಳು ನೀಡುವ ದಾಖಲೆಗಳಿಗಿಂತ ಮೌಖಿಕ ಚರಿತ್ರೆಯು ಹೇಗೆ ಅವರನ್ನು ಜೀವಂತವಾಗಿಸಿವೆ ಎನ್ನುವುದನ್ನು ಅಧ್ಯಯನ ಮಾಡಲಾಗಿದೆ. ಮತ್ತು ಇವರ ಮೌಖಿಕ ಸಾಹಿತ್ಯದಲ್ಲಿ ವ್ಯಕ್ತಗೊಂಡಿರುವ ಸಮುದಾಯ ಪ್ರಜ್ಞೆಯ ಭಾಗವಾಗಿರುವ ಅಸ್ಪೃಶ್ಯತೆ, ದಲಿತಪ್ರಜ್ಞೆ, ಪ್ರತಿರೋಧ, ಅವಮಾನ, ಜಾತಿ, ದಲಿತರ ಶ್ರಮಸಂಸ್ಕೃತಿ ಮುಂತಾದ ದಲಿತತತ್ವದ ಅಂಶಗಳು ಹೇಗೆ ವ್ಯಕ್ತಗೊಂಡಿವೆ ಎನ್ನುವುದರ ಕುರಿತು ಈ ಸಂಶೋಧನೆಯಲ್ಲಿ ಅಧ್ಯಯನ ಮಾಡಲಾಗಿದೆ.

ಅಧ್ಯಾಯ ಏಳರಲ್ಲಿ ಬಾಲಬಸವರ ಮೌಖಿಕ ಸಾಹಿತ್ಯದಲ್ಲಿ ಪ್ರಭುತ್ವದ ಭಾಗವಾಗಿರುವ ಪಾಳೇಗಾರರು, ಯುದ್ಧ, ಆಡಳಿತದ ನೀತಿಗಳಾದ ತೆರಿಗೆ ಮತ್ತು ರಾಜಕೀಯ ಅಂಶಗಳು ಚರಿತ್ರೆಯ ಭಾಗವಾಗಿ ಹೇಗೆ ನಿರೂಪಿತಗೊಂಡಿದೆ ಎಂಬುವುದರ ಕುರಿತು ಚರ್ಚಿಸಲಾಗಿದೆ. ಬಾಲಬಸವರ ಮೌಖಿಕ ಆಕರಗಳು ನೀಡುವ ಚಾರಿತ್ರಿಕ ವಿವರಣೆಗಳಿಂದ ಅಲ್ಲಿನ ಸ್ಥಳೀಯ ಸಾಂಸ್ಕೃತಿಕ ಚರಿತ್ರೆಯು ಲಿಖಿತ ಚರಿತ್ರೆಗಿಂತ ಹೇಗೆ ಭಿನ್ನವಾಗಿದೆ ಎನ್ನುವ ಸಂಗತಿಗಳನ್ನು ಬಾಲಬಸವರ ಮೌಖಿಕ ಸಾಹಿತ್ಯವು ಹೇಗೆ ಕಟ್ಟಿಕೊಟ್ಟಿದೆ ಎನ್ನುವುದನ್ನು ಅಧ್ಯಯನ ಮಾಡಲಾಗಿದೆ.

ಅಧ್ಯಾಯ ಎಂಟರಲ್ಲಿ 'ಬಾಲಬಸವರ ಮೌಖಿಕ ಸಾಹಿತ್ಯ: ಸಾಂಸ್ಕೃತಿಕ ಅಧ್ಯಯನ'ದ ಸಮಾರೋಪ ಮತ್ತು ಅಧ್ಯಯನದ ಫಲಿತಗಳನ್ನು ನೀಡಲಾಗಿದೆ. ಬಾಲಬಸವರ ಸಂದರ್ಶನದ

ವಿವರಗಳು, ಛಾಯಾಚಿತ್ರಗಳು, ಮೂಲ ಆಕರಗಳ ಮಾಹಿತಿ ಮತ್ತು ಆಕರ ಗ್ರಂಥಸೂಚಿಯನ್ನು ನೀಡಲಾಗಿದೆ.

ಅಧ್ಯಯನದ ಪರಿಭಾಷೆ ಬಾಲಬಸಪ್ಪಗಳು=ಬಾಲಬಸವರು :

'ಬಾಲಬಸಪ್ಪಗಳ ಮೌಖಿಕ ಸಾಹಿತ್ಯ: ಸಾಂಸ್ಕೃತಿಕ ಅಧ್ಯಯನ' ಎನ್ನುವ ಈ ಸಂಶೋಧನೆಯಲ್ಲಿ ಬಾಲಬಸಪ್ಪಗಳ ಬದಲಿಗೆ ಬಾಲಬಸವರು ಎಂದು ಉಲ್ಲೇಖ ಮಾಡುವುದರಿಂದ ಓದುಗರಲ್ಲಿ ಮತ್ತು ಕೇಳುಗರಲ್ಲಿ ಗೊಂದಲ ಸೃಷ್ಟಿಯಾಗದಿರಲಿ ಎನ್ನುವ ಉದ್ದೇಶದಿಂದ ಈ ವಿವರಣೆಯನ್ನು ನೀಡುತ್ತಿದ್ದೇನೆ. ನನ್ನ ಸಂಶೋಧನೆಯ ಆರಂಭದಲ್ಲಿ 'ಬಾಲಬಸಪ್ಪಗಳ ಮೌಖಿಕ ಸಾಹಿತ್ಯ' ಎಂದರೆ ಬಾಲಬಸವ ಪರಂಪರೆಯಲ್ಲಿ ಬರೀ ಪುರುಷರೇ ಕಾಲಜ್ಞಾನ ಮತ್ತು ಮೌಖಿಕ ಕಾವ್ಯವನ್ನು ಹಾಡುತ್ತಾರೆ ಎಂದು ಭಾವಿಸಿಕೊಂಡಿದ್ದೆ. ಇದರಿಂದ ಅದೇ ದೃಷ್ಟಿಕೋನದಲ್ಲಿ ಅಧ್ಯಯನವನ್ನು ಮುಂದುವರಿಸಲಾಯಿತು. ಆದರೆ ನಂತರದ ದಿನಮಾನಗಳಲ್ಲಿ ಕ್ಷೇತ್ರಕಾರ್ಯದ ಮೂಲಕ ಈ ಪರಂಪರೆಯಲ್ಲಿ ಪುರುಷರಿಗೆಷ್ಟು ಮಾನ್ಯತೆ ಇದೆಯೋ, ಅಷ್ಟೇ ಮಾನ್ಯತೆ ಮಹಿಳೆಯರಿಗೂ ಇದೆ ಎನ್ನುವುದು ತಿಳಿದುಬಂತು. ಆದರೆ ಹಾಗಾಗಲೇ ನನ್ನ ಮೂರನೇ ಅರ್ಧವಾರ್ಷಿಕ ಪ್ರಗತಿ ವರದಿಯು ಮುಗಿದುಹೋಗಿತ್ತು. ಇದರಿಂದ ನನ್ನ ಸಂಶೋಧನೆಯಲ್ಲಿ ಬಾಲಬಸಪ್ಪಗಳ ಪರಂಪರೆಯಲ್ಲಿ ಮಹಿಳೆಯ ಪಾಲ್ಗೊಳ್ಳುವಿಕೆ ಬಗ್ಗೆ ಅಧ್ಯಯನ ಮಾಡುವುದು ಸೂಕ್ತ ಎನಿಸಿದಾಗ, ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತನಾಗಿ ಕರ್ನಾಟಕದಲ್ಲಿನ ಬಾಲಬಸಪ್ಪಗಳನ್ನು ಸಂದರ್ಶನ ಮಾಡಿದಾಗ ಈ ಮೌಖಿಕ ಪರಂಪರೆಯಲ್ಲಿ ಮಹಿಳೆಯ ಪಾತ್ರ ದೊಡ್ಡದಿರುವುದು ಕಂಡುಬಂದಿತು. ಅಲ್ಲದೆ ಬಾಲಬಸಪ್ಪಗಳು ಮಾತೃಮೂಲದ ನೆಲೆಯಿಂದ ಬಂದವರು ಎನ್ನುವುದಕ್ಕೆ ಅವರ ಪರಂಪರೆಯಲ್ಲಿರುವ 'ಬಾಲಬಸವಿ' ಪದ್ಧತಿಯೇ ಕಾರಣ ಎನ್ನುವುದು ಕ್ಷೇತ್ರ ಕಾರ್ಯದಿಂದ ತಿಳಿದುಕೊಂಡೆನು. ಇಂದಿಗೂ ಬಾಲಬಸವಿಯರು ತಮ್ಮ ಕುಟುಂಬಗಳನ್ನು ನಿರ್ವಹಿಸುವುದು ಕಾಣಬಹುದಾಗಿದೆ. ಇದರಿಂದಾಗಿ ನನ್ನ ಸಂಶೋಧನೆಯ ತಲೆ ಬರಹದಲ್ಲಿ ಗೊಂದಲ ಸೃಷ್ಟಿಯಾಯಿತು. ಇದನ್ನು ಪರಿಹರಿಸಿಕೊಳ್ಳಲು ಈ ಮಾರ್ಗವನ್ನು ಕಂಡುಕೊಳ್ಳಲಾಯಿತು, ಇಲ್ಲದ್ದಿದರೆ ಬರೀ ಪುರುಷವಾಚಕವನ್ನೇ ಪ್ರಧಾನವಾಗಿಟ್ಟುಕೊಂಡು ಅಧ್ಯಯನ ಮಾಡಿದರೆ, ಆ ಪರಂಪರೆಯಲ್ಲಿರುವ ಮಹಿಳೆ ಪಾತ್ರದ ಬಗ್ಗೆ ಅಧ್ಯಯನ ಮಾಡಲು ವ್ಯಾಪ್ತಿ ಇಲ್ಲದಂತಾಗುವ ಅಪಾಯ ಎದುರಾಗುವ ಸಾಧ್ಯತೆ ಇತ್ತು. ಹಾಗಾಗಿ ಬಾಲಬಸಪ್ಪಗಳ ಬದಲಿಗೆ **ಬಾಲಬಸವರು** ಎನ್ನುವ ಪರಿಭಾಷೆಯನ್ನು ಈ ಸಂಶೋಧನೆಯ ಉದ್ದಕ್ಕೂ ಬಳಸಿಕೊಂಡಿದ್ದೇನೆ.

ಬಾಲಬಸವ ಪರಂಪರೆಯಲ್ಲಿ ಮಹಿಳೆಯು ಕೂಡ ಕಾಲಜ್ಞಾನ ಸಾರುವಾಗ ಪುರುಷ ರೀತಿಯ ವೇಷ ಧರಿಸಿಕೊಂಡು ಕಾಲಜ್ಞಾನ ಸಾರುತ್ತಾಳೆ. ಅಲ್ಲದೇ ಬಾಲಬಸವ ಪರಂಪರೆಯಲ್ಲಿ ದೀಕ್ಷೆ ಪಡೆಯುವಾಗ ಮಹಿಳೆಯರು ಕೂಡ ಪುರುಷರಂತೆ ಲಿಂಗದೀಕ್ಷೆಯನ್ನು ಪಡೆಯುತ್ತಾರೆ.

ಮೌಖಿಕ ಕಾವ್ಯಗಳನ್ನು ಹಾಡುವಾಗ ಮಹಿಳೆಯರ ಸೊಲ್ಲುಗಳೇ ಕಥೆಯ ಜೀವಾಳ. ಅಂದರೆ ಪ್ರಧಾನ ಕಥೆಗಾರ ಕಥೆಯನ್ನು ಹಾಡಿ ನಿಲ್ಲಿಸಿದರೆ, ಅದನ್ನು ಮುಂದುವರಿಸುವವರು ಕೂಡ ಮಹಿಳೆಯರೇ. ಕಥೆ ಮಾಡುವ ನಿರೂಪಕನಿಗೆ ಸೊಲ್ಲುಗಳ ಮೂಲಕ ಕಥೆಯನ್ನು ನೆನಪಿಟ್ಟುಕೊಳ್ಳಲು ಮಹಿಳೆಯರೇ ಸಹಾಯ ಮಾಡುತ್ತಾರೆ. ಹಾಗಾಗಿ ಬಾಲಬಸವ ಪರಂಪರೆಯಲ್ಲಿ ಮೌಖಿಕ ಸಾಹಿತ್ಯವೆಂದಾಗ ಅಲ್ಲಿ ಬರೀ ಪುರುಷರು ಅಷ್ಟೆಯಲ್ಲ ಅಲ್ಲಿ ಗಂಡು ಹೆಣ್ಣು ಇಬ್ಬರು ಸಮಾನವಾಗಿರುತ್ತಾರೆ. ಹಾಗಾಗಿ ನನ್ನ ಅಧ್ಯಯನದಲ್ಲಿ ಇಬ್ಬರಿಗೂ ನ್ಯಾಯ ಸಿಗಲಿ ಎನ್ನುವ ಆಶಯದಿಂದಾಗಿ ಬಾಲಬಸಪ್ಪಗಳ ಬದಲಿಗೆ **ಬಾಲಬಸವರು** ಎಂದು ಅಧ್ಯಯನದಲ್ಲಿ ನಮೂದಿಸಲಾಗಿದೆ.

ಸಾಂಸ್ಕೃತಿಕ ಅಧ್ಯಯನದ ಪರಿಕಲ್ಪನಾತ್ಮಕ ಚರ್ಚೆ :

'ಬಾಲಬಸವರ ಮೌಖಿಕ ಸಾಹಿತ್ಯ: ಸಾಂಸ್ಕೃತಿಕ ಅಧ್ಯಯನ' ಎಂಬ ಈ ಸಂಶೋಧನೆಯು **'ಸಾಂಸ್ಕೃತಿಕ ಅಧ್ಯಯನ'** ಮಾದರಿಯನ್ನು ತನ್ನ ಪರಿಕಲ್ಪನೆಯನ್ನಾಗಿಸಿಕೊಂಡಿದೆ. ಬಾಲಬಸವರ ಮೌಖಿಕ ಸಾಹಿತ್ಯಕ್ಕೆ ಜನಪದವು ಮೂಲ ಆಕರವಾಗಿರುವುದರಿಂದ ಜನಪದ ಕಥೆಗಳು, ಕಾವ್ಯಗಳು, ಹಾಡುಗಳು, ಪ್ರದರ್ಶನ ಮುಂತಾದವುಗಳನ್ನು ಏಕ ಮಾದರಿಯ 'ಒಂದು ಅಧ್ಯಯನ' ಶಿಸ್ತಿನಿಂದ ಅಧ್ಯಯನ ಮಾಡಿದರೆ, ಅವುಗಳಲ್ಲಿರುವ ಸಮಾಜಮುಖಿ ಚಿಂತನೆಗಳು ಹೆಚ್ಚು ಚರ್ಚಿತಗೊಳ್ಳದೆ ಹೋಗುವ ಸಾಧ್ಯತೆಗಳಿರುತ್ತವೆ. ಸಮಾಜದಲ್ಲಿನ ತತ್ವಶಾಸ್ತ್ರ, ದಾರ್ಶನಿಕತೆ, ಚರಿತ್ರೆ, ಸಾಹಿತ್ಯ, ಸಂಸ್ಕೃತಿ, ಸಮಾಜದ ಪ್ರಧಾನ ಅಂಶಗಳಾದ ಗಂಡು, ಹೆಣ್ಣು, ಕುಟುಂಬ, ಆರ್ಥಿಕತೆ, ಧಾರ್ಮಿಕತೆ, ಪ್ರಭುತ್ವ ಹೀಗೆ ಹತ್ತು ಹಲವಾರು ವಿಷಯಗಳ ಕುರಿತು ಜನಸಮುದಾಯಗಳ ಮಧ್ಯದಲ್ಲಿ ಹುಟ್ಟಿದ ಜನಪದ ಮೌಖಿಕ ಸಾಹಿತ್ಯವು ಸಮಾಜದಲ್ಲಿ ನಡೆಯುವ ಅನೇಕ ಸಂಗತಿಗಳಿಗೆ ಪ್ರತಿಕ್ರಿಯೆ ನೀಡುತ್ತದೆ. ಈ ಸಂಗತಿಗಳನ್ನು ಅಧ್ಯಯನ ಮಾಡುವುದು ಅಗತ್ಯವೆನಿಸುತ್ತದೆ. ಬಾಲಬಸವರ ಮೌಖಿಕ ಸಾಹಿತ್ಯದಲ್ಲಿರುವ ವಿವಿಧ ಸಾಂಸ್ಕೃತಿಕ ಆಯಾಮಗಳಾದ ಸಾಹಿತ್ಯ, ಸಮಾಜ, ವಿಜ್ಞಾನ, ಚರಿತ್ರೆ, ಮಾನವಶಾಸ್ತ್ರ, ತತ್ವಮೀಮಾಂಸೆ, ದಲಿತರ ಜ್ಞಾನಮೀಮಾಂಸೆ ಮುಂತಾದ ಬಹುಜ್ಞಾನ ಶಿಸ್ತುಗಳನ್ನು ಅಧ್ಯಯನ ಮಾಡಿದಾಗ ಮಾತ್ರ ಬಾಲಬಸವರ ಮೌಖಿಕ ಸಾಹಿತ್ಯದಲ್ಲಿರುವ ಬಹುತ್ವದ ನೆಲೆಗಳು ಹೊರಬರುತ್ತವೆ. ಹಾಗಾಗಿ ನನ್ನ ಸಂಶೋಧನೆಗೆ 'ಸಾಂಸ್ಕೃತಿಕ ಅಧ್ಯಯನ' ಮಾದರಿಯ ಕ್ರಮವೇ ಹೆಚ್ಚು ಸೂಕ್ತ ಎನ್ನುವುದು ನನ್ನ ಅಭಿಪ್ರಾಯವಾಗಿದೆ.

ಸಂಸ್ಕೃತಿಯನ್ನು ಕುರಿತಂತೆ ಅನೇಕ ವಿದ್ವಾಂಸರು ತಮ್ಮದೇ ಆದ ವ್ಯಾಖ್ಯಾನಗಳನ್ನು ನೀಡಿದ್ದಾರೆ. ಅವುಗಳಲ್ಲಿ ಪ್ರಮುಖವಾದವು ಈ ಕೆಳಕಂಡಂತಿವೆ.

ಸಂಸ್ಕೃತಿ ಅಧ್ಯಯನಕಾರ ರೇಮಂಡ್ ವಿಲಿಯಮ್ಸ್‌ನ ಪ್ರಕಾರ "ಸಂಸ್ಕೃತಿಯು ವಿಭಿನ್ನ ಜ್ಞಾನ ಶಾಖೆಗಳ ವಾಗ್ವಾದಗಳಲ್ಲಿ ಉನ್ನತ ಮಟ್ಟದ ಚಿಂತನಾ ವಿಧಾನದಲ್ಲಿ ಬಳಕೆಯಾಗುವ ಒಂದು ಪರಿಕಲ್ಪನೆ."

ಚಿದಾನಂದ ಮೂರ್ತಿಯವರು ಸಂಸ್ಕೃತಿ ಕುರಿತು ಹೀಗೆ ಅಭಿಪ್ರಾಯ ಪಡುತ್ತಾರೆ: "ಸಂಸ್ಕೃತಿಯು ಒಂದು ಸಮಾಜದ ಜೀವನವಿಧಾನ, ಅದರ ಆಚಾರ ವ್ಯವಹಾರಗಳು ಅದರ ಸಂಸ್ಥೆಗಳು ಆಲೋಚನಾ ವಿಧಾನಗಳು."

ಮಾನವಶಾಸ್ತ್ರೀಯ ಅಧ್ಯಯನಕಾರರು ಸಂಸ್ಕೃತಿಯನ್ನು ಹೀಗೆ ಅರ್ಥೈಯಿಸುತ್ತಾರೆ: "ಸಂಸ್ಕೃತಿ ಎನ್ನುವುದು ಹಲವು ಚಾರಿತ್ರಿಕ ಘಟ್ಟಗಳನ್ನು ದಾಟಿಕೊಂಡು ಸಮುದಾಯಗಳ ಸಮಗ್ರ ಜೀವನ ವಿಧಾನ."

ಸಂಸ್ಕೃತಿಯನ್ನು ಕುರಿತಂತೆ ಜನಪದ ವಿದ್ವಾಂಸರಾದ ಲಕ್ಕಪ್ಪಗೌಡ, ವಿವೇಕ ರೈ, ಮತ್ತು ಪುರುಷೋತ್ತಮ ಬಿಳಿಮಲೆಯವರು ಸಂಪಾದನೆ ಮಾಡಿರುವ ಜಾನಪದ ಕೈಪಿಡಿಯ ಪುಸ್ತಕದಲ್ಲಿ ಸಂಸ್ಕೃತಿಯ ಬಗ್ಗೆ ಈ ರೀತಿಯಾದ ಅಭಿಪ್ರಾಯವಿದೆ: "ಸಂಸ್ಕೃತಿ ಮಾನವ ಜೀವಿಗಳಿಗೆ ವಿಶಿಷ್ಟವಾದುದು. ಸಮಾಜಕ್ಕೆ ಮತ್ತು ಸಂಸ್ಕೃತಿಗೆ ಸಂಬಂಧವಿದೆ. ವ್ಯಕ್ತಿಗಳಿರದೆ ಸಮಾಜವಾಗಲು ಹೇಗೆ ಸಾಧ್ಯವಿಲ್ಲವೋ ಹಾಗೆಯೇ ಸಮಾಜವಿಲ್ಲದೆ ಸಂಸ್ಕೃತಿ ಇರಲು ಸಾಧ್ಯವಿಲ್ಲ. ಪರಿಸರದಲ್ಲಿ ಮಾನವ ನಿರ್ಮಿತವಾದ ಭಾಗವೇ ಸಂಸ್ಕೃತಿ. ಸಂಸ್ಕೃತಿ ಮಾನವನಿಗೆ ಪರಂಪರಾಗತವಾಗಿ ಬರುವಂತಹದು. ಅದರೆ ಅದನ್ನು ತನ್ನದಾಗಿಸಿ ಮಾಡಿಕೊಳ್ಳಬೇಕಾದರೆ ಅದನ್ನು ಪ್ರಯತ್ನಪೂರ್ವಕವಾಗಿ ರೂಢಿಸಿಕೊಳ್ಳಬೇಕಾಗುತ್ತದೆ. ಸಂಸ್ಕೃತಿ ಒಂದು ತಲೆಮಾರಿನಿಂದ ಇನ್ನೊಂದು ತಲೆಮಾರಿಗೆ ವರ್ಗಾವಣೆಯಾಗುತ್ತದೆ. ಮಾನವನ ತಿಳುವಳಿಕೆ, ನಂಬಿಕೆ, ವರ್ತನೆ, ನೀತಿ, ಕಲೆ, ಸಾಹಿತ್ಯ, ಭಾಷೆ, ಕಾನೂನು, ಸಂಪ್ರದಾಯದ ದೃಷ್ಟಿಕೋನಗಳು, ಮೌಲ್ಯಗಳು ತಂತ್ರಗಳು ಮಾನವ ನಿರ್ಮಿತ ವಸ್ತುಗಳು ಆಲೋಚನೆಗಳು ಇವೆಲ್ಲವೂ ಸೇರಿ ಸಂಸ್ಕೃತಿಯು ರೂಪುಗೊಳ್ಳುತ್ತದೆ."[೫] ಇಲ್ಲಿ ಬಹು ಆಯಾಮಗಳಿಂದ ಸಂಸ್ಕೃತಿಯು ನಿರ್ಮಾಣವಾಗಿದೆ, ಅದು ನಿರಂತರ ಚಲನಶೀಲವಾಗಿರುತ್ತದೆ ಎಂದಿದ್ದಾರೆ.

ಪಾಶ್ಚಾತ್ಯ ಜನಪದ ವಿದ್ವಾಂಸರಾದ ಇ.ಬಿ. ಟೈಲರ್ ಅವರು ಸಂಸ್ಕೃತಿ ಬಗ್ಗೆ ತಮ್ಮದೇ ಆದ ಅಭಿಪ್ರಾಯವನ್ನು ಈ ರೀತಿಯಾಗಿ ಪಟ್ಟಿ ಮಾಡಿದ್ದಾರೆ. "culture or civilization is that complex whole which includes knowledge, belief, art, morals, law customes and any other capabilities and habits acquired by man as a member of the society."[೬] ಎಂದು ಸಮಾಜ ಮತ್ತು ಮನುಷ್ಯನ ನಡುವಿನ ಸಂಬಂಧಗಳು ಸಂಸ್ಕೃತಿಯ ಭಾಗವಾಗಿವೆ ಎನ್ನುತ್ತಾರೆ.

ಸಂಸ್ಕೃತಿಯಲ್ಲಿ ಅಡಕವಾಗಿರುವ ಅನೇಕ ಅಂಶಗಳನ್ನು ಒಂದುಗೂಡಿಸಿ 'ಸಾಂಸ್ಕೃತಿಕ' ಎನ್ನುವ ಪರಿಕಲ್ಪನೆಯಾಗಿ ರೂಪಿಸಿದ್ದಾರೆ. ಸಂಸ್ಕೃತಿ ಎನ್ನುವುದು ಅನೇಕ ಪರಿಕಲ್ಪನಾತ್ಮಕ ಮಜಲುಗಳನ್ನು ದಾಟಿ ಬಹುಶಿಸ್ತೀಯ ಅಧ್ಯಯನ ಮಾದರಿಯಾಗಿ ರೂಪಗೊಂಡಿದೆ. ಸಾಂಸ್ಕೃತಿಕ ಅಧ್ಯಯನವು ಹಲವು ಜ್ಞಾನಶಾಖೆಗಳ ಅಧ್ಯಯನದ ಫಲಿತವಾಗಿದೆ. ಇದರಿಂದ ರೂಪಗೊಳ್ಳುವ

ಒಂದು ಪರಿಪೂರ್ಣತೆಯು ಸಾಂಸ್ಕೃತಿಕ ವಿವಿಧ ಆಯಾಮಗಳನ್ನು ಒಳಗೊಂಡಿರುತ್ತದೆ. ಸಾಂಸ್ಕೃತಿಕ ಅಧ್ಯಯನ ಕುರಿತು ರಹಮತ್ ತರೀಕೆರೆಯವರು ಈ ರೀತಿಯಾಗಿ ಅಭಿಪ್ರಾಯಪಡುತ್ತಾರೆ: "ಸಂಸ್ಕೃತಿ ಚಿಂತಕರು ರೂಪಿಸಿದ ವ್ಯಾಖ್ಯೆಯನ್ನು ಇಟ್ಟುಕೊಂಡು, ಲೋಕದ ನಿರ್ದಿಷ್ಟ ವಿಷಯದ ಮೇಲೆ ಅನ್ವಯ ಮಾಡಿ ಬಹುಶಿಸ್ತೀಯ ವಿಧಾನದಲ್ಲಿ ವಿಶ್ಲೇಷಣೆ-ವ್ಯಾಖ್ಯಾನ ಮಾಡುವುದನ್ನು ಸಾಂಸ್ಕೃತಿಕ ಅಧ್ಯಯನ."[೭] ಎನ್ನುವ ಮಾತುಗಳಲ್ಲಿ ಸಾಂಸ್ಕೃತಿಕ ಅಧ್ಯಯನವು ಸಂಶೋಧನೆಯಲ್ಲಿ ಮಹತ್ವದ ಸ್ಥಾನ ಪಡೆದುಕೊಂಡಿರುವ ಸಂಗತಿಯನ್ನು ತಿಳಿಸುತ್ತಾರೆ.

ಸಾಂಸ್ಕೃತಿಕ ಅಧ್ಯಯನ ಕುರಿತು ಅರ್ಜುನ ಗೊಳಸಂಗಿಯವರು ಜನಪದ ಸಾಹಿತ್ಯದಲ್ಲಿ ಸಾಂಸ್ಕೃತಿಕ ಅಂಶಗಳು ಹೆಚ್ಚಾಗಿವೆಯೆಂದು ಹೇಳುತ್ತಾರೆ: "ಜನಪದ ಸಾಹಿತ್ಯ, ಕಲೆ, ಸಂಗೀತ, ಶಿಲ್ಪ, ನಂಬಿಕೆ, ಸಂಪ್ರದಾಯ, ಆಚರಣೆ, ಉಡುಗೆ, ತೊಡುಗೆ, ಆಹಾರ, ಊಟ, ವಸತಿ ಮೊದಲಾದ ಅನಂತಮುಖಗಳು ಈ ಜನಪದ ಸಂಸ್ಕೃತಿಗಿವೆ. ಇವೆಲ್ಲವನ್ನು ಒಳಗೊಂಡ ಅಧ್ಯಯನವೇ ಸಾಂಸ್ಕೃತಿಕ ಅಧ್ಯಯನ."[೮] ಎಂದು ಹೇಳುವ ಇವರ ಮಾತುಗಳಲ್ಲಿ ಜನಪದ ಸಂಸ್ಕೃತಿಯನ್ನು ಸಾಂಸ್ಕೃತಿಕ ಅಧ್ಯಯನ ಮಾದರಿಯಲ್ಲಿ ಅಧ್ಯಯನ ಮಾಡಿದಾಗ ಮಾತ್ರ ಅದರಲ್ಲಿರುವ ಬಹುತ್ವದ ಆಯಾಮಗಳು ತಿಳಿಯುತ್ತವೆ ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಕರ್ನಾಟಕದಲ್ಲಿ 'ಸಾಂಸ್ಕೃತಿಕ ಅಧ್ಯಯನದ' ಮಾದರಿಯನ್ನು ಬಳಸಿಕೊಂಡು ಈಗಾಗಲೇ ಅನೇಕ ವಿದ್ವಾಂಸರು ಕರ್ನಾಟಕದ ಚಾರಿತ್ರಿಕ, ಸಾಂಸ್ಕೃತಿಕ, ಧಾರ್ಮಿಕ, ಶಾಸನ ಮತ್ತು ಜನಸಮುದಾಯಗಳ ಸಂಸ್ಕೃತಿಯನ್ನು ಅಧ್ಯಯನ ಮಾಡಿದ್ದಾರೆ. ಸಂಸ್ಕೃತಿ ಚಿಂತಕರಾದ ರಹಮತ್ ತರೀಕೆರೆಯವರು ಸಾಂಸ್ಕೃತಿಕ ಅಧ್ಯಯನಗಳು ಹೆಚ್ಚುಗೊಳ್ಳಲು ಮೂರು ಕಾರಣಗಳನ್ನು ನೀಡುತ್ತಾರೆ. "ಒಂದು: ಈ ಮಾದರಿಯಲ್ಲಿ ಚರಿತ್ರೆಯ ಪುನಾರಚನ ವಿಧಾನ. ಎರಡು: ಇದು ತೆರೆದುಕೊಟ್ಟ ಬಹುಶಿಸ್ತೀಯ ವಿಧಾನ. ಮೂರು: ವಿಶ್ವವಿದ್ಯಾಲಯಗಳ ಬೌದ್ಧಿಕ ಅಧ್ಯಯನದ ಶಿಸ್ತಿಗೆ ಎಂಪಿರಿಕಲ್ ಮಾದರಿ ತೀರ ಅನುಕೂಲಕರವಾಗಿ ಒದಗುವುದು."[೯] ಎನ್ನುವ ವಿಚಾರಗಳನ್ನು ಹೇಳುತ್ತಾರೆ. ಬಹುಶಿಸ್ತೀಯ ಮಾದರಿಯಲ್ಲಿ ಆಕರಗಳನ್ನು ಬಹು ಆಯಾಮಗಳಿಂದ ವ್ಯವಸ್ಥಿತ ಹಾಗೂ ಶಿಸ್ತುಬದ್ಧ ಅಧ್ಯಯನ ಮಾಡಲು ಈ ಸಾಂಸ್ಕೃತಿಕ ಮಾದರಿಯನ್ನು ಬಳಸಿಕೊಂಡು ಬಾಲಬಸವರ ಮೌಖಿಕ ಸಾಹಿತ್ಯವನ್ನು ಸಾಂಸ್ಕೃತಿಕ ನೆಲೆಗಳಲ್ಲಿ ಅಧ್ಯಯನ ಮಾಡಲಾಗಿದೆ.

ಅಡಿಟಿಪ್ಪಣಿ

೧. ಜೀಶಂಪ, '**ದಕ್ಷಿಣ ಕರ್ನಾಟಕ ಜನಪದ ಕಾವ್ಯ ಪ್ರಕಾರಗಳು**' ಪು.೯೮-೯೯

೨. ಅಂಬಳಿಕೆ ಹಿರಿಯಣ್ಣ, '**ವೃತ್ತಿಗಾಯಕರು,**' ಪು.೨-೩

೩. ವಿ. ಶಿವಾನಂದ: **ಕಾಲಜ್ಞಾನ ಸಾಹಿತ್ಯ,**(ಜಾ.ಸಾ.ದರ್ಶನ-೩)ಪು.೨೭೯

೪. ವೆಂಕಟೇಶ ಇಂದ್ವಾಡಿ, '**ಬಾಲಬಸವ ತುಮನೆಪ್ಪ ಹಾಡಿದ ಗೋಣಿ ಬಸಪ್ಪನ ಕಾವ್ಯ**', ಪು.೧೪

೫. ಲಕ್ಕಪ್ಪಗೌಡ, '**ಜಾನಪದ ಕೈಪಿಡಿ**', 'ಸಂಸ್ಕೃತಿ', ಪು.೫೧೧

೬. ಲಕ್ಕಪ್ಪಗೌಡ, '**ಜಾನಪದ ಕೈಪಿಡಿ**', 'ಸಂಸ್ಕೃತಿ', ಪು.೫೧೧

೭. ರಹಮತ್ ತರೀಕೆರೆ, '**ಸಾಂಸ್ಕೃತಿಕ ಅಧ್ಯಯನ**', ಪು.೧೧

೮. ಅರ್ಜುನ ಗೊಳಸಂಗಿ, **ಗೊಳಸಂಗಿ ಗ್ರಾಮ: ಒಂದು ಸಾಂಸ್ಕೃತಿಕ ಅಧ್ಯಯನ,** ಪು.೧

೯. ರಹಮತ್ ತರೀಕೆರೆ, **ಸಾಂಸ್ಕೃತಿಕ ಅಧ್ಯಯನ,** ಪು.೬೩

ಅಧ್ಯಾಯ : ೨
ಇದುವರೆಗೆ ನಡೆದಿರುವ ಅಧ್ಯಯನಗಳ ತಾತ್ವಿಕ ಸಮೀಕ್ಷೆ

ಅಧ್ಯಾಯ : ೨
ಇದುವರೆಗಿನ ಅಧ್ಯಯನಗಳ ತಾತ್ವಿಕ ಸಮೀಕ್ಷೆ

ಕರ್ನಾಟಕದಲ್ಲಿ ಜನಪದ ಸಾಹಿತ್ಯ ಕುರಿತು ಅಧ್ಯಯನಗಳು ಆರಂಭವಾಗಿದ್ದೇ ಬ್ರಿಟಿಷ್ ಸರ್ಕಾರದ ಕ್ರೈಸ್ತ ಮಿಷನರಿಗಳಿಂದ. ತನ್ನ ಆಡಳಿತದ ವಿಸ್ತರಣೆಗೆ ಅನುಕೂಲವಾಗಲೆಂದು ಜನಪದ ಆಕರಗಳನ್ನು ಸಂಗ್ರಹಿಸಿ, ಸಂಪಾದಿಸುವ ಕಾರ್ಯವನ್ನು ಆರಂಭಿಸಿದರು. ಮೊದಲ ಕಾಲಘಟ್ಟದ ವಿದೇಶಿ ವಿದ್ವಾಂಸರಾದ ಕಿಟೆಲ್, ಚಾರ್ಲ್ಸ್–ಇ–ಗೋವರ್, ಮೆಕೆಂಜಿ, ಫ್ಲೀಟ್ ಮುಂತಾದವರು ಜನಪದರ ಬದುಕಿನ ವಿವರಗಳಿಗೆ ಕೈಹಾಕಿದರು. ವಿದೇಶಿ ಕ್ಷೇತ್ರತಜ್ಞರಾದ ಅಬ್ಬೇದುಬೆ, ಥರ್ಸ್ಟನ್, ಫ್ರಾನ್ಸಿಸ್ ಜನಪದ ಮೌಖಿಕ ಸಾಹಿತ್ಯ ಮತ್ತು ಜನಪದರ ಜೀವನದ ಕುರಿತು ಅಧ್ಯಯನಗಳನ್ನು ಆರಂಭಿಸಿದರು. ಮೊದಲಿಗೆ ಚಾರ್ಲ್ಸ್–ಇ–ಗೋವರ್ ಎಂಬ ಪಾಶ್ಚಾತ್ಯ ವಿದ್ವಾಂಸ ೧೮೭೧ರಲ್ಲಿ 'ಜನಪದಗೀತೆ' ಎಂಬ ಹೆಸರಿನಲ್ಲಿ ಮೌಖಿಕ ಸಾಹಿತ್ಯವನ್ನು ಬರಹದ ಮೂಲಕ ರೂಪಿಸಿ ಪ್ರಥಮವಾಗಿ ಪ್ರಕಟಿಸಿದನು. ನಂತರ ೧೮೮೫–೯೦ರಲ್ಲಿ ಫ್ಲೀಟ್ ಐತಿಹಾಸಿಕ ಕನ್ನಡದ ಐದು ಲಾವಣಿಗಳನ್ನು ಸಂಪಾದನೆ ಮಾಡಿ 'ಇಂಡಿಯನ್ ಆ್ಯಂಟಿಕ್ವೆರಿ' ಪತ್ರಿಕೆಯಲ್ಲಿ ಪ್ರಕಟಿಸುವುದರ ಮೂಲಕ ಮೌಖಿಕ ಸಾಹಿತ್ಯದೊಳಗಿನ ಸಾಮಾಜಿಕ ಸಂಗತಿಯನ್ನು ಜನತೆಯ ಮುಂದಿಡುವ ಕಾರ್ಯಕ್ಕೆ ಮುನ್ನುಡಿ ಬರೆದನು. ಕಿಟೆಲ್‌ರು ಕೊಡವರ ಆಚರಣೆಗಳನ್ನು ಕುರಿತಂತೆ 'ಕೊಡವರ ಮೂಢನಂಬಿಕೆಗಳು' ಎಂಬ ಲೇಖನವು ಕೊಡವರ ಮದುವೆ ಸಂಪ್ರದಾಯಗಳನ್ನು ತಿಳಿಸುತ್ತದೆ. ಮೆಕೆಂಜಿ ಅದೇ ಪತ್ರಿಕೆಯಲ್ಲಿ 'ದಿ ವಿಲೇಜ್ ಪೀಸ್ಟ್' ಎಂಬ ಲೇಖನದಲ್ಲಿ ಬೆಂಗಳೂರಿನ ಅಕ್ಕಿ ತಿಮ್ಮನಹಳ್ಳಿ ಗ್ರಾಮದೇವತೆಯ ಆಚರಣೆ ಕುರಿತು ಬರೆದರು. ಪಾಶ್ಚಾತ್ಯ ವಿದ್ವಾಂಸರು ಈ ನೆಲದ ಸಂಸ್ಕೃತಿ, ಸಾಹಿತ್ಯ, ಕಾವ್ಯ, ಕಥೆ, ಕಲೆ, ಆಚರಣೆ ಮುಂತಾದ ಜನಪದ ಪ್ರಕಾರಗಳನ್ನು ಸಂಗ್ರಹಿಸಿ ಕರ್ನಾಟಕ ಜನಪದ ಸಂಸ್ಕೃತಿಯ ಅಧ್ಯಯನಕ್ಕೆ ಉತ್ತಮವಾದ ಕೊಡುಗೆ ನೀಡಿದರು. ಇವರ ನಂತರ ಸ್ವಾತಂತ್ರ್ಯಪೂರ್ವದಲ್ಲಿ ಜನಪದ ಅಧ್ಯಯನವು ಸಮಗ್ರವಾಗಿ

ನಡೆದಿದ್ದು ಕಡಿಮೆ. ಕೆಲವು ಬಿಡಿ, ಬಿಡಿಯಾದ ಅಧ್ಯಯನಗಳು ಆ ಸಮಯಕ್ಕೆ ನಡೆದವು. ಅವುಗಳಲ್ಲಿ ಶ್ರೀಕಂಠೇಶಗೌಡರು ಜನಪದರ ಕಥೆ, ಗಾದೆ, ಭಾಷೆ ಹಾಗೂ ಜನಪದ ಜೀವನದ ಅನೇಕ ಪ್ರಕಾರಗಳಿಗೆ ಸಂಬಂಧಿಸಿದಂತೆ ಅಧ್ಯಯನ ಮಾಡಿ ೧೯೨೪ರಲ್ಲಿ 'ಪಟ್ಟೋಲೆ ಪಳಮೆ' ಎನ್ನುವ ಗ್ರಂಥವನ್ನು ಹೊರತಂದರು. ಕೊಡಗಿನ ಕೊಡವರ ಜೀವನ ಮತ್ತು ಸಂಸ್ಕೃತಿಗೆ ಸಂಬಂಧಿಸಿದ ಅಧ್ಯಯನ ಸಾಮಗ್ರಿಗಳನ್ನು ದಾಖಲಿಸಿಡುವ ಪ್ರಯತ್ನವು ಈ ಕೃತಿಯಲ್ಲಿ ಕಂಡುಬರುತ್ತದೆ. ೧೯೨೮ರಲ್ಲಿ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು ಬರೆದ 'ಕನ್ನಡ ಲಾವಣಿಗಳು' ಎಂಬ ಕೃತಿಗೆ ಮುನ್ನುಡಿಯನ್ನು ಬರೆದರು. ಹಲಸಂಗಿ ಗೆಳೆಯರಿಂದ ೧೯೩೧ರಲ್ಲಿ ಕನ್ನಡ ಜನಪದ ಹಾಡುಗಳ ಮಹತ್ವದ ಕೃತಿಯಾದ 'ಗರತಿಯಹಾಡು' ಜನಪದ ಮೌಖಿಕ ಸಾಹಿತ್ಯದ ಅಧ್ಯಯನದ ಕಡೆ ಮುಖ ಮಾಡುವಂತೆ ಮಾಡಿತು.

ಹಳೇ ಮೈಸೂರು ಪ್ರಾಂತ್ಯದಲ್ಲಿ ಕ.ರಾ.ಕೃಷ್ಣಮೂರ್ತಿ ಅವರ 'ನುಚ್ಚಾಯ್ತು ನೀರಹೊಳೆಯಾಗೆ', ಅರ್ಚಕ ರಂಗಸ್ವಾಮಿಯವರ 'ಹಳ್ಳಿಯ ಬದುಕು'(೧೯೩೩) ಇತ್ಯಾದಿ ಜನಪದ ಸಂಗ್ರಹಗಳು ಪ್ರಕಟಗೊಂಡವು. ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು 'ಹಳ್ಳಿಯ ಹಾಡು'ಗಳಿಗೆ ಬರೆದ ಮುನ್ನುಡಿ ಕೂಡ ಜನಪದ ಮೌಖಿಕ ಸಾಹಿತ್ಯದ ಮಹತ್ವವನ್ನು ತಿಳಿಸುತ್ತದೆ. ನವೋದಯ ಕಾಲದ ಮುಖ್ಯ ಬರಹಗಾರರಾದ ಬಿ.ಎಂ.ಶ್ರೀ., ಮಾಸ್ತಿ, ಕಾರಂತ, ಕುವೆಂಪು, ಮೊದಲಾದ ವಿದ್ವಾಂಸರು ಜನಪದ ಸಾಹಿತ್ಯದ ಕುರಿತು ಅನೇಕ ಲೇಖನಗಳನ್ನು ಬರೆದರೇ ಹೊರತು, ಸಂಗ್ರಹ ಕಾರ್ಯ ಮಾಡಲಿಲ್ಲ. ಬಿ.ಎಸ್.ಗದ್ದಿಗಿಮಠರಿಗೆ ಸ್ವಾತಂತ್ರ್ಯೋತ್ತರ ಕಾಲದಲ್ಲಿ ಜನಪದ ಕ್ಷೇತ್ರದಲ್ಲಿ ಮೊಟ್ಟಮೊದಲು ಸಂಶೋಧನೆ ಮಾಡಿದ ಕೀರ್ತಿ ಸಲ್ಲುತ್ತದೆ. ಅವರ ಸಂಶೋಧನಾ ಮಹಾಪ್ರಬಂಧವಾದ 'ಕನ್ನಡ ಜಾನಪದ ಗೀತೆಗಳು'(೧೯೫೫) ಆಗಿನ ಕಾಲದ ಜನಪದ ಸಾಹಿತ್ಯದ ಅಧ್ಯಯನವನ್ನು ಹೆಚ್ಚು ವಿಸ್ತಾರತೆಗೆ ತೆರೆದುಕೊಳ್ಳಲು ಸಹಾಯಕವಾಯಿತು. ಕನ್ನಡ ಜನಪದ ಮೌಖಿಕ ಕಾವ್ಯಗಳನ್ನು ಕುರಿತಂತೆ ಆರಂಭದಲ್ಲಿ ಮತಿಘಟ್ಟ ಕೃಷ್ಣಮೂರ್ತಿಯವರು 'ಏಳುಕೊಳ್ಳದ ಎಲ್ಲಮ್ಮ' ಎಂಬ ಮೌಖಿಕ ಕಾವ್ಯವನ್ನು ಸಂಗ್ರಹಿಸಿದರು. ಈ ಕಾವ್ಯದಲ್ಲಿ ಎಲ್ಲಮ್ಮನ ಕುರಿತಾಗಿರುವ ಅನೇಕ ವಿವರಗಳನ್ನು ತಮ್ಮ ಅಧ್ಯಯನದಲ್ಲಿ ತಿಳಿಸಿದ್ದಾರೆ. ನಂತರ ಜೀಶಂಪ ಅವರು ೧೯೭೮ರಲ್ಲಿ 'ದಕ್ಷಿಣ ಕರ್ನಾಟಕ ಜನಪದ ಕಾವ್ಯ ಪ್ರಕಾರಗಳು' ಎಂಬ ಪಿಎಚ್.ಡಿ. ಮಹಾಪ್ರಬಂಧವನ್ನು ಬರೆದರು. ಅವರ ಅಧ್ಯಯನದಲ್ಲಿ ಮಾದೇಶ್ವರ, ಮಂಟೇಸ್ವಾಮಿ, ಜುಂಜಪ್ಪ, ಮೈಲಾರಲಿಂಗ ಮತ್ತು ಎಲ್ಲಮ್ಮನ ಕುರಿತಂತೆ ಮೌಖಿಕವಾಗಿ ಹಾಡುವ ಹಾಡುಗಳನ್ನು ಸಂಗ್ರಹಿಸಿದ್ದಾರೆ. ಇದಕ್ಕೆ ಜೀಶಂಪ ಅವರು ಕಾವ್ಯ ಸಂಪಾದನೆ ಎನ್ನುವ ಹೆಸರಿನಲ್ಲಿಯೇ ಸಾಂಸ್ಕೃತಿಕ-ನಾಯಕ-ನಾಯಕಿಯರ ಕುರಿತಾಗಿರುವ ಮೌಖಿಕ ಕಾವ್ಯಗಳ ವಿಭಿನ್ನ ಪಠ್ಯಗಳನ್ನು ಸಂಗ್ರಹಿಸಿ ಸಂಪ್ರದಾಯಗಳ ಹಾಗೂ ಸ್ವರೂಪಗಳ ಕುರಿತಂತೆ ಅಧ್ಯಯನ ನಡೆಸಿದ್ದಾರೆ.

ಇದೇ ಕಾಲಘಟ್ಟದಲ್ಲಿ ತೀ.ನಂ. ಶಂಕರನಾರಾಯಣ ಅವರು 'ಕಾಡುಗೊಲ್ಲರ ನಂಬಿಕೆ ಮತ್ತು ಸಂಪ್ರದಾಯಗಳು' ಎಂಬ ವಿಷಯದ ಮೇಲೆ ಸಂಶೋಧನೆ ಕೈಗೊಂಡಿದ್ದರು. ಆಗ ಜುಂಜಪ್ಪನ ಪುರಾಣವನ್ನು ಮೌಖಿಕ ಕಾವ್ಯ ರೂಪದಿಂದ ಗದ್ಯ ರೂಪಕ್ಕೆ ತಂದರು. ಹಾಗೆಯೇ ಕಾಡುಗೊಲ್ಲರ ಸಾಂಸ್ಕೃತಿಕ ನಾಯಕರುಗಳಾದ ಎತ್ತಯ್ಯ, ಚಿತ್ರದೇವರು, ಕಾಟಮಲಿಂಗ ದೇವರು ಮೊದಲಾದ ಮೌಖಿಕ ರೂಪದ ಕಾವ್ಯಗಳನ್ನು ಸಂಗ್ರಹಿಸುವ ಮತ್ತು ಅದನ್ನು ಅಧ್ಯಯನಕ್ಕೆ ಒಳಪಡಿಸುವ ಕಾರ್ಯ ಮಾಡಿದರು. ಜೀಶಂಪ ಅವರು ಮಂಟೇಸ್ವಾಮಿ ಕಾವ್ಯವನ್ನು ಸಂಗ್ರಹಿಸಿ ಪ್ರಕಟಿಸಿದ್ದಾರೆ. ಹಾಗೆಯೇ ಪಿ.ಕೆ. ರಾಜಶೇಖರ ಅವರು ಮಾದೇಶ್ವರ ಕಾವ್ಯವನ್ನು ವಿವಿಧ ಗಾಯಕರುಗಳಿಂದ ಹಾಡಿಸಿ ಸೂಕ್ತವೆನಿಸಿದ ಭಾಗಗಳನ್ನು ಆಯ್ಕೆ ಮಾಡಿಕೊಂಡು ಎರಡು ಸಂಪುಟಗಳಲ್ಲಿ ಪ್ರಕಟಿಸಿದ್ದಾರೆ. ಜನಪದ ಭಾರತ, ಬಸವ ಪುರಾಣ, ಜನಪದ ರಾಮಾಯಣಗಳಂತಹ ಮೌಖಿಕ ಕಾವ್ಯವನ್ನು ರಾಗೌ ಮತ್ತು ಪಿ.ಕೆ. ರಾಜಶೇಖರ ಅವರು ಸೇರಿ ಸಂಗ್ರಹಿಸಿದ್ದಾರೆ. ಎಂ.ಬಿ. ನೇಗಿನಹಾಳ, ಚಿಕ್ಕರೆ ಶಿವಶಂಕರ್ ಅವರು 'ಮೈಲಾರಲಿಂಗನ ಕಾವ್ಯ' ಸಂಗ್ರಹ ಮಾಡಿದ್ದಾರೆ. ಈ ಮೇಲಿನ ಸಂಗ್ರಹ ಕಾರ್ಯ ನಡೆದಿದ್ದು ೧೯೭೦-೧೯೯೦ರ ಅವಧಿಯಲ್ಲಿ. ೧೯೯೦ರ ನಂತರ ಬಿ.ಎಸ್ ಸ್ವಾಮಿಯವರು 'ಮಲೆಯಮಾದೇಶ್ವರ: ಒಂದು ಅಧ್ಯಯನ' ಪಿಎಚ್.ಡಿ ಮಹಾಪ್ರಬಂಧ ಪ್ರಕಟಿಸಿದ್ದಾರೆ. ಇದರಲ್ಲಿ ಮಲೆಮಾದೇಶ್ವರನ ಐತಿಹಾಸಿಕತೆ, ಸಾಹಿತ್ಯಿಕ, ಸಾಂಸ್ಕೃತಿಕ ಸಂಗತಿಗಳ ಕುರಿತಾಗಿ ಅಭ್ಯಾಸ ಮಾಡಲಾಗಿದೆ. ಹೀಗೆ ಮಂಟೇಸ್ವಾಮಿ ಮತ್ತು ಮಾದೇಶ್ವರ ಕಾವ್ಯವನ್ನು ತೌಲನಿಕವಾಗಿಟ್ಟುಕೊಂಡು ಅಧ್ಯಯನ ಮಾಡಲಾಗಿದೆ. ತೀ.ನಂ. ಶಂಕರನಾರಾಯಣ ಅವರು ಆರ್.ಆರ್.ಸಿ.ನ ಸಹಯೋಗದಲ್ಲಿ ಜುಂಜಪ್ಪನ ಕಾವ್ಯವನ್ನು ಪ್ರದರ್ಶನಾತ್ಮಕ ಹಾಗೂ ಅನನ್ಯತೆ ದೃಷ್ಟಿಯಿಂದ ಅಧ್ಯಯನ ನಡೆಸಿದ್ದಾರೆ. ಪಿ.ಬಿ.ಶಿವಣ್ಣ ಅವರು 'ಕಾಡುಗೊಲ್ಲರ ಇಬ್ಬರು ಸಾಂಸ್ಕೃತಿಕ ವೀರರು' ಎಂಬ ಸಂಶೋಧನಾ ಮಹಾಪ್ರಬಂಧದಲ್ಲಿ ಎತ್ತಪ್ಪ ಮತ್ತು ಜುಂಜಪ್ಪರ ಕುರಿತಾಗಿರುವ ಮೌಖಿಕ ಕಾವ್ಯಗಳ ಪುರಾಣಗಳನ್ನು ಸಂಗ್ರಹಿಸಿ ಅವುಗಳ ನಡುವೆ ತೌಲನಿಕವಾಗಿ ಅಭ್ಯಾಸ ಮಾಡಿದ್ದಾರೆ. ಎಂ.ಎನ್.ವೆಂಕಟೇಶ್ ಅವರ 'ಮೈಲಾರದ ಜಾತ್ರೆಗಳು ಪ್ರದರ್ಶನಾತ್ಮಕ ಅಧ್ಯಯನ' ಎಂಬ ಪ್ರಬಂಧದಲ್ಲಿ ಮೈಲಾರಲಿಂಗನ ಮೌಖಿಕ ಕಾವ್ಯವು ಪುನರ್ ಅಭಿನಯಗೊಳ್ಳುವ ಸಂದರ್ಭ ಹಾಗೂ ಸ್ವರೂಪಗಳನ್ನು ಗುರುತಿಸಿದ್ದಾರೆ. ೧೯೬೪ರ ಕಾಲಾವಧಿಯಲ್ಲಿ ತೀ.ನಂ. ಶಂಕರನಾರಾಯಣ ಅವರು ಜನಪದ ಮಹಾಕಾವ್ಯ ಎಂಬ ಕಿರುಪುಸ್ತಕವೊಂದನ್ನು ರಚಿಸಿ ಅದರಲ್ಲಿ ಜನಪದ ಮಹಾಕಾವ್ಯದ ಸ್ವರೂಪ ಮತ್ತು ಸಾಧ್ಯತೆಗಳ ಕುರಿತಂತೆ ವಿಚಾರ ಮಾಡಿದ್ದಾರೆ. ವಿಶೇಷ ಸಂಗತಿ ಎಂದರೆ ಜುಂಜಪ್ಪನ ಕಾವ್ಯವನ್ನು ಸಂದರ್ಭ ಮತ್ತು ಪ್ರದರ್ಶನ ಪಠ್ಯ ರಚಿಸಿ, ಶಿಷ್ಟ-ಜನಪದಗಳ ಸಂಬಂಧಗಳ ಅನನ್ಯತೆಯ ದೃಷ್ಟಿ, ಲಿಂಗಬೇಧದ ಪ್ರಭಾವ ಮತ್ತು ಪ್ರಕಾರಗಳ ಭಿನ್ನತೆ, ಆಚರಣಾತ್ಮಕ ನೆಲೆ, ಐತಿಹಾಸಿಕ ಮೊದಲಾದ ನೆಲೆಗಳಿಂದ ಸ್ಥೂಲ ಅಧ್ಯಯನ ಮಾಡಿದ್ದಾರೆ.

ಅಂಬಳಿಕೆ ಹಿರಿಯಣ್ಣನವರು 'ಜನಪದ ಮಹಾಕಾವ್ಯಗಳು' ಎಂಬ ಕೃತಿಯಲ್ಲಿ ಜಾಗತಿಕ ಹಾಗೂ ಭಾರತೀಯ ನೆಲೆಯಿಂದ ವಿಶೇಷವಾಗಿ ಕರ್ನಾಟಕದ ಜನಪದ ಮಹಾಕಾವ್ಯಗಳ ಸ್ವರೂಪ ಕುರಿತು ಚರ್ಚಿಸಿ ಲಭ್ಯವಿರುವ ಮಹಾಕಾವ್ಯಗಳನ್ನು ಪರಿಚಯಾತ್ಮಕವಾಗಿ ವಿಶ್ಲೇಷಣೆಗೆ ಒಳಪಡಿಸಿದ್ದಾರೆ. ಅವರು ಬರೆದಿರುವ ಮಾದೇಶ್ವರ ಕಾವ್ಯ ಎನ್ನುವ ಲೇಖನದಲ್ಲಿ ಪರಂಪರೆಯ ದೃಷ್ಟಿ, ಪುರಾಣ ದೃಷ್ಟಿ, ಐತಿಹಾಸಿಕ ದೃಷ್ಟಿ, ರಚನ ದೃಷ್ಟಿ ಎನ್ನುವ ಭಿನ್ನ ಭಿನ್ನ ದೃಷ್ಟಿಕೋನಗಳ ಮೂಲಕ ಅಧ್ಯಯನ ಮಾಡಿ ಅದರಲ್ಲಿನ ಮಹತ್ವದ ಅಂಶಗಳನ್ನು ತಿಳಿಸಿದ್ದಾರೆ. ಅಮೃತ ಸೋಮೇಶ್ವರರ 'ಸಿರಿ ಜನಪದ ಕಾವ್ಯ', ವೀರಣ್ಣ ದಂಡೆಯವರ 'ಜನಪದ ಹಾಲುಮತ ಮಹಾಕಾವ್ಯ', ವೀರೇಶ ಬಡಿಗೇರ ಅವರ 'ಉತ್ತರ ಕರ್ನಾಟಕದ ಜಾನಪದ ಗೀತಮೇಳಗಳು' ಮುಂತಾದ ಸಂಶೋಧನಾ ಪ್ರಬಂಧಗಳು ಕನ್ನಡ ಜನಪದ ಮೌಖಿಕ ಪರಂಪರೆಯೊಳಗಿನ ಕಾವ್ಯಗಳನ್ನು ಸಾಹಿತ್ಯದೊಳಗೆ ತಂದು ವಿಶ್ಲೇಷಿಸುವ ಕಾರ್ಯ ಮಾಡಿದ್ದಾರೆ.

ಮೌಖಿಕ ಸಾಹಿತ್ಯದ ಸಂಗ್ರಹಕ್ಕೆ ಮತ್ತು ಅಧ್ಯಯನಕ್ಕೆ ಕನ್ನಡ ವಿಶ್ವವಿದ್ಯಾಲಯವು ತನ್ನದೇ ಆದ ಮಹತ್ವದ ಕೊಡುಗೆ ನೀಡಿದೆ. 'ಬುಡಕಟ್ಟು ಕಾವ್ಯ ಮಾಲೆ' ಎನ್ನುವ ವಿಶೇಷ ಅಧ್ಯಯನದ ಅಡಿಯಲ್ಲಿ ಮೌಖಿಕ ಸಾಹಿತ್ಯದ ಸಂಗ್ರಹ ಮತ್ತು ಸಂಪಾದನಾ ಕಾರ್ಯ ಮಾಡಿದೆ. ಅದರ ಫಲದಂತಿರುವ ಹಿ.ಚಿ. ಬೋರಲಿಂಗಯ್ಯನವರ 'ಮಂಟೇಸ್ವಾಮಿ ಕಾವ್ಯ', ಚಲುವರಾಜ ಅವರ 'ಜುಂಜಪ್ಪನ ಕಾವ್ಯ' ಮಂಜುನಾಥ ಬೇವಿನಕಟ್ಟಿಯವರ 'ಮೈಲಾರಲಿಂಗನ ಕಾವ್ಯ', ಮೇತ್ರಿ ಕಾಮಣ್ಣ ಅವರ 'ಕೃಷ್ಣ ಗೊಲ್ಲರ ಕಾವ್ಯ', ಕೇಶವನ್ ಪ್ರಸಾದ್ ಅವರ 'ಮಾದೇಶ್ವರ ಕಾವ್ಯ', ವೆಂಕಟೇಶ ಇಂದ್ವಾಡಿಯವರ 'ಧರೆಗೆ ದೊಡ್ಡವರ ಕತೆ', ಸ.ಚಿ. ರಮೇಶ್ ಅವರ 'ಚಿನ್ನಮ್ಮನ ಕಾವ್ಯ' ಮುಂತಾದವನ್ನು ಉದಾಹರಿಸ ಬಹುದಾಗಿದೆ.

ಕಾಲಜ್ಞಾನದ ಬಾಲಬಸವರು :

ಬಾಲಬಸವರ ಕುರಿತು ಮೊಟ್ಟ ಮೊದಲ ಬಾರಿಗೆ ಅಧ್ಯಯನ ಮಾಡಿ ಡಾ.ಎಲ್ಲಪ್ಪ ಕೆ.ಕೆ.ಪುರ ಅವರು ಬರೆದ 'ಕಾಲಜ್ಞಾನದ ಬಾಲಬಸವರು' ಎಂಬ ಲೇಖನವನ್ನು ಸುಧಾ ವಾರಪತ್ರಿಕೆಯಲ್ಲಿ ೪ ಮಾರ್ಚ್ ೧೯೯೯ರಲ್ಲಿ ಪ್ರಕಟಿಸಿದರು. ಬಾಲಬಸವರು ಯಾರು ಎನ್ನುವ ಪ್ರಶ್ನೆಯೊಂದಿಗೆ, ಅವರ ಕುರಿತು ಸಮಗ್ರವಾದ ಅಧ್ಯಯನ ಮಾಡಿ ಬರೆದಿರುವ ಈ ಲೇಖನವು ಬಾಲಬಸವರ ಕುರಿತು ಇರಬಹುದಾದ ಅನೇಕ ಪ್ರಶ್ನೆಗಳಿಗೆ ಸೂಕ್ತ ಉತ್ತರ ನೀಡುವ ಕಾರ್ಯ ಮಾಡುತ್ತದೆ. ಬಾಲಬಸವ ಪರಂಪರೆಯು ವಚನ ಚಳುವಳಿಯ ಭಾಗವಾಗಿದೆ. ಇವರು ಇಂದಿಗೂ ನಮ್ಮೊಂದಿಗೆ ಜೀವಂತವಾಗಿದ್ದಾರೆ. ಇವರ ಕುರಿತು ಹೆಚ್ಚಿನ ಅಧ್ಯಯನಗಳು ನಡೆಯಬೇಕು ಎನ್ನುವ ಆಶಯದೊಂದಿಗೆ ಲೇಖನ ಆರಂಭಿಸುತ್ತಾರೆ. ಮೊದಲಿಗೆ ಈ ಬಾಲಬಸವರು ಯಾರು? ಅವರ ಕಾಯಕವೇನು? ಅವರು ಸಮಾಜದೊಂದಿಗೆ ಇರುವ ಸಾಂಸ್ಕೃತಿಕ ಸಂಬಂಧ ಎಂತಹದು ಎನ್ನುವ ಸಂಗತಿಯನ್ನು ಹೇಳುತ್ತಾರೆ. ಬಾಲಬಸವರ ಆಚಾರ-ವಿಚಾರ, ನಡೆ-ನುಡಿ, ಜೀವನ ನಿರ್ವಹಣೆ, ದೀಕ್ಷೆ

ಮುಂತಾದ ಸಾಮಾಜಿಕ ಆಚರಣೆಗಳ ವಿಧಿ ವಿಧಾನಗಳನ್ನು ತಿಳಿಸುತ್ತಾರೆ. ಬಾಲಬಸವರಿಗೆ ಬಸವಣ್ಣನ ಪ್ರಭಾವ ಎಷ್ಟರ ಮಟ್ಟಿಗಾಗಿದೆ, ಅದರ ಪರಿಣಾಮವಾಗಿ ಬಾಲಬಸವರು ನಡೆಸುವ ಜೀವನಪದ್ಧತಿ ಇತರರಿಗಿಂತ ಹೇಗೆ ಭಿನ್ನವಾಗಿದೆ ಎನ್ನುವುದು ಇವರ ಅಧ್ಯಯನದ ಮುಖ್ಯ ಕೇಂದ್ರ ವಸ್ತುವಾಗಿದೆ.

ಎಲ್ಲಪ್ಪ ಕೆ.ಕೆ.ಪುರ ಅವರು ಬಾಲಬಸವ ಪರಂಪರೆಯ ಮೂಲದ ಕುರಿತು ಚರ್ಚೆ ಮಾಡುವಾಗ ಬಾಲಬಸವರು ೧೨ನೇ ಶತಮಾನದಲ್ಲಿದ್ದ ಮಹಾಶಿವಶರಣರ ವಂಶಸ್ಥರು. ಅವರು ಬಸವಣ್ಣನ ಅನುಯಾಯಿಗಳು. ಬಸವಣ್ಣನ ದತ್ತು ಪುತ್ರರು. ಅಣ್ಣ ಬಸವಣ್ಣನ ಮರುಹುಟ್ಟೇ ಈ ಬಾಲಬಸವರು. ಆದಿ ಜಾಂಬವ ಮುನಿಯ ಏಳನೆಯ ಬಾಲ ಮುನಿಯ ಮಗನ ವಂಶಸ್ಥರೆಂದು, ಹಿರೇಮನೆ ಶಿವಶರಣ ಹರಳಯ್ಯನ ಕೊನೆಯೇ ಸಂತತಿಯೇ ಈ ಬಾಲಬಸವರೆಂದು ಹೀಗೆ ನಾನಾ ಕಡೆ ಊಹಾ ಪೋಹಗಳು ಬೇರೆ ಬೇರೆ ಊರು ಕೇರಿಗಳಲ್ಲಿ ಪ್ರಚಲಿತದಲ್ಲಿವೆ ಎಂದು ಹೇಳುತ್ತಾರೆ. ಆದರೆ ಈ ಜನ ಸಮುದಾಯದ ಮೂಲದ ಬಗ್ಗೆ ನಿಖರವಾದ ಮಾಹಿತಿ ಇನ್ನೂ ಸಿಕ್ಕಿಲ್ಲ. ಆ ಕುರಿತಾದ ಸಂಶೋಧನೆಯು ಅಗತ್ಯವಿದೆ ಎನ್ನುತ್ತಾರೆ.

ಮುಂದುವರಿದು ಎಲ್ಲಪ್ಪ ಕೆ.ಕೆ.ಪುರ ಅವರು ಬಾಲಬಸವರ ನೆಲೆಗಳ ಕುರಿತು ಚರ್ಚಿಸುವಾಗ ಕರ್ನಾಟಕದಲ್ಲಿ ಬಾಲಬಸವರ ನೆಲೆಗಳಿರುವುದು ವಿರಳ. ಹೆಚ್ಚಾಗಿ ಇವರು ಕರ್ನಾಟಕದ ಬಳ್ಳಾರಿ, ಕೊಪ್ಪಳ, ಗದಗ, ಸೇಡಂ, ಧಾರವಾಡ, ಚಿತ್ರದುರ್ಗ, ಹಾವೇರಿ, ದಾವಣಗೆರೆ ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಒಂದೊಂದು ಕುಟುಂಬಗಳಾಗಿ ಕಂಡುಬರುತ್ತಾರೆಂದು ಹೇಳುತ್ತಾರೆ.

ಚಿತ್ರದುರ್ಗ ಕೆ.ಕೆ.ಪುರ, ಹಿರಿಯೂರಿನ ಆದಿವಾಲ, ಇಂಕನೂರು, ಶಿವಮೊಗ್ಗ, ಲಕ್ಕವಳ್ಳಿ, ಇಟಗಿ, ದಾವಣಗೆರೆ, ಮಂಡರಗಟ್ಟಿ, ಗದಗಿನ ಹರ್ಲಾಪುರ, ಅಡವಿ ಸೋಮಲಾಪುರ, ಸೇಡಂನ ಬಿಜ್ಜನಹಳ್ಳಿ, ದಾವಣಗೆರೆಯ–ದೂಗ್ಗಲಹಳ್ಳಿ–ಹಾವೇರಿಯ ಹೀಲದಹಳ್ಳಿ ಮುಂತಾದ ಕಡೆಗಳಲ್ಲಿ ಇವರ ಇರುವಿಕೆಯನ್ನು ಗುರುತಿಸುತ್ತಾರೆ. ಕಲ್ಯಾಣದ ಕ್ರಾಂತಿಯಾದ ಬಳಿಕ ಇವರು ಕಲ್ಯಾಣವನ್ನು ಬಿಟ್ಟು ಇತರೆಡೆಗೆ ಆಶ್ರಯವನ್ನು ಅರಸಿಕೊಂಡು ವಲಸೆ ಬಂದಿದ್ದಾರೆ ಎನ್ನುವ ವಾದವಿದೆ. ವಲಸೆ ಬಂದ ಇವರು ಸಂಚಾರಿಗಳಂತೆ ಸಂಚರಿಸುವಾಗ ತಮ್ಮ ಮೌಖಿಕ ಸಾಹಿತ್ಯವಾದ ಕಾಲಜ್ಞಾನದಿಂದಲೇ ಹೆಚ್ಚು ಜನಪ್ರಿಯರಾಗಿದ್ದಾರೆ ಎನ್ನುತ್ತಾರೆ. ಸಂಶೋಧಕರು ಹೇಳಿದಂತೆ ಹಿರಿಯೂರಿನ ಆದಿವಾಲ, ಇಂಕನೂರು ಗದಗಿನ ಅಡವಿ ಸೋಮಲಾಪುರ ಮತ್ತು ಸೇಡಂನ ಬಿಜ್ಜನಹಳ್ಳಿ ಸ್ಥಳಗಳಲ್ಲಿ ಬಾಲಬಸವರು ಇಲ್ಲದಿರುವುದನ್ನು ಕ್ಷೇತ್ರಕಾರ್ಯದ ಮೂಲಕ ಗಮನಿಸಲಾಗಿದೆ. ಬಾಲಬಸವರು ಊರಾಡುವಾಗ ಆ ಪ್ರದೇಶದಲ್ಲಿ ಸಂಶೋಧಕರು ನೋಡಿರಬೇಕು ಅಷ್ಟೇ ಇವುಗಳು ಇವರ ವಾಸಸ್ಥಳಗಳಲ್ಲ.

ಬಾಲಬಸವರು ಬಸವಯುಗದ ಶರಣತತ್ವದ ಕಾಯಕ ಪರಿಕಲ್ಪನೆಯಲ್ಲಿ ಬೆಳೆದುಬಂದವರು. ಊರಾಡುವುದು ಅಂದರೆ ಕಾಲಜ್ಞಾನ ಸಾರುವ ಕಾಯಕ ಮಾಡುವುದರ ಮೂಲಕವೇ ಜೀವನ

ನಿರ್ವಹಿಸುತ್ತಿದ್ದಾರೆ. ಜೊತೆಗೆ ಮಧ್ಯಕಾಲೀನ ಶಿವಶರಣರ ಜೀವನದ ಮುಖ್ಯಘಟನೆಗಳನ್ನು ಕಥನವಾಗಿ ಕಟ್ಟಿ ಹಾಡುವ ಕಾಯಕವನ್ನು ಮಾಡುತ್ತಾರೆ.

ಇವರು ಒಮ್ಮೆ ನುಡಿದದ್ದನ್ನು ಮತ್ತೊಮ್ಮೆ ನುಡಿಯುವುದಿಲ್ಲ. ಒಂದು ಊರುಕೇರಿಯಲ್ಲಿ ಸಾರಿದ ವಾಕ್ಯವನ್ನು ಮತ್ತೊಂದು ಊರುಕೇರಿಯಲ್ಲಿ ಮತ್ತೆ ಉಚ್ಚರಿಸುವುದಿಲ್ಲ. ಅವರ ತಾತ ಮುತ್ತಾತರಿಗೆ ಅಣ್ಣ ಬಸವಣ್ಣನವರು ನೀಡಿದ ಕಾಯಕವಿದು ಎನ್ನುವ ಬಾಲಬಸವರು, ತಮ್ಮದೇ ಶೈಲಿಯಲ್ಲಿ ಕಾಲಜ್ಞಾನವನ್ನು ಸಾರುತ್ತಾರೆ.

"ಬಂದರು ಬಂದರೆನ್ನಿರಿ ಶಿವ ಶರಣಾರು
ಮುಂದಿನ ದಿನ ಮಾನ ಬಲುಕೆಟ್ಟ ಬರುತಾವೆ
ಬಂದರು ಬಂದರೆನ್ನಿರಿ ಶಿವಶರಣಾರು ॥ಪ॥
ಗಳಿಸಬೇಡಿರಿ ಮರೆತಿರಿ
ಹಳಿಸಗೆಟ್ಟು ಹೋದೀತು
ಗಳಿಸಿದ ಬದುಕು ನಾಳೆಗೆ
ಬಳಸೋರು ಬರುತ್ತಾರೆ ಮುಂದಿನ್ನು ॥ಪ॥

ಬಾಲಬಸವರು ಮಾದಿಗ ಸಮುದಾಯದವರಾಗಿದ್ದು, ಬಸವಣ್ಣ ಇವರನ್ನ ದತ್ತುಪುತ್ರರೆಂದು ಸ್ವೀಕರಿಸಿ ಅವರಿಗೆ ಶಿವ ದೀಕ್ಷೆ ನೀಡಿದ. ಇದರಿಂದ ಅವರ ಜೀವನಕ್ರಮದಲ್ಲಿ ಬಸವಣ್ಣನನ್ನು ಅನುಸರಿಸಿಕೊಂಡು ಬಂದಿದ್ದಾರೆ. ಇವರು ಲಿಂಗದೀಕ್ಷೆ ಪಡೆದುಕೊಂಡ ಮೇಲೆ ಮಾಂಸಾಹಾರ ತಿನ್ನುವುದನ್ನು ಬಿಟ್ಟಿದ್ದಾರೆ. ಬಸವಣ್ಣನ ಪ್ರಭಾವದಿಂದಾಗಿ ವೀರಶೈವ ಪಂಥವನ್ನು ಅನುಸರಿಸುತ್ತಿದ್ದಾರೆ. ಲಿಂಗಧಾರಣೆ ಮತ್ತು ಮಾಂಸಾಹಾರವನ್ನು ತ್ಯಜಿಸಿದ ಕಾರಣಕ್ಕೆ ಇವರು ಮಾದಿಗ ಸಮುದಾಯದಿಂದ ಬೇರೆಯಾಗಿ ಮಾದಿಗ ಕುಲಕ್ಕೆ ಗುರುಸ್ಥಾನದಲ್ಲಿದ್ದಾರೆ. ಬಸವಣ್ಣ ಮತ್ತು ಕಾಲಜ್ಞಾನದಿಂದಾಗಿ ಲಿಂಗಾಯತರಿಂದಲೂ ಮನ್ನಣೆ ಪಡೆದುಕೊಂಡಿದ್ದಾರೆ. ಆದರೆ ಧಾರ್ಮಿಕ ನೆಲೆಯಲ್ಲಿ ಇನ್ನೂ ಇವರು ಅತಂತ್ರ ಪರಿಸ್ಥಿತಿಯಲ್ಲೇ ಜೀವನ ನಡೆಸುತ್ತಿದ್ದಾರೆ ಎಂದು ಅವರ ಸಾಮಾಜಿಕ ಜೀವನ ವಿಧಾನವನ್ನು ಅಧ್ಯಯನಕಾರರು ಹೇಳುತ್ತಾರೆ.

ಒಟ್ಟಾರೆ ಈ ಲೇಖನವು ಬಾಲಬಸವರ ಕುರಿತು ಸಮಗ್ರವಾದ ವಿವರಗಳನ್ನು ನೀಡುತ್ತದೆ. ಜೊತೆಗೆ ಅವರ ಸಾಹಿತ್ಯವಾದ ಕಾಲಜ್ಞಾನ ಮತ್ತು ಮೌಖಿಕ ಕಾವ್ಯಗಳ ಬಗ್ಗೆ ಇನ್ನೂ ಹೆಚ್ಚು ಸಂಶೋಧನೆಗಳಾಗ ಬೇಕು ಎನ್ನುವ ವಾಸ್ತವ ಸ್ಥಿತಿಯನ್ನು ಈ ಲೇಖನವು ಮಾಡಿಕೊಡುತ್ತದೆ.

ತಾತ್ವಿಕ ಚರ್ಚೆ :

ಸಂಶೋಧಕರಾದ ಎಲ್ಲಪ್ಪ ಕೆ.ಕೆ.ಪುರ ಇವರು ತಮ್ಮ ಲೇಖನದಲ್ಲಿ ಕೇವಲ ಚಿತ್ರದುರ್ಗ ಜಿಲ್ಲೆಯಲ್ಲಿರುವ ಕೆ.ಕೆ.ಪುರದ ಬಾಲಬಸವರ ಬಗ್ಗೆ ಮಾತ್ರ ಮಾತನಾಡಿದ್ದಾರೆ. ಇದು ಇವರ

ಮಿತಿಯಾಗಿ ನೋಡಬಹುದಾಗಿದೆ. ಕರ್ನಾಟಕದಲ್ಲಿ ಸುಮಾರು ಎಂಟರಿಂದ ಹತ್ತು ಕಡೆ ಬಾಲಬಸವರ ನೆಲೆಗಳಿವೆ. ಅವುಗಳಿಗೆ ಭೇಟಿ ನೀಡದೆ ಇವರು ತಮ್ಮ ಊರಿನಲ್ಲಿರುವ ಬಾಲಬಸವ ಪರಂಪರೆ ಕುರಿತು ವಿಷಯವನ್ನು ಮಂಡಿಸಿದ್ದಾರೆ. ಅಲ್ಲದೆ ಈ ಪರಂಪರೆಯಲ್ಲಿರುವ ಮೌಖಿಕ ಕಾವ್ಯದ ಕುರಿತು ಯಾವುದೇ ಮಾಹಿತಿಯನ್ನು ನೀಡಿರುವುದಿಲ್ಲ. ಬಾಲಬಸವ ಪರಂಪರೆಯಲ್ಲಿ ಬಾಲಬಸವಿ ಪದ್ಧತಿಯು ಆಚರಣೆಯೆಂದು ಹೇಳಿದ್ದಾರೆ, ಅದರ ಉಲ್ಲೇಖ ಎಲ್ಲೂ ಕಾಣುವುದಿಲ್ಲ. ಹಾಗಾಗಿ ಇವರು ಹೇಳದೆ ಹೋದ ಸಂಗತಿಗಳು ತುಂಬಾ ಇರುವುದರಿಂದ ಅವುಗಳ ಕುರಿತು ಅಧ್ಯಯನ ಮಾಡುವ ಅನಿವಾರ್ಯತೆ ಇದೆ. ನನ್ನ ಈ ಸಂಶೋಧನೆಯ ವ್ಯಾಪ್ತಿಯು ಕರ್ನಾಟಕದಲ್ಲಿರುವ ಬಾಲಬಸವರ ಮೌಖಿಕ ಸಾಹಿತ್ಯವನ್ನು ಸಾಂಸ್ಕೃತಿಕ ನೆಲೆಗಟ್ಟಿನ ಪರಿಭಾಷೆಯಲ್ಲಿ ಅಧ್ಯಯನ ಮಾಡುವುದಾಗಿದೆ.

ಬಾಲಬಸವರು: ಒಂದು ಅಧ್ಯಯನ :

ಬಿ.ಆರ್. ಮಂಜುನಾಥ ಅವರ "ಬಾಲಬಸವರು ಒಂದು ಅಧ್ಯಯನ"ವೆಂಬ ಸಂಶೋಧನಾ ಮಹಾಪ್ರಬಂಧವು ಬಾಲಬಸವ ಪರಂಪರೆ ಕುರಿತಾಗಿ ನಡೆದಿರುವ ಅಧ್ಯಯನವಾಗಿದೆ. ಬಾಲಬಸವ ಪರಂಪರೆಯಲ್ಲಿರುವ ಬಾಲಬಸವರ ಜೀವನಕ್ರಮ, ಆಚಾರ, ವಿಚಾರ, ಸಂಪ್ರದಾಯ, ಆಚರಣೆಗಳು, ನುಡಿಸುವ ವಾದ್ಯಗಳು, ಮೌಖಿಕ ಸಾಹಿತ್ಯವಾದ ಕಾಲಜ್ಞಾನ ಮತ್ತು ಪ್ರಸ್ತುತ ಅವರ ಜೀವನದ ಸ್ಥಿತಿಗತಿಗಳ ಕುರಿತು ಜನಾಂಗಿಕ ಹಿನ್ನೆಲೆಯಲ್ಲಿ ಅಧ್ಯಯನ ಮಾಡಿದ್ದಾರೆ.

ಸಂಶೋಧಕರು ಬಾಲಬಸವ ಪರಂಪರೆಯ ಕುರಿತು ಬಾಲಬಸವರು ಮೂಲತಃ ಮಾದಿಗ ಕುಲದವರು. ಬಸವಣ್ಣನ ಪ್ರಭಾವಕ್ಕೆ ಒಳಗಾಗಿ ಮೇಲ್ಮುಖ ಚಲನೆ ಹೊಂದಿ, ಸಾಮಾಜಿಕ ಬದಲಾವಣೆ ಬಯಸಿರುವ ಪರಂಪರೆಗಳಲ್ಲಿ ಬಾಲಬಸವ ಪರಂಪರೆಯು ಕೂಡ ಒಂದು ಎನ್ನುತ್ತಾರೆ. ಈ ಪರಂಪರೆಯಲ್ಲಿ ಮುಖ್ಯವಾಗಿ ಲಿಂಗಧಾರಣೆ, ದೀಕ್ಷೆ, ಕಾಲಜ್ಞಾನ ಸಾರುವ ಶಿಸ್ತುಬದ್ಧ ಆಚರಣೆಗಳು ಹೇಗೆ ನಡೆಸಿಕೊಂಡು ಹೋಗುತ್ತಾರೆ ಎನ್ನುವುದರ ಕುರಿತು ಮಾಹಿತಿ ನೀಡುತ್ತಾರೆ. ಸಂಶೋಧಕರು ಇವರ ಮೂಲವನ್ನು ಆದಿಜಾಂಬವ ಮಠದ ಮೂಲಕ್ಕೂ, ಮರುಳಸಿದ್ಧನ ಮೂಲಕ್ಕೂ, ಗೋಣಿಬಸಪ್ಪನ ಮೂಲಕ್ಕೂ ತೆಗೆದುಕೊಂಡು ಹೋಗಿದ್ದಾರೆ. ಸ್ಪಷ್ಟವಾಗಿ ಬಾಲಬಸವರ ಮೂಲವನ್ನು ತಿಳಿಸಿಲ್ಲ. ಚರ್ಚೆ ಮತ್ತು ಊಹೆಗಳ ಮೂಲಕ ಹೇಳುವ ಪ್ರಯತ್ನ ಮಾಡಿದ್ದಾರೆ.

ಬಾಲಬಸವ ಪರಂಪರೆಯಲ್ಲಿ 'ಬಾಲಬಸವಿ' ಪದ್ಧತಿಯ ಬಗ್ಗೆ ವಿವರಿಸುತ್ತಾ ಬಾಲಬಸವರ ಹೆಣ್ಣುಮಕ್ಕಳು ಮದುವೆಯಾಗುವಂತಿಲ್ಲ. ಕಾರಣ ಇವರು ತಮ್ಮ ಮೂಲಜಾತಿಯನ್ನು ಬಿಟ್ಟು ಲಿಂಗಧಾರಣೆ ಮಾಡಿಕೊಂಡಿರುವುದು. ಅಲ್ಲದೆ ಇವರು ಮಾದಿಗ ಕುಲಕ್ಕೆ ಗುರುಸ್ಥಾನದಲ್ಲಿರುವುದರಿಂದ ಅವರಿಗೆ ಹೆಣ್ಣುಮಕ್ಕಳು ಕೊಡುವುದಿಲ್ಲ. ಲಿಂಗಧಾರಣೆಯಾದರೂ ಇವರನ್ನು ವೀರಶೈವರು ತಮ್ಮ

ಜಾತಿಗೆ ಸೇರಿಸಿಕೊಂಡಿಲ್ಲ. ಹಾಗಾಗಿ ಇವರು ಅತ್ತ ಮಾದಿಗ ಜಾತಿಗೆ ಹೋಗದೆ, ಇತ್ತ ಲಿಂಗಾಯತರೊಂದಿಗೆ ಸೇರದೆ ನಡುವೆ ಅತಂತ್ರ ಸ್ಥಿತಿಯಲ್ಲಿದ್ದಾರೆ. ಇದರಿಂದ ಇವರ ಹೆಣ್ಣುಮಕ್ಕಳನ್ನು ಯಾರಿಗೆ ಕೊಡಬೇಕೆಂಬ ಗೊಂದಲದಿಂದಾಗಿ ಅವರನ್ನು ಹಾಗೇ ಬಾಲಬಸವಿಯಾಗಿ ಬಿಡುವ ಪದ್ಧತಿಯು ಇದೆ ಎನ್ನುತ್ತಾರೆ. ಆದರೆ ಈ ನಿಯಮವು ಅವರ ಗಂಡುಮಕ್ಕಳಿಗೆ ಅನ್ವಯಿಸುವುದಿಲ್ಲ. ಅವರಿಗೆ ಮಾದಿಗ ಕುಲದಿಂದ ಹೆಣ್ಣು ತಂದು ದೀಕ್ಷೆ ಲಿಂಗಧಾರಣೆ ಮಾಡಿ ಮದುವೆಯಾಗ ಬಹುದಾಗಿದೆ. ಕಾರಣ ಮುಂದಿನ ವಂಶವೃದ್ಧಿಗೆ ಈ ನಿಯಮವನ್ನು ಅನುಸರಿಸಿಕೊಂಡು ಬಂದಿರಬಹುದು ಎನ್ನುವ ಅಭಿಪ್ರಾಯವಿದೆ.

ಬಾಲಬಸವರ ಭಾಷೆ ಮತ್ತು ಸಾಹಿತ್ಯ ಕುರಿತು ಚರ್ಚೆ ಮಾಡುವಾಗ ಈ ಪರಂಪರೆಯ ಮೂಲ ಶ್ರೀಶೈಲವೆಂದು ಹೇಳುತ್ತಾ, ಮುಂದೆ ಇವರು ಕಡಪದ ಮೂಲಕ ಕರ್ನಾಟಕದ ಗಡಿನಾಡಿಗೆ ಪ್ರವೇಶ ಪಡೆದಿರಬೇಕೆಂದು ತಿಳಿಸುತ್ತಾರೆ. ಶ್ರೀಶೈಲವು ಆಂಧ್ರಪ್ರದೇಶವಾದರೂ ಅದು ಸಂಪೂರ್ಣ ಕನ್ನಡಮಯವಾದ ಪ್ರದೇಶ. ಆದ್ದರಿಂದ ಇವರ ಭಾಷೆಯು ಕನ್ನಡವಾಗಿದೆ. ಕೆಲವೊಂದು ಕಡೆಗೆ ದ್ವಿಭಾಷಿಕತೆಯು ಇರುವುದನ್ನು ಗಮನಿಸಿದ್ದಾರೆ.

ಬಾಲಬಸವರ ಸಾಹಿತ್ಯವಾದ ಕಾಲಜ್ಞಾನದ ಹೀಗಿದೆ-

ಅಂತೆಗಂತೆ ಹನ್ನೆರಡು ಸಾವಿರ
ಅರೀಥಾಕ್ಕೆ ಬಂದು ಆರು ಸಾವಿರ
ಲಕ್ಷದ ಮೇಲೆ ತೊಂಬತ್ತಾರು ಸಾವಿರ ಗಣಂಗಳಿಗಳಿಗೆ
ಇಚ್ಚೆಯಿದೆ ಬಂದ ಊಟವು ನಿಚ್ಚಿ ನೀಡುವಂಥಾ
ನೀರಂಹಕಾರಿ ಬಸವಣ್ಣಾಪಾ॥ ಎಂದು ಕಾಲಜ್ಞಾನ ಸಾಹಿತ್ಯವನ್ನು ಗುರುತಿಸುತ್ತಾರೆ.

ಕಾಲಜ್ಞಾನ ಸಾರುವುದು ಬಾಲಬಸವರ ಕುಲಕಸುಬಾಗಿದೆ. ದೀಕ್ಷೆ ಪಡೆದುಕೊಂಡಿರುವ ಪ್ರತಿಯೊಬ್ಬ ಬಾಲಬಸವರು ಕಡ್ಡಾಯವಾಗಿ ಕಾಲಜ್ಞಾನವನ್ನು ಕಲಿಯುತ್ತಾರೆ. ಇದರಲ್ಲಿ ಪುರುಷ ಅಥವಾ ಮಹಿಳೆ ಎನ್ನುವ ಭೇದ-ಭಾವಗಳಿಲ್ಲ. ಕೂಡ್ಲಿಗಿ ತಾಲ್ಲೂಕಿನ ಗೊಲ್ಲರಹಳ್ಳಿಯ ಬಾಲಬಸವ ತುಮನೆಪ್ಪ ಕಾಲಜ್ಞಾನವನ್ನು ಸಾರುವುದರ ಮೂಲಕವೇ ಜೀವನ ನಿರ್ವಹಣೆ ಮಾಡುತ್ತಿದ್ದಾರೆ. ಅದೇ ರೀತಿ ಆತನ ರಕ್ತಸಂಬಂಧಿಗಳಾದ ಸರೋಜ ಮತ್ತು ಜ್ಯೋತಮ್ಮ ಸಹ ಬಾಲಬಸವ ಪರಂಪರೆಯ ಮೌಖಿಕ ಸಾಹಿತ್ಯವಾದ ಕಾಲಜ್ಞಾನವನ್ನು ಊರೂರಿಗೆ ಸಾರುವ ಕಾರ್ಯ ಮಾಡುತ್ತಿರುವುದನ್ನು ಗುರುತಿಸುತ್ತಾರೆ. ಕಾಲಜ್ಞಾನವೂ ಬಾಲಬಸವ ಪರಂಪರೆಯ ಕುಲಕಸುಬಿನಂತೆ ಇದ್ದರೂ, ಕೆಲವೊಂದು ಪ್ರದೇಶದಲ್ಲಿ ಬಾಲಬಸವರು ಶಿವಶರಣರ, ಜನಪದರ, ರಾಜರುಗಳ, ಸಾಂಸ್ಕೃತಿಕ ನಾಯಕರುಗಳ ಕಥೆಯನ್ನು ಮೌಖಿಕವಾಗಿ ಕಥನ ಕಟ್ಟಿ ಹಾಡುವ ನಿದರ್ಶನವಿದೆ. ಅದಕ್ಕೆ ಬಾಲಬಸವ ತುಮನೆಪ್ಪನೇ ಸಾಕ್ಷಿ. ಬಾಲಬಸವ ತುಮನೆಪ್ಪನವರು ಹಾಡುವ ಕಾವ್ಯಗಳ

ಕುರಿತು ಸಂಕ್ಷಿಪ್ತವಾಗಿ ಅಧ್ಯಯನದಲ್ಲಿ ಹೇಳಿದ್ದಾರೆ. ಬಾಲಬಸವರ ಪ್ರಸ್ತುತ ಜೀವನ ಕುರಿತಾಗಿ ಅಧ್ಯಯನ ಮಾಡಿರುವ ಸಂಶೋಧಕರು ಈಗಿನ ಆಧುನೀಕರಣದ ಪ್ರಭಾವ ಮತ್ತು ಶಿಕ್ಷಣ ಪಡೆದಿರುವ ಮಕ್ಕಳಿಂದಾಗಿ ಅವರ ಬದುಕಿನಲ್ಲಿ ಬದಲಾವಣೆಯನ್ನು ಕಾಣುತ್ತಿದ್ದಾರೆ. ಅವರಲ್ಲಿ ಜಾಗೃತಿ ಮೂಡಿಸುವ ಕಾರ್ಯ ನಡೆಯುತ್ತಿದೆ. ಆದರೆ ಈ ಪರಂಪರೆಯ ಬಗ್ಗೆ ಅದರ ಕಲಾವಿದರ ರಕ್ಷಣೆಗೆ ಸರ್ಕಾರವೂ ಪ್ರಯತ್ನ ಮಾಡಬೇಕಿದೆ ಎನ್ನುತ್ತಾರೆ.

ತಾತ್ವಿಕ ಚರ್ಚೆ :

ಬಿ.ಆರ್. ಮಂಜುನಾಥ ಅವರು ಬಾಲಬಸವರ ಕುರಿತು ಸೀಮಿತ ವ್ಯಾಪ್ತಿಯಲ್ಲಿ ಅಧ್ಯಯನ ಮಾಡಿದ್ದಾರೆ. ಅವರ ವ್ಯಾಪ್ತಿ ಮಧ್ಯ ಕರ್ನಾಟಕವೆಂದು ನಿರ್ಧರಿಸಿರುವರು. ಅವರು ಮುಖ್ಯವಾಗಿ ಚಿತ್ರದುರ್ಗ ಜಿಲ್ಲೆಯ ಕೆ.ಕೆ. ಪುರವನ್ನು ಮುಖ್ಯವಾಗಿರಿಸಿಕೊಂಡು ಅಧ್ಯಯನ ಮಾಡಿದ್ದಾರೆ. ಇದರಿಂದ ಒಂದು ಬಾಲಬಸವ ಕುಟುಂಬದ ಕುರಿತು ಸಮಗ್ರವಾದ ಅಧ್ಯಯನ ಮಾಡಿದ್ದಾರೆ. ಇವರ ವ್ಯಾಪ್ತಿ ಮಧ್ಯ ಕರ್ನಾಟಕವಾದರೂ ಗದುಗಿನ ಹರ್ಲಾಪುರ, ಹೊಳಲ್ಕೆರೆಯ ರಾಮಘಟ್ಟ, ಚನ್ನಗಿರಿಯ ಮಂಡರಘಟ್ಟ ಹರಿಹರದ ದೊಗ್ಗಲಹಳ್ಳಿ, ಹೊನ್ನಾಳಿಯ ನ್ಯಾಮತಿಯ, ಗಂಜಗನಹಳ್ಳಿ ಮುಂತಾದ ಹಲವು ಪ್ರದೇಶಗಳಲ್ಲಿ ಬಾಲಬಸವರ ಸಾಹಿತ್ಯ, ವೇಷಭೂಷಣ, ಆಚಾರ ವಿಚಾರ, ದೀಕ್ಷೆ ವಿಧಾನ ಮುಂತಾದ ಸಂಪ್ರದಾಯಗಳ ಕುರಿತು ಅಧ್ಯಯನ ಮಾಡಿಲ್ಲ. ಪ್ರಮುಖವಾಗಿ ಚರ್ಚಿಸಬೇಕಾದ ಸಂಗತಿಯೆಂದರೆ ಕೆ.ಕೆ. ಪುರದ ಬಾಲಬಸವರ ಮೌಖಿಕ ಸಾಹಿತ್ಯಕ್ಕೂ, ಬೈರದೇವರಗುಡ್ಡದ ಬಾಲಬಸವರ ಕಾಲಜ್ಞಾನಕ್ಕೂ ಹಾಡಿನ ಲಯ ಮತ್ತು ಧಾಟಿಯಲ್ಲಿ ವ್ಯತ್ಯಾಸವನ್ನು ಗುರುತಿಸಬಹುದು. ಹಾಗೆಯೇ ಇವರು ಹರ್ಲಾಪುರ ಮತ್ತು ಹೀಲದಹಳ್ಳಿಯ ಬಾಲಬಸವರ ಕುರಿತು ಅಧ್ಯಯನದಲ್ಲಿ ತಿಳಿಸಿಲ್ಲ. ಹಾಗಾಗಿ ಇವರು ಅಧ್ಯಯನ ಮಾಡದೇ ಇರುವ ಬಾಲಬಸವ ಪರಂಪರೆಯನ್ನು ಕ್ಷೇತ್ರಕಾರ್ಯದ ಮೂಲಕ ಸಂದರ್ಶನ ಮಾಡಿ ಅವರ ಮೌಖಿಕ ಸಾಹಿತ್ಯ, ಆಚಾರ-ವಿಚಾರ, ಸಂಪ್ರದಾಯ ಮುಂತಾದ ಸಂಗತಿಗಳನ್ನು ಅಧ್ಯಯನ ಮಾಡುವುದು ನನ್ನ ಸಂಶೋಧನೆಯ ಉದ್ದೇಶವಾಗಿದೆ.

ಮಾದಿಗ ಲಿಂಗಾಯತರು: ಸಾಂಸ್ಕೃತಿಕ ಅಧ್ಯಯನ :

ಶಿವಾನಂದ ಕೆಳಗಿನಮನಿಯವರ ಸಂಶೋಧನಾ ಮಹಾಪ್ರಬಂಧವಾದ 'ಮಾದಿಗ ಲಿಂಗಾಯತರು: ಸಾಂಸ್ಕೃತಿಕ ಅಧ್ಯಯನ'ವೆಂಬ ಪ್ರಕಟಿತ ಕೃತಿಯಾಗಿದ್ದು, ಈ ಕೃತಿಯು ದಲಿತ ವರ್ಗದಲ್ಲಿನ ಮಾದಿಗ ಕುಲಕ್ಕೆ ಸಂಬಂಧಿಸಿದ ಸಾಂಸ್ಕೃತಿಕ ಅಧ್ಯಯನವಾಗಿದೆ. ಬಾಲಬಸವರು ಮೂಲತಃ ಮಾದಿಗ ಕುಲದವರೇ ಆಗಿರುವುದರಿಂದ ಲಿಂಗಧಾರಣೆ, ದೀಕ್ಷೆ, ನಿಯಮಬದ್ಧ ಆಚರಣೆ, ಸಂಪ್ರದಾಯ, ಪದ್ಧತಿಗಳು ಮಾದಿಗ ಲಿಂಗಾಯತರಲ್ಲೂ ಸಹ ಕಂಡುಬರುತ್ತವೆ. ಮಾದಿಗರಲ್ಲಿ ಲಿಂಗಧಾರಣೆ ಪದ್ಧತಿಯು ಹಲವು ರೀತಿಯಲ್ಲಿ ಚಾಲ್ತಿಯಲ್ಲಿದೆ ಎನ್ನುವ ಅಂಶವನ್ನು ತಿಳಿಸುತ್ತಾರೆ.

೧೨ನೇ ಶತಮಾನದಿಂದಲೂ ನಡೆದುಕೊಂಡು ಬಂದಿರುವ ಮೇಲ್ಮುಖ ಚಲನೆಯು ಬಸವಣ್ಣನ ಪ್ರಭಾವವೂ ಇವರ ಮೇಲಾಗಿದೆ. ಮಾದರ ಚನ್ನಯ್ಯನ ಪರಂಪರೆ, ಮರುಳಸಿದ್ಧನ ಪರಂಪರೆ, ಬಾಲಬಸವನ ಪರಂಪರೆ, ಮಾತಂಗಿ ಪರಂಪರೆ, ನೀಲಗಾರರು ಮತ್ತು ದೇವರಗುಡ್ಡದ ಪರಂಪರೆಗಳಲ್ಲೂ ಲಿಂಗಧಾರಣೆ ಪದ್ಧತಿಯು ಇಂದಿಗೂ ಚಾಲ್ತಿಯಲ್ಲಿದೆ. ಇವರನ್ನೇ ಸಂಶೋಧನ ಕೇಂದ್ರವಾಗಿಸಿಕೊಂಡು ವಿವಿಧ ಸಾಂಸ್ಕೃತಿಕ ಆಯಾಮಗಳಿಂದ ಭಿನ್ನದೃಷ್ಟಿಕೋನದ ಮೂಲಕ ನೋಡುವ ಪ್ರಯತ್ನ ಮಾಡಿದ್ದಾರೆ.

ಶಿವಾನಂದ ಕೆಳಗಿನಮನಿಯವರು ತಮ್ಮ ಸಂಶೋಧನಾ ಪ್ರಬಂಧದಲ್ಲಿ ಮಾದಿಗ ಲಿಂಗಾಯತರ ಚಾರಿತ್ರಿಕ ನೆಲೆಯ ಕುರಿತು ಮಾದಿಗ ಪದದ ಉಲ್ಲೇಖಗಳು ಶಾಸನಗಳಲ್ಲಿ, ಪುರಾಣದ ಕಥೆಗಳಲ್ಲಿ ಹೇಗೆ ಬಳಕೆಯಾಗಿವೆ, ಅದರ ಅರ್ಥಗಳನ್ನು ಯಾವ ರೀತಿ ನೋಡಬಹುದು ಎಂದು ವಿವರಿಸಿದ್ದಾರೆ. ಮಾದಿಗ ಲಿಂಗಾಯತರ ಆಚರಣೆಗಳು ವೀರಶೈವ ಸಂಪ್ರದಾಯದಂತಿವೆ. ಅವರಂತೆ ಇವರಿಗೆ ಸಾಮಾಜಿಕ ಮನ್ನಣೆ ಏಕೆ ಸಿಗದೆ ಹೋಯಿತು ಎನ್ನುವ ಚರ್ಚೆ ಮಾಡುತ್ತಾರೆ. ದೀಕ್ಷೆ, ಧಾರ್ಮಿಕ ಕಾರ್ಯಗಳು, ಮದುವೆ ಸಂಪ್ರದಾಯ, ಕುಟುಂಬ ಮುಂತಾದ ವಿಷಯಗಳಲ್ಲಿ ಕೂಡ ಮಾದಿಗ ಲಿಂಗಾಯತರು ಮಾದಿಗ ಕುಲಕ್ಕೆ ಹೇಗೆ ಭಿನ್ನವಾಗಿದ್ದಾರೆ? ಅವರಿಗೆ ಇವರು ಗುರುಸ್ಥಾನದಲ್ಲಿರುವ ಸಂಗತಿ ಮತ್ತು ಸಾಮಾಜಿಕ ಸಂಘರ್ಷಗಳು ಒಂದೇ ಜಾತಿಯಲ್ಲಿ ಹೇಗೆ ಭಿನ್ನ ಸ್ವರೂಪದಲ್ಲಿ ಕಾಣುತ್ತವೆ ಎನ್ನುವ ಸಂಗತಿಯನ್ನು ತಿಳಿಸುತ್ತಾರೆ. ಮಾದಿಗ ಲಿಂಗಾಯತರ ಸಾಂಸ್ಕೃತಿಕ ನಾಯಕರುಗಳಾದ ಮರುಳಸಿದ್ಧ, ಹರಳಯ್ಯ, ಮಾದರ ಚನ್ನಯ್ಯ, ಮಾದರ ದೂಳಯ್ಯ ಮುಂತಾದ ಸಾಂಸ್ಕೃತಿಕ ನಾಯಕರು ಮತ್ತು ಅವರ ಪರಂಪರೆಯೇ ಮಾದಿಗ ಲಿಂಗಾಯತರೆಂದು ವಿವರಿಸುತ್ತಾರೆ.

ಅಧ್ಯಯನದ ಕೊನೆಗೆ ಮಾದಿಗ ಲಿಂಗಾಯತರ ಸಾಮಾಜಿಕ, ಆರ್ಥಿಕ ಸ್ಥಿತಿಗತಿಯ ಬಗ್ಗೆ ಚರ್ಚಿಸುತ್ತಾರೆ. ಅವರು ಮಾದಿಗರಾದರೂ ಮಾದಿಗರಂತೆ ಇರದೇ ವೀರಶೈವ ತತ್ವದಿಂದಾಗಿ ಅವರೊಂದಿಗಿನ ಸಂಬಂಧದಿಂದ ದೂರವಿದ್ದಾರೆ. ಬಸವಣ್ಣನ ಪ್ರಭಾವದಿಂದಾಗಿ ಮಾಂಸಾಹಾರ ತ್ಯಜಿಸಿದ್ದಾರೆ. ಇತರೆ ಮಾದಿಗರಿಗಿಂತ ಭಿನ್ನವಾಗಿ ಜೀವನ ನಿರ್ವಹಿಸುತ್ತಿದ್ದಾರೆ. ಇವರ ಆರ್ಥಿಕ ಮೂಲಗಳೆಂದರೆ, ಭಿಕ್ಷೆ ಬೇಡುವುದು, ಕಾಣಿಕೆಯ ರೂಪದಲ್ಲಿ ದವಸ ಧಾನ್ಯ ಪಡೆಯುವುದು, ಊರಾಡುವುದು. ಈ ಪರಂಪರೆಯಲ್ಲೂ ಕೂಡ ಆಧುನೀಕರಣ ಮತ್ತು ಶಿಕ್ಷಣದಿಂದಾಗಿ ಕುಲ ಕಸುಬಿನಂತಹ ಆಚರಣೆಗಳನ್ನು ಬಿಟ್ಟಿದ್ದಾರೆ. ಹೊಸ ಬಗೆಯ ವಿಚಾರಧಾರೆಗಳನ್ನು ಮೈಗೂಡಿಸಿ ಕೊಂಡಿರುವ ಯುವಕರು ಈ ಪರಂಪರೆಯಲ್ಲಿ ಜಾಗೃತಿ ಮೂಡಿಸುವ ಕಾರ್ಯ ಮಾಡುತ್ತಿದ್ದಾರೆ.

ಈ ಸಂಶೋಧನಾ ಪ್ರಬಂಧದಲ್ಲಿ ಬಾಲಬಸವ ಪರಂಪರೆಯ ಬಗ್ಗೆ ಸಂಕ್ಷಿಪ್ತವಾಗಿ ಹೇಳಲಾಗಿದೆ. ಸಂಶೋಧಕರು ಹೆಚ್ಚಾಗಿ ಕೇಂದ್ರೀಕರಿಸಿರುವುದು ಮಾದಿಗ ಲಿಂಗಾಯತರನ್ನೇ. ಬಾಲಬಸವರು ಅದರೊಳಗೆ ಬರುತ್ತಾರೆ ಎನ್ನುವ ವಿಷಯವನ್ನು ಪ್ರಸ್ತಾಪ ಮಾಡಿ ಕೈ ಬಿಟ್ಟಿದ್ದಾರೆ. ಇದು ಇವರ ಮಹಾ ಪ್ರಬಂಧದ ಮಿತಿಯಾಗಿ ನೋಡಬಹುದಾಗಿದೆ.

ತಾತ್ವಿಕ ಚರ್ಚೆ :

ಶಿವಾನಂದ ಕೆಳಗಿನಮನಿಯವರು ತಮ್ಮ ಸಂಶೋಧನಾ ಪ್ರಬಂಧದಲ್ಲಿ ಲಿಂಗಧಾರಣೆ ಮಾದಿಗರ ಕುರಿತಂತೆ ಸಾಂಸ್ಕೃತಿಕ ಅಧ್ಯಯನ ಮಾಡಿದ್ದಾರೆ. ಬಸವಣ್ಣ ಮತ್ತು ವಚನ ಚಳವಳಿಯ ಪ್ರಭಾವದಿಂದಾಗಿ ೧೨ನೇ ಶತಮಾನದಲ್ಲಿ ತಳವರ್ಗದವರು ಲಿಂಗಧಾರಣೆ ಮಾಡಿಕೊಳ್ಳಲು ಬಸವಣ್ಣ ಮುಕ್ತ ಅವಕಾಶ ನೀಡಿದ್ದರು. ಈ ಅವಕಾಶದಿಂದಾಗಿ ಅವರ ಜೀವನಕ್ರಮದಲ್ಲಿ ಬದಲಾವಣೆ ಕಂಡುಕೊಂಡರು. ಈ ರೀತಿಯಾಗಿ ಬದಲಾವಣೆ ಬಯಸಿದವರಲ್ಲಿ ಕೆಳವರ್ಗಗಳ ಮಾದಿಗರು ಕೂಡ ಇದ್ದರು. ಕಲ್ಯಾಣದ ಕ್ರಾಂತಿಯಾದ ಬಳಿಕ ಇವರು ತಮ್ಮ ಜೀವನಕ್ರಮದಲ್ಲಿ ಅದೇ ರೀತಿ ಪದ್ಧತಿಯನ್ನು ಮುಂದುವರಿಸಿಕೊಂಡು ಬಂದರು. ಈ ರೀತಿಯಾಗಿ ಮುಂದುವರಿಸಿಕೊಂಡು ಬಂದಿರುವ ಲಿಂಗವಂತ ಮಾದಿಗರ ಸಮಗ್ರ ಜೀವನ ಕುರಿತು ಇವರು ಸಂಶೋಧನೆ ಮಾಡಿದ್ದಾರೆ. ಮುಖ್ಯವಾಗಿ ಮಾದಿಗರಲ್ಲಿ ಮಾದರ ಚನ್ನಯ್ಯ ಪರಂಪರೆ, ಮರುಳಸಿದ್ಧನ ಪರಂಪರೆ, ಮಾತಂಗಿ ಪರಂಪರೆ, ನೀಲಗಾರರು ಮತ್ತು ದೇವರಗುಡ್ಡದ ಪರಂಪರೆ ಮತ್ತು ಬಾಲಬಸವ ಪರಂಪರೆಯಲ್ಲಿ ಲಿಂಗಧಾರಣೆ ಪದ್ಧತಿ ಇಂದಿಗೂ ಜೀವಂತವಿದೆ. ಇವರ ಆಚಾರ-ವಿಚಾರ, ಕಲೆ ಸಂಪ್ರದಾಯ, ಆಚರಣೆ, ವಿಧಿವಿಧಾನಗಳು, ಜೀವನಕ್ರಮ ಕುರಿತು ಈ ಸಂಶೋಧನ ಪ್ರಬಂಧದ ಅಧ್ಯಯನವಾಗಿದೆ. ಆದರೆ 'ಮಾದಿಗ'ರ ಕುರಿತು ಹೆಚ್ಚು ಅಧ್ಯಯನವಾಗಿದೆ. ಅದರಲ್ಲಿ ಬರುವ ಬಾಲಬಸವರ ಹೆಸರು ಹೇಳಿ ಕೈಬಿಟ್ಟಿದ್ದಾರೆ. ಇವರು ಕೈಬಿಟ್ಟಿರುವ ಮಾದಿಗರಲ್ಲಿಯೇ ಗುರುಸ್ಥಾನದಲ್ಲಿರುವ ಬಾಲಬಸವರ ಸಾಂಸ್ಕೃತಿಕ ಜೀವನಕ್ರಮವನ್ನು ಅಧ್ಯಯನ ಮಾಡುವ ಉದ್ದೇಶ ಈ ಸಂಶೋಧನೆಗಿದೆ.

ಎಮ್ಮೆ ಬಸವನ ಕಾಲಜ್ಞಾನ ಸಾಹಿತ್ಯ :

ಕನ್ನಡ ಮೌಖಿಕ ಸಾಹಿತ್ಯವಾದ ಕಾಲಜ್ಞಾನದ ಕುರಿತಾಗಿ ನಡೆದಿರುವ ಕೆಲವೇ ಕೆಲವು ಅಧ್ಯಯನ ಕೃತಿಗಳಲ್ಲಿ ಎಮ್ಮೆ ಬಸವನ ಕಾಲಜ್ಞಾನ ಸಾಹಿತ್ಯ ಎನ್ನುವ ಕೃತಿಯು ಒಂದಾಗಿದೆ. ಕಾಲಜ್ಞಾನ ಸಾಹಿತ್ಯದ ಉಗಮ, ಚಾರಿತ್ರಿಕ ಸಂಗತಿ ಮತ್ತು ಪ್ರಮುಖ ಕಾಲಜ್ಞಾನ ಕವಿಗಳ ಕುರಿತಾಗಿ ಈ ಕೃತಿಯಲ್ಲಿ ಅಧ್ಯಯನ ನಡೆದಿದೆ. ಹೆಸರೇ ಸೂಚಿಸುವಂತೆ ಎಮ್ಮೆ ಬಸವನ ಜೀವನ ಮತ್ತು ಆತನ ಮೌಖಿಕ ಸಾಹಿತ್ಯವಾದ ಕಾಲಜ್ಞಾನದ ಕುರಿತು ಈ ಕೃತಿಯಲ್ಲಿ ಅಧ್ಯಯನ ಮಾಡಲಾಗಿದೆ.

ಎಮ್ಮೆ ಬಸವರಾಜ, ಎಮ್ಮೆ ಬಸವಣ್ಣಯ್ಯ, ಎಮ್ಮೆ ಬಸಪ್ಪ ತಾತ ಎನ್ನುವ ಈತನ ನಿಜನಾಮವು, ಆತ ಮಾಡುವ ಕಾಯಕದೊಂದಿಗೆ ಬಂದಿರುವುದು ತಿಳಿದುಬರುತ್ತದೆ. ಶಿವಶರಣ ಸಂಪ್ರದಾಯದವನಾದ ಈತ ಎಮ್ಮೆ ಹಿಂಡುಗಳನ್ನು ಕಾಯುವ ಕಾಯಕ ಮಾಡುತ್ತಿದ್ದರಿಂದ ಈ ಹೆಸರು ಬಂದಿರಬೇಕೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ವಚನ ಚಳವಳಿಯಲ್ಲಿ ಶಿವಶರಣರು ತಾವು ಮಾಡುವ ಕಾಯಕವನ್ನೇ ತಮ್ಮ ಹೆಸರಿಗೆ ಸೇರಿಸಿಕೊಂಡಿರುವ ಸಂಗತಿಯನ್ನು ಗಮನಿಸಬಹುದು. ಹಾಗೆಯೇ ಬಸವಪ್ಪ ಹೋಗಿ ಎಮ್ಮೆ ಬಸಪ್ಪ ಅಥವಾ ಎಮ್ಮೆ ಬಸವರಾಜ,

ಎಮ್ಮೆ ಬಸವನಾಗಿರಬೇಕು ಎನ್ನುವ ಅಭಿಪ್ರಾಯವಿದೆ. ಅಲ್ಲದೆ ಅದು ಆತನ ಅಂಕಿತ ನಾಮವೂ ಆಗಿರಬಹುದು. ಹೀಗಾಗಿ ಆತನ ಹೆಸರಿನೊಂದಿಗೆ ಸೇರಿಕೊಂಡಿದೆ ಎಂದು ಲೇಖಕರು ಅಭಿಪ್ರಾಯಪಡುತ್ತಾರೆ.

ಮುಂದುವರಿದು ಎಮ್ಮೆ ಬಸವನ ಕಾಲದ ಬಗ್ಗೆ ಗೊಂದಲಗಳಿವೆ ಎನ್ನುತ್ತಾರೆ. ನಿರ್ದಿಷ್ಟವಾದ ಕಾಲಮಾನ ತಿಳಿಯದೆ ಹೋದರೂ ಆತನ ಸಾಹಿತ್ಯದಲ್ಲಿ ಉಲ್ಲೇಖಿಸಿರುವ ಅಂಶಗಳ ಆಧಾರದ ಮೇಲೆ ಆತನ ಕಾಲವನ್ನು 'ಶ್ರೀ ಹುಲ್ಲೂರು ಶ್ರೀನಿವಾಸ ಜೋಯಿಸರು' ಎಮ್ಮೆ ಬಸವಣ್ಣನು ಕ್ರಿ.ಶ. ೧೫೪೯ರಲ್ಲಿ ಪ್ರಾಪ್ತ ವಯಸ್ಕನಾಗಿದ್ದರು ಎಂದೂ ಕೊನೇ ಪಕ್ಷ ಕ್ರಿ.ಶ.೧೫೫೩ರವರೆಗೂ ಜೀವಿಸಿದ್ದನು ಎನ್ನುವ ಅಭಿಪ್ರಾಯಪಟ್ಟಿದ್ದಾರೆ. ನಂಜನಗೂಡಿನ ತಾಮ್ರಶಾಸನವೊಂದರ ಆಧಾರದ ಮೇಲೆ ಈತನ ಕಾಲ ೧೫೫೩ ಅಂದರೆ ವಿಜಯನಗರ ಅರಸ ಸದಾಶಿವರಾಯ(೧೫೫೩-೧೫೭೧) ಕಾಲದಲ್ಲಿ ಈತ ಪ್ರಸಿದ್ಧಿಗೆ ಬಂದಿರಬಹುದು ಎನ್ನುವ ವಾದವಿದೆ.

ಗುರುರಾಜ ಚಾರಿತ್ರದಲ್ಲಿ ಸಿದ್ಧನಂಜೇಶನು ಹೇಳುವ ಭಕ್ತರ ಕಥೆಯ ಭಕ್ತರ ಸಾಲಿನಲ್ಲಿ ಎಮ್ಮೆ ಬಸವನೂ ಒಬ್ಬನಾಗಿದ್ದಾನೆ. ಈತನು ಸಿದ್ಧನಂಜೇಶನ ಸಮಕಾಲೀನನಾಗಿರಬೇಕು ಎನ್ನುವ ಅಂಶ ಕೂಡ ಸ್ಪಷ್ಟವಾಗುತ್ತದೆ. ಆರ್. ನರಸಿಂಹಾಚಾರ್, ಎಂ.ಎಂ. ಕಲಬುರ್ಗಿ, ವಿ. ಶಿವಾನಂದ, ಹಂಪ ನಾಗರಾಜಯ್ಯ ಮೊದಲಾದ ವಿದ್ವಾಂಸರು ಎಮ್ಮೆ ಬಸವನ ಕಾಲ ಕ್ರಿ.ಶ. ೧೫೫೩ ಎಂದು ಊಹಿಸಿದ್ದಾರೆ. ಬೆಂಗಳೂರು ವಿಶ್ವವಿದ್ಯಾಲಯದ ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ ಸಂಪುಟದಲ್ಲಿ ಈತನ ಕಾಲ ಕ್ರಿ.ಶ. ೧೫೫೩ ಎಂದು ಸೂಚಿಸಲಾಗಿದೆ.

ಎಮ್ಮೆ ಬಸವನ ಜನ್ಮಸ್ಥಳದ ಬಗೆಗೆ ಎಲ್ಲಿಯೂ ಉಲ್ಲೇಖವಿಲ್ಲ. ಆದರೆ ಮುಂದೊದಗಬಹುದಾದ ಆಪತ್ತುಗಳ ಬಗೆಗೆ ರಾಜರಿಗೆ ತನ್ನ ಕಾಲಜ್ಞಾನಗಳ ಮೂಲಕ ಸೂಚನೆ ಕೊಡುತ್ತ, ವಿಜಯನಗರ ಸಾಮ್ರಾಜ್ಯದಲ್ಲಿದ್ದು ಶ್ರೀ ಜಂಬುಕೇಶ್ವರನ ಭಕ್ತನಾಗಿ ಇದ್ದದ್ದು ಮಾತ್ರ ಕಂಡುಬರುತ್ತದೆ. ಎಮ್ಮೆ ಬಸವನು ಕೂಮರಕೆರೆಯಲ್ಲಿ ಬಹುಕಾಲ ನೆಲಸಿರಬಹುದು. ಬಳ್ಳಾರಿ ಜಿಲ್ಲೆಯ, ಶಿರಗುಪ್ಪ ತಾಲೂಕಿನ ಕುಂಚಗೇರಿ ಗ್ರಾಮವೇ ಅಂದಿನ ಕೂಮರಕೆರೆ. ಇಲ್ಲಿ ಆತನ ಸಮಾಧಿಯಿದ್ದು, ಪಕ್ಕದಲ್ಲಿಯೇ ಗುರು ಜಂಬುಕೇಶ್ವರ ದೇವಾಲಯವೂ ಇದೆ. ಎಮ್ಮೆ ಬಸವನು ಲೋಕ ಸಂಚಾರಿಯಾಗಿದ್ದು ಈತನು ಕುಡುತಿನಿ, ಕುರುಗೋಡು ಮುಂತಾದ ಕಡೆ ಸಂಚಾರ ಮಾಡಿ ಎಮ್ಮೆಗಳಿಗೆ ಔಷಧಿ ನೀಡುತ್ತಿದ್ದನು ಎನ್ನುವ ಜನಪದರ ಅಭಿಪ್ರಾಯವಿದೆ. ಕೊಪ್ಪಳ ಜಿಲ್ಲೆಯ ಯಲಬುರ್ಗ, ಆಂಧ್ರಪ್ರದೇಶದ ರಾಯದುರ್ಗ, ಕಲವಹಳ್ಳಿ, ಆದೋನಿಯಲ್ಲಿಯೂ, ತಮಿಳುನಾಡಿನ ಕುಂಭಕೋಣಂನಲ್ಲಿಯೂ ಈತನ ಹೆಸರಿನ ಮಠಗಳಿವೆ. ಒಟ್ಟಾರೆ ಎಮ್ಮೆ ಬಸವನು ವಿಜಯನಗರ ಸಾಮ್ರಾಜ್ಯದಲ್ಲಿದ್ದನು ಎನ್ನುವ ವಾದಕ್ಕೆ ಬರಬಹುದಾಗಿದೆ. ಈತನು ತನ್ನ ಕಾಲಜ್ಞಾನ ಸಾಹಿತ್ಯದಲ್ಲಿ 'ಕುಂಭಿನಿಪತಿ, ಜಂಬುಲಿಂಗನ ವರದಿಂದ ನಂಬಿ ಹೇಳಿದ ಎಮ್ಮೆ ಬಸವನೆಂದೂ' ನಂಜನಗೂಡಿನ ತಾಮ್ರಶಾಸನದಲ್ಲಿ ತಿಳಿಯುತ್ತದೆ.

ಎಮ್ಮೆ ಬಸವನ ಕಾಲಜ್ಞಾನ ಸಾಹಿತ್ಯವನ್ನು ಮೊದಲು ಪ್ರಕಟಿಸಿದವರು ಮೈಸೂರಿನ ಶ್ರೀ ಶಿವಬಸವಸ್ವಾಮಿಗಳು. ೧೯೪೭ರಲ್ಲಿ ಕಾಲಜ್ಞಾನ ಸಂಗ್ರಹ ಭಾಗ-೧ ಎಂಬ ಕೃತಿಯಲ್ಲಿ ಎಮ್ಮೆ ಬಸವನ ಕಾಲಜ್ಞಾನವನ್ನು ಸೇರಿಸಿದ್ದಾರೆ. ಅದರಲ್ಲಿರುವ ಪ್ರಮುಖ ಪದ್ಯಗಳು ಹುಯ್ಯಲೆ ಡಂಗುರವ, ಹಾಕಲೋ ಮುಂಡಿಗೆಯ, ಎಚ್ಚರಿಕೆ ಎಚ್ಚರಿಕೆ, ಕೂ, ಕೂ, ಕೂ. ಮಾನ್ಯರು ಹೇಗೆ ಮಾಡಿತು ದೇಶ, ಕಣಿಯೂ ಕೇಳಿರೂ, ನೋಡಿ, ನೋಡಿ, ಮುಂದಾದ ಸೊಲ್ಲುಗಳಿವೆ ಎಂದು ಲೇಖಕರು ಗುರುತಿಸುತ್ತಾರೆ. ಈ ಕೃತಿಯ ಸಂಪಾದಕರಾದ ಎಫ್.ಟಿ. ಹಳ್ಳಿಕೇರಿಯವರು ಸಂಗ್ರಹಿಸಿರುವ ಪದ್ಯಗಳಲ್ಲಿ 'ಹಾಕಲೋ ಮುಂಡಿಗೆಯ', 'ಸುವ್ವಿ ಬಾ ಸಂಗಯ್ಯ', 'ಹೇಳಿಬಂದೇ ಹೇಳಿಬಂದೇ', 'ಕೇಳಿ ಕೇಳಿರೂ', 'ದುಮ್ಮಿ ಸಾಲಿಯೋ', 'ಹೇಗೆ ಮಾಡಿರೋ', 'ಧರ್ಮಬಿಡ ಬೇಡಿರಣ್ಣ', 'ಗಜಬಿಜಿ ಬಾಬೂಜಿ', 'ಕಲಿಲಿಲಿ ಕುಲಿಲಿಯ', 'ಪ್ರಳಯ ಬಂದಿತಲ್ಲ', ಎನ್ನುವ ಎರಡು ಮತ್ತು ನಾಲ್ಕು ಸಾಲುಳ್ಳ ಕಾಲಜ್ಞಾನ ವಚನ ಸಾಹಿತ್ಯವನ್ನು ಸಂಗ್ರಹಿಸಿದ್ದಾರೆ.

ಎಮ್ಮೆ ಬಸವನ ಪ್ರಮುಖ ಕಾಲಜ್ಞಾನ

* ಎರಡು ಸಾಲಿನ ಕಾಲಜ್ಞಾನ ಸಾಹಿತ್ಯ

ಹೇಮಕೂಟಕ್ಕೆ ಪ್ರೇಮದಿ ಬಂದಾನೂ. ಕೂ.ಕೂ.ಕೂ
ಕಾಮಿತ ಫಲಗಳ ಬೇಡಿಕೊಂಡಾನು. ಕೂ.ಕೂ.ಕೂ

* **ನಾಲ್ಕು ಸಾಲಿನ ಕಾಲಜ್ಞಾನ**

ಕಾಶಿಯಿಂದತ್ತ ದೇಶಗಳು ಕೆಟ್ಟಾವು
ನಾಶಿಗಳಲ್ಲಿ ಮಳೆ ಬೆಳೆ
ದೇಶಾಧಿಪತಿಗಳು ಘಾಸಿಯಾಗಿ ಹೋದಾನು
ಶಾಸನ ನಮ್ಮ ಶಿವ ಶರಣರಿಗೆ
ಹಣಗಲಿಸಿದೆನೆಂದು ಹೆಮ್ಮಿಲೆಯಿರಲ್ಯಾಡ
ಉಣಲಿಕೆ ದಿನವಿಲ್ಲವಣ್ಣ
ದುರುಳರು ಬಂದಾರು ದಂತವ ಮುರಿದಾರು
ಎಣಿ ಎಣಿಸಿ ಕೂಡ ಬೇಕಣ್ಣ

ತಾತ್ವಿಕ ಚರ್ಚೆ :

ಬಾಲಬಸವರ ಮೌಖಿಕ ಸಾಹಿತ್ಯವೆಂದರೆ ಅದು ಕಾಲಜ್ಞಾನ ಸಾಹಿತ್ಯ. ಹಾಗಾಗಿ ಕಾಲಜ್ಞಾನ ಸಾಹಿತ್ಯವು ಹೇಗೆ ಬಾಲಬಸವರ ಕಾಲಜ್ಞಾನ ಸಾಹಿತ್ಯಕ್ಕೆ ಹೆಚ್ಚು ಹತ್ತಿರವಾಗಿದೆಯೋ ಅಥವಾ ಇಲ್ಲವೋ ಎನ್ನುವ ಅಂಶವನ್ನು ಹುಡುಕುವ ಸಲುವಾಗಿ ಈ ಅಧ್ಯಯನ ಸಮೀಕ್ಷೆ ಮಾಡಿಕೊಂಡಿದ್ದೇನೆ.

ಮುಖ್ಯವಾಗಿ ಎಮ್ಮೆ ಬಸವಪ್ಪನೂ ಕೂಡ ಕೆಳವರ್ಗದ ಶಿವಶರಣ ಎನ್ನುವ ತರ್ಕವಿದೆ. ಅದಕ್ಕೆ ಸಾಕ್ಷಿಯಂತೆ ಅವರು ಮಾಡುವ ಕಾಯಕ ಅಂದರೆ ಎಮ್ಮೆ ಮೇಯಿಸುವ ಕಾಯಕವೂ ಈಗಲೂ ಕೂಡ ಕೆಳವರ್ಗದವರೇ ಹೆಚ್ಚಾಗಿ ಮಾಡುವುದನ್ನು ನಾವು ಗಮನಿಸಬಹುದು. ಹಾಗಾಗಿ ಈ ಎಮ್ಮೆ ಬಸಪ್ಪನ ಕಾಲಜ್ಞಾನದಲ್ಲಿರುವ ಸಾಮಾಜಿಕ ನೀತಿಕೇಂದ್ರಿತ ಮತ್ತು ಮನುಷ್ಯನ ನೈತಿಕತೆಯನ್ನು ಎಚ್ಚರಿಸುವ ಸಂದೇಶಗಳು ಬಾಲಬಸವರ ಮೌಖಿಕ ಸಾಹಿತ್ಯವಾದ ಕಾಲಜ್ಞಾನದಲ್ಲಿ ಹೇಗೆ ವ್ಯಕ್ತಗೊಂಡಿವೆ ಎನ್ನುವ ಪ್ರಮುಖ ವಿಷಯವನ್ನು ಅಧ್ಯಯನ ಮಾಡುವ ಉದ್ದೇಶದಿಂದಾಗಿ ನನ್ನ ಈ ಸಂಶೋಧನೆಗೆ ಪೂರಕವಾಗಲೆಂದು ಈ ಕೃತಿಯನ್ನು ಬಳಕೆ ಮಾಡಿಕೊಂಡಿದ್ದೇನೆ.

ಕನ್ನಡದಲ್ಲಿ ಕಾಲಜ್ಞಾನ ಸಾಹಿತ್ಯ :

ಮಾಣಿಕರಾವ್ ಧನಶ್ರೀಯವರ ಸಂಶೋಧನಾ ಮಹಾಪ್ರಬಂಧ 'ಕನ್ನಡದಲ್ಲಿ ಕಾಲಜ್ಞಾನ ಸಾಹಿತ್ಯ' ಈ ಸಂಶೋಧನಾ ಕೃತಿಯು ಕನ್ನಡದಲ್ಲಿ ಅಲಕ್ಷಿತ ಸಾಹಿತ್ಯವಾದ ಕಾಲಜ್ಞಾನ ಕುರಿತು ನಡೆಸಿರುವ ಅಧ್ಯಯನವಾಗಿದೆ. ಈ ಸಂಶೋಧನೆಯು ಮುಖ್ಯವಾಗಿ ಒಳಗೊಂಡಿರುವ ಸಂಗತಿಗಳೆಂದರೆ ಕಾಲಜ್ಞಾನದ ಅರ್ಥ, ಉಗಮ, ವಿಕಾಸ, ಕಾಲಜ್ಞಾನ ಸಾಹಿತ್ಯದ ಕವಿಗಳು, ವಚನಕಾರರು ಮತ್ತು ಕಾಲಜ್ಞಾನ ಸಾಹಿತ್ಯ ಸಂಬಂಧಗಳು, ಕಾಲಜ್ಞಾನ ಸಾಹಿತ್ಯದ ಮೌಲ್ಯ ವಿವೇಚನೆ, ಧರ್ಮ ಪ್ರಚಾರಕವಾಗಿ ಕಾಲಜ್ಞಾನ ಸಾಹಿತ್ಯ, ಕಾಲಜ್ಞಾನ ಸಾಹಿತ್ಯ ಛಂದಸ್ಸು ಮತ್ತು ಶೈಲಿ ಮುಂತಾದವುಗಳನ್ನು ಕುರಿತು ಸಂಶೋಧನೆ ಮಾಡಲಾಗಿದೆ.

ಪ್ರಮುಖವಾಗಿ ಗಮನಿಸಬೇಕಾದ ವಿಷಯವೆಂದರೆ ಈ ಸಂಶೋಧನೆಯು ಹೆಚ್ಚು ಧರ್ಮ ಮತ್ತು ನೀತಿಕೇಂದ್ರಿತ ಕಾಲಜ್ಞಾನವನ್ನು ಆಯ್ದುಕೊಂಡು ಅಧ್ಯಯನವನ್ನು ಮಾಡಲಾಗಿದೆ. ಕಾಲಜ್ಞಾನ ಎಂದರೆ ಸಮಾಜದಲ್ಲಿ ಮುಂದೆ ನಡೆಯಬಹುದಾದ ಅನೇಕ ಸಂಗತಿಗಳನ್ನು ತಿಳಿಸುವ, ಎಚ್ಚರಿಸುವ ಸಾಹಿತ್ಯವಾಗಿದೆ. ಕಾಲಜ್ಞಾನ ಸಾಹಿತ್ಯದ ಉಗಮದ ಹಿಂದೆ ಮಾನವೀಯ ದೃಷ್ಟಿ, ಮನಕುಲದ ಕಲ್ಯಾಣದ ಚಿಂತನೆ ಇದೆ. ಈ ಚಿಂತನೆಯು ಮಾನವ ಧರ್ಮದ ಎಲ್ಲಾ ಸಾಹಿತ್ಯಕ್ಕೂ ಕೇಂದ್ರಶಕ್ತಿಯಾಗಿರುವ ಸಾಧ್ಯತೆಯಿದೆ. ಈ ರೀತಿಯ ಚೇತನ ಚಿಂತನ ಶಕ್ತಿಯೇ ಕಾಲಜ್ಞಾನ ಸಾಹಿತ್ಯದ ಉಗಮಕ್ಕೆ ಸಕಾರಣವಾಗಿರಬೇಕೆಂದಿದ್ದಾರೆ ಸಂಶೋಧಕರು. ಕಾಲಜ್ಞಾನ ಸಾಹಿತ್ಯವು ಧರ್ಮಕೇಂದ್ರಿತ ಮತ್ತು ನೀತಿಕೇಂದ್ರಿತವಾಗಿರುವುದರಿಂದ ಭಾರತದ ವಿವಿಧ ಧರ್ಮಗಳು ಕೂಡ ತಮ್ಮದೇ ಪರಿಭಾಷೆಯಲ್ಲಿ ಕಾಲಜ್ಞಾನ ಸಾಹಿತ್ಯವನ್ನು ಅರ್ಥೈಸುತ್ತದೆ ಹಾಗೆಯೇ ನಿರ್ವಚನ ಮಾಡುತ್ತದೆ. ಎಲ್ಲ ಧರ್ಮಗಳಲ್ಲಿ ಮಾನವೀಯತೆಯ ಸಾಕಾರಮೂರ್ತಿಗಳಾದ ಸಕಲ ಜೀವಾತ್ಮರ ಲೇಸನೇ ಬಯಸುವ ತ್ರಿಕಾಲಜ್ಞಾನಿಗಳು ಜಗತ್ತಿನ ಕಲ್ಯಾಣಕ್ಕಾಗಿ ಮುಂಬರುವ ಸಂಗತಿಗಳ ಮುನ್ಸೂಚನೆಯನ್ನು ಕೊಡುತ್ತಾ ಬಂದಿದ್ದಾರೆ. ಅವರ ಎಚ್ಚರಿಕೆಯ ಹೇಳಿಕೆಗಳು ಆಡುಧಾಟಿನ ಮಾತಿನಲ್ಲಿರುತ್ತವೆ. ಮುಂದೆ ಅವುಗಳೇ ಸಾಹಿತ್ಯ ರೂಪ ಪಡೆದು ಕಾಲಜ್ಞಾನದವರೆಗೆ ರೂಪುಗೊಂಡಿವೆ ಎಂದು ಅಧ್ಯಯನಕಾರರು ತಿಳಿಸುತ್ತಾರೆ.

ಕಾಲಜ್ಞಾನ ಸಾಹಿತ್ಯವು ನಂಬುಗೆಯ ತಳಹದಿಯ ಮೇಲೆ ರೂಪಿತವಾದ ಒಂದು ಪ್ರಕಾರದ ಸಾಹಿತ್ಯವಾಗಿದೆ. ಆದುದರಿಂದ ಇದಕ್ಕೆ ಮನೋವಿಜ್ಞಾನದ ಹಿನ್ನೆಲೆ ಮತ್ತು ಇತಿಹಾಸವಿದೆ. ಜೋತಿಷ್ಯ ಅಥವಾ ಭವಿಷ್ಯ ಹೇಳುವುದು ವ್ಯಕ್ತಿಯ ವಲಯಕ್ಕೆ ಮಾತ್ರ ಸೀಮಿತವಾದ ಶಾಸ್ತ್ರ. ಆದರೆ ಕಾಲಜ್ಞಾನ ಇಡೀ ಜನಾಂಗ ಜೀವನ ಚಕ್ರದ ಮುಖ್ಯ ಸನ್ನಿವೇಶಗಳ ಆಗುಹೋಗುಗಳನ್ನು ತಿಳಿಸುವ ಧೋರಣೆಯುಳ್ಳದ್ದಾಗಿದೆ. ಅಲ್ಲದೆ ಕಾಲಜ್ಞಾನ ಸಾಹಿತ್ಯವೂ ಜನಾಂಗದ ನೈತಿಕ ನೆಲೆಗಟ್ಟಿನ ಪರಿಣಾಮವೂ ಎಂದು ಭಾವಿಸಲಾಗುತ್ತದೆ. ಒಟ್ಟಿನಲ್ಲಿ ಕಾಲಜ್ಞಾನ ಸಾಹಿತ್ಯವು ಜೀವನದಲ್ಲಿ ಮುಂಬರುವ ಅಪಾಯ ಇಲ್ಲವೇ ಗಂಡಾಂತರಗಳನ್ನು ಸೂಚಿಸಿ ಅವುಗಳಿಂದ ರಕ್ಷಿಸಿಕೊಳ್ಳುವ ಉಪಾಯಗಳನ್ನು ಸೂಚಿಸುತ್ತದೆ. ಕಾಲಜ್ಞಾನ ಸಾಹಿತ್ಯವೆಂಬ ಈ ಸಂಶೋಧನಾ ಕೃತಿಯು ಹೆಚ್ಚಾಗಿ ಶಿಷ್ಟ ಸಾಹಿತ್ಯವನ್ನು ಅವಲಂಬಿಸಿದೆ. ವಚನಕಾರ ತಮ್ಮ ನೀತಿಕೇಂದ್ರಿತ ವಚನಗಳ ಮೂಲಕ ಕಾಲಜ್ಞಾನ ಸಾಹಿತ್ಯ ರಚಿತಗೊಂಡಿದೆ ಎನ್ನುತ್ತಾರೆ. ಕಾಲಜ್ಞಾನ ಸಾಹಿತ್ಯವು ವೀರಶೈವ ಧರ್ಮ ಪ್ರಚಾರಕವಾಗಿ ಹೇಗೆ ಬಳಸಿಕೊಂಡಿದೆ ಎನ್ನುವ ಅಂಶವನ್ನು ಈ ಸಂಶೋಧನಾ ಮಹಾಪ್ರಬಂಧದಿಂದ ತಿಳಿಯಬಹುದು.

ತಾತ್ವಿಕ ಚರ್ಚೆ :

ಸಂಶೋಧಕರು ಕಾಲಜ್ಞಾನದ ಛಂದಸ್ಸು ಮತ್ತು ಶೈಲಿಯು ತ್ರಿಪದಿ ಮತ್ತು ದ್ವಿಪದಿಯಲ್ಲಿ ಎಂದು ಹೇಳುವ ಇವರು ಮೌಖಿಕವಾಗಿ ರೂಪಿತಗೊಂಡು ಕಾಲಜ್ಞಾನ ಸಾಹಿತ್ಯವನ್ನು ಇವರು ಗಮನಿಸಿದಂತೆ ಕಾಣುವುದಿಲ್ಲ. ಹಿಂದಿನ ಕಾಲದಿಂದಲೂ ಕಾಲಜ್ಞಾನ ಸಾರುವ ಕಾಯಕ ಮಾಡುವ, ಸಾರುವ ಐನೋರುವರ ಕುರಿತು ಸಂಕ್ಷಿಪ್ತವಾಗಿ ಹೇಳುವ ಇವರು ಎಲ್ಲಿಯೂ ಬಾಲಬಸವರ ಕುರಿತು ಮಾತಾಡುವುದಿಲ್ಲ, ಇದು ಪ್ರಶ್ನೆಯಾಗಿ ಉಳಿಯುತ್ತದೆ. ಬಾಲಬಸವರನ್ನು ಇವರು ಏಕೆ ಪರಿಗಣಿಸಿಲ್ಲ, ಜನಪದರ ಮೌಖಿಕ ಸಾಹಿತ್ಯವಾದ ಕಾಲಜ್ಞಾನವನ್ನು ಶಿಷ್ಟೀಕರಿಸುವ ಮತ್ತು ವೀರಶೈವೀಕರಣಗೊಳಿಸುವ ಕಾರ್ಯ ನಡೆದಿದೆ. ಕೆಳವರ್ಗದ ಬಾಲಬಸವರ ಕುರಿತು ಇವರ ಅಧ್ಯಯನದಲ್ಲಿ ಕಾಣದೇ ಇರುವುದು ಅವರ ಸಾಮಾಜಿಕ ಮೌಲ್ಯ ನಿರ್ಣಯದಿಂದಾಗಿ ಕೈಬಿಟ್ಟಿದ್ದಾರೆ ಅಥವಾ ಆ ಪರಂಪರೆ ಬಗ್ಗೆ ಮಾಹಿತಿಯ ಕೊರತೆ ಇರಬಹುದೇನೋ ಎನ್ನುವ ಅಭಿಪ್ರಾಯಕ್ಕೆ ಬರಬಹುದು. ಒಟ್ಟಾರೆ ಬಾಲಬಸವರನ್ನು ಕಾಲಜ್ಞಾನ ಸಾರುವ ಕಾಯಕದವರು ಎಂದು ಗುರುತಿಸದೆ ಹೋಗಿರುವುದು ಈ ಸಂಶೋಧನೆಯ ಮಿತಿಯಾಗಿ ನೋಡಬಹುದು. ಕಾಲಜ್ಞಾನವು ಹೆಚ್ಚು ಜನಪ್ರಿಯತೆ ಪಡೆದುಕೊಂಡಿದ್ದೇ ಬಾಲಬಸವರಿಂದ. ಹಾಗಾಗಿ ಅವರ ಈ ಮೌಖಿಕ ಸಾಹಿತ್ಯದೊಳಗೆ ಸಮಾಜ, ಧರ್ಮ, ಜನತೆ, ಸಾಮಾಜಿಕ ಸಂಘರ್ಷಗಳು, ಸಾಮಾಜಿಕ ಮೌಲ್ಯ, ನೀತಿ-ನಿಯಮಗಳು, ಪ್ರಭುತ್ವ, ಚರಿತ್ರೆ ಮುಂತಾದ ಅನೇಕ ವಿಷಯಗಳನ್ನು ಅಧ್ಯಯನ ಮಾಡುವ ಕಾರ್ಯ ನಡೆಯಬೇಕಾಗಿದೆ. ಹಾಗಾಗಿ ಸಂಶೋಧನೆಯ ಕೇಂದ್ರವಾಗಿರುವ ಎಲ್ಲಾ ಅಂಶಗಳನ್ನು ಅಧ್ಯಯನ ಮಾಡುವ ಉದ್ದೇಶ ಈ ಪ್ರಬಂಧಕ್ಕಿದೆ.

ಬಾಲಬಸವ ತುಮನೆಪ್ಪ ಹಾಡಿದ ಗೋಣಿ ಬಸಪ್ಪನ ಕಾವ್ಯ :

ವೆಂಕಟೇಶ ಇಂದ್ವಾಡಿಯವರು ಸಂಪಾದನೆ ಮಾಡಿರುವ 'ಬಾಲಬಸವ ತುಮನೆಪ್ಪ ಹಾಡಿದ ಗೋಣಿ ಬಸಪ್ಪನ ಕಾವ್ಯ' ಎಂಬ ಕೃತಿಯು ಬಾಲಬಸವರ ಮೌಖಿಕ ಸಾಹಿತ್ಯದ ಕುರಿತು ನಡೆದಿರುವ ಪ್ರಮುಖ ಅಧ್ಯಯನವಾಗಿದೆ. ಬಾಲಬಸವರು ಹೆಚ್ಚಾಗಿ 'ಕಾಲಜ್ಞಾನ'ವನ್ನು ಸಾರುತ್ತಾರೆ. ಆ ಪರಂಪರೆಯಲ್ಲಿ ಅದು ಮಹತ್ವದ ಕಾರ್ಯ. ಅದಕ್ಕೆ ಊರಾಡುವುದು ಎಂದೂ ಕರೆಯುತ್ತಾರೆ. ಬಾಲಬಸವ ಪರಂಪರೆಯಲ್ಲಿ ಬಾಲಬಸವ ತುಮನೆಪ್ಪರು ಕಾಲಜ್ಞಾನದೊಂದಿಗೆ ಅನೇಕ ಮೌಖಿಕ ಕಾವ್ಯಗಳನ್ನು ಕಥನವಾಗಿ ಕಟ್ಟಿ ಹಾಡುತ್ತಾರೆ. ಹಾಗೆ ಹಾಡುವ ಕಾವ್ಯಗಳಲ್ಲಿ ಗೋಣಿಬಸಪ್ಪನ ಕಾವ್ಯವು ಒಂದು ಎಂದು ಹೇಳುತ್ತಾರೆ.

ಮಧ್ಯ ಕರ್ನಾಟಕದ ಒಂದು ವಿಶಿಷ್ಟ ಪರಂಪರೆಯಾಗಿರುವ ಈ ಬಾಲಬಸವ ಸಂಪ್ರದಾಯವು ತನ್ನದೇ ಆದ ಚೌಕಟ್ಟಿನಲ್ಲಿ ಬದುಕು ಕಟ್ಟಿಕೊಂಡಿದೆ. ಈ ರೀತಿಯ ವಿಶಿಷ್ಟತೆಯನ್ನು ಹೊಂದಿರುವ ಈ ಪರಂಪರೆಯ ಬಗ್ಗೆ ಹೆಚ್ಚು ಅಧ್ಯಯನಗಳು ನಡೆದಿಲ್ಲ. ಆದರೆ ವೆಂಕಟೇಶ ಇಂದ್ವಾಡಿ ಅವರು ಮೌಖಿಕ ಕಾವ್ಯಕ್ಕೆ ಹೆಚ್ಚು ಪ್ರಾಧಾನ್ಯತೆ ಕೊಟ್ಟಿದ್ದಾರೆ. ಪ್ರಸ್ತಾವನೆಯಲ್ಲಿ ಇವರ ಬಗ್ಗೆ ಸಮಗ್ರವಾದ ಮಾಹಿತಿ ನೀಡುವ ಕಾರ್ಯ ಮಾಡಿದ್ದಾರೆ. ಬಾಲಬಸವರ ಜೀವನ, ಸಮಾಜದೊಂದಿಗಿನ ಅನುಸಂಧಾನ, ಅವರ ಪ್ರಮುಖ ನೆಲೆಗಳು, ಅವರ ಸಾಹಿತ್ಯವು ಆ ಸಮುದಾಯದೊಂದಿಗೆ ನಿರ್ಮಿಸಿಕೊಂಡಿರುವ ಸಾಂಸ್ಕೃತಿಕ ಜೀವನ ವಿಧಾನಗಳನ್ನು ತಿಳಿಸುತ್ತಾರೆ. ಬಾಲಬಸವರು ಮಾದಿಗ ಕುಲದಲ್ಲಿರುವ ಲಿಂಗವಂತರು. ಇವರ ಸಾಮಾಜಿಕ ಸ್ಥಿತ್ಯಂತರಗಳು, ಸಾಮಾಜಿಕ ಸಂಘರ್ಷಗಳು ಅವರ ಬದುಕಿನಲ್ಲಿ ಹೇಗೆ ವ್ಯಕ್ತಗೊಂಡಿವೆ, ಅವುಗಳನ್ನು ತಾವು ಮೌಖಿಕ ಕಾವ್ಯಗಳ ಮೂಲಕ ಸಮಾಜದೊಂದಿಗೆ ಅವರು ಹೊಂದಿರುವ ಸಾಮಾಜಿಕ ಸಂಬಂಧದ ಕುರಿತು ವಿಸ್ತೃತ ಅಧ್ಯಯನ ಮಾಡಿ ಈ ಬಗ್ಗೆ ವಿವರಿಸಿದ್ದಾರೆ.

ಅಧ್ಯಯನಕಾರರು ಹೇಳುವಂತೆ ಈ ಕೃತಿಯು ಮುಖ್ಯವಾಗಿ ಮೌಖಿಕ ಅಭಿವ್ಯಕ್ತಿಯ ಕಡೆಗೆ ಹೆಚ್ಚು ಕೇಂದ್ರೀಕೃತವಾಗಿದೆ. ಜನಪದರು ಏನೇನೋ ಕಲ್ಪಿಸಿಕೊಂಡು ಹೇಳುತ್ತಾರೆ, ಅವರಿಗೆ ಶಿಕ್ಷಣವಿಲ್ಲ, ನಾಗರಿಕತೆಯಿಲ್ಲ ಎನ್ನುವ ವಾದಕ್ಕೆ ಸವಾಲಾಗಿ ಈ ಕಾವ್ಯ ನಿಲ್ಲುತ್ತದೆ. ಅಂದರೆ ಶಿಕ್ಷಣ ಪಡೆದ ಪಂಡಿತರಿಗಿಂತ ಮೌಖಿಕತೆಯ ಮೂಲಕ ಹೆಚ್ಚು ನೈತಿಕತೆ ಮತ್ತು ಸಾಮಾಜಿಕತೆಯನ್ನು ಕಾವ್ಯಾತ್ಮಕವಾಗಿ ಸಮಾಜದ ಮುಂದಿಡುವ ಕಾರ್ಯವನ್ನು ಈ ಜನಪದರು ಮಾಡುತ್ತಾರೆ. ಗೋಣಿಬಸಪ್ಪನ ಕಾವ್ಯ ಮತ್ತು ಆ ದೈವಕ್ಕೆ ನಡೆದುಕೊಳ್ಳುವ ಸಮುದಾಯಗಳ ಸಾಮಾಜಿಕ ಸಂಘರ್ಷಗಳ ಸ್ವರೂಪವನ್ನು ನೋಡಬಹುದು. ಮೌಖಿಕ ಕಾವ್ಯವೂ ಚರಿತ್ರೆಯ ಭಾಗವಾಗಿ ತನ್ನೊಳಗೆ ಸತ್ಯ ಸಂಗತಿಗಳನ್ನು ಹೇಗೆ ಇಟ್ಟುಕೊಂಡಿವೆ? ಅದರೊಂದಿಗೆ ಹೇಗೆ ಅನುಸಂಧಾನ ಮಾಡುತ್ತವೆ? ಎನ್ನುವ ಚಾರಿತ್ರಿಕ ಅಂಶವಾಗಿದೆ ಅಂದರೆ ಗೋಣಿ ಬಸಪ್ಪ ಪವಾಡಪುರುಷ, ದೈವಾಂಶಸಂಭೂತ, ಆತ ತನ್ನ ಜೀವಿತದ ಕಾಲದೊಳಗೆ ನಡೆದ ಸಂಗತಿಗಳ ಚಿತ್ರಣವನ್ನು,

ತನ್ನ ಅಸ್ತಿತ್ವಕ್ಕೆ ನಡೆಸಿದ ಹೋರಾಟದ ವಿವರಗಳು ಅದರೊಂದಿಗೆ ಸಮಾಜದ ಹಿನ್ನೆಲೆಯನ್ನು ಈ ಕೃತಿಯು ವಿವರಿಸುತ್ತದೆ. ಮೌಖಿಕ ಕಾವ್ಯವು ಹೇಗೆ ಪುರಾಣ, ಇತಿಹಾಸವನ್ನು ಸಮಕಾಲೀನ ಸಂದರ್ಭಗಳಿಗೆ ಅನುಗುಣವಾಗಿ ನಡೆದ ನೈಜ ಘಟನೆಗಳನ್ನು ಹಾಡುವ ಧಾಟಿಯಲ್ಲೇ ಅಭಿವ್ಯಕ್ತಿಸುವ ಕ್ರಮ ಅತ್ಯಂತ ಮಹತ್ವದ್ದಾಗಿದೆ. ಈ ರೀತಿಯ ಸಂಗತಿಗಳು ಒಂದಕ್ಕೊಂದು ಸಮೀಕರಿಸಿಕೊಳ್ಳುವ ಸಂಗತಿಯ ರೀತಿಯು ಕೂಡ ಭಿನ್ನವಾಗಿದೆ.

ಮೌಖಿಕ ಕಾವ್ಯವು ಸಮಾಜ, ಜನತೆ, ಧಾರ್ಮಿಕತೆ, ಸಾಮಾಜಿಕ ಸಂಘರ್ಷ, ಸಂಪ್ರದಾಯ, ಹೆಣ್ಣು ಮಕ್ಕಳ ಆಚರಣೆ, ನಂಜಿಕೆ ಮುಂತಾದ ಅಂಶಗಳಿಗೆ ಹೆಚ್ಚು ಪ್ರಾತಿನಿಧ್ಯ ನೀಡುತ್ತದೆ. ಸಮಾಜವು ಹೇಗೆ ಕಾವ್ಯದೊಳಗೆ ಅಭಿವ್ಯಕ್ತಗೊಂಡಿದೆ, ಅಭಿವ್ಯಕ್ತಗೊಂಡಿರುವ ಸಮಾಜವನ್ನು ಸಾಮಾನ್ಯ ಜನತೆ ಹೇಗೆ ಸ್ವೀಕರಿಸುತ್ತಾರೆ ಎನ್ನುವ ವಾಸ್ತವ ಅಂಶವನ್ನು ಕೂಡ ಗಮನಿಸಬೇಕಾಗಿದೆ. ಹಾಗಾಗಿ ಎಲ್ಲ ಮೌಖಿಕ ಕಾವ್ಯಗಳು ನಿರ್ದಿಷ್ಟ ವ್ಯಾಪ್ತಿ ಮತ್ತು ಭೌಗೋಳಿಕತೆಯನ್ನು ಒಳಗೊಂಡಿರುತ್ತವೆ. ಹಾಗೆಯೇ ಈ ಗೋಣಿ ಬಸಪ್ಪನ ಕಾವ್ಯ ಕೂಡ ಮಧ್ಯ ಕರ್ನಾಟಕದ ಭೂಪ್ರದೇಶವನ್ನು ಕೇಂದ್ರವಾಗಿಸಿಕೊಂಡಿದೆ. ಅಲ್ಲಿನ ಸಾಮಾಜಿಕತೆ, ಚರಿತ್ರೆ, ಸಾಮಾನ್ಯ ಜನತೆಯನ್ನು ದೈವೀಕರಿಸುವ ಕ್ರಿಯೆ ಮುಂತಾದ ವಿಷಯಗಳು ಪ್ರಮುಖವಾಗಿವೆ. ಉದಾ: ಕೆಳವರ್ಗದ ಜನತೆ ಮತ್ತು ಮೇಲ್ವರ್ಗದ ಜನತೆಯ ನಡುವಿನ ಸಾಮಾಜಿಕ ಸಂಘರ್ಷಗಳ ಅಸ್ತಿತ್ವ, ಹುಡುಕಾಟ, ಪ್ರಭುತ್ವ ವಿರೋಧಿ ನೆಲೆಗಳು ಈ ಕೃತಿಯು ಮೌಖಿಕತೆಯನ್ನು ಹೆಚ್ಚು ವಿಸ್ತಾರಗೊಳಿಸುವ ಬಗೆ ಮತ್ತು ಅದರೊಂದಿಗೆ ಅಭಿವ್ಯಕ್ತಗೊಳ್ಳುವ ನಿರೂಪಣಾ ಕ್ರಮದ ಕುರಿತು ಹೆಚ್ಚಿನ ಮಾಹಿತಿ ನೀಡುತ್ತದೆ.

ಒಟ್ಟಾರೆ ಈ ಮೌಖಿಕ ಕಾವ್ಯ ಗೋಣಿಬಸಪ್ಪ ಮತ್ತು ಬಾಲಬಸವ ಪರಂಪರೆ ಕುರಿತು ಇನ್ನೂ ಹೆಚ್ಚಿನ ಅಧ್ಯಯನವಾಗಬೇಕೆನ್ನುವ ಆಶಯವನ್ನು ತಿಳಿಸುತ್ತದೆ. ಬಾಲಬಸವರ ಮೌಖಿಕ ಸಾಹಿತ್ಯವಾದ ಕಾಲಜ್ಞಾನದ ಕುರಿತು ಉಲ್ಲೇಖವಿದೆ. ಅದರ ವಿಸ್ತೃತ ಅಧ್ಯಯನವಾಗಬೇಕಾಗಿರುವುದನ್ನು ಅಧ್ಯಯನಕಾರರು ಹೇಳುತ್ತಾರೆ. ಹಾಗಾಗಿ ಬಾಲಬಸವರ ಮೌಖಿಕ ಸಾಹಿತ್ಯದೊಳಗಿನ ಸಾಂಸ್ಕೃತಿಕ ವಿವರಣೆಗಳನ್ನು ಅಧ್ಯಯನ ಮಾಡುವ ಉದ್ದೇಶ ಈ ಅಧ್ಯಯನಕ್ಕೆ ಇದೆ.

ಕರ್ನಾಟಕ ಆದಿಜಾಂಬವ ಮಾತಂಗ ಪರಂಪರೆ: ಸಾಂಸ್ಕೃತಿಕ ವಿಶ್ಲೇಷಣೆ :

'ಕರ್ನಾಟಕ ಆದಿಜಾಂಬವ ಮಾತಂಗ ಪರಂಪರೆ: ಸಾಂಸ್ಕೃತಿಕ ವಿಶ್ಲೇಷಣೆ' ಎಂಬ ಸಂಶೋಧನಾ ಪ್ರಬಂಧವು ಕನ್ನಡ ವಿಶ್ವವಿದ್ಯಾಲಯದ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗದಲ್ಲಿ ಸಲ್ಲಿಕೆಯಾಗಿರುವ ಮಹಾಪ್ರಬಂಧವಾಗಿದೆ. ಈ ಸಂಶೋಧನ ಮಹಾಪ್ರಬಂಧವು ಕರ್ನಾಟಕದಲ್ಲಿರುವ ಆದಿಜಾಂಬವ ಮಾತಂಗ ಪರಂಪರೆಗೆ ಸಂಬಂಧಿಸಿದ್ದಾಗಿದೆ. ಈ ಪರಂಪರೆಯು ಮಾದಿಗ ಸಂಬಂಧಿತ ಕುಲದ ಮೂಲ ಕುರಿತು ಸಮಗ್ರವಾದ ಅಧ್ಯಯನ ಮಾಡುವ ಉದ್ದೇಶವನ್ನು ಹೊಂದಿದೆ.

ಆದಿಜಾಂಬವ ಮುನಿ, ಮಾತಂಗ ಮುನಿಗಳ ಮೂಲದಿಂದ ಆರಂಭವಾಗಿ ಇಂದಿನವರೆಗೂ ಇರುವ ಸಾಂಸ್ಕೃತಿಕ ಅನನ್ಯತೆಯನ್ನು ಅದು ಸಮಾಜದೊಂದಿಗೆ ಬೆಸೆದುಕೊಂಡಿರುವ ಬಗೆಯನ್ನು ಒಂದು ಸಾಂಸ್ಕೃತಿಕ ಚೌಕಟ್ಟಿನಲ್ಲಿ ಅಧ್ಯಯನ ಮಾಡಲಾಗಿದೆ. ಅಂದರೆ ಕರ್ನಾಟಕದಲ್ಲಿರುವ ಆದಿಜಾಂಬವ ಮಾತಂಗ ಪರಂಪರೆಯ ಚಾರಿತ್ರಿಕತೆ, ದಾರ್ಶನಿಕತೆ, ಸಾಮಾಜಿಕತೆ, ಸಾಹಿತ್ಯ, ರಾಜಕೀಯ ಮತ್ತು ಸಾಂಸ್ಕೃತಿಕತೆ ಅವರ ಜೀವನದ ಭಾಗವಾಗಿ ಸಮಕಾಲೀನ ಸಂದರ್ಭಕ್ಕೂ ಇರುವ ತಾತ್ವಿಕ ಭಿನ್ನತೆಯನ್ನು ಅಧ್ಯಯನ ಮಾಡಲಾಗಿದೆ.

ಈ ಸಂಶೋಧನಾ ಮಹಾಪ್ರಬಂಧವು ದಲಿತ ಮಾದಿಗ ಸಂಬಂಧಿತ ಜಾತಿಗಳ ಸಾಂಸ್ಕೃತಿಕ ಸಂಬಂಧಗಳನ್ನು ಕುರಿತು ಹೇಳುವಾಗ ಅಧ್ಯಾಯ ನಾಲ್ಕರಲ್ಲಿ ಬಾಲಬಸವರು ಕುರಿತು ಈ ರೀತಿ ಹೇಳುತ್ತಾರೆ. 'ಬಾಲಬಸವರು: ಜಾಗರವಿದ್ದು ಜಾವ ಕಟ್ಟುವ ಜಂಬೂ ಕಾಲಜ್ಞಾನಿಗಳು' ಎಂಬ ವಿಷಯದ ಬಗ್ಗೆ ಹೇಳುತ್ತಾರೆ. "ಯೋಗ ನಿದ್ರೆಗೆ ಜಾರಿ ಇಂದು ಮುಂದಾಗುವ ವಿಷಯಗಳನ್ನು ಆತ್ಮಜ್ಞಾನದಿಂದ ತಿಳಿದು ಲೋಕಕ್ಕೆ ಸಾರಿ ಎಚ್ಚರಿಸುವ ಕಾಲಜ್ಞಾನಿಗಳೆಂದು ಬಾಲಬಸವರನ್ನು ಕರೆದಿದ್ದಾರೆ. ಲೋಕಕ್ಕೆ ಮುಂದಾಗಬಹುದಾದ ಸಂಗತಿಯನ್ನು ನೈತಿಕತೆಯ ಮೂಲಕ ಹೇಳಿ ಸಾಮಾನ್ಯ ಜನತೆಯನ್ನು ಎಚ್ಚರಿಸುವ ಕಾರ್ಯ ಮಾಡುತ್ತಾರೆ. ಇವರು ಕೂಡ ಆದಿಜಾಂಬವ ಮಾತಂಗ ಪರಂಪರೆಗೆ ಸೇರಿದವರು ಎನ್ನುವ ಅಂಶ ಅವರ ಸಮಾಜದೊಂದಿಗೆ ಇರುವ ಸಾಂಸ್ಕೃತಿಕತೆಯ ಮಹತ್ವ ಎಂತಹದ್ದು ಎಂದು ಅಧ್ಯಯನಕಾರರು ತಿಳಿಸುತ್ತಾರೆ.

ಅಧ್ಯಯನಕಾರರು ಈ ಬಾಲಬಸವ ಪರಂಪರೆಯ ಬಗ್ಗೆ ನಿರ್ದಿಷ್ಟವಾದ ಅಧ್ಯಯನ ಮಾಡಿಲ್ಲ. ಅವರು ಈ ಆದಿಜಾಂಬವ ಮಾತಂಗ ಪರಂಪರೆಯವರೇ ಎನ್ನುವ ಕಾರಣ ತಮ್ಮ ಅಧ್ಯಯನದಲ್ಲಿ ವಿವರಿಸಿದ್ದಾರೆ. ಇವರು ಡಾ. ವೆಂಕಟೇಶ ಇಂದ್ವಾಡಿಯವರ ಬಾಲಬಸವ ಹಾಡಿರುವ ಗೋಣಿ ಬಸಪ್ಪನ ಕಾವ್ಯ ಮತ್ತು ಎಲ್ಲಪ್ಪ ಕೆ.ಕೆ. ಪುರ ಅವರ ಲೇಖನದ ಆಧಾರದಿಂದ ಬಾಲಬಸವರ ಕುರಿತು ಹೇಳುತ್ತಾರೆ. ಅದರಲ್ಲಿ ಬರುವ ಎಲ್ಲ ವಿವರಗಳು ಸೇರಿವೆ. ಅಧ್ಯಯನಕಾರರು ಬಾಲಬಸವ ಮೌಖಿಕ ಕಾವ್ಯದ ಕುರಿತು ಅದರ ಕಥಾವಸ್ತು ಮತ್ತು ಬಾಲಬಸವರ ಜೀವನದ ಕುರಿತು ಆದಿಜಾಂಬವ ಮಾತಂಗ ಪರಂಪರೆಗೆ ಸಂಬಂಧಿಸಿದವರು ಎನ್ನುವ ಇವರು ಬಾಲಬಸವರ ಮೌಖಿಕ ಕಾಲಜ್ಞಾನದ ಕುರಿತು ಉಲ್ಲೇಖ ಮಾಡಿ ಅದರ ವಿವರಗಳನ್ನು ಅಧ್ಯಯನದಲ್ಲಿ ನೀಡಿರುವುದಿಲ್ಲ.

ತಾತ್ವಿಕತೆ ಚರ್ಚೆ :

ಈ ಸಂಶೋಧನೆಯು ಆದಿಜಾಂಬವ ಮಾತಂಗ ಪರಂಪರೆಯನ್ನು ಕೇಂದ್ರವಾಗಿಸಿಕೊಂಡಿರುವುದರಿಂದ ಅವರ ಸಾಂಸ್ಕೃತಿಕತೆಯನ್ನು ಅಧ್ಯಯನ ಮಾಡಿದ್ದಾರೆ. ಈ ಪರಂಪರೆಯಲ್ಲಿ ಬಾಲಬಸವರು ಕೂಡ ಬರುತ್ತಾರೆ. ಲಿಂಗಧಾರಣೆಯಾಗಿರುವ ಬಾಲಬಸವರ ಸಾಹಿತ್ಯ ಮತ್ತು ದಾರ್ಶನಿಕತೆಯನ್ನು ಸಂಕ್ಷಿಪ್ತವಾಗಿ ಅಧ್ಯಯನಕ್ಕೆ ಬಳಸಿಕೊಂಡಿದ್ದಾರೆ. ಇವರು

ಬಾಲಬಸವರನ್ನು ಸಂಪೂರ್ಣವಾಗಿ ಕೇಂದ್ರೀಕರಿಸಿ ಅಧ್ಯಯನ ಮಾಡಿರುವುದಿಲ್ಲ. ಹಾಗಾಗಿ ಇನ್ನೂ ಹೆಚ್ಚಿನ ಅಧ್ಯಯನವಾಗಬೇಕಾಗಿರುವುದು ಇವರ ಅಧ್ಯಯನದಿಂದ ತಿಳಿದುಬರುತ್ತದೆ.

ಮಾದಾರರ ಜನಪದ ಸಾಹಿತ್ಯ :

ಮೈಲಹಳ್ಳಿ ರೇವಣ್ಣನವರ ಸಂಶೋಧನ ಕೃತಿಯಾದ "ಮಾದಾರರ ಜನಪದ ಸಾಹಿತ್ಯ ಒಂದು ಅಧ್ಯಯನ" ಎಂಬ ಪಿಎಚ್.ಡಿ. ಮಹಾಪ್ರಬಂಧವು ಚಿತ್ರದುರ್ಗ ಜಿಲ್ಲೆಯಲ್ಲಿರುವ ಮಾದಿಗ ಸಮುದಾಯದ ಸಮಗ್ರ ಬದುಕಿನ ವಿವರಗಳನ್ನು, ಜನಪದ ಆಚರಣೆ ಹಿನ್ನೆಲೆಯಲ್ಲಿ ಕಟ್ಟಿಕೊಡುವ ಕಾರ್ಯ ಮಾಡಿದ್ದಾರೆ. ೧೯೯೦ರಲ್ಲಿ ಮೈಸೂರು ವಿಶ್ವವಿದ್ಯಾನಿಲಯವು ಈ ಸಂಶೋಧನೆಗೆ ಪಿಎಚ್.ಡಿ. ಪದವಿ ನೀಡಿ ಗೌರವಿಸಿದೆ.

ಅಧ್ಯಯನಕಾರರು ಹೇಳುವಂತೆ ಮಾದಿಗ ಜನಾಂಗದವರು ತಮ್ಮ ತಮ್ಮ ದೈನಂದಿನ ಜೀವನದಲ್ಲಿ ನಡೆಯುವ ನಂಬಿಕೆ, ಆಚರಣೆ, ಸಂಪ್ರದಾಯ ಮುಂತಾದ ವಿಷಯಗಳಿಗೆ ಪೂರಕವಾಗುವಂತೆ ಅವುಗಳನ್ನು ಆಚರಣಾತ್ಮಕ ನೆಲೆಗಳನ್ನು ಜನಪದ ಹಾಡು ಕಥೆ ಮುಂತಾದವುಗಳಿಂದ ಜನಪದವು ಹೇಗೆ ಮಾದಿಗರ ಬದುಕಿನ ಭಾಗವಾಗಿದೆ ಎನ್ನುವುದನ್ನು ತಿಳಿಸುತ್ತಾರೆ. ಈ ಸಂಶೋಧನಾ ಕೃತಿಯಲ್ಲಿ ಒಟ್ಟು ಏಳು ಅಧ್ಯಾಯಗಳಿವೆ. ಒಂದು. ಜನಾಂಗೀಕ ಹಿನ್ನೆಲೆ, ಮಾದಾರರ ಮೂಲ, ಎರಡು. ಮಾದಾರರ ಸಾಮಾಜಿಕ ಸಂಬಂಧಗಳು, ಮೂರು. ಮಾದಾರರ ಸಾಮಾಜಿಕ ಜೀವನ, ನಾಲ್ಕು. ಮಾದಾರರ ಜನಪದ ಸಾಹಿತ್ಯ ಪದ್ಯ ಸಾಹಿತ್ಯ, ಐದು. ಮಾದಾರರ ಗದ್ಯ ಸಾಹಿತ್ಯ, ಆರು. ಮಾದಾರರ ಗಾದೆ ಒಗಟು ಮತ್ತು ಒಡಪುಗಳು, ಏಳು. ಮಾದಾರರ ಪ್ರದರ್ಶನಾತ್ಮಕ ಕಲೆಗಳು

ಈ ಸಂಶೋಧನಾ ಕೃತಿಯಲ್ಲಿ ಅಧ್ಯಯನಕಾರರು ಚಿತ್ರದುರ್ಗದ ಭೌಗೋಳಿಕ ಪರಿಸರದಲ್ಲಿನ ಮಾದಿಗರ ಕುಲಗುರುಗಳ ಕುರಿತು ಚರ್ಚೆ ಮಾಡುವಾಗ ಬಾಲಬಸವರ ಬಗ್ಗೆ ಹೇಳುತ್ತಾರೆ. ಬಾಲ ಬಸವರು ಮತ್ತು ಆದಿಜಾಂಬ ಮುನಿಗಳು ಆ ಪ್ರಾದೇಶಿಕ ಪರಿಸರದಲ್ಲಿ ಮಾದಿಗ ಜನಾಂಗಕ್ಕೆ ಕುಲ ಗುರುಗಳಾಗಿದ್ದಾರೆ. ಬಾಲಬಸವರ ಕುರಿತು ಅಧ್ಯಯನಕಾರರು ಈ ರೀತಿಯಾಗಿ ವಿವರಿಸಿದ್ದಾರೆ. 'ಬಾಲಬಸವ ಮಾದಿಗ ಜಾತಿಯಲ್ಲೇ ಬರುವ ವಿಶಿಷ್ಟ ವ್ಯಕ್ತಿ ತಂಬೂರಿ ಹಿಡಿದು ಊರುಗಳಿಗೆ ಭೇಟಿ ಕೊಟ್ಟು ಬರುವ ಮತ್ತು ಹರಳಪ್ಪನ ಬಗೆಗೆ ಕಥೆಯನ್ನು ಹೇಳುವುದು ಈತನ ಕಾಯಕ.' ಎಂದು ಹೇಳುತ್ತಾರೆ. ಬಾಲಬಸವರ ಉಡುಗೆ ತೊಡುಗೆಯನ್ನು ಹೇಳುವ ಅಧ್ಯಯನಕಾರರು ಬಾಲಬಸವರು ಕಾವಿಯ ಕಾಸಿಯನ್ನು ತೊಟ್ಟು, ತಲೆಗೆ ಪೇಟ ಸುತ್ತುವರು, ಭುಜದ ಮೇಲೊಂದು ಶಲ್ಯ ಹಣೆಯಲ್ಲಿ ವಿಭೂತಿ ಕಿವಿಗಳಿಗೆ ಕರ್ಣಕುಂಡಲ ಕೊರಳಲ್ಲಿ ರುದ್ರಾಕ್ಷಿಯನ್ನು ಧರಿಸಿ ಬಸವಣ್ಣನವರ ಮುದ್ರೆಯನ್ನು ಎದೆಯ ಮೇಲೆ ಹಾಕಿಸಿಕೊಳ್ಳುತ್ತಾರೆ. ಇವರ ವೃತ್ತಿ ಕಾಲಜ್ಞಾನ ವಚನ ಹೇಳುವುದು. ವರ್ಷಕೊಮ್ಮೆ ಭಿಕ್ಷಾಟನೆಗೆ ಹೋಗುವುದು. ಹಾಗೆ ಬಾಲಬಸವರು ಕಾಲಜ್ಞಾನ ಸಾರುವುದಕ್ಕೆ ಕೆಲವು ನಿಯಮಗಳುಂಟು. ಉಜ್ಜನಿ ಪೀಠದಲ್ಲಿ ಶಾಸ್ತ್ರೋಕ್ತವಾಗಿ

ಲಿಂಗದೀಕ್ಷೆ ಪಡೆಯಬೇಕು. ದೀಕ್ಷೆ ಪಡೆದ ನಂತರವೇ ಮದುವೆಯಾಗುವುದು. ಇವರು ಕಾಲಜ್ಞಾನ ಸಾರಲು ಊರುಗಳಿಗೆ ಹೋದಾಗ ಭಕ್ತಾದಿಗಳು ಅವರನ್ನು ಗೌರವಪೂರ್ವಕವಾಗಿ ನಮಸ್ಕರಿಸಿ ಧನ-ಧಾನ್ಯಗಳನ್ನು ನೀಡುತ್ತಾರೆ. ಲಿಂಗದೀಕ್ಷೆಯಾದ ಬಳಿಕ ಕಾಲಜ್ಞಾನ ಸಾರುವ ಕಾಯಕ ಮಾಡಬೇಕು. ಚಿತ್ರದುರ್ಗ ಜಿಲ್ಲೆಯ ಕೆ.ಕೆ.ಪುರದ ಬಾಲಬಸವರು ಕಾಲಜ್ಞಾನ ಸಾರುವಾಗ ಇಬ್ಬರು ಜೊತೆಗಿರುತ್ತಾರೆ. ಕಾಲಜ್ಞಾನ ಸಾರುವುದು ಅವರ ಜೀವನ ನಿರ್ವಹಣೆಗೆ ಸಹಾಯಕವಾಗಿದೆ. ಕೆಲವೊಬ್ಬರು ಹಣ, ಹೊಸ ಬಟ್ಟೆಗಳನ್ನು ಉಡುಗೊರೆ ರೂಪದಲ್ಲಿ ಕೊಡುತ್ತಿದ್ದರಂತೆ. ಆದರೆ ಅದು ಈಗ ಕಡಿಮೆಯಾಗಿರುವ ಸಂಗತಿಯನ್ನು ಅಧ್ಯಯನಕಾರರು ಗುರುತಿಸಿದ್ದಾರೆ. ಮುಂದುವರಿದು ಬಾಲಬಸವರ ಮದುವೆ ಸಂಪ್ರದಾಯ ಕುರಿತು ಚರ್ಚಿಸುತ್ತಾ ಬಾಲಬಸವರು ತಮ್ಮ ಸಂಬಂಧಗಳಲ್ಲೇ ಮದುವೆಯಾಗುವರು. ಮಾದಿಗರಿಗೆ ಹೆಣ್ಣು ಕೊಡುವರು. ಆದರೆ ತಂದುಕೊಳ್ಳುವುದು ಮಾತ್ರ ಗುರು ಪರಂಪರೆ ಇರುವ ಮನೆಯ ಹೆಣ್ಣುಮಗಳನ್ನೇ ಹಾಗಾಗಿ ಅವರು ಜಾಂಬವ ಗುರುಗಳ ಮನೆಯ ಸಂಬಂಧ ಬೆಳೆಸಿಕೊಂಡಿದ್ದಾರೆ. ಮೊಳಕಾಲ್ಮೂರು ತಾಲ್ಲೂಕಿನ ಕೆ.ಕೆ.ಪುರದಲ್ಲಿ ಮಾತ್ರ ಇರುವ ಇವರನ್ನು ಮಾದಿಗರ ಮಠಗಳ ಮಂಗಳ ಕಾರ್ಯಗಳ ಸಂದರ್ಭದಲ್ಲಿ, ಮದುವೆ ಕಾರ್ಯಗಳಿಗೆ ತಮ್ಮ ಮನೆಗಳಿಗೆ ಕರೆದುಕೊಂಡು ಹೋಗಿ ಪಾದಪೂಜೆ ಮಾಡಿ ಗೌರವಿಸುವರು. ಈ ಪದ್ಧತಿಯು ಇತರೆ ಬಾಲಬಸವ ಪರಂಪರೆಯಲ್ಲಿ ಕಂಡುಬರುವುದಿಲ್ಲ.

ಅಧ್ಯಯನಕಾರರು ಬಾಲಬಸವರ ನೆಲೆಗಳನ್ನು ಚಚಿಸುವಾಗ ಕರ್ನಾಟಕದಲ್ಲಿರುವ ಬಾಲಬಸವರ ನೆಲೆಗಳನ್ನು ತಿಳಿಸುತ್ತಾರೆ. ಬಾಲಬಸವರು ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲ್ಲೂಕಿನ ಕೆ.ಕೆ.ಪುರ ಗ್ರಾಮದಲ್ಲಿ ಐದಾರು ಕುಟುಂಬಗಳಿವೆ. ಹಾಗೆ ಗದಗ ಜಿಲ್ಲೆಯ ಹರ್ಲಾಪುರದಲ್ಲಿ ಹನ್ನೆರಡು ಮನೆಗಳಿವೆ. ಮಧ್ಯ ಕರ್ನಾಟಕದಲ್ಲಿ ಅದರಲ್ಲೂ ಬಳ್ಳಾರಿ, ದಾವಣಗೆರೆ, ಶಿವಮೊಗ್ಗ, ಚಿಕ್ಕಮಗಳೂರು ಭಾಗಗಳಲ್ಲಿ ಮಾತ್ರ ಕಂಡುಬರುತ್ತಾರೆ ಎನ್ನುವ ಮಾಹಿತಿ ನೀಡುತ್ತಾರೆ. ಬಾಲಬಸವರ ಕಾಯಕ ಮತ್ತು ಜೀವನ ನಿರ್ವಹಣೆ ಬಗ್ಗೆ ವಿವರಿಸುತ್ತಾ ಬಾಲಬಸವರು ಶೈವ ಪಂಥದವರಾಗಿದ್ದು ಸಸ್ಯಾಹಾರಿಗಳಾಗಿದ್ದಾರೆ. ಇವರು ಕಾಲಜ್ಞಾನದಿಂದಲೇ ಜೀವನ ನಿರ್ವಹಿಸುತ್ತಾರೆ. ಕಾಲಜ್ಞಾನದಿಂದ ಜೀವನ ಮಾಡುವ ಬಾಲಬಸವರು ಕೃಷಿ ಕಾಯಕ ಮಾಡುವುದಿಲ್ಲ. ಅವರು ವರ್ಷಕ್ಕೊಮ್ಮೆ ಕಾಲಜ್ಞಾನವನ್ನು ಸಾರಲು ಹೋದಾಗ ಭಿಕ್ಷೆಯ ರೂಪದಲ್ಲಿ ಬರುವಂತಹ ಧನ, ದವಸ-ಧಾನ್ಯಗಳನ್ನು ಸಂಗ್ರಹಿಸಿಕೊಳ್ಳುತ್ತಾರೆ. ಉಪ ಜೀವನಕ್ಕೆ ಜೋತಿಷ್ಯವನ್ನು ಹೇಳುತ್ತಾ ಜೀವನ ಸಾಗಿಸುತ್ತಿದ್ದಾರೆ. ಆದರೆ ಆಧುನಿಕತೆಯ ಪ್ರಭಾವದಿಂದಾಗಿ ಈ ಬಾಲಬಸವ ಪರಂಪರೆಯಲ್ಲಿ ಇಂದು ಬಹಳಷ್ಟು ಬದಲಾವಣೆಗಳಾಗಿರುವುದನ್ನು ಅಧ್ಯಯನಕಾರರು ಹೇಳುತ್ತಾರೆ.

ತಾತ್ವಿಕ ಚರ್ಚೆ :

ಈ ಸಂಶೋಧನಾ ಕೃತಿಯು ಚಿತ್ರದುರ್ಗ ಜಿಲ್ಲೆಯ ಭೌಗೋಳಿಕ ಪರಿಸರಕ್ಕೆ ಮಾತ್ರ ಸಿಮೀತವಾಗಿದೆ. ಈ ಪ್ರದೇಶದಲ್ಲಿ ಕಂಡುಬರುವ ಕೆ.ಕೆ.ಪುರದ ಬಾಲಬಸವ ಪರಂಪರೆಯ ಬಗ್ಗೆ

ಮಾತ್ರ ಹೇಳುವ ಈ ಕೃತಿಯು ಕರ್ನಾಟಕದ ಇತರೆ ಬಾಲಬಸವರ ಬಗ್ಗೆ ಯಾವ ಮಾಹಿತಿಯನ್ನು ನೀಡುವುದಿಲ್ಲ. ಅದೇ ಭಾಗದಲ್ಲಿರುವ ರಾಮಘಟ್ಟ ಹೊಳಲ್ಕೆರೆಯ ಬಾಲಬಸವ ಪರಂಪರೆಯ ಬಗ್ಗೆಯೂ ಎಲ್ಲೂ ವಿವರ ನೀಡುವುದಿಲ್ಲ. ಹರಪನಹಳ್ಳಿ, ಹೀಲದಹಳ್ಳಿ, ಹರ್ಲಾಪುರ, ಗಂಜಗನಗಳ್ಳಿ, ರಾಮಘಟ್ಟ ಮುಂತಾದ ಕಡೆ ಬಾಲಬಸವರ ಮದುವೆಯ ಆಚರಣೆಗಳು ಭಿನ್ನವಾಗಿವೆ. ಇಲ್ಲಿ ಹೆಣ್ಣುಮಕ್ಕಳು ಮದುವೆಯಾಗದೆ ಬಾಲಬಸವಿಯಾಗಿ ಕಾಲಜ್ಞಾನ ಸಾರುತ್ತಾರೆ. ಈ ವೃತ್ತಿಯಿಂದಲೇ ಜೀವನ ಸಾಗಿಸುತ್ತಾರೆ. ಈ ಪರಂಪರೆಯಲ್ಲಿ ಮಾದಿಗರ ಮನೆಯಿಂದ ಹೆಣ್ಣು ತಂದು ಅವಳಿಗೆ ಲಿಂಗದೀಕ್ಷೆ ನೀಡಿ ಮನೆ ತುಂಬಿಸಿಕೊಳ್ಳುತ್ತಾರೆ. ಆದರೆ ಕೆ.ಕೆ.ಪುರದ ಬಾಲಬಸವರಲ್ಲಿ ಹೆಣ್ಣುಮಕ್ಕಳು ಕಾಲಜ್ಞಾನ ಸಾರುವುದಿಲ್ಲ, ಅವರಲ್ಲಿ ಬಾಲಬಸವಿ ಪದ್ಧತಿಯು ಕಂಡುಬರುವುದಿಲ್ಲ. ಕಾರಣ ಸ್ವಾತಂತ್ರ್ಯ ಪೂರ್ವದಲ್ಲೇ ಈ ಪರಂಪರೆಯಲ್ಲಿ ಆಧುನಿಕ ಶಿಕ್ಷಣ ಪಡೆದವರಿದ್ದಾರೆ. ಹಾಗಾಗಿ ಇವರ ವೈಚಾರಿಕತೆಯ ಶಿಕ್ಷಣವು ಇವರಲ್ಲಿ ಜಾಗೃತಿ ಮೂಡಿಸಿದ ಪರಿಣಾಮ ಇವರಲ್ಲಿ ಬಾಲಬಸವಿ ಪದ್ಧತಿಯು ಕಂಡುಬರುವುದಿಲ್ಲ.

ರಾಮಘಟ್ಟ ಬಾಲಬಸವರ ಪರಂಪರೆ ಕೆ.ಕೆ.ಪುರ ಬಾಲಬಸವ ಪರಂಪರೆಗಿಂತ ಭಿನ್ನವಾಗಿದೆ. ಲಿಂಗದೀಕ್ಷೆ, ಕುಲದೇವರು, ವೇಷಭೂಷಣ ಮುಂತಾದ ಆಚರಣೆಯಲ್ಲಿ ಭಿನ್ನತೆ ಇದೆ. ಹಾಗಾಗಿ ಈ ಕೃತಿಯು ಒಂದು ಪರಂಪರೆಯ ಮೇಲೆ ಕೇಂದ್ರಿತವಾಗಿ ಅಧ್ಯಯನ ಮಾಡಿದೆ. ಚಿತ್ರದುರ್ಗದ ಪ್ರದೇಶದಲ್ಲಿರುವ ಒಂದು ಬಾಲಬಸವ ಪರಂಪರೆಯ ಬಗ್ಗೆ ಅಧ್ಯಯನ ಮಾಡಿರುವುದು ಉಳಿದ ಬಾಲಬಸವ ಪರಂಪರೆಯನ್ನು ಅಧ್ಯಯನ ಮಾಡದೆ ಹೋಗಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಹಾಗಾಗಿ ನನ್ನ ಸಂಶೋಧನೆಯು ಕರ್ನಾಟಕದಲ್ಲಿರುವ ಎಲ್ಲಾ ಬಾಲಬಸವರ ಪರಂಪರೆಯನ್ನು ಅಧ್ಯಯನ ಮಾಡುವ ಉದ್ದೇಶವಿದೆ.

ನಮ್ಮೂರು ತಂಬ್ರಹಳ್ಳಿ :

ಸುಜಾತ ಅಕ್ಕಿಯವರು ಬರೆದಿರುವ ನಮ್ಮೂರು ತಂಬ್ರಹಳ್ಳಿ ಎಂಬ ಕೃತಿಯಲ್ಲಿ ಗ್ರಾಮ ಸಮುದಾಯಗಳ ಸಾಂಸ್ಕೃತಿಕ ಚಹರೆಯನ್ನು ಒಂದೆಡೆಗೆ ಕಟ್ಟಿಕೊಡುವ ಪ್ರಯತ್ನ ಮಾಡುತ್ತಾರೆ. ಈ ಕೃತಿಯು ಒಂದು ಮಾದರಿ ಗ್ರಾಮ ಅಧ್ಯಯನದ ಸ್ವರೂಪದಲ್ಲಿದ್ದು ಆ ಗ್ರಾಮದ ಸಾಂಸ್ಕೃತಿಕ ಸಂಕಥನವನ್ನು ಒಂದು ಪುಸ್ತಕ ರೂಪದಲ್ಲಿ ತೆರೆದಿಡುವ ಕಾರ್ಯ ಮಾಡುತ್ತಾರೆ. ಅಧ್ಯಯನಕಾರರು ತಮ್ಮ ಹುಟ್ಟೂರಾದ ತಂಬ್ರಹಳ್ಳಿ ಬಗ್ಗೆ ಚಾರಿತ್ರಿಕ, ಭೌಗೋಳಿಕ ಮತು ಪ್ರಾದೇಶಿಕತೆಯನ್ನು ಹೇಳುವುದರ ಮೂಲಕವೇ ಆ ಗ್ರಾಮದಲ್ಲಿನ ಸಾಮಾಜಿಕ, ಧಾರ್ಮಿಕ, ಆರ್ಥಿಕ, ಸಾಂಸ್ಕೃತಿಕ ಅಂಶಗಳು ಹೇಗೆ ಗ್ರಾಮ ಸಾಂಸ್ಕೃತಿಕತೆಗೆ ಪೂರಕವಾಗಿವೆ ಎನ್ನುವುದರ ಕುರಿತು ವಿವರಿಸುತ್ತಾರೆ. ಗ್ರಾಮದಲ್ಲಿನ ಜನತೆಯ ಮನೋರಂಜನೆ, ಆಚರಣೆಗಳು, ಕಲೆ, ಸಾಹಿತ್ಯ, ನಾಟಕ, ಹಬ್ಬ ಹರಿದಿನಗಳು, ಜನಪದರ ನಂಬಿಕೆಗಳು, ಪ್ರದರ್ಶನ ಕಲೆಗಳು, ಭಿಕ್ಷೆಗಾಗಿ ಬರುವ ಜನಪದ ಗಾಯಕರು ಹಾಗೂ ಜನಪದ ಆಚರಣೆಗಳು ಆಧುನಿಕತೆಗೆ ಒಳಗಾಗಿ ಹೇಗೆ ಹಳ್ಳಿಯ ಜನತೆಯ ಮನೋವಿಕಾಸಗಳು ಬದಲಾಗಿವೆ ಎನ್ನುವ ಕುರಿತು ಅಧ್ಯಯನಕಾರರು ಚರ್ಚಿಸುತ್ತಾರೆ.

ತಂಬ್ರಹಳ್ಳಿಯು ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನಹಳ್ಳಿ ವ್ಯಾಪ್ತಿಯಲ್ಲಿ ಬರುವ ತುಂಗಭದ್ರಾ ನದಿಯ ತೀರದ ಪ್ರದೇಶವಾಗಿದೆ. ಇದು ಮಧ್ಯ ಕರ್ನಾಟಕದ ಭೌಗೋಳಿಕ ಪರಿಸರದಲ್ಲಿರುವುದರಿಂದ ಇಲ್ಲಿ ಜನಪದ ಆಚರಣೆಗಳು, ಜನಪದ ನಂಬಿಕೆಗಳು, ಜನಪದ ವೃತ್ತಿಗಾಯಕರು ಮತ್ತು ಜನಪದ ಪ್ರದರ್ಶನ ಕಲೆಗಳ ಮೂಲಕವೇ ಅಲ್ಲಿನ ಜನಪದ ಕಲಾವಿದರು ಹೇಗೆ ಜೀವನ ನಡೆಸುತ್ತಿದ್ದಾರೆ, ಅವರಲ್ಲಿ ಪ್ರಮುಖರಾದ ದುರುಗ ಮುರುಗಿಯರು, ಹೆಳವರು, ದೊಂಬರು, ಹಗಲು ವೇಷಗಾರರು, ಮೋಡಿಗಾರರು, ಅಡವಿಕೊಂಚರು, ಬಾಲಬಸವರು, ಜೋಗತಿಯರು, ಗೊರವಿಗರು, ಬುಡ ಬುಡಿಕೆಯವರು, ಸುಡುಗಾಡು ಸಿದ್ಧರು, ಕೌಲೆತ್ತಿನವರು, ಹಾವಾಡಿಗರು, ಕರಡಿ ಕುಣಿಸುವವರು, ಲಂಬಾಣಿಗರು ಮುಂತಾದವರು ತಂಬ್ರಹಳ್ಳಿ ವ್ಯಾಪ್ತಿಯಲ್ಲಿ ಭಿಕ್ಷೆಗಾಗಿ ಬರುವುದರ ಕುರಿತು ಅವರ ಆಚರಣೆ, ಗಾಯನ, ಪ್ರದರ್ಶನ ಮುಂತಾದ ವಿಷಯಗಳನ್ನು ಪರಿಚಯಾತ್ಮಕವಾಗಿ ಈ ಕೃತಿಯಲ್ಲಿ ವಿವರಿಸಿದ್ದಾರೆ.

ಒಂದು ಗ್ರಾಮದ ಸಾಂಸ್ಕೃತಿಕ ಸಂಕಥನವು ಅದರ ಸಾಂಸ್ಕೃತಿಕ ಆಚರಣೆಗಳ ಮೇಲೆ ನಿಂತಿರುವುದನ್ನು ಅರಿತಿರುವ ಸುಜಾತ ಅಕ್ಕಿಯವರು ಒಂದು ಸಮುದಾಯದ ವೃತ್ತಿಗಾಯಕರು ತಾವು ನಂಬಿಕೊಂಡು ಬಂದಿರುವ ವೃತ್ತಿಯಿಂದಲೇ ಹೇಗೆ ಜೀವನ ನಿರ್ವಹಿಸುತ್ತಾರೆ? ಅವರ ವೃತ್ತಿ ಕಾರ್ಯಕ್ಕೆ ಸಮಾಜ ನೀಡುವ ಸಹಾಯ ಎಂತಹದ್ದು, ಅದರಿಂದ ಜನಪದ ಆಚರಣೆಯ ಮೇಲೆ ಯಾವ ರೀತಿ ಪ್ರಭಾವ ಬೀರುತ್ತದೆ ಎಂದು ಹೇಳುವ ಸಂದರ್ಭದಲ್ಲಿ ತಂಬ್ರಹಳ್ಳಿಗೆ ಬಾಲಬಸವರು ತಮ್ಮ ಕುಲ ವೃತ್ತಿಯಾದ ಕಾಲಜ್ಞಾನವನ್ನು ಸಾರುವುದಕ್ಕೆ ಬರುವ ಸಂಗತಿಯನ್ನು ತಿಳಿಸುತ್ತಾ ಅವರ ಬಗ್ಗೆ ಪರಿಚಯ ಮಾಡಿಕೊಡುವ ಪ್ರಯತ್ನ ಮಾಡುತ್ತಾರೆ.

ಒಂದು ಸಾಂಸ್ಕೃತಿಕ ಸಾಮಾಜಿಕ ಸಂಬಂಧದೊಂದಿಗೆ ಜನತೆಯಲ್ಲಿ ನೈತಿಕತೆಯನ್ನು ಹೆಚ್ಚಿಸುವ, ಅನೈತಿಕತೆಯೆಡೆಗೆ ಹೋಗುವುದನ್ನು ತಡೆದು ಅದರಿಂದಾಗುವ ಪರಿಣಾಮಗಳನ್ನು ಹೇಳುತ್ತಾ ಜನರನ್ನು ಎಚ್ಚರಿಸುವುದು ಅವರ ಕಾಲಜ್ಞಾನ ಸಾಹಿತ್ಯದ ಮುಖ್ಯ ಉದ್ದೇಶವಾಗಿರುತ್ತದೆ. ಬಾಲಬಸವರ ಕುಲ ವೃತ್ತಿಯಾದ ಕಾಲಜ್ಞಾನ ಸಾರುವ ಕಾಯಕ ಮಾಡುವ ಈ ಪರಂಪರೆಯಲ್ಲಿ ಮೌಖಿಕವಾಗಿ ಹಾಡುವ ಜನಪದ ಕಲಾವಿದರಿದ್ದಾರೆ. ಇವರ ಕಾಲಜ್ಞಾನ ತಂಬ್ರಹಳ್ಳಿ ಪರಿಸರದಲ್ಲಿ ಹೇಗೆ ಪ್ರಭಾವ ಬೀರಿದೆ ಎನ್ನುವುದನ್ನು ತಿಳಿಸುತ್ತಾರೆ. ಬಾಲಬಸವರು ಹೆಚ್ಚಾಗಿ ಮಧ್ಯ ಕರ್ನಾಟಕದ ಭೌಗೋಳಿಕ ಪರಿಸರದಲ್ಲಿ ಹೆಚ್ಚಾಗಿ ಕಂಡುಬರುವುದರಿಂದ ಈ ಪರಂಪರೆಯವರು ತಮ್ಮ ಕುಲ ವೃತ್ತಿಯನ್ನು ಈ ಭೌಗೋಳಿಕ ಪರಿಸರದಲ್ಲಿ ಹಾಡುತ್ತಾರೆ. ಈ ಕಾಯಕ ಮಾಡಲು ಅವರಿಗೆ ನಿರ್ದಿಷ್ಟ ಪ್ರದೇಶಗಳ ಮಿತಿ ಇದೆ. ಹಾಗಾಗಿ ಅವರ ಕುಲವೃತ್ತಿಯ ನೀತಿ ನಿಯಮಗಳಂತೆ ತಂಬ್ರಹಳ್ಳಿ ಪರಿಸರದಲ್ಲಿ ಹಾಡುವ ಸಾಂಸ್ಕೃತಿಕ ಹಕ್ಕುದಾರಿಕೆಯನ್ನು ಹರಪನಹಳ್ಳಿ ಬಾಲಬಸವರು ಪಡೆದುಕೊಂಡಿರುವರು. ಹಾಗಾಗಿ ತಂಬ್ರಹಳ್ಳಿ ಬಾಲಬಸವರು ಹಳ್ಳಿ ಹಳ್ಳಿಗೆ ಹೋಗಿ ಕಾಲಜ್ಞಾನ ಸಾರುವ ಕಾಯಕ ಮಾಡುತ್ತಾರೆ. ಬಾಲಬಸವರು ತಂಬ್ರಹಳ್ಳಿಗೆ ಹೋಗಿ ಕಾಲಜ್ಞಾನ ಸಾರುವ

ಕಾಯಕ ಮಾಡುವುರಿಂದ ಸುಜಾತ ಅಕ್ಕಿಯವರು ಭಿಕ್ಷೆಗಾಗಿ ಬರುವ ಜನಪದ ಕಲಾವಿದರೆಂದು ಬಾಲಬಸವರನ್ನು ಗುರುತಿಸುವ ಕಾರ್ಯ ಮಾಡುತ್ತಾರೆ.

ತಾತ್ವಿಕ ಚರ್ಚೆ :

ಸುಜಾತ ಅಕ್ಕಿಯವರು ಬಾಲಬಸವರ ಕುರಿತು ಪರಿಚಯ ಮಾಡುತ್ತಾರೆ. ಅವರ ಚಹರೆಗಳನ್ನು ತಿಳಿಸುತ್ತಾರೆ. ಅಂದರೆ ಬಾಲಬಸಪ್ಪಗಳ ವೇಷಭೂಷಣ ಕುರಿತು ಹೇಳುವಾಗ ಅವರು ಕಾವಿ ಧರಿಸಿ, ಕೈಯಲ್ಲಿ ಕಂದೀಲು ಹಿಡಿದು, ಛತ್ರಿ, ಬಲಗೈಲಿ ಉರುಗೋಲು, ಹಣೆಗೆ ವಿಭೂತಿ ಗಂಧ ಹಚ್ಚಿ ಕೊಂಡಿರುತ್ತಾರೆ ಎನ್ನುತ್ತಾರೆ.

ಬಾಲಬಸವರನ್ನು ವಚನ ಚಳುವಳಿಯ ನಂತರ ಬೆಳಕಿಗೆ ಬಂದವರು, ಅವರು ವಚನ ಚಳುವಳಿಯ ಕೊನೆಯ ಕೊಂಡಿ ಎಂದಿದ್ದಾರೆ. ಆದರೆ ವೇಷಭೂಷಣ ಮಾತ್ರ ಸಾರುವ ಐನೋರ ವಿವರಗಳನ್ನು ನೀಡುತ್ತಾರೆ. ಅಧ್ಯಯನಕಾರರು ನೀಡುವ ವಿವರಗಳು ಅಪೂರ್ಣವೆನ್ನಿಸುತ್ತದೆ. ಕೊಡೇಕಲ್ಲು ಕಾಲಜ್ಞಾನ ಸಾರುವ ಐನೋರು ಮತ್ತು ಬಾಲಬಸವರು ಸಾರುವ ಕಾಲಜ್ಞಾನದ ವಸ್ತು ಒಂದೇ ಆದರೂ, ಲಯ, ಧಾಟಿ ಮತ್ತು ವೇಷಭೂಷಣದಲ್ಲಿ ವ್ಯತ್ಯಾಸವಿದೆ. ಇದನ್ನು ಗಮನಿಸದೆ ಅಧ್ಯಯನಕಾರರು ಲಿಂಗಾಯತ ವರ್ಗದ ಸಾರುವ ಐನೋರರನ್ನು ಬಾಲಬಸವರೆಂದಿರುವುದು ಈ ಕೃತಿಯಲ್ಲಿ ಕಂಡುಬರುತ್ತದೆ. ಬಾಲಬಸವರು ಲಿಂಗ ದೀಕ್ಷೆಯಾಗಿರುವುದರಿಂದ ಅವರು ಕೈತುಂಬಾ ರುದ್ರಾಕ್ಷಿ, ಕಾವಿ ತಲೆಗೆ ರುಮಾಲು(ಕಿರೀಟ) ಕೈಯಲ್ಲಿ ತಂಬೂರಿ, ಕರ್ಣಕುಂಡಲ, ಕೊರಳಿನಲ್ಲಿ ಲಿಂಗ ಮುಂತಾದ ಪರಿಕರಗಳನ್ನು ಬಳಸುತ್ತಾರೆ. ಕೊಡೇಕಲ್ಲು ಬಸಪ್ಪನ ಪರಂಪರೆಯ ಸಾರುವ ಐನೋರರನ್ನು ಬಾಲಬಸವರೆಂದು ಕರೆದಿರುವುದು ಈ ಕೃತಿಯಲ್ಲಿ ಕಂಡುಬರುತ್ತದೆ. ಬಾಲಬಸವರ ಜೀವನ, ಸಾಹಿತ್ಯ, ಮೌಖಿಕ ಕಾವ್ಯದ ಕುರಿತು ಹೆಚ್ಚಿನ ವಿವರಗಳನ್ನು ಅವರು ನೀಡಿರುವುದಿಲ್ಲ. ಇದು ಇವರ ಮಿತಿಯಾಗಿದ್ದು ಬಾಲಬಸವರ ಕುರಿತು ನೈಜ ಸಂಗತಿಯನ್ನು ಅಧ್ಯಯನ ಮಾಡುವುದು ನನ್ನ ಸಂಶೋಧನೆಯ ಆಶಯವಾಗಿದೆ.

ಅಧ್ಯಾಯ : ೩
ಬಾಲಬಸವ ಪರಂಪರೆಯ ಚಾರಿತ್ರಿಕ ನೋಟ

ಅಧ್ಯಾಯ : ೩

ಬಾಲಬಸವ ಪರಂಪರೆಯ ಚಾರಿತ್ರಿಕ ನೋಟ

ನಾಗರಿಕತೆ ವಿಕಾಸದ ಹಂತದಲ್ಲಿ ಮನುಷ್ಯ ತನ್ನ ಜೀವನ ನಿರ್ವಹಣೆಗಾಗಿ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ವಲಸೆ ಹೋಗದೆ, ಒಂದೆಡೆಗೆ ನೆಲೆ ನಿಲ್ಲುವ ಪ್ರಯತ್ನ ಮಾಡುತ್ತಾನೆ. ಈ ಸಮಯದಲ್ಲಿ ತಾನೊಬ್ಬನೇ ನೆಲೆ ನಿಂತರೆ ಸಾಲದು, ತನ್ನೊಂದಿಗೆ ಹಲವು ಕುಟುಂಬಗಳು ಸೇರಿಕೊಂಡು ಸಹಜೀವನ ಮಾಡಬೇಕೆಂಬ ಹಂಬಲದಿಂದಾಗಿ ತನ್ನೊಂದಿಗಿದ್ದ ಜನತೆಯಲ್ಲಿ ಸಮುದಾಯಪ್ರಜ್ಞೆಯನ್ನು ಜಾಗೃತಿಗೊಳಿಸುತ್ತಾನೆ. ಇದರ ಪರಿಣಾಮವಾಗಿ ಮನುಷ್ಯನು ಸಂಘ ಜೀವಿಯಾದ. ಮುಂದೆ ಸಮುದಾಯಪ್ರಜ್ಞೆಯು ಮನುಷ್ಯನಲ್ಲಿ ಹೆಚ್ಚಾದಂತೆಲ್ಲಾ ತನ್ನ ಸಾಂಸ್ಕೃತಿಕ ಚಹರೆಗಳನ್ನು ಮತ್ತಷ್ಟು ಗಟ್ಟಿಗೊಳಿಸುವ ಪ್ರಯತ್ನ ಮಾಡುತ್ತಾನೆ. ಈ ಪ್ರಯತ್ನವೇ ಸಮಾಜದಲ್ಲಿನ 'ಸಂಸ್ಕೃತಿ' ವಿಕಾಸಕ್ಕೆ ಕಾರಣವಾಗುತ್ತದೆ. ಸಂಸ್ಕೃತಿಯು ವಿಕಾಸ ಹೊಂದುತ್ತಾ ಹೋದಾಗ ಮನುಷ್ಯನ ಜೀವನದಲ್ಲಿ ನಡೆಯುವ ಆಚಾರ-ವಿಚಾರಗಳು, ಆಚರಣೆಗಳು, ಸಂಪ್ರದಾಯಗಳು, ನಂಬಿಕೆ ಮುಂತಾದವುಗಳು ಮಾನವನ ಸಂಸ್ಕೃತಿಯಲ್ಲಿ ಬೆರತುಹೋಗುತ್ತವೆ. ಅಲ್ಲದೇ ಮನುಷ್ಯನು ಒಂದೆಡೆ ನೆಲೆ ನಿಂತಾಗ, ತನ್ನ ಜೀವನ ನಿರ್ವಹಣೆಗಾಗಿ ಒಂದು ವೃತ್ತಿಯನ್ನು ಅನುಸರಿಸುವುದರ ಮೂಲಕ ಶ್ರಮ ಸಂಸ್ಕೃತಿಗೆ ಹೆಚ್ಚಿನ ಒತ್ತು ನೀಡುತ್ತಾನೆ. ಶ್ರಮದ ಭಾಗವಾದ ದಣಿವು, ವಿಶ್ರಾಂತಿ, ತನ್ನ ಬದುಕಿನ ನೋವು-ನಲಿವುಗಳು, ಕಷ್ಟ-ಸುಖಗಳನ್ನು ಜನತೆಯೊಂದಿಗೆ ಪರಸ್ಪರ ಹಂಚಿಕೊಳ್ಳುವುದಕ್ಕೆ ತನ್ನದೇ ಆದ ಒಂದು ಮಾಧ್ಯಮವನ್ನು ಕಂಡುಕೊಳ್ಳುತ್ತಾನೆ. ತನ್ನ ಆಡು ಮಾತಿನ ಧಾಟಿಯಲ್ಲೇ ತನ್ನೊಳಗಿರುವ ಸಂಗತಿಗಳನ್ನು ಕಥನವಾಗಿ ಕಟ್ಟಿ ಹಾಡುವುದರ ಮೂಲಕ ಮತ್ತೊಬ್ಬರಿಗೆ ಹಂಚಿಕೊಳ್ಳುವುದಕ್ಕೆ ಮುಂದಾಗುತ್ತಾನೆ. ಇದೇ ಮುಂದೆ ಮೌಖಿಕ ಕಥೆ, ಕಾವ್ಯಗಳ ವಿಕಾಸನಕ್ಕೆ ನಾಂದಿಯಾಯಿತು.

ಜನಸಂಸ್ಕೃತಿಯಲ್ಲಿ ಜನಪದದ ಪ್ರಧಾನವಾದ ಕಲೆಯೆಂದರೆ ಅದು 'ಹಾಡುಗಾರಿಕೆ' ಅಥವಾ 'ಗಾಯನ'. ಜನಪದರು ಮೌಖಿಕತೆಯ ಮೂಲಕ ತಮ್ಮ ಜೀವಿತದಲ್ಲಿ ಕಂಡು ಕೇಳಿರುವ ಸಂಗತಿಗಳನ್ನು ಕಥನವಾಗಿ ಕಟ್ಟಿ ಹಾಡುವ ತಂತ್ರಗಾರಿಕೆಯನ್ನು ಮೈಗೂಡಿಸಿಕೊಂಡಿದ್ದರ ಪರಿಣಾಮವಾಗಿ

ಇಂದಿಗೂ ನಮ್ಮೊಂದಿಗೆ ಮೌಖಿಕ ಸಾಹಿತ್ಯವು ಜೀವಂತವಾಗಿದೆ. ಮೌಖಿಕ ಕಾವ್ಯ ಹಾಡುವ ಕಲಾವಿದರು ಕರ್ನಾಟಕದ ಎಲ್ಲಾ ಭೌಗೋಳಿಕ ಪ್ರದೇಶದಲ್ಲೂ ಕಂಡುಬರುತ್ತಾರೆ. ಆದರೆ ಕಥನ ಕಟ್ಟುವ, ಕಟ್ಟಿದ ಕಥೆಯನ್ನು ಕಾವ್ಯವಾಗಿ ಹಾಡುವ ಕ್ರಮಗಳಾದ ಲಯ ಮತ್ತು ತಂತ್ರಗಾರಿಕೆಗಳು ಮಾತ್ರ ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿದೆ. ಈ ರೀತಿಯಾಗಿ ಕಥೆ ಕಟ್ಟುವ ಕ್ರಿಯೆಯಲ್ಲಿ ಕೆಳವರ್ಗಗಳು, ದುಡಿಯುವ ದಲಿತ ಸಮುದಾಯಗಳ ಪಾತ್ರ ಮಹತ್ವದ್ದಾಗಿದೆ. ಈ ಕುರಿತು ಜನಪದ ವಿದ್ವಾಂಸರಾದ ವೆಂಕಟೇಶ ಇಂದ್ವಾಡಿ ಅವರು "ಮೌಖಿಕ ಕಥನಗಳನ್ನು ಕಟ್ಟುವ ಕಥನಕಾರರಲ್ಲಿ ಕೆಳವರ್ಗದವರೇ ಹೆಚ್ಚು"[1] ಎನ್ನುವ ಇವರ ಮಾತುಗಳಲ್ಲಿ ಜನಪದವು ಕೆಳವರ್ಗಗಳ ಅಥವಾ ದುಡಿಯುವ ದಲಿತ ಸಮುದಾಯಗಳಲ್ಲಿ ಜನಪದವು ಹಾಸುಹೊಕ್ಕಾಗಿರುವುದನ್ನು ಹೇಳುತ್ತಾರೆ. ಈ ಅಭಿಪ್ರಾಯವನ್ನು ಅನೇಕ ವಿದ್ವಾಂಸರು ಒಪ್ಪಿಕೊಳ್ಳುತ್ತಾರೆ. ಕೆಳವರ್ಗದವರಲ್ಲಿ ಅದರಲ್ಲಿಯೂ ದಲಿತರೇ ಮೌಖಿಕ ಕಥನಗಳನ್ನು ಹೆಚ್ಚಾಗಿ ಹಾಡುತ್ತಾರೆ. ಕರ್ನಾಟಕದಲ್ಲಿ ದೇವಗುಡ್ಡದವರು, ನೀಲಗಾರರು, ಆಸಾದಿಗಳು, ಜೋಗತಿಯರು, ಎಲ್ಲಮ್ಮನ ಪರಂಪರೆಯವರು, ಮೈಲಾರಲಿಂಗನ ಪರಂಪರೆಯವರು, ಮಾಳಿಂಗರಾಯನ ಕಾವ್ಯ ಹಾಡುವವರು, ಗಾದ್ರಿ ಪಾಲನಾಯಕನ ಕಾವ್ಯ ಹಾಡುವವರು, ಗೋಣಿಬಸಪ್ಪನ ಕಾವ್ಯ ಮತ್ತು ಮರುಳಸಿದ್ಧನ ಕಾವ್ಯ ಮುಂತಾದ ಕಾವ್ಯಗಳನ್ನು ಹೆಚ್ಚಾಗಿ ದಲಿತರೇ ಹಾಡುವುದನ್ನು ನಾವು ಕಾಣಬಹುದಾಗಿದೆ.

ಮಧ್ಯ ಕರ್ನಾಟಕದ ಭೌಗೋಳಿಕ ಪ್ರದೇಶದಲ್ಲಿ ಹಾಡುವುದನ್ನೇ ಕುಲ ವೃತ್ತಿಯನ್ನಾಗಿಸಿ ಕೊಂಡಿರುವ ಹಾಡುವ ಪರಂಪರೆಯೆಂದರೆ ಅದು ಬಾಲಬಸವ ಪರಂಪರೆ. ಇವರು ಈಗಲೂ ಹಾಡುವುದರ ಮೂಲಕವೇ ಜೀವನ ನಿರ್ವಹಿಸುತ್ತಿದ್ದಾರೆ. ಬಾಲಬಸವ ಪರಂಪರೆಯು ಮಾದಿಗ ಸಮುದಾಯದ ಒಂದು ಭಾಗವಾಗಿದೆ. ಶರಣ ಚಳವಳಿಯ ಪ್ರಭಾವಕ್ಕೆ ಒಳಗಾಗಿರುವ ಈ ಸಮುದಾಯದ ಮೌಖಿಕ ಸಾಹಿತ್ಯ ಮತ್ತು ಅವರ ಸಾಮಾಜಿಕ ಜೀವನದ ಚಾರಿತ್ರಿಕ ಅಂಶಗಳನ್ನು ಅಧ್ಯಯನ ಮಾಡುವುದು ಈ ಸಂಶೋಧನೆಯ ಮುಖ್ಯ ಉದ್ದೇಶವಾಗಿದೆ.

ಬಾಲಬಸವ ಪರಂಪರೆಯ ಚಾರಿತ್ರಿಕ ನೋಟ :

ಬಾಲ ಎನ್ನುವ ಪದದ ಅರ್ಥ ಹೀಗಿದೆ: ಹಿಂಬಾಲಿಸು, ಅನುಸರಿಸು. ಬಸವ ಎನ್ನುವುದು ನಾಮಪದ. ಬಸವ ಪದದ ಮುಂದೆ ಬಾಲ ಎನ್ನುವ ಗುಣವಾಚಕವನ್ನು ಸೇರಿಸಿದಾಗ ಅದು ಬಾಲಬಸವ ಆಗುತ್ತದೆ. ಇಲ್ಲಿ ಬಾಲ ಎನ್ನುವುದಕ್ಕೆ ಬಾಲಕ, ಕಂದ, ಶಿಶು ಮತ್ತು ಮಗು ಎನ್ನುವ ಅರ್ಥಗಳು ಸೇರಿಕೊಳ್ಳುತ್ತವೆ. ಹಾಗಾಗಿ ಬಾಲಬಸವ ಎಂದರೆ ಬಸವಣ್ಣನ ಶಿಶುಮಕ್ಕಳು ಅಥವಾ ಅನುಯಾಯಿಗಳು ಎನ್ನುವುದನ್ನು ನಾವು ಗಮನಿಸಬಹುದಾಗಿದೆ. ಜನಪದದಲ್ಲಿ 'ಬಸವನಿಂದೆ ಬಾಲ' ಎನ್ನುವ ಮಾತಿನಲ್ಲಿ ಬಾಲಬಸವ ಪರಂಪರೆಯು ಬಸವಣ್ಣನ ಅನುಯಾಯಿಗಳಾಗಿದ್ದರು ಎನ್ನುವ ಅರ್ಥದಲ್ಲಿ ವಿವರಿಸಬಹುದಾಗಿದೆ.

೩.೧. ಬಾಲಬಸವರ ಮೂಲ

ಬಾಲಬಸವರು ಯಾರು ಎನ್ನುವ ಪ್ರಶ್ನೆಗೆ ಕರ್ನಾಟಕದಲ್ಲಿ ಮೊದಲ ಬಾರಿಗೆ ಅನಂತಕೃಷ್ಣ ಅಯ್ಯರ್ ಅವರು “ಬಾಲಬಸವ ಮಾದಿಗ ಜಾತಿಯಲ್ಲೇ ಬರುವ ವಿಶಿಷ್ಟ ವ್ಯಕ್ತಿ. ತಂಬೂರಿ ಹಿಡಿದು ಊರುಗಳಿಗೆ ಭೇಟಿ ಕೊಟ್ಟು, ಬಸವ ಮತ್ತು ಹರಳಪ್ಪನ ಬಗೆಗೆ ಕಥೆಯನ್ನು ಹೇಳುವುದು ಈತನ ಕಾಯಕ”[೨] ಎಂದು ಅಭಿಪ್ರಾಯ ಪಡುತ್ತಾರೆ. ಜನಪದ ವಿದ್ವಾಂಸರಾದ ವೆಂಕಟೇಶ ಇಂದ್ವಾಡಿಯವರು “ಬಾಲಬಸವರು ಮೂಲತಃ ಮಾದಿಗ ಕುಲದವರು. ಬಸವಣ್ಣನ ದತ್ತುಪುತ್ರರೆಂದು ಕರೆದುಕೊಳ್ಳುತ್ತಾರೆ, ಬಸವಣ್ಣನ ಕಲ್ಯಾಣದ ಕ್ರಾಂತಿಯ ನಂತರ ಇವರು ತಮ್ಮ ಕುಲವೃತ್ತಿಯನ್ನು ಉಳಿಸಿಕೊಳ್ಳಲು ಅನಿವಾರ್ಯವಾಗಿ ಜೀವನಕ್ರಮವನ್ನು ಬದಲಿಸಿಕೊಳ್ಳಬೇಕಾದ ಒತ್ತಡ ಬಂದಾಗ ವೀರಶೈವ ಲಿಂಗಾಯತರಂತೆ ದೀಕ್ಷಿತರಾಗಿ ವೀರಶೈವೀಕರಣಗೊಂಡಿದ್ದಾರೆ.”[೩] ಎಂದು ಬಾಲಬಸವರ ಕುರಿತು ಹೇಳುತ್ತಾರೆ. ಹಾಗೆಯೇ ವಡ್ಡಗೇರೆ ನಾಗರಾಜ ಅವರು “ಯೋಗ ನಿದ್ರೆಗೆ ಜಾರಿ ಇಂದು ಮುಂದಾಗುವ ವಿಷಯಗಳನ್ನು ಆತ್ಮಜ್ಞಾನದಿಂದ ತಿಳಿದು ಲೋಕಕ್ಕೆ ತಮ್ಮ ಮೌಖಿಕತೆಯ ಮೂಲಕ ಸಮಾಜಕ್ಕೆ ಎಚ್ಚರಿಸುವ ಕಾಲಜ್ಞಾನಿಗಳಾಗಿದ್ದಾರೆ.”[೪] ಎಂದು ಬಾಲಬಸವರ ಬಗ್ಗೆ ತಿಳಿಸುತ್ತಾರೆ.

ವೆಂಕಟೇಶ ಇಂದ್ವಾಡಿಯವರ ಅಭಿಪ್ರಾಯವನ್ನು ಮುಂದುವರಿಸಿ ಹೇಳುವುದಾದರೆ ೧೨ನೇ ಶತಮಾನಕ್ಕಿಂತ ಪೂರ್ವದಲ್ಲಿದ್ದ ಧರ್ಮ ಮತ್ತು ಪ್ರಭುತ್ವ ಸಮಾಜದಲ್ಲಿದ್ದ ಕೆಳವರ್ಗದ ದುಡಿಯುವ ಜನತೆಯಲ್ಲಿ ಅಸಮಾನತೆಯನ್ನುಂಟು ಮಾಡಿತ್ತು. ಅದೇ ಸಮಯಕ್ಕೆ ಬಸವಣ್ಣನೂ ಸಾಮಾಜಿಕ ಬದಲಾವಣೆಗೆ ಹೆಚ್ಚು ಆಸಕ್ತಿ ವಹಿಸಿದ್ದರಿಂದ ಕೆಳವರ್ಗದ ಜನತೆಯಲ್ಲಿದ್ದ ಬದಲಾವಣೆಯ ಹಂಬಲವೂ ಮತ್ತಷ್ಟು ಹೆಚ್ಚಾಯಿತು. ಇದರ ಪರಿಣಾಮವಾಗಿ ಬ್ರಾಹ್ಮಣಶಾಹಿ ಹಿಂದೂಧರ್ಮದ ಸಾಮಾಜಿಕ ಒತ್ತಾಸೆಯಿಂದ ತಪ್ಪಿಸಿಕೊಳ್ಳಲು ಮನಸ್ಸು ಮಾಡಿದ ಈ ವರ್ಗವು ವಚನ ಚಳವಳಿಯತ್ತ ಮುಖ ಮಾಡಿತು. ಹೀಗೆ ಮುಖ ಮಾಡಿದ ಜನತೆಯಲ್ಲಿದ್ದ ಚಲನಶೀಲತೆಯನ್ನು ಒಂದುಗೂಡಿಸಿ ವೀರಶೈವ ಪಂಥವನ್ನು ಹುಟ್ಟು ಹಾಕುವಲ್ಲಿ ಅಂದಿನ ವಚನ ಚಳುವಳಿಯ ನೇತಾರರು ಯಶಸ್ವಿಯಾದರು.

ಹಿಂದೂ ಧರ್ಮದೊಳಗಿದ್ದ ಅಸಹಕಾರವನ್ನು ಪ್ರತಿರೋಧಿಸಲೆಂದೆ ದಲಿತ ವರ್ಗದ ಶಿವಶರಣರು ಪ್ರಯತ್ನ ಮಾಡಿದರು. ಪ್ರಮುಖವಾಗಿ ಮಾದರ ಚನ್ನಯ್ಯ, ಡೋಹರ ಕಕ್ಕಯ್ಯ, ಸಮಗಾರ ಹರಳಯ್ಯ, ನುಲಿಯ ಚಂದಯ್ಯ, ಬಾಲಬಸವ, ಉರಿಲಿಂಗಪೆದ್ದಿಗಳಂತಹ ಪರಂಪರೆಯು ಬಸವಣ್ಣನ ಪ್ರಭಾವ ಮತ್ತು ಆತನೊಂದಿಗಿದ್ದ ರಾಜಾಶ್ರಯದ ಮೂಲಕ ತಮ್ಮ ಬದಲಾವಣೆ ಸಾಧ್ಯ ಎನ್ನುವ ಅಭಿಪ್ರಾಯದಿಂದಾಗಿ ಅವರು ವಚನ ಚಳವಳಿಯ ಆಶ್ರಯ ಪಡೆದು ನೆಮ್ಮದಿಯಿಂದ ಬದುಕುವ ಹಂಬಲದಿಂದ ಕಲ್ಯಾಣದತ್ತ ಹೆಜ್ಜೆ ಹಾಕಿದರು. ದಲಿತರು ಕೂಡ ಇತರ ಶಿವಶರಣರಂತೆ ತಮ್ಮೊಳಗಿದ್ದ ಸ್ವ-ಅನುಭಾವಗಳ ಮೂಲಕ ವಿದ್ವತ್‌ಪೂರ್ಣ ವಚನಗಳನ್ನು ಹೇಳುವ-ಬರೆಸುವ

ಕಾರ್ಯ ಮಾಡಿದರು. ಅಲ್ಲದೆ ಬಸವತತ್ವದ ಕಾಯಕವನ್ನು ಮೈಗೂಡಿಸಿಕೊಂಡಿದ್ದರಿಂದ ಅನುಭವ ಮಂಟಪದಲ್ಲಿ ಚಿರಪರಿಚಿತರಾಗಿದ್ದರು. ಈ ರೀತಿಯಾದ ಸಾಮಾಜಿಕ ಬದಲಾವಣೆಯು ಅಂದಿನ ಪ್ರಭುತ್ವ ಮತ್ತು ಧರ್ಮ ಎರಡಕ್ಕೂ ನುಂಗಲಾರದ ತುತ್ತಾಗಿ ಪರಿಣಮಿಸಿತ್ತು. ಇದೇ ಮನಸ್ಥಿತಿಯು ಮುಂದೆ ಕಲ್ಯಾಣದ ಕ್ರಾಂತಿಗೆ ಕಾರಣವಾಯಿತು. ಕಲ್ಯಾಣದ ಕ್ರಾಂತಿಯಾದ ಬಳಿಕ ವಚನ ಚಳವಳಿಯಲ್ಲಿದ್ದ ಕೆಲವೊಂದು ಆಂತರಿಕ ಭಿನ್ನತೆಗಳು ದಲಿತ ವರ್ಗದ ವಚನಕಾರರಿಗೆ ಸಮಾಜದಲ್ಲಿ ಸಾಮಾಜಿಕ ಮನ್ನಣೆ ಸಿಗದಂತೆ ಬಹು ಎಚ್ಚರವಹಿಸಿದ್ದರಿಂದ ಪ್ರತಿರೋಧಿಸಲೆಂದೇ ಹಿಂದೂಧರ್ಮವನ್ನು ಬಿಟ್ಟು ಬಂದಿದ್ದ ದಲಿತರಿಗೆ ಮತ್ತೆ ಹಿಂದೂಧರ್ಮದ ಅಸಹಕಾರವನ್ನು ಒಪ್ಪಿಕೊಳ್ಳುವಂತೆ ಮಾಡಿತು. ಈ ರೀತಿಯ ಕ್ಲಿಷ್ಟ ಪರಿಸ್ಥಿತಿಯಲ್ಲಿ ಮತ್ತೆ ತಮ್ಮ ಮೂಲ ನೆಲೆಗೆ ಮಾದರ ಚನ್ನಯ್ಯ, ಡೋಹರ ಕಕ್ಕಯ್ಯ, ಸಮಗಾರ ಹರಳಯ್ಯ, ನುಲಿಯ ಚಂದಯ್ಯ, ಮುಂತಾದ ದಲಿತವರ್ಗದ ವಚನಕಾರರು ಹಿಂದಿರುಗಿದರು. ಆದರೆ ಬಾಲಬಸವ, ಉರಿಗಲಿಂಗಪೆದ್ದಿಯಂತಹ ಪರಂಪರೆಯವರು ಮಾತ್ರ ತಮ್ಮ ಮೂಲ ನೆಲೆಗೆ ಹಿಂದಿರುಗದೆ ಅತ್ತ ವೀರಶೈವ ಪಂಥಕ್ಕೂ ಹೋಗದೆ ಅತಂತ್ರ ಸ್ಥಿತಿಯಲ್ಲಿ ಉಳಿದುಬಿಟ್ಟರು. ಅಂದಿನಿಂದ ಇಂದಿನವರೆಗೂ ಇದೇ ಅತಂತ್ರ ಸ್ಥಿತಿಯನ್ನು ಬಾಲಬಸವ ಪರಂಪರೆಯು ಎದುರಿಸುತ್ತಿರುವುದನ್ನು ಕಾಣಬಹುದು.

ಬಾಲಬಸವರ ಮೂಲದ ಕುರಿತಂತಿರುವ ಮೌಖಿಕ ಕಥೆಗಳು

ಬಾಲಬಸವರ ಮೂಲವನ್ನು ಅಧ್ಯಯನ ಮಾಡುವಾಗ ಬಾಲಬಸವರ ಬಗ್ಗೆ ಇದುವರೆಗೆ ನಡೆದಿರುವ ಸಂಶೋಧನೆಗಳು, ಅಧ್ಯಯನಗಳು ಮತ್ತು ಆ ಪರಂಪರೆಯ ವಕ್ತಾರರು ಹೇಳಿರುವ ಮೌಖಿಕ ಕಥೆಗಳನ್ನು ಬಳಸಿಕೊಳ್ಳಲಾಗಿದೆ. ಬಾಲಬಸವರ ಮೂಲವನ್ನು ಹೇಳುವ ಮೌಖಿಕ ಕಥೆಗಳು ಈ ಪರಂಪರೆಯಲ್ಲಿವೆ. ಅವುಗಳಲ್ಲಿ ಪ್ರಧಾನವಾದವುಗಳೆಂದರೆ ಹರಪನಹಳ್ಳಿಯ ಬಾಲಬಸವ ಪರಂಪರೆಯವರು ಹೇಳಿದ ಕಥೆ, ಹೀಲದಹಳ್ಳಿ ಬಾಲಬಸವ ಹುಗ್ಗಿ ಹನುಮಂತಪ್ಪ ಹೇಳಿದ ಕಥೆ ಮತ್ತು ಕೆ.ಕೆ.ಪುರದ ಬಾಲಬಸವರ ಪರಂಪರೆಯಲ್ಲಿರುವ ಮೌಖಿಕ ಕಥೆಗಳನ್ನು ಪ್ರಮುಖವಾಗಿ ಗುರುತಿಸಬಹುದಾಗಿದೆ. ಜಾನಪದ ವಿದ್ವಾಂಸರಾದ ಅನಂತಕೃಷ್ಣ ಅಯ್ಯರ್, ವೆಂಕಟೇಶ ಇದ್ವಾಂಡಿ, ಎಲ್ಲಪ್ಪ ಕೆ.ಕೆಪುರ, ಮೈಲಹಳ್ಳಿ ರೇವಣ್ಣ, ಶಿವಾನಂದ ಕೆಳಗಿನಮನೆ, ಬಿ.ಆರ್ ಮಂಜುನಾಥ, ವಡ್ಡಗೇರೆ ನಾಗರಾಜಯ್ಯ ಮುಂತಾದವರು ಬಾಲಬಸವರ ಕುರಿತು ನಡೆಸಿರುವ ಸಂಶೋಧನೆಗಳು ಮತ್ತು ಬಾಲಬಸವ ಪರಂಪರೆಯ ಮೌಖಿಕ ಕಥೆಗಳನ್ನು ಆಧಾರವಾಗಿಸಿಕೊಂಡು ಬಾಲಬಸವರ ಚಾರಿತ್ರಿಕ ಮೂಲವನ್ನು ಚರ್ಚೆ ಮಾಡುವ ಪ್ರಯತ್ನ ಮಾಡಲಾಗಿದೆ. ಇಲ್ಲಿ ನಿರೂಪಿಸಿರುವ ಮೌಖಿಕ ಕಥೆಗಳಿಗೆ ಅಥವಾ ದಂತಕಥೆಗೆ ಯಾವ ಆಧಾರಗಳಿಲ್ಲ. ಮೌಖಿಕ ಕಥೆಗಳು ನೀಡುವ ಚಾರಿತ್ರಿಕ ಸಂಗತಿಗಳನ್ನು ಸೂಕ್ಷ್ಮವಾಗಿ ವಿವೇಚಿಸಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಕರ್ನಾಟಕದಲ್ಲಿರುವ ಬಾಲಬಸವರ ಮೂರು ಸಂಪ್ರದಾಯದಲ್ಲಿ ತಮ್ಮ ಚಾರಿತ್ರಿಕ ಮೂಲದ ಬಗ್ಗೆ ಒಮ್ಮತವಿಲ್ಲದಿರುವುದು ಕಂಡುಬರುತ್ತದೆ. ಭೌಗೋಳಿಕವಾಗಿ ಈ ಪ್ರದೇಶ ಬೇರೆ ಬೇರೆ ಕಡೆ ಇರುವುದರಿಂದ ಇವುಗಳ

ಭೌಗೋಳಿಕ ಹಿನ್ನೆಲೆಯ ನೆಲೆಯಲ್ಲಿ ಅವರ ಮೌಖಿಕ ಕಥೆಗಳು ಕೂಡ ಒಂದಕ್ಕೊಂದು ಭಿನ್ನವಾಗಿರುವುದನ್ನು ಕಾಣುತ್ತೇವೆ.

ಬಾಲಬಸವರ ಚಾರಿತ್ರಿಕ ಮೂಲ ಕುರಿತು ಹರಪನಹಳ್ಳಿ ಬಾಲಬಸವ ಪರಂಪರೆಯ ಹಿರಿಯ ಕಲಾವಿದನಾದ ಬಾಲಬಸವ ತುಮನೆಪ್ಪ ಮತ್ತು ಆತನ ಮಕ್ಕಳಾದ ಬಾಲಬಸವ ಬಸವರಾಜಪ್ಪ ಹಾಗೂ ಬಾಲಬಸವಿ ಹಾಲಮ್ಮನವರು ಹೇಳಿದ ಮೌಖಿಕ ಕಥೆ ಹೀಗಿದೆ. "ಒಮ್ಮೆ ಶಿವಶರಣನಾದ ರೇವಣಸಿದ್ಧನು, ಕೈಲಾಸದಿಂದ ಭೂಲೋಕಕ್ಕೆ, ಲೋಕಸಂಚಾರ ಮಾಡುತ್ತಾ ಹಂಪಿಯ ಮೂಲಕ ಭೂ ಲೋಕವನ್ನು ಪ್ರವೇಶ ಮಾಡುತ್ತಾನೆ. ಕಲಿ ಅಥವಾ ಭೂಲೋಕದಲ್ಲಿ ಸರ್ವ ಹನ್ನೊಂದು ಜಾತಿಯ ಮನೆಯಲ್ಲೂ ಮದುವೆಯಾದನಂತೆ. ಅದರಲ್ಲಿ ಒಂದು ಜಾತಿ ಬಿಟ್ಟಿದ್ದನಂತೆ. ಅದು ಮಾದಿಗರ ಹರಳಯ್ಯನ ಮನೆ. ಈ ಮನೆಯಲ್ಲೂ ಮದುವೆಯಾಗಬೇಕೆಂದು ಶಿವಶರಣನಾದ ರೇವಣಸಿದ್ಧನು ಜಂಗಮರ ವೇಷ ಬಿಟ್ಟು, ಸಾಮಾನ್ಯ ಮನುಷ್ಯನಂತೆ ಮಾದಿಗರ ಮನೆಯ ಮುಂದೆ ಬಂದು ನಿಂತು ಈ ಮನೆಯಲ್ಲಿ ಯಾರು ಯಾರು ಇದ್ದೀರಾ ಎಂದು ವಿಚಾರಿಸಿದನಂತೆ. ಆ ಮಾದಿಗರ ಮನೆಯಲ್ಲಿ ಅಕ್ಕಮಹಾದೇವಮ್ಮ ಮತ್ತು ಆಕೆಯ ತಾಯಿಯಾದ ಮಹಾದೇವಮ್ಮ ಇಬ್ಬರು ಮಾತ್ರ ವಾಸ ಮಾಡುತ್ತಿದ್ದರಂತೆ. ರೇವಣಸಿದ್ಧನು ಅವರ ಮನೆಯ ಮುಂದೆ ಹೋದಾಗ ಅವರು ಈತನನ್ನು ಯಾರು ನೀನು? ನಿನಗೆ ಏನು ಬೇಕೆಂದು ವಿಚಾರಿಸಿದಾಗ ಶಿವಶರಣನಾದ ರೇವಣಸಿದ್ಧನು ತನ್ನ ಹಿಂದಿನ ಎಲ್ಲಾ ಸತ್ಯವನ್ನು ಮುಚ್ಚಿಟ್ಟು, ಅವರಿಗೆ ಸುಳ್ಳು ಹೇಳುತ್ತಾನೆ. ಏನು ಅಂದ್ರೆ, ನಾನು ಅನಾಥನಮ್ಮ, ನನಗೆ ಯಾರೂ ಇಲ್ಲ. ಇರಲು ಮನೆ, ಮಠ ಏನೂ ಇಲ್ಲ ಎಂದಾಗ, ಮಹಾದೇವಮ್ಮ ಅಯ್ಯೋ ಪಾಪ ಅಂದು ತನ್ನ ಮನೆಯಲ್ಲಿ ಇರಲು ಹೇಳುತ್ತಾಳೆ. ಯಾಕೆಂದ್ರೆ ಅವಳ ಮನೆಯಲ್ಲಿ ಗಂಡು ದಿಕ್ಕಿಲ್ಲದ ಕಾರಣದಿಂದಾಗಿ ರೇವಣಸಿದ್ಧನನ್ನು ಅವರ ಮನೆಯಲ್ಲಿ ಇರಲು ಹೇಳುತ್ತಾಳೆ. ಶಿವಶರಣನಾದ ರೇವಣಸಿದ್ಧನು ಮಹಾದೇವಮ್ಮನ ಮನೆಯಲ್ಲಿ ವಾಸ ಮಾಡುತ್ತಾ, ನೀರು ನಿಪ್ಪಡಿ ತಂದು, ಕಸ ಹೊಡೆದುಕೊಂಡು ಮನೆ ಕೆಲಸ ಮಾಡಿಕೊಂಡು ಇರುತ್ತಾನೆ. ರೇವಣಸಿದ್ಧನ ಕೆಲಸ ಕಾರ್ಯಗಳನ್ನು ನೋಡಿದ ಮಹಾದೇವಮ್ಮ ತನ್ನ ಮಗಳಾದ ಅಕ್ಕಮಹಾದೇವಿಯನ್ನು ರೇವಣಸಿದ್ಧನಿಗೆ ಕೊಟ್ಟು ಮದುವೆ ಮಾಡಿಸಿದಳಂತೆ. ತಾಯಿ ಮಗಳು ಇಬ್ಬರಿಗೂ ಸತ್ಯ ಗೊತ್ತಿಲ್ಲ. ಅದು ಏನೆಂದ್ರೆ ರೇವಣಸಿದ್ಧನು ಜಂಗಮ, ಶಿವಶರಣ ಎನ್ನುವುದು. ಸತ್ಯ ತಿಳಿಯದೇ ಮಹಾದೇವಮ್ಮ ತನ್ನ ಮಗಳನ್ನು ಮದುವೆ ಮಾಡಿಕೊಟ್ಟಳು. ಅವರಿಬ್ಬರು ಸಂಸಾರ ಮಾಡುವಾಗ ಅಕ್ಕಮಹಾದೇವಿ ಗರ್ಭಿಣಿಯಾಗುತ್ತಾಳೆ. ಶಿವಶರಣನಾದ ರೇವಣಸಿದ್ಧ ಸಂಚಾರದ ನೆಪ ಹೇಳಿ ಹೊರಗೆ ಹೋಗಿರುತ್ತಾನೆ. ಹೋಗುವಾಗ "ನೋಡಮ್ಮ ನಿಮಗೆ ಏನಾದ್ರೂ ಕಷ್ಟ ಬಂದರೆ ಎಲ್ಲಿ ಇದೀಯಪ್ಪ ರೇವಣಸಿದ್ಧ ಎಂದು ಕರಿಯಮ್ಮ ನಾನು ಬಂದು ಬಿಡುತ್ತೀನಿ. ಬಂದು ನಿಮ್ಮ ಕಷ್ಟಕ್ಕೆ ಆಗುತ್ತೀನಿ ಅಂತ ಹೇಳಿ ರೇವಣಸಿದ್ಧ ಕಾಡಿಗೆ ಹೋದನಂತೆ. ಆ ಸಮಯದಲ್ಲಿ ಹಂಪಿ ಪಟ್ಟಣದಾಗ ತಿರುಗಿನ

ಮಡುವಿನಲ್ಲಿ ಡಿಲ್ಲಿ ಸುಲ್ತಾನ ಖಡ್ಗ ತುರಾಯಿಯನ್ನು ನದಿಗೆ ಇಟ್ಟಿದ್ದನಂತೆ. ಮಾಸೂರು (ತಿರುಗಿನ) ಮಡಿಗಿನ್ಯಾಗೆ ಒಳಗೆ ಇಟ್ಟು ಬಿಟ್ಟಿದ್ರಂತೆ. ಅದನ್ನು ಒಳಗೆ ರಾಕ್ಷಸರು ಹಿಡ್ಕೊಂಡು ಬಿಟ್ಟಾರಂತೆ. ನದಿಯೊಳಗೆ ಹಾಗೆ ಹಿಡಿದುಕೊಂಡು ಬಿಟ್ಟಾವೆ ರಾಕ್ಷಸರು. ರಾಕ್ಷಸರಿಗೆ ನೂರ ಒಂದು ಬಸಿರು ಹೆಣ್ಣುಮಕ್ಕಳನ್ನು ಕಡಿದು(ಕೊಂದ ಆಹಾರ) ಹಾಕಿದರೆ ಮಾತ್ರ, ಹಾರ ತುರಾಯಿ ಮ್ಯಾಕೆ ಬರುತ್ತಾವೆ, ಇಲ್ಲ ಅಂದರೆ ಅವು ಮ್ಯಾಕೆ ಬರೋದಿಲ್ಲ ಅಂದುಕೊಂಡ ಅಲ್ಲಿನ ರಾಜರು ಸೈನಿಕರು ಆಹುತಿ ಕೊಡಲು ಒಂದು ತಿಥಿ, ಮತಿ ನೋಡಿ ನೂರ ಒಂದು ಬಸಿರು ಹೆಣ್ಣುಮಕ್ಕಳನ್ನು ಹುಡುಕುತ್ತಾರೆ. ನೋಡ್ರಿ ಅಕ್ಕಮಹಾದೇವಿ ಅವಾಗ ಗರ್ಭಿಣಿಯಾಗಿದ್ದಳು. ಮಾಸೂರು ಮಡಿಗಿಗೆ ಕಡಿಯೋಕೆ ತೊಂಬತ್ತೊಂಬತ್ತು ಮಂದಿ ಬಸಿರು ಹೆಣ್ಣುಮಕ್ಕಳು ಸಿಕ್ಕಿದ್ರೂ, ಒಂದು ಕಡಿಮೆ ಬಿತ್ತು. ಅವಾಗ ಮತ್ತೇ ಯಾರು ಬಸಿರು ಇದಾರೆ ಅಂತ ಹುಡುಕುವಾಗ ಮಾದಿಗರ ಮನೆಯಲ್ಲಿ ಅಕ್ಕಮಹಾದೇವಿ ಬಸಿರು ಇರುವುದು ಗೊತ್ತಾಯಿತು. ಅಗ ಅಕ್ಕಮಹಾದೇವಿಯನ್ನು ಮಾಸೂರು ಮಡಿಗಿಗೆ ಕಡಿಯೋಕೆ ಹಿಡಕೊಂಡು ಹೋಗಕೆ ಸೈನಿಕರು ಬಂದರು. ಅವಾಗ ತಾಯಿ ಮಗಳಿಗೆ ಕಷ್ಟ ಬಂತು. ಮಹಾದೇವಮ್ಮನಿಗೆ ರೇವಣಸಿದ್ಧ ಮಾತು ಕೊಟ್ಟಿದ್ದು ನೆನಪಾಯಿತು. ನೋಡಪ್ಪ ರೇವಣಸಿದ್ಧ ಎಲ್ಲಿ ಹೋಗಿಯಪ್ಪ ಬಸಿರು ಹೆಂಗಸು ಅದ ನಿನ್ನ ಹೆಂಡತಿನ ಹಿಡಿದುಕೊಂಡು ಹೋಗುತ್ತಾರಪ್ಪ ನೀನು ಎಲ್ಲಿ ಇದೀಯಪ್ಪ ಅಂತ ಕೂಗಿದ ತಕ್ಷಣ ರೇವಣಸಿದ್ಧ ಪ್ರತ್ಯಕ್ಷನಾಗಿ ಹೆಂಡತಿ ಕೈಹಿಡಿದುಕೊಂಡಿದ್ದ ಸೈನಿಕರನ್ನು ವಿಚಾರಿಸುತ್ತಾನೆ. ಯಾಕಪ್ಪ ಬಸಿರು ಹೆಂಗಸರನ್ನ ಕಡೀತಿರಿ ಅಂತ ಎಂದು ಕೇಳಿದಾಗ, ಅವಾಗ ಅವರು ಹಿಂಗೆ ಐತಿ ನೂರು ಬಸಿರು ಹೆಂಗಸರನ್ನ ಕಡಿಬೇಕು ಈಗ ತೊಂಬತ್ತೊಂಬತ್ತು ಬಸಿರು ಹೆಂಗಸರನ್ನು ಕಡಿದೀವಿ, ಇನ್ನೊಂದು ಬಾಕಿ ಇತ್ತು. ಅದಕ್ಕೆ ಈಕಿನ ಕಡಿದರೆ, ನೂರು ಆಗುತ್ತಾವೆ. ಖಡ್ಗ ತುರಾಯಿ ಮ್ಯಾಕೆ ಬರುತ್ತವೆ. ಅದಕ್ಕೆ ಇಕೀನ ಕಡಿಯಾಕೆ ಕರಕ್ಕೊಂಡು ಹೊಂಟೀವಿ ಅಂತ ಹೇಳಿದರಂತೆ ರೇವಣಸಿದ್ಧನಿಗೆ. ಹಿಂಗೆ ಮಾಡಿದರೆ ನಾವು ದೇಶ ಹಂಚಿಕೊಳ್ಳಕೆ ಸಾಧ್ಯವಾಗುತ್ತೆ, ಇಲ್ಲ ಅಂದ್ರೆ ದೇಶ ಹಂಚಿಕೊಳ್ಳಕ್ಕೆ ಸಾಧ್ಯವಿಲ್ಲ ಅದಕ್ಕೆ ಕಡೀತೀವಿ ಅಂತ ಹೇಳಿದ್ರಂತೆ. ಸರಿ ಆಕಿನ ಬಿಡರಿ ನಾನು ನಿಮಗೆ ಆ ಖಡ್ಗ ತುರಾಯಿ ತಕ್ಕೊಡುತ್ತೀನಿ ಅಂದಾಗ, ಹುಂ ಬಾ ತಕ್ಕೊಟ್ಟರೆ ನಾವು ಯಾಕೆ ಕಡಿಯೋಣ, ನಾವು ಇಕೀನ ಏನು ಮಾಡೊಣ ಬಾ ಅಂತ ಕರೆದ್ರಂತೆ. ಆಯಮ್ಮನ ಅಲ್ಲಿ ಬಿಟ್ಟು ಹೋದ್ರಂತೆ, ರೇವಣಸಿದ್ಧ ಮಹಾದೇವ ಮಾಸೂರು ಮಡ್ಗಿನ್ಯಾಗೆ ಮುಣಿಗಿ, ಖಡ್ಗ ತುರಾಹಿ ಆ ರಾಕ್ಷಸರೆನಲ್ಲಾ ಸಂಹರಿಸಿ, ಸಂಹಾರ ಮಾಡಿ ಅದನ್ನು ತಂದುಕೊಟ್ಟನಂತೆ. ಅವಾಗ ರೇವಣಸಿದ್ಧ ಮನಿಗೆ ಬರೋವತ್ತಿಗೆ ಅಕ್ಕಮಹಾದೇವಿಯು ಗಂಡು ಮಗನ್ನ ಹಡೆದು ಬಿಟ್ಟಾಳಂತೆ, ಅವಾಗ ಮಹಾದೇವಕ್ಕ ಆಲೋಚನೆ ಮಾಡಿದಳಂತೆ ನಾವು ನೋಡಿದ್ರರೆ ಕೆರ ಹೊಲೆಯವರು, ಕಣಿ ಹೊಲೆಯುವರು ಈ ಮಗು ಜಂಗಮರಿಗೆ ಹುಟ್ಟಿದು ನಾವು ಹೆಂಡ ಕಂಡ ತಿನ್ನೋ ಜಾತಿ ನಮ್ಮದು. ಇದಕ್ಕೆ ಏನು ಬಿರುದು ಅಂತ ಅಲೋಚನೆ

ಮಾಡಿದಳಂತೆ. ರೇವಣಸಿದ್ಧ ಮನೆಗೆ ಬಂದಾಗ ಮಹಾದೇವಕ್ಕ ಹೇಳುತ್ತಾಳೆ. ನೋಡ್ರಿ ನೀವು ಜಂಗಮರು, ಶಿವಶರಣರು ನಾವು ಮಾದಿಗರು, ನಿಮಗೆ ಹುಟ್ಟಿದ ಮಗು ಈ ಕೂಸುನ ಮುಂದೆ ಏನುಮಾಡ ಬೇಕು ಹ್ಯಾಂಗೆ ಬೆಳಸಬೇಕು ನೀವೇ ಹೇಳಬೇಕೆಂದಾಗ ರೇವಣಸಿದ್ಧ ಏನು ಇಲ್ಲ ನೂರಾ ಒಂದು ಬಿರುದಾವಳಿಯೊಂದಿಗೆ ಕೂಸಿನ ನಾಲಿಗೆ ಮ್ಯಾಲೆ ಅಕ್ಷರ ಹೊಡೆದು ಬಿಟ್ಟನಂತೆ(ಬರೆದು ಬಿಟ್ಟನಂತೆ). ಏನು ಅಂತ ಬರೆದ ಅಂದರೆ ನೀನು ಏಳು ಗಂಟೆಗೆ ಕಸಿ ಕಟ್ಟಬೇಕು, ೧೨ ಗಂಟೆ ತನಕ ಊರ ಸಾರಬೇಕು, ಈತನು ಸಾರಿದ್ದು ಕಲಿಯುಗದಲ್ಲಿ ನಡೆಯಬೇಕು ಅಂದು ತನ್ನ ಬೆತ್ತದಿಂದಲೇ ಬರೆದು ಬಿಟ್ಟನಂತೆ, ಅ ಕೂಸಿನ ನಾಲಗೆ ಮೇಲೆ ಅಕ್ಷರ(ಕವಿ) ಬರೆದು ಬಿಟ್ಟನಂತ್ರಿ. ಕೂಸಿಗೆ ಲಿಂಗಧಾರಣೆ ಮಾಡಿದನಂತೆ ರೇವಣಸಿದ್ಧ. ಆ ಶಿವಶರಣ ರೇವಣಸಿದ್ಧನ ಮನೆತನದವರು. ಶಿವಶರಣ ರೇವಣಸಿದ್ಧ ಕೂಸಿಗೆ ಬಾಲಬಸಪ್ಪ ಅಂತ ಹೆಸರು ಇಟ್ಟು, ನೀನು ಬಾಲಬಸವನಾಗಿರು ಪ್ರಪಂಚದ ಮೇಲೆ ನಡಿಯಪ್ಪ ನೀವು ಸಾರುವಾಗ ಯಾರದ್ರು ತರಬಿದ್ರೆ ತಡೆದರೆ ಅವರಿಗೆ ಕತ್ತಿಗೊಬ್ಬರ ಕಲ್ಲು ಉಪ್ಪು, ಕಾಲಜ್ಞಾನ ಸಾರುವಾಗ ಸಾರುವುದನ್ನ ತಡೆದರೆ ಕಂಚಿಯಲ್ಲಿ ತಾಮ್ರ ಶಾಸನ ಇದೆ. ಅದರ ಪ್ರಕಾರ ತಡೆದಿರುವ ವ್ಯಕ್ತಿಯು ತನ್ನ ಪೂರ್ವಜರ ಒಂದು ತಲೆಗೆ ೫ ಪೈಸೆಯಂತೆ ಮೂರು ಚೀಲ ಜೋಳ ಒಂದು ಬಾಲದಾನ ಮಾಡಬೇಕು ಎಂದು ಶರತ್ತು ಇದೆಯಂತೆ.

ಇದೇ ರೀತಿ ಮುಂದೆ ಬಾಲಬಸವ ಊರಾಡುತ್ತಾ ಬಳ್ಳಾರಿಗೆ ಹೋದಾಗ ಅಲ್ಲಿ ಈತನ ಮಹಿಮೆ ನೋಡಿ ಒಂದು ದನದ ಕೊಟ್ಟಗಿಯಲ್ಲಿ ಕೂಡಿ ಹಾಕುತ್ತಾರಂತೆ. ಅಲ್ಲಿ ಪವಾಡ ಮಾಡುತ್ತಾನೆ. ದನದ ಕೊಟ್ಟಿಗೆಯಲ್ಲಿದ್ದ ಒಂದು ಬಂಡಿ ದನ ತಿನ್ನುವ ಸೊಪ್ಪೆದಂಟು ತಿನ್ನುವುದರ ಮೂಲಕ ಅವರಿಗೆ ತನ್ನ ಪವಾಡದ ಶಕ್ತಿಯನ್ನು ತೋರಿಸಿ ಅಲ್ಲಿಂದ ಹೊರಬರುತ್ತಾನೆ. ಹೀಗೆ ಬಂದು ಹರಪನಹಳ್ಳಿ ಸನ್ಯಾಸಿ ಮಠ ಸೇರಿಕೊಳ್ಳುತ್ತಾನೆ. ಮತ್ತೆ ಈ ಸನ್ಯಾಸಿ ಮಠದವರೇ ನಮ್ಮ ಪೂರ್ವಜರು ಅವರು ವಾಸ ಮಾಡಿರುವ ಸ್ಥಳವಿದು. ಇಲ್ಲಿ ಅವರು ಗುಡಿ ಕಟ್ಟಿಸಿದ್ದರು, ನೆಲಮಾಳಿಗೆ ಕಟ್ಟಿಸಿದ್ದರು. ಬಾಲಬಸಪ್ಪ ಈ ನೆಲದ ಮಾಳಿಗೆಯಲ್ಲಿ ಮಲಗಿರುವಾಗಲೇ ಗೋಣಿ ಬಸಪ್ಪನಿಗೆ ಮರಣದ ಸುದ್ದಿ ಸ್ವಪ್ನದಲ್ಲಿ ಕಂಡು ಗುರುವಿನ ಪ್ರಾಣ ಉಳಿಸೊಕೇ ಹೋಗುತ್ತಾನೆ. ಬಾಲಬಸವ ಮಾದಿಗರ ಜಾತಿಯವನಾಗಿದ್ದರಿಂದಲೇ ಅವರಿಗೆ ಮಠದೊಳಗೆ ಪ್ರವೇಶವಿರುವುದಿಲ್ಲ. ಇದರಿಂದ ತನ್ನ ನಿಜ ರೂಪವನ್ನು ಬಿಟ್ಟು ಹಾವಿನ ರೂಪದಲ್ಲಿ ಮಠದೊಳಗೆ ಹೋಗಿ ಗೋಣಿಬಸಪ್ಪನ ಪ್ರಾಣ ಉಳಿಸುತ್ತಾನೆ. ಹೀಗೆ ಪ್ರಾಣ ಉಳಿಸಿದ ಕಾರಣಕ್ಕೆ ಗೋಣಿಬಸಪ್ಪನ ಮತ್ತು ಬಾಲಬಸಪ್ಪರ ನಡುವೆ ಬಹಳ ವಿಶ್ವಾಸ ಬೆಳೆಯಿತು. ಇದರಿಂದಾಗಿ ಗೋಣಿಬಸಪ್ಪನ ಪ್ರಾಣ ಉಳಿಸಿದ ಬಾಲಬಸಪ್ಪನಿಗೆ ಕೆಲವೊಂದು ವರ ನೀಡುತ್ತಾನೆ. ಅದು ಏನೆಂದ್ರೆ, ಬಾಲಬಸವರ ಕುಟುಂಬವು ಗೋಣಿಬಸಪ್ಪನ ಮಠಕ್ಕೆ ಬಂದ್ರೆ ಒಂದು ತಿಂಗಳು, ಒಂದು ವರ್ಷ, ಒಂದು ದಿನ ಇರ್ಲಿ, ಅವರಿಗೆ ನೀನೆ ಅನ್ನ ಬುತ್ತಿ ಅಳೆಬೇಕು. ಮೂರು ವರ್ಷಕ್ಕೆ ಒಂದು ಸಾರಿ ಒಂದು

ಬಾಲದಾನ ನೀಡಬೇಕು, ನಿನ್ನ ಪರುಸೆಯಲಿ, ಜಾತ್ರೆಗೆ ಬಂದಂತಹ ಹಾಲು ಮಾಲಿನ್ಯಾಗೆ ನಾಕಾಣಿ ಭಾಗ ಕೊಡಬೇಕು ಅಂತ ಭಾಷೆ ತಗೊಂಡು ಮುಂದೆ ಬಾಲಬಸವ ಪರಂಪರೆಗೆ ಮೂಲ ಪುರುಷನಾದ."[೫] ಈ ಕಥೆಯಲ್ಲಿ ಬರುವ ಶಿವಶರಣನಾದ ರೇವಣಸಿದ್ಧರು ಬಾಲಬಸವರ ಮೂಲ ಪುರುಷನ ಹುಟ್ಟಿಗೆ ಕಾರಣವಾಗಿದ್ದಾನೆ. ಇದು ಕಾಲಜ್ಞಾನದಲ್ಲೂ ವ್ಯಕ್ತವಾಗುತ್ತದೆ. ಬಾಲಬಸವ ತುಮನೆಪ್ಪ ಕಾಲಜ್ಞಾನ ಸಾರುವಾಗ ರೇವಣಸಿದ್ಧರ ಕುರಿತು ಹೀಗೆ ಹೇಳುತ್ತಾರೆ.

> ಬಸವಣ್ಣ ಬರುವಾಗ ಹೊಸಗಾಲಿ ಆಗ್ಯಾವ್ರೀ
> ಶಿಶುವಲ್ಲ ಸಿರಿಯೇ ಹೊಸುವೆಲ್ಲಾ ಮಾತಾಡ ಬೇಕೊ...
> ಲಾಗಿ ಹೊಲಾಗಿ ಎನ್ನೀ...
> ಸಿದ್ದಾರ್ಥಿ ಮತವಾಗಿ ಶ್ರೀ ಮುಖವೇ ಕಡೆಯಾಗಿ
> ತೆಗ್ಗೆ ತೆಮ್ಮೆಗಳೆಲ್ಲಾ ಸವ ಮಾಡಿ ಹೋಗುತ್ತಾರೊ ಕೇಳಿರಣ್ಣ
> ತೆಗ್ಗೆ ತೆಮ್ಮೆಗಳೆಲ್ಲಾ ಸವ ಮಾಡಿ ಹೋಗುತ್ತಾರೊ ನೋಡಿರಣ್ಣ
> ಬಾಲಬಸವ ಮಾತು ಬಾಗಲಾಕ್ಕಲ್ಲದೆಯ್ಯ ಕೇಳಿರಣ್ಣ
> ರೇವಣಸಿದ್ಧನ ಬಿರುದು ಹೇಳಲಿಕೆ ಬಂದಿನಿ ಕಲಿಯೇ ನೋಡಿರಣ್ಣ
> ರೇವಣಸಿದ್ಧನ ಬಿರುದು ಹೇಳಲಿಕೆ ಬಂದಿನಿ ಕಲಿಯೇ ಕೇಳಿರಣ್ಣ
> ಸುಳ್ಳು ಸುಳೆಂದರೆ ಸುಳ್ಳಲ್ಲವೊ ಕಾಲಜ್ಞಾನ ನೋಡಿರಣ್ಣ
> ಸುಳ್ಳು ಸುಳೆಂದರೆ ಸುಳ್ಳಲ್ಲವೊ ಕಾಲಜ್ಞಾನ ಕೇಳಿರಣ್ಣ– **ಬಾಲಬಸವ ತುಮನೆಪ್ಪ ಬೈರೆದೇವರಗುಡ್ಡ**

ಬಾಲಬಸವರು ತಾವು ಹಾಡುವ ಮೌಖಿಕ ಸಾಹಿತ್ಯವಾದ ಕಾಲಜ್ಞಾನದಲ್ಲೂ ತಮ್ಮ ಮೂಲವನ್ನು ಸೂಕ್ಷ್ಮವಾಗಿ ಹೇಳುವುದನ್ನು ನಾವು ಗಮನಿಸಬೇಕು. ಇಲ್ಲಿ ಮೌಖಿಕ ಕಥೆಯಲ್ಲಿ ಹೇಳಿದಂತೆ ತಾವು ರೇವಣಸಿದ್ಧರು ನೀಡಿರುವ ವರ ಅಥವಾ ಬಿರುದನ್ನು ಹೇಳುವುದಕ್ಕೆ ಕಲಿಗೆ ಅಂದರೆ ಭೂಮಿಗೆ ಬಂದಿನಿ, ನೀವು ಮನಸ್ಸಿಟ್ಟು ಕೇಳಿರಿ ನಾನು ಆಡುವ ನುಡಿಯು ಸುಳ್ಳಾಗುವುದಿಲ್ಲ ಎನ್ನುವುದನ್ನು ಬಾಲಬಸವರು ತಮ್ಮ ಕಾಲಜ್ಞಾನದಲ್ಲಿ ಹೇಳುತ್ತಾರೆ. ರೇವಣಸಿದ್ಧರು ಮರುಳಸಿದ್ಧ ಮಹಾದೇವರ ಗುರು ಎನ್ನುವುದನ್ನು ಈಗಾಗಲೇ ಅನೇಕ ವಿದ್ವಾಂಸರು ಚರ್ಚಿಸಿದ್ದಾರೆ. ಬಾಲಬಸವರಿಗೆ ಮರುಳಸಿದ್ಧರು ಮತ್ತು ಗೋಣಿಬಸಪ್ಪ ಈ ಇಬ್ಬರೂ ಗುರು ದೈವಗಳು, ಅಲ್ಲದೆ ಇವರನ್ನು ತಮ್ಮ ಸಮುದಾಯದ ಸಾಂಸ್ಕೃತಿಕ ನಾಯಕರೆಂದು ಭಾವಿಸಿಕೊಂಡಿದ್ದಾರೆ. ಇವರ ಕುರಿತು ಮೌಖಿಕ ಕಾವ್ಯಗಳನ್ನು ಕಥನವಾಗಿ ಕಟ್ಟಿ ಹಾಡುವುದನ್ನು ನಾವು ಬಾಲಬಸವ ಪರಂಪರೆಯಲ್ಲಿ ಕಾಣಬಹುದಾಗಿದೆ.

ಬಾಲಬಸವ ಹುಗ್ಗ್ ಹನುಮಂತಪ್ಪ ಹೀಲದಹಳ್ಳಿಯವರು ಹೇಳಿದ ಬಾಲಬಸವರ ಮೂಲದ ಮೌಖಿಕ ಕಥೆ

ಹರಪನಹಳ್ಳಿ ಬಾಲಬಸವರು ಬಾಲಬಸವನ ಕುರಿತು ಹೇಳುವ ಕಥೆಗೂ, ಹೀಲದಹಳ್ಳಿ ಬಾಲಬಸವರು ಹೇಳುವ ಕಥೆಗೂ ಯಾವುದೇ ರೀತಿಯ ಸಂಬಂಧವಿಲ್ಲ. ಆದರೆ ಗೋಣಿಬಸಪ್ಪ ಮಾತ್ರ ಇಲ್ಲಿ ಬಾಲಬಸವರಿಗೆ ಮೂಲಪುರುಷನಾಗುತ್ತಾನೆ. ಹೀಲದಹಳ್ಳಿ ಬಾಲಬಸವ ಹುಗ್ಗ್ ಹನುಮಂತಪ್ಪ ಹೇಳಿದ ಬಾಲಬಸವನ ಕಥೆ ಹೀಗಿದೆ: "ಗೋಣಿಬಸಪ್ಪಜ್ಜ ಲೋಕ ಸಂಚಾರ ಮಾಡುತ್ತಾ ಕೂಲಹಳ್ಳಿಯಿಂದ ಹೊರಟು ಹಲವಾಗಲು ಮಾರ್ಗವಾಗಿ ಹೀಲದಹಳ್ಳಿಗೆ ಬಂದು ಭಿಕ್ಷೆ ಮಾಡುತ್ತಾ ಊರ ದೇವತೆ ಗುಡಿ ಮುಂದೆ ನಿಂದ್ರೂತ್ತಾನೆ. ಈ ಮೊದಲು ಹೀಲದಹಳ್ಳಿಗೆ ಕಂಬದಹಳ್ಳಿ ಅಂತ ಕರಿತ್ತಿದ್ದರು, ಕಾರಣ ಆ ಊರಿನ ಅಧಿದೇವತೆಯಾದ ಕಂಬದಮ್ಮ, ಅವಳ ಹೆಸರಿನಿಂದಲೇ ಆ ಹಳ್ಳಿ ಕಂಬದಹಳ್ಳಿಯಾಗಿತ್ತು. ಈ ಊರಿಗೆ ಗೋಣಿಬಸಪ್ಪಜ್ಜ ಬಂದು ಊರ ಮುಂದೆ ನಿಂತು ಭಿಕ್ಷೆ ಕೇಳುವಾಗ, ಊರಿನ ಜನತೆಯು ಈತನನ್ನು ಗಮನಿಸದೆ ಭಿಕ್ಷೆ ನೀಡದೆ ಇರುವಾಗ, ಗೋಣಿಬಸಪ್ಪಜ್ಜನು ಕಂಬದಮ್ಮನ ಗುಡಿ ಮುಂದೆ ಬಂದು ಕುಳಿತುಕೊಳ್ಳುತ್ತಾನೆ. ಅದೇ ಮಾರ್ಗವಾಗಿ ಕೇರಿಯಿಂದ ನಾಲ್ಕು ಜನ ಯಜಮಾನರು ದೇವಸ್ಥಾನದ ಹತ್ತಿರ ಬಂದ್ರೂ, ಅಲ್ಲೇ ಕುಳಿತುಕೊಂಡಿದ್ದ ಗೋಣಿ ಬಸಪ್ಪಜ್ಜನನ್ನು ನೋಡಿದರೂ, ಸ್ವಾಮಿಗಳನ್ನು ವಿಚಾರಿಸಿದ್ರೂ, "ದೇವ ಮಹಾಪ್ರಭು ನಿಮ್ಮದು ಯಾವ ಊರು? ನೀವು ಯಾರು? ಇಲ್ಲಿಗೆ ಏಕೆ? ಬಂದಿರಿ" ಅಂತ ಸ್ವಾಮಿಗಳನ್ನು ಕೇಳಿದ್ರೂ, ಅವಾಗ ಸ್ವಾಮಿಗಳು 'ಏನರಪ್ಪ ನನ್ನ ಹೆಸರು ಗೋಣಿಬಸಪ್ಪಂತ ಕರಿತ್ತಾರಾ, ನಮ್ಮದು ಕೂಲಹಳ್ಳಿ ಕ್ಷೇತ್ರವೆಂದ' ಇದನ್ನು ನೋಡಿದ ಊರಿನ ಯಜಮಾನರು "ನೋಡಪ್ಪ ಸ್ವಾಮಿಗಳೇ ನಿಮಂತರೂ ನೂರು ಜನ ಬರುತ್ತಾರೆ, ನೂರು ಜನ ಹೋಗುತ್ತಾರೆ. ನಮ್ಮ ಕೇರಿಯಲ್ಲಿ ಬಹಳ ದಿವಸಗಳಿಂದ ಒಂದು ಗೊಡ್ಡಿಗೆ ಬಿದ್ದ ಆಕಳು ಇದೆ. ಅದು ಕರು ಹಾಕುವಂತೆ ಮಾಡಿಬಿಟ್ರೆ, ನಿಮ್ಮಂತಹ ಜಂಗಮರು, ಮಹಾಶರಣರು ಈ ಲೋಕದಲ್ಲಿ ಇಲ್ಲವಂತೆ ಅಂತ ಒಪ್ಪಿಕೊಳ್ಳುತ್ತೀವಿ ಸ್ವಾಮಿಗಳೇ ಅಂತ ಹೇಳಿದರು. ಆಗ ಗೋಣಿಬಸಪ್ಪ ಇಲ್ಲೊಂದು ಪವಾಡ ತೊರಿಸಬೇಕೆಂದು ಮನಸ್ಸಿನಲ್ಲಿ ಅಂದುಕೊಂಡು ಅವರಿಗೆ ಹೇಳಿದ. ಹೋಗ್ರಪ್ಪ ಆ ಆಕಳು ಹಿಡಕ್ಕೊಂಡು ಬರೀ ಅಂತ ಹೇಳಿದಾಗ ಆ ಊರಿನ ಮುಖಂಡರಾದ ನಾಲ್ಕು ಜನರು ಆಕಳು ಹಿಡಕ್ಕೊಂಡು ಬರೋಕೆ ಹೋದ್ರು, ಅವತ್ತು ಆ ಆಕಳು ಏನೂ ಮಾಡಿದ್ರು ಎದ್ದು ಬರೊಕೆವಲ್ಲದು, ಮುಂದೆ ಬಂದರೆ ಹಾಯುದು, ಹಿಂದೆ ಬಂದ್ರೆ ವದೆಯೋದು ಮಾಡುತ್ತಿತ್ತು. ಏನೂ ಮಾಡಿದ್ರೂ ಬರೊಕೆವಲ್ಲದು ಕಾಲಿಗೆ ಹಗ್ಗ ಹಚ್ಚಿಕ್ಕೊಂಡು ಜುಲಿಮಿಯಿಂದ ಎಳಕ್ಕೊಂಡು ಬರೊಕ ಹಚ್ಚಿದ್ರು. ಅವಾಗ 'ಗಾವು' ದೂರ ಇರುವಾಗಲ್ಲೇ ವರವು ಕುರುವು ತಿಳಿದಿದ್ದ ಗೋಣಿ ಬಸಪ್ಪಜ್ಜನಿಗೆ ಅರಿಕೆ ಆಯಿತು. ಆವಾಗ ಗುಡಿ ಬಾಗಿಲಿಗೆ ಬಂದು ನಿಂತು ಆಕಳ ಕಡೆಗೆ ಹಸ್ತ ಮಾಡಿ ತೋರಿಸ್ಸಿದಾ, ಹಸ್ತ ಅಂದು ಆ ನಾಲ್ಕು ಜನರಿಗೆ ಹೇಳಿದ, ಕೈ ಬಿಡ್ರಪ್ಪ ಆಕಳನಾ ಅಂತ ಅಂದು 'ಬಾ

ಗೋ ಮಾತೆಯೆಂದು' ಈತ ಏನು ನೀರು ಹಾಕಿದತ್ತಾಲ್ಲ, ಮೇವು ಹಾಕಿದತ್ತಾಲ್ಲ ಆದ್ರೂ ಅಜ್ಜ ಕೈ ಮಾಡಿ ಕರೆದಾಗ, ಕೆರೆಯೊತ್ತಿಗೆ ಹಠಮಾಡುತ್ತಿದ್ದ ಆಕಳು ಸಮ್ಮನೆ ಬಂತು. ಆ ಆಕಳ ಮೇಲೆ ಕೈಯಿಟ್ಟು ಗೋ ಮಾತೆ ನೀ ಕೆಲವೆ ದಿವಸಗಳಲ್ಲಿ ನೀ ಗರ್ಭಧರಿಸುತ್ತಿಯಾ, ಅದು ಗಂಡು ಕರುವಿಗೆ ಜನ್ಮ ನೀಡುವೆ ಎಂದು ಕೈ ಸವರಿ ತನ್ನ ಜೋಗಳಿಯಲ್ಲಿದ್ದ ವಿಭೂತಿ ತೆಗೆದು ಆಕಳಿನ ಬಾಯಿಯೊಳಗೆ ಹಾಕಿದ. ಆ ಕ್ಷಣದಿಂದಲ್ಲೇ ಆಕಳಿಗೆ ಗರ್ಭಧಾರಣೆ ಪ್ರಾರಂಭವಾಯಿತು. ಅವಾಗ ಗೋಣಿಬಸಪ್ಪಜ್ಜ ಅಲ್ಲಿನ ಯಜಮಾನರಿಗೆ ಹೇಳಿದ "ನೋಡ್ರಪ್ಪ ನಾನು ಹೋಗಿ ಎಂಟು ತಿಂಗಳು ಬಳಿಕ ಈ ಆಕಳು ಗರ್ಭದಿಂದ ಗಂಡು ಕರು ಜನಿಸುತ್ತೆ, ಅವಾಗ ನೀವು ಈ ಆಕಳಿನ ಗಿಣ್ಣದ ಹಾಲು ತಗ್ಗೊಂಡು, ನೀವು ನಾಲ್ಕು ಮಂದಿ ಕೂಲಹಳ್ಳಿ ಕ್ಷೇತ್ರಕ್ಕೆ ಬನ್ನಿ ನಿಮಗೊಂದು ಆಜ್ಞೆ ನೀಡುತ್ತೇನೆ ಅಂತ ಹೇಳಿ ಅಜ್ಜ ಮುಂದಿನ ಊರಿಗೆ ಹೋದ. ಗೋಣಿಬಸಪ್ಪಜ್ಜ ಹೋಗಿ ಎಂಟು ತಿಂಗಳು ಕಳೆದ ಬಳಿಕ, ಆಕಳು ಗಂಡು ಕರುವಿಗೆ ಜನ್ಮ ನೀಡಿತು. ಹೋರಿ ಕರನೇ ಆಯ್ತು. ಆವಾಗ ಗಿಣ್ಣದ ಹಾಲು ಕರಕ್ಕೊಂಡು ಆ ನಾಲ್ಕು ಜನ ಕೂಲಹಳ್ಳಿ ಕ್ಷೇತ್ರಕ್ಕೆ ಬಂದ್ರೂ, ಅವಾಗ ಗೋಣಿಬಸಪ್ಪಜ್ಜ ಮದ್ದಾನೇಶ್ವರ ಮಠದ 'ಸದರಿ' ಮುಂದೆ ಕುಳಿತುಕೊಂಡಿದ್ದ. ಕಂಬದಹಳ್ಳಿಯ ಈ ಜನತೆಯು "ದೇವಾ ನಿಮ್ಮ ಆರ್ಶಿವಾದದ ಬಲದಿಂದ ನಮ್ಮ ಊರಿನ ಪಟ್ಟ ಮೀರಿದ ಆಕಳು ಸಂತಾನ ಪ್ರಾಪ್ತಯಾಗಿದೆ. ದೇವಾ ನೀವು ಹೇಳಿದ್ದಂತೆ ಗಿಣ್ಣದ ಹಾಲು ತಂದ್ದೀವಿ ಅಂತ ಅವರ ಮುಂದೆ ಇಟ್ಟರು, ಅವಾಗ ಗೋಣಿ ಬಸಪ್ಪಜ್ಜ ನೀವು ಪುಣ್ಯಕ್ಷೇತ್ರಕ್ಕೆ ಬಂದಿದ್ದರಿಂದ ಹಿಂದೆ ನಿಮ್ಮ ಊರು ಕಂಬದಹಳ್ಳಿ ಅಂತ ಮುಂದೆ ಹೆಸರು ಚಿರಕಾಲವಾಗಿರಲಿ, ಅಲ್ಲದೆ ಬಾಲದ ಕರು ಹುಟ್ಟಿದ್ದರಿಂದ ನೀವು ಬಾಲಬಸವರೆಂಬ ಹೆಸರಿನಿಂದ ಆಗಮಿಸಿ ನೀವೂ ಯಾರದ ಮನಿ ಮುಂದೆ ನಿಂತು ಬಸವಣ್ಣವೆಂದು ನಾಮಸ್ಮರಣೆ ಮಾಡಿದಾಗ ನಿಮಗೆ ಯಾರು ಇಲ್ಲವೆಂದು ನಿಮ್ಮನ್ನ ದಯಪಾಲಿಸಿ ನಿಮ್ಮನ್ನ ಕರುಣೆಯಿಂದ ನೋಡಿಕೊಳ್ಳಬೇಕು ಅಂತ ಅವರಿಗೆ ಆರ್ಶೀವಾದ ಮಾಡಿದ. ಕಂಬದಹಳ್ಳಿಯಲ್ಲಿದ ಕಂಬದಮ್ಮ ದೇವತೆಯ ಹೆಸರು ಉಳಿದು ಆ ದೇವಸ್ಥಾನದಲ್ಲಿ ಕಂಬದಮ್ಮನ ಗದ್ದುಗೆ ಬಳಿಯಲ್ಲಿ ಗೋಣಿಬಸಪ್ಪನ ಮೂರ್ತಿ ಮಾಡಿ ಅದಕ್ಕೆ ನೀವೆ ಪೂಜೆ ಮಾಡಿ ಅಂತ ಹೇಳಿ ಕಳಿಸಿದ. ಅದನ್ನು ಈಗಲೂ ನಾವೇ ಬಾಲಬಸವರೇ ಕಂಬದಮ್ಮನಿಗೂ ಗೋಣಿಬಸಪ್ಪನಿಗೂ ಪೂಜೆ ಮಾಡುತ್ತೀವಿ, ಆ ನಾಲ್ಕು ಕೇರಿಯ ಯಜಮಾನರ ಮಕ್ಕಳೆ ಇವತ್ತು ನಲವತ್ತು ಮನೆಗಳಾಗಿವೆ, ಅವರೆಲ್ಲರು ಬಾಲಬಸವರೇ, ಅವರು ಕಾಲಜ್ಞಾನದಿಂದಲೇ ಜೀವನ ಮಾಡುತ್ತಿದ್ದಾರೆ."[೬] ಎಂದು ಅವರು ಹೇಳಿದ ಕಥೆಯಲ್ಲಿ ಗೋಣಿಬಸಪ್ಪನು ಈ ಭಾಗದಲ್ಲಿ ಸಂಚಾರ ಮಾಡುವ ಸಮಯದಲ್ಲಿ ತೋರಿದ ಪವಾಡ ಮತ್ತು ಪವಾಡ ಮಾಡಲು ಪ್ರೇರಣೆ ನೀಡಿದ ಜನತೆಗೆ ಕಾಲಜ್ಞಾನ ಸಾರುವ ಕಾಯಕ ನೀಡುತ್ತಾನೆ. ಇದರಿಂದಾಗಿ ಹೀಲದಹಳ್ಳಿ ಸುತ್ತ ಮುತ್ತ ಇರುವ ಬಾಲಬಸವರು ಗೋಣಿಬಸಪ್ಪನನ್ನು ಹೆಚ್ಚು ಆರಾಧಿಸುತ್ತಾರೆ. ಅವರ ಮೌಖಿಕ ಸಾಹಿತ್ಯವಾದ ಕಾಲಜ್ಞಾನದಲ್ಲೂ ಅದನ್ನು ನಾವು ಕಾಣಬಹುದಾಗಿದೆ.

ಹೀಲದಹಳ್ಳಿ ಬಾಲಬಸವ ಹುಗ್ಗ್ ಹನುಮಂತಪ್ಪ ಹಾಗೂ ಮಂಡರಘಟ್ಟದ ಬಾಲಬಸವ ನಾಗೇಂದ್ರಪ್ಪ ಹಾಡು ಕಾಲಜ್ಞಾನದ ಆರಂಭದಲ್ಲಿ ಗೋಣಿಬಸಪ್ಪನನ್ನು ಸ್ತುತಿ ಮಾಡುವ ಕಾಲಜ್ಞಾನ ಈ ರೀತಿಯಾಗಿದೆ.

ಧರ್ಮ ಎದ್ದು ಕೂಗುತ್ತೈತೆ
ಅಂಬೈಯರ ಜನರಿಗೆ ಪ್ರಗತಿ ಹೋಗಿ ಹೊಂದಿದೆ
ಒಲಿದವರಿಗೆ ಒಲಿದಯ್ಯ ಒಲ್ಲಪ್ಪ ಹರನೀನು
ಅಲ್ಲಾ ತುಂಬದ ಗೋಣಿ
ಮುತ್ತು ತುಂಬದ ಗೋಣಿ
ಮಾಣಿಕ್ಯ ತುಂಬದ ಗೋಣಿ
ಗಟ್ಟಿಯುಳ್ಳ ಸೇಳೆಯಾಗಿ ಕಟ್ಟೆ ಕಟ್ಟಿದ ಗೋಣಿ
ಗೋಣಿಯೊಳಗೆ ನೀ ಹುಟ್ಟಿದೆ ಗೋಣಿಬಸವನಾಗಿದ್ದೆ
ಕಾವಿಯಾಗ ಹುಟ್ಟಿದೆ
ಕಾಡ ಬೇಡನಾಗಿದೆಂತ ಅಂತನಾ.
ಪಕೀರ ಇದ್ದು ಊರನಾದೆ ಮೇಲೆ ವಿರಕ್ತನಾಗಿದೆ
ನಿಂದಕರ ಕೊಂಡಾಡಿ
ಎಂದು ಉರಿಯಲಾರದೆ ತಂದೆ ಗೋಣಿಬಸವಣ್ಣ
ತುಂಬಿದ ಹೊಳೆಯಲ್ಲಿ ನಿಜವಾದೆ
ಎದ್ದುವಾದೆ ಎದ್ದುವಾದಂತೆ
ಉತ್ತಮ ಸಾಲಿಗಳು ಮಾತು ಹೊನ್ನ ಬಿತ್ತಿ ಬೆಳೆದಂತೆ
ಬಿತ್ತುವ ಬೀಜದಂತೆ ಸತ್ಯದ ಬಳ್ಳಿ ಉಳತ್ತೈತೆ
ಕೋಟಿಗೊಬ್ಬ ಭಕ್ತರು ಕುಲಕ್ಕೊಬ್ಬ ಶರಣರು
ಈ ಕಲಿಗೆ ಉಳಿತ್ತಾರಾ
ಕುರುವಿಗೆ ಕೂಲಹಳ್ಳಿ
ವರವಿಗೆ ಹೀಲದಹಳ್ಳಿ
ಇರದ ಮನಿಮಾರು
ಕೊಟ್ಟೂರಯ್ಯನ ಗುರುವಾರ

ಗುರುವಾರದೊಳು ಗೋಣಿ
ಕುರುವು ಇರುವುದು
ಗುಮ್ಮಗಳ ತೀರ್ಪುಗಳನ್ನ
ಸತ್ಯ ಪರೀಕ್ಷೆಯಾದ ಕಾಲ ಅಂತನಾ-**ಬಾಲಬಸವ ಹುಗ್ಗಿ**
ಹನುಮಂತಪ್ಪ ಹೀಲದಹಳ್ಳಿ

ಬೂದಿಮುಚ್ಚಿದ ಕೆಂಡ ಭೂತಾಯಮ್ಮನಾ
ಸಿದ್ದಿರಿಗೆ ಶ್ರೀಗುರುವೆ ಸಿದ್ದೇಮನ ಮೂರ್ತಿ
ಚಿಕ್ಕಬಲ್ಲೇ ಮಹಾದೇವ ಸಿರಗು ಬಲ್ಲೇ
ಕಕ್ಷೆ ಬಿದ್ದ ಬಲ್ಲೇ ಕಾಣು ಮಹಾಂತದೇವನು
ತುಂಬಿದ ಹೊಳೆಯಲಿ ಕಂದ ಗದ್ದಿಗೆ ಮಾಡಿದಯ್ಯಾ
ಸಂಗಣ್ಣ ಮೊದಲಾಗಿ ಮಿದಲಾಗಿ ಹೋದಯ್ಯಾ
ಮಾತು ಮಲ್ಲಿಗೆ ಗಣನೋ ನೋಟ ನಲಿವಿ ಗಣನೋ
ಹಿಂದುಕು ಬರುವಾದೀ ಮಿಂಡನೋ ದುಸುಮಾನೋ ಹೀಚಿ ಗಂಡನೋ
ವೈರಿ ಮಿಂಡನಯ್ಯ ತಂದೆ ಬಸವ ದಂಡ
ಅಲ್ಲೇ ಕಲ್ಲು ನೂಲು ಸಣ್ಣೇ
ಗಂಗನರಸಿ ಗಂಗಯ್ಯ ಗಂಗ ಗೋಣೆಪ್ಪ
ಗೋಣಿಪ್ಪ ಕೂಲಹಳ್ಳಿ ನೂಲು ಚನ್ನಪ್ಪ
ಗಚ್ಚಿನ ಮಟ್ಟದ ಅನ್ನ ಹೋತ್ತನಯ್ಯ
ಮಾಯಮಠದ ಮಲ್ಲಿಗೇರಿ
ವರವಿನೋ ಬಾಲಯ್ಯ ಅರಿವಿನೋ ಗೋಣಿಯ್ಯ
ಕಂಬದ ಕರಿಯಮ್ಮ ತುಂಬಿನ ಗಂಗಮ್ಮ- **ಬಾಲಬಸವ ನಾಗೇಂದ್ರಪ್ಪ,**
ಮಂಡರಘಟ್ಟ

ಬಾಲಬಸವ ಪರಂಪರೆಗೆ ಕಾಲಜ್ಞಾನವನ್ನು ಸಾರುವುದಕ್ಕೆ ಅನುವು ಮಾಡಿಕೊಟ್ಟ ಗೋಣಿಬಸಪ್ಪನನ್ನು ಸ್ಮರಿಸುವ ಈ ಕಲಾವಿದರು ತಮ್ಮ ಸ್ವಾಮಿನಿಷ್ಠೆಯನ್ನು ಅವರ ಮೌಖಿಕ ಸಾಹಿತ್ಯದ ಮೂಲಕ ಅಭಿವ್ಯಕ್ತಿಪಡಿಸುವುದನ್ನು ಇಲ್ಲಿ ಕಾಣಬಹುದಾಗಿದೆ.

ಕೆ.ಕೆ.ಪುರದ ಬಾಲಬಸವರ ಪರಂಪರೆಯಲ್ಲಿರುವ ಕಥೆಗಳು

೧. ಬಾಲಬಸವರ ಮೂಲದ ಕುರಿತಾಗಿ ಪುರಾಣ, ದಂತಕಥೆ ಮತ್ತು ಐತಿಹ್ಯಗಳಿವೆ. ಕಲ್ಯಾಣದ ಕ್ರಾಂತಿಯಾದ ಬಳಿಕ ಅಧರ್ಮ ಹೆಚ್ಚಾಯಿತು. ಆಗ ಶಿವ ನಂದಿಯನ್ನು ಬಾಲಬಸವನ ರೂಪದಲ್ಲಿ ಭೂಮಿಗೆ ಕಳಿಸಿ ಕಲಿಯುಗವಿರುವ ತನಕ ಧರ್ಮ ಪ್ರಚಾರಕನಾಗಿರು, ಉದರ ಪೋಷಣೆಗಾಗಿ ತಂಬೂರಿ, ಕಾವಿ, ರುದ್ರಾಕ್ಷಿ ಜೋಳಿಗೆಗಳಿವೆ ಎಂದು ಹೇಳಿ ಕಳಿಸಿದ್ದನೆಂಬ ಪುರಾಣದ ಕಥೆಯಿದೆ.

೨. ಶ್ರೀ ಗೋಣಿಬಸವೇಶ್ವರ ಚರಿತ್ರೆಯಲ್ಲಿ ಬರುವ ಮಹಾತಪಸ್ವಿಗೂ, ಹರಪನಹಳ್ಳಿಯ ಪಾಳೇಗಾರನಿಗೂ ಹುಟ್ಟಿದ ಮಗುವೇ ಈ ಬಾಲಬಸವರ ಮೂಲಪುರುಷನೆಂಬ ಪ್ರಸ್ತಾಪವಿದೆ. ಕೈಯಲ್ಲಿ ತಂಬೂರಿ ಹಿಡಿದ ತ್ರಿಲೋಕ ಸಂಚಾರಿಯಾದ ನಾರದ ಮುನಿಗಳ ಮಾನಸ ಪುತ್ರರೇ ಈ ಬಾಲಬಸವರು ಎನ್ನುವ ಐತಿಹ್ಯವಿದೆ.

೩. ಆದಿಜಾಂಬವ ಮುನಿಯ ಏಳನೇ ಬಾಲಮುನಿಯ ಮಗನ ವಂಶಸ್ಥರೆಂದೂ, ಶಿವಶರಣ ಹರಳಯ್ಯನ ಕೊನೆಯ ಸಂತತಿಯೇ ಬಾಲಬಸವರೆಂಬ ಹಲವು ದಂತಕಥೆಗಳು ಬೇರೆ ಬೇರೆ ಊರು ಕೇರಿಗಳಲ್ಲಿ ಪ್ರಚಲಿತದಲ್ಲಿವೆ. ಅಲ್ಲದೆ ಕೆಲವೊಂದು ಸಂಶೋಧನೆಗಳು ಇವರ ಮೂಲವನ್ನು ಮರುಳಸಿದ್ಧನ ಮೂಲಕ್ಕೂ ಕರೆದೊಯ್ದಿದ್ದಾರೆ. ದಂತಕಥೆ, ಪುರಾಣ, ಐತಿಹ್ಯ ಊಹೆಗಳು ಏನೇ ಇದ್ದರೂ ಬಾಲಬಸವರು ಮಾತ್ರ ಶಿವಶರಣರು. ೧೨ನೇ ಶತಮಾನದಲ್ಲಿದ್ದ ಬಸವಣ್ಣನ ಅನುಯಾಯಿಗಳೆಂಬುದು ಅವರ ವಾಸ್ತವಿಕ ಜೀವನದಿಂದ ತಿಳಿದುಬರುತ್ತದೆ.

ಕೆ.ಕೆ.ಪುರದ ಬಾಲಬಸವ ಪರಂಪರೆಯ ಕಾಲಜ್ಞಾನದಲ್ಲೂ ಬಸವ ಸ್ತುತಿಯನ್ನು ಕಾಣಬಹುದು. ಬಸವಣ್ಣನೇ ತಮ್ಮ ಎಲ್ಲಾ ಕಾರ್ಯಗಳಿಗೆ ಆದಿ ದೈವ. ಆತನಿಂದಲೇ ನಾವು ಈ ಕಾಲಜ್ಞಾನವನ್ನು ಸಾರುವುದು ಎನ್ನುವ ಬಾಲಬಸವ ಕೆ.ಆರ್. ಬಸವರಾಜ ಅವರು ಹಾಡಿದ ಕಾಲಜ್ಞಾನವು ಹೀಗಿದೆ.

ಬಸವನೇ ಅಜ್ಜ ಬಸವನೇ ಅಜ್ಜೀ ॥ಪ॥
ಬಸವನೇ ತಾಯಿ ಬಸವನೇ ತಂದೆ
ಬಸವನೇ ಬಂಧು, ಬಸವನೇ ಬಳಗವು
ಅಣ್ಣ ಬಸವನು ತಮ್ಮನು ಬಸವನು
ನಡೆ ತಪ್ಪು ನುಡಿ ತಪ್ಪು ನುಡಿಯುವ ನಾಲಗೆ ತಪ್ಪು
ಸರ್ವ ತಪ್ಪುಗಳಾ ಪಾದದೊಳಗೆಯಿಟ್ಟುಕೊಳ್ಳಾಪ್ಪಾ
ಮುಪ್ಪಿನ ಮುದಿಗೋಣಿ ಅಪ್ಪಾ ಸಂಗನ ಬಸವ॥ಪ॥ **–ಬಾಲಬಸವ ಬಸವರಾಜಪ್ಪ ಕೆ.ಆರ್.**

ಕೆಕೆ.ಪುರದ ವ್ಯಾಪ್ತಿಯಲ್ಲಿನ ಬಾಲಬಸವರ ಕಥೆಗಳು ಮತ್ತು ಕಾಲಜ್ಞಾನದಲ್ಲಿ ಬಸವಣ್ಣ, ರುದ್ರಮುನಿಗಳು ಮತ್ತು ಜಾಂಬವ ಮುನಿಗಳನ್ನು ತನ್ನ ದೈವಗಳನ್ನಾಗಿಸಿಕೊಂಡಿರುವುದು ಕಾಣಬಹುದಾಗಿದೆ. ಇಲ್ಲಿನ ಬಾಲಬಸವರು ಹಿರಿಯೂರಿನ ಕೋಡಿಮಠದೊಂದಿಗೆ ಹೆಚ್ಚು ಒಡನಾಟವನ್ನು ಇಟ್ಟುಕೊಂಡಿರುವುದು ಕಂಡುಬರುತ್ತದೆ. ಅಲ್ಲದೆ ಬಾಲಬಸವರು ಕೋಡಿಮಠದ ಗುರು ಪರಂಪರೆಯೊಂದಿಗೆ ವೈವಾಹಿಕ ಸಂಬಂಧಗಳನ್ನು ಬೆಳೆಸಿದ್ದಾರೆ. ಇದರಿಂದಾಗಿ ಇವರು ರುದ್ರಮುನಿ ಸ್ವಾಮಿಗಳ ಕಾಲಜ್ಞಾನವನ್ನು ಹೆಚ್ಚಾಗಿ ಹಾಡುತ್ತಾರೆ.

೩.೨. ಬಾಲಬಸವರ ಸಾಂಸ್ಕೃತಿಕ ಹಕ್ಕುದಾರಿಕೆಯ ಸ್ಥಳಗಳು ಮತ್ತು ಅವುಗಳೊಂದಿಗಿನ ಸಾಂಸ್ಕೃತಿಕ ಸಂಬಂಧಗಳು

ಕರ್ನಾಟಕದಲ್ಲಿ ಬಾಲಬಸವರ ಸಾಂಸ್ಕೃತಿಕ ಹಕ್ಕುದಾರಿಕೆಯ ಸ್ಥಳಗಳೆಂದರೆ, ಬಳ್ಳಾರಿ ಜಿಲ್ಲೆ ಕೂಡ್ಲಿಗಿ ತಾಲ್ಲೂಕು ಬೈರದೇವರಗುಡ್ಡ, ಹರಪನಹಳ್ಳಿ, ಗದಗ ಜಿಲ್ಲೆ ಹರ್ಲಾಪುರ, ಹಾವೇರಿ ಜಿಲ್ಲೆ ಹೀಲದಹಳ್ಳಿ, ಚಿತ್ರದುರ್ಗ ಜಿಲ್ಲೆ ಕೆ.ಕೆ. ಪುರ, ರಾಮಘಟ್ಟ, ದಾವಣಗೆರೆ ಜಿಲ್ಲೆ ಚನ್ನಗಿರಿ ತಾಲ್ಲೂಕು ಮಂಡರಘಟ್ಟ, ಇಟ್ಟಗಿ, ಹೊನ್ನಾಳಿ ತಾಲ್ಲೂಕು ಗಂಜನಹಳ್ಳಿ, ನ್ಯಾಮತಿ, ಹರಿಹರ ತಾಲ್ಲೂಕು ದೊಗ್ಗಳ್ಳಿ ಮತ್ತು ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲ್ಲೂಕು ನೇರಲಕೆರೆ, ಲಕ್ಕವಳ್ಳಿ ಮುಂತಾದ ಪ್ರದೇಶಗಳು ಬಾಲಬಸವರ ವಾಸಸ್ಥಾನಗಳು. ಈ ಪ್ರದೇಶಗಳಲ್ಲಿ ಇವರು ತಮ್ಮದೇ ಆದ ವಿಶಿಷ್ಟ ಸಾಂಸ್ಕೃತಿಕ ಹಕ್ಕುದಾರಿಕೆಯನ್ನು ಪಡೆದುಕೊಂಡಿರುತ್ತಾರೆ. ಅದಕ್ಕೆ "ಜಾಹಗೀರಿ" ಎನ್ನುವರು. ಜಾಹಗೀರಿ ಎಂದರೆ ತಮ್ಮ ಪೂರ್ವಜರು ನಿಗದಿ ಮಾಡಿದ ಪ್ರದೇಶವೆಂದು ಅರ್ಥ. ಈ ಪ್ರದೇಶದಲ್ಲಿ ಬಾಲಬಸವರು ಊರಾಡುವ ಕಾಯಕ ಮಾಡಬೇಕು, ಇನ್ನೊಬ್ಬ ಬಾಲಬಸವರು ಈ ಪ್ರದೇಶಗಳಿಗೆ ಬರುವಂತಿಲ್ಲೆಂಬ ನೀತಿ ನಿಯಮಗಳಿವೆ. ಈ ಹಳ್ಳಿಗಳು ಅವರ ಸಾಂಸ್ಕೃತಿಕ ಹಕ್ಕುದಾರಿಕೆ ಸ್ಥಳಗಳಾಗಿವೆ. ಇವರು ಸಾಮಾನ್ಯವಾಗಿ ಸುಗ್ಗಿಕಾಲದಲ್ಲಿ ಊರಾಡುವ ಕಾಯಕ ಮಾಡುತ್ತಾರೆ. ಬಾಲಬಸವರು ಬಸವಯುಗದ ಶರಣತತ್ವದ ಕಾಯಕ ಪರಿಕಲ್ಪನೆಯಲ್ಲಿ ಬೆಳೆದು ಬಂದವರು. ಕಾಲಜ್ಞಾನ ಸಾರುವ ಕಾಯಕ ಮಾಡುವುದರ ಮೂಲಕವೇ ಜೀವನ ನಿರ್ವಹಿಸುತ್ತಿದ್ದಾರೆ.

ಬೈರದೇವರಗುಡ್ಡದ ಬಾಲಬಸವ ಪರಂಪರೆಯಲ್ಲಿರುವ ಬಾಲಬಸವ ತುಮನೆಪ್ಪವರನ್ನು ಕ್ಷೇತ್ರಕಾರ್ಯದಲ್ಲಿ ಸಂದರ್ಶನ ಮಾಡಿದಾಗ ಅವರು ನಮ್ಮ ಈ ಮನೆತನಕ್ಕೆ ೮೭೦೦ ಹಳ್ಳಿಗಳನ್ನು ನಮಗೆ ಜಾಹಗೀರು ನೀಡಿದ್ದಾರೆ ಎಂದರು. ತಕ್ಷಣ 'ಜಾಹಗೀರು' ಎಂದರೇನು? ಎಂಬ ಪ್ರಶ್ನೆ ಹಾಕಿದೆ. ಅದಕ್ಕೆ ಬಾಲಬಸವ ತುಮನೆಪ್ಪನವರು "ನಾವು ಕಾಲಜ್ಞಾನ ಸಾರುವ ನಿರ್ದಿಷ್ಟ ಪ್ರದೇಶಗಳು, ಬಳ್ಳಾರಿ ಜಿಲ್ಲೆಯಲ್ಲಿ ಬರುವ ಸುಮಾರು ೮೭೦೦ ಹಳ್ಳಿಗಳಲ್ಲಿ ನಮ್ಮ ಮನೆತನದವರು ಮಾತ್ರ ಸುಗ್ಗಿ ಕಾಲದಲ್ಲಿ ವರ್ಷಕ್ಕೊಮ್ಮೆ ಕಾಲಜ್ಞಾನ ಸಾರಬೇಕು ಮತ್ತೆ ಬೇರೆ ಯಾರೂ ಇಲ್ಲಿ ಕಾಲಜ್ಞಾನ ಸಾರುವಂತಿಲ್ಲ, ಈ ನಿಯಮವನ್ನು ನಮ್ಮ ಪೂರ್ವಜರು ಮಾಡಿಕೊಂಡು ಬಂದಿದ್ದಾರೆ ಅದನ್ನು ನಾವು ಮುಂದುವರಿಸಿಕೊಂಡು ಹೋಗುತ್ತಿದ್ದೇವೆ. ಈ ಹಳ್ಳಿಯ ರೈತರು, ಕೃಷಿ ಕೆಲಸ

ಮಾಡುವರು, ಶೆಟ್ಟರು, ಊರಿನ ಎಲ್ಲಾ ವರ್ಗದ ಜನರು ಭಿಕ್ಷೆ ರೂಪದಲ್ಲಿ ನೀಡುವ ದವಸ ಧಾನ್ಯಗಳಿಂದ ನಾವು ಜೀವನ ಮಾಡುತ್ತೇವೆ. ಒಮ್ಮೆ ನುಡಿದದ್ದನ್ನು ಮತ್ತೊಮ್ಮೆ ನುಡಿಯುವುದಿಲ್ಲ. ಒಂದು ಊರು ಕೇರಿಯಲ್ಲಿ ಸಾರಿದ ವಾಕ್ಯವನ್ನು ಮತ್ತೊಂದು ಊರುಕೇರಿಯಲ್ಲಿ ಮತ್ತೆ ಉಚ್ಚರಿಸುವುದಿಲ್ಲ. ದೀಕ್ಷೆ ಪಡೆದುಕೊಂಡಿರುವ ಪ್ರತಿಯೊಬ್ಬ ಬಾಲಬಸವರು ಕಡ್ಡಾಯವಾಗಿ ಕಾಲಜ್ಞಾನವನ್ನು ಕಲಿಯುತ್ತೇವೆ. ಇದರಲ್ಲಿ ಪುರುಷ ಅಥವಾ ಮಹಿಳೆ ಎನ್ನುವ ಭೇದಭಾವಗಳಿಲ್ಲ. ಕಿವಿಗೆ ಕರ್ಣಕುಂಡಲಗಳನ್ನು ಧರಿಸಿ, ಕೆಂಪು ಪೇಟವನ್ನು ತಲೆಗೆ ಕಟ್ಟಿಕೊಂಡು ರುದ್ರಾಕ್ಷಿಮಾಲೆ ಮತ್ತು ಲಿಂಗಧಾರಣೆ ಮಾಡಿಕೊಂಡು, ತಂಬೂರಿಯನ್ನು ಹೆಗಲಿಗೆ ಹಾಕಿಕೊಂಡು ಕಾಲಜ್ಞಾನ ಸಾರುತ್ತೇವೆ. ಕಾಲಜ್ಞಾನವನ್ನು ಮಧ್ಯಾಹ್ನದವರೆಗೆ ಮಾತ್ರ ಸಾರುತ್ತೇವೆ. ಬೇರೆ ಯಾವ ಸಂದರ್ಭದಲ್ಲೂ ಇದನ್ನು ಸಾರುವುದಿಲ್ಲ."[೬] ಎನ್ನುವ ಬಾಲಬಸವ ತುಮನೆಪ್ಪನವರ ಮಾತುಗಳಲ್ಲಿ ತಮ್ಮ ಸಂಪ್ರದಾಯವು ತನ್ನದೇ ನೀತಿ ನಿಯಮಗಳನ್ನು ಪಾಲಿಸಿಕೊಂಡು ಬಂದಿರುವುದನ್ನು ತಿಳಿಯಬಹುದಾಗಿದೆ. ತಮ್ಮ ಜೀವನಕ್ಕೂ ತಾವು ವಾಸ ಮಾಡುವ ಭೌಗೋಳಿಕ ಪದ್ರೇಶಕ್ಕೂ ಅವಿನಾಭಾವ ಸಂಬಂಧವಿದೆ ಎಂಬುದು ಇವರು ಹೇಳಿದ ಮಾತುಗಳಿಂದ ತಿಳಿದುಬರುತ್ತದೆ.

ಬಳ್ಳಾರಿ ಜಿಲ್ಲೆ ಹರಪನಹಳ್ಳಿ, ಕೂಡ್ಲಿಗಿ ತಾಲ್ಲೂಕಿನ ಬೈರದೇವರಗುಡ್ಡ, ಸಂಡೂರು ತಾಲ್ಲೂಕಿನ ಬೊಮ್ಮಗಟ್ಟ, ಚಿತ್ರದುರ್ಗ ಜಿಲ್ಲೆ ಕೆ.ಕೆ.ಪುರ, ರಾಮಘಟ್ಟ, ಗದಗ ಜಿಲ್ಲೆ ಹರ್ಲಾಪುರ, ಹಾವೇರಿ ಜಿಲ್ಲೆ ಹೀಲದಹಳ್ಳಿ, ದಾವಣಗೆರೆ ಜಿಲ್ಲೆ ಚನ್ನಗಿರಿ ತಾಲ್ಲೂಕಿನ ಮಂಡರಘಟ್ಟ, ಇಟ್ಟಗಿ, ಹೊನ್ನಾಳಿ ತಾಲ್ಲೂಕಿನ ಗಂಜನಹಳ್ಳಿ, ನ್ಯಾಮತಿ, ಹರಿಹರ ತಾಲ್ಲೂಕು ದೊಗ್ಗಳ್ಳಿ ಈ ಪ್ರದೇಶಗಳಲ್ಲಿರುವ ಬಾಲಬಸವರ ಭಕ್ತರು, ಗೋಣಿ ಬಸಪ್ಪನ ಒಕ್ಕಲಿನವರು, ಕೃಷಿ ಸಮುದಾಯದವರ ಬಾಲಬಸವರ ಜೀನವ ನಿರ್ವಹಣೆಗಾಗಿ ಕೃಷಿದಾನ ಅಥವಾ ಭಿಕ್ಷೆ ದಾನ(ದವಸ-ಧಾನ್ಯಗಳನ್ನು), ಮೂರು ವರ್ಷಕ್ಕೊಮ್ಮೆ ಬಾಲದಾನ, ಮದುವೆಯ ಸಮಯದಲ್ಲಿ ವಸ್ತ್ರದಾನ ಮತ್ತು ಬೆಳಕುದಾನ ನೀಡುತ್ತಾರೆ.

ಕೃಷಿಗೆ ಸಂಬಂಧಿಸಿದ ದಾನ :

ಬಾಲಬಸವರಿಗೆ ಈ ಕೃಷಿಗೆ ಸಂಬಂಧಿಸಿದ ದಾನವು ಅವರ ಜೀವನ ನಿರ್ವಹಣೆಯಲ್ಲಿ ತುಂಬಾ ಮಹತ್ವದ ಪಾತ್ರ ವಹಿಸುತ್ತದೆ. ಬಾಲಬಸವರು ಸ್ವಂತ ಕೃಷಿ ಭೂಮಿಯನ್ನು ಹೊಂದಿಲ್ಲ. ಇವರು ಕಾಲಜ್ಞಾನ ಸಾರಲು ತಿಂಗಳುಗಟ್ಟಲೇ ಊರೂರು ತಿರುಗುವುದರಿಂದ ಇವರಿಗೆ ಕೂಲಿ ನಾಲಿ ಮಾಡಲು ಸಾಧ್ಯವಾಗುತ್ತಿಲ್ಲ. ಈ ಕಾರಣಕ್ಕಾಗಿ ಹಳ್ಳಿ ಮತ್ತು ನಗರಗಳಲ್ಲಿರುವ ರೈತರು ತಮ್ಮ ಹೊಲದಲ್ಲಿ ಬೆಳೆದಿರುವ ಅಕ್ಕಿ, ರಾಗಿ, ಜೋಳ, ನವಣೆ, ಸಜ್ಜೆ, ಕಡಲೆ, ತೆಂಗಿನ ಕಾಯಿ, ಅಡಕೆ, ಸಾಂಬಾರು ಕಾಳು ಮುಂತಾದ ಎಲ್ಲಾ ಬಗೆಯ ದವಸ ಧಾನ್ಯಗಳನ್ನು ದಾನದ ರೂಪದಲ್ಲಿ ನೀಡುತ್ತಾರೆ. ಇವುಗಳಿಂದ ಈ ಪರಂಪರೆಯವರು ತಮ್ಮ ಜೀವನ ನಡೆಸಿಕೊಂಡು ಬರುವುದನ್ನು ಹೀಲದಹಳ್ಳಿ ಬಾಲಬಸವರು, ಹರಪನಹಳ್ಳಿ ಬಾಲಬಸವರು, ರಾಮಘಟ್ಟದ ಬಾಲಬಸವರು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಿಳಿಸಿದ್ದಾರೆ.

ಬಾಲದಾನ

ಬಾಲಬಸವರ ಕಾಲಜ್ಞಾನದಿಂದಾಗಿ ಕೃಷಿಕರು ಮತ್ತು ಪಶುಪಾಲಕರು ವರ್ಷದ ಮಳೆ, ಬೆಳೆ ಹೇಗಿದೆ ಯಾವ ಪೈರಿಗೆ ಹೆಚ್ಚಿನ ಬಲವಿದೆ. ಈ ವರ್ಷದಲ್ಲಿ ಯಾವ ಯಾವ ಬಾಲದ ಜೀವಿಗಳಿಗೆ ತೊಂದರೆಯಾಗುವುದು ಎನ್ನುವ ವಿಚಾರಗಳನ್ನು ತಿಳಿದುಕೊಳ್ಳುತ್ತಾರೆ. ಇದಕ್ಕೆ ಪ್ರತಿಯಾಗಿ ಮೂರು ವರ್ಷಕ್ಕೊಮ್ಮೆ ಅಥವಾ ಆರು ವರ್ಷಕ್ಕೊಮ್ಮೆ ಇವರು ಬಾಲದಾನ ಮಾಡುತ್ತಾರೆ. ಬಾಲದಾನ ಎಂದರೆ ಬಾಲವಿರುವ ಜೀವಿಗಳಾದ ಹಸು, ಎಮ್ಮೆ, ಕುರಿ ಮತ್ತು ಮೇಕೆ ಮುಂತಾದ ಪಶುಗಳನ್ನು ದಾನವಾಗಿ ನೀಡುವುದು. ಮಧ್ಯ ಕರ್ನಾಟಕದಲ್ಲಿ ಹೆಚ್ಚಾಗಿ ಪಶುಪಾಲನೆ ಮಾಡುವುದರಿಂದ ಅವರ ಮನೆಯಲ್ಲಿನ ಒಂದು ಬಾಲದ ಜೀವಿಯನ್ನು ಬಾಲಬಸವರಿಗೆ ದಾನದ ರೂಪದಲ್ಲಿ ನೀಡುವುದು ವಾಡಿಕೆಯಾಗಿ ಬೆಳೆದುಬಂದಿದೆ. ಪಶುಪಾಲಕರು ಅದರಲ್ಲಿ ಗೊಲ್ಲರು, ಕುರುಬರು, ಲಿಂಗಾಯತರು, ನಾಯಕರು ತಮ್ಮ ಮನೆಯಲ್ಲಿ ದನಕರು, ಕುರಿ, ಆಡು ಮುಂತಾದ ಹೈನುಗಾರಿಕೆಯ ಬಾಲದ ಜೀವಿಗಳನ್ನು ದಾನವಾಗಿ ನೀಡುತ್ತಾರೆ. ಇದರಿಂದಾಗಿ ಬಾಲಬಸವರ ಮನೆಯಲ್ಲಿ ಹಾಲು ಮಾಲು ಇರುವುದಕ್ಕೆ ಇವರು ಸಹಾಯ ಮಾಡುತ್ತಾರೆ.

ಮದುವೆಯ ಸಮಯದಲ್ಲಿ ವಸ್ತ್ರದಾನ ಮತ್ತು ಬೆಳಕುದಾನ

ಬಾಲಬಸವರು ಊರಾಡುವ ಕಾಯಕ ಮಾಡುತ್ತಿರುವ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಬಾಲಬಸವರ ಕುಲ ದೇವರುಗಳಾದ ಮರುಳಸಿದ್ಧರು ಮತ್ತು ಗೋಣಿಬಸಪ್ಪನ ಒಕ್ಕಲಿನವರ ಮನೆಯಲ್ಲಿ ಮದುವೆ ಕಾರ್ಯ ಕೈಗೊಂಡಾಗ ಆ ಸಮಯದಲ್ಲಿ ಬಾಲಬಸವರಿಗೆ ವಸ್ತ್ರದಾನ ಮತ್ತು ಬೆಳಕುದಾನ ಮಾಡುವಂತೆ ಕೇಳುತ್ತಾರೆ. ಕೃಷಿಕರು ತಮ್ಮ ಯೋಗ್ಯತೆಗೆ ತಕ್ಕಂತೆ ವಸ್ತ್ರದಾನ ಮತ್ತು ಬೆಳಕುದಾನ ಮಾಡುತ್ತಾರೆ. ವಸ್ತ್ರದಾನ ಎಂದರೆ ಹೊಸಬಟ್ಟೆ ಕೊಡಿಸುವುದು, ಬೆಳಕುದಾನ ಎಂದರೆ ಒಂದು ಕುಟುಂಬವು ಜೀವಿಸಲು ಅವಶ್ಯಕತೆ ಇರುವ ಅಡುಗೆ ಮಾಡುವ ಎಲ್ಲಾ ಸಾಮಾನುಗಳನ್ನು ಕೊಡಿಸುವುದೆಂದರ್ಥ. ಬಾಲಬಸವರು ಸಮಾಜದಲ್ಲಿ ತಮ್ಮದೇ ಆದ ಸಾಂಸ್ಕೃತಿಕ ಜವಾಬ್ದಾರಿಯನ್ನು ನಿರ್ವಹಿಸುವುದರಿಂದ ಸಮಾಜವು ಅವರ ಕುಟುಂಬ ನಿರ್ವಹಣೆಯ ಸಲುವಾಗಿ ಮೇಲಿನ ಈ ಎಲ್ಲಾ ದಾನಗಳನ್ನು ಕಾಲಕಾಲಕ್ಕೆ ನೀಡುತ್ತಾ ಬಂದಿವೆ. ಆಧುನಿಕತೆಯ ಪ್ರವೇಶದಿಂದಾಗಿ ಇತ್ತೀಚಿನ ದಿನಗಳಲ್ಲಿ ಈ ರೀತಿಯ ದಾನ ನೀಡುವುದು ಕಡಿಮೆಯಾಗಿದೆ.

೩.೩. ಸಾಮಾಜಿಕ ವ್ಯವಸ್ಥೆ ಮತ್ತು ಬಾಲಬಸವರ ಪರಂಪರೆ

ಅ. ಬಾಲಬಸವರ ದೀಕ್ಷೆಯ ವಿಧಾನ

ಬಾಲಬಸವ ಪರಂಪರೆಯಲ್ಲಿ ದೀಕ್ಷೆಗೆ ಅತ್ಯಂತ ಪ್ರಮುಖವಾದ ಸ್ಥಾನವಿದೆ. ಇವರ ಮನೆಯಲ್ಲಿ ಹುಟ್ಟಿದ ಪ್ರತಿ ಮಕ್ಕಳಿಗೂ ಕಡ್ಡಾಯವಾಗಿ ಲಿಂಗದೀಕ್ಷೆ ನೀಡುವುದು ವಾಡಿಕೆ. ಬಾಲಬಸವರು ವೀರಶೈವ ಧರ್ಮವನ್ನು ಹೆಚ್ಚು ಅನುಸರಿಸುವರು. ಅವರ ವಿಧಿ-ವಿಧಾನಗಳು,

ಆಚರಣೆಗಳು ವೀರಶೈವ ಧರ್ಮದ ಪದ್ಧತಿಗಳನ್ನೇ ಹೆಚ್ಚಾಗಿ ಹೋಲುತ್ತವೆ. ಲಿಂಗಧಾರಣೆ ಅಥವಾ ದೀಕ್ಷೆ ಇಲ್ಲದೆ ಬಾಲಬಸವರು ಯಾವುದೇ ಮಂಗಳ ಕಾರ್ಯದಲ್ಲಿ ಭಾಗವಹಿಸುವಂತಿಲ್ಲ ಎಂಬ ನೀತಿ ನಿಯಮಗಳಿವೆ. ಈ ಪರಂಪರೆಯಲ್ಲಿ ಲಿಂಗಭೇದವಿಲ್ಲದೆ ಗಂಡು-ಹೆಣ್ಣು ಮಕ್ಕಳಿಗೂ ಲಿಂಗದೀಕ್ಷೆ ನೀಡುತ್ತಾರೆ. ಇವರಲ್ಲಿ ಹೆಣ್ಣು-ಗಂಡುಗಳೆಂಬ ಭೇದಭಾವವಿಲ್ಲ. ೧೨ರಿಂದ ೧೮ರ ವರ್ಷದೊಳಗಿನ ಮಕ್ಕಳಿಗೆ ದೀಕ್ಷೆ ನೀಡುತ್ತಾರೆ. ಗಂಡು-ಹೆಣ್ಣುಗಳೆರಡು ಸಮವೆಂದು ಸಾರುವುದನ್ನು ಬಾಲಬಸವ ಪರಂಪರೆಯವರು ಮೈಗೂಡಿಸಿಕೊಂಡಿದ್ದಾರೆ. ಬಾಲಬಸವರಿಗೆ ಲಿಂಗದೀಕ್ಷೆ ಎನ್ನುವುದು ಅವರ ಮದುವೆಯಷ್ಟೇ ಮಹತ್ವದ್ದಾಗಿದೆ. ಬಾಲಬಸವರು ಮಾದಿಗ ಕುಲಕ್ಕೆ ಗುರು ಸ್ಥಾನದಲ್ಲಿರುವುದರಿಂದ ಇವರನ್ನು ಮಾದಿಗರು ಪೂಜ್ಯನೀಯವಾಗಿ ಕಾಣುತ್ತಾರೆ. ಇವರ ಆಚಾರ-ವಿಚಾರ, ನಡೆ-ನುಡಿಗಳು, ಬುದ್ಧಿ ವಿದ್ಯೆಯಿಂದಲೂ ಸಾಮಾಜಿಕ ಮನ್ನಣೆ ಸಿಗಬೇಕೆಂದರೆ ಅವರಿಗೆ ಲಿಂಗದೀಕ್ಷೆಯಾಗಿರಬೇಕು. ದೀಕ್ಷೆಯನ್ನು ಸಾಮೂಹಿಕವಾಗಿ ಇಲ್ಲವೇ ಸ್ವಂತ ಖರ್ಚಿನಲ್ಲಿ ಮಾಡುವ ರೂಢಿ ಸಂಪ್ರದಾಯವಿದೆ. ದೀಕ್ಷೆ ನೀಡುವ ಮಠಗಳು, ಪ್ರದೇಶಗಳು ಬೇರೆ ಬೇರೆಯಾದರೂ ಅವರ ದೀಕ್ಷೆ ವಿಧಿ-ವಿಧಾನಗಳು ಸಾಮೀಪ್ಯತೆಯಿಂದ ಕೂಡಿದೆ.

ದೀಕ್ಷೆ ಪಡೆದುಕೊಳ್ಳುವ ಬಾಲಬಸವರು ವೀರಶೈವ ಧರ್ಮದ ಆಚರಣೆಯ ವಿಧಿ-ವಿಧಾನಗಳ ಪ್ರಕಾರ ನೆತ್ತಿಯಲ್ಲಿ ಸ್ವಲ್ಪ ಕೂದಲು ಬಿಟ್ಟು ಗಡ್ಡ-ಮೀಸೆ ಉಳಿದಂತೆ ಕೂದಲು ಬೋಳಿಸಿಕೊಳ್ಳಬೇಕು. ತಲೆಗೆ ಎಣ್ಣೆ, ತುಪ್ಪ, ಪಂಚಾಮೃತದ ಅಭ್ಯಂಜನ ಸ್ನಾನ ಮಾಡಿ, ನಕ್ಷತ್ರ, ತಿಥಿ, ವಾರ, ರಾಹುಗಳಿಗೆ ಅನುಗುಣವಾಗಿ ಕಾವಿಯ ವಸ್ತ್ರವನ್ನು ಧರಿಸಬೇಕಾಗುತ್ತದೆ. ಮನೆ ದೇವರು, ಗುರುಗಳು, ಬಾಲ ಬಸವ ಗುರುಗಳು ಈ ಲಿಂಗಧಾರಣೆಯಲ್ಲಿ ಭಾಗವಹಿಸಬೇಕಾಗುತ್ತದೆ. ಇವರ ಸಮ್ಮುಖದಲ್ಲಿಯೇ ಅವರ ಅಮೃತಹಸ್ತದಿಂದ ಕೊಡಲಾದ ಈಶ್ವರ ಲಿಂಗವನ್ನು ಎಡಗೈಯಲ್ಲಿ ಹಿಡಿದುಕೊಳ್ಳಬೇಕು. ಗುರುಗಳು ಸೂಚಿಸಿದಂತೆ ಪೂಜೆ, ವ್ರತ, ನೇಮ-ನಿಯಮಗಳು ಜರಗುತ್ತವೆ. ಗುರುಗಳು ಬಾಲಬಸವರಿಗೆ ಗೌಪ್ಯ ಮಂತ್ರೋಪದೇಶವನ್ನು ನೀಡುತ್ತಾರೆ.

'ಓಂ ನಮಃ ಶಿವಾಯ' ಪಂಚಾಕ್ಷರಿ ಮಂತ್ರೋಪಚಾರ ಮಾಡುತ್ತಾರೆ. ಗೌಪ್ಯವಾಗಿ ಬಾಲಬಸವರ ಕಿವಿಯಲ್ಲಿ ವಿಧಿ-ವಿಧಾನಗಳನ್ನು ಹೇಳುತ್ತಾರೆ. ದೀಕ್ಷೆಯಾದ ನಂತರ ಅವರು ಪರಿಪೂರ್ಣ ಬಾಲಬಸವರಾಗುತ್ತಾರೆ. ಊರಾಡಲು ಸಿದ್ಧರಾಗುತ್ತಾರೆ. ಅವರಿಗೆ ಕಾಲಜ್ಞಾನ ಸಾರುವುದಕ್ಕೆ ಬೇಕಾದ ತಂಬೂರಿ, ಕರ್ಣಕುಂಡಲ, ರುದ್ರಾಕ್ಷಿ, ವಿಭೂತಿ, ಕಾವಿ, ದಪನಿ ಚಂದನದ ಜೋಳಿಗೆಗಳನ್ನು ನೀಡುತ್ತಾರೆ. ಈ ಸಮಯದಲ್ಲಿ ಅಲ್ಲಿರುವ ಜನತೆಗೆ ಬಾಲಬಸವರ ಆರ್ಥಿಕತೆಗೆ ಅನುಗುಣವಾಗಿ ಪ್ರಸಾದ ನೀಡುತ್ತಾರೆ.

ಬಾಲಬಸವ ಒಬ್ಬ ವ್ಯಕ್ತಿಯಾಗಿದ್ದರೂ ದೀಕ್ಷೆಯಾದ ನಂತರ ಅವರು ಬಾಲಬಸವರಾಗುತ್ತಾರೆ. ಹಾಗೆಯೇ ಅವರನ್ನು 'ಬಾಲಬಸವರು' ಎಂದು ಬಹುವಚನದಲ್ಲಿಯೇ ಕರೆಯುತ್ತಾರೆ. ಕಾಯಕತತ್ವಕ್ಕೆ ಲಿಂಗದೀಕ್ಷೆ ದಾರಿಯಾಗಿದೆ. ಈ ಕ್ರಿಯೆಯು ೧೨ನೇ ಶತಮಾನದಲ್ಲಿ ಬಸವಣ್ಣ ಕೆಳವರ್ಗದ ಶ್ರಮಿಕ

ಸಮುದಾಯಗಳಿಗೆ, ದಲಿತರಿಗೆ ಈ ದೀಕ್ಷೆ ನೀಡಿದ್ದರಿಂದ ಅವರು ತಮ್ಮ ಕಾಯಕತತ್ವಗಳಲ್ಲಿ ಹೆಚ್ಚು ಹೆಚ್ಚು ತೊಡಗಿಸಿಕೊಳ್ಳುವುದಕ್ಕೆ ಸಹಾಯಕವಾಯಿತು. ಅದೇ ಪ್ರಧಾನ ಆಶಯವನ್ನು ಹೊಂದಿರುವ ಈ ಬಾಲಬಸವ ಪರಂಪರೆಯು ವಚನ ಚಳವಳಿಯ ಕಾಯಕ ತತ್ವವನ್ನು ಇಂದಿಗೂ ಜೀವಂತವಾಗಿಸಿ ಕೊಂಡು ಬಂದಿದೆ. ಲಿಂಗದೀಕ್ಷೆಯಾದ ಬಾಲಬಸವರು ಕಾಲಜ್ಞಾನ ಸಾರುವುದಕ್ಕೆ ಅರ್ಹತೆ ಪಡೆದುಕೊಳ್ಳುತ್ತಾರೆ. ಅವರು ತಂಬೂರಿ ನುಡಿಸುತ್ತಾ, ಕಾವಿ ಧರಿಸಿಕೊಂಡು ಕಾಲಜ್ಞಾನವನ್ನು ಊರೂರು ಸಾರುವ ಕಾಯಕ ಮಾಡಿಕೊಂಡು ತಮ್ಮ ಜೀವನ ನಡೆಸುತ್ತಾರೆ.

ಬಾಲಬಸವರ ಪರಂಪರೆಯು ಪ್ರಾದೇಶಿಕವಾಗಿ ಭಿನ್ನವಾಗಿರುವುದರಿಂದ ಅವರ ದೀಕ್ಷೆ ವಿಧಿ-ವಿಧಾನವು ಅಲ್ಲಿನ ಸ್ಥಳೀಯ ಗುರುಮಠಗಳು ನೀಡುವ ದೀಕ್ಷೆ ಕಾರ್ಯಕ್ರಮಗಳಲ್ಲಿ ಅಲ್ಪಸ್ವಲ್ಪ ಬದಲಾವಣೆಗಳನ್ನು ಕಾಣಬಹುದಾಗಿದೆ. ದೀಕ್ಷೆ ನೀಡುವ ಪ್ರಮುಖ ಗುರುಮಠಗಳೆಂದರೆ ಹರಪನಹಳ್ಳಿ ಬೈರದೇವರಗುಡ್ಡದ ಬಾಲಬಸವರಿಗೆ ಉಜ್ಜನಿಯ ಶ್ರೀಮರುಳಸಿದ್ಧರ ಮಠದಲ್ಲಿ ದೀಕ್ಷೆ ನೀಡುತ್ತಾರೆ. ಗದಗ ಜಿಲ್ಲೆಯ ಹರ್ಲಾಪುರದ ಬಾಲಬಸವರು ಗದುಗಿನ ತೋಂಟದಾರ್ಯ ಮಠದಲ್ಲಿ ದೀಕ್ಷೆ ಪಡೆಯುತ್ತಾರೆ. ಹಾವೇರಿಯ ಹೀಲದಹಳ್ಳಿಯ ಬಾಲಬಸವರು ಅಲ್ಲಿಯೇ ಶ್ರೀ ಗೋಣಿ ಬಸಪ್ಪನ ಗುಡಿಯಲ್ಲಿ ದೀಕ್ಷೆ ಪಡೆಯುತ್ತಾರೆ. ಕೆ.ಕೆ.ಪುರದ ಬಾಲಬಸವರು ಹಿರಿಯೂರಿನ ಶ್ರೀ ಕೋಡಿಮಠದ ಜಾಂಬವಮುನಿ ಮಠದಲ್ಲಿ ದೀಕ್ಷೆ ಪಡೆದುಕೊಳ್ಳುತ್ತಾರೆ. ಹೊಳಲ್ಕೆರೆ, ರಾಯಘಟ್ಟ, ಮಂಡರಘಟ್ಟ, ದೂಗ್ಗಹಳ್ಳಿ, ಗಂಜನಹಳ್ಳಿ, ನ್ಯಾಮತಿ ಮುಂತಾದ ಕಡೆ ವಾಸವಿರುವ ಬಾಲಬಸವರು ಹರಿಹರದ ಗಂಗನರಸಿ ಮಠದಲ್ಲಿ ದೀಕ್ಷೆ ಪಡೆಯುತ್ತಾರೆ. ಹರಪನಹಳ್ಳಿ ಮತ್ತು ಬೈರದೇವರಗುಡ್ಡದ ಬಾಲಬಸವರಿಗೆ ಇಬ್ಬರು ಗುರುಗಳಿದ್ದಾರೆ. ಆ ಎರಡು ಗುರುಮಠಗಳಿಂದ ಇವರಿಗೆ ದೀಕ್ಷೆ ನಡೆಯುತ್ತದೆ. ಆ ಮಠಗಳೆಂದರೆ ಉಜ್ಜನಿಯ ಮರುಳಸಿದ್ಧರ ಮಠ ಮತ್ತು ಕೂಲಹಳ್ಳಿಯಲ್ಲಿ ಗೋಣಿಬಸಪ್ಪನ ಮಠ. ಈ ಮಠಗಳ ಗುರುಗಳು ಒಂದೆಡೆಗೆ ಸೇರುವುದು ಅಪರೂಪ. ಹಾಗಾಗಿ ಆ ಎರಡು ಮಠಗಳಿಂದ ಬಾಲಬಸವ ದೀಕ್ಷೆಗೆ ಬೇಕಾಗುವ ಅನೇಕ ಪೂಜಾ ಸಾಮಗ್ರಿಗಳಿಗೆ ಅವರಿಂದ ಆಶೀರ್ವಾದ ಪಡೆದು ಮನೆಯಲ್ಲಿ ಮಗು ಹುಟ್ಟಿದ ಮೂರು ದಿನದೊಳಗೆ ಆರಂಭದ ದೀಕ್ಷೆ ನೀಡುವ ಕಾರ್ಯ ನಡೆಯುತ್ತದೆ.

ಹರಪನಹಳ್ಳಿ ಮತ್ತು ಬೈರದೇವರಗುಡ್ಡದ ಬಾಲಬಸವ ಪರಂಪರೆಯಲ್ಲಿ 'ಪಟ್ಟದ ಬಾಲಬಸವ' ಎನ್ನುವ ಪದ್ಧತಿಯಿದೆ. ತಮ್ಮ ಪರಂಪರೆಯಲ್ಲಿ ಒಬ್ಬ ಬಾಲಬಸವನಿಗೆ ಮಾತ್ರ 'ಪಟ್ಟ' ಕಟ್ಟುವ ಕಾರ್ಯ ನಡೆಯುತ್ತದೆ. ಇದು ಈ ಪರಂಪರೆಯಲ್ಲಿ ಮಾತ್ರ ಜರುಗುವ ವಿಧಿ-ವಿಧಾನವಾಗಿದೆ. ಈ ಪಟ್ಟದ ಬಾಲ ಬಸವನಿಗೆ ಮತ್ತೊಬ್ಬ ಬಾಲಬಸವನನ್ನು ಸಹಾಯಕನನ್ನಾಗಿ ನೀಡುತ್ತಾರೆ. ಅವರಿಗೆ 'ಶರಂತಿ' ಎಂದು ಕರೆಯುತ್ತಾರೆ. ಕರ್ನಾಟಕದಲ್ಲಿರುವ ಇತರೆ ಬಾಲಬಸವರು ಈ ಪದ್ಧತಿಯನ್ನು ಅನುಸರಿಸುವುದಿಲ್ಲ. ಅದರ ಬಗ್ಗೆ ಹೆಚ್ಚು ಮಾಹಿತಿ ತಿಳಿದಿಲ್ಲ ಎನ್ನುವ ಅಂಶ ಕ್ಷೇತ್ರಕಾರ್ಯದಲ್ಲಿ ಗಮನಕ್ಕೆ ಬಂದಿದೆ.

ಬಾಲಬಸವನಿಗೆ ದೀಕ್ಷೆ ನೀಡಿ ಪಟ್ಟ ಕಟ್ಟುವಾಗಲೂ ಅನೇಕ ವಿಧಿ-ವಿಧಾನಗಳಿವೆ. ಈ ನಿಯಮದಲ್ಲಿ ಗಂಡುಮಕ್ಕಳಿಗೆ ಮಾತ್ರ ಪಟ್ಟ ಕಟ್ಟುವುದಾಗಿದೆ. ಈ ಪಟ್ಟಕ್ಕೆ ಆಯ್ಕೆಯಾದ ಹುಡುಗ ಅನೇಕ ನಿಯಮಗಳನ್ನು ಪಾಲಿಸಬೇಕು. ಮದುವೆಯ ಕಾರ್ಯಕ್ರಮದಂತೆ ಈ ಕಾರ್ಯವು ನಡೆಯುತ್ತದೆ. ಹರಪನಹಳ್ಳಿಯ ಸನ್ಯಾಸಿ ತೋಟದಲ್ಲಿ ಬನ್ನಿಗಿಡದ ಮುಂದೆ ಚಪ್ಪರ ಹಾಕಿ ಐನೋರನ್ನು ಕರೆ ಕಳಿಸಿ ಪೂಜಾ ವಿಧಿ-ವಿಧಾನಗಳನ್ನು ಮಾಡುತ್ತಾ ಪಟ್ಟ ಕಟ್ಟುವ ಬಾಲಬಸವನಿಗೆ ಸುರಿಗೆ ನೀರು ಹಾಕಿ, ಮೈತೊಳೆದು, ಹೊಸ ಬಟ್ಟೆ ನೀಡಿ, ಮದುವೆ ಗಂಡಿನಂತೆ ಸಿಂಗರಿಸುತ್ತಾರೆ. ಅವರಿಗೆ ಸಹಾಯಕನಾಗಿ ಶರಂತಿಯು ಪಟ್ಟದ ಬಾಲಬಸವರಿಗೆ ಸೇವಕನಾಗಿ ಅಥವಾ ಶಿಷ್ಯನಾಗಿ ಅವರು ಹೋಗಿ ಬಂದ ಕಡೆ ಅವರ ಜೊತೆಗೆ ಇದ್ದು ಅವರ ಯೋಗಕ್ಷೇಮ ವಿಚಾರಿಸಿಕೊಳ್ಳಬೇಕು. ಶರಂತಿಯು ಗುರುಗಳ ಸೇವಕನಾಗಿ ಕಾರ್ಯ ನಿರ್ವಹಿಸಬೇಕು. ಈ ಸಂಪ್ರದಾಯವು ಗುರುಶಿಷ್ಯರ ನಡುವಿನ ಸಂಬಂಧವನ್ನು ಗಟ್ಟಿಗೊಳಿಸುವ ಕಾರ್ಯ ಮಾಡುತ್ತದೆ. ಇದೇ ರೀತಿಯ ಸಂಪ್ರದಾಯವು ವೀರಶೈವ ಧರ್ಮದಲ್ಲಿರುವುದನ್ನು ಕಾಣಬಹುದಾಗಿದೆ.

ಹರಪನಹಳ್ಳಿಯಲ್ಲಿ ಬಾಲಬಸವ ಪರಂಪರೆಯಲ್ಲಿ ಬಾಲಬಸವ ಬಾಲಜ್ಜನಿಗೆ ಪಟ್ಟ ಕಟ್ಟಿದ್ದಾರೆ. ಅವರ ಸೇವಕನಾಗಿ ಅಥವಾ ಶಿಷ್ಯನಾಗಿ ಶರಂತಿ(ಚರಂತಿ)ಯಾಗಿ ಬಾಲಬಸವ ಪ್ರಸಾದನನ್ನು ನೇಮಿಸಿದ್ದಾರೆ. ಇವರು ತಮ್ಮ ವೈವಾಹಿಕ ಜೀವನವನ್ನು ನಡೆಸಬಹುದು. ಆದರೆ ಕೆಲವೊಂದು ನಿಯಮಗಳನ್ನು ಪಾಲನೆ ಮಾಡಬೇಕಾಗುತ್ತದೆ.

ಪಟ್ಟ ಕಟ್ಟಿದ ಬಾಲಬಸವರಿಗೆ ಕರ್ಣಕುಂಡಲ, ಕಾವಿ, ರುದ್ರಾಕ್ಷಿ, ತಂಬೂರಿ, ಲಿಂಗ, ಬೆತ್ತ, ಜೋಳಿಗೆ ನೂರೊಂದು ಬಿರುದಾವಳಿಗಳನ್ನು ಅವರಿಗೆ ನೀಡುತ್ತಾರೆ. ಅವರು ಮುಂದೆ ಬಾಲಬಸವ ಪರಂಪರೆಯ ಪಟ್ಟದ ಗುರುಗಳಾಗಿ ಕಾರ್ಯ ಮಾಡುತ್ತಾರೆ. ಇವರು ಊರಾಡುವಾಗ ನೇರವಾಗಿ ಭಿಕ್ಷೆ ಕೇಳುವುದಿಲ್ಲ ಮತ್ತು ಭಿಕ್ಷೆ ನೀಡಿದ್ದನ್ನು ಮುಟ್ಟುವುದಿಲ್ಲ. ಅವರೊಂದಿಗೆ ಇರುವ 'ಬಿಲ್ಲೆ ಜವಾನ' ಅಥವಾ 'ಮಣೆಗಾರ' ಮಾತ್ರ ಊರಿನ ಜನರು ನೀಡುವ ಸಾಮಗ್ರಿಗಳನ್ನು ಪಡೆಯಬೇಕು. ಪಟ್ಟದ ಬಾಲಬಸವರು ಯಾರ ಮನೆಯಲ್ಲಿಯೂ ಊಟ ಮಾಡುವಂತಿಲ್ಲ. ಅವರು ಮಾದಿಗರ ಮನೆ ಅಥವಾ ಕೆಳವರ್ಗದ ಮನೆಗಳಲ್ಲಿ ನೀರು ಮುಟ್ಟುವಂತಿಲ್ಲ ಎಂಬ ನಿಯಮಗಳಿವೆ. ಆದರೆ ಅದನ್ನು ಅಷ್ಟು ಕಟ್ಟುನಿಟ್ಟಾಗಿ ಪಾಲಿಸುವುದು ಕಷ್ಟ ಎಂದು ಹರಪನಹಳ್ಳಿ ಬಾಲಬಸವ ಬಾಲಜ್ಜ ಹೇಳುತ್ತಾರೆ. ಬಾಲಬಸವರು ಊರು ಕೇರಿಗಳಲ್ಲಿ ಕಾಲಜ್ಞಾನ ಸಾರಲು ವಾರ ಹದಿನೈದು ದಿನ, ತಿಂಗಳುಗಟ್ಟಲೆ ಮನೆ ಬಿಡುವ ಪ್ರಸಂಗ ಬರುತ್ತದೆ. ಬಾಲಬಸವರು ತಾವು ತಂಗುವ ಮಾದಿಗರ ಕೇರಿಯಲ್ಲಿ ಹೊಸ ಮಡಿಕೆ, ಕುಡಿಕೆಗಳನ್ನು ತಂದು ತಮಗೆ ಪರಿಚಯವಿರುವ ಮನೆಯಲ್ಲಿ ಊಟ ಮಾಡಿಕೊಳ್ಳುತ್ತಾರೆ.

ಆ. ಬಾಲಬಸವರ ವೇಷಭೂಷಣ, ಬಳಸುವ ಪರಿಕರಗಳು

ಬಾಲಬಸವರ ವೇಷಭೂಷಣದಲ್ಲಿ ಪ್ರದೇಶವಾರು ಭಿನ್ನತೆಗಳಿವೆ. ಕರ್ನಾಟಕದಲ್ಲಿರುವ ಬಾಲ ಬಸವರ ಸಾಂಸ್ಕೃತಿಕ ಪ್ರದೇಶಗಳು, ಅವರು ಬಳಸುವ ವೇಷಭೂಷಣಗಳು ಈ ಕೆಳಗಿನಂತಿವೆ.

ಹರಪನಹಳ್ಳಿ ಮತ್ತು ಬೈರದೇವರಗುಡ್ಡದ ಪರಂಪರೆಯಲ್ಲಿವ ಪುರುಷರು ಮತ್ತು ಮಹಿಳೆಯರು ಕಾಲಜ್ಞಾನ ಸಾರುವ ಕಾಯಕ ಮಾಡುವುದರಿಂದ ಅವರ ವೇಷಭೂಷಣಗಳು ಒಂದೇ ಆಗಿವೆ. ಮಹಿಳೆಯರು ಕೂಡ ಪುರುಷ ವೇಷ ಧರಿಸಿಕೊಂಡು ಕಾಲಜ್ಞಾನ ಸಾರುತ್ತಾಳೆ. ಮಧ್ಯ ಕರ್ನಾಟಕದಲ್ಲಿರುವ ಭೌಗೋಳಿಕ ಪರಿಸರಕ್ಕೆ ಅನುಗುಣವಾಗಿ ಇವರು ಕಾವಿ ಪಂಜೆ, ಜೋಳಿಗೆ, ತಂಬೂರಿ, ಆವುಗೆ, ಕರ್ಣಕುಂಡಲ, ನಾಗಮುದ್ರಿಕೆ, ಲಿಂಗವನ್ನು ತೊಟ್ಟುಕೊಂಡಿರುತ್ತಾರೆ. ಇಲ್ಲಿ ಪುರುಷರು ಏನು ವೇಷಭೂಷಣ ತೊಟ್ಟುಕೊಳ್ಳುತ್ತಾರೋ ಅದೇ ವೇಷವನ್ನು ಬಾಲಬಸವಿ ಎಂದು ಕರೆಯುವ ಬಾಲಬಸವ ಪರಂಪರೆಯ ಹೆಣ್ಣುಮಕ್ಕಳು ಕೂಡ ಧರಿಸುತ್ತಾರೆ.

ಗದಗ ಹತ್ತಿರದ ಹರ್ಲಾಪುರದಲ್ಲಿ ಕಾವಿಯೊಂದಿಗೆ ಪ್ಯಾಂಟ್ ಧರಿಸಿ, ತಲೆಗೆ ರುಮಾಲು ಸುತ್ತಿಕೊಂಡು, ಕೆಂಪು ಛತ್ರಿ ಹಿಡಿದು, ತಂಬೂರಿಯೊಂದಿಗೆ ಕಾಲಜ್ಞಾನ ಸಾರುತ್ತಾರೆ.

ಹೀಲದಹಳ್ಳಿ ಬಾಲಬಸವರು ಮಲೆನಾಡಿಗೆ ಹತ್ತಿರವಾಗಿರುವುದರಿಂದ ಕಾವಿ, ಪ್ಯಾಂಟ್, ತಲೆಗೆ ರುಮಾಲು, ಬಿಳಿ ಛತ್ರಿ, ತಂಬೂರಿಯೊಂದಿಗೆ ಕೈಯಲ್ಲಿ ಗಗ್ಗರಿ ಧರಿಸಿಕೊಂಡು ಕಾಲಜ್ಞಾನ ಸಾರುತ್ತಾರೆ.

ಕೆ.ಕೆ.ಪುರದ ಬಾಲಬಸವರು ಕೊರಳಿನಲ್ಲಿ ಲಿಂಗ, ರುದ್ರಾಕ್ಷಿ, ಮೈತುಂಬ ಕಾವಿ, ತಲೆಗೆ ಕಾವಿ ಪೇಟ, ಹಾವಿನಹೆಡೆಯ ತಂಬೂರಿ, ಕೈಯಲ್ಲಿ ಪಂಚಲೋಹದ ಬಸವನ ಉಂಗುರ, ಎಡಗೈಯಲ್ಲಿ ನಾಗರ ಬೆತ್ತ, ಹೆಗಲ ಮೇಲೆ ಜರದಾರಿ ಶಲ್ಯೆ, ನಡುವೆಗೆ ಜರತಾರಿ ಪಟ್ಟಿ ಕಾಲಿನಲ್ಲಿ ಚಂದದ ಆವಿಗೆ, ಕಿವಿಯಲ್ಲಿ ಕರ್ಣಕುಂಡಲ ಧರಿಸಿ ಕಾಲಜ್ಞಾನ ಸಾರುತ್ತಾರೆ.

ರಾಮಘಟ್ಟ, ಮಂಡರಘಟ್ಟದ ಬಾಲಬಸವರು ರುದ್ರಾಕ್ಷಿ, ತೊಗಲಿನ ಕಿರೀಟ, ಕಿವಿಗೆ ಕರ್ಣಕುಂಡಲ, ಕೈಬೆರಳಿಗೆ ಗಗ್ಗರಿ, ನವಿಲಗರಿಯ ಸಿಂಬೆ, ಲಿಂಗ, ಕಾವಿ ಬಟ್ಟೆ ಎಡಗೈಯಲ್ಲಿ ನಾಗರ ಚಿತ್ರದ ಬೆತ್ತ, ಜೋಳಿಗೆ, ಮೂರು ಬಣ್ಣದ ಮೇಲು ಉಡುಗೆಯನ್ನು ಧರಿಸಿ ತಂಬೂರಿಯೊಂದಿಗೆ ಕಾಲಜ್ಞಾನ ಸಾರುತ್ತಾರೆ.

ಗಂಜಗನಹಳ್ಳಿ ಮತ್ತು ನ್ಯಾಮತಿಯ ಬಾಲಬಸವರು ತಲೆಯಲ್ಲಿ ರುದ್ರಾಕ್ಷಿಯ ಕಿರೀಟ, ಕೊರಳಿಗೆ ರುದ್ರಾಕ್ಷಿ ಸರ, ಲಿಂಗ, ತಂಬೂರಿ, ಕೈಯಲ್ಲಿ ನಾಗರ ಚಿತ್ರದ ಬೆತ್ತ, ಆವುಗೆ, ೬ ಬಣ್ಣದ ಬಟ್ಟೆಗಳಿಂದ ಕೂಡಿದ ಮೇಲು ಉಡುಗೆಯನ್ನು ಧರಿಸಿ ಕಾಲಜ್ಞಾನ ಸಾರುತ್ತಾರೆ.

ಒಟ್ಟಾರೆಯಾಗಿ ಬಾಲಬಸವರು ಪ್ರಾದೇಶಿಕತೆಗೆ ತಕ್ಕಂತೆ ಅವರ ವೇಷಭೂಷಣದಲ್ಲಿ ಭಿನ್ನತೆಯನ್ನು ನಾವು ಗುರುತಿಸಬಹುದಾಗಿದೆ.

೩.೪. ಬಾಲಬಸವ ಪರಂಪರೆ ಮತ್ತು ಸ್ತ್ರೀ

ಪುರುಷರು ಸಹಜವಾಗಿ ತಮಗಿರುವ ದೈಹಿಕ ಸಾಮರ್ಥ್ಯವನ್ನೇ ಬಂಡವಾಳವನ್ನಾಗಿಸಿಕೊಂಡು ಹೆಣ್ಣಿನ ದೈಹಿಕ ಸ್ವಾತಂತ್ರ್ಯದ ಮೇಲೆ ಹಿಡಿತ ಸಾಧಿಸುವ ಪ್ರಯತ್ನದ ಫಲವೇ ಪುರುಷಪ್ರಧಾನ ವ್ಯವಸ್ಥೆಯು ಬಲಗೊಳ್ಳಲು ಕಾರಣವಾಯಿತು. ಇದರಿಂದಾಗಿ ಮಹಿಳೆಯ ಅಥವಾ ಸ್ತ್ರೀಯು ಸಮಾಜದ ಶ್ರೇಣೀಕರಣದಲ್ಲಿ ಕಟ್ಟಕಡೆಯವಳನ್ನಾಗಿ ನಿಲ್ಲಿಸಿದೆ. ಲಿಂಗಪ್ರತಿಷ್ಠೆ ಆರ್ಥಿಕ ಕಾರ್ಯಗಳೆಲ್ಲವೂ ಅವಳನ್ನು ಮನೆಯಿಂದ ಹೊರಬರದಂತೆ ತಡೆ ಹಿಡಿದಿವೆ. ಧರ್ಮ, ದೇವರುಗಳು, ಆಚರಣೆ, ನಂಬಿಕೆ, ಸಂಪ್ರದಾಯಗಳಿಂದ ಮಹಿಳೆಯ ಎಲ್ಲ ಸ್ವಾತಂತ್ರ್ಯವನ್ನು ಕಸಿದುಕೊಂಡಿದ್ದಾರೆ. ಅಕ್ಷರ ಮತ್ತು ಅನಕ್ಷರಸ್ಥರ ಮಹಿಳೆಯರ ವಿಚಾರಗಳನ್ನು ಸಾಂಸ್ಕೃತಿಕ ರಾಜಕಾರಣದ ಮೂಲಕ ಅವಳ ಹಿರಿಮೆ-ಗರಿಮೆಯನ್ನು ಅವಳ ಆಲೋಚನೆ ಜ್ಞಾನಮೀಮಾಂಸೆಯನ್ನು ಮರೆ ಮಾಚುತ್ತ ಬಂದಿದ್ದೇವೆ. ಇಂತಹ ಕಾಲಘಟ್ಟದಲ್ಲಿ ಮಹಿಳೆಯರ ಜ್ಞಾನಮೀಮಾಂಸೆಯನ್ನು ಅರ್ಥ ಮಾಡಿಕೊಳ್ಳುವ ಅಧ್ಯಯನಗಳು ನಡೆಯುವುದು ಅಗತ್ಯವಾಗಿದೆ. ಸಮಾಜವು ತನ್ನ ಸಾಂಸ್ಕೃತಿಕತೆಯನ್ನು ಮುಂದುವರಿಸಿಕೊಂಡು ಹೋಗುವ ವಕ್ತಾರಿಕೆಯನ್ನು ಮಹಿಳೆ ತನ್ನ ಹಾಡುಗಾರಿಕೆಯ ಮೂಲಕ ಪಡೆದುಕೊಂಡಿದ್ದಾಳೆ. ಈ ನಿಟ್ಟಿನಲ್ಲಿ ಕರ್ನಾಟಕದಲ್ಲಿರುವ ಬಾಲಬಸವ ಪರಂಪರೆಯಲ್ಲಿ ಕಂಡುಬರುವ 'ಬಾಲಬಸವಿ' ಪರಂಪರೆ ಮತ್ತು ಆ ಪರಂಪರೆಯ ಲೋಕ ಕಾಯಕ, ಮೌಲಿಕ ಜ್ಞಾನಮೀಮಾಂಸೆಯನ್ನು ಅಧ್ಯಯನ ಮಾಡುವುದು ಅವಶ್ಯಕವೆನಿಸುತ್ತದೆ. ಹೆಣ್ಣನ್ನು ದೇಹ ಮತ್ತು ಸೌಂದರ್ಯಗಳಿಂದಲೇ ನೋಡುವ ನಮ್ಮ ಕನ್ನಡ ಸಾಹಿತ್ಯ ಲೋಕವು ಅವಳಲ್ಲಿನ ಜ್ಞಾನಧಾರೆಯನ್ನು ಅವಳ ನೆಲೆಯಲ್ಲಿಯೇ ಅಧ್ಯಯನ ಮಾಡಿರುವುದು ಕಡಿಮೆ.

ಬಾಲಬಸವಿಯರು ಲಿಂಗದೀಕ್ಷೆ ಪಡೆದುದರಿಂದ ಮಾಂಸಾಹಾರವನ್ನು ಬಿಟ್ಟರು. ಮಾದಿಗರೊಂದಿಗೆ ವಾಸ ಮಾಡದೇ ಅವರಿಂದ ಪ್ರತ್ಯೇಕವಾಗಿ ವಾಸ ಮಾಡುವುದಕ್ಕೆ ಆರಂಭಿಸಿದರು. ಮಾದಿಗರ ಮನೆಯಲ್ಲಿ ಉಣ್ಣುವುದನ್ನು ಬಿಟ್ಟು ಅವರಿಂದ ಮಾನಸಿಕವಾಗಿ ದೂರವಾದರು. ಬಸವಣ್ಣ ಮತ್ತು ಕಾಲಜ್ಞಾನದಿಂದಾಗಿ ಇವರು ವೀರಶೈವ ಧರ್ಮಕ್ಕೆ ಹತ್ತಿರವಾದರೂ ಇವರನ್ನು ವೀರಶೈವರು ಒಪ್ಪಿಕೊಂಡಿಲ್ಲ. ಹಾಗೇ ಇವರ ನಡೆ-ನುಡಿ, ಆಚಾರ-ವಿಚಾರಗಳಿಂದ ಮಾದಿಗ ಸಮುದಾಯವು ಇವರು ಗುರುಗಳೆಂದು ಗೌರವಿಸಿ ಸಾಮಾಜಿಕ ಮನ್ನಣೆಯನ್ನು ನೀಡಿದರು. ಈ ರೀತಿಯಾದ ಜೀವನ ಕ್ರಮದಿಂದಾಗಿ ಇವರು ಧಾರ್ಮಿಕವಾಗಿ ಅತಂತ್ರ ಸ್ಥಿತಿಯಲ್ಲಿ ಬದುಕುವ ಪರಿಸ್ಥಿತಿಯನ್ನು ತಂದುಕೊಂಡಿದ್ದಾರೆ. ಅತ್ತ ವೀರಶೈವ ಧರ್ಮಕ್ಕೂ ಹೋಗದೆ ಇತ್ತ ತನ್ನ ಮೂಲ ಕುಲವಾದ ಮಾದಿಗ ಕುಲಕ್ಕೂ ಬರದೆ ನಡುವಿನ ಹಾದಿಯಲ್ಲಿ ಅತಂತ್ರರಾಗಿ ಉಳಿದುಬಿಟ್ಟಿದ್ದಾರೆ. ಈ ರೀತಿಯಾಗಿ ಸಾಮಾಜಿಕ ಬಿಕ್ಕಟ್ಟು ಇವರ ವೈವಾಹಿಕ ಜೀವನದ ಮೇಲೆ ತನ್ನದೇ ಆದ ಪ್ರಭಾವ ಬೀರಿದೆ. ಇವರ ಈ ಬಾಹ್ಯ ಬದಲಾವಣೆಯು ಇವರ ವೃತ್ತಿಗೆ ಒಂದು ಚಲನೆಯನ್ನು ತಂದುಕೊಟ್ಟಿದೆ. ಆದರೆ ಅವರ ವೈವಾಹಿಕ ಸಂಬಂಧಗಳಲ್ಲಿ ಬಹುದೊಡ್ಡ ಇಕ್ಕಟ್ಟನ್ನು ನಿರ್ಮಾಣ

ಮಾಡಿದೆ. ಅದೇನೆಂದರೆ ಇವರು ವೀರಶೈವರಾಗುವ ಕಾರಣಕ್ಕೆ ಮೇಲ್ಮುಖ ಚಲನೆ ಹೊಂದಿದರೂ ಇವರಿಗೆ ವೀರಶೈವ ಧರ್ಮದವರು ಗಂಡು ಕೊಡುವುದಿಲ್ಲ. ಇತ್ತ ಮಾದಿಗ ಸಮುದಾಯದವರು ಬಾಲಬಸವರಿಗೆ ಗುರು ಸ್ಥಾನ ನೀಡಿರುವ ಕಾರಣದಿಂದಾಗಿ ಅವರೊಂದಿಗೆ ವೈವಾಹಿಕ ಸಂಬಂಧಗಳನ್ನು ಇಟ್ಟುಕೊಳ್ಳಲು ಹೆದರುತ್ತಾರೆ. ಇಂಥ ಇಕ್ಕಟ್ಟಿನ ಸಮಯದಲ್ಲಿ ಬಾಲಬಸವರು ಒಂದು ರಾಜಿ ಸಂಧಾನದ ತಂತ್ರಕ್ಕೆ ಬರಬೇಕಾಯಿತು. ಅದೇನೆಂದರೆ ಮಾದಿಗರ ಮನೆಯಿಂದ ಹೆಣ್ಣು ಪಡೆದು ಅವಳನ್ನು ವೀರಶೈವೀಕರಣಗೊಳಿಸಿಕೊಂಡು ಗಂಡುಮಕ್ಕಳಿಗೆ ಮದುವೆ ಮಾಡಿಕೊಂಡರು. ಆದರೆ ಇವರ ಹೆಣ್ಣುಮಕ್ಕಳನ್ನು ಮಾದಿಗರು ಮದುವೆಯಾಗಲು ಮುಂದೆ ಬರಲಿಲ್ಲ. ಗುರುವಿನ ಮಗಳನ್ನು ಮದುವೆಯಾದರೆ ಮುಂದೆ ತೊಂದರೆ ಎಂದು ಭಾವಿಸಿದ ಮಾದಿಗರು ತಮ್ಮ ಮಕ್ಕಳಿಗೆ ಈ ಬಾಲಬಸವರ ಹೆಣ್ಣು ಮಕ್ಕಳನ್ನು ತಂದುಕೊಳ್ಳಲು ಮನಸ್ಸು ಮಾಡಲಿಲ್ಲ. ಈ ಕಾರಣದಿಂದಾಗಿ ಬಾಲಬಸವರ ಮನೆಯಲ್ಲಿ ಹುಟ್ಟಿದ ಹೆಣ್ಣು ಸಂತಾನದಲ್ಲಿ ಬಾಲಬಸವಿಯಾಗುವ ಅನಿವಾರ್ಯತೆಯು ಸೃಷ್ಟಿಯಾಯಿತು. ಮುಂದೆ ಇದೊಂದು ಪದ್ಧತಿಯಾಗಿ ಬಾಲಬಸವ ಪರಂಪರೆಯಲ್ಲಿ ಬೆಳೆದುನಿಂತಿತು.

ಕರ್ನಾಟಕದಲ್ಲಿ ಬಸವಿ ಎಂಬ ಪದ ಬಳಕೆಯಲ್ಲಿದೆ. ಆದರೆ ಬಾಲಬಸವಿ ಎನ್ನುವುದಕ್ಕೆ ನಿರ್ದಿಷ್ಟ ಅರ್ಥ ವಿವರಣೆಗಳಿಲ್ಲ. ಬಾಲಬಸವರಲ್ಲಿ ದೀಕ್ಷೆ ಪಡೆದ ಹುಡುಗ ಹೇಗೆ ಬಾಲ ಬಸವನಾಗುತ್ತಾನೋ ಹಾಗೇ ಹೆಣ್ಣುಮಕ್ಕಳು ದೀಕ್ಷೆ ಪಡೆದರೆ ಅವಳು ಬಾಲಬಸವಿಯಾಗುತ್ತಾಳೆ. ಇಲ್ಲಿ ಸ್ತ್ರೀಲಿಂಗವಾಚಕವಾಗಿ ಬಸವಿ ಎನ್ನುವ ಪದ ನೋಡಬೇಕೇ ಹೊರತು ಅದನ್ನು ಭೋಗದ ರೀತಿಯಲ್ಲಿ ವೇಶ್ಯೆ, ಸೂಳೆ ಅಥವಾ ಹಾದರದವಳು ಎನ್ನುವ ಪದಗಳನ್ನು ಈ ಪರಂಪರೆಗೆ ಆರೋಪಿಸುವಂತಿಲ್ಲ. ಕಾರಣ ಸಾಂಸ್ಕೃತಿಕ ಅನನ್ಯತೆಯನ್ನು ತನ್ನದೇ ಆದ ನೆಲೆಯಲ್ಲಿ ಈ ಪರಂಪರೆಯ ಹೆಣ್ಣುಮಕ್ಕಳು ಉಳಿಸಿಕೊಂಡು ಹೋಗುವ ಕಾರ್ಯ ಮಾಡುತ್ತಿದ್ದಾರೆ.

ದೇವರ ಹೆಸರಲ್ಲಿ ಬಿಡುವ ಎತ್ತು ಬಸವನಾದರೆ, ದೇವರ ಹೆಸರಿನಲ್ಲಿ ಬಿಡುವ ಹೆಣ್ಣು ಬಸವಿಯಾಗುತ್ತಾಳೆ. ಆಂಜನೇಯ, ಮಲ್ಲಯ್ಯ, ಕನಕರಾಯ ಮತ್ತು ತಿರುಪತಿ ತಿಮ್ಮಪ್ಪನ ಹೆಸರಿನಲ್ಲಿ ಶಂಕ ಮತ್ತು ಚಕ್ರದ ಮುದ್ರೆಯನ್ನು ಹಾಕಿಸಿಕೊಂಡು ಬಸವಿಯಾಗುವ ಸಂಪ್ರದಾಯವು ಕರ್ನಾಟಕದಲ್ಲಿ ಕಂಡುಬರುತ್ತದೆ.

ಕನ್ನಡ ನಿಘಂಟಿನಲ್ಲಿ ಬಸವಿ ಎನ್ನುವುದಕ್ಕೆ ಈ ರೀತಿಯಾದ ಅರ್ಥ ನೀಡುತ್ತಾರೆ. ಬಸವಿ ಎಂದರೆ-ದೇವರ ಹೆಸರಿನಲ್ಲಿ ದೇವಾಲಯದ ಸೇವೆಗಾಗಿ ಮೀಸಲು ಬಿಟ್ಟ ಹುಡುಗಿ ಎಂದರ್ಥ.

ಮಧ್ಯ ಕರ್ನಾಟಕವನ್ನು ಆಳಿದ ವಿಜಯನಗರ ಸಾಮ್ರಾಜ್ಯದಲ್ಲಿ ಬಸವಿ ಪದ್ಧತಿ ಹೆಚ್ಚಾಗಿತ್ತು ಎನ್ನುವುದನ್ನು ಮಹಿಳಾ ಸಂಸ್ಕೃತಿ ಚಿಂತಕಿಯಾದ ಶೈಲಜಾ ಹಿರೇಮಠ ಅವರು ಹೀಗೆ ಹೇಳುತ್ತಾರೆ. "ಹನುಮನಿಂದ ಮಾಧ್ವ ಸಂಪ್ರದಾಯ ಪ್ರಾರಂಭವಾಗುತ್ತದೆ. ಹನುಮನ ಅವತಾರವೇ ಭೀಮ. ಭೀಮನ ನಂತರ ಒಂದನೇ ಮಾಧ್ವ ತಮಿಳುನಾಡಿನ ಶ್ರೀರಂಗದಲ್ಲಿದ್ದ ರಾಮಾನುಜಾಚಾರ್ಯರು

ತಿರುಪತಿಗೆ ಹೆಚ್ಚಿನ ಪ್ರಚಾರವನ್ನು ನೀಡಿದರು. ಚೋಳ, ಹೊಯ್ಸಳರ ಅವಧಿಯ ನಂತರ ವಿಜಯನಗರ ಆಳ್ವಿಕೆ ಬರುತ್ತದೆ. ಹೊಯ್ಸಳರ ಅವಧಿಯಲ್ಲಿ ರಾಮಾನುಜಾಚಾರ್ಯರು ಕರ್ನಾಟಕದ ಮೇಲುಕೋಟೆಗೆ ಬರುತ್ತಾರೆ. ವಿಜಯನಗರ ಪರಂಪರೆಯಲ್ಲಿ ಮೊದಲು ಶೈವ ಅರಸರಿದ್ದರು. ಸಾಳ್ವ ನರಸಿಂಹನಿಂದಲೇ ವೈಷ್ಣವರ ಆಳ್ವಿಕೆ ಪ್ರಾರಂಭವಾಯಿತು. ಕೃಷ್ಣದೇವರಾಯನ ಅವಧಿಯಲ್ಲಿ ವ್ಯಾಸರಾಯರು ಬಂದರು. ವ್ಯಾಸರಾಯರು ಆಂಜನೇಯನಿಗೆ ಹೆಚ್ಚು ಮಹತ್ವವನ್ನು ಕೊಟ್ಟರು. ಇದರಿಂದಾಗಿ ಕೃಷ್ಣದೇವರಾಯರು ತಿರುಪತಿ ಪ್ರಭಾವಕ್ಕೆ ಒಳಗಾದಂತೆ ಆಂಜನೇಯನ ಪ್ರಭಾವಕ್ಕೂ ಒಳಗಾದರು. ವ್ಯಾಸರಾಯರು ಸ್ಥಾಪಿಸಿದ ಆಂಜನೇಯ ಮೂರ್ತಿಗಳು ವಿಶಿಷ್ಟವಾಗಿವೆ. ಕರ್ನಾಟಕದಲ್ಲಿ ಹತ್ತನೆಯ ಶತಮಾನದ ಅವಧಿಯಲ್ಲಿಯೇ ಕಂಬದಲ್ಲಿ ಕೆತ್ತಿದ ಆಂಜನೇಯ ಚಿತ್ರಗಳಿದ್ದರೂ ಅದಕ್ಕೆ ಒಂದು ಸ್ವತಂತ್ರ ಅಸ್ತಿತ್ವ ಬಂದುದು ಕೃಷ್ಣದೇವರಾಯನ ಅವಧಿಯಲ್ಲಿಯೇ. ಈತನು ಸುಮಾರು ಏಳನೂರಕ್ಕೂ ಹೆಚ್ಚು ಆಂಜನೇಯ ದೇವಸ್ಥಾನಗಳನ್ನು ಕಟ್ಟಿಸಿದನೆಂಬ ಪ್ರತೀತಿಯಿದೆ. ಈ ಎಲ್ಲಾ ದೇವಾಲಯಗಳಿಗೆ ಬಸವಿ ಬಿಡುವ ಸಂಪ್ರದಾಯ ಪ್ರಾರಂಭವಾಯಿತು."[೮] ಎನ್ನುವ ಮಾತುಗಳಲ್ಲಿ ಬಸವಿ ಕಲ್ಪನೆಯು ಆರಂಭವಾದುದರ ಬಗ್ಗೆ ಚಾರಿತ್ರಿಕವಾದ ವಿವರಣೆ ನೀಡುವ ಪ್ರಯತ್ನ ಮಾಡುತ್ತಾರೆ. ಆಂಜನೇಯನಿಗೆ ಬಸವಿ ಬಿಡುವ ಪದ್ಧತಿಯು ಈ ಮಧ್ಯ ಕರ್ನಾಟಕದ ಭಾಗದಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಕೂಡ್ಲಿಗಿಯಲ್ಲಿನ ಬೇಡರ ಸಮುದಾಯವು ತಮ್ಮ ಮನೆಯ ಹೆಣ್ಣು ಮಕ್ಕಳನ್ನು ಆಂಜನೇಯನಿಗೆ ಬಿಡುವ ಪದ್ಧತಿ ಈಗಲೂ ಚಾಲ್ತಿಯಲ್ಲಿದೆ. ಅದಕ್ಕೆ ಹನುಮನ ಹೆಂಡತಿಯರು ಎಂದು ಸಹ ಅವರನ್ನು ಆ ಭಾಗದಲ್ಲಿ ಕರೆಯುತ್ತಾರೆ. "ಬಸವಿ ಎನ್ನುವ ಶೈವ ಪದಕ್ಕೆ ಸೇರಿದಂತೆ ಕಂಡರೂ ಅದರ ಆಚರಣೆಯೆಲ್ಲವೂ ವೈದಿಕ ಪರಂಪರೆಗೆ ಸೇರಿದೆ. ಅನುಕೂಲಕ್ಕೆ ತಕ್ಕಂತೆ ಶ್ರೇಷ್ಠೀಕರಿಸಿ ಅದರಿಂದ ಧರ್ಮ ಪ್ರಚಾರದ ಉದ್ದೇಶ ಮತ್ತು ಪುರುಷಶಾಹಿ ಸಂಸ್ಕೃತಿಯನ್ನು ಮುನ್ನೆಲೆಗೆ ತರುವ ಸ್ವಾರ್ಥಗಳೆರಡೂ ಈ ಬಸವಿ ಸಂಪ್ರದಾಯದಲ್ಲಿದೆ."[೯] ಎನ್ನುವ ಶೈಲಜಾ ಹಿರೇಮಠರ ಮಾತಿನಲ್ಲಿ ಬಸವಿ ಆಚರಣೆಯು ಹೇಗೆ ಸ್ಥಾನಪಲ್ಲಟವಾಗಿದೆ. ಅದು ಧಾರ್ಮಿಕತೆಯ ಭಾಗವಾಗಿ ಮತ್ತು ಸಮಾಜದಲ್ಲಿನ ಪುರುಷಶಾಹಿಯ ಧೋರಣೆಯು ಹೇಗೆ ಬದಲಾವಣೆಯಾಗಿದೆ ಎನ್ನುವುದನ್ನು ಹೇಳುತ್ತಾರೆ.

ಬಾಲಬಸವಿಗೂ ಮತ್ತು ಬಸವಿಗೂ ವ್ಯತ್ಯಾಸವಿದೆ. ಬಾಲಬಸವ ಪರಂಪರೆಯ ಧಾರ್ಮಿಕ ಅತಂತ್ರದಿಂದಾಗಿ ನಿರ್ಮಾಣವಾಗಿರುವ ಸ್ಥಿತಿಯಲ್ಲಿ ಬಾಲಬಸವಿಯರು ಕಂಡುಬರುತ್ತಾರೆ. ಅಲ್ಲಿ ದೇವರಿಗೆ ಬಿಡುವ ಪ್ರಮೇಯವೇ ಇಲ್ಲ. ಬಾಲಬಸವರ ಹೆಣ್ಣುಮಕ್ಕಳನ್ನು ಯಾರು ಕೂಡ ಮದುವೆಯಾಗದೆ ಹೋಗಿದ್ದರಿಂದ ಆ ಪರಿಸ್ಥಿತಿ ಬಂದಿದೆ ವಿನಾ ಉದ್ದೇಶಪೂರ್ವಕವಾಗಿ ಲೈಂಗಿಕ ಕ್ರಿಯೆಗಾಗಿ ಈ ಪದ್ದತಿ ಬೆಳೆದು ಬಂದಿಲ್ಲ. ಶೈವ ಪಂಥವನ್ನು ಹೆಚ್ಚು ಅನುಸರಿಸುವ ಈ ಬಾಲಬಸವಿ ಪರಂಪರೆಯು ಬಸವಣ್ಣನ ಅನುಯಾಯಿಗಳಾದ ಇವರು ತಮ್ಮ ಮನೆಯಲ್ಲಿ ಮದುವೆಯಾಗದೆ ಉಳಿದ ಹೆಣ್ಣುಮಕ್ಕಳಿಗೆ ಬಾಲಬಸವಿ ಎಂದು ಕರೆಯುತ್ತಾರೆ. ಇಲ್ಲಿ ಗಮನಿಸಬೇಕಾದ

ಸಂಗತಿ ಎಂದರೆ 'ಬಸವಿ ಬಿಡುವ' ಪದ್ಧತಿಯನ್ನು ಇವರು ಅನುಸರಿಸುವುದಿಲ್ಲ. ಹೆಣ್ಣುಮಗು ಹುಟ್ಟಿದ ಮೂರು ದಿನದೊಳಗೆ ತಮ್ಮ ಗುರುಮಠದಿಂದ ತೀರ್ಥ ಪ್ರೋಕ್ಷಣೆಯಾಗಿ ದೀಕ್ಷೆ ಪಡೆದುಕೊಂಡಿರುತ್ತಾರೆ. ಇವರು ಮುಂದೆ ಕಾಲಜ್ಞಾನ ಸಾರುವ ಕಾಯಕ ಮಾಡಿ ತಮ್ಮ ಕುಟುಂಬ ನಿರ್ವಹಣೆಯನ್ನು ಮಾಡಿಕೊಂಡು ಹೋಗುವುದನ್ನು ಇಂದಿಗೂ ನಾವು ಕಾಣಬಹುದಾಗಿದೆ.

ಬಾಲಬಸವಿ ಪದ್ಧತಿಯು ಮೊದಲು ಕರ್ನಾಟಕದಲ್ಲಿರುವ ಎಲ್ಲ ಬಾಲಬಸವರ ಮನೆತನಗಳಲ್ಲಿ ಸಾಮಾನ್ಯವಾಗಿ ಕಂಡುಬರುತ್ತಿತ್ತು. ಆಧುನಿಕತೆ, ಶಿಕ್ಷಣ, ವೈಚಾರಿಕತೆಯ ಪ್ರಭಾವದಿಂದಾಗಿ ಬಾಲಬಸವರು ತಮ್ಮ ಮನೆಯ ಹೆಣ್ಣುಮಕ್ಕಳಿಗೆ ದೀಕ್ಷೆ ಕೊಡಿಸುವುದನ್ನು ಬಿಟ್ಟಿದ್ದಾರೆ. ದೀಕ್ಷೆ ಪಡೆಯದೆ ಕಾಲಜ್ಞಾನ ಸಾರುವಂತಿಲ್ಲ ಎಂಬ ನಿಯಮವಿರುವುದರಿಂದ ಅನೇಕ ಬಾಲಬಸವರು ಹೆಣ್ಣುಮಕ್ಕಳಿಗೆ ದೀಕ್ಷೆಯನ್ನು ನಿರಾಕರಿಸಿದ್ದಾರೆ. ಅವರಿಗೆ ಓದು, ಉದ್ಯೋಗಕ್ಕೆ ಕಳಿಸುವ ಕಾರ್ಯ ಮಾಡಿರುವುದರಿಂದ ಅವರಿಗೆ ಮದುವೆ ಭಾಗ್ಯ ಕೂಡಿ ಬಂದಿರುವುದು ಕ್ಷೇತ್ರಕಾರ್ಯದಲ್ಲಿ ಕಂಡುಬಂದಿದೆ.

ಹರಪನಹಳ್ಳಿ, ಬೈರದೇವರಗುಡ್ಡದ ಮನೆತನಗಳಲ್ಲಿ ಮಾತ್ರ ಸದ್ಯ ಬಾಲಬಸವಿ ಪದ್ಧತಿಯು ಜೀವಂತವಿದೆ. ಅದು ಈಗ ಕಡಿಮೆಯಾಗುತ್ತಿರುವುದು ಕಂಡುಬಂದಿದೆ. ಬಾಲಬಸವ ಬಸವರಾಜಪ್ಪ ತನ್ನ ಮಗಳಾದ ದೇವಕ್ಕನನ್ನು ಮದುವೆ ಮಾಡಿ ಕೊಟ್ಟಿರುವುದು ಕ್ಷೇತ್ರಕಾರ್ಯದಲ್ಲಿ ತಿಳಿದುಬಂದಿರುವ ಸಂಗತಿಯಾಗಿದೆ.

ಅ. ಬಾಲಬಸವಿಯರ ಮೌಖಿಕ ಜ್ಞಾನಮೀಮಾಂಸೆ :

ಸಮಾಜದಲ್ಲಿ ಸುಶಿಕ್ಷಿತವಾಗಿರುವ ಮೇಲ್ಜಾತಿಯ ಮಹಿಳೆಯರಿಗೆ, ದಲಿತ ಮಹಿಳೆಯರಿಗಿದ್ದಂತೆ ಅಸ್ಪೃಶ್ಯತೆ, ಅಪಮಾನ, ಶೋಷಣೆ, ಮುಂತಾದವುಗಳು ಅವರಿಗೆ ಇಲ್ಲದಿರುವುದರಿಂದ ಸಮಾಜದಲ್ಲಿನ ಅನೇಕ ಅಡೆ ತಡೆಗಳು ಎದುರಾಗುವುದಿಲ್ಲ. ಆದರೆ ದಲಿತಳಾಗಿ ಹುಟ್ಟಿದ ಪಾಪಕ್ಕೆ ದಲಿತ ಮಹಿಳೆ ಬಾಳಿನುದ್ದಕ್ಕೂ ನರಕಯಾತನೆಯನ್ನು ಅನುಭವಿಸುತ್ತಿದ್ದಾಳೆ. ತನ್ನ ಮೇಲೆ ನಿರಂತರ ದೌರ್ಜನ್ಯ ದಬ್ಬಾಳಿಕೆ ನಡೆಯುತ್ತಿದೆ ಎನ್ನುವುದರ ಪರಿವೆ ಇಲ್ಲದೆ ಅಮಾಯಕಳಾಗಿ ಬದುಕುತ್ತಿರುವ ದಲಿತ ಮಹಿಳೆಯು ಜೀವಂತ ಶವವಾಗಿ, ಅಸಹಾಯಕಳಾಗಿ ಬದುಕುತ್ತಿದ್ದಾಳೆ. ಇಂತಹ ಸಮುದಾಯದಲ್ಲಿರುವ ಬಾಲಬಸವಿಯರು ತಮ್ಮದೇ ಆದ ಮೌಖಿಕ ಜ್ಞಾನದ ಮೂಲಕ ಸಮಾಜದ ಪುರುಷಲೋಕದೊಳಗೆ ನಡೆಯುವ ಸ್ತ್ರೀವಿರೋಧಿ ಹುನ್ನಾರಗಳನ್ನು ಪ್ರತಿರೋಧಿಸುವ ಅಸಾಧಾರಣ ಜ್ಞಾನ ಮೀಮಾಂಸೆಯುಳ್ಳವಳಾಗಿ ಬದುಕನ್ನು ತಾನೇ ಕಟ್ಟಿಕೊಂಡಿದ್ದಾಳೆ. ಹೆಣ್ಣಿನ ಬದುಕಿನಲ್ಲಿ ನಿರಂತರವಾಗಿ ಧರ್ಮ ಮತ್ತು ಸಂಪ್ರದಾಯದ ಹೆಸರಿನಲ್ಲಿ ನಡೆಯುವ ಅನೇಕ ಸಂಗತಿಗಳಿಗೆ ಬಾಲಬಸವಿಯು ತನ್ನ ಮೌಖಿಕ ಸಾಹಿತ್ಯದ ಮೂಲಕ ಪ್ರತಿರೋಧಿಸುವ ಕಾರ್ಯ ಮಾಡುತ್ತಿದ್ದಾಳೆ. ಸಮಾಜಕ್ಕೆ ನೈತಿಕತೆಯನ್ನು ಹೇಳಿಕೊಡುವುದರ ಮೂಲಕ ತನ್ನೊಳಗಿದ್ದ ನೋವುಗಳನ್ನು ಈ ಮೌಖಿಕ ಸಾಹಿತ್ಯದಲ್ಲಿ ಹೊರ ಹಾಕಿ ತಾನು ಬಿಡುಗಡೆಯನ್ನು ಕಂಡುಕೊಳ್ಳುವ ಕೆಲಸ ಮಾಡುತ್ತಾಳೆ.

ಬಹುಪಾಲು ಜನಪದ ಮೌಖಿಕ ಜ್ಞಾನ ಮೀಮಾಂಸೆಗಳು ಮಹಿಳೆಯರಿಂದಲೇ ಬೆಳೆದುಬಂದಿವೆ. ಎಲ್ಲೆಲ್ಲಿ ಸಾಂಸ್ಕೃತಿಕ ಸಂಕೋಚಗಳು ಕಂಡುಬರುತ್ತವೋ ಅಲ್ಲಲ್ಲಿ ಮಹಿಳೆಯು ಹಾಡುವ ಶಕ್ತಿಯಾಗಿ ನೇರವಾಗಿ ಹೇಳಲಾಗದ್ದನ್ನು ಕಥೆಯಾಗಿ ಹಾಡುವ ಮೂಲಕ ಸಮಾಜದಲ್ಲಿನ ಪುರುಷ ಅಹಂಗೆ ಪ್ರತಿರೋಧ ಒಡ್ಡುವ ಕೆಲಸವನ್ನು ಬಾಲಬಸವಿಯರು ತಮ್ಮ ಮೌಖಿಕ ಸಾಹಿತ್ಯದ ಮೂಲಕ ಮಾಡಿಕೊಂಡು ಬಂದಿದ್ದಾರೆ.

ಕರ್ನಾಟಕದಲ್ಲಿ ಕಾಲಜ್ಞಾನ ಸಾರುವ ಪುರುಷ ಪಡೆ ಒಂದು ಕಡೆಯಾದರೆ, ಬಾಲಬಸವ ಪರಂಪರೆಯಲ್ಲಿ ಮಹಿಳೆಯು ಪ್ರಧಾನವಾಗಿ ಕಾಲಜ್ಞಾನ ಹಾಡುತ್ತಾಳೆ. ವಚನ ಚಳವಳಿಯಲ್ಲಿ ಮಹಿಳೆಯರ ಭಾಗವಹಿಸುವಿಕೆಯಿಂದ ಪ್ರೇರಣೆಗೊಂಡಿರುವ ಈ ಬಾಲಬಸವ ಪರಂಪರೆಯು ಅದೇ ಆಶಯವನ್ನು ತನ್ನ ಮನೆಯಲ್ಲಿ ಮುಂದುವರಿಸಿಕೊಂಡು ಬಂದಿದೆ. ಪುರುಷ ಸ್ವತ್ತು ಆಗಿದ್ದ 'ಜ್ಞಾನ ಮೀಮಾಂಸೆ'ಯನ್ನು ಮಹಿಳೆಯರಿಗೂ ಕಲಿಸಿಕೊಡುವುದರ ಮೂಲಕ ಗಂಡು ಹೆಣ್ಣು ಸಮಾನರು ಎಂಬ ನೀತಿ ಸಂದೇಶ ಸಾರಿದವರು ಈ ಬಾಲಬಸವ ಪರಂಪರೆಯವರು.

ಅಕ್ಷರ ಕಲಿಯದೇ, ಬರಿಯದೇ ತನ್ನ ಮೌಖಿಕ ರೂಪದ ಜ್ಞಾನಧಾರೆಯನ್ನು ಅವಳ ತಿಳುವಳಿಕೆಯ ಭಾಗವಾಗಿಸಿಕೊಂಡು ಸ್ಥಳೀಯ ಜ್ಞಾನ ಪರಂಪರೆಯನ್ನು ಮುಂದುವರಿಸಿಕೊಂಡು ಹೋಗುವ ಕಾರ್ಯ ಮಾಡುತ್ತಿದ್ದಾಳೆ. ಭೋಗದ ಭಾಗವಾಗಿ ನೋಡುವ ಹೆಣ್ಣಿನ ದೇಹ ಮೀಮಾಂಸೆಯನ್ನು ಅವಳು ಲೋಕಜ್ಞಾನದ ಮೂಲಕ ಜ್ಞಾನಮೀಮಾಂಸೆಯ ಅಭಿವ್ಯಕ್ತಿಯಿಂದಾಗಿ ತಾನು ಸಮಾಜದ ಒಂದು ಭಾಗವಾಗಿ ಎಲ್ಲ ಅಡೆತಡೆಗಳನ್ನು ಮೀರಿ ನಿಂತಿದ್ದಾಳೆ. ತನ್ನದೇ ಆದ ಸರಳ ಮಿತ ಭಾಷೆಯಲ್ಲಿ ಕಾಲಜ್ಞಾನ ಸಾರುವುದರ ಮೂಲಕ ಎಲ್ಲರಿಗೂ ಅರ್ಥವಾಗುವಂತೆ ತನ್ನ ಜ್ಞಾನಧಾರೆಯನ್ನು ಹಂಚಿದ್ದಾಳೆ. ಸಮಾಜದ ಉತ್ಪಾದನೆ ಮತ್ತು ಉಪಭೋಗದ ಸಂದರ್ಭದಲ್ಲಿ ಎದುರಾಗುವ ಕಂಟಕಗಳನ್ನು ಸಮಾಜಕ್ಕೆ ತಿಳಿ ಹೇಳುವ ಕಾರ್ಯ ಮಾಡುತ್ತಾಳೆ. ಪುರುಷರಿಗೆ ಸೀಮಿತವಾಗಿದ್ದ ಭವಿಷ್ಯ ಹೇಳುವ ಕೆಲಸವನ್ನು ಬಾಲಬಸವಿಯು ತನ್ನ ಮೌಖಿಕ ಜ್ಞಾನಧಾರೆಯಾದ ಕಾಲಜ್ಞಾನದ ಮೂಲಕ ಭವಿಷ್ಯವನ್ನು ಹೇಳುವ ಎದೆಗಾರಿಕೆಯನ್ನು ಮೆರೆದಿದ್ದಾಳೆ. ಲೋಕಜ್ಞಾನದ ಭವಿಷ್ಯತ್ತನ್ನು ಹೇಳುವುದು ದಲಿತ ವರ್ಗಕ್ಕೆ ನಿಷೇಧಿಸಲಾಗಿತ್ತು. ಸಮಾಜ ನಿಷೇಧಿಸಿರುವುದನ್ನು ವಿರೋಧಿಸಿ ತಾನು ಲೋಕಜ್ಞಾನವನ್ನು ಸ್ಥಳೀಯ ಮೌಖಿಕ ಆಕರಗಳ ಮೂಲಕ ಕಟ್ಟಿಕೊಡುವ ಸಾಹಸದ ಕಾರ್ಯವನ್ನು ಈ ಬಾಲಬಸವಿ ಮಾಡುತ್ತಾಳೆ. ಶಾಸ್ತ್ರ, ಪುರಾಣ, ಶಕುನ, ಭವಿಷ್ಯ, ಪಂಚಾಂಗ ಮುಂತಾದವುಗಳು ಜನ ಸಾಮಾನ್ಯರಿಂದ ದೂರವಾಗಿದ್ದ ಕಾಲದಲ್ಲಿ ಬಾಲಬಸವಿಯರು ತಮ್ಮ ಮೌಖಿಕ ಜ್ಞಾನದ ಮೂಲಕ ಸಮಾಜದ ಎಲ್ಲ ವರ್ಗದ ಸಾಮಾನ್ಯ ಜನತೆಯ ಬಳಿಗೆ ತರುವುದರ ಮೂಲಕ ಮನುಷ್ಯರ ಬದುಕಿಗೆ ಬೇಕಾದ ಸಹಜ ವಿವೇಕ ಮತ್ತು ಪ್ರಾಪಂಚಿಕ ಜ್ಞಾನಕ್ಕೆ ಹೊಸ ಧಾರೆಯನ್ನು ತಂದುಕೊಟ್ಟಿದ್ದು ಈ ಬಾಲಬಸವಿಯರ ಜ್ಞಾನಮೀಮಾಂಸೆ.

ಸಮಾಜದ ಮಧ್ಯದಲ್ಲಿದ್ದುಕೊಂಡು ಸಮಾಜದ ಸೂಕ್ಷ್ಮ ಸಂಗತಿಗಳನ್ನು, ಆಗುಹೋಗುಗಳನ್ನು ಕಂಡಿದ್ದ ಈ ಬಾಲಬಸವಿಯರು, ಜನತೆಯಲ್ಲಿ ನೈತಿಕ ಅಧಃಪತನಕ್ಕೆ ಕಾರಣವಾಗುವ, ಕುಟುಂಬದಲ್ಲಿ ಅಪಮೌಲ್ಯಕ್ಕೆ ಒಳಗಾಗುವ ಸಂಗತಿಗಳನ್ನು ಬಿಡಿಸಿ ಹೇಳುವ ಕಾರ್ಯ ಮಾಡುತ್ತಾರೆ. 'ತಂದಿಗೆ ಮಗನಿಗೆ ಒಬ್ಬರೆ ಹೆಂಡ್ತಿಯಾಗುತ್ತಾಳೆ' 'ಅತ್ತಿಗೆ ಮೈದುನು ಗುತ್ತಿಗೆ ನಡೆದಾರೊ', 'ತಂಗಿಯು ಒಡಗೋಡಿ ಸಂಗ ಮಾಡಿದ ಕರ್ಮ ನೋಡಿರಣ್ಣ' ಎಂಬ ಮುಂತಾದ ಅನ್ಯೆತಿಕ ಸಂಬಂಧಗಳಿಂದ ಕುಟುಂಬದಲ್ಲಿನ ಸಂಬಂಧಗಳಲ್ಲಿ ಅಪಮೌಲ್ಯೀಕರಣಗೊಂಡು ಸಮಾಜದ ನೈತಿಕ ಅಧಃಪತನ ಕಾಣುವುದನ್ನು ಹೇಳುತ್ತಾಳೆ. ಬಾಲಬಸವಿಯರ ಜ್ಞಾನಧಾರೆಯ ಮುಖ್ಯ ಉದ್ದೇಶವೆಂದರೆ ಸಾಮಾನ್ಯ ಜನತೆ ಪ್ರಾಕೃತಿಕ ಜ್ಞಾನವನ್ನು ಅರ್ಥ ಮಾಡಿಕೊಳ್ಳಬೇಕು. ಮನುಷ್ಯ ಸ್ವಾವಲಂಬಿಯಾಗಿ ಬದುಕಬೇಕು. ಸಂಬಂಧಗಳಿಗೆ ಬೆಲೆ ನೀಡಬೇಕು ಮನುಷ್ಯ ಮನುಷ್ಯರ ನಡುವೆ ಸಹ ಸಂಬಂಧ ಏರ್ಪಡಬೇಕೆಂಬ ಮಹತ್ವದ ಆಶಯವನ್ನು ಬಾಲಬಸವ ಮೌಖಿಕ ಸಾಹಿತ್ಯ ಹೊಂದಿದೆ.

ಸ್ಥಾಪಿತ ಸಾಮಾಜಿಕ ಮೌಲ್ಯಗಳನ್ನು ಮುರಿಯುವ ಶಕ್ತಿಯಾಗಿ ಬಾಲಬಸವಿಯರ ಜ್ಞಾನಧಾರೆಯು ಕಂಡುಬರುತ್ತದೆ. ಈ ಪರಂಪರೆಯು ತನ್ನ ಸೃಜನಶೀಲ ಕ್ರಿಯೆಗಳಿಂದ ಸಮಾಜಕ್ಕೆ ನೀತಿ ಪಾಠ ಹೇಳುವ ಕಾರ್ಯ ಮಾಡುತ್ತಾ ಬಂದಿದೆ. ಅದನ್ನು ಬಾಲಬಸವಿಯರು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಹೆಣ್ಣಿನ ಮಾತಿಗೆ ಮತ್ತು ಆಕೆಯ ಕ್ರಿಯೆಗೆ ಅರ್ಥವಿಲ್ಲದಂತೆ ಸಮಾಜ ಮೌನಗೊಳಿಸುವ ಕಾರ್ಯ ಮಾಡಿಕೊಂಡು ಬಂದಿದ್ದರೂ ಅವುಗಳನ್ನು ಮೀರುವ ಕಾರ್ಯ ಈ ಬಾಲಬಸವಿಯರು ಮಾಡುತ್ತಾರೆ.

ಬಾಲಬಸವಿಯರು ಮನೆ, ಕುಟುಂಬದ ಉತ್ಪಾದನೆ, ಸಂತಾನೋತ್ಪತ್ತಿ ಮುಂತಾದ ಜೈವಿಕ ಕ್ರಿಯೆಗಳನ್ನು ಸ್ವತಂತ್ರವಾಗಿ ನಿರ್ವಹಿಸುವ ಕಾರ್ಯ ಮಾಡುತ್ತಾಳೆ. ಹೆಣ್ಣಿನ ಸ್ವತಂತ್ರ ಹಾಗೂ ಸ್ವಾವಲಂಬಿ ಬದುಕಿಗೆ ಪ್ರೇರಕವಾಗುವ ಶಕ್ತಿ ಬಾಲಬಸವಿಯರಿಗಿದೆ. ಇವರ ಮೌಖಿಕ ಸಾಹಿತ್ಯದಲ್ಲಿ ತನ್ನ ಲೋಕಜ್ಞಾನದ ಮೂಲಕ ಸಮಾಜಮುಖಿ ಚಿಂತನೆಗಳಿಂದ ಎಲ್ಲರ ಮನೆ ಮಾತಾಗಿದ್ದಾಳೆ.

ಆ. ಬಾಲಬಸವಿಯರ ವೇಷಭೂಷಣಗಳು :

ಬಾಲಬಸವಿಯರು ಬಾಲಬಸವರಂತೆ ಪುರುಷ ವೇಷವನ್ನು ತೊಟ್ಟು ಕಾಲಜ್ಞಾನ ಸಾರಬೇಕಾಗಿರುತ್ತದೆ. ಇವರು ಕೆಂಪು ಕಾವಿ ಅಂಗಿಯನ್ನು ತೊಟ್ಟು, ಬಿಳಿ ಪಂಚೆಯನ್ನು ಹಾಕಿ, ಹಣೆಗೆ ವಿಭೂತಿ ಹಚ್ಚಿಕೊಂಡು, ಕೊರಳಲ್ಲಿ ಲಿಂಗ ಧಾರಣೆ ಮಾಡಿಕೊಂಡು, ರುದ್ರಾಕ್ಷಿ, ಕರ್ಣ ಕುಂಡಲ, ಬಸವ ಮುದ್ರೆಯ ಉಂಗುರ, ತಂಬೂರಿ, ನಡುಪಟ್ಟಿಯನ್ನು ಕಟ್ಟಿಕೊಂಡಿರುತ್ತಾಳೆ. ಇವರು ಕಾಲಜ್ಞಾನ ಸಾರುವಾಗ ಯಾರ ಮುಂದೆಯು ಭಿಕ್ಷೆ ಬೇಡುವುದಿಲ್ಲ. ಕಾಲಜ್ಞಾನವನ್ನು ಕೇಳಿದ ಊರಿನ ಜನತೆಯು ದವಸ ಧಾನ್ಯಗಳನ್ನು ಅವರೊಂದಿಗೆ ಬಂದಿರುವ ಸಹಾಯಕರಿಗೆ ನೀಡುತ್ತಾರೆ.

ಸಮಾಜದಲ್ಲಿ ಮಹಿಳೆಯರಿಗೆ ಅದರಲ್ಲೂ ದಲಿತ ಮಹಿಳೆಯರಿಗೆ ಹತ್ತು ಹಲವು ರೀತಿಯ ಅವಮಾನ, ಅಪಮಾನ, ಅಸಮಾನತೆ, ಲಿಂಗತಾರತಮ್ಯ ಮುಂತಾದ ಸಾಮಾಜಿಕ ಸಮಸ್ಯೆಗಳಿದ್ದರೂ ಹೆದರದೇ ಇವುಗಳನ್ನು ಮೆಟ್ಟಿ ನಿಂತು ಬಾಲಬಸವಿಯರು ತಮ್ಮ ಜ್ಞಾನ ಮತ್ತು ವಿಚಾರಧಾರೆಗಳಿಂದ ಹೆಣ್ಣಿನ ಬದುಕನ್ನು ಕ್ರಿಯಾಶೀಲತೆಯಿಂದ ಇರುವಂತೆ ನೋಡಿಕೊಂಡಿದ್ದಾರೆ. ಇದೇ ಅವರ ಇಡೀ ಜ್ಞಾನಧಾರೆಯ ಒಟ್ಟು ಆಶಯವೇ ಸಮಾಜಮುಖಿ ಚಿಂತನೆಯಾಗಿದೆ.

ವಚನ ಚಳವಳಿಯ ಅರಿವಿನ ಬದುಕನ್ನು ಮೈಗೂಡಿಸಿಕೊಂಡಿರುವ ಬಾಲಬಸವ ಪರಂಪರೆಯಲ್ಲಿ ಅರಿವಿಗೆ ಅಂದರೆ ತಿಳುವಳಿಕೆಗೆ ಅತ್ಯಂತ ಮಹತ್ವದ ಸ್ಥಾನವಿದೆ. ಮೇಲ್ವರ್ಗದ ಜ್ಞಾನವನ್ನು ದಲಿತ ಮಹಿಳೆಯು ತನ್ನ ಜ್ಞಾನವನ್ನಾಗಿಸಿಕೊಳ್ಳುವುದು ಅಷ್ಟು ಸುಲಭದ ಮಾತಲ್ಲ. ಅವಳ ನಿರಂತರ ಪ್ರಯತ್ನ ಮತ್ತು ಅರಿವಿನ ದಾಹ ಅವಳನ್ನು ಜ್ಞಾನಮೀಮಾಂಸೆಯ ಭಾಗವನ್ನಾಗಿಸಿದೆ.

ದಲಿತ ಸಮುದಾಯದ ಸಾಂಸ್ಕೃತಿಕ ಚರಿತ್ರೆ ಮತ್ತು ಅನನ್ಯತೆಯ ಪ್ರತೀಕವಾದ ಈ ಬಾಲಬಸವಿಯರ ಜ್ಞಾನಧಾರೆಗಳು ಅವರ ತಿಳುವಳಿಕೆಯ ಭಾಗದಿಂದಾಗ ಬೆಳೆದು ನಿಂತಿದ್ದಾಳೆ. ಸಮಾಜದಲ್ಲಿ ಹೆಣ್ಣಿಗೆ ಮಾತಾಡುವ ಸಾಮಾಜಿಕ ಸ್ವಾತಂತ್ರ್ಯ ನೀಡದ ಸಮಾಜದಲ್ಲಿ ಗಂಡಿನ ಸಮಾನಕ್ಕೆ ನಿಂತು ಲೋಕ ಸಂಚಾರ ಮಾಡುತ್ತಾ ಮನೆ ಮನೆಗೆ ತಿಳುವಳಿಕೆಯ ಜ್ಞಾನವನ್ನು ಕಾಲಜ್ಞಾನದ ಮೂಲಕ ಸಾರುವ ಬಾಲಬಸವಿಯರು ಸಾಂಪ್ರದಾಯಿಕ ಮನಸ್ಥಿತಿಗಳಿಗೆ ವಿರೋಧ ಒಡ್ಡುತ್ತಾ ಹೆಣ್ಣಿನ ಜ್ಞಾನಧಾರೆಯು ಸೃಜನಶೀಲ ಸಾಮರ್ಥ್ಯಕ್ಕೆ ಕೈಗನ್ನಡಿಯಾಗಿ ಬಾಲಬಸವಿಯರು ನಿಲ್ಲುತ್ತಾರೆ.

ಬಾಲಬಸವಿಯರನ್ನು ಸೂಳೆಯರು ಎಂದು ಸಮಾಜ ತಪ್ಪಾಗಿ ಗ್ರಹಿಸುತ್ತದೆ. ಸಾಂಸ್ಕೃತಿಕವಾಗಿ ಬಾಲಬಸವಿಯರು ಸೂಳೆ, ದೇವದಾಸಿಯರಿಗಿಂತ ಭಿನ್ನರು. ಈ ಸಂಗತಿಯನ್ನು ಶೈಲಜಾ ಹಿರೇಮಠ ಅವರು ಹೀಗೆ ಒಪ್ಪಿಕೊಳ್ಳುತ್ತಾರೆ "ಜನಸಾಮಾನ್ಯರಿರಬಹುದು, ವಿದ್ವಾಂಸರರಿಬಹುದು, ಬಸವಿಯನ್ನು ಮತ್ತು ಜೋಗತಿಯರನ್ನು ಸಾಮಾನ್ಯೀಕರಿಸಿ ಬಸವಿಯರೆಂದೇ ಗುರುತಿಸುವರು. ನಾನು ಕೂಡ 'ಬಸವಿಯರು' ಎನ್ನುವ ಲೇಖನದಲ್ಲಿ ಇಬ್ಬರನ್ನು ಸಮೀಕರಿಸಿಯೇ ಬರೆದಿದ್ದೇ. ಇದು ಮಹಿಳಾ ಅಧ್ಯಯನ ಪತ್ರಿಕೆಯಲ್ಲಿ ಪ್ರಕಟವಾಗಿತ್ತು ಕೂಡಾ. ಕ್ಷೇತ್ರಕಾರ್ಯ ಅಧ್ಯಯನದ ಆಳಕ್ಕಿಳಿದಂತೆಲ್ಲಾ ಇವರೆಡೂ ಭಿನ್ನ ಭಿನ್ನ ಸಾಂಸ್ಕೃತಿಕ ಕಥನವನ್ನು ಹೊಂದಿರುವುದು ಗೊತ್ತಾಯಿತು"[೧೦] ಎನ್ನುವ ಮಾತುಗಳಲ್ಲಿ ಬಸವಿ ಮತ್ತು ಸೂಳೆಯರ ನಡುವಿನ ಸಂಬಂಧವನ್ನು ಬಿಡಿಸಿ ಹೇಳುವ ಕಾರ್ಯ ಮಾಡುತ್ತಾರೆ.

ಬಾಲಬಸವಿ ಮತ್ತು ಬಸವಿಗೂ ವ್ಯತ್ಯಾಸವಿರುವುದು ಕ್ಷೇತ್ರಕಾರ್ಯದಲ್ಲಿ ತಿಳಿದುಬಂದಿದೆ. ಬಾಲಬಸವಿಯರ ಜಾತಿವ್ಯವಸ್ಥೆ, ಸಾಮಾಜಿಕ ಸ್ಥಾನಮಾನ ಮತ್ತು ಅವರ ಸಾಮಾಜಿಕ ಸ್ಥಿತ್ಯಂತರಗಳನ್ನು ಕುರಿತು ಇನ್ನೂ ಹೆಚ್ಚಿನ ಅಧ್ಯಯನ ನಡೆಯಬೇಕಿದೆ.

೩.೫. ನೀಲಗಾರರು, ದೇವರಗುಡ್ಡರು ಮತ್ತು ಬಾಲಬಸವರ ನಡುವಿನ ಸಂಬಂಧಗಳು

ಕುಲ ಏಳು ಹದಿನೆಂಟು ಜಾತಿ ಒಂದೇ ಎನ್ನುವ ಪ್ರಧಾನ ಆಶಯವನ್ನು ಬಸವಣ್ಣ ಮತ್ತು ವಚನ ಚಳುವಳಿಯ ನೇತಾರರು ಹೊಂದಿದ್ದರಿಂದ ಸಮಾಜದಲ್ಲಿನ ದಲಿತರು, ಕೆಳವರ್ಗದ ಶ್ರಮಿಕ ಸಮುದಾಯಗಳು ವಚನ ಚಳವಳಿಯತ್ತ ಮುಖ ಮಾಡಿದವು. ನಂತರದಲ್ಲಿ ವಚನ ಚಳವಳಿಯು ವೀರಶೈವ ಧರ್ಮದ ಸಾಂಸ್ಥಿಕ ಕ್ರಿಯೆಗೆ ಒಳಗಾದ ಬೆಳವಣಿಗೆಯು ಮುಂದೆ 'ಕಲ್ಯಾಣದ ಕಾಂತ್ರಿಗೆ' ಕಾರಣವಾಗಿ ವಚನ ಚಳುವಳಿಯು ಒಡೆದುಹೋಯಿತು. ಅಂದಿನ ಜಾತಿ ಮತ್ತು ಧರ್ಮದ ನಡೆಗಳಿಂದಾಗಿ ಅನೇಕ ಸಮುದಾಯಗಳು ವೀರಶೈವ ಧರ್ಮದ ಆಚಾರಗಳಿಂದಾಗಿ ಹೊರಗುಳಿದವು. ಈ ಪ್ರಕ್ರಿಯೆಯು ಮುಂದೆ ಅನೇಕ ಸಾಧನ ಪಂಥ(Cult)ಗಳನ್ನು ಹುಟ್ಟುಹಾಕುವಲ್ಲಿ ಸಹಾಯಕವಾದವು. ಸಮುದಾಯ ಕೇಂದ್ರಿತವಾದ ಸಾಧನ ಪಂಥ(Cult)ಗಳು, ವಚನ ಚಳವಳಿಯ ವಿಭಿನ್ನ ಜ್ಞಾನಧಾರೆಗಳಾಗಿ ಇನ್ನೂ ನಮ್ಮೊಂದಿಗೆ ಜೀವಂತವಾಗಿವೆ. ವಚನ ಚಳುವಳಿಯ ಜೀವಂತಿಕೆಯ ಭಾಗವಾಗಿರುವ ಈ ಸಾಧನ ಪಂಥಗಳ ವಿಕಾಸವನ್ನು ವೆಂಕಟೇಶ ಇಂದ್ವಾಡಿಯವರು ಈ ರೀತಿಯಾಗಿ ಹೇಳುತ್ತಾರೆ "ಬಸವಣ್ಣನ ಆಚಾರ ಮಾರ್ಗವನ್ನು ಕೇಂದ್ರವಾಗಿಸಿಕೊಂಡು ವೀರಶೈವ ಧರ್ಮಕ್ಕೆ ಒಂದು ಸಿದ್ಧಾಂತದ ರೂಪ ಕೊಡುವ ಮೂಲಕ ವಚನಗಳನ್ನು ವೀರಶೈವ ಧರ್ಮದ ಚೌಕಟ್ಟಿಗೆ ಮಾರ್ಪಡಿಸುವ ಪ್ರಯತ್ನ ಒಂದು ದಿಕ್ಕಾದರೆ, ಇವುಗಳಿಂದ ಹೊರಗುಳಿದ ದಲಿತ, ಕೆಳವರ್ಗದ ಸಮುದಾಯಗಳು ಅಲ್ಲಮ ಮತ್ತು ಬಸವಾದಿ ಪ್ರಮಥರನ್ನು ಕೇಂದ್ರವಾಗಿಟ್ಟುಕೊಂಡು ತಮ್ಮ ಕಾಲದ ಸಾಂಸ್ಕೃತಿಕ ನಾಯಕರನ್ನು ಕಲ್ಯಾಣದ ನಾಯಕರೊಟ್ಟಿಗೆ ಸಮೀಕರಿಸಿಕೊಂಡು ಸಾಂಸ್ಕೃತಿಕ ಆಚರಣಾತ್ಮಕ ಪಂಥ(Cult)ವಾಗಿ ಬೆಳೆದದ್ದು ಇನ್ನೊಂದು ದಿಕ್ಕಾಯಿತು. ಇವುಗಳಲ್ಲಿ ಮುಖ್ಯವಾಗಿ ನೀಲಗಾರರ ಪರಂಪರೆ, ದೇವರಗುಡ್ಡರ ಪರಂಪರೆ, ಬಸವಣ್ಣನವರ ಪರಂಪರೆ, ಬಾಲಬಸವ ಸಂಪ್ರದಾಯ, ರೇವಣಸಿದ್ಧನ ಸಂಪ್ರದಾಯ, ಮರುಳಸಿದ್ಧರ ಸಂಪ್ರದಾಯ, ತಿಂಥಿಣಿ ಮೋನಪ್ಪನವರ ಪರಂಪರೆ ಹಾಗೂ ದೀನ್‌ದಾರ ಚನ್ನಬಸವಣ್ಣನ ಸಂಪ್ರದಾಯಗಳು ಮುಂತಾದವುಗಳು"[೧೧] ಎನ್ನುವ ಇವರ ಮಾತಿನಲ್ಲಿ ವಚನ ಚಳುವಳಿಯ ವಿಭಿನ್ನ ಜ್ಞಾನಧಾರೆಗಳು ಕಲ್ಯಾಣದ ಕ್ರಾಂತಿಯಿಂದಾಗಿ ಹೇಗೆ ತನ್ನದೇ ದೇಶಿ ನೆಲೆಯಲ್ಲಿ ವಿಕಾಸವಾದವು ಎನ್ನುವುದನ್ನು ವೆಂಕಟೇಶ ಇಂದ್ವಾಡಿಯವರು ಹೇಳುತ್ತಾರೆ. ಇವರ ಮಾತಿನಲ್ಲಿ ವಚನ ಯುಗದ ಪ್ರಧಾನ ಕಾಯಕ ಮತ್ತು ಸಮಾನತೆಯ ಆಶಯಗಳನ್ನು ಮೈಗೂಡಿಸಿಕೊಂಡಿರುವ ಅನೇಕ ಸಾಂಸ್ಕೃತಿಕ ಆಚರಣಾತ್ಮಕ ಪಂಥಗಳು ಕರ್ನಾಟಕದಲ್ಲಿವೆ ಎನ್ನುತ್ತಾರೆ. ಈ ರೀತಿಯಾದ ವಿಭಿನ್ನ ಜ್ಞಾನಧಾರೆಗಳು ಇಂದಿಗೂ ನಮ್ಮೊಂದಿಗೆ ಜೀವಂತವಾಗಿವೆ ಮತ್ತು ಅವುಗಳು ವಚನ ಚಳುವಳಿಯ ಆಶಯವನ್ನು ಈಗಲೂ ಪ್ರತಿನಿಧಿಸುತ್ತಿವೆ. ಅಂತಹ ವಚನ ಚಳುವಳಿಯ ಜೀವಂತಿಕೆಯ ಭಾಗವಾಗಿ ಮಧ್ಯ ಕರ್ನಾಟಕದಲ್ಲಿ ಕಂಡುಬರುವ ಬಾಲಬಸವ ಸಂಪ್ರದಾಯವು ಒಂದಾದರೆ ದಕ್ಷಿಣದಲ್ಲಿ ಇದೇ ಮಾದರಿಯ ಆಚರಣಾತ್ಮಕ ಪಂಥಗಳಾಗಿ ದೇವರಗುಡ್ಡ ಪರಂಪರೆಯವರು ಮತ್ತು ನೀಲಗಾರರ ಪರಂಪರೆಯವರು ಕಂಡುಬರುತ್ತಾರೆ.

ಬಾಲಬಸವರಂತೆ ಮಂಟೇಸ್ವಾಮಿ ಕಥೆ ಹಾಡುವ ಕಲಾವಿದರು ಮೈಸೂರು, ಚಾಮರಾಜನಗರ ಮತ್ತು ಮಂಡ್ಯ ಮುಂತಾದ ಪ್ರದೇಶಗಳಲ್ಲಿ ಕಂಡುಬರುತ್ತಾರೆ. ಇವರಿಬ್ಬರ ನಡುವೆ ಕೆಲವೊಂದು ಸಾಮೀಪ್ಯತೆ ಇರುವುದು ಕಂಡುಬರುತ್ತವೆ. 'ಕಲಿ ಸಾರುವ ಕಾಯಕ'ವನ್ನು ನೀಲಗಾರರು ಮಂಟೇಸ್ವಾಮಿ ಕಾವ್ಯದಲ್ಲಿ ಮಾಡಿದರೆ, ಬಾಲಬಸವರು ಕಾಲಜ್ಞಾನವನ್ನು ಪ್ರತ್ಯೇಕವಾಗಿ ಸಾರುವ ಕಾಯಕವನ್ನು ಮಾಡುತ್ತಾರೆ. ನೀಲಗಾರರು ಮಂಟೇಸ್ವಾಮಿ ಕಾವ್ಯ, ಮಲೆ ಮಾದಪ್ಪನ ಕಾವ್ಯ, ಬಿಳಿಗಿರಿ ರಂಗನ ಕಾವ್ಯ, ಮುಂತಾದ ಕಾವ್ಯಗಳನ್ನು ಹಾಡಿದರೆ, ಬಾಲಬಸವರು ಗೋಣಿಬಸಪ್ಪನ ಕಾವ್ಯ, ಮರುಳಸಿದ್ಧನ ಕಾವ್ಯ, ಸಂಡೂರು ರಾಜನ ಕಥೆ, ಇಗ್ನಾವತಿ ಕಥೆ ಮುಂತಾದ ಕಾವ್ಯಗಳನ್ನು ಹಾಡುತ್ತಾರೆ. ಇವರ ವೇಷ ಭೂಷಣಗಳಲ್ಲಿ ಮತ್ತು ಹಾಡಲು ಬಳಸುವ ಪರಿಕರಗಳಲ್ಲಿ ಸಾಮೀಪ್ಯತೆಯ ಅಂಶಗಳು ಕಂಡುಬರುತ್ತವೆ.

ಉತ್ತರ ಕರ್ನಾಟಕದಿಂದ ದಕ್ಷಿಣ ಕರ್ನಾಟಕದೆಡೆಗೆ ಸಾಂಸ್ಕೃತಿಕ ಚಲನೆಯ ಮೂಲಕ ಪಾದಯಾತ್ರೆ ಮಾಡಿದ ಮಂಟೇಸ್ವಾಮಿ, ಕೊಡೇಕಲ್ಲು ಬಸವಣ್ಣನ ಕಾಲಜ್ಞಾನವನ್ನು ಕಾವ್ಯದ ಮೂಲಕ ತನ್ನ ಶಿಷ್ಯಬಳಗದ ಮುಂದೇ ಹೇಳುತ್ತಾರೆ. ಈ ಶಿಷ್ಯ ಬಳಗವು ಇಂದಿಗೂ ಮಂಟೇಸ್ವಾಮಿ ಕಾವ್ಯ ಹಾಡುವಾಗ ಕಾಲಜ್ಞಾನಕ್ಕೆ ಒಂದು ಸಾಲು ಮೀಸಲು ಇಟ್ಟಿದ್ದಾರೆ. ಮಂಟೇಸ್ವಾಮಿ ಕಾವ್ಯದಲ್ಲಿ ಕಲಿ ಸಾರುವ ಪ್ರಸಂಗವಿದೆ. ಅದರ ವಿವರಣೆ ಹೀಗಿದೆ–

ಮಂಟೇಸ್ವಾಮಿ ಪರಂಪರೆಯವರು 'ಮಂಟೇದ ಮಕ್ಕಳು' ಅಥವಾ 'ನೀಲಗಾರರು' ಮಂಟೇಸ್ವಾಮಿ ಕಾವ್ಯವನ್ನು ಹಾಡುವಾಗ ಕಲಿ ಸಾರುವ ಕಥಾ ಪ್ರಸಂಗದಲ್ಲಿ ಜಗತ್ತಿನಲ್ಲಿ ಮುಂದೇ ಆಗುವ ವಿಚಿತ್ರ ಸಂಗತಿಗಳನ್ನು ಮಂಟೇಸ್ವಾಮಿ ತಮ್ಮ ಶಿಷ್ಯರ ಮುಂದೆ ಹೇಳುತ್ತಾರೆ. "ಮಂಟೇಸ್ವಾಮಿ ತನ್ನ ಎಲ್ಲಾ ಶಿಷ್ಯ ಬಳಗವನ್ನು ಮುಂದೆ ಕೂರಿಸಿಕೊಂಡು ಕಾಲಜ್ಞಾನ ಪುಸ್ತಕವನ್ನು ನೋಡಿ ಮುಂದೆ ಬರಲಿರುವ ಕಲಿಗಾಲದ ವೈಚಿತ್ರ್ಯಗಳನ್ನು ವಿವರಿಸುತ್ತಾನೆ. ಮಂಟೇಸ್ವಾಮಿ ತಾನು ಹಿಂದೆ ಹೋದ ಕಲಿಯ ಬಗ್ಗೆ ಹೇಳಬೇಕಾ ಇಲ್ಲ ಬರುವ ಕಲಿ ಬಗ್ಗೆ ಹೇಳಬೇಕಾ? ಎಂಬ ಪ್ರಶ್ನೆಯನ್ನು ಮುಂದಿಡುತ್ತಾನೆ. ಅದಕ್ಕೆ ಮುಂದೆ ಬರುವ ಕಲಿಯ ಬಗ್ಗೆ ಹೇಳುವಂತೆ ದೊಡ್ಡಮ್ಮ ತಾಯಿ ಕೇಳುತ್ತಾಳೆ. ಆಗ ಮಂಟೇಸ್ವಾಮಿ ಈ ಕಲಿಯಿಂದ ನಿಮಗೇನು ಪ್ರಯೋಜನ ಎಂದು ಕೇಳಿದಾಗ ದೊಡ್ಡಮ್ಮ ತಾಯಿ ಹೀಗೆ ಉತ್ತರಿಸುತ್ತಾಳೆ–

> ನಾಳೆ ದಿವಸ ನಮ್ಮ ಹೊಟ್ಟೇಲಿ ಹುಟ್ಟವೆ ।
> ಹುಟ್ಟಿದಂಥ ಮಕ್ಕಳಿಗೆ ಏನಂಥ ಹೇಳ್ತಿನಿ ಅಂದರೆ ।
> ಇಂತಿಂಥ ಕಲಿಗಾಲ ಬರ್‍ತದೆ ಕಣ್ರಪ್ಪ ಮಕ್ಕಳೆ ।
> ಅರಿತು ಬಾಳ ಆಂತ ಹೇಳಿ ।
> ಹುಟ್ಟಿದ ಮಕ್ಕಳಿಗೆ ಬುದ್ಧಿ ಹೇಳ್ಕೊಂಡು ಬಾಳಿ ಬದುಕ್ತೀವಿ ಸ್ವಾಮಿ"[೨]

ಎಂದು ಹೇಳಿದಾಗ ಮಂಟೇಸ್ವಾಮಿಯು ಕಲಿ ಸಾರುವ ಕಥೆಯನ್ನು ನೀಲಗಾರರಿಗೆ ಹೇಳುತ್ತಾನೆ. ಕಲಿ ಅಥವಾ ಕಾಲಜ್ಞಾನ ಸಾರುವ ವಿಶಿಷ್ಟ ಪರಂಪರೆಯು ಮಧ್ಯ ಮತ್ತು ಉತ್ತರ ಕರ್ನಾಟಕದ ಕೆಲವು ಭಾಗಗಳಲ್ಲಿ ಕಂಡುಬರುತ್ತದೆ. ಉತ್ತರ ಕರ್ನಾಟಕದ ಕಡೆ 'ಸಾರುವ ಐನೋರು' ಅಂದರೆ ಕೊಡೇಕಲ್ಲು ಬಸವಣ್ಣನ ಕಾಲಜ್ಞಾನವನ್ನು ಸಾರುವವರು. ಇವರಿಗೆ ಲಿಖಿತ ರೂಪದ ಪಠ್ಯವನ್ನು ಕೊಡೇಕಲ್ಲು ಬಸವಣ್ಣನ ಮಠದ ಪರಂಪರೆಯವರು ಆರಂಭದಿಂದಲೂ ಉಳಿಸಿಕೊಂಡು ಬಂದಿದ್ದಾರೆ. ಸಂಕಲನ ಸಾಹಿತ್ಯವು ವೀರಶೈವ ಧರ್ಮದ ಪುನರ್ ನಿರ್ಮಾಣದ ಕಾರ್ಯ ಮಾಡುವ ಸಮಯಕ್ಕೆ ಕೊಡೇಕಲ್ಲು ಪರಂಪರೆಯು ಕಾಲಜ್ಞಾನ ಸಾಹಿತ್ಯವನ್ನು ಸಂಗ್ರಹಿಸಿ ಮತ್ತು ಸಂಪಾದಿಸಿ ಅದರ ಮೂಲಕ ಸಮಾಜದಲ್ಲಿನ ಮನುಷ್ಯ ಸಂಬಂಧವನ್ನು ಗಟ್ಟಿಗೊಳಿಸಲು ಪ್ರಯತ್ನ ಮಾಡಿದ್ದಾರೆ. ಜನರ ಮುಂದೆ ಸಾರುವ ಐನೋರು ಹಳ್ಳಿ ಹಳ್ಳಿಗೂ ಕಾಲಜ್ಞಾನವನ್ನು ಸಾರುತ್ತಾ ಬಂದಿದ್ದಾರೆ. ದೇವರ ಗುಡ್ಡ ಮತ್ತು ನೀಲಗಾರರಂತೆಯೇ ಕಥೆ ಮಾಡುವ ಇನ್ನೊಂದು ಪರಂಪರೆಯೆಂದರೆ ಅದು 'ಬಾಲಬಸವ ಪರಂಪರೆ'. ಮಧ್ಯ ಕರ್ನಾಟಕ ಮತ್ತು ಉತ್ತರ ಕರ್ನಾಟಕದ ಕೆಲವು ಭಾಗಗಳಲ್ಲಿ ಮಾತ್ರ ಈ ಸಂಪ್ರದಾಯವು ಕಂಡುಬರುತ್ತದೆ. ಇವರು ಯಾವುದೇ ಬರಹ ಅಥವಾ ಲಿಖಿತ ರೂಪದ ಪಠ್ಯವನ್ನು ಬಳಸದೆ, ತಮ್ಮ ಮೌಖಿಕತೆಯ ಮೂಲಕವೇ ಕಾಲಜ್ಞಾನ ಸಾಹಿತ್ಯವನ್ನು ಸಾರುವ(ಹಾಡುವ) ವೃತ್ತಿಯನ್ನು ಕುಲವೃತ್ತಿಯನ್ನಾಗಿಸಿಕೊಂಡು ಜೀವನವನ್ನು ಸಾಗಿಸುತ್ತಿದ್ದಾರೆ. ನೀಲಗಾರರಂತೆ ಬಾಲಬಸವರು ದಲಿತ ಸಮುದಾಯಕ್ಕೆ ಸೇರಿದವರಾಗಿದ್ದಾರೆ. ನೀಲಗಾರರಂತೆಯೇ ಇವರೂ ಕೈಯಲ್ಲಿ ತಂಬೂರಿ, ಕೊರಳಲ್ಲಿ ರುದ್ರಾಕ್ಷಿ ಮಾಲೆ, ಹಣೆಯಲ್ಲಿ ವಿಭೂತಿ ಧರಿಸಿ ಕಾವಿ ಕಷಾಯವನ್ನು ಹಾಕಿಕೊಳ್ಳುತ್ತಾರೆ.

ನೀಲಗಾರರು ಮತ್ತು ದೇವರ ಗುಡ್ಡದವರು ಹಾಡುವ ಕಾಲಜ್ಞಾನ ಅಥವಾ ಕಲಿ ಆಯ್ದ ಸಾಲುಗಳು

ಊರು ಕಾಡಾಗ ಬೇಕು
ಕಾಡು ಊರಾಗ ಬೇಕು
ಅತ್ತೆ ಸೊಸೆಯಾಗ ಬೇಕು
ಗರ್ತಿಗೌಡ್ಯಾಗ ಬೇಕು
ನಾಯ್ಯ ಪಂಚಾಯ್ತಿ ಒಳ್ಗ
ಈ ಹುಟ್ಟ ಗೌಡ ಮಕ್ಕಳ ಮಾತೇ
ಮುಂದಾ ಆಗ ನಡೆಯಬೇಕು ॥ ಸಿದ್ದಯ್ಯ ಸ್ವಾಮಿ ಬನ್ನಿ ॥
ಅತ್ತೆ ಅಳಿಯ ಕಂದಾ
ಒಂದಾಗಿ ಕೂಡಬೇಕು

ಅಣ್ಣನೆಡ್ತಿಯ ಮ್ಯಾಲಾ
ತಮ್ಮ ಕಣ್ಣಾಕ ಬೇಕು
ಅಪ್ಪ ಮಗ್ನಗ ನಾಳಾ
ಒಬ್ಬ ಹೆಂಡ್ತಿ ಆಗಬೇಕು
ಹೊಳೆ ನೀರಿಗೆ ಕಂದಾ
ಹೋರಾಟವಾಗ ಬೇಕು
ಕೆರೆಕ್ಕೊ ನೀರೊಂದಕ್ಕಾ
ಕಿತ್ತಾಟವಾಗ ಬೇಕು
ಬಾವಿ ನೀರೊಂದಕ್ಕಾ
ಬ್ಯಾಗಾಟ ಆಗ್ಬೇಕು
ಒಂದು ಬಿಂದ್ಗ ನೀರಿಗೆ
ಒಂದಾಣಿ ಆಗಬೇಕು ॥ ಸಿದ್ದಯ್ಯ ಸ್ವಾಮಿ ಬನ್ನಿ ॥
ನಿತ್ಯ ಬುಗುಡಿ ಮುಟ್ಟ ಸಾಡಿ
ಮಕ್ಕಳ ಮಾತೆ
ಮುಂದಾ ನಡೆಯಬೇಕು
ಸತ್ಯವಂತರ ಮಾತು
ಹಿಂದಾಗಿರ ಬೇಕು
ಸೇರುಪಾವು ಹೋಗಬೇಕು
ಕೇಜಿ ಬಟ್ಟು ಬರಬೇಕು
ಬತ್ತ ರಾಗಿ ದಾನ್ಯವಾ
ಒಂದ್ ದಿನ ಒಪ್ಪತ್ತು
ತಕ್ಕಡಿಲಿ ತೂಕ ಮಾಡಿ
ಬ್ಯಾಗ ಒಳಗೆ ಹಾಕ್ಕಾಂಡು
ನಾಳಾ ಕಲಿಯುಗದಲ್ಲಿ
ಬೀದಿ ಬೀದಿಯೊಳಗೆ

ಬೇಗಾಟ ಮಾಡ್ಬೇಕು
ಮೂಡಾಲಾಗ ಆರೋಗ
ಪಡುಲಾಗೆಲ್ಲಾ ರೋಗ
ತಂಕ್ಲಾಗ ಐಭೋಗ
ಬಡಲ ರಾಜ್ಯಕ
ಬಡತನ ಅಂದರಂತಾ ॥ ಸಿದ್ದಯ್ಯ ಸ್ವಾಮಿ ಬನ್ನಿ ॥
ಎಲ್ಲ ದೇವರ ಪೂಜಾ
ನಿಲ್ಲುತಾ ಬರಬೇಕು
ನರರ ಆಳ್ಕ ಹೆಚ್ಚಾಗ ಬೇಕು
ಸುರರ ಆಳಕಾ ಕಮ್ಮಿಯಾಗಿ
ದೇವತೆ ದೇವಮಾನವರೆಲ್ಲಾ
ಕಲ್ಲಾಗಿ ನಿಂತ್ಕ ಬೇಕು
ಕಗ್ಗಲಿನ ದೇವ್ರಗಾ
ಕಷ್ಟ ಬಂದ ಕಾಲದಲ್ಲಿ ಮಾತ್ರ
ಕೈ ಎತ್ತಿ ಮುಗಿಯ ಬೇಕು
ಏಳು ವರ್ಷದ ಎಳ ಬಾಲಕಿ
ಹೊಟ್ಟೆ ಒಳಗಾ
ಚೆನ್ನಬಸವಣ್ಣನವರು
ತಾವುಟ್ಟಿ ಬರುವಾಗ
ನರ ಮುಂಡಾ ಮಕ್ಕಾಳು
ನಾಳಾ ಒಟ್ಟಾಗಿ ಸಾಯ ಬೇಕು ॥ ಸಿದ್ದಯ್ಯ ಸ್ವಾಮಿ ಬನ್ನಿ ॥

ಕಾಲಜ್ಞಾನ, ಜಾತಿ, ಹಾಡುವ ಕಥನ ಮಾದರಿಗಳು ಪ್ರಾದೇಶಿಕವಾದ ಸಾಂಸ್ಕೃತಿಕ ನಾಯಕರುಗಳ ಜೀವನಚರಿತ್ರೆಯನ್ನು ಹಾಡುವ ಮಾದರಿ ಮುಂತಾದ ಈ ಎಲ್ಲಾ ಅಂಶಗಳನ್ನು ಗಮನಿಸಿದಾಗ ಈ ಆಚರಣಾತ್ಮಕ ಪಂಥಗಳು ಮೂಲದಲ್ಲಿ ಒಂದೇ ಆಗಿರಬೇಕು. ಮುಂದೆ ಇವು ಬೇರೆ ಬೇರೆ ಕಾರಣ ಮತ್ತು ಸಾಮಾಜಿಕ ಬಿಕ್ಕಟ್ಟುಗಳಿಂದಾಗಿ ಇವರನ್ನು ದೂರ ಮಾಡಿರಬಹುದೆಂದು ಅನಿಸುತ್ತದೆ. ಇದರ ಬಗ್ಗೆ ಇನ್ನೂ ಹೆಚ್ಚಿನ ಅಧ್ಯಯನಗಳಾಗಬೇಕು. ಬಾಲಬಸವರ ಮೌಖಿಕ

ಸಾಹಿತ್ಯದಲ್ಲಿ ಬಸವಣ್ಣ, ಗೋಣಿಬಸಪ್ಪ ಮತ್ತು ಮರುಳಸಿದ್ಧರು ಚಲನಶೀಲತೆಯ ಭಾಗವಾದರೆ, ಅತ್ತ ಮೈಸೂರಿನ ಭಾಗದಲ್ಲಿರುವ ದೇವರಗುಡ್ಡ ಮತ್ತು ನೀಲಗಾರರಿಗೆ ಅಲ್ಲಮ, ಮಲೆಮಾದಪ್ಪ ಮತ್ತು ಮಂಟೇಸ್ವಾಮಿಗಳು ಚಲನಶೀಲತೆಯ ಭಾಗವಾಗಿದ್ದಾರೆ.

೩.೬. ಆಧುನಿಕತೆಗೆ ಮುಖಾಮುಖಿಯಾಗಿರುವ ಬಾಲಬಸವ ಪರಂಪರೆ

ಹಳ್ಳಿಗಳು ಆಧುನಿಕತೆಗೆ ಒಳಗಾಗಿರುವ ಈ ಸಮಯದಲ್ಲಿ ಬಾಲಬಸವರ ಭೌಗೋಳಿಕ ನೆಲೆಗಳು ಕೂಡ ಬದಲಾವಣೆಯನ್ನು ಬಯಸುತ್ತಿವೆ. ಪರಿಣಾಮವಾಗಿ ಬಾಲಬಸವರು ಸಾಮಾಜಿಕ ಪರಿವರ್ತನೆಯತ್ತ ಮುಖ ಮಾಡಿದ್ದಾರೆ. ಇದರಿಂದ ಬಾಲಬಸವ ಪರಂಪರೆಯು ಎರಡು ಕವಲುಗಳಾಗಿ ಸಾಗುತ್ತಿವೆ. ಒಂದು ಆಧುನಿಕ ಶಿಕ್ಷಣದ ಪ್ರಭಾವದಿಂದಾಗಿ, ಉನ್ನತ ವಿಚಾರಶೀಲತೆ, ಆಲೋಚನೆ, ಓದು, ಸಂಘಟನೆಗಳ ನೆರವಿನಿಂದ ತಮ್ಮ ಬದುಕಿನ ಶೈಲಿಯಲ್ಲಿ ಬದಲಾವಣೆ ತಂದುಕೊಂಡಿದ್ದಾರೆ. ಬಾಲಬಸವ ಪದ್ಧತಿಯನ್ನು ಕೈಬಿಡುವ ಸಲುವಾಗಿ ಅನೇಕರು ದೀಕ್ಷೆಯನ್ನು ನಿರಾಕರಿಸಿರುವ ಸಂಗತಿ ಕ್ಷೇತ್ರಕಾರ್ಯದ ಮೂಲಕ ತಿಳಿದುಬಂದಿದೆ. ಚಿತ್ರದುರ್ಗ ಜಿಲ್ಲೆ ಮೊಳಕಾಲ್ಮೂರು ತಾಲ್ಲೂಕಿನ ಕೆರೆಕೊಂಡಾಪುರದ ಬಾಲಬಸವರ ಮನೆತನವು ಸಾಮಾಜದಲ್ಲಿ ಉನ್ನತ ಹುದ್ದೆಗಳಿಂದಾಗಿ, ಬಾಲಬಸವ ಪರಂಪರೆಯ ಆಚರಣೆಯನ್ನು ಕೈಬಿಟ್ಟಿದ್ದಾರೆ. ಆಧುನಿಕತೆಗೆ ತೆರೆದುಕೊಂಡಿರುವ ಮನೆತನವಾಗಿರುವ ಇವರು ವಿದೇಶದಲ್ಲಿ ಉನ್ನತ ಹುದ್ದೆ ಮತ್ತು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಮತ್ತೊಂದು ಕವಲು ಅದೇ ಸಮಾಜವನ್ನೇ ನಂಬಿ ಬದುಕುತ್ತಿದ್ದಾರೆ. ಈ ಪರಂಪರೆಯು ಅದರಿಂದ ಬಿಡಿಸಿಕೊಳ್ಳಲಾಗದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಕುಲಕಸುಬಿನಿಂದಲೇ ತಮ್ಮ ಜೀವನ ನಡೆಸುತ್ತಿದ್ದಾರೆ. ಹೊಳಲ್ಕೆರೆಯ ರಾಮಘಟ್ಟ, ಹೀಲದಹಳ್ಳಿ, ಗದುಗಿನ ಹರ್ಲಾಪುರ, ಹೊನ್ನಾಳಿಯ ಗಂಜನಹಳ್ಳಿಯಲ್ಲಿ ಬಾಲಬಸವಿ ಪದ್ಧತಿಯನ್ನು ಧಿಕ್ಕರಿಸಿರುವುದು ಕ್ಷೇತ್ರಕಾರ್ಯದ ಮೂಲಕ ನಮಗೆ ತಿಳಿದುಬರುತ್ತದೆ. ಆದರೆ ಕೂಡ್ಲಿಗಿಯ ಬೈರದೇವರಗುಡ್ಡ ಮತ್ತು ಹರಪನಹಳ್ಳಿಯ ಬಾಲಬಸವರು ಬಾಲಬಸವಿ ಪದ್ಧತಿಯನ್ನು ಮುಂದುವರಿಸಿಕೊಂಡು ಬಂದಿದ್ದಾರೆ. ಈ ಪರಂಪರೆಯಲ್ಲಿ ಬಾಲಬಸವಿ ಪದ್ಧತಿಯ ಹುಟ್ಟಿಗೆ ಕಾರಣವಾಗಿರುವ ಸಾಮಾಜಿಕ ಸಂಗತಿಯನ್ನು ತಿಳಿಯಬೇಕಾಗಿದೆ.

ಒಂದು ಸಮಾಜದಲ್ಲಿ ಸಮುದಾಯ, ಕುಟುಂಬಗಳ ಬದುಕಿನ ರೀತಿ–ನೀತಿ, ಸಂಸ್ಕೃತಿಗಳನ್ನು ಅರಿಯಬೇಕಾದಲ್ಲಿ ಆ ಸಮುದಾಯಗಳು ಅನುಸರಿಸುವ ನಂಬಿಕೆ, ಸಂಪ್ರದಾಯ, ಆಚರಣೆ, ವಿಧಿ ವಿಧಾನ, ಭಾಷೆ ಹೀಗೆ ಅನೇಕ ಬಹುಸಂಸ್ಕೃತಿಯನ್ನು ಅರಿಯಬೇಕಾಗುತ್ತದೆ. ಈ ಬಹುಸಂಸ್ಕೃತಿಗಳು ಆಧುನಿಕತೆಗೆ ತೆರೆದುಕೊಂಡಾಗ ಅನೇಕ ಬದಲಾವಣೆಗಳು ಕಂಡುಬರುತ್ತವೆ. ಆಧುನಿಕತೆಯ ಪ್ರವೇಶದಿಂದ ಭಾರತದಲ್ಲಿ ಅನೇಕ ಬುಡಕಟ್ಟು ಸಮುದಾಯಗಳು ತಮ್ಮ ಪಾರಂಪರಿಕ ಜ್ಞಾನವನ್ನು, ಕಲೆ ಸಂಸ್ಕೃತಿಯನ್ನು ಮತ್ತು ಆಚರಣೆ ನಂಬಿಕೆಯನ್ನು ತಮ್ಮ ಮೂಲ ನೆಲೆಯಿಂದ ಕಳೆದುಕೊಳ್ಳುತ್ತಿವೆ.

ಮಧ್ಯ ಕರ್ನಾಟಕದಲ್ಲಿ ಹೆಚ್ಚಾಗಿರುವ ಬಾಲಬಸವ ಪರಂಪರೆಯು ಈಗ ಆಧುನಿಕತೆಗೆ ಮುಖಮಾಡಿ ನಿಂತಿದೆ. ಅದಕ್ಕೆ ತನ್ನದೇ ಆದ ಸಾಂಸ್ಕೃತಿಕ ಕಾರಣಗಳಿವೆ. ಬಾಲಬಸವಿ ಪದ್ಧತಿಯೇ ಪ್ರಧಾನವಾದ ಕಾರಣವಾಗಿದೆ. ಉದ್ಯೋಗ ಮತ್ತು ಸಾಂಸಾರಿಕ ಜವಾಬ್ದಾರಿಯನ್ನು ಕಾಲಜ್ಞಾನದಿಂದಲೇ ನಿರ್ವಹಿಸುವುದು ಕಷ್ಟಕರ ಎನ್ನುವ ವಾಸ್ತವದ ತಿಳುವಳಿಕೆಯು ಈ ಪರಂಪರೆಯ ಅವನತಿಗೆ ಮುಖ್ಯ ಕಾರಣವಾಗಿದೆ. ಆಧುನಿಕತೆಯ ಪ್ರವೇಶದಿಂದಾಗಿ ಸಾಂಸ್ಕೃತಿಕ ಪರಂಪರೆಯನ್ನು ಸಾರುವ ಸಮುದಾಯಗಳನ್ನು ನೋಡುವ ಕ್ರಮವೇ ಬೇರೆಯಾಗಿದೆ. ಇದರಿಂದ ಬಾಲಬಸವರ ಜೀವನ ನಿರ್ವಹಣೆ ಕಷ್ಟಕರವಾಗಿದೆ. ಇದರಿಂದ ಈ ಪರಂಪರೆಯಲ್ಲಿ ಅನೇಕರು ಭಿನ್ನಹಾದಿಗಳನ್ನು ಹಿಡಿದಿದ್ದಾರೆ.

ಬಾಲಬಸವರು ಸಂಚಾರಿಗಳಾಗಿರುವುದರಿಂದ ಇವರ ಪೂರ್ವಜರು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ವಲಸೆ ಬಂದವರು. ಹಾಗಾಗಿ ಇವರಿಗೆ ಕೃಷಿ ಭೂಮಿ ಸಹ ಇರುವುದಿಲ್ಲ. ಇದ್ದರೂ ಅಲ್ಪ ಸ್ವಲ್ಪ ಪ್ರಮಾಣದಲ್ಲಿರುತ್ತದೆ. ಮಳೆಯನ್ನೇ ನಂಬಿ ಕೃಷಿ ಮಾಡುವುದು ಕಷ್ಟಕರ ಕೆಲಸ. ಬಾಲಬಸವರು ಊರಾಡುವ ಸಮಯದಲ್ಲಿ ತಿಂಗಳುಗಟ್ಟಲೆ ಊರು ಮನೆ ಬಿಟ್ಟು ಇರುತ್ತಾರೆ. ಇದರಿಂದ ಕೃಷಿ ಜೀವನದಲ್ಲಿ ನೇರವಾಗಿ ಭಾಗವಹಿಸಲು ಸಾಧ್ಯವಾಗುವುದಿಲ್ಲ. ಬಾಲಬಸವರ ಜೀವನ ನಿರ್ವಹಣೆಗೆ ಒತ್ತಾಸೆಯಾಗಿದ್ದರಲ್ಲಿ ವೀರಶೈವರೇ ಹೆಚ್ಚಾಗಿದ್ದಾರೆ. ಕಾರಣ ಬಸವಣ್ಣ ಮತ್ತು ಕಾಲಜ್ಞಾನ. ಸಾಂಸ್ಕೃತಿಕ ಸಾಮಾಜಿಕ ಮನ್ನಣೆ ಪಡೆದಿದ್ದರೂ ಧಾರ್ಮಿಕವಾಗಿ ಅತಂತ್ರ ಸ್ಥಿತಿಯಲ್ಲಿರುವ ಇವರು ಈಗ ಅವರ ಕುಲವೃತ್ತಿಯಾದ ಕಾಲಜ್ಞಾನ, ಕಥನಗಳನ್ನು ಹಾಡುವುದರಿಂದ ಆದಾಯವಿಲ್ಲ. ಅವರಿಗೆ ಹೊಲಮನೆಗಳು ಇಲ್ಲ. ಬೇಸಾಯ ಕೂಲಿ ಮಾಡಲು ಸಾಧ್ಯವಾಗುತ್ತಿಲ್ಲ. ಇದರಿಂದಾಗಿ ಆರ್ಥಿಕ ಬಿಕ್ಕಟ್ಟಿನಲ್ಲಿದ್ದಾರೆ. ಬಾಲಬಸವರು ತಮ್ಮ ಮೌಖಿಕ ಸಾಹಿತ್ಯವನ್ನು ಉಳಿಸಿಕೊಳ್ಳಬೇಕೆಂದರೆ ಪರಂಪರೆಯನ್ನು ಮುಂದುವರಿಸಿಕೊಂಡು ಹೋಗಬೇಕು. ಆದರೆ ಅದರಿಂದ ಅವರಿಗೆ ಅಷ್ಟೊಂದು ಲಾಭವಿಲ್ಲ. ಈ ದಿನಮಾನಗಳಲ್ಲಿ ದಾನ, ಧರ್ಮ, ಭಿಕ್ಷೆ ತುಂಬಾ ದುಬಾರಿಯಾಗಿವೆ. ಹಾಗಾಗಿ ಹೊಸತಲೆಮಾರಿನವರು ಈಗ ತಮ್ಮ ಸಂಪ್ರದಾಯವನ್ನು ಬಿಟ್ಟು ಮತ್ತೆ ಮಾದಿಗ ಕುಲಕ್ಕೆ ಸೇರಿಕೊಳ್ಳುವ ಕಡೆ ಆಸಕ್ತರಾಗಿದ್ದಾರೆ. ಆದಾಯದ ಮೂಲಗಳನ್ನು ಹರಸಿ ವಲಸೆ ಹೋಗುವ ಆಲೋಚನೆಯಲ್ಲಿದ್ದಾರೆ. ಅವರು ತಮ್ಮ ಮೂಲವನ್ನು ಬಿಡುವ ಧೈರ್ಯ ಮಾಡಿದರೂ ಮತ್ತೇ ಅದನ್ನೇ ಒಪ್ಪಿಕೊಳ್ಳುವ ದ್ವಂದ್ವ ಮನಸ್ಥಿತಿ ಇವರದಾಗಿದೆ.

ಬಾಲಬಸವರು ಊರಾಡುವಾಗ ಒಕ್ಕಲು ಮಾಡುವ ಲಿಂಗಾಯತರು, ಕುರುಬರು, ಬೇಡರು ಮತ್ತು ಮಾದಿಗರು ಇವರಿಗೆ ಭಿಕ್ಷೆ ರೂಪದಲ್ಲಿ ದವಸ ಧಾನ್ಯಗಳನ್ನು ನೀಡುತ್ತಿದ್ದರು. ಆದರೆ ಇತ್ತೀಚೆಗೆ ದಾನ ಮಾಡುವ ಮನಸ್ಥಿತಿಯು ತುಂಬಾ ಕಡಿಮೆಯಾಗಿದೆ. ಅಲ್ಲದೆ ಹಿರಿಯರನ್ನು ಗೌರವಿಸುವ ಗುಣವಿಲ್ಲದಿರುವ ಯುವ ಸಮುದಾಯವು ಬಾಲಬಸವರನ್ನು ನೋಡುವ ರೀತಿಯು

ಭಿನ್ನವಾಗಿದೆ. ಇದರಿಂದ ಅವರಿಗೆ ವರ್ಷದ ಊಟಕ್ಕೆ ಸಮಸ್ಯೆಯಾಗಿದೆ. ಆದ್ದರಿಂದ ಇವರಲ್ಲಿ ಶೈಕ್ಷಣಿಕ ಸ್ಥಿತಿ ಸುಧಾರಿಸುತ್ತಿದೆ. ಈ ಎಲ್ಲ ಬೆಳವಣಿಗೆಯಿಂದ ಬಾಲಬಸವ ಪರಂಪರೆಯಲ್ಲಿ ಉಂಟಾಗಿರುವ ಬದಲಾವಣೆಗಳನ್ನು ಈ ರೀತಿಯಾಗಿ ಪಟ್ಟಿ ಮಾಡಬಹುದಾಗಿದೆ.

* ಬಾಲಬಸವರ ಜೀವನಕ್ರಮದಲ್ಲಾದ ಬದಲಾವಣೆ
* ಕಾಯಕ ಅಥವಾ ವೃತ್ತಿಯಲ್ಲಾದ ಬದಲಾವಣೆ
* ಮೌಖಿಕ ಸಾಹಿತ್ಯದಲ್ಲಾಗಿರುವ ಬದಲಾವಣೆಗಳು

ಅ. ಬಾಲಬಸವರ ಜೀವನದಲ್ಲಾದ ಬದಲಾವಣೆ

ವಚನ ಚಳುವಳಿಯ ಸಮಯದಲ್ಲಿ ಮೇಲ್ಮುಖ ಚಲನೆ ಹೊಂದಿದ ಬಾಲಬಸವರು ಅಂದಿನಿಂದ ಮೇಲ್ಮುಖ ನೆಲೆಯಲ್ಲಿ ಬದುಕು ಕಟ್ಟಿಕೊಂಡಿದ್ದರು. ಆಧುನಿಕತೆ ಪ್ರವೇಶದಿಂದಾಗಿ ಹೊಸತಲೆಮಾರಿನ ಯುವಕರು ದೀಕ್ಷೆಯನ್ನು ನಿರಾಕರಿಸುವುದನ್ನು ನಾವು ಕಾಣಬಹುದಾಗಿದೆ. ಬಾಲಬಸವರ ಮನೆಯಲ್ಲಿ ಹುಟ್ಟಿದ ಎಲ್ಲ ಮಕ್ಕಳಿಗೂ ಕಡ್ಡಾಯವಾಗಿ ಲಿಂಗದೀಕ್ಷೆ ನೀಡುವುದು ಒಂದು ಕಾಲದಲ್ಲಿತ್ತು. ಈಗ ಅದು ಕ್ರಮೇಣ ಕ್ಷೀಣಿಸುತ್ತಾ ಬಂದಿದೆ. ಒಂದು ಮನೆಯಲ್ಲಿ ಒಬ್ಬರಿಗೆ ಮಾತ್ರ ದೀಕ್ಷೆ ನೀಡುವುದು ಕ್ಷೇತ್ರಕಾರ್ಯದಿಂದ ತಿಳಿದುಬಂದಿದೆ.

ದೀಕ್ಷೆ ನಿರಾಕರಿಸುವ ಯುವ ಸಮುದಾಯವು ತಮ್ಮನ್ನು ಮಾದಿಗ ಸಮುದಾಯದೊಂದಿಗೆ ಗುರುತಿಸಿಕೊಳ್ಳುತ್ತಿದ್ದಾರೆ. ಬಾಲಬಸವರು ಮಾದಿಗರಿಂದ ಪ್ರತ್ಯೇಕವಾಗಿ ವಾಸ ಮಾಡುವುದು ಈಗ ಕಡಿಮೆ ಮಾಡಿದ್ದಾರೆ. ಜನಸಂಖ್ಯೆ ಹೆಚ್ಚಾದಂತೆ ಅವರು ಸ್ಥಳ ಮತ್ತು ಆರ್ಥಿಕ ಭದ್ರತೆಗಾಗಿ ಮಾದಿಗ ಸಮುದಾಯದೊಂದಿಗೆ ಜೀವಿಸುವುದನ್ನು ಆರಂಭಿಸಿದ್ದಾರೆ. ಮೊದಲು ವೀರಶೈವರಂತೆ ಕಾಣುತ್ತಿದ್ದ ಬಾಲಬಸವರು ತಮ್ಮ ಸಾಮಾಜಿಕ ಜೀವನವನ್ನು ಬದಲಾಯಿಸಿಕೊಳ್ಳಲು ಹೆಚ್ಚು ಆಸಕ್ತಿ ವಹಿಸಿಕೊಂಡಿರುವುದು ಕಂಡುಬರುತ್ತದೆ.

ಆ. ವೃತ್ತಿಯಲ್ಲಾಗಿರುವ ಬದಲಾವಣೆ

ಬಾಲಬಸವರು ವಚನ ಚಳುವಳಿಯ ಕಾಯಕತತ್ವದ ಅಡಿಯಲ್ಲಿ ಬೆಳೆದುಬಂದರೂ ಅವರು ಊರಾಡುವ(ಕಾಲಜ್ಞಾನ ಸಾರುವ) ಕಾಯಕದಿಂದಲೇ ಜೀವನ ನಿರ್ವಹಣೆ ಮಾಡುತ್ತಿದ್ದರು. ಆದರೆ ಇಂದು ಇದರಿಂದಾಗಿ ಅವರು ಜೀವನ ನಡೆಸುವುದು ಕಷ್ಟಕರವಾಗಿದೆ. ಆಧುನಿಕತೆ ಪ್ರವೇಶದಿಂದಾಗಿ ಅವರು ತಮ್ಮ ಕುಲವೃತ್ತಿಯನ್ನು ಮನೆಯಲ್ಲಿ ಒಬ್ಬರಿಗೆ ಮಾತ್ರ ಸೀಮಿತ ಮಾಡಿ ತಾವು ಬೇರೆ ಬೇರೆ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಈ ಪರಂಪರೆಯಲ್ಲಿ ಚಿತ್ರದುರ್ಗ ಜಿಲ್ಲೆಯ ಕೆರೆಕೊಂಡಾಪುರದ ಬಾಲಬಸವರು ಕಾಲಜ್ಞಾನದೊಂದಿಗೆ ಪಂಚಾಂಗ ನೋಡಿ ಮಳೆ ಬೆಳೆಯ ಬಗ್ಗೆ ತಿಳಿಸುವುದು, ಕಾಯಿಲೆ-ಕಾಸಾಲೆಗೆ ಮದ್ದುಕೊಡುವುದು, ಮಾನಸಿಕ ರೋಗಪೀಡಿತರಿಗೆ ಅಂತ್ರ ತಂತ್ರ ಕಟ್ಟುವುದು, ಮದುವೆ ಮುಂಜಿಗಳಿಗೆ ಕಾಲ ನಿರ್ಧಾರ ಮಾಡುವುದು ಮುಂತಾದವುಗಳಿಂದ

ಊರಿನ ಜನಗಳ ಸಂಕಷ್ಟಗಳಿಗೆ ಸ್ಪಂದಿಸುವ ಕೆಲಸ ಮಾಡುತ್ತಿದ್ದಾರೆ. ಇದು ತಮ್ಮ ಮೂಲ ನೆಲೆಯಿಂದ ಬಿಡಿಸಿಕೊಳ್ಳುವ ಪರ್ಯಾಯ ಮಾರ್ಗವೆಂದು ತಿಳಿಯಬಹುದಾಗಿದೆ. ಈ ಪರಂಪರೆಯಲ್ಲಿ ಹೆಚ್ಚಿನವರು ವಿದ್ಯಾವಂತರಾಗಿಲ್ಲದ ಕಾರಣ ಸರ್ಕಾರಿ ಸೌಲಭ್ಯಗಳು ಸಿಗುತ್ತಿಲ್ಲ. ಇವರು ತಮ್ಮ ಪೂರ್ವಜರು ನಡೆಸಿಕೊಂಡು ಬರುತ್ತಿರುವ ಪದ್ಧತಿಯನ್ನು ಹೊಸತಲೆಮಾರಿನ ಯುವಕ ಯುವತಿಯರು ಒಪ್ಪುತ್ತಿಲ್ಲ. ಹಾಗಾಗಿ ತಮ್ಮ ಮೂಲ ಕುಲವೃತ್ತಿಯನ್ನು ಮಾಡಲು ಯಾರೂ ಸಿದ್ಧರಿಲ್ಲ. ಇದರಿಂದಾಗಿ ಅವರ ವೃತ್ತಿಗಳಲ್ಲಿ ಬದಲಾವಣೆಯನ್ನು ಕಂಡಿವೆ.

ಈ ಪರಂಪರೆಯಲ್ಲಿ ಕೆಲವರು ವಿದ್ಯಾವಂತರಾಗಿ ಸರ್ಕಾರಿ ಕೆಲಸಗಳನ್ನು ಸ್ವೀಕರಿಸಿದ್ದಾರೆ. ಕೆಲಸ ಸಿಗದವರು ಅರೆಕಾಲಿಕ ನೌಕರಿ ಮಾಡುತ್ತಿದ್ದಾರೆ. ಇನ್ನೂ ಕೆಲವರು ಕೂಲಿ ಕೆಲಸ, ಸಿಮೆಂಟ್ ಕೆಲಸ, ಹಮಾಲಿ ಕೆಲಸ, ಆಟೋ ಹೊಡೆಯುವ ಕೆಲಸ, ಮನೆಕೆಲಸ ಹೀಗೆ ಮುಂತಾದ ಉದ್ಯೋಗಗಳನ್ನು ಅರಸಿ ದೂರದ ಬೆಂಗಳೂರು, ಚಿಕ್ಕಮಗಳೂರು ಮುಂತಾದ ಕಡೆ ವಲಸೆ ಹೋಗಿದ್ದಾರೆ. ಉದಾ–ಗೊಲ್ಲರಹಳ್ಳಿಯ ಬಾಲಬಸವ ತುಮನೆಪ್ಪನ ಮಗ ಮರಿಬಸವರಾಜ ಬಾಲಬಸವರ ದೀಕ್ಷೆಯನ್ನು ನಿರಾಕರಿಸಿ ಚಿಕನ್ ಕಡಿದು ಜೀವನ ಮಾಡುತ್ತಿದ್ದಾನೆ. ಒಂದು ಕಾಲದಲ್ಲಿ ಬಾಲಬಸವರು ಮಾಂಸವನ್ನು ತ್ಯಜಿಸಿ ಸಸ್ಯಾಹಾರಿಗಳಾಗಿದ್ದರು. ಈಗ ಮತ್ತೆ ಮಾಂಸಾಹಾರಿಗಳಾಗಿರುವುದು ಬೆಳಕಿಗೆ ಬಂದಿದೆ. ಈ ಪರಿಸ್ಥಿತಿಯು ಕರ್ನಾಟಕದಲ್ಲಿರುವ ಎಲ್ಲಾ ಬಾಲಬಸವ ಪರಂಪರೆಯಲ್ಲೂ ಕಂಡುಬರುತ್ತದೆ.

ಇ. ಆಹಾರ ಸಂಸ್ಕೃತಿ

ತಳಸಮುದಾಯದ ಶ್ರಮಿಕವರ್ಗ ಮತ್ತು ದಲಿತರು ಹೆಚ್ಚಾಗಿ ಮಾಂಸಾಹಾರವನ್ನು ಪ್ರೀತಿಸುವ ಸಮುದಾಯಗಳಾಗಿವೆ. ಇವರಲ್ಲಿ ಪ್ರಮುಖರು ಬಸವಣ್ಣನ ಪ್ರಭಾವದಿಂದಾಗಿ ಶೈವೀಕರಣಗೊಂಡರು. ಇದರಿಂದಾಗಿ ಅವರ ಆಹಾರಸಂಸ್ಕೃತಿಯಲ್ಲಿ ಬದಲಾವಣೆ ಬಂದಿತು. ಒಂದು ಕಾಲದಲ್ಲಿ ಇಷ್ಟಪಟ್ಟು ತಿನ್ನುತ್ತಿದ್ದ ಮಾಂಸಾಹಾರವನ್ನು ಮಾದಿಗ ಸಮುದಾಯದಿಂದ ಬೇರ್ಪಟ್ಟ ಕಾರಣ ಬಾಲಬಸವರು ನಿರಾಕರಿಸಿದರು. ಇದರಿಂದಾಗಿ ಅವರು ಮಾದಿಗ ಸಮುದಾಯದಿಂದ ದೂರ ಉಳಿದರು. ಆಧುನಿಕತೆ ಪ್ರವೇಶದಿಂದಾಗಿ ಬಾಲಬಸವ ಪರಂಪರೆಯ ಯುವ ತಲೆಮಾರು ಹೊಸ ಬಗೆಯ ಆಲೋಚನೆಗಳಿಂದ ಮತ್ತು ತಮ್ಮ ಮೂಲ ನೆಲೆಗೆ ಹಿಂದಿರುಗುವ ಪ್ರಯತ್ನ ಮಾಡಿರುವ ಕಾರಣದಾಗಿ ಬಾಲಬಸವರು ಮತ್ತೆ ಮಾಂಸಾಹಾರಿಗಳಾಗುತ್ತಿದ್ದಾರೆ. ಇದಕ್ಕೆ ಪ್ರಮುಖ ಕಾರಣವೆಂದರೆ ಬಾಲಬಸವರಿಗೆ ಯಾವುದೇ ಪ್ರತ್ಯೇಕ ಸರ್ಕಾರಿ ಸೌಲಭ್ಯಗಳಿಲ್ಲ. ಜಾತಿ ಪ್ರಮಾಣ ಪತ್ರದಲ್ಲಿ ಇವರು 'ಮಾದಿಗ' ಅಥವಾ 'ಆದಿ ಕರ್ನಾಟಕ' ಎನ್ನುವ ಪರಿಶಿಷ್ಟ ಜಾತಿಯಲ್ಲಿಯೇ ಜಾತಿ ಪ್ರಮಾಣ ಪತ್ರಗಳನ್ನು ನೀಡುತ್ತಿದ್ದಾರೆ. ಹಾಗಾಗಿ ತಾವು ತಮ್ಮ ಮೂಲ ನೆಲೆಯಾದ ಮಾದಿಗ ಸಂಸ್ಕೃತಿಯತ್ತ ಮುಖ ಮಾಡಿದ್ದಾರೆ. ಆಹಾರಸಂಸ್ಕೃತಿಯ ಬಗ್ಗೆ ಮೂಲಭೂತವಾದಿಗಳು ಸೃಷ್ಟಿಸಿರುವ ಅನೇಕ ಗೊಂದಲಗಳು ಅಳಿವಿನ ಅಂಚಿನಲ್ಲಿರುವ ಸಾಂಸ್ಕೃತಿಕ ಪರಂಪರೆಗಳ ಸಾಮಾಜಿಕ ಬದಲಾವಣೆಗೆ ಕಾರಣವಿರಬಹುದು.

ಈ. ಮೌಖಿಕ ಸಾಹಿತ್ಯದಲ್ಲಾಗಿರುವ ಬದಲಾವಣೆ

ಬಾಲಬಸವರು ತಮ್ಮ ಹಾಡುವ ಕಲೆಗಾರಿಕೆಯಿಂದಲೇ ಹೆಚ್ಚು ಜನಪ್ರಿಯವಾದವರು. ಬಾಲಬಸವರು ಕಾಲಜ್ಞಾನ ಸಾರುತ್ತಿರುವಾಗ ಇಡೀ ಊರುಕೇರಿ ಒಂದೆಡೆಗೆ ಬಂದು ಸೇರುವ ಕಾಲ ವೊಂದಿತ್ತು. ಮೊದಲ ಹಿರಿಯ ತಲೆಮಾರಿನ ಬಾಲಬಸವರು ದೀರ್ಘವಾದ ಕಾಲಜ್ಞಾನವನ್ನು ಸಾರುತ್ತಿದ್ದರು. ಅವರು ಲಯ, ರಾಗ, ತಾಳಬದ್ಧ, ತಂಬೂರಿ ನುಡಿಗಳು ಎಲ್ಲರನ್ನು ಆಕರ್ಷಣೆಗೊಳಿಸುತ್ತಿದ್ದವು. ಹಿರಿಯ ತಲೆಮಾರು ಕಡಿಮೆಯಾದಂತೆ, ಹೊಸ ತಲೆಮಾರಿನ ಯುವಕರು ಕಾಲಜ್ಞಾನವನ್ನು ಅಷ್ಟು ದೀರ್ಘವಾಗಿ ಹಾಡುವುದನ್ನು ಕಲಿಯಲಿಲ್ಲ. ಕಾರಣ ಅವರಿಗೆ ಕಾಲಜ್ಞಾನವು ಕೆಲವೇ ಕೆಲವು ವಿಷಯಗಳಿಗೆ ಮಾತ್ರ ಸೀಮಿತವಾಗಿರುವುದರಿಂದ ಅವರ ಹಾಡುಗಾರಿಕೆಯು ಕೂಡ ಕ್ಷೀಣಿಸುತ್ತಾ ಬಂದಿದೆ. ಆಧುನಿಕತೆಯಿಂದಾಗಿ ಸಿನಿಮಾ ಹಾಡುಗಳ ಭರಾಟೆಯಲ್ಲಿ ನೈತಿಕ ಮೌಲ್ಯಗಳನ್ನು ಸಾರುವ ನುಡಿಗಳಿಗೆ ಹೆಚ್ಚು ಕಿವಿ ಕೊಡದ ಇಂದಿನ ಸಮಾಜವು, ಕಾಲಜ್ಞಾನವನ್ನು ಹೆಚ್ಚು ಹೊತ್ತು ಸಾರದಂತೆ ತಡೆದಿವೆ. ಜನಪದ ಮೌಖಿಕ ಕಾವ್ಯ, ಹಾಡು, ಕಥೆ ಎಂದರೆ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಮಾತ್ರ ಸೀಮಿತ ಮಾಡಿರುವ ಇಂದಿನ ಸಮಾಜದಲ್ಲಿ ಜನಪದ ಸಾಹಿತ್ಯವನ್ನು ನೇಪಥ್ಯಕ್ಕೆ ಸರಿಸಿರುವುದನ್ನು ನಾವು ನೋಡಬಹುದಾಗಿದೆ.

ಒಟ್ಟಾರೆಯಾಗಿ ಸಮಸ್ಯಾತ್ಮಕ ಕುಲವೆನಿಸಿಕೊಂಡಿರುವ ಬಾಲಬಸವರ ಜೀವನವು ಇಲ್ಲಿಯವರೆಗೂ ಸಾಮಾಜಿಕ ಸಂಘರ್ಷಗಳನ್ನೇ ಎದುರಿಸಿಕೊಂಡು ಬಂದಿದೆ. ಅದರಿಂದ ಹೊರಬರುವ ಪ್ರಯತ್ನಗಳು ನಡೆದರೂ ಅದು ಹೆಚ್ಚು ಪರಿಣಾಮಕಾರಿಯಾಗಿಲ್ಲ. ಈ ಕಾರಣದಿಂದ ಬಾಲಬಸವರು ಅನುಭವಿಸುತ್ತಿರುವ ಸಾಂಸ್ಕೃತಿಕ ಬಿಕ್ಕಟ್ಟು ನಮ್ಮ ನಡುವಿನ ಬಹುದೊಡ್ಡ ಸಾಂಸ್ಕೃತಿಕ ಪ್ರಶ್ನೆಯಾಗಿ ಕಾಡುತ್ತದೆ. ಸಾಂಸ್ಕೃತಿಕ ಬಿಕ್ಕಟಿನಲ್ಲಿರುವ ಬಾಲಬಸವ ಪರಂಪರೆ ತನ್ನ ಸಾಮಾಜಿಕ, ಸಾಂಸ್ಕೃತಿಕ ಕೊಡುಗೆಗಳಿಂದ ಮಧ್ಯ ಕರ್ನಾಟಕದ ಭಾಗದಲ್ಲಿ ಹೆಚ್ಚು ಜನ ಮನ್ನಣೆಯನ್ನು ಪಡೆದುಕೊಂಡಿತ್ತು. ಈಗ ಆಧುನಿಕತೆಯ ಪ್ರವೇಶದಿಂದಾಗಿ ಈ ಪರಂಪರೆಯು ಅವನತಿಯ ಅಂಚಿಗೆ ಬಂದು ನಿಂತಿದೆ. ಸರ್ಕಾರವೂ ಇವರ ಕಡೆಗೆ ಗಮನ ನೀಡಿ ಅವರ ಕಲೆ, ಸಾಹಿತ್ಯ ಮತ್ತು ಸಂಸ್ಕೃತಿಯನ್ನು ರಕ್ಷಣೆ ಮಾಡುವುದು ಇಂದಿನ ಅಗತ್ಯಗಳಲ್ಲಿ ಒಂದಾಗಿದೆ.

ಅಡಿಟಿಪ್ಪಣಿ

೧. ವೆಂಕಟೇಶ ಇಂದ್ವಾಡಿ, **‘ಬಾಲಬಸವ ತುಮನೆಪ್ಪ ಹಾಡಿದ ಗೋಣಿ ಬಸಪ್ಪನ ಕಾವ್ಯ’** ಪುಸಂ-೧೫

೨ Ananthkrishna Iyer L.K.& Nanjundaiah,**‘The Mysore Tribes &Castes’ Vol-iv** ಪುಟ-೧೫೫

೩. ವೆಂಕಟೇಶ ಇಂದ್ವಾಡಿ(ಸಂ): **‘ಬಾಲಬಸವ ತುಮನೆಪ್ಪ ಹಾಡಿದ ಗೋಣಿಬಸಪ್ಪನ ಕಾವ್ಯ,’** ಪುಟ-೨೯

೪. ನಾಗರಾಜಯ್ಯ ವಿ.ಎಚ್., **ಕರ್ನಾಟಕ ಆದಿಜಾಂಬವ ಮಾತಂಗ ಪರಂಪರೆ: ಸಾಂಸ್ಕೃತಿಕ ವಿಶ್ಲೇಷಣೆ.’** ಪುಟ-೨೪೧

೫. ಹರಪನಹಳ್ಳಿ ಬಾಲಬಸವ ಪರಂಪರೆಯ ಹಿರಿಯ ಕಾಲಜ್ಞಾನ ಕಲಾವಿದರಾದ ಬಾಲಬಸವ ತುಮನೆಪ್ಪ, ಆತನ ಹೆಂಡತಿಯಾದ ಈರಮ್ಮ, ಮಕ್ಕಳಾದ ಬಾಲಬಸವ ಬಸವರಾಜಪ್ಪ, ಬಾಲಬಸವಿ ಹಾಲಮ್ಮ ಮತ್ತು ಅವರ ಕುಟುಂಬವರ್ಗದವರು ನಾನು ಕ್ಷೇತ್ರಕಾರ್ಯ ಮಾಡುವಾಗ ಹೇಳಿರುವ ಕಥೆಯಾಗಿದೆ.

೬. ಹೀಲದಹಳ್ಳಿ ಬಾಲಬಸವರು ಹುಗ್ ಹನುಮಂತಪ್ಪನವರು ತೋಪಲಕಟ್ಟೆಯಲ್ಲಿ ಕ್ಷೇತ್ರಕಾರ್ಯದಲ್ಲಿ ಅವರನ್ನು ಸಂದರ್ಶನ ಮಾಡುವಾಗ ಹೇಳಿರುವ ಕಥೆಯಾಗಿದೆ.

೭. **ಬಾಲಬಸವ ತುಮನೆಪ್ಪ** ಹೇಳಿದ ಮಾತು

೮. ಶೈಲಜ ಹಿರೇಮಠ, ಸ್ತ್ರೀಕಥನ, ಪು-೬೨

೧೦. ಅದೇ, ಪು-೬೨

೧೦ ಶೈಲಜ ಹಿರೇಮಠ, ಸ್ತ್ರೀಕಥನ, ಪು-೧೪.

೧೧. ವೆಂಕಟೇಶ ಇಂದ್ವಾಡಿ, ಮಂಟೇಸ್ವಾಮಿ ಪರಂಪರೆ ಪು.೩-೪

೧೨. ಹಿ.ಚಿ ಬೋರಲಿಂಗಯ್ಯ, ಮಂಟೇಸ್ವಾಮಿ ಕಾವ್ಯ ಪು.ಸಂ-೫೫೭

ಅಧ್ಯಾಯ : ೪
ಬಾಲಬಸವರ ಮೌಖಿಕ ಸಾಹಿತ್ಯ

೪.೧. ಕಾಲಜ್ಞಾನ

೪.೨. ಮೌಖಿಕ ಕಾವ್ಯಗಳು

ಅ. ಗೋಣಿಬಸಪ್ಪನ ಕಾವ್ಯ

ಆ. ಮರುಳಸಿದ್ಧನ ಕಾವ್ಯ

ಇ. ಇಗ್ನಾವತಿ ಕಥೆ

ಈ. ಸಂಡೂರು ರಾಜನ ಕಥೆ

ಅಧ್ಯಾಯ–೪
ಬಾಲಬಸವ ಪರಂಪರೆಯ ಮೌಖಿಕ ಸಾಹಿತ್ಯ

ಪ್ರವೇಶಿಕೆ

ಸಮುದಾಯಗಳ ಸಾಂಸ್ಕೃತಿಕ ಚಾರಿತ್ರಿಕ ಅಂಶಗಳಾದ ಚರಿತ್ರೆ, ಐತಿಹ್ಯ, ಸಂಪ್ರದಾಯ, ನಂಬಿಕೆ, ಆಚರಣೆ, ಕಾಯಕ ಮುಂತಾದವುಗಳ ಮೂಲಕ ಜನಪದರು ತಮ್ಮ ಸಮುದಾಯದಲ್ಲಿನ ಸಾಂಪ್ರದಾಯಿಕ ಜ್ಞಾನವನ್ನು ಒಂದು ತಲೆಯಿಂದ ಮತ್ತೊಂದು ತಲೆಮಾರಿಗೆ ವರ್ಗಾಯಿಸಲು ತಮ್ಮದೇ ಆದ ಮಾಧ್ಯಮವನ್ನು ಕಂಡುಕೊಂಡಿದ್ದರು. ಸಾಂಸ್ಕೃತಿಕ ಚರಿತ್ರೆಯನ್ನು ಮೌಖಿಕತೆಯ ಮೂಲಕವೇ ಉಳಿಸಿಕೊಂಡು ಬಂದಿರುವ ಪ್ರಕ್ರಿಯೆಯಲ್ಲಿ ಆಯಾ ಸಮುದಾಯಗಳ ಪಾತ್ರ ಮಹತ್ವದ್ದಾಗಿದೆ. ಅಂದರೆ ಯಾವ ಸಮುದಾಯಗಳು ತಮ್ಮ ಜೀವನದಲ್ಲಿ ಕಂಡುಂಡ ಘಟನೆಗಳನ್ನು ಆಧರಿಸಿ ಕಥೆ ಕಟ್ಟಿ, ಅದರೊಂದಿಗೆ ತಮ್ಮ ಇರುವಿಕೆಯನ್ನು(ಅಸ್ತಿತ್ವವನ್ನು) ತಿಳಿಸುವುದರ ಮೂಲಕ ತಮ್ಮ ಸಮುದಾಯಗಳ ಚಾರಿತ್ರಿಕ ಸಂಗತಿಗಳನ್ನು ಮೌಖಿಕತೆಯ ಮೂಲಕ ಕಟ್ಟಿಕೊಡುವಲ್ಲಿ ಮಹತ್ವದ ಕಾರ್ಯ ಮಾಡುತ್ತಾರೆ.

"ಮೌಖಿಕತೆ ಎಂದರೆ ಅದೊಂದು ಪ್ರಕ್ರಿಯೆ. ಹಾಡುವ ಗಾಯಕ ತಾನು ಹಾಡಿ ನಿಲ್ಲಿಸಿದಾಗ ಉಂಟಾಗುವ ದಾಖಲೆಯೇ ಮೌಖಿಕತೆ."[1] ಮೌಖಿಕತೆಗಳು ಸಮುದಾಯಗಳ ಸಾಂಪ್ರದಾಯಿಕ ಜ್ಞಾನ ವ್ಯವಸ್ಥೆಯನ್ನು ಗಟ್ಟಿಗೊಳಿಸುತ್ತದೆ. ಇದರಿಂದ ಚರಿತ್ರೆಯಲ್ಲಿ ದಾಖಲಾಗದ ಸಂಗತಿಗಳು ಮೌಖಿಕತೆಯಲ್ಲಿ ದಾಖಲಾಗುವುದರ ಮೂಲಕ ಮತ್ತೊಂದು ಸ್ಥಳೀಯ ಚರಿತ್ರೆಯನ್ನು ಕಟ್ಟಿಕೊಡಲು ಸಹಾಯಕವಾಗುತ್ತದೆ. ಮೌಖಿಕ ಪರಂಪರೆಯು ಸಮಾಜದ ಒಬ್ಬ ವ್ಯಕ್ತಿಯ ಸೃಷ್ಟಿಯಲ್ಲ. ಅದು ಅವನ ಸಮುದಾಯ ಮತ್ತು ತನ್ನ ಸುತ್ತಮುತ್ತಲಿನ ಪರಿಸರದೊಂದಿಗೆ ವಾಸ ಮಾಡುವ ಜನತೆಯ ಬದುಕಿನ ನೋವು ನಲಿವುಗಳು ಹಾಡಾಗಿ, ಕಥೆಯಾಗಿ, ಒಗಟಾಗಿ ಹೊರಬರುತ್ತವೆ. ಮುಂದೆ ಕಾಲ ಗತಿಸಿದಂತೆ ಸಮಾಜವು ತನ್ನ ಅನುಭವಗಳನ್ನು ಅದರೊಂದಿಗೆ ಸೇರಿಸುತ್ತಾ ಹೋದಾಗ ಮೌಖಿಕತೆಯು ತನ್ನೊಳಗೆ ಮತ್ತಷ್ಟು ಗಟ್ಟಿಗೊಳ್ಳುತ್ತದೆ.

ಕೆಳವರ್ಗದ ಶ್ರಮಿಕ ಸಮುದಾಯದವರ ದೈನಂದಿನ ಜೀವನವು ಹಾಡು, ಕುಣಿತ, ಕಥೆ ಮುಂತಾದವುಗಳು ಅವರ ಮನೋರಂಜನೆಯ ಭಾಗವಾಗಿರುತ್ತದೆ. ಇವುಗಳು ಅವರ ನಂಬಿಕೆ, ಸಂಪ್ರದಾಯ, ಆಚರಣೆಯ ಭಾಗವಾಗಿರುತ್ತವೆ. ಇಂತಹ ಸಮಯದಲ್ಲಿ ಹಾಡುವ ಸಮುದಾಯಗಳಿಗೆ ಅಥವಾ ಗ್ರಾಮೀಣ ಜನಪದರ ಜೀವಿತ ಕಥೆಗಳನ್ನು, ಶಿವಶರಣರ ಕಥೆಗಳನ್ನು, ಧಾರ್ಮಿಕ, ಸಾಂಸ್ಕೃತಿಕ ನಾಯಕರುಗಳ ಕಥೆಗಳನ್ನು, ರಾಜ ಮಹಾರಾಜರುಗಳ ಕಥೆಗಳನ್ನು, ದೈತ್ಯ ರಾಕ್ಷಸರ ಕಥೆಗಳನ್ನು ಮತ್ತು ನೈತಿಕ ಕಥೆಗಳನ್ನು ಹಾಡುವ ಪರಂಪರೆಯವರನ್ನು ಮೌಖಿಕ ವೃತ್ತಿಗಾಯಕರು ಎಂದು ಕರೆಯುತ್ತಾರೆ.

ಕರ್ನಾಟಕ ಭೌಗೋಳಿಕ ಪರಿಸರದಲ್ಲಿ ಕಥೆ ಮಾಡುವ, ಹಾಡುವ ಗಾಯಕರ ಪಡೆ ಸಮೃದ್ಧಿಯಿಂದ ಕೂಡಿದೆ. ಆಯಾ ಭೌಗೋಳಿಕ ಪ್ರದೇಶಕ್ಕೆ ಅನುಗುಣವಾಗಿ ಅಲ್ಲಿನ ಸಾಂಸ್ಕೃತಿಕ ನಾಯಕರುಗಳ ಜೀವಿತ ಸಂಘರ್ಷದ ಬದುಕಿನ ಕಥೆಗಳನ್ನು, ಮಧ್ಯಕಾಲೀನ ಶಿವಶರಣರ ಕಥೆಗಳನ್ನು, ರಾಜರ ಕಥೆಗಳನ್ನು, ದೈತ್ಯ ರಾಕ್ಷಸರ ಕಥೆಗಳನ್ನು, ಪ್ರತಿಗಾಮಿ ನಾಯಕರುಗಳ ಕಥೆಗಳನ್ನು, ಧಾರ್ಮಿಕ ಕಥೆಗಳನ್ನು ಹೇಳುವ ವಿಶಿಷ್ಟ ಮೌಖಿಕ ಪರಂಪರೆ ನಮ್ಮೊಂದಿಗಿದೆ. ಕರ್ನಾಟಕವನ್ನು ಅಧ್ಯಯನದ ದೃಷ್ಟಿಯಿಂದ ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ, ಮಧ್ಯಕರ್ನಾಟಕ ಮತ್ತು ಕರಾವಳಿ ಕರ್ನಾಟಕವೆಂದು ಅದರ ಭೌಗೋಳಿಕತೆಯ ಭಾಗವಾಗಿ ವಿಭಾಗಿಸಿ ನೋಡಿದಾಗ ದಕ್ಷಿಣ ಕರ್ನಾಟಕದ ಭೌಗೋಳಿಕ ಪ್ರದೇಶದಲ್ಲಿ ಮಲೆಮಾದಪ್ಪ, ಮಂಟೇಸ್ವಾಮಿ ಕಾವ್ಯಗಳನ್ನಾಡಿದರೆ, ಉತ್ತರ ಕರ್ನಾಟಕದಲ್ಲಿ ಎಲ್ಲಮ್ಮನ ಕಾವ್ಯ, ಮಧ್ಯಕಾಲೀನ ಶಿವಶರಣರ ಕಥೆಗಳು, ಮಾಳಿಂಗರಾಯನ ಕಾವ್ಯ ಹಾಡುತ್ತಾರೆ. ಹಾಗೆಯೇ ಮಧ್ಯ ಕರ್ನಾಟಕದಲ್ಲಿ ಮೈಲಾರಲಿಂಗಪ್ಪನ ಕಾವ್ಯ, ಜುಂಜಪ್ಪನ ಕಾವ್ಯ, ಮ್ಯಾಸಬೇಡರ ಕಥೆಗಳು ಹಾಡಿದರೆ, ಕರಾವಳಿ ಕರ್ನಾಟಕದಲ್ಲಿ ಸಿರಿ ಪಾಡ್ದನ, ಕೋಟಿ ಚೆನ್ನಯ್ಯ, ಭೂತ ಕುಣಿತ ಮುಂತಾದವುಗಳು ಹಾಡುತ್ತಾರೆ. ಈ ಮೌಖಿಕ ಕಾವ್ಯಗಳಿಂದ ಆಯಾ ಭೌಗೋಳಿಕ ಪ್ರದೇಶದ ಸಾಂಸ್ಕೃತಿಕ ಚರಿತ್ರೆಯನ್ನು ಕಟ್ಟಿಕೊಡುವಲ್ಲಿ ಈ ಕಾವ್ಯಗಳು ಸಹಾಯ ಮಾಡುತ್ತವೆ. ಇವುಗಳನ್ನು ಹಾಡುವ, ಕಥೆ ಕಟ್ಟುವ ಪರಂಪರೆಯವರು ಕೂಡ ಆಯಾ ಭೌಗೋಳಿಕ ಪ್ರದೇಶಕ್ಕೆ ಅನುಗುಣವಾಗಿ ಆಯಾ ಸಮುದಾಯಗಳು ಮೌಖಿಕ ಕಾವ್ಯಗಳನ್ನು ಹಾಡುತ್ತಾ ಬಂದಿವೆ. ಈ ಸಮುದಾಯಗಳು ತಮ್ಮ ಕುಲದೈವದ ಆಚರಣೆಯ ಭಾಗವಾಗಿ ಅವರ ಸಾಂಸ್ಕೃತಿಕ ನಾಯಕರ ಕಥೆಯನ್ನು ಹಾಡುತ್ತಾ ಬಂದಿದ್ದಾರೆ. ಸಮುದಾಯ ಮತ್ತು ಮೌಖಿಕ ಸಾಹಿತ್ಯಕ್ಕೆ ಅವಿನಾಭಾವ ಸಂಬಂಧವಿರುವುದು ಕಂಡು ಬರುತ್ತದೆ. ಜೀಶಂಪ ಅವರು ಹೇಳಿರುವಂತೆ ವೃತ್ತಿಗಾಯಕರು "ಒಂದು ದೈವದ ಆರಾಧಕರೂ, ಮತ ಆರಾಧಕರೂ ಆಗಿರುತ್ತಾರೆ. ಇದನ್ನು ಸಮುದಾಯಗಳ ಹಿನ್ನೆಲೆಯಲ್ಲಿ ನೋಡುವುದಾದರೆ ಮಂಟೇಸ್ವಾಮಿ, ಮಲೆಮಾದಪ್ಪ ಕಾವ್ಯಗಳನ್ನು ಹಾಡುವ ಸಮುದಾಯಗಳೆಂದರೆ ದಲಿತ ಸಮುದಾಯ ದೇವರಗುಡ್ಡ ನೀಲಗಾರರೆಂದು ಕರೆಸಿಕೊಳ್ಳುತ್ತಾರೆ. ಇವರ ಕುಲದ ಸಾಂಸ್ಕೃತಿಕ ನಾಯಕರುಗಳಾಗಿ ಮಂಟೇಸ್ವಾಮಿ, ಮಲೆಮಾದಪ್ಪ ಕಂಡುಬಂದರೆ,

ಕುರುಬರಿಗೆ ಮೈಲಾರಲಿಂಗಪ್ಪ, ಜೋಗತಿಯರಿಗೆ ಎಲ್ಲಮ್ಮ, ವೀರಶೈವ ಮತ ಪ್ರವರ್ತಕರಿಗೆ ಮಧ್ಯಕಾಲೀನ ಶಿವಶರಣರು. ಆಯಾ ಬುಡಕಟ್ಟು ಜನಾಂಗಕ್ಕೆ ತಮ್ಮ ಕುಲ ದೇವರುಗಳಾದ ಮ್ಯಾಸ ಬೇಡರಿಗೆ ಗಾದ್ರಿಪಾಲನಾಯಕ, ಗೊಲ್ಲರಿಗೆ ಜುಂಜಪ್ಪ, ಸೋಲಿಗರಿಗೆ ಬಿಳಿಗಿರಿರಂಗ ಸಮುದಾಯದ ಪ್ರತಿನಿಧೀಕರಣದ ಭಾಗವಾಗಿ ಹಾಡುವ ಕುಲ ವೃತ್ತಿಗಾಯಕರು ಕರ್ನಾಟಕದ ತುಂಬೆಲ್ಲಾ ಕಂಡುಬರುತ್ತಾರೆ"[೨] ಎನ್ನುವ ಮಾತುಗಳಲ್ಲಿ ಹಾಡಿನಿಂದಲೇ ಜೀವನ ನಿರ್ವಹಿಸುತ್ತಿರುವ ಪರಂಪರೆಯನ್ನು ಕುರಿತು ಹೇಳುತ್ತಾರೆ.

ಜನಪದರು ಕೇಳಿರುವ ಕಂಡಿರುವ ಸಂಗತಿಗಳನ್ನು ಮೌಖಿಕ ಕತೆಯ ಮೂಲಕ ತಮ್ಮ ಪರಂಪರೆಯಲ್ಲಿ ಉಳಿಸಿಕೊಂಡು ಬರುತ್ತಾರೆ. ಈ ರೀತಿಯಾದ ಸಂಗತಿಗಳು ಸಮುದಾಯಗಳನ್ನು ಅವಲಂಬಿಸಿರುತ್ತವೆ. ಒಂದು ಸಮುದಾಯವು ತಾನು ಸಮಾಜದಲ್ಲಿ ತನ್ನ ಅಸ್ತಿತ್ವ ಉಳಿಸಿಕೊಳ್ಳಲು ತನ್ನೊಳಗಿರುವ ಸಾಂಸ್ಕೃತಿಕ ಚರಿತ್ರೆಯನ್ನು ಮರು ನಿರ್ಮಾಣ ಮಾಡುವ ದೃಷ್ಟಿಯಿಂದ ತನ್ನ ಸಮುದಾಯದ ನಾಯಕರ ಅವರ ಬದುಕಿನ ಹೋರಾಟವನ್ನು ಕಥನವಾಗಿ ಕಟ್ಟಿ ಆ ಕಥನದೊಂದಿಗೆ ತಮ್ಮ ಸಾಮಾಜಿಕ ಜೀವನ ನಿರ್ವಹಣೆ ಮಾಡಿಕೊಂಡು ಬಂದಿದ್ದಾರೆ. ಉದಾ: ಮಲೆಮಾದಪ್ಪನ ಪರಂಪರೆ, ಮಂಟೇಸ್ವಾಮಿ ಪರಂಪರೆ, ಜುಂಜಪ್ಪನ ಪರಂಪರೆ, ಮೈಲಾರಲಿಂಗಪ್ಪನ ಪರಂಪರೆ, ಬೀರದೇವರ ಪರಂಪರೆ, ಬುಡಕಟ್ಟು ಮೌಖಿಕ ಪರಂಪರೆ ಪಶುಪಾಲಕ ಪರಂಪರೆ ಮುಂತಾದವುಗಳು. ಈ ಎಲ್ಲಾ ಸಂಗತಿಗಳನ್ನು ಗಮನಿಸಿದಾಗ 'ಮೌಖಿಕ ಕಥನಗಳನ್ನು ಕಟ್ಟುವ ಕಥನಕಾರರಲ್ಲಿ ಕೆಳವರ್ಗದವರೇ ಹೆಚ್ಚು' ಎನ್ನುವ ವಿದ್ವಾಂಸರ ಅಭಿಪ್ರಾಯ ನಿಜವೆನಿಸುತ್ತದೆ. ಕರ್ನಾಟಕದ ಸಂಸ್ಕೃತಿಯನ್ನು ತಿಳಿಯಲು ಹೆಚ್ಚಾಗಿ ಲಿಖಿತ ಆಕರಗಳನ್ನು ನಂಬಿ ಚರಿತ್ರೆ ಕಟ್ಟುವ ಕಾರ್ಯ ಮೊದಲ ಘಟ್ಟದ ವಿದ್ವಾಂಸರಿಂದ ನಡೆದುಬಂದಿದೆ. ಲಿಖಿತ ಚರಿತ್ರೆಯೊಂದಿಗೆ ಮೌಖಿಕ ಆಕರಗಳಲ್ಲಿರುವ ಜನತೆಯ ಆಚಾರ ವಿಚಾರ, ವೇಷಭೂಷಣ, ಆಹಾರಪದ್ಧತಿ, ನೃತ್ಯಕಲೆ ವಾಸ್ತುಶಿಲ್ಪ ಹಾಡುಗಾರಿಕೆ ಮುಂತಾದವುಗಳಿಂದ ಶ್ರೀ ಸಾಮಾನ್ಯರಿಗೆ ಸಂಬಂಧಿಸಿದಂತೆ ಆಕರಗಳನ್ನು ಬಳಸಿಕೊಂಡು ಅಧ್ಯಯನ ಮಾಡುವ ಅನಿವಾರ್ಯತೆ ಈಗ ನಮ್ಮ ಮುಂದಿದೆ. ಹಾಗಾಗಿ ಜನಪದರ ಹಾಡು, ನಂಬಿಕೆ, ಸಂಪ್ರದಾಯಗಳ ಕುರಿತು ಅಧ್ಯಯನ ಮಾಡುವ ಅವುಗಳಲ್ಲಿರುವ ಅಂಶಗಳನ್ನು ಸೂಕ್ಷ್ಮವಾಗಿ ವಿಶ್ಲೇಷಣೆ ಮಾಡಿ ಅದರೊಳಗಿರುವ ಜನಪದರ ಜ್ಞಾನಮೀಮಾಂಸೆಯನ್ನು ಜನತೆಗೆ ತಿಳಿಸಬೇಕಾಗಿದೆ.

ಹೀಗೆ ಮೌಖಿಕ ಸಾಹಿತ್ಯ ಚರಿತ್ರೆಯಲ್ಲಿ ತಮ್ಮ ಸಮುದಾಯಗಳ ಅಸ್ತಿತ್ವ ಉಳಿಸಿಕೊಳ್ಳಲು ತಮ್ಮ ಸಮುದಾಯಗಳ ಸಾಂಸ್ಕೃತಿಕ ನಾಯಕರ ಮುನ್ನೆಲೆಗೆ ತಂದು ಅವರ ಮೂಲಕ ಚರಿತ್ರೆಯಲ್ಲಿ ದಾಖಲಾಗದ ಸಾಮಾನ್ಯ ಜನರ ಜೀವನ ವಿವರಗಳನ್ನು ಮೌಖಿಕ ಸಾಹಿತ್ಯವು ದಾಖಲು ಮಾಡುವ ಪ್ರಯತ್ನ ಮಾಡುತ್ತಾ ಬಂದಿದೆ. ಹೀಗೆ ಕರ್ನಾಟಕದ ತುಂಬೆಲ್ಲಾ ಹಲವಾರು ಸಮುದಾಯ ಕೇಂದ್ರಿತವಾದ ವೃತ್ತಿಗಾಯಕರು ಕಂಡುಬರುತ್ತಾರೆ. ಅವರ ರೀತಿಯಲ್ಲಿ ಅಲಕ್ಷಿತವಾಗಿ

ಮೌಖಿಕತೆಯ ಮೂಲಕ ೧೨ನೇ ಶತಮಾನದಲ್ಲೂ ಶಿವಶರಣರಂತೆ ಬದುಕುವ ಮತ್ತೊಂದು ಸಮುದಾಯವೆಂದರೆ ಅದು ಬಾಲಬಸವ ಪರಂಪರೆ. ಈ ಪರಂಪರೆಯು ವಚನ ಚಳುವಳಿಯಲ್ಲಿ ಬೆಳೆದು ಇಂದಿಗೂ ನಮ್ಮೊಂದಿಗೆ ಜೀವಂತವಿರುವ ಪರಂಪರೆ. ಈ ಮೌಖಿಕ ಪರಂಪರೆಯ ಜ್ಞಾನಮೀಮಾಂಸೆಯು ಸಮಾಜದ ಒಳಿತನ್ನು ಬಯಸುವ ತನ್ನ ಮೌಖಿಕ ಕಾವ್ಯ ಅಥವಾ ಸಾಹಿತ್ಯದ ಮೂಲಕ ಸಮಾಜದಲ್ಲಿ ನೈತಿಕತೆಯನ್ನು ಹೆಚ್ಚಿಸುವ ಹಾಗೂ ಮುಂದೊದಗಬಹುದಾದ ಸತ್ಯ ಸಂಗತಿಗಳನ್ನು ತಿಳಿಸಿ ಅದರಿಂದ ಪಾರಾಗುವ ಸಂಗತಿಗಳನ್ನು ಹೇಳುತ್ತಾ ಬಂದಿದೆ. ಬಾಲಬಸವ ಪರಂಪರೆಯು ಕೂಡ ಒಂದು ಹಾಡುವ ವೃತ್ತಿಗಾಯಕ ಸಮುದಾಯವಾಗಿದೆ. ವಚನ ಚಳುವಳಿಯಲ್ಲಿ ಮಾದಿಗರು ಮೇಲ್ಮುಖ ಚಲನೆ ಹೊಂದಿ ಲಿಂಗದೀಕ್ಷೆ ಪಡೆದ ಪರಿಣಾಮವಾಗಿ ಅಲಕ್ಷಿತರಾಗಿದ್ದಾರೆ. ಮೂಲ ಮಾದಿಗರೆಂಬ ಒಂದೇ ಕಾರಣದಿಂದಾಗಿ ವೀರಶೈವರು ಅವರನ್ನು ವೀರಶೈವರೆಂದು ಒಪ್ಪಿಕೊಂಡಿಲ್ಲ. ಇದರಿಂದಾಗಿ ಇವರು ಧಾರ್ಮಿಕವಾಗಿ ಅತಂತ್ರ ಸ್ಥಿತಿಯಲ್ಲಿ ಜೀವನ ನಿರ್ವಹಣೆ ಮಾಡುತ್ತಿದ್ದಾರೆ. ಕರ್ನಾಟಕದ ಕೆಲವು ಭಾಗಗಳಲ್ಲಿ ಮಾತ್ರ ಕಂಡುಬರುವ ಈ ಬಾಲಬಸವ ಪರಂಪರೆ ತನ್ನದೇ ಆದ ಮೌಖಿಕ ಜ್ಞಾನ ಮೀಮಾಂಸೆಯನ್ನು ಹೊಂದಿದೆ. ಇವರ ಮೌಖಿಕ ಸಾಹಿತ್ಯವು ಎರಡು ಬಗೆಯಲ್ಲಿ ಕಂಡುಬರುತ್ತದೆ. ಒಂದು, ಕಾಲಜ್ಞಾನ ಮತ್ತೊಂದು ಮೌಖಿಕ ಕಾವ್ಯಗಳು. ಬಾಲಬಸವರ ಮೌಖಿಕ ಸಾಹಿತ್ಯವನ್ನು ಸಾಂಸ್ಕೃತಿಕ ನೆಲೆಯಲ್ಲಿ ಅಧ್ಯಯನ ಮಾಡುವ ಉದ್ದೇಶ ಈ ಅಧ್ಯಾಯಕ್ಕಿದೆ.

ಕರ್ನಾಟಕದಲ್ಲಿರುವ ಬಾಲಬಸವರ ಪರಂಪರೆಯಲ್ಲಿ ಎರಡು ರೀತಿಯಾದ ಮೌಖಿಕ ಸಾಹಿತ್ಯವಿದೆ. ಬಾಲಬಸವರು ಭೌಗೋಳಿಕ ಪ್ರದೇಶದಿಂದ ಪ್ರದೇಶಕ್ಕೆ ತುಸು ಭಿನ್ನವಾಗಿದ್ದಾರೆ. ಕರ್ನಾಟಕದಲ್ಲಿರುವ ಬಾಲಬಸವರ ಸಾಂಸ್ಕೃತಿಕ ಹಕ್ಕುದಾರಿಕೆಯ ಸ್ಥಳಗಳು ಮತ್ತು ಅಲ್ಲಿನ ಪರಿಸರವು ಅವರ ಆಚಾರ-ವಿಚಾರಗಳಲ್ಲಿ ಪ್ರಾದೇಶಿಕತೆಯ ಭಾಗವಾಗ ಸೇರಿಕೊಂಡಿದೆ. ಈ ಕುರಿತು ಬಾಲಬಸವರ ಮೂಲ ಮತ್ತು ಸಾಂಸ್ಕೃತಿಕ ಹಕ್ಕುದಾರಿಕೆಯ ಸ್ಥಳಗಳ ಸಾಂಸ್ಕೃತಿಕ ಸಂಬಂಧವನ್ನು ಮೂರನೇ ಅಧ್ಯಾಯದಲ್ಲಿ ಸ್ಥೂಲವಾಗಿ ಚರ್ಚಿಸಲಾಗಿದೆ. ಬಾಲಬಸವರ ಪ್ರಾದೇಶಿಕತೆಯು ಅವರ ಜೀವನದ ಭಾಗವಾಗಿದೆ ಎನ್ನುವುದಕ್ಕೆ ಮಧ್ಯ ಕರ್ನಾಟಕ ಭೌಗೋಳಿಕ ವ್ಯಾಪ್ತಿ ಪ್ರದೇಶದಲ್ಲಿ ಕಂಡುಬರುವ ಗೋಣಿ ಬಸಪ್ಪ ಮತ್ತು ಮರುಳಸಿದ್ಧರು ಹರಪನಹಳ್ಳಿ ಮತ್ತು ಬೈರದೇವರ ಗುಡ್ಡದ ಬಾಲಬಸವರ ಜೀವನದ ಭಾಗವಾಗಿದ್ದಾರೆ. ಅಂದರೆ ಅವರ ಪೂಜಾ ಕಾರ್ಯಕ್ರಮಗಳಲ್ಲಿ ಈ ಇಬ್ಬರು ಸಾಂಸ್ಕೃತಿಕ ನಾಯಕರುಗಳು ಇರಲೇಬೇಕು. ಆದರೆ ಪಕ್ಕದ ಹೀಲದಹಳ್ಳಿ, ರಾಮಘಟ್ಟ, ನ್ಯಾಮತಿ, ಮಂಡರಘಟ್ಟ ಗಂಜಗನಹಳ್ಳಿ ಇಲ್ಲಿನ ಬಾಲಬಸವರಿಗೆ ಗೋಣಿಬಸಪ್ಪ ಮಾತ್ರ ಪ್ರಮುಖನಾಗುತ್ತಾನೆ. ಇಲ್ಲಿ ಮರುಳಸಿದ್ಧನು ನೇಪಥ್ಯಕ್ಕೆ ಸರಿಯುತ್ತಾರೆ. ಗದಗ ಜಿಲ್ಲೆಯ ಹರ್ಲಾಪುರದ ಬಾಲಬಸವರಿಗೆ ಈ ಇಬ್ಬರು ಸಾಂಸ್ಕೃತಿಕ ನಾಯಕರುಗಳು ಇವರ ಯಾವ ಪೂಜಾ ವಿಧಾನದಲ್ಲಿ ಕಾಣಿಸುವುದಿಲ್ಲ. ಇವರ ಸಾಂಸ್ಕೃತಿಕ ನಾಯಕನೆಂದರೆ

ಅದು ಬಸವಣ್ಣ ಮಾತ್ರ. ಹಾಗಾಗಿ ಬಾಲಬಸವರು ಆರಾಧಿಸುವ ದೈವಗಳು ಬೇರೆ ಬೇರೆಯಾಗಿರುವುದರಿಂದ ಎರಡು ರೀತಿಯ ಮೌಖಿಕ ಸಾಹಿತ್ಯವು ಈ ಬಾಲಬಸವರ ಪರಂಪರೆಯಲ್ಲಿ ಕಂಡುಬರುತ್ತದೆ. ಬಾಲಬಸವರ ಮೂಲ ಮತ್ತು ಕುಲವೃತ್ತಿಯಾಗಿರುವ ಕಾಲಜ್ಞಾನವನ್ನು ಕರ್ನಾಟಕದಲ್ಲಿರುವ ಎಲ್ಲಾ ಬಾಲಬಸವರು ಹಾಡುತ್ತಾರೆ. ಆದರೆ ಮೌಖಿಕ ಕಾವ್ಯಗಳನ್ನು ಮಾತ್ರ ಹರಪನಹಳ್ಳಿ ಮತ್ತು ಬೈರದೇವರಗುಡ್ಡದ ಬಾಲಬಸವರು ಅಲ್ಲಿನ ಸ್ಥಳೀಯ ಸಾಂಸ್ಕೃತಿಕ, ಚಾರಿತ್ರಿಕ, ಜನಪದ ಕಥೆಗಳನ್ನು ಕಾವ್ಯವಾಗಿ ಕಟ್ಟಿ ಹಾಡುತ್ತಾರೆ. ಇವರ ಮೌಖಿಕ ಕಾವ್ಯಗಳಲ್ಲಿ ಅಲ್ಲಿನ ಪ್ರಾದೇಶಿಕತೆಗೆ ಅನುಗುಣವಾಗಿ ಸ್ಥಳೀಯ ಚರಿತ್ರೆಯನ್ನು, ಸಾಮಾಜಿಕ ಜೀವನ ವಿಧಾನವನ್ನು ಮುಂತಾದವುಗಳು ತಮ್ಮ ಮೌಖಿಕ ಕಾವ್ಯಗಳಲ್ಲಿ ನಿರೂಪಿತಗೊಂಡಿವೆ.

೪.೧. ಕಾಲಜ್ಞಾನ ಸಾಹಿತ್ಯ :

ಕಾಲಜ್ಞಾನ ಸಾಹಿತ್ಯದ ಉಗಮದ ಹಿಂದೆ ಮಾನವೀಯ ದೃಷ್ಟಿ ಮತ್ತು ಮನಕುಲದ ಕಲ್ಯಾಣದ ಚಿಂತನೆ ಇದೆ. ಈ ಚಿಂತನೆಯು ಮಾನವ ಧರ್ಮದ ಎಲ್ಲಾ ಸಾಹಿತ್ಯಕ್ಕೂ ಕೇಂದ್ರಶಕ್ತಿಯಾಗಿರುವ ಸಾಧ್ಯತೆಯಿದೆ. ಈ ರೀತಿಯ ಚೇತನ ಚಿಂತನಾಶಕ್ತಿಯೇ ಕಾಲಜ್ಞಾನ. ಜಗತ್ತಿನ ಕಲ್ಯಾಣಕ್ಕಾಗಿ ಮುಂಬರುವ ಸಂಗತಿಗಳ ಮುನ್ಸೂಚನೆಯನ್ನು ಕೊಡುತ್ತಾ ಬಂದಿದ್ದಾರೆ. ಅವರ ಎಚ್ಚರಿಕೆಯ ಹೇಳಿಕೆಗಳು ಹಾಡುಧಾಟಿನ ಮಾತಿನಲ್ಲಿರುತ್ತವೆ. ಕಾಲಜ್ಞಾನವು ವ್ಯಂಗ್ಯ, ವಿಡಂಬನೆ, ರೂಪದಲ್ಲಿ ಹೆಚ್ಚು ಪರಿಣಾಮಕಾರಿಯಾಗಿ ಜನರಿಗೆ ತಲುಪಿದೆ. ಕಾಲಜ್ಞಾನ ಸಾಹಿತ್ಯವು ನಂಬುಗೆಯ ತಳಹದಿಯ ಮೇಲೆ ರೂಪಿತವಾದ ಒಂದು ಪ್ರಕಾರದ ಸಾಹಿತ್ಯವಾಗಿದೆ. ಆದುದರಿಂದ ಇದಕ್ಕೆ ಮನೋವಿಜ್ಞಾನದ ಹಿನ್ನೆಲೆ ಮತ್ತು ಇತಿಹಾಸವಿದೆ. ಜೋತಿಷ್ಯ ಅಥವಾ ಭವಿಷ್ಯ ಹೇಳುವುದು ವ್ಯಕ್ತಿಯ ವಲಯಕ್ಕೆ ಮಾತ್ರ ಸೀಮಿತವಾದ ಶಾಸ್ತ್ರ. ಆದರೆ ಕಾಲಜ್ಞಾನ ಇಡೀ ಮಾನವ ಜನಾಂಗದ ಜೀವನಚಕ್ರದ ಮುಖ್ಯ ಸನ್ನಿವೇಶಗಳ ಆಗುಹೋಗುಗಳನ್ನು ತಿಳಿಸುವ ಧೋರಣೆಯುಳ್ಳದ್ದಾಗಿದೆ. ಕಾಲಜ್ಞಾನ ಸಾಹಿತ್ಯವೂ ಜೀವನದಲ್ಲಿ ಮುಂಬರುವ ಅಪಾಯ ಇಲ್ಲವೇ ಗಂಡಾಂತರಗಳನ್ನು ಸೂಚಿಸಿ ಅವುಗಳಿಂದ ರಕ್ಷಿಸಿಕೊಳ್ಳುವ ಉಪಾಯಗಳನ್ನು ಸೂಚಿಸುತ್ತದೆ. ಕಾಲಜ್ಞಾನ ಸಾಹಿತ್ಯವು ಸಮಾಜದಲ್ಲಿ ಹೆಚ್ಚುತ್ತಿರುವ ಅಧರ್ಮ, ಅನ್ಯಾಯ, ಅನೈತಿಕತೆಯನ್ನು ತಡೆದು ಅದರಿಂದಾಗುವ ಪರಿಣಾಮಗಳನ್ನು ಜನತೆಯಲ್ಲಿ ಜಾಗೃತಿ ಮೂಡಿಸುವುದು ಈ ಸಾಹಿತ್ಯದ ಮುಖ್ಯ ಉದ್ದೇಶವಾಗಿದೆ.

ಕನ್ನಡದಲ್ಲಿನ ಕಾಲಜ್ಞಾನದ ಸಾಹಿತ್ಯ ಕುರಿತು ಅನೇಕ ವಿದ್ವಾಂಸರು ಕೆಲಸ ಮಾಡಿದ್ದಾರೆ. ಫ.ಗು ಹಳಕಟ್ಟಿಯವರು ಮೊದಲ ಬಾರಿಗೆ ಅಲಕ್ಷಿತವಾದ ಕಾಲಜ್ಞಾನ ಸಾಹಿತ್ಯವನ್ನು ಸಂಗ್ರಹಿಸಿ 'ಕಾಲಜ್ಞಾನದ ವಚನ'(೧೯೩೩) ಎಂಬ ಗ್ರಂಥದಲ್ಲಿ ಕಾಲಜ್ಞಾನ ಸಾಹಿತ್ಯವನ್ನು ಸಂಪಾದಿಸಿಕೊಟ್ಟಿದ್ದಾರೆ. ೧೯೪೬ರಲ್ಲಿ ಶಿವಬಸವ ಸ್ವಾಮಿಗಳು ಅನೇಕ ಮೂಲಗಳಿಂದ ಕಾಲಜ್ಞಾನದ ಹಸ್ತಪ್ರತಿಗಳನ್ನು ಸಂಗ್ರಹಿಸಿ ಅದನ್ನು ಸಂಪಾದಿಸಿ 'ಕಾಲಜ್ಞಾನ ಸಂಗ್ರಹ-ಭಾಗ-೧' ಎನ್ನುವ ಕೃತಿಯನ್ನು

ಹೊರತಂದಿದ್ದಾರೆ. ನಂತರ ಶಿವರುದ್ರಸ್ವಾಮಿ ಸಾಲಿಮಠ ಇವರು 'ಸರ್ವಪುರಾತನರ ಕಾಲಜ್ಞಾನ' ಎನ್ನುವ ಪುಸ್ತಕವನ್ನು ಪ್ರಕಟಿಸಿದ್ದಾರೆ. ಈ ಕೃತಿಯಲ್ಲಿ ಅನೇಕ ಶಿವಶರಣರ ಕಾಲಜ್ಞಾನ ವಚನಗಳು ಸಂಗ್ರಹವಾಗಿವೆ. ಹಾಗೆಯೇ ಎಂ. ಎಂ ಕಲಬುರ್ಗಿ, ವಿ. ಶಿವಾನಂದ, ಎಸ್. ಉಮಾಪತಿ, ಮಾಣಿಕರಾವ ಧನಶ್ರೀ, ಬಸವಲಿಂಗ ಸೊಪ್ಪಿನಮಠ, ಕೆ. ರವೀಂದ್ರನಾಥ, ಎಫ್.ಟಿ ಹಳ್ಳಿಕೇರಿ, ವೀರೇಶ ಬಡಿಗೇರ, ಶಿವಾನಂದ ಎಸ್. ವಿರಕ್ತಮಠ, ವೆಂಕಟೇಶ್ ಇಂದ್ವಾಡಿ ಮುಂತಾದ ವಿದ್ವಾಂಸರು ಕಾಲಜ್ಞಾನ ಸಾಹಿತ್ಯವನ್ನು ಕುರಿತು ಅಧ್ಯಯನ ಮಾಡಿದ್ದಾರೆ.

ಕಾಲಜ್ಞಾನ ಎಂದರೆ ಕಾಲಜ್ಞಾನವು ಸಮಾಜದಲ್ಲಿ ಮುಂದೆ ನಡೆಯಬಹುದಾದ ಅನೇಕ ಸಂಗತಿಗಳನ್ನು ತಿಳಿಸುವ, ಎಚ್ಚರಿಸುವ ಸಾಹಿತ್ಯವಾಗಿದೆ. ವಿ. ಶಿವಾನಂದ ಅವರು ಕಾಲಜ್ಞಾನದ ಕುರಿತು ಹೀಗೆ ಅಭಿಪ್ರಾಯ ಪಡುತ್ತಾರೆ. "ಮನುಷ್ಯನಿಗೆ ಹಿಂದಿನ ಜೀವಿತದ ಘಟನೆಗಳನ್ನು ಸ್ಮೃತಿಗೆ ತಂದುಕೊಟ್ಟು ಮುಂದಿನ ಜೀವನದ ಅಸ್ತಿತ್ವಕ್ಕೆ ಭರವಸೆ ಹುಟ್ಟಿಸುವಲ್ಲಿ ನೆರವಾಗುವ ಜ್ಞಾನವೇ ಕಾಲಜ್ಞಾನ ಸಾಹಿತ್ಯ"[೩] ಎನ್ನುವ ಮಾತಿನಲ್ಲಿ ಕಾಲಜ್ಞಾನ ಸಾಹಿತ್ಯದ ಮಹತ್ವವನ್ನು ಹೇಳುತ್ತಾರೆ. ಮಾಣಿಕರಾವ ಧನಶ್ರೀಯವರು ಕಾಲಜ್ಞಾನ ಸಾಹಿತ್ಯವನ್ನು ಕುರಿತು "ತ್ರಿಕಾಲಜ್ಞಾನಿಗಳಾದ ಮಹಾತ್ಮರು ಒಂದು ಜನಾಂಗದ ವಿನಾಶ ಕಾಲದ ಸೂಚನೆಯನ್ನು ದೂರದರ್ಶಿತ್ವದಿಂದ ಕಂಡು ಸಾರಿ ಹೊಸದೊಂದು ಸತ್ಯಯುಗ ಬರುತ್ತದೆಂದೋ ಅದಕ್ಕಾಗಿ ಎಲ್ಲರೂ ಎಚ್ಚರರಾಗಿರಬೇಕೆಂದೂ ಬೋಧಿಸುವ ಸಾಹಿತ್ಯಕ್ಕೆ ಕಾಲಜ್ಞಾನ ಸಾಹಿತ್ಯ ಎಂದು ಕರೆಯುತ್ತಾರೆ"[೪] ಎನ್ನುವ ಇವರ ಮಾತುಗಳಲ್ಲಿ ಕಾಲಜ್ಞಾನ ಸಾಹಿತ್ಯವು ಮನುಷ್ಯನ ಭಾಗವಾಗಿರುವುದನ್ನು ಕಾಣಬಹುದಾಗಿದೆ. ಮುಂದುವರಿದು ಇವರು "'ಕಾಲಜ್ಞಾನ' ಶಬ್ದವು 'ಕಾಲ' ಮತ್ತು 'ಜ್ಞಾನ' ಎಂಬ ಎರಡು ಸಂಸ್ಕೃತ ಪದಗಳಿಂದ ಕೂಡಿದೆ. 'ಕಾಲ' ಎಂದರೆ ಸಮಯ ಮತ್ತು 'ಜ್ಞಾನ' ಎಂದರೆ ತಿಳಿವಳಿಕೆ. ಹೀಗೆ ಕಾಲಜ್ಞಾನ ಎಂದರೆ ಕಾಲದ ಅಥವಾ ಸಮಯದ ತಿಳಿವಳಿಕೆ ಎಂದು ಸ್ಥೂಲವಾಗಿ ಅರ್ಥೈಸಬಹುದಾಗಿದೆ"[೫] ಎಂದು ಹೇಳಿದ್ದಾರೆ. ವೀರೇಶ ಬಡಿಗೇರ ಅವರು ಕಾಲಜ್ಞಾನ ಸಾಹಿತ್ಯದ ಕುರಿತು ಹೇಳುತ್ತಾ "ಕಾಲಜ್ಞಾನ ಎನ್ನುವಲ್ಲಿ ಕಾಲ ಎನ್ನುವ ಪೂರ್ವಪದ ಕಾಲ, ಸಮಯ, ಹೊತ್ತು ಕಾಲಗಣನೆ ಎಂಬುದನ್ನೂ ಜ್ಞಾನ ಎನ್ನುವ ಉತ್ತರ ಪದ ಅರಿವು ತಿಳಿವಳಿಕೆ ಎಂಬುದನ್ನು ಸೂಚಿಸುವಂತಿದೆ. ಕಾಲದ ಆಗು ಹೋಗುಗಳನ್ನು ಸೂಚಿಸುವುದನ್ನು ಕಾಲಜ್ಞಾನವೆಂದು ಗುರುತಿಸಲಾಗಿದೆ"[೬] ಎನ್ನುವ ಅವರ ಮಾತುಗಳಲ್ಲಿ ಕಾಲಜ್ಞಾನವು ಮುಂದೆ ಸಮಾಜದಲ್ಲಿ, ಜಗತ್ತಿನಲ್ಲಿ ಜರುಗಬಹುದಾದ ಘಟನೆಗಳನ್ನು ಆತ್ಮಬಲದಿಂದ ತಿಳಿದ ತಮ್ಮ ಅರಿವಿನ ವಿಸ್ತಾರತೆಯನ್ನು ಅನುಭಾವಿಗಳು ಹೇಳುವ ಸಾಹಿತ್ಯ ಪ್ರಕಾರವಾಗಿ ಕಾಲಜ್ಞಾನವು ಬೆಳೆದುಬಂದಿದೆ.

ರೆವರೆಂಡ್ ಕಿಟಲ್ ಅವರ ಶಬ್ದಕೋಶದಲ್ಲಿ ಕಾಲಜ್ಞಾನಕ್ಕೆ ಅರ್ಥ ಹೀಗಿದೆ. "ಕಾಲಜ್ಞಾನ: Knowledge of time or of the times, knowledge of events to come. ಕಾಲಜ್ಞಾನಿ: A person who possesses Kalajanana, Siva"[೭]

ಕಾಲಜ್ಞಾನವು ಸಮಾಜದಲ್ಲಿ ನೀತಿಯನ್ನು ಪ್ರತಿಪಾದಿಸಿದ ಸಾಹಿತ್ಯವಾಗಿದೆ. ಜನಪದ ಸಾಹಿತ್ಯವಾದ ಕಾಲಜ್ಞಾನವು ಜನಸಾಮಾನ್ಯರಲ್ಲಿ ಜಾಗೃತಿಯನ್ನುಂಟು ಮಾಡುವ ಸಾಹಿತ್ಯವಾಗಿದೆ. ಜನತೆಯು ಈ ಕಾಲಜ್ಞಾನ ಸಾಹಿತ್ಯದ ಮೇಲೆ ಹೆಚ್ಚು ವಿಶ್ವಾಸವಿಡುವುದರಿಂದ ಸಮಾಜದಲ್ಲಿ ಕಾಲಜ್ಞಾನ ಸಾಹಿತ್ಯವು ತನ್ನದೇ ಮಹತ್ವದ ಸ್ಥಾನ ಪಡೆದುಕೊಂಡಿದೆ.

ಬಾಲಬಸವರ ಕಾಲಜ್ಞಾನ ಸಾಹಿತ್ಯ :

ಕನ್ನಡದಲ್ಲಿ ಕಾಲಜ್ಞಾನ ಸಾಹಿತ್ಯವು ಎರಡು ರೀತಿಯಲ್ಲಿ ಮೂಡಿಬಂದಿದೆ. ಒಂದು ವಚನ ಚಳವಳಿಯಲ್ಲಿ ರೂಪಗೊಂಡಿರುವ ಕಾಲಜ್ಞಾನ ಸಾಹಿತ್ಯ. ಎರಡು ವಚನ ಚಳವಳಿಯ ನಂತರ ರೂಪಗೊಂಡಿರುವ ಕಾಲಜ್ಞಾನ ಸಾಹಿತ್ಯ. ಕರ್ನಾಟಕದ ಬಹುತೇಕ ಭಾಗಗಳಲ್ಲಿ ಬಾಲಬಸವ ಸಂಪ್ರದಾಯವು ವಚನ ಚಳುವಳಿಯ ಕಾಯಕತತ್ವದ ಅಡಿಯಲ್ಲಿ ಬೆಳೆದುಬಂದಿದೆ. ಈ ಪರಂಪರೆಯು ಕಾಲಜ್ಞಾನ ಸಾರುವುದನ್ನೇ ಕುಲವೃತ್ತಿಯನ್ನಾಗಿಸಿಕೊಂಡು ಜೀವನ ಸಾಗಿಸುತ್ತಿದೆ. ಕಾಲಜ್ಞಾನವು ಸಮಾಜದ ವಿನಾಶಕಾಲದ ಸೂಚನೆಯನ್ನು ಮತ್ತು ಎಚ್ಚರಿಕೆಯ ನೀತಿ ಬೋಧನೆಯನ್ನು ಬೋಧಿಸುವ ಮೌಖಿಕ ಸಾಹಿತ್ಯವಾಗಿದೆ. ಮನುಷ್ಯ ತನ್ನ ನೈತಿಕ ಅಧಃಪತನ ಮತ್ತು ಸಾಮರ್ಥ್ಯವನ್ನು ಯಾವಾಗ ಕಳೆದುಕೊಳ್ಳುತ್ತಾನೋ, ಆ ಸಮಯಕ್ಕೆ ಮುಂದೆ ಸಂಭವಿಸಬಹುದಾದ ಘಟನೆಗಳನ್ನು ಕುರಿತು ಸಾಮಾನ್ಯ ತಿಳುವಳಿಕೆ ಮೂಡಿಸುವ ಪ್ರಯತ್ನ ಮಾಡುತ್ತದೆ. ಕಾಲಜ್ಞಾನ ಸಾಹಿತ್ಯದ ಪ್ರಮುಖ ಧೋರಣೆ ಎಂದರೆ ಸಮಾಜದಲ್ಲಿ ನೀತಿ ಪ್ರತಿಪಾದನೆ ಮಾಡುವುದು, ಕಾಲಕಾಲಕ್ಕೆ ಸಮಾಜದಲ್ಲಿ ಸ್ವಾರ್ಥ ಹೆಚ್ಚಾಗಿ ನೀತಿ ನಿಯಮಗಳು ಏರುಪೇರಾಗಿ ಸಾಮಾಜಿಕ, ಕೌಟಂಬಿಕ ಸ್ವಾಸ್ಥ್ಯ ಕೆಟ್ಟು ಹೋದಾಗ, ಪರಸ್ಪರ ವಿಶ್ವಾಸ ಇರಬೇಕಾಗಿದ್ದ ಸಂಗತಿಗಳಲ್ಲಿ ಅವಿಶ್ವಾಸ ತಾಂಡವಾಡುತ್ತಿರುವ ಸ್ಥಿತ್ಯಂತರ ಕಾಲದಲ್ಲಿ ಸಾಮಾಜಿಕ ಸ್ವಾಸ್ಥ್ಯವನ್ನು ಪುನಃ ಪ್ರತಿಷ್ಠಾಪನೆ ಮಾಡುವ ಸಾಮಾಜಿಕ ಹೊಣೆಗಾರಿಕೆಯು ಬಾಲಬಸವರ ಮೌಖಿಕ ಸಾಹಿತ್ಯದಲ್ಲಿದೆ. ಬಾಲಬಸವರು ಜನಸಮುದಾಯದ ಮಧ್ಯದಲ್ಲಿದ್ದುಕೊಂಡು ಸಮಾಜವನ್ನು ಸೂಕ್ಷ್ಮವಾಗಿ ಗಮನಿಸಿ ಅಲ್ಲಿ ಸಿಗಬಹುದಾದ ಅನೇಕ ಸಾಮಗ್ರಿಗಳನ್ನು ಬಳಸಿಕೊಂಡು ಜನಪದದ ಹಾಡು ಮಾತಿನ ಧಾಟಿಯಲ್ಲಿ ತಮ್ಮ ಮೌಖಿಕ ಸಾಹಿತ್ಯವಾದ ಕಾಲಜ್ಞಾನವನ್ನು ಬಿತ್ತರಿಸುವ ಕಾರ್ಯವು ಶ್ರೀಸಾಮಾನ್ಯನಿಗೆ ಹೆಚ್ಚು ಹೆಚ್ಚು ಹತ್ತಿರವಾಗಿದೆ. ಅವರ ಮೌಖಿಕ ಸಾಹಿತ್ಯದಲ್ಲಿ ಮಾನವನ ಬದುಕಿನ ವೈವಿಧ್ಯಮಯ ಜೀವನಕ್ರಮದಲ್ಲಿ ಎಚ್ಚರಿಕೆ ಮತ್ತು ಜಾಗೃತಿ ಮೂಡಿಸುವ ಅಂಶಗಳು ಹೆಚ್ಚಾಗಿವೆ. ಸಮಾಜದಲ್ಲಿ ಮನುಷ್ಯ ತನ್ನ ನೈತಿಕ ಅಧಃಪತನಗೊಳ್ಳುವ ಹಂತಕ್ಕೆ ಬಂದಾಗ ಅಥವಾ ಬರುವ ಮುನ್ಸೂಚನೆ ಇದ್ದಾಗ, ತನ್ನೊಳಗಿರುವ ಆತ್ಮಜ್ಞಾನ ಬಲದಿಂದ ಸಮಾಜದಲ್ಲಿ ಮುಂದೊದಗಬಹುದಾದ ಸತ್ಯ ಸಂಗತಿಗಳನ್ನು ತಿಳಿಸುವ, ಎಚ್ಚರಿಸುವ ಕಾರ್ಯವನ್ನು ಅಲಕ್ಷಿತ ಜ್ಞಾನ ಪರಂಪರೆ ಮಾಡಿಕೊಂಡು ಬಂದಿದೆ. ಅಂತಹ ಜ್ಞಾನಧಾರೆಯು ಇಂದಿಗೂ ನಮ್ಮೊಂದಿಗೆ ಜೀವಂತವಾಗಿದೆ. ಮೌಖಿಕತೆಯ ಮೂಲಕವೇ ತನ್ನ ಜ್ಞಾನ ಪರಂಪರೆಯನ್ನು ಉಳಿಸಿಕೊಂಡು ಬಂದಿರುವ ಈ ಸಾಧನ ಪಂಥವು ಶಿಷ್ಟಸಾಹಿತ್ಯದಿಂದ

ಅಲಕ್ಷಿತಕ್ಕೆ ಒಳಗಾಗಿದೆ. ಆಧುನಿಕತೆಯ ಭರಾಟೆಯಿಂದಾಗಿ ಜನಮಾನಸದಿಂದ ಕೂಡ ದೂರವಾಗುವ ಹಂತಕ್ಕೆ ಬಂದಿದೆ. ತನ್ನಲ್ಲಿ ಸಿದ್ಧಿಸಿಕೊಂಡಿರುವ ಸಾಧನೆಯು ತನ್ನ ಸ್ವ ಅನುಭವ ಮತ್ತು ಕಾಯಕತತ್ವದ ಅಡಿಯಲ್ಲಿ ಬೆಳೆದುಬಂದಿದೆ. ಈ ಅಲಕ್ಷಿತ ಜ್ಞಾನಧಾರೆಯವರು ದಲಿತ ವರ್ಗದಲ್ಲಿನ ಮಾದಿಗರಲ್ಲಿ ಕಂಡುಬರುತ್ತಾರೆ. ಅವರನ್ನು 'ಬಾಲಬಸವರು' ಎಂದು ಕರೆಯುತ್ತಾರೆ. ಈ ಅಲಕ್ಷಿತ ಸಾಧನ ಪಂಥವು "ಯೋಗ ನಿದ್ರೆಗೆ ಜಾರಿ ಇಂದು ಮುಂದಾಗುವ ವಿಷಯಗಳನ್ನು ಆತ್ಮಜ್ಞಾನದಿಂದ ತಿಳಿದು ಲೋಕಕ್ಕೆ ತಮ್ಮ ಮೌಖಿಕತೆಯ ಮೂಲಕ ಸಮಾಜಕ್ಕೆ ಎಚ್ಚರಿಸುವ ಕಾಲಜ್ಞಾನಿಗಳಾಗಿದ್ದಾರೆ."[೮] ಕಾಲಜ್ಞಾನ ಎಂದರೆ ಸಮಾಜದಲ್ಲಿ ಮುಂದೆ ನಡೆಯಬಹುದಾದ ಅನೇಕ ಸಂಗತಿಗಳನ್ನು ತಿಳಿಸುವ, ಎಚ್ಚರಿಸುವ ಸಾಹಿತ್ಯವಾಗಿದೆ. ಕಾಲಜ್ಞಾನ ಸಾಹಿತ್ಯದ ಉಗಮದ ಹಿಂದೆ ಮಾನವೀಯ ದೃಷ್ಟಿ ಮನಕುಲದ ಕಲ್ಯಾಣದ ಚಿಂತನೆ ಇದೆ. ಈ ಚಿಂತನೆಯು ಮಾನವಧರ್ಮದ ಎಲ್ಲಾ ಸಾಹಿತ್ಯಕ್ಕೂ ಕೇಂದ್ರಶಕ್ತಿಯಾಗಿರುವ ಸಾಧ್ಯತೆಯಿದೆ. ಈ ರೀತಿಯ ಚೇತನಚಿಂತನಾ ಶಕ್ತಿಯೇ ಕಾಲಜ್ಞಾನ. ಒಟ್ಟಿನಲ್ಲಿ ಕಾಲಜ್ಞಾನ ಸಾಹಿತ್ಯವೂ ಜೀವನದಲ್ಲಿ ಮುಂಬರುವ ಅಪಾಯ ಇಲ್ಲವೇ ಗಂಡಾಂತರಗಳನ್ನು ಸೂಚಿಸಿ ಅವುಗಳಿಂದ ರಕ್ಷಿಸಿಕೊಳ್ಳುವ ಉಪಾಯಗಳನ್ನು ಸೂಚಿಸುತ್ತದೆ. ಕಾಲಜ್ಞಾನ ಸಾಹಿತ್ಯವು ಧರ್ಮಕೇಂದ್ರಿತ ಮತ್ತು ನೀತಿಕೇಂದ್ರಿತವಾಗಿರುವುದರಿಂದ ಭಾರತದ ವಿವಿಧ ಧರ್ಮಗಳು ಕೂಡ ತಮ್ಮದೇ ಪರಿಭಾಷೆಯಲ್ಲಿ ಕಾಲಜ್ಞಾನ ಸಾಹಿತ್ಯವನ್ನು ಅರ್ಥೈಸುತ್ತದೆ. ಎಲ್ಲ ಧರ್ಮಗಳಲ್ಲಿ ಮಾನವೀಯತೆಯ ಸಾಕಾರಮೂರ್ತಿಗಳಾದ ಸಕಲ ಜೀವಾತ್ಮರ ಲೇಸನ್ನೇ ಬಯಸುವ ತ್ರಿಕಾಲಜ್ಞಾನಿಗಳು ಜಗತ್ತಿನ ಕಲ್ಯಾಣಕ್ಕಾಗಿ ಮುಂಬರುವ ಸಂಗತಿಗಳ ಮುನ್ಸೂಚನೆಯನ್ನು ಕೊಡುತ್ತಾ ಬಂದಿದ್ದಾರೆ. ಅವರ ಎಚ್ಚರಿಕೆಯ ಹೇಳಿಕೆಗಳು ಹಾಡುಧಾಟಿನ ಮಾತಿನಲ್ಲಿರುತ್ತವೆ. ಮುಂದೆ ಅವುಗಳೇ ಸಾಹಿತ್ಯದ ರೂಪ ಪಡೆದು ಕಾಲಜ್ಞಾನ ಸಾಹಿತ್ಯವಾಗಿ ರೂಪುಗೊಂಡಿವೆ.

ಬಾಲಬಸವರ ಪರಂಪರೆಯು ಕಾಲಜ್ಞಾನ ಸಾರುವಾಗ ಒಮ್ಮೆ ನುಡಿದದ್ದನ್ನು ಮತ್ತೊಮ್ಮೆ ನುಡಿಯುವುದಿಲ್ಲ. ಒಂದು ಊರು ಕೇರಿಯಲ್ಲಿ ಸಾರಿದ ವಾಕ್ಯವನ್ನು ಮತ್ತೊಂದು ಊರುಕೇರಿಯಲ್ಲಿ ಮತ್ತೆ ಉಚ್ಚರಿಸುವುದಿಲ್ಲ. ದೀಕ್ಷೆ ಪಡೆದುಕೊಂಡಿರುವ ಪ್ರತಿಯೊಬ್ಬ ಬಾಲಬಸವರು ಕಡ್ಡಾಯವಾಗಿ ಕಾಲಜ್ಞಾನವನ್ನು ಕಲಿಯುತ್ತಾರೆ. ಇದರಲ್ಲಿ ಪುರುಷ ಅಥವಾ ಮಹಿಳೆ ಎನ್ನುವ ಭೇದ/ಭಾವಗಳಿಲ್ಲ. ಇವರು ಕಿವಿಗೆ ಕರ್ಣಕುಂಡಲಗಳನ್ನು ಧರಿಸಿ, ಕೆಂಪು ಪೇಟವನ್ನು ತಲೆಗೆ ಕಟ್ಟಿಕೊಂಡು, ರುದ್ರಾಕ್ಷಿಮಾಲೆ ಮತ್ತು ಲಿಂಗಧಾರಣೆ ಮಾಡಿಕೊಂಡು, ತಂಬೂರಿಯನ್ನು ಹೆಗಲಿಗೆ ಹಾಕಿಕೊಂಡು ಕಾಲಜ್ಞಾನ ಸಾರುತ್ತಾರೆ. ಕಾಲಜ್ಞಾನವನ್ನು ಮಧ್ಯಾಹ್ನದವರೆಗೆ ಮಾತ್ರ ಸಾರುತ್ತಾರೆ. ಬೇರೆ ಯಾವ ಸಂದರ್ಭದಲ್ಲೂ ಇದನ್ನು ಸಾರುವ ಹಾಗಿಲ್ಲ. ಬಾಲಬಸವರ ಭಕ್ತರು, ಕೃಷಿಕರು ಮತ್ತು ಒಕ್ಕಲಿನವರು ಇವರಿಗೆ ದವಸ ಧಾನ್ಯಗಳ ಭಿಕ್ಷೆ ನೀಡುತ್ತಾರೆ. ಇದು ಅವರ ಜೀವನ ನಿರ್ವಹಣೆಗಾಗಿರುತ್ತದೆ.

ಕಾಲಜ್ಞಾನ : ಬಾಲಬಸವರು :

ಕರ್ನಾಟಕದಲ್ಲಿರುವ ಬಾಲಬಸವ ಪರಂಪರೆಯಲ್ಲಿ ಎಲ್ಲಾ ಬಾಲಬಸವರು ಕಾಲಜ್ಞಾನವನ್ನು ಹಾಡುತ್ತಾರೆ. ಪ್ರಮುಖವಾಗಿ ಹೆಸರಿಸಬಹುದಾದ ಕಾಲಜ್ಞಾನ ಸಾರುವ ಬಾಲಬಸವರೆಂದರೆ ಬಾಲಬಸವ ತುಮನೆಪ್ಪ(ಭೈರದೇವರ ಗುಡ್ಡ), ಬಾಲಬಸವ ಹನುಮಪ್ಪ(ಹೀಲದಹಳ್ಳಿ), ಬಾಲಬಸವರ ನಾಗೇಂದ್ರಪ್ಪ (ಮಂಡರಘಟ್ಟ), ಬಾಲಬಸವ ಶಿವಪ್ಪ(ಹರ್ಲಾಪುರ), ಬಾಲಬಸವ ಕೆ.ಆರ್. ಬಸವರಾಜ(ಕೆ.ಕೆ.ಪುರ), ಬಾಲಬಸವಿ ಹಾಲಮ್ಮ, ಬಾಲಬಸವಿ ಮಹಾದೇವಕ್ಕ, ಬಾಲಬಸವ ಬಸವರಾಜ್, ಬಾಲಬಸವ ಬಾಲಜ್ಜ, ಬಾಲಬಸವಿ ಜ್ಯೋತಮ್ಮ, ಬಾಲಬಸವ ಪ್ರಸಾದ ಹರಪನಹಳ್ಳಿಯಲ್ಲಿ ವಾಸವಿದ್ದಾರೆ.

ಬಾಲಬಸವರು ಸಾರುವ ಕಾಲಜ್ಞಾನದ ಸಾಮಾಜಿಕ ಆಶಯವು ಒಂದೇ ಆಗಿದೆ. ಆದರೆ ಅದರ ನಾದ, ಲಯ ಮತ್ತು ಹಾಡುವ ದಾಟಿಗಳು ಭೌಗೋಳಿಕ ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿರುವುದು ಕ್ಷೇತ್ರ ಕಾರ್ಯದಲ್ಲಿ ಕಂಡುಬಂದಿದೆ. ಕಾಲಜ್ಞಾನದಲ್ಲಿ ಕೇಳಿರಣ್ಣ-ನೋಡಿರಣ್ಣ, ಬರುತ್ತೈತೆ-ಆಕ್ಕೈತೆ, ಡಂಗುರ, ದಿಮ್ಮಿಸಾಲೆ, ನೋಡಣ್ಣ, ಬಸವನೇ ತಂದೆ ಎನ್ನುವ ಸಾಲುಗಳು ಕಾಲಜ್ಞಾನದ ಕೊನೆಯಲ್ಲಿ ಬರುತ್ತವೆ.

ಹರಪನಹಳ್ಳಿ ಬಾಲಬಸವರ ಕಾಲಜ್ಞಾನದ ಧಾಟಿ ಹೀಗಿದೆ.

ಹಿಟ್ಟಿಗೆ ರೈತರು ಮನೆ ಮನೆ ತಿರುಗೋದು ನೋಡಿರಣ್ಣ
ಹಿಟ್ಟಿಗೆ ರೈತರು ಮನೆ ಮನೆ ತಿರುಗೋದು ಕೇಳಿರಣ್ಣ

ಹೀಲದಹಳ್ಳಿ ಬಾಲಬಸವರ ಕಾಲಜ್ಞಾನದ ಧಾಟಿ ಹೀಗಿದೆ.

ಮಳಿಗಾಲ ಬ್ಯಾಸಿಗೆ ಆಕ್ಕೈತೆ ಬ್ಯಾಸಿಗೆ ಮಳಿಗಾಲ ಆಕ್ಕೈತೆ
ಹೆಂಡ್ರೂ ಕೊಳ್ಳಾಗ ಮರದ ತಾಳಿ ಬರುತ್ತೈತೆ

ಮಂಡರಘಟ್ಟದ ಬಾಲಬಸವರ ಕಾಲಜ್ಞಾನದ ಧಾಟಿ ಹೀಗಿದೆ.

ಧರ್ಮವೇ ಉಳಿದಾವೇ ಡಂಗೂರ
ಧರ್ಮವೇ ಗುರುವಂತೆ ಡಂಗೂರ

ಹರ್ಲಾಪುರದ ಬಾಲಬಸವರ ಕಾಲಜ್ಞಾನದ ಧಾಟಿ ಹೀಗಿದೆ.

ಮಂಜು ಮಳೆಗಳು ಮುಗಿಲ ಸೇರ್ವವು
ಬಂಜೆಯಾದಳು ಭೂಮಿ ತಾಯಿ
ಉಂಡ ಎಂಜಲ ಪತ್ರಾವಳಿಯಂತೆ
ಆಗಿ ಹೋಗ್ವದು ಜಗವೆಲ್ಲಾ

ಈ ರೀತಿಯಾದ ಭಿನ್ನ ಧಾಟಿ ಲಯಗಾರಿಕೆಯುಳ್ಳ ಕಾಲಜ್ಞಾನ ಸಾಹಿತ್ಯವು ಕರ್ನಾಟಕದ ಬಾಲಬಸವರ ಪರಂಪರೆಯಲ್ಲಿ ಕಾಣಬಹುದಾಗಿದೆ.

೪.೨. ಮೌಖಿಕ ಕಾವ್ಯಗಳು :

ಕರ್ನಾಟಕದಲ್ಲಿರುವ ಬಾಲಬಸವರ ಪರಂಪರೆಯಲ್ಲಿ ಕಾಲಜ್ಞಾನವು ಪ್ರಧಾನವಾದ ಮೌಖಿಕ ಸಾಹಿತ್ಯವಾಗಿದೆ. ಬೈರದೇವರಗುಡ್ಡ ಮತ್ತು ಹರಪನಹಳ್ಳಿ ಸಂಪ್ರದಾಯದ ಬಾಲಬಸವ ತುಮನೆಪ್ಪವರು ಮಾತ್ರ ಕಾಲಜ್ಞಾನ ಮತ್ತು ಮೌಖಿಕ ಕಾವ್ಯಗಳನ್ನು ಹಾಡುತ್ತಾರೆ. ಬಾಲಬಸವ ಪರಂಪರೆಯಲ್ಲಿ ಬರುವ ಹರಪನಹಳ್ಳಿಯ ಬಾಲಬಸವ ತುಮನೆಪ್ಪನವರು ಹಾಡುವ ಕಥೆಗಳಲ್ಲಿ(ಕಾವ್ಯ) ಶಿವಶರಣರ ಜೀವನ ಚರಿತ್ರೆಗಳು, ಜನಪದ ಕಥೆಗಳು, ಸಾಂಸ್ಕೃತಿಕ ನಾಯಕರ ಸಂಘರ್ಷದ ಜೀವನದ ಹೋರಾಟಗಳ ಕಥಾವಸ್ತುಗಳನ್ನು ಕಥನಗಳಾಗಿ ಕಟ್ಟಿ ಹಾಡುತ್ತಾರೆ. ಇವರ ಕಾವ್ಯಗಳಲ್ಲಿ ಪ್ರಾದೇಶಿಕತೆ ಮತ್ತು ಸ್ಥಳೀಯ ಚರಿತ್ರೆಯನ್ನು ಕಾಣಬಹುದಾಗಿದೆ. ಉದಾ: ಸಂಡೂರು ರಾಜನ ಕಥೆ ಪಾಳೇಗಾರರಿಗೆ ಸಂಬಂಧಿಸಿದ ಕಾವ್ಯವಾಗಿದೆ. ಈ ಕಾವ್ಯವನ್ನು ಸ್ಥಳೀಯ ಸಂಸ್ಕೃತಿಯ ನೆಲೆಯಲ್ಲಿ ಅಧ್ಯಯನ ಮಾಡುವ ಅವಶ್ಯಕತೆ ಇದೆ. ಬಾಲಬಸವ ಪರಂಪರೆಯಲ್ಲಿ ಯಾರೂ ಈ ರೀತಿ ಕಥನಗಳನ್ನು ಕಟ್ಟಿ ಹಾಡುವ ಕಲಾವಿದರು ಕಾಣಿಸುವುದಿಲ್ಲ. ತುಮನೆಪ್ಪನವರು ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕಿನ ಬೈರದೇವಗುಡ್ಡದವರು, ಈಗ ಗೊಲ್ಲರಹಳ್ಳಿಯಲ್ಲಿ ವಾಸ ಮಾಡುತ್ತಿದ್ದರು. ಇತ್ತೀಚೆಗಷ್ಟೇ ಅವರು ತೀರಿಕೊಂಡಿದ್ದಾರೆ.

ಬಾಲಬಸವ ತುಮನೆಪ್ಪ ಹಾಡಿರುವ ಪ್ರಮುಖ ಕಾವ್ಯಗಳು :

ಗೋಣಿಬಸಪ್ಪನ ಕಾವ್ಯ, ಮರುಳಸಿದ್ಧನ ಕಾವ್ಯ, ಇಗ್ನಾವತಿ ಕಾವ್ಯ, ಸಂಡೂರು ರಾಜನ ಕಾವ್ಯ

ಗೋಣಿಬಸಪ್ಪನ ಕಾವ್ಯ :

ಗೋಣಿಬಸಪ್ಪನ ಕಾವ್ಯ ಬಾಲಬಸವರ ಮೌಖಿಕ ಸಾಹಿತ್ಯದ ಮಧ್ಯ ಕರ್ನಾಟಕದ ಒಂದು ವಿಶಿಷ್ಟ ಪರಂಪರೆಯಾಗಿರುವ ಈ ಬಾಲಬಸವ ಸಂಪ್ರದಾಯವು ತನ್ನದೇ ಆದ ಚೌಕಟ್ಟಿನಲ್ಲಿ ಬದುಕು ಕಟ್ಟಿಕೊಂಡಿದೆ. ಈ ರೀತಿಯ ವಿಶಿಷ್ಟತೆಯನ್ನು ಹೊಂದಿರುವ ಈ ಪರಂಪರೆಯ ಬಗ್ಗೆ ಹೆಚ್ಚು ಅಧ್ಯಯನಗಳು ನಡೆದಿಲ್ಲ. ಆದರೆ ವೆಂಕಟೇಶ ಇಂದ್ವಾಡಿ ಅವರು ಮೌಖಿಕ ಕಾವ್ಯಕ್ಕೆ ಹೆಚ್ಚು ಪ್ರಾಧಾನ್ಯತೆ ನೀಡಿ ಸಂಪಾದನೆ ಮಾಡಿಕೊಟ್ಟಿದ್ದಾರೆ. ಪ್ರಸ್ತಾವನೆಯಲ್ಲಿ ಇವರ ಬಗ್ಗೆ ಸಮಗ್ರವಾದ ಮಾಹಿತಿ ನೀಡುವ ಕಾರ್ಯ ಮಾಡಿದ್ದಾರೆ. ಬಾಲಬಸವರ ಜೀವನ, ಸಮಾಜದೊಂದಿಗಿನ ಅನುಸಂಧಾನ, ಅವರ ಪ್ರಮುಖ ನೆಲೆಗಳು, ಸಾಹಿತ್ಯ, ಆ ಸಮುದಾಯವು ನಿರ್ಮಿಸಿಕೊಂಡಿರುವ ಸಾಂಸ್ಕೃತಿಕ ಜೀವನ ಮತ್ತು ಬಾಲಬಸವರು ಮಾದಿಗ ಕುಲದಲ್ಲಿರುವ ಲಿಂಗವಂತರು. ಸಾಮಾಜಿಕ ಸ್ಥಿತ್ಯಂತರಗಳು, ಸಾಮಾಜಿಕ ಸಂಘರ್ಷಗಳು ಅವರ ಬದುಕಿನಲ್ಲಿ ಹೇಗೆ ವ್ಯಕ್ತಗೊಂಡಿದೆ, ಅವುಗಳನ್ನು ತಾವು ಮೌಖಿಕ ಕಾವ್ಯಗಳ ಮೂಲಕ ಸಮಾಜದೊಂದಿಗೆ ಅವರು ಹೊಂದಿರುವ ಸಾಮಾಜಿಕ ಸಂಬಂಧದ ಕುರಿತು ವಿಸ್ತೃತ ಅಧ್ಯಯನ ಮಾಡಿ ಈ ಬಗ್ಗೆ ವಿವರಿಸಿದ್ದಾರೆ.

ಕಾವ್ಯವು ಮುಖ್ಯವಾಗಿ ಮೌಖಿಕ ಅಭಿವ್ಯಕ್ತಿ ಕಡೆಗೆ ಹೆಚ್ಚು ಕೇಂದ್ರೀಕೃತವಾಗಿದೆ. ಜನಪದರು ಏನೇನೋ ಕಲ್ಪಿಸಿ ಹೇಳುತ್ತಾರೆ. ಅವರಿಗೆ ಶಿಕ್ಷಣವಿಲ್ಲ, ನಾಗರಿಕತೆಯಿಲ್ಲ ಎನ್ನುವ ವಾದಕ್ಕೆ ಸವಾಲಾಗಿ ಈ ಕಾವ್ಯ ನಿಲ್ಲುತ್ತದೆ. ಅಂದರೆ ಶಿಕ್ಷಣ ಪಡೆದ ಪಂಡಿತರಿಗಿಂತ ಮೌಖಿಕತೆಯ ಮೂಲಕ ಹೆಚ್ಚು ನೈತಿಕತೆ ಮತ್ತು ಸಾಮಾಜಿಕತೆಯನ್ನು ಕಾವ್ಯಾತ್ಮಕವಾಗಿ ಸಮಾಜದ ಮುಂದಿಡುವ ಕಾರ್ಯವನ್ನು ಈ ಜನಪದರು ಮಾಡುತ್ತಾರೆ. ಈ ಕೃತಿಯನ್ನು ಮುಖ್ಯವಾಗಿ ಹಲವು ಪ್ರಮುಖ ನೆಲೆಗಳಲ್ಲಿ ನೋಡಬಹುದಾಗಿದೆ. ಗೋಣಿಬಸಪ್ಪನ ಕಾವ್ಯ ಮತ್ತು ಆ ದೈವಕ್ಕೆ ನಡೆದುಕೊಳ್ಳುವ ಸಮುದಾಯಗಳ ಸಾಮಾಜಿಕ ಸಂಘರ್ಷಗಳ ಸ್ವರೂಪವನ್ನು ನೋಡಬಹುದು. ಮೌಖಿಕ ಕಾವ್ಯವು ಚರಿತ್ರೆಯ ಭಾಗವಾಗಿ ತನ್ನೊಳಗೆ ಸತ್ಯ ಸಂಗತಿಗಳನ್ನು ಹೇಗೆ ಇಟ್ಟುಕೊಂಡಿವೆ, ಅದರೊಂದಿಗೆ ಹೇಗೆ ಅನುಸಂಧಾನ ಮಾಡುತ್ತವೆ ಎನ್ನುವುದು ಚರಿತ್ರೆ ಅಂಶ. ಅಂದರೆ ಗೋಣಿಬಸಪ್ಪ ಪವಾಡಪುರುಷ, ದೈವಾಂಶಸಂಭೂತ. ಆತ ತನ್ನ ಜೀವಿತದ ಕಾಲದೊಳಗೆ ನಡೆದ ಸಂಗತಿಗಳ ಚಿತ್ರಣವನ್ನು ತನ್ನ ಅಸ್ತಿತ್ವಕ್ಕೆ ನಡೆಸಿದ ಹೋರಾಟದ ವಿವರಗಳೊಂದಿಗೆ ಸಮಾಜದ ಹಿನ್ನೆಲೆಯನ್ನು ಕೃತಿಯು ವಿವರಿಸುತ್ತದೆ. ಮೌಖಿಕ ಕಾವ್ಯವು ಹೇಗೆ ಪುರಾಣ, ಇತಿಹಾಸವನ್ನು ಸಮಕಾಲೀನ ಸಂದರ್ಭಗಳಿಗೆ ಅನುಗುಣವಾಗಿ ನಡೆದ ನೈಜ ಘಟನೆಗಳನ್ನು ಹಾಡುವ ಧಾಟಿಯಲ್ಲೇ ಅಭಿವ್ಯಕ್ತಿಸುವ ಕ್ರಮ ಅತ್ಯಂತ ಮಹತ್ವದ್ದಾಗಿದೆ. ಈ ರೀತಿಯ ಸಂಗತಿಗಳು ಒಂದಕ್ಕೊಂದು ಸಮೀಕರಿಸಿಕೊಳ್ಳುವ ಸಂಗತಿ ರೀತಿ ಕೂಡ ಭಿನ್ನವಾಗಿದೆ.

'ಪಂಚಗಣಾಧೀಶ್ವರರು' ಎನ್ನುವ ಕಥನವನ್ನು ಹಾಡುವ ಈ ಬಾಲಬಸವ ತುಮನೆಪ್ಪ ಅವರು ಅದರ ಉಪಕಥೆಯನ್ನು ಪ್ರಧಾನ ಕಥೆಯನ್ನಾಗಿಸಿಕೊಂಡು ಗೋಣಿಬಸಪ್ಪನ ಕಾವ್ಯ ಹಾಡುತ್ತಾರೆ. ಪಂಚಗಣಾಧೀಶ್ವರರಲ್ಲಿ ಮದ್ದಾನೇಶ್ವರನು ಒಬ್ಬ. ಅವನ ಮಗನೇ ಈ ಗೋಣಿಬಸಪ್ಪ. ವರ್ಣ ಸಂಕರದಲ್ಲಿ ಹುಟ್ಟುವ ಗೋಣಿಬಸಪ್ಪನ ತಂದೆ ಜಂಗಮ, ತಾಯಿ ಬೇಡರ ಕನಕಮ್ಮ. ಇವರಿಬ್ಬರಿಗೆ ಜನಿಸಿದ ಕುಲಸಂಕರದ ಮಗು. ಈ ಸಂಗತಿಯೇ ಮುಂದೆ ಗೋಣಿಬಸಪ್ಪ ಅಪಮಾನ ನೋವುಗಳಿಗೆ ಕಾರಣವಾಗುತ್ತದೆ. ಈ ಅಪಮಾನಗಳನ್ನು ಮೀರಿ ಗೋಣಿಬಸಪ್ಪ ಕೂಲಹಳ್ಳಿಯಲ್ಲಿ ಮಠ ಸ್ಥಾಪನೆ ಮಾಡುತ್ತಾನೆ. ಇದರಿಂದ ಮತ್ತೆ ಜಂಗಮತ್ವವನ್ನು ಪಡೇಕೊಳ್ಳುವ ಕೆಲಸ ಮಾಡುತ್ತಾನೆ. ಕುರುಬ ವಡ್ಡಟ್ಟವ್ವನನ್ನು ಮದುವೆಯಾಗುವುದರ ಮೂಲಕ ಮತ್ತೆ ಜಂಗಮತ್ವವನ್ನು ಮೀರುತ್ತಾನೆ. ಅಷ್ಟೊತ್ತಿಗೆ ಕೂಲಹಳ್ಳಿಯ ಸುತ್ತಮುತ್ತ ಗೋಣಿಬಸಪ್ಪ ತನ್ನ ಪವಾಡಗಳಿಂದ ಹೆಸರು ಮತ್ತು ಕೀರ್ತಿಯನ್ನು ಗಳಿಸಿರುತ್ತಾನೆ. ಈತನ ಜನಪ್ರಿಯತೆಯು ಅಲ್ಲಿನ ಪ್ರಭುತ್ವಕ್ಕೆ ನುಂಗಲಾರದ ತುತ್ತಾಗಿ ಪರಿಣಮಿಸುತ್ತದೆ. ಇದರಿಂದಾಗಿ ಹರಪನಹಳ್ಳಿಯ ಸಾಮಂತ ದೊರೆಗಳು ಗೋಣಿಬಸಪ್ಪನ ಮಠದ ಮೇಲೆ ದಾಳಿ ಮಾಡುವ ಸಂಚು ಮಾಡುತ್ತವೆ. ಇದರ ಭಾಗವಾಗಿ ಗೋಣಿಬಸಪ್ಪನನ್ನು ಮಂತ್ರ ವಿದ್ಯೆಯ ಮೂಲಕ ಸಾಯಿಸಲು ಮುಂದಾಗುತ್ತಾನೆ. ಈ ಪ್ರಯತ್ನದಲ್ಲಿ ಯಶಸ್ವಿಯಾದ ದೊರೆಯ ಕನಸಿಗೆ ಬಾಲಬಸವ ಅಡ್ಡಿಯಾಗುತ್ತಾನೆ. ಮೊರವಿ ಅಂಗಿಯ ಮಾಟದಿಂದ ಸತ್ತ

ಗೋಣಿಬಸಪ್ಪನನ್ನು ಮತ್ತೆ ಉಳಿಸುವುದರ ಮೂಲಕ ಗೋಣಿಬಸಪ್ಪನೊಂದಿಗೆ ಇರುವ ಸಾಂಸ್ಕೃತಿಕ ಸಂಬಂಧವನ್ನು ಗಟ್ಟಿಗೊಳುತ್ತಾನೆ. ಇದರಿಂದ ಗೋಣಿಬಸಪ್ಪ ಮತ್ತೆ ದೈವವಾಗುತ್ತಾನೆ. ಈ ಎಲ್ಲಾ ಸಂಗತಿಗಳನ್ನು ನೋಡಿದ ಹರಪನಹಳ್ಳಿಯ ಸಾಮಂತ ದೊರೆ ಚಿಗಟೇರಿ ಶಿವನಯ್ಯ ಗೋಣಿಬಸಪ್ಪನ ಮೇಲೆ ದಾಳಿ ಮಾಡುತ್ತಾನೆ. ಎಲ್ಲಾ ದಾಳಿಗಳನ್ನು ಗೋಣಿಬಸಪ್ಪ ತನ್ನ ಪವಾಡಗಳ ಮೂಲಕ ಗೆಲ್ಲುವುದರ ಮೂಲಕ ಮತ್ತೆ ಮತ್ತೆ ದೈವನಾಗುತ್ತಾನೆ. ಕೊನೆಗೆ ಚಿಗಟೇರಿ ಶಿವನಯ್ಯನೇ ಗೋಣಿ ಬಸಪ್ಪನ ಮೇಲೆ ಯುದ್ಧ ಸಾರುತ್ತಾನೆ. ಸಾಧು ಶಿವಶರಣನಾದ ಗೋಣಿಬಸಪ್ಪನು ನೇರವಾಗಿ ಯುದ್ಧ ಮಾಡದೇ ಗುಮ್ಮಗೋಳದ ಪಿಕನಗೌಡರ ಮಕ್ಕಳ ಮೂಲಕ ಯುದ್ಧ ಮಾಡಿಸಿ ಚಿಗಟೇರಿ ಶಿವನಯ್ಯನನ್ನು ಕೊಲ್ಲಿಸುತ್ತಾನೆ.

ಗೋಣಿಬಸಪ್ಪನ ಕಾವ್ಯವು ಅಂದಿನ ಸಮಾಜ, ಜನತೆ, ಧಾರ್ಮಿಕತೆ, ಸಾಮಾಜಿಕ ಸಂಘರ್ಷ, ಸಂಪ್ರದಾಯ, ಹೆಣ್ಣುಮಕ್ಕಳ ಆಚರಣೆ, ನಂಬಿಕೆ ಮುಂತಾದ ಅನೇಕ ಅಂಶಗಳಿಗೆ ಹೆಚ್ಚು ಪ್ರಾತಿನಿಧ್ಯ ನೀಡುತ್ತದೆ. ಸಮಾಜವು ಹೇಗೆ ಕಾವ್ಯದೊಳಗೆ ಅಭಿವ್ಯಕ್ತಗೊಂಡಿದೆ, ಮೌಖಿಕ ಕಾವ್ಯಗಳು ನಿರ್ದಿಷ್ಟ ವ್ಯಾಪ್ತಿ ಮತ್ತು ಭೌಗೋಳಿಕತೆಯನ್ನು ಒಳಗೊಂಡಿರುತ್ತವೆ. ಹಾಗೆಯೇ ಈ ಗೋಣಿಬಸಪ್ಪನ ಕಾವ್ಯ ಕೂಡ ಮಧ್ಯ ಕರ್ನಾಟಕದ ಭೂಪ್ರದೇಶವನ್ನು ಕೇಂದ್ರವಾಗಿಸಿಕೊಂಡಿದೆ. ಅಲ್ಲಿನ ಸಾಮಾಜಿಕತೆ, ಚರಿತ್ರೆ, ದೈವತ್ವ ಸಾಮಾನ್ಯ ಜನತೆಯನ್ನು ದೈವೀಕರಿಸುವ ಕ್ರಿಯೆ ಮುಂತಾದ ವಿಷಯಗಳು ಪ್ರಮುಖವಾಗಿವೆ. ಕೆಳವರ್ಗದ ಜನತೆ ಮತ್ತು ಮೇಲ್ವರ್ಗದ ನಡುವಿನ ಸಾಮಾಜಿಕ ಸಂಘರ್ಷಗಳ ಅಸ್ತಿತ್ವ, ಹುಡುಕಾಟ, ಪ್ರಭುತ್ವದ ವಿರೋಧಿ ನೆಲೆಗಳು ಮುಂತಾದ ಸಂಗತಿಗಳನ್ನು ಕಾಣಬಹುದಾಗಿದೆ. ಕಾವ್ಯದಲ್ಲಿ ಮೌಖಿಕತೆಯನ್ನು ಹೆಚ್ಚು ವಿಸ್ತಾರಗೊಳಿಸುವ ಮತ್ತು ಅಭಿವ್ಯಕ್ತಗೊಳ್ಳುವ ನಿರೂಪಣಾಕ್ರಮ ಪ್ರಮುಖವಾಗಿದೆ.

ಮರುಳಸಿದ್ಧನ ಕಾವ್ಯ :

ಬಾಲಬಸವ ತುಮನೆಪ್ಪ ಹಾಡುವ ಮೌಖಿಕ ಕಾವ್ಯದಲ್ಲಿ ಮಧ್ಯಕಾಲೀನ ಶಿವಶರಣರ ಜೀವನ ಕಥೆಗಳು ಪ್ರಮುಖವಾಗಿವೆ. ಬಾಲಬಸವ ಪರಂಪರೆಯವರು ಈ ಮರುಳಸಿದ್ಧನ ಮಠದಲ್ಲಿ ದೀಕ್ಷೆ ತೆಗೆದುಕೊಳ್ಳುವುದರಿಂದ ಈ ಮಠದೊಂದಿಗಿನ ಸಂಬಂಧವು ಧಾರ್ಮಿಕ ಹಾಗೂ ಸಾಂಸ್ಕೃತಿಕವಾದದ್ದು. ಬಾಲಬಸವರು ಕುಲದ ನೆಲೆಯಲ್ಲಿ ಮಧ್ಯಕಾಲೀನ ಶಿವಶರಣರ ಕಥೆ ಹಾಡುವುದರ ಉದ್ದೇಶ. ಮರುಳಸಿದ್ಧನ ಹುಟ್ಟು, ವಿಕಾಸ, ಎದುರಿಸಿದ ಸಂಘರ್ಷದ ಬದುಕು, ಜಾತಿಯಿಂದಾಗಿ ಹುಟ್ಟಿನಿಂದ ಪಟ್ಟ ಕಷ್ಟಗಳನ್ನು ಲಿಖಿತ ಚರಿತ್ರೆಯು ದಾಖಲಿಸಿದ ತಮಗೆ ಬಂದಂತೆ ವೈಭವೀಕರಿಸಿಕೊಂಡಿರುವುದರ ವಿರುದ್ಧ ಜನಪದರು ತಮ್ಮ ಕುಲ ಮೂಲದ ಸಾಂಸ್ಕೃತಿಕ ನಾಯಕನ ಜೀವನಚರಿತ್ರೆಯನ್ನು ತಾವೇ ಪುನರ್ ಸೃಷ್ಟಿಸುವ ಸಾಮಾಜಿಕ ಒತ್ತಡ ಅನಿವಾರ್ಯವಾಗಿರುವ ಸಂದರ್ಭದಲ್ಲಿ ಈ ಮರುಳಸಿದ್ಧನ ಕಾವ್ಯಗಳನ್ನು ಕಟ್ಟಿಕೊಂಡಿರಬೇಕು. ಹಾಗಾಗಿ ಈ ಕಾವ್ಯ ಹಾಡುವ ಬಾಲಬಸವರಿಗೂ ಮರುಳಸಿದ್ಧನಿಗೆ ಒಂದು ರೀತಿಯಾದ ಸಾಮಾಜಿಕ

ಸಂಬಂಧವಿರುವುದರಿಂದ ಮತ್ತು ಅವರ ಸಾಂಸ್ಕೃತಿಕ ನಾಯಕನ ಸ್ಥಾನದಲ್ಲಿ ಈ ಮರುಳಸಿದ್ಧ ಮಹಾದೇವನಾಗಿ ನಿಲ್ಲುತ್ತಾನೆ.

ಬಾಲಬಸವ ತುಮನೆಪ್ಪ ಹಾಡುವ ಧಾರ್ಮಿಕ ಕಾವ್ಯಗಳಾದ ಗೋಣಿಬಸಪ್ಪ ಮತ್ತು ಮರುಳಸಿದ್ಧನ ಕಾವ್ಯಗಳಲ್ಲಿ 'ಕಲ್ಯಾಣ ಪಟ್ಟಣವು' ಪ್ರಮುಖ ಸ್ಥಾನ ವಹಿಸುತ್ತದೆ. ಇವರು ವಚನ ಚಳುವಳಿಯ ಪ್ರಭಾವ ಮತ್ತು ಪ್ರೇರಣೆಯಿಂದಾಗಿ ಮಧ್ಯಕಾಲೀನ ಶಿವಶರಣರ ಧಾರ್ಮಿಕ ಕಥೆಗಳನ್ನು ಹಾಡುತ್ತಾರೆ. ಈ ಮಧ್ಯಕಾಲೀನದಲ್ಲಿ ಬರುವ ಮಂಟೇಸ್ವಾಮಿ, ಮಲೆಮಾದಪ್ಪ, ಗೋಣಿಬಸಪ್ಪ, ಮರುಳಸಿದ್ಧ ಮುಂತಾದ ಕಾವ್ಯಗಳಲ್ಲಿ ಕೈಲಾಸದಲ್ಲಿ ಜರುಗುವ ಪ್ರಸಂಗದಿಂದಾಗಿ ಕಲ್ಯಾಣದಲ್ಲಿ ಈ ಶಿವಶರಣರನ್ನು ಭೂಮಿಗೆ ಕಳುಹಿಸುವ ಅಥವಾ ಬಸವಣ್ಣ ಸಕ್ಕರೆ ಊಟ ಹಾಕಿಸುವ ಪ್ರಸಂಗ ಮುಖ್ಯವಾಗಿ ಕಂಡುಬರುತ್ತದೆ. ಬಸವಣ್ಣ ಮತ್ತು ಆತನೊಂದಿಗೆ ಇದ್ದ ಶಿವಶರಣ ಭಕ್ತಿಯನ್ನು ಪ್ರಶ್ನೆ ಮಾಡುವ ಸಲುವಾಗಿ ಶಿವ ಪರಮಾತ್ಮ ಬಸವಣ್ಣನ ಅನುಭವ ಮಂಟಪಕ್ಕೆ ವಿಕಾರಿಯಾಗಿ ಬಂದು, ಬಸವಣ್ಣ ಮತ್ತು ಆತನೊಂದಿಗೆ ಇದ್ದ ಶಿವಶರಣರ ಢಾಂಬಿಕ ಶಿವಭಕ್ತಿಯನ್ನು ಪರೀಕ್ಷೆ ಮಾಡುವ ಪ್ರಸಂಗವಿದೆ. ಅದು ಬಾಲಬಸವ ತುಮನೆಪ್ಪ ಹಾಡುವ ಧಾರ್ಮಿಕ ಕಾವ್ಯಗಳಲ್ಲಿ ಬರುತ್ತದೆ. ಅಲ್ಲದೆ ಶಿವಶರಣರ ಕುರಿತು ಸಂಪಾದಿಸಿರುವ ಶೂನ್ಯ ಸಂಪಾದನೆಯಲ್ಲೂ ಇದೇ ರೀತಿಯಾದ ಪ್ರಸಂಗ ಕಂಡುಬರುವುದನ್ನು ನಾವು ಗಮನಿಸಬೇಕು. ಈ ಕೈಲಾಸದ ಪ್ರಸಂಗ ಮುಗಿದ ಮೇಲೆ ಹರಳಯ್ಯ ಮತ್ತು ಬಸವಣ್ಣನ ನಡುವೆ ಮೂಡಿದ ಸ್ನೇಹ ಅನುಭವ ಮಂಟಪದಲ್ಲಿ ಕ್ರಾಂತಿಯನ್ನುಂಟು ಮಾಡುತ್ತದೆ. ಹರಳಯ್ಯ ಮತ್ತು ಮಧುವರಸನ ಮಗನಿಗೆ ಮದುವೆ ಮಾಡಿದ ಪ್ರಸಂಗ ಈ ಕಾವ್ಯದಲ್ಲಿ ಮಹತ್ವದ ಸ್ಥಾನ ಪಡೆಯುತ್ತದೆ. ಅಂದರೆ ಹರಳಯ್ಯ ಮತ್ತು ಮಧುವರಸನ ಮಕ್ಕಳನ್ನು ಗಲ್ಲಿಗೇರಿಸುವ ಪ್ರಸಂಗಗಳು ಈ ಮೊದಲು ನಿರೂಪಿತವಾದ ಕಥೆಗಳಲ್ಲಿ ಹೆಚ್ಚಾಗಿ ಸಿಗುತ್ತವೆ. ಆದರೆ ಮರುಳಸಿದ್ಧನ ಕಾವ್ಯದಲ್ಲಿ ಅವರು ಕೂಗದ ಮಾರಯ್ಯ ಮತ್ತು ಕಲ್ಯಾಣಮ್ಮನಾಗಿ ಕಲಿ(ಭೂಮಿ)ಗೆ ಬಂದು ಮರುಳುಸಿದ್ಧರ ಜನ್ಮಕ್ಕೆ ಕಾರಣವಾಗುತ್ತಾರೆ. ಮಾದಿಗರ ಮನೆಯಲ್ಲಿ ಹುಟ್ಟಿದ ಮರುಳಸಿದ್ಧರು ಮುಂದೆ ಜಗತ್ತಿಗೆ ಗುರುವಾದ ಕುರಿತು ಬಾಲಬಸವರು ಕಥೆ ಹಾಡುತ್ತಾರೆ. ತಂದೆಯ ಸಾಲದ ಕಾರಣಕ್ಕಾಗಿ ಕರ್ವಿಮಲ್ಲನ ಗೌಡರ ಮನೆಯಲ್ಲಿ ಸಾಲಕ್ಕೆ ಜೀತಗಾರನಾಗಿ ದುಡಿಯುತ್ತಾನೆ. ಸುಮಾರು ವರ್ಷಗಳ ಕಾಲ ಜೀತಕ್ಕೆ ಕೆಲಸ ಮಾಡಿದರೂ ಸಾಲ ತೀರಿತು ಎನ್ನುವುದನ್ನು ಕರ್ವಿಮಲ್ಲನ ಗೌಡ ಹೇಳುವುದಿಲ್ಲ. ಮರುಳಸಿದ್ಧರನ್ನು ಒಣಸಂಬಳಕ್ಕೆ ದುಡಿಸಿಕೊಳ್ಳುತ್ತಾನೆ. ಮರುಳಸಿದ್ದರು ದನ ಕಾಯುವ ಕಾಯಕ ಮಾಡುವ ಸಂದರ್ಭದಲ್ಲಿ ಊರ ಶಾನುಭೋಗರ ಹೊಲದಲ್ಲಿ ಜೋಳ ಚೆನ್ನಾಗಿ ಬೆಳೆದಿರುತ್ತದೆ. ಆ ಹೊಲದಲ್ಲಿ ಮರುಳಸಿದ್ಧರು ಕಾಯುವ ದನಗಳು ಮೇಯುತ್ತವೆ. ಈ ಸಮಯದಲ್ಲಿ ಮಾಯದ ನಿದ್ದೆಯಲ್ಲಿದ್ದ ಮರುಳಸಿದ್ಧರು ಮೇಲಕ್ಕೆ ಎದ್ದು ನೋಡಿದಾಗ ತನ್ನ ದನದ ಹಿಂಡು ಅಲ್ಲಿ ಮೇಯುತ್ತಿರುವುದನ್ನು ಗಮನಿಸುತ್ತಾನೆ. ಈ ಸಂಗತಿಯು ಗೌಡರಿಗೆ ತಿಳಿದರೆ ನನಗೆ

ತೊಂದರೆಯಾಗುತ್ತದೆ ಎಂದು ದನಗಳು ತಿಂದ ಶಾನುಭೋಗರ ಹೊಲವನ್ನು ಮತ್ತೆ ಮೊದಲಿನಂತೆ ಪವಾಡ ಮಾಡುತ್ತಾನೆ. ಈ ಬೆಳವಣಿಗೆಗಳು ಆ ಊರಿನಲ್ಲಿ ಗೌಡ ಮತ್ತು ಶಾನುಭೋಗರ ಮಧ್ಯ ಜಗಳದಿಂದಾಗಿ ಮತ್ತೆ ಮರುಳಸಿದ್ಧರು ನೋವು ಅನುಭವಿಸುತ್ತಾರೆ. ಇದರಿಂದ ಮರುಳಸಿದ್ಧರು ಕರ್ವಿ ಮಲ್ಲನಗೌಡರ ಮನೆ ಬಿಟ್ಟು ದೇಶ ಸಂಚಾರ ಮಾಡುತ್ತಾನೆ. ಈ ನಡುವೆ ಕುರನಹಳ್ಳಿಯ ರೈತರು ಬೆಳೆದ ಎಳ್ಳುಗಳ ಸಹಾಯದಿಂದ ಕರ್ವಿಮಲ್ಲನ ಗೌಡರ ಸಾಲವನ್ನು ತೀರಿಸಿ ಪವಾಡಗಳ ಮೂಲಕ ದೈವವಾಗುತ್ತಾನೆ. ಉಜ್ಜಯಿನಿಯಲ್ಲಿ ಮಠ ಕಟ್ಟುತ್ತಾನೆ. ಮಧ್ಯ ಕರ್ನಾಟಕದಲ್ಲಿ ಲಿಂಗಾಯತರ ಪ್ರಬಲವು ಹೆಚ್ಚಾಗಿದ್ದರೂ ಅವರ ನಡುವೆ ಈ ಮಾದಿಗರ ಹುಡುಗನು ಮಠ ಕಟ್ಟಿ ಅಲ್ಲಿನ ಜನತೆಯ ಪ್ರೀತಿಗೆ ಕಾರಣನಾಗುತ್ತಾನೆ. ಈ ಎಲ್ಲಾ ಸಂಗತಿಗಳು ಅಂದಿನ ರಾಜಪ್ರಭುತ್ವಕ್ಕೆ ಕಣ್ಣು ಕೆಂಪಾಗಿಸುತ್ತದೆ. ಇದರಿಂದ ಮರುಳಸಿದ್ಧರ ಮಠದ ಮೇಲೆ ದಾಳಿ ಮಾಡುತ್ತಾನೆ. ಈ ದಾಳಿಯ ಪರಿಣಾಮದಿಂದಾಗಿ ಮರುಳಸಿದ್ಧರು ಉಜ್ಜಯಿನಿ ಪೀಠವನ್ನು ಬಿಟ್ಟು ಸಿರಿಗೇರಿಗೆ ಹೋಗುತ್ತಾನೆ. ಇದರಿಂದ ಉಜ್ಜಯಿನಿ ಸಿಂಹಾಸನದ ಅಥವಾ ಪೀಠದ ವಾರಸತ್ವಕ್ಕೆ ಪಂಚಾಚಾರ್ಯರು ಮತ್ತು ಸಾದರ ಲಿಂಗಾಯತರ ನಡುವೆ ಜಗಳವಿದೆ. ಈ ಸಾಂಸ್ಕೃತಿಕ ರಾಜಕಾರಣವನ್ನು ಬಾಲಬಸವರು ಈ ಮರುಳಸಿದ್ಧರ ಕಾವ್ಯದಲ್ಲಿ ಹೇಳುತ್ತಾರೆ.

ಇಗ್ನಾವತಿ ಕಾವ್ಯ :

ಬಾಲಬಸವ ತುಮನೆಪ್ಪ ಹಾಡುವ ಕಾವ್ಯಗಳನ್ನು ಧಾರ್ಮಿಕ ಕಾವ್ಯ ಮತ್ತು ಲೌಕಿಕ ಕಾವ್ಯಗಳೆಂದು ವಿಭಾಗಿಸಿಕೊಳ್ಳಬಹುದು. ಈ ಎರಡು ಮಾದರಿಯಲ್ಲಿ ಹಾಡುವ ಈ ಬಾಲಬಸವ ತುಮನೆಪ್ಪ ಮೌಖಿಕ ಕಾವ್ಯ ಹಾಡುವಾಗ ಸ್ಥಳೀಯ ಜನತೆಗೆ ಹೆಚ್ಚು ಅರ್ಥವಾಗುವಂತಹ ಸರಳ ಭಾಷೆ ಮತ್ತು ಸ್ಥಳೀಯ ಭೌಗೋಳಿಕತೆಯನ್ನು ಕಾವ್ಯದಲ್ಲಿ ವ್ಯಕ್ತಪಡಿಸುತ್ತಾರೆ. ಹಾಗಾಗಿ ಇವರು ಹಾಡುವ ಮೌಖಿಕ ಕಾವ್ಯಗಳಾದ ಇಗ್ನಾವತಿ ಕಾವ್ಯ, ಸತಿ ಸುಲೋಚನಿ ಕಾವ್ಯ, ಶೀಲವತಿ ಕಾವ್ಯ, ಅದೃಷ್ಟ ರಾಜನ ಕಥೆ, ಸಂಡೂರ ರಾಜನ ಕಥೆ, ರಾಜಮಾರ್ತಾಂಡನ ಕಥೆ, ಶಿವಕುಮಾರನ ಕಥೆ, ಬಾಳ ಭಿಕ್ಷುಕ ರಾಜನ ಕಥೆ ಇನ್ನು ಮುಂತಾದವುಗಳು. ಇಲ್ಲಿ ಸಂಡೂರು ರಾಜನ ಕಥೆ ಮತ್ತು ಇಗ್ನಾವತಿ ಕಥೆಗಳು ಜನಪದ ಕಥೆಗಳಲ್ಲಿ ಕಥಾ ಹಂದರವು ತನ್ನ ಪ್ರಾದೇಶಿಕತೆಯಲ್ಲಿ ಕಥೆಯನ್ನು ಹಾಡುವ ಈ ಬಾಲಬಸವ ತುಮನೆಪ್ಪನವರು ತನ್ನದೇ ಅದ ಲಯಗಾರಿಕೆಯನ್ನು ಕಂಡುಕೊಂಡಿದ್ದಾನೆ.

ಇಗ್ನಾವತಿ ಕಥೆಯು ಅಜ್ಜಿ ಹೇಳುವ ಜನಪದ ಕತೆಯ ಕಥಾಹಂದರವನ್ನು ಹೊಂದಿದೆ. ಈ ಕಥೆಯಲ್ಲಿ ಬಳಕೆಯಾಗುವ ಕಥಾ ಫ್ಯಾಂಟಸಿಯು ಅತ್ಯಂತ ಮುಖ್ಯವಾಗಿದೆ. ಇಗ್ನಾವತಿ ಕಥೆಯು ಪ್ರತಿನಾಯಕಿಯನ್ನು ವೈಭವಿಸುವ ಕಥೆಯಾಗಿದೆ. ಇಗ್ನಾವತಿಯು ಈ ಕಥೆಯಲ್ಲಿ ರಾಕ್ಷಸಿ. ತಾನು ತನ್ನ ಮಂತ್ರಶಕ್ತಿಯಿಂದ ತನ್ನ ರೂಪವನ್ನು ಬದಲಾಯಿಸುವ ಶಕ್ತಿಯು ಅವಳಿಗೆ ವರವಾಗಿರುತ್ತದೆ. ಇದೇ ಕಾರಣಕ್ಕೆ ರಾಜ ಆಕೆಯನ್ನು ಮದುವೆಯಾಗಿ ತನ್ನ ಏಳು ಜನ

ಹೆಂಡತಿಯರನ್ನು ಕಾಡಿಗೆ ಕಳಿಸಿ ಅವರ ಕಣ್ಣುಗಳನ್ನು ಕಿತ್ತುಕೊಂಡು ಬರುವಂತೆ ಮಾಡಿಸುತ್ತಾಳೆ. ಬಾಲಬಸವ ತುಮನೆಪ್ಪನವರು ಗಾಯನದ ಮೂಲಕ ಕಥೆಯನ್ನು ನಿರೂಪಿಸುವ ತಂತ್ರಗಾರಿಕೆ, ಕಥೆಯ ಬೆಳವಣಿಗೆಗೆ ಬಳಸಿಕೊಳ್ಳುವ ಕ್ರಮ, ಕಥೆಗಾರ ಕೇಳುಗರನ್ನು ತನ್ನತ್ತ ಸೆಳೆಯುವ ಆಕರ್ಷಣೀಯ ಲಯಗಾರಿಕೆಗಳು ಮಹತ್ವದ್ದಾಗಿವೆ.

ಸಂಡೂರು ರಾಜ ಕಾವ್ಯ :

ಬಾಲಬಸವ ತುಮನೆಪ್ಪ ಹಾಡಿದ ಈ ಸಂಡೂರು ರಾಜನ ಕಥೆ ಪ್ರಾದೇಶಿಕವಾಗಿ ತಮ್ಮ ಸಾಮಾಜಿಕ ಪರಿಸರದಲ್ಲಿ ಕಂಡುಬರುವ ಪಾಳೇಗಾರರ ಕಥನವನ್ನು ಕಾವ್ಯಾತ್ಮಕವಾಗಿ ಹಾಡುವ ಮತ್ತು ಚರಿತ್ರೆಯಲ್ಲೂ ಸಿಗದ ಈ ಕುರುಹುಗಳನ್ನು ಈ ಬಾಲಬಸವ ತುಮನೆಪ್ಪ ಅಲ್ಲಿನ ಪ್ರದೇಶಗಳನ್ನು ಬಳಸಿಕೊಂಡು ಕಥೆ ಹಾಡುತ್ತಾನೆ. ಮುಖ್ಯವಾಗಿ ಒಬ್ಬ ಕಲಾವಿದ ತನ್ನ ಸುತ್ತಮುತ್ತಲಿನ ಧಾರ್ಮಿಕ, ಸಾಮಾಜಿಕ, ಚಾರಿತ್ರಿಕ ಸಾಮುದಾಯಿಕ ನೆಲೆಯಲ್ಲೂ ಸಾಂಸ್ಕೃತಿಕ ನಾಯಕರ ಅವರ ಚರಿತ್ರೆಯನ್ನು ಮರು ಸೃಷ್ಟಿ ಮಾಡುವ ಅವರ ಬಗ್ಗೆ ಇನ್ನೂ ಹೆಚ್ಚಿನ ಅಧ್ಯಯನಗಳು ನಡೆಯುವಂತೆ ಆಕರಗಳನ್ನು ಕಟ್ಟಿಕೊಡುತ್ತಾರೆ. ವಿಜಯನಗರ ಸಾಮ್ರಾಜ್ಯ ಪತನವಾದ ನಂತರ ಈ ಭೂಪ್ರದೇಶವನ್ನು ಅನೇಕ ಪಾಳೇಪಟ್ಟು ಮನೆತನಗಳು ಆಳ್ವಿಕೆ ಮಾಡಿದರು. ಅವರಲ್ಲಿ ಎಪ್ಪತ್ತೇಳು ಪಾಳೇಪಟ್ಟ ಈ ಭೂ ಪ್ರದೇಶವನ್ನು ಆಳ್ವಿಕೆ ಮಾಡಿರುವ ಕುರಿತು ಚರಿತ್ರೆಯ ಕುರುಹುಗಳು ನಮಗೆ ಲಭ್ಯವಿವೆ. ಅವರಲ್ಲಿ ಮುಖ್ಯವಾಗಿ ಕಂಪಿಲದೇವರಾಯ, ಹರಪನಹಳ್ಳಿ ಪಾಳೇಗಾರ, ಚಿತ್ರದುರ್ಗದ ಪಾಳೇಗಾರರು, ಸುರಪುರದ ಪಾಳೇಗಾರರು, ಸಂಡೂರು, ಗುಡೇಕೋಟೆ, ಜರ್ಮಲಿ, ಮುಂತಾದವರು ಈ ಪಾಳೇಗಾರರಿಗೆ ತಮ್ಮದೇ ಆದ ಸ್ಥಳೀಯ ಸಾಂಸ್ಕೃತಿಕ ಚರಿತ್ರೆ ಇದೆ. ಚರಿತ್ರೆಕಾರರು ಮುಖ್ಯವೆನ್ನಬಹುದಾದ ಪಾಳೇಗಾರರಿಗೆ ಮಾತ್ರ ಚರಿತ್ರೆಯಲ್ಲಿ ಜಾಗ ನೀಡಿದ್ದಾರೆ. ಅವರ ಕುರಿತು ಅಧ್ಯಯನಗಳು ನಡೆದಿವೆ. ಚಿತ್ರದುರ್ಗ, ಹರಪನಹಳ್ಳಿ, ಜರ್ಮಲಿ, ಸುರಪುರ, ಬಳ್ಳಾರಿ ಮುಂತಾದ ಪ್ರಮುಖ ಪಾಳೇಗಾರರ ಕುರಿತು ದಾಖಲಾಗಿರುವ ಚರಿತ್ರೆ ಸಂಗತಿಗಳು ಕಾಣಿಸುತ್ತವೆ. ಇದರಲ್ಲೂ ಕೆಲವೊಂದು ಸ್ಥಳೀಯ ಪಾಳೇಗಾರರ ನಿಖರವಾದ ಮಾಹಿತಿ ಕೊರತೆಯನ್ನು ನಾವು ಕಾಣಬಹುದು. ಅವರ ಆಳ್ವಿಕೆ ಅಥವಾ ಇರುವಿಕೆಯನ್ನು ಸ್ಥಳೀಯ ಜನಪದ ಕಥೆಗಾರರು ಅವರ ಸಾಂಸ್ಕೃತಿಕ ಚರಿತ್ರೆಯನ್ನು ಉಳಿಸಿಕೊಂಡು ಮೌಖಿಕವಾಗಿ ಹಾಡುವುದರ ಮೂಲಕ ಅವರನ್ನು ಜೀವಂತವಾಗಿರುವ ಚರಿತ್ರೆಯ ಆಕರಗಳಾಗಿರುವ ಪ್ರಯತ್ನ ಮಾಡುತ್ತಾರೆ. ಅವರು ಜೀವಂತವಾಗಿಸಿದ ಈ ಮೌಖಿಕ ಚರಿತ್ರೆಯ ಅಂಶಗಳು ಲಿಖಿತ ಚರಿತ್ರೆಯಲ್ಲಿ ಕಾಣಿಸುವುದಿಲ್ಲ. ಹಾಗಾಗಿ ಮೌಖಿಕ ಚರಿತ್ರೆಯಲ್ಲಿರುವ ಸಾಂಸ್ಕೃತಿಕ ಚರಿತ್ರೆಯು ಅವರ ಜೀವನವಿಧಾನಕ್ಕೆ ಸಂಬಂಧಿಸಿದ್ದು. ಅವರ ಯುದ್ಧ ವರ್ಣಿಸುವ ವೈಭವೀಕರಿಸುವ ಕಥೆಯಲ್ಲ ಹಾಗಾಗಿ ಅವರು ತಮ್ಮ ಮಾತಿನ ಮೇಲೆ ಹೇಗೆ ನಿಂತುಕೊಂಡಿದ್ದರು, ಅವರು ನೀಡುವ ವಚನ, ಭಾಷೆ, ಕೊಟ್ಟ ಮಾತುಗಳನ್ನು ತಮ್ಮ ಜೀವ ಪಣಕಿಟ್ಟು ಉಳಿಸಿಕೊಳ್ಳುವ

ಅವರ ಒಂದು ನಿದರ್ಶನವೆಂದರೆ ಸಂಡೂರು ರಾಜನ ಕಥೆ. ಈ ಸಂಡೂರು ರಾಜನ ಕಥೆಯು ಒನ್‌ಲೈನ್ ಸ್ಟೋರಿ ಎಂದರೆ '**ಕೊಟ್ಟ ಮಾತಿಗೆ ತಪ್ಪದೆ ರಾಜ್ಯವನ್ನು ಬಿಡು ಬಿಡುಗೆಯವರಿಗೆ ಬಿಟ್ಟುಕೊಡುವುದು.**' ಈ ಕಥೆಯು ಎಳೆಯನ್ನು ವಿಸ್ತರಿಸುತ್ತಾ ಸಂಡೂರು ನಗರವನ್ನು ಕೇಂದ್ರವಾಗಿಟ್ಟುಕೊಂಡು ಕಥೆ ಮಾಡುತ್ತಾರೆ. ಚರಿತ್ರೆಯ ಕುರುಹುಗಳು ಸಂಡೂರು ಪಾಳೇಗಾರರ ಕುರಿತು ಹೆಚ್ಚು ಮಾಹಿತಿ ನೀಡದೆ ಹೋಗುತ್ತದೆ. ಚರಿತ್ರಕಾರರು ರೂಪಿಸಿದ ಚರಿತ್ರೆಯಲ್ಲಿ ಈ ಮಲತೀಪುರ ರಾಜ ಬೋಟಿತಕುಮಾರ ಬಸವಂತಕುಮಾರ ಹೆಸರು ಉಲ್ಲೇಖಿಸಿರುವುದಿಲ್ಲ. ಜಾನಪದ ಕಥೆಗಾರರು ನೇರವಾಗಿ ಪಾಳೇಗಾರರ ಹೆಸರನ್ನು ಬಳಸಿಕೊಳ್ಳದೆ ತಮ್ಮ ಸ್ವಕೀಯ ಒಡೆಯನಿಗಳ ಹೆಸರು ಬಳಸಿಕೊಂಡಿರಬಹುದೆಂದು ಊಹೆ ಮಾಡಬಹುದು. ಮೌಖಿಕ ಆಕರಗಳಿಂದ ಚರಿತ್ರೆ ನೋಡುವ ದೃಷ್ಟಿಕೋನ ಇನ್ನು ಹೆಚ್ಚಿನ್ನು ಖಚಿತ ನಿಲುವಿಗೆ ಬರುವ ಅಗತ್ಯವಿದೆ. ಹಾಗಾಗಿ ಜನಪದ ಕಥೆಗಳು, ರಾಜರ ಕಥೆಗಳು ಸಾಮಾನ್ಯವಾಗಿ ಈ ಕಥೆಗಾರರು ಕಥೆ ಕಟ್ಟಿ ಹಾಡುವುದರ ಮೂಲಕ ಅವರ ಕುರಿತು ಮಾಹಿತಿ ನೀಡುವ ಕಾರ್ಯ ಮಾಡುತ್ತಾರೆ. ಸಂಡೂರು ನಗರ ರಾಜ್ಯ ಮೊದಲು ಪಾಳೇಗಾರರು ಆಳ್ವಿಕೆ ಮಾಡಿದ ನಂತರ ಮರಾಠರ ವಶಕ್ಕೆ ಬರುವ ಚಾರಿತ್ರಿಕ ಸಂಗತಿಯ ವಿವರಗಳನ್ನು ಈ ಕಥೆ ಹೇಳುವ ಪ್ರಯತ್ನ ಮಾಡುತ್ತಿರಬಹುದು. ಅಂದಿನ ಸಾಮಾಜಿಕ ಪರಿಸ್ಥಿತಿಯನ್ನು ಯಾರೂ ದಾಖಲಿಸದೇ ಹೋಗಿರುವ ಸತ್ಯ ಸಂಗತಿಯನ್ನು ಜನಪದ ಕಥೆ ಕಟ್ಟಿ ಹಾಡಿನ ರೂಪದಲ್ಲಿ ತಮ್ಮ ಸಮುದಾಯಗಳು ವೈಶಿಷ್ಟ್ಯತೆಯನ್ನು ಮಾತು ಉಳಿಸಿಕೊಂಡಿರುವ ಧೀಮಂತಿಕೆ ಬಾಳ್ವ ಪ್ರದರ್ಶನ ಮಾಡುವ ಉದ್ದೇಶದಿಂದ ಈ ಕಥೆಯು ನಿರ್ಮಾಣವಾಗಿರಬಹುದು.

ಬಾಲಬಸವರು ಮೌಖಿಕ ಕಾವ್ಯಗಳು: ಕಥನ ಮಾದರಿ ಮತ್ತು ಸೊಲ್ಲುಗಳು :

ಬಾಲಬಸವರು ಮೌಖಿಕ ಕಾವ್ಯವನ್ನು ಹಾಡುವಾಗ ಅದರಲ್ಲಿ ಮುಖ್ಯ ಗಾಯಕ ಮತ್ತು ಹಿಮ್ಮೇಳದ ಗಾಯಕರು ಸೇರಿ ಕಥೆ ಮಾಡುತ್ತಾರೆ ಅಥವಾ ಕಥೆಯನ್ನು ಹಾಡುತ್ತಾರೆ. ಮುಖ್ಯ ಗಾಯಕ ಮೇಳದೊಂದಿಗೆ ಕಥೆಯನ್ನು ಹಾಡಿದ ನಂತರ ಅದರ ಭಾಗವನ್ನು ಗದ್ಯದ ರೂಪದಲ್ಲಿ ವಿಸ್ತಾರವಾಗಿ ವಿವರಿಸುತ್ತಾನೆ. ಬಾಲಬಸವರ ಮೌಖಿಕ ಕಾವ್ಯಗಳಾದ ಗೋಣಿಬಸಪ್ಪನ ಕಾವ್ಯ ಮರುಳಸಿದ್ಧನ ಕಾವ್ಯ, ಇಣ್ಣಾವತಿ ಕಾವ್ಯ ಮತ್ತು ಸಂಡೂರು ರಾಜನ ಕಾವ್ಯಗಳು ಪದ್ಯಮಿಶ್ರಿತ ಗದ್ಯ, ಗದ್ಯಮಿಶ್ರಿತ ಪದ್ಯದ ಧಾಟಿಯಲ್ಲಿವೆ. ಈ ಪ್ರಕಾರದಲ್ಲಿ ಬಾಲಬಸವರ ಮೌಖಿಕ ಕಾವ್ಯವನ್ನು ನೋಡುವುದಾದರೆ–

"ಕೊಗದ ಮಾರಯ್ಯ ಹೇಳ್ತಾನೆ. ಗೌಡ್ರೇ ನನ್ನದು ಯಾವ ಊರಾಗಲಿ, ಉದ್ಯಮಾನವಾಗಲಿ ನಾನೊಬ್ಬ ಅನಾಥ ನನಗೆ ತಾಯಿಲ್ಲ ತಂದೆಯಿಲ್ಲ. ನನಗೆ ಮಕ್ಕಳಿಲ್ಲ ಹೊಟ್ಟೆಯೊಳಗೆ ಅದ್ದರಿಂದ
ನಿಮಗೆ ಕಾಣಸ್ಲಾಗಿ ಬಂದೀನಿ ಅದೇನು ಹೇಳಯ್ಯ ಅದೇನ್ರಿ

ನನಗೆ ನಾಲ್ಕು ವರಹ ಸಾಲ ಕೊಡಬೇಕು । ಸೋಕೀರ ಮೂವ ಹಾಜೀಜಿ
ನನಗೆ ಸಾಲ ಕೊಡಬೇಕಯ್ಯೋ । ಸೋಕೀರ ಮೂವ ಹಾಜೀಜಿ

ನಿನ್ನ ಸಾಲ ಹರಿಯುತ್ತಿನಿಯ್ಯೊ । ಸೋಕೀರ ಮೂವ ತಾಜೀಜಿ

ನಾಲ್ಕು ವರಹ ಸಾಲ ಕೊಡೋ । ಸೋಕೀರ ಮೂವ ತಾಜೀಜಿ

ನನಗೆ ನಾಲ್ಕು ವರಹ ಸಾಲ ಕೊಡ್ರೀ ನಿಮ್ಮ ಸಾಲ ತೀರಿಸ್ತೀನಿ, ನನಗೆ ನಾಲ್ಕು ವರಹ ಸಾಲಬೇಕು, ಕೊಡ್ರಿಯೆಂದೆ ಕರ್ವಿಮಲ್ಲನ ಗೌಡೆಂದಾ ಲೇ ಕುಮಾರ ನಾನು ಸಾಲ ಕೊಡಕೆ ಎದ್ರೊದಿಲ್ಲಯ್ಯ ಮುಗಿಲಿಗೆ ಸಾಲ ಕೊಟ್ಟು ಕೊಲ್ಲು ವದ್ದು ವಸೂಲಿ ಮಾಡ್ತೀನಿ ಕೊಡುತಿನಯ್ಯ, ಅಂತ ಹೇಳಿದ. ನೋಡ್ರೀ ಕರುಣೆ ಇಲ್ಲದ ಗೌಡ ಕರ್ವಿಮಲ್ಲನ ಗೌಡ ಹರಳಯ್ಯನ ಮಗ ಕೂಗದ ಮಾರಯ್ಯನಿಗೆ ನಾಲ್ಕು ವರಹ ಸಾಲಕೊಟ್ಟನಂತ್ರೀ"(ಅಪ್ರಕಟಿತ ಮರುಳಸಿದ್ಧನ ಕಾವ್ಯ). ಇಲ್ಲಿ ಕಾಣುವ ಕಾವ್ಯದ ಸಾಲುಗಳಲ್ಲಿ ಪದ್ಯ ಮತ್ತು ಗದ್ಯ ಎರಡನ್ನು ಬಾಲಬಸವರು ಬಳಸಿಕೊಂಡಿರುವುದನ್ನು ನಾವು ಕಾಣಬಹುದಾಗಿದೆ.

ಸೊಲ್ಲುಗಳು :

ಸೊಲ್ಲುಗಳು ಮೌಖಿಕ ಕಾವ್ಯಗಳ ಜೀವಾಳವಾಗಿವೆ. ಜನಪದ ಮೌಖಿಕ ಕಾವ್ಯಗಳಲ್ಲಿ ಬಳಕೆಯಾಗುವ ಸೊಲ್ಲುಗಳು ಕಾವ್ಯದ ವಿಸ್ತಾರತೆಯಲ್ಲಿ ತನ್ನದೇ ಆದ ಮಹತ್ವವನ್ನು ಹೊಂದಿದೆ. ಜನಪದರು ಮೌಖಿಕ ಕಾವ್ಯಗಳನ್ನು ಹಾಡುವ ಸಂದರ್ಭದಲ್ಲಿ ಅವರು ಇಡೀ ಕಾವ್ಯವನ್ನು ನೆನಪಿನಲ್ಲಿ ಇಟ್ಟುಕೊಳ್ಳುವ ತಂತ್ರದ ಭಾಗವಾಗಿ, ಕಾವ್ಯದ ಅಗತ್ಯತೆಗೆ ಅನುಗುಣವಾಗಿ ಅನೇಕ ಸೊಲ್ಲುಗಳನ್ನು ಬಳಸುತ್ತಾರೆ. ಒಂದೊಂದು ಪಲ್ಲವಿಯನ್ನು ಯಾವ ಯಾವ ಭಾವಕ್ಕೆ ಯಾವ ಯಾವ ಸೊಲ್ಲುಗಳನ್ನು ಬಳಸಬೇಕೆಂಬ ತಮ್ಮದೇ ಆದ ತತ್ವವನ್ನು ಕಂಡುಕೊಂಡಿದ್ದಾರೆ. ಬಾಲಬಸವ ತುಮನೆಪ್ಪನವರು ತನ್ನ ಮೌಖಿಕ ಕಾವ್ಯಗಳನ್ನು ಹಾಡುವ ಇದೇ ರೀತಿಯಾದ ಸೊಲ್ಲುಗಳನ್ನು ತಮ್ಮ ಮೌಖಿಕ ಕಾವ್ಯಗಳಲ್ಲಿ ಬಳಸುತ್ತಾರೆ.

ಬಾಲಬಸವರು ಬಳಸುವ ಪ್ರಮುಖ ಸೊಲ್ಲುಗಳು :

೧. ಸೋಕಿರ ರಾಮೂವ ತಾಜೀಜಿ....

೨. ಆ ದೇವ ಶಿವನೆನ ಮಾದೇವೊ ಮನವೇ....

೩. ಹರಹರ ಭಗವಂತ ತಾನಿ ತಂದನಿ ನಾನೋ....

೪. ಸುಖಿ ರಾಜ ಬಗದಿ

೫. ಶಂಕರೂ ರಾಮ ತಾಜೀಜಿ...

೬. ಇನ್ಯಾಕ ಅನುಮಾನಣ್ಣ । ಅನುಮಾನೋ ಜೀಜಿ

ಬಾಲಬಸವರ ಮೌಖಿಕ ಕಾವ್ಯಗಳಲ್ಲಿ ಬಳಕೆಯಾಗುವ ಸೊಲ್ಲುಗಳು ಕಥೆಯ ಚಲನ ಶೀಲತೆಯ ಭಾಗವಾಗಿ ಬಳಕೆಯಾಗುತ್ತವೆ. ಕಾವ್ಯದ ಕಥಾಭಾವದ ಲಹರಿಗೆ ತಕ್ಕಂತೆಯೇ

ಸೊಲ್ಲುಗಳು ಬದಲಾಗುತ್ತಿರುತ್ತವೆ. ಇದರಿಂದ ಹೇಳುವ ಕಥೆಯನ್ನು ಮತ್ತಷ್ಟು ಪರಿಣಾಮಕಾರಿಯಾಗಿ ಹೇಳಲು ಇವುಗಳು ಸಹಾಯಕವಾಗುತ್ತದೆ. ಬಾಲಬಸವ ತುಮನೆಪ್ಪನವರು ಹಾಡುವ ಮೌಖಿಕ ಕಾವ್ಯಗಳಲ್ಲಿ ಬಳಕೆಯಾಗಿರುವ ಸೊಲ್ಲುಗಳು ಕೂಡ ಇದೇ ಮಾದರಿಯಲ್ಲಿರುತ್ತವೆ. ಬಾಲಬಸವರ ಮೌಖಿಕ ಕಾವ್ಯದಲ್ಲಿ ಹೆಚ್ಚಾಗಿ ಬಳಕೆಯಾಗುವ ಸೊಲ್ಲು ಎಂದರೆ ಆ ಸೋಕಿರ ರಾಮೂವ ತಾಜೀಜಿ ಈ ಸೊಲ್ಲು ಕಾವ್ಯವನ್ನು ಸರಾಗವಾಗಿ ಚಲಿಸಲು ಕಾವ್ಯ ಹಾಡುವ ಹಿಮ್ಮೇಳದವರು ಬಳಸುತ್ತಾರೆ. ಅದು ಹೀಗಿದೆ–

ಬಸವಣ್ಣೋರೆ, 'ಸಕ್ರಿಚೀಲ ಗೋಣಿ ಚೀಲದೊಳಗ ಹುಟ್ಟಿದ್ರಿಂದ ಕೈಲಾಸದೊಳಗೆ ಗೋಣಿಬಸವೇಶ್ವರ ಹುಟ್ಟಿದ್ನಪ್ಪ' ಇಲ್ಲಿಗೆ ಎಂದು ಬಾಲಬಸವ ತುಮನೆಪ್ಪ ಕಥೆಯ ಸಾರಾಂಶವನ್ನು ಹೇಳಿ ಅರ್ಧಕ್ಕೆ ನಿಲ್ಲಿಸುತ್ತಾರೆ. ಅದನ್ನು ಹಿಮ್ಮೇಳದ ಗಾಯಕರು

ಬಸವಣ್ಣ ಹುಟ್ಯಾನಯ್ಯೋ ।ಆ ಸೋಕಿರ ರಾಮೂವ ತಾಜೀಜಿ
ಗೋಣಿ ಬಸವ ಹುಟ್ಯಾನಯ್ಯೋ ।ಆ ಸೋಕಿರ ರಾಮೂವ ತಾಜೀಜಿ
ಗೋಣಿ ಚೀಲ್ದಾಗ ಹುಟ್ಯಾನಯ್ಯೋ ।ಆ ಸೋಕಿರ ರಾಮೂವ ತಾಜೀಜಿ
ಗುರುವೇ ಸಕ್ರಿ ಚೀಲ್ದಾಗ ಹುಟ್ಯಾನಯ್ಯೋ ।ಆ ಸೋಕಿರ ರಾಮೂವ ತಾಜೀಜಿ

ಎಂದು ಸೊಲ್ಲು ಹೇಳುವುದರ ಮೂಲಕ ಮತ್ತೆ ಪ್ರಧಾನ ಗಾಯಕ ಹಾಡನ್ನು ಮುಂದುವರಿಸಲು ಸಹಾಯ ಮಾಡುತ್ತಾರೆ. ಈ ಸೊಲ್ಲು ಕಾವ್ಯದಲ್ಲಿ ನಡೆಯುವ ಕ್ರಿಯೆಯ ಭಾಗವಾಗಿ ಹೆಚ್ಚು ಬಳಕೆಯಾಗುತ್ತದೆ.

ದೇವ ಶಿವನೇನ ಮಾದೇವೋ ಮನವೇ ಎನ್ನುವ ಸೊಲ್ಲು ಬಾಲಬಸವರ ಕಾವ್ಯದಲ್ಲಿ ಹೆಚ್ಚಾಗಿ ದೇವರ ಸ್ತುತಿಯನ್ನು ಮಾಡುವ ಸಂದರ್ಭದಲ್ಲಿ ಬಳಕೆ ಮಾಡುತ್ತಾರೆ.

ಕಲ್ಯಾಣ ಪಟ್ಟಣದಾಗೆ ।ಆ ದೇವ ಶಿವನೇನ ಮಾದೇವೋ ಮನವೇ
ಕಲ್ಲಿಗೆ ಕೋಟಿ ಶರಣರಯ್ಯೋ ।ಆ ದೇವ ಶಿವನೇನ ಮಾದೇವೋ ಮನವೇ
ಸಾಸಿರ ಕೋಟಿ ಜಂಗಮರಯ್ಯೊ ।ಆ ದೇವ ಶಿವನೇನ ಮಾದೇವೋ ಮನವೇ
ಹರಹರಭಗವಂತಾ ।ತಾನಿತಂದನಿ ನಾನೋ
ಒಂದು ತಿಂಗಳೆಂಬೋದೇ ।ತಾನಿತಂದನಿ ನಾನೋ
ಒಂದು ವರ್ಷದವ ನಾಗ್ಯಾನೇ ।ತಾನಿತಂದನಿ ನಾನೋ

ಎಲ್ಡು ತಿಂಗಳೆಂಬೋದೇ ।ತಾನಿತಂದನಿ ನಾನೋ
ಎಲ್ಡು ವರ್ಷದವ ನಾಗ್ಯಾನೇ ।ತಾನಿತಂದನಿ ನಾನೋ
ಮೂರು ತಿಂಗಳೆಂಬೋದೇ ।ತಾನಿತಂದನಿ ನಾನೋ
ಮೂರು ವರ್ಷದವ ನಾಗ್ಯಾನೇ ।ತಾನಿತಂದನಿ ನಾನೋ
ಆರು ಮೂರು ಒಂಭತ್ತು ।ತಾನಿತಂದನಿ ನಾನೋ
ಹತ್ತು ವರುಷ ತುಂಬ್ಯಾದೇ ।ತಾನಿತಂದನಿ ನಾನೋ

ಒಂದು ಎಂಬೋ ಗಾವದ ಮ್ಯಾಲೆ ।ಸುಖಿರಾಜ ಬಗದಿ
ರಾಮ ರಾಮ ಎನ್ನುತ್ತಾನೆ ।ಸುಖಿರಾಜ ಬಗದಿ
ರಾಮಧ್ಯಾನ ಮಾಡುತ್ತಾನೆ ।ಸುಖಿರಾಜ ಬಗದಿ
ಶಿವ ಶಿವ ಎನ್ನುತ್ತಾನೆ ।ಸುಖಿರಾಜ ಬಗದಿ
ಶಿವನ ಮಾರ್ಗ ನೆನೆಯುತ್ತಾನೆ ।ಸುಖಿರಾಜ ಬಗದಿ
ದಯಾಮಾಡೊ ನನ್ನ ಗುರುವೇ ।ಸುಖಿರಾಜ ಬಗದಿ
ಜಯವಾಗೊ ನನ್ನ ಗುರುವೇ ।ಸುಖಿರಾಜ ಬಗದಿ
ಎರಡೆ ಗಾವದ ಹೋಗುತ್ತಾನೆ ।ಸುಖಿರಾಜ ಬಗದಿ
ಮೂರೇ ಗಾವದ ಹೋಗುತ್ತಾನೆ ।ಸುಖಿರಾಜ ಬಗದಿ
ಯಾವ ದೇಶವೂ ನಿನ್ನದು ಕೋಶವೂ ನಿನ್ನದು ।ಶಂಕರೂ ರಾಮ ತಾಜೀಜಿ
ಇಲ್ಲಿಗೆ ಯಾತಕೆ ಬಂದಿಯೋ ।ಶಂಕರೂ ರಾಮ ತಾಜೀಜಿ
ಏನು ಕಾರ್ಯಕ್ಕೆ ಬಂದಿಯೋ ।ಶಂಕರೂ ರಾಮ ತಾಜೀಜಿ
ಯಾವ ಪಟ್ಟಣ ಹೇಳಯ್ಯ ನಿಮ್ಮದು ।ಶಂಕರೂ ರಾಮ ತಾಜೀಜಿ
ತಂದೆ ಯಾರು, ತಾಯಿ ಯಾರು ನಿನಗೆ ।ಶಂಕರೂ ರಾಮ ತಾಜೀಜಿ

ಕಣ್ಣೀಗ ನೀರಾ ತಂದಾನೇ ನೋಡು ।ಐ ರಾಮು ತಾಜೀಜಿ
ಓಡಿ ಗೋಳಾಡಿ ಬೋರಾಡಿ ಮಾಡ್ಯಾನೂ ।ಐ ರಾಮು ತಾಜೀಜಿ
ಯಂಗೆ ಪ್ರಾಣ ಪಡಿಯಾಲೀ ನಾನು ।ಐ ರಾಮು ತಾಜೀಜಿ

ಏನೇನೂ ಮಾಡಿದರೇ ತಿರುಗಾಲಿಲ್ಲೋ ।ಐ ರಾಮು ತಾಜೀಜಿ
ಜಲುಮೆ ತಾನೇ ತಿರುಗಾಲಿಲ್ಲೋ ।ಐ ರಾಮು ತಾಜೀಜಿ

ನೀವೆ ಕೇಳಿರಿ ನನ್ನ ದೈವೇ ।ತಾರುಣಿ ತಾಜೀಜಿ
ನೀವೆ ಕೇಳಿರಿ ನನ್ನ ದೈವೇ ।ತಾರುಣಿ ತಾಜೀಜಿ
ಆಟ ಮುಂದಾನಿ ಓಡಿದಾನೋ ।ತಾರುಣಿ ತಾಜೀಜಿ
ಹಿಂದಾಗಿ ಓಡಿದಾನೋ ।ತಾರುಣಿ ತಾಜೀಜಿ
ಆರು ಗುರಿಯಾ ಓಡಿದಾನೋ ।ತಾರುಣಿ ತಾಜೀಜಿ
ತಮ್ಮ ಗುರಿಯಾ ಓಡಿದಾನೋ ।ತಾರುಣಿ ತಾಜೀಜಿ
ಹಿಡಿದೆ ಮೂರು ಚೆಂಡಿನ ।ತಾರುಣಿ ತಾಜೀಜಿ
ಬಣ್ಣದ ಚಾವಡಿ ಬಿದ್ದಾವಯ್ಯ ।ತಾರುಣಿ ತಾಜೀಜಿ
ಮಗನೇ ಚೆಂಡು ಹೋಗ್ಯಾವಯ್ಯ ।ತಾರುಣಿ ತಾಜೀಜಿ

ಇನ್ಯಾಕ ಅನುಮಾನಣ್ಣ ।ಅನುಮಾನೋ ಜೀಜಿ
ಇನ್ಯಾಕ ಅನುಮಾನಣ್ಣ ।ಅನುಮಾನೋ ಜೀಜಿ
ಮಂತ್ರಿ ಖಡ್ಗ ಎತ್ತ್ಯಾನಣ್ಣ ।ಎತ್ತ್ಯಾನೋ ಜೀಜಿ
ಮಂತ್ರಿ ಖಡ್ಗದಿಂದ ಕಡ್‌ದಾನಣ್ಣ ।ಕಡ್‌ದಾನೋ ಜೀಜಿ
ಇದು ಕೂಡ ಹರಿಯಲ್ಲಿಲ್ಲ ।ಹರಿಲ್ಲಿಲೋ ಜೀಜಿ
ಕುದ್ರಿ ಕುದುಲು ಹರಿಯಲಿಲ್ಲ ।ಹರಿಲ್ಲಿಲ್ಲೋ ಜೀಜಿ
ಕುದ್ರಿ ಚರ್ಮ ಹರಿಯಲಿಲ್ಲ ।ಹರಿಲ್ಲಿಲ್ಲೋ ಜೀಜಿ
ಸತ್ಯದ ಮಕ್ಕಳು ಕತ್ತಿ ಮುರುದು ಮುರು ತುಂಡಗ್ಯಾವರಿ....

ಅಡಿಟಿಪ್ಪಣಿ

೧. ಮಂಜುನಾಥ ಬೇವಿನಕಟ್ಟಿ, **'ಜನಜನಪದ,'** ಪು.೩೨

೨. ಜೀಶಂಪ, **'ದಕ್ಷಿಣ ಕರ್ನಾಟಕ ಜನಪದ ಕಾವ್ಯ ಪ್ರಕಾರಗಳು,'** ಪು.೯೯-೧೦೦

೩. ವಿ. ಶಿವಾನಂದ, **'ಕಾಲಜ್ಞಾನ ಸಾಹಿತ್ಯ,'** (ಜಾ.ಸಾ.ದರ್ಶನ-೩)ಪು.೨೭೯

೪. ಮಾಣಿಕರಾವ ಧನಶ್ರೀ, **'ಕನ್ನಡದಲ್ಲಿ ಕಾಲಜ್ಞಾನ ಸಾಹಿತ್ಯ,'** ಪು.೧೦-೧೧

೫. ಮಾಣಿಕರಾವ ಧನಶ್ರೀ, **'ಕನ್ನಡದಲ್ಲಿ ಕಾಲಜ್ಞಾನ ಸಾಹಿತ್ಯ,'** ಪು.೧೦-೧೧

೬. ವೀರೇಶ ಬಡಿಗೇರ, **'ತಿಂತಿಣಿ ಮೌನೇಶ್ವರ ವಚನಗಳು'** ಪು,೧೯

೭. ಮಾಣಿಕರಾವ ಧನಶ್ರೀ, **'ಕನ್ನಡದಲ್ಲಿ ಕಾಲಜ್ಞಾನ ಸಾಹಿತ್ಯ,'** ಪು.೧೧-೧೨

೮. ನಾಗರಾಜಯ್ಯ ವಿ.ಎಚ್., **'ಕರ್ನಾಟಕ ಆದಿಜಾಂಬವ ಮಾತಂಗ ಪರಂಪರೆ: ಸಾಂಸ್ಕೃತಿಕ ವಿಶ್ಲೇಷಣೆ,'** ಪು.೨೪೧

ಅಧ್ಯಾಯ : ೫

ಬಾಲಬಸವರ ಮೌಖಿಕ ಸಾಹಿತ್ಯ: ಸಾಮಾಜಿಕ ಮತ್ತು ಧಾರ್ಮಿಕತೆ

ಅಧ್ಯಾಯ-೫

ಬಾಲಬಸವರ ಮೌಖಿಕ ಸಾಹಿತ್ಯ: ಸಾಮಾಜಿಕ ಮತ್ತು ಧಾರ್ಮಿಕತೆ

ಜನಪದರು ಸಮಾಜಮುಖಿಯಾಗಿ ಆಲೋಚನೆ ಮಾಡುವ ಸಾಂಸ್ಕೃತಿಕ ಚಿಂತಕರಾಗಿದ್ದು, ಇವರ ಮೌಖಿಕ ಸಾಹಿತ್ಯದಲ್ಲಿ ಸಮಾಜದೊಳಗಿರುವ ಅನೇಕ ಸಂಗತಿಗಳ ಕುರಿತು ಚಿಂತಿಸುವ, ಚರ್ಚಿಸುವ ಪ್ರಯತ್ನ ಮಾಡುತ್ತಾರೆ. ಇದರಿಂದ ಸಮಾಜದಲ್ಲಿನ ತಾರತಮ್ಯ, ಅನ್ಯಾಯ, ಅಸಮಾನತೆ, ಶೋಷಣೆ ಮುಂತಾದವುಗಳು ಇನ್ನೂ ಜೀವಂತವಾಗಿರುವುದನ್ನು ಮತ್ತು ಅವುಗಳ ನಿರ್ವಹಣೆಯಲ್ಲಿ ಜನಸಮುದಾಯಗಳ ಪಾತ್ರ ಏನು? ಎಂದು ತಿಳಿಸುವ ಕಾರ್ಯ ಮಾಡುತ್ತಾರೆ. ಸಮಾಜವು ಒಂದು ಸಂಕೀರ್ಣ ವ್ಯವಸ್ಥೆಯಲ್ಲಿ ರೂಪಿತವಾಗಿರುವುದರಿಂದ ಇಲ್ಲಿಯ ನಂಬಿಕೆ, ಆಚರಣೆ, ಸಂಪ್ರದಾಯ ಮುಂತಾದ ಸಂಗತಿಗಳಲ್ಲಿ ಸಮುದಾಯಗಳ ಪಾಲ್ಗೊಳ್ಳುವಿಕೆ ಬಹುಮುಖ್ಯವಾಗಿರುತ್ತದೆ. ಸಮಾಜದಲ್ಲಿ ಸಮುದಾಯಗಳ ಮಧ್ಯೆ ಸಾಂಸ್ಕೃತಿಕ, ಸಾಮಾಜಿಕ, ಧಾರ್ಮಿಕ, ಆರ್ಥಿಕ ಅಸಮಾನತೆಗಳು ಏನೇ ಇದ್ದರೂ ಸಂಸ್ಕೃತಿ ಸಮಾಜವೆಂದಾಗ ಅದು ಗೌಣವಾಗಿ ಬಿಡುತ್ತದೆ. ಆದರೆ ವ್ಯಕ್ತಿಕೇಂದ್ರಿತ ನೆಲೆಯಲ್ಲಿ ಚಿಂತಿಸಿದಾಗ ಅಸಮಾನತೆಯ ಭೀಕರತೆಯು ಅರ್ಥವಾಗುತ್ತದೆ. ಗ್ರಾಮ ಸಂಸ್ಕೃತಿಯಲ್ಲಿರುವ ಬಹು ಸಂಸ್ಕೃತಿಯ ಬಹುತ್ವದ ಆಯಾಮಗಳನ್ನು ಜನಪದರು ಹೆಚ್ಚು ಹೆಚ್ಚು ಪ್ರತಿಪಾದಿಸುತ್ತಾರೆ. ಅದನ್ನು ಹಾಡು, ಕಥೆ, ಪ್ರದರ್ಶನ ಮುಂತಾದ ಜನಪದ ಕಲಾಪ್ರಕಾರಗಳಲ್ಲಿ ಸಮಾಜದ ವಾಸ್ತವ ಸಂಗತಿಯನ್ನು ವಿಡಂಬಿಸುವ ರೀತಿಯಲ್ಲಿ ಚಿತ್ರಿಸುತ್ತಾರೆ. ಕೆಲವೊಂದು ವಿಷಯಗಳನ್ನು ನೇರವಾಗಿ ಹೇಳಲು ಸಾಧ್ಯವಾಗದೆ ಹೋದಾಗ ಅವುಗಳಿಗೆ ರೂಪಕ, ಬೆಡಗು ಅಥವಾ ಕಥನ ಕಟ್ಟಿ, ಕಾವ್ಯ ರೂಪದಲ್ಲಿ ಓದದೆ ಇರುವ ಸಾಮಾನ್ಯ ಜನತೆಯ ಮುಂದಿಡುವ ಕಾರ್ಯವನ್ನು ಜನಪದರು ಮಾಡುತ್ತಾ ಬಂದಿದ್ದಾರೆ. ಸಮಾಜದಲ್ಲಿನ ಸಾಮಾಜಿಕ ಸಂಗತಿಗಳನ್ನು ಹೆಚ್ಚು ವಾಸ್ತವದ ನೆಲೆಯಲ್ಲಿ ಚಿಂತಿಸುವ ಸಾಮಾಜಿಕ ಹೊಣೆಗಾರಿಕೆಯನ್ನು ವಚನ ಚಳುವಳಿಯ ಕಾಲದಿಂದಲೂ ಈಗಿನವರೆಗೂ ಪಾಲಿಸಿಕೊಂಡು ಬಂದಿರುವ ಪರಂಪರೆ

ಎಂದರೆ ಅದು ಬಾಲಬಸವ ಪರಂಪರೆ. ಈ ಪರಂಪರೆಯಲ್ಲಿನ ಮೌಖಿಕ ಸಾಹಿತ್ಯದಲ್ಲಿ ವ್ಯಕ್ತಗೊಂಡಿರುವ ಸಾಮಾಜಿಕ ಮತ್ತು ಧಾರ್ಮಿಕತೆಯ ಸೂಕ್ಷ್ಮ ಸಂಗತಿಗಳನ್ನು ಅಧ್ಯಯನ ಮಾಡುವುದು ಈ ಅಧ್ಯಾಯದ ಮುಖ್ಯ ಉದ್ದೇಶವಾಗಿದೆ.

ಬಾಲಬಸವ ಪರಂಪರೆಯ ಮೌಖಿಕ ಸಾಹಿತ್ಯವು ಸಮಾಜದೊಂದಿಗೆ ಹೆಚ್ಚು ಒಡನಾಟವಿರುವುದರಿಂದ ಸಮಾಜದಲ್ಲಾಗುವ ಬದಲಾವಣೆಗಳು, ಆ ಬದಲಾವಣೆಗೆ ಕಾರಣಗಳೇನು? ಇದರಲ್ಲಿ ಮನುಷ್ಯನ ಪಾತ್ರವೇನು? ಎನ್ನುವುದನ್ನು ತಿಳಿಸುವ ಪ್ರಯತ್ನ ಮಾಡುತ್ತದೆ. ಸಮಾಜದಲ್ಲಿನ ಮನುಷ್ಯ ತನ್ನ ನೈತಿಕತೆಯನ್ನು ಕಳೆದುಕೊಳ್ಳುವ ಸಂದರ್ಭದಲ್ಲಿ ಮನುಷ್ಯ ಮನುಷ್ಯನ ಮಧ್ಯೆ ಸಹ ಸಂಬಂಧವನ್ನು ಏರ್ಪಡಿಸುವ ಜ್ಞಾನಧಾರೆಯ ಅಂಶಗಳು ಇವರ ಮೌಖಿಕ ಸಾಹಿತ್ಯದಲ್ಲಿವೆ. ಇವರ ಮೌಖಿಕ ಸಾಹಿತ್ಯವು ಆಡುಮಾತಿನಿಂದ ಕೂಡಿದ್ದು, ನುಡಿಗಟ್ಟು, ಲಯಬದ್ಧವಾಗಿ ತಮ್ಮದೇ ಆದ ಧಾಟಿಯಲ್ಲಿ ಹಾಡುತ್ತಾರೆ. ಸಮಾಜದಲ್ಲಿ ಜರಗುವ ಸಂಗತಿಗಳನ್ನು ಜನತೆಯ ಮುಂದೆ ವಿವರಿಸುತ್ತಾ, ಅದರಿಂದ ಮುಂದೆ ಏನಾಗಬಹುದು ಎನ್ನುವ ಮುನ್ಸೂಚನೆಗಳನ್ನು ನೀಡುತ್ತಾರೆ. ಬಾಲಬಸವರ ಮೌಖಿಕ ಸಾಹಿತ್ಯದ ಪ್ರಧಾನ ಜ್ಞಾನಧಾರೆಯಾದ ಕಾಲಜ್ಞಾನ ಸಾಹಿತ್ಯವು ಜನತೆಯಲ್ಲಿ ವಿಶ್ವಾಸ ತುಂಬುವ ಮತ್ತು ಜಾಗೃತಿಯಿಂದ ಬದುಕು ಕಟ್ಟಿಕೊಳ್ಳುವ ಸಂದೇಶಗಳನ್ನು ಸಾರುತ್ತವೆ. ಬಾಲಬಸವ ಪರಂಪರೆಯಲ್ಲಿರುವ ಪ್ರಕೃತಿ ದತ್ತವಾದ ದಲಿತ ಜ್ಞಾನಮೀಮಾಂಸೆಯು ಪ್ರಸ್ತುತ ಕಾಲಕ್ಕೂ ಅನ್ವಯವಾಗುವ ಜ್ಞಾನಧಾರೆಯಾಗಿದೆ.

ಬಾಲಬಸವ ಪರಂಪರೆಯಲ್ಲಿ ಬಾಲಬಸವರು ಕಾಲಜ್ಞಾನ ಸಾರುವ ಪೂರ್ವದಲ್ಲಿ ತಮ್ಮ ಕಾಲಜ್ಞಾನಕ್ಕೆ ಬಸವಣ್ಣನೇ ಸಾಕ್ಷಿಯೆಂದು ಪ್ರಮಾಣ ಮಾಡಿ ಕಾಲಜ್ಞಾನ ಸಾರುತ್ತಾರೆ.

ಬಾಲಬಸವನ ಮಾತು ಬಾಗಲಾಕ್ಕಲ್ಲಯ್ಯ
ರೇವಣ ಸಿದ್ಧನ ಬಿರುದು ಹೇಳಿಲಿಕ್ಕೆ ಬಂದೀನಿ ಕಲಿಯೇ ಕೇಳಿರಣ್ಣ
ಸುಳ್ಳು ಸುಳ್ಳೆಂದರೆ ಸುಳ್ಳಲ್ಲವೋ ಕಾಲಜ್ಞಾನ ಕೇಳಿರಣ್ಣ–**ಬಾಲಬಸವ ತುಮನೆಪ್ಪ**

ಬಸವನ ಮಾತು ಹುಸಿ ಹೋಗದಣ್ಣ
ತಪ್ಪು ಇದ್ದರೆ ತೆಗೆದು ಹಾಕಣ್ಣ ಈ ಬಸವ ಸಾಕ್ಷಿ
ಹುಸಿ ಹೋಗುವ ನುಡಿಯು ಅಲ್ಲಣ್ಣ –**ಬಾಲಬಸವ ಶಿವಪ್ಪ ಹರ್ಲಾಪುರ**

ಹೋರಾಟವಾದೀತು ಕಲಿಯುಗದೊಳಗಿನ್ನು
ಜೋಳವ ಕಾಣದೆ ಮನೆಮನೆ ತಿರುಗುವರು
ಮುಚ್ಚಿದ ಕದಗಳು ಬಿಚ್ಚದೆ ಸಾಯುವರು

ಮೇಘದ ಮಳೆಯನ್ನು ಮಾಡಿತೆ (ದೇವತೆ) ನಗುವಳು
ಶಿವಶರಣರ ಕಂಡು ಅಣಕಿಸಿ ನಗುವರು
ಬಾಲ ಮುರಿದವನಿಗೆ ಪಟ್ಟಾವ ಕಟ್ಟುವರು
ಊರಿಗೆ ಹೋದವರು ದಾರಿಯಲ್ಲೇ ಮಡಿವರು
ತರಣ ಈ ಮಾತು ತಪ್ಪಿದರೆ ಬಸವಣ್ಣನ
ಆಣೆಯು...ಕೇಳಿರಣ್ಣ **–ಬಾಲಬಸವ ಬಸವರಾಜಪ್ಪ ಕೆ.ಕೆ.ಪುರ**

ಬಾಲಬಸವರು ಕಾಲಜ್ಞಾನ ಸಾಹಿತ್ಯದಲ್ಲಿ ಮುಂದೊದಗಬಹುದಾದ ಸತ್ಯ ಸಂಗತಿಗಳನ್ನು ಸಾರುವುದರಿಂದ ತಮ್ಮ ನುಡಿಗಳಿಗೆ ದೈವದ ಪ್ರೇರಣೆಯಿದೆ ಎಂದು ಹೇಳುತ್ತಾ, ಈ ಕಾಲಜ್ಞಾನವು ಅವನ ನುಡಿ, ಇಲ್ಲಿ ನಾವು ನೆಪ ಮಾತ್ರ ಎಂದು ಕಾಲಜ್ಞಾನದ ಆರಂಭದ ಸಾಲುಗಳಲ್ಲಿ ಹಾಡುತ್ತಾರೆ. ಮೌಖಿಕ ಕಾವ್ಯಗಳನ್ನು ಹಾಡುವ ಮೌಖಿಕ ಕಥೆಗಾರರು ಮೊದಲು ದೇವರ ಸ್ತುತಿ ಮಾಡುತ್ತಾರೆ. ತಾನು ಹಾಡುವ ಹಾಡುಗಾರಿಕೆಗೆ ಯಾವುದೇ ವಿಘ್ನ ಬರದಂತೆ ನನ್ನ ನಾಲಿಗೆ ಮೇಲೆ ನುಡಿಸು ಎಂದು ಪ್ರಾರ್ಥಿಸುವ ಪರಿಪಾಟವನ್ನು ನಾವು ಕಾಣಬಹುದಾಗಿದೆ.

ಬಾಲಬಸವರಂತೆ ಕಾಲಜ್ಞಾನ ಸಾರುವ ಅನೇಕ ಪರಂಪರೆಗಳು ಕರ್ನಾಟಕದಲ್ಲಿ ಇವೆ. ಈ ಪರಂಪರೆಯಲ್ಲಿಯೂ ಇದೇ ರೀತಿಯಾದ ಸಂಗತಿಗಳು ಕಂಡುಬರುತ್ತವೆ. ತಿಂತಿಣಿ ಮೌನೇಶ್ವರರ ವಚನದಲ್ಲೂ ತಮ್ಮ ಕಾಲಜ್ಞಾನಕ್ಕೆ ಅಲ್ಲಮನನ್ನು ಸಾಕ್ಷೀಕರಿಸುವುದನ್ನು ಕಾಣಬಹುದಾಗಿದೆ.

ಕಾಲಜ್ಞಾನವ ತಂದ ಕಡೆಮೊದಲಿಗೆ ಹಾಸ್ಯದ ಮಾತಲ್ಲ
ಹುಚ್ಚ ಮೋನಯ್ಯ ಹೇಳಿದ ಮಾತು ಮೆಚ್ಚುವರುಂಟೆ
ಅಲ್ಲಮನ ಮನೆಯ ಹುಚ್ಚ ನಾಯಿ ಹೇಳಿದ ಮಾತು
ಮೆಚ್ಚಲಿ ಬೇಡ ಧರೆಯಲ್ಲಿ ಕಟ್ಟು ಕಟ್ಟೆಂದರೆ ಕಟ್ಟುವರುಂಟೆ
ಪಟ್ಟಗುಡುಮ ಮೋನಯ್ಯನ ಗುಡಿಯ ಕಟ್ಟುವರುಂಟೆ
ರೊಕ್ಕವನೆ ಕೊಟ್ಟು ಕಲ್ಲನೆ ಇಟ್ಟು ತಟ ತಟನೆ
ಕಟ್ಟೆನೆಂದರೆ ಕಟ್ಟುವರೆ, ಎನ್ನಳವಲ್ಲ
ಅಲ್ಲಮನಾಟವು ಕಾಲಜ್ಞಾನಕ್ಕ ತಂದ ಹೌಸೇದ ಪುತ್ರ
ನಿರ್ಮಿಸಿ ಇಟ್ಟಂಥ ಗುರುವಿನ ಗುರುತನವರಿಯರು ಬಸವಣ್ಣ೧

ಎನ್ನುವ ಈ ಕಾಲಜ್ಞಾನದಲ್ಲಿ ತಿಂತಿಣಿ ಮೋನಯ್ಯ ತಮ್ಮ ಕಾಲಜ್ಞಾನಕ್ಕೆ ಅಲ್ಲಮನನ್ನು ಸಾಕ್ಷಿಕರಿಸುವುದನ್ನು ನಾವು ಕಾಣಬಹುದು. ಉತ್ತರ ಕರ್ನಾಟಕದ ಭಾಗದಲ್ಲಿ ತಿಂತಿಣಿ ಮೋನಯ್ಯನವರು ತನ್ನ ಕಾಲಜ್ಞಾನದ ಮೂಲಕವೇ ಪ್ರಸಿದ್ಧಿ ಪಡೆದವರು. ಈ ಭೌಗೋಳಿಕ ವ್ಯಾಪ್ತಿಯಲ್ಲಿ ಅವರು

ತಮ್ಮ ಮೌಖಿಕ ಪರಂಪರೆಯನ್ನು ಮತ್ತಷ್ಟು ಪಸರಿಸಿದ ಸಿದ್ಧ ಪವಾಡಪುರುಷರು ಇವರು. ಇವರ ಕಾಲಜ್ಞಾನವು ಸಮಾಜದಲ್ಲಿ ಮುಂದೆ ನಡೆಯುವ ಸಂಗತಿಗಳನ್ನು ಜನತೆಯ ಮುಂದಿಡುವ ಕಾರ್ಯವನ್ನು ಮಾಡುತ್ತದೆ. ಇದೇ ರೀತಿಯಾದ ಮತ್ತೊಂದು ಮೌಖಿಕ ಪರಂಪರೆಯೆಂದರೆ ಅದು 'ಕೊರವಂಜಿ ಸಂಪ್ರದಾಯ.' ಈ ಸಂಪ್ರದಾಯವು ಸ್ತ್ರೀಕೇಂದ್ರಿತವಾಗಿರುವ ಮೌಖಿಕ ಪರಂಪರೆಯಾಗಿದೆ. ಇವರು ಕೂಡ ಕಾಲಜ್ಞಾನವನ್ನು ಹೇಳುತ್ತಾರೆ. ಕೊರವಂಜಿಗಳು ಕಾಲಜ್ಞಾನ ಹಾಡು ಪೂರ್ವದಲ್ಲಿ ತಮ್ಮ ಕಾಲಜ್ಞಾನವನ್ನು ತಮ್ಮ ಮನೆ ದೇವರಿಂದ ನಾವು ಹೇಳುತ್ತೇವೆ ಎನ್ನುವುದನ್ನು ನಾವು ಗಮನಿಸಬಹುದು.

ಇನಿತೆಲ್ಲ ಕೊರವಂಜಿ ಕರವ ಪಿಡಿದು ಹೇಳಿ
ಕ್ಷಣ ಕ್ಷಣ ಕೊಡೆಯನ ಹೊಗಳಿ
ನೆನಪಿಗೆ ಬೆಸಗೊಂಬೆ ಕಾಲಜ್ಞಾನದ ವಾರ್ತೆ
ಎನಗೆ ತಿಮ್ಮಯ್ಯ ಹೇಳೆಂದು[೨]

ಎಂದು ಹಾಡುವ ಕೊರವಂಜಿ ಸಾಲುಗಳನ್ನು ಗಮನಿಸಿದಾಗ ತಮ್ಮ ನುಡಿಗಳಿಗೆ ದೇವರ ಅನುಗ್ರಹವಿದೆ ಎಂದು ತಾವು ಹಾಡುವ ನುಡಿಗಳಿಗೆ ಜೀವ ತುಂಬುವ ಪ್ರಯತ್ನ ಮಾಡುತ್ತಾರೆ. ಮಧ್ಯ ಕರ್ನಾಟಕದಲ್ಲಿ ಮೈಲಾರ ಲಿಂಗಪ್ಪನ 'ಕಾರಣಿಕ' ಕೂಡ ಒಂದು ರೀತಿಯಲ್ಲಿ ಕಾಲಜ್ಞಾನವೇ ಆಗಿದೆ. ಅಂದರೆ ಮುಂದೆ ಮಳೆ, ಬೆಳೆ, ರಾಜಕೀಯ, ಜನತೆಯ ಬದುಕು, ಬವಣೆ ಮುಂತಾದವುಗಳನ್ನು ಕುರಿತು ಗೊರವಯ್ಯ ಕಾರಣಿಕ ನುಡಿಯುತ್ತಾನೆ. ಇದು ಈ ಭಾಗದ ಸಾಮಾನ್ಯ ಜನತೆಯಲ್ಲಿ ದೇವರ ಮೇಲೆ ನಂಬಿಕೆ ವಿಶ್ವಾಸ ಮೂಡಿಸುವಲ್ಲಿ ಸಹಾಯಕವಾಗುತ್ತದೆ. ಅದೇ ಕಾರಣಿಕವನ್ನು ಸಾಮಾನ್ಯ ದಿನಮಾನಗಳಲ್ಲಿ ಹೇಳಿದರೆ ಅದಕ್ಕೆ ಅರ್ಥವಿರುವುದಿಲ್ಲ. ಅದರಿಂದ ಗೊರವಪ್ಪ ಮೈಲಾರಲಿಂಗಪ್ಪನ ಜಾತ್ರೆಯ ಸಂದರ್ಭದಲ್ಲಿ ಹೇಳುವುದರಿಂದ ಅದಕ್ಕೆ ಹೆಚ್ಚು ಬೆಲೆ ಬರುತ್ತದೆ. ಬಾಲಬಸವರು ಸಾಮಾನ್ಯ ದಿನಮಾನಗಳಲ್ಲಿ ಈ ಕಾಲಜ್ಞಾನವನ್ನು ಹೇಳುವುದರಿಂದ ಅವರಿಗೆ ದೈವದ ಬೆಂಬಲ ಬೇಕಾಗುತ್ತದೆ. ಆ ಕಾರಣಕ್ಕಾಗಿ ಬಾಲಬಸವರು ತಮ್ಮ ಕಾಲಜ್ಞಾನಕ್ಕೆ ಬಸವಣ್ಣನೇ ಸಾಕ್ಷಿಯೆಂದು ಸಾರುತ್ತಾರೆ. ಇದುವರೆಗಿನ ಬಾಲಬಸವರ ಮಾತುಗಳು ಸತ್ಯವಾಗಿರುವುದರಿಂದ ಅವರ ನುಡಿಯ ಮೇಲೆ ಸಾಮಾನ್ಯ ಜನತೆ, ರೈತಾಪಿ ವರ್ಗದವರು ಹೆಚ್ಚು ವಿಶ್ವಾಸವಿಡುತ್ತಾರೆ.

ಬಾಲಬಸವರು ಊರಿಗೆ ಪ್ರವೇಶ ಮಾಡಿ ಕಾಲಜ್ಞಾನ ಹಾಡಲು ಆರಂಭ ಮಾಡಿದಾಗ ರೈತಾಪಿ ವರ್ಗದವರು ಕೇಳುವ ಒಂದು ಸಾಮಾನ್ಯ ಪ್ರಶ್ನೆ ಎಂದರೆ ಅದು ಮಳೆ ಮತ್ತು ಬೆಳೆಗೆ ಸಂಬಂಧಿಸಿದ ಪ್ರಶ್ನೆ. 'ಬಾಲಬಸವರೇ ಈ ವರ್ಷ ಮಳೆ, ಬೆಳೆ ಹ್ಯಾಂಗೈತೆ ಹೇಳಿ' ಎನ್ನುವ ಕೃಷಿಕರು ಬಾಲಬಸವರ ಮಾತುಗಳಲ್ಲಿ ಈ ವರ್ಷದ ಮಳೆ ಬೆಳೆಯ ವಿವರಗಳು ತಮಗೆ

ಅನುಕೂಲಕರವಾಗಿವೆ ಎಂದು ನಿರೀಕ್ಷೆ ಮಾಡುತ್ತಾರೆ. ಬಾಲಬಸವರ ಜೀವನ ನಿರ್ವಹಣೆಗೆ ಕೃಷಿಕರೆ ಪ್ರಮುಖ ಆಧಾರವಾಗಿರುವುದರಿಂದ ಬಾಲಬಸವರ ಮೌಖಿಕ ಸಾಹಿತ್ಯದಲ್ಲಿ ಸಾಮಾನ್ಯವಾಗಿ ಕೃಷಿ, ರೈತರಿಗೆ ಸಂಬಂಧಿಸಿದ ವಿಷಯಗಳು ಹೆಚ್ಚಾಗಿರುತ್ತವೆ. ಮುಖ್ಯವಾಗಿ ಮಳೆ, ಬೆಳೆ, ವ್ಯವಸಾಯ, ಬೀಜ, ಎತ್ತುಗಳು ಮುಂತಾದ ಕೃಷಿಗೆ ಸಂಬಂಧಿಸಿದ ಸಂಗತಿಗಳನ್ನು ತಮ್ಮ ಕಾಲಜ್ಞಾನದಲ್ಲಿ ಹೇಳುತ್ತಾರೆ.

೫.೧. ಮಳೆ

ಗಾಳಿ ಘನವಾದಿತು ಮಳೆಗಾಲ ಹಡದಿತು ನೋಡಿರಣ್ಣ।
ಮಂಜಿನ ಮಳೆಗಲಕಿ ಮಳಲು ಪಟ್ಟಿ ಬೆಳೆದಾವು ನೋಡಿರಣ್ಣ।
ಸ್ವಾದಿನ ಮಳೆ ಬರಿಮೋಡ ತಳಿದೀತು ನೋಡಿರಣ್ಣ।
ಮೇಘೂಟ ಮಾಡಿಯಾವು ಮಾಘುತ್ತಾ ಕುಣಿದಾಳೊ ನೋಡಿರಣ್ಣ।
ಆಷಾಡ ಬ್ಯಾಸಿಗೆ, ಬ್ಯಾಸಿಗೆ ಆಷಾಡ ಕೇಳಿರಣ್ಣ। **–ಬಾಲಬಸವ ತುಮನೆಪ್ಪ**

ಎನ್ನುವ ಕಾಲಜ್ಞಾನದ ಸಾಲುಗಳಲ್ಲಿ 'ಮಳೆಗಾಲ' ನಿರೀಕ್ಷಿತ ಪ್ರಮಾಣದಲ್ಲಿ ಆಗದೆ ಇರುವ ಸಂಗತಿಯನ್ನು ಬಾಲಬಸವರು ಹೇಳುತ್ತಾರೆ. ಮುಂದಿನ ಕಾಲದಲ್ಲಿ ಮಂಜಿನ ಮಳೆ ಬರುವ ಸೂಚನೆ ನೀಡುತ್ತಾ, ಮಳೆಯ ಪ್ರಮಾಣವು ಕಡಿಮೆಯಾಗುವುದನ್ನು ಹೇಳುತ್ತಾರೆ. ಜಗತ್ತಿನಲ್ಲಿ ಮಳೆಗಾಲ ಕಡಿಮೆಯಾಗಿ 'ಮಳಲಪಟ್ಟಿ' ಬೆಳೆಯುವುದು ಅಂದರೆ ಭೂಮಿಯಲ್ಲಿ ಮರಳು ಹೆಚ್ಚಾಗಿ ಮರು ಭೂಮಿಯಾಗುವ ಸಂಗತಿಯನ್ನು ಬಾಲಬಸವರು ಕಾಲಜ್ಞಾನದಲ್ಲಿ ಹೇಳುತ್ತಾರೆ. ಅದರೊಂದಿಗೆ ಮಳೆಯಿಂದ ಆಗುವ ಅನಾಹುತಗಳನ್ನು ಹೇಳುತ್ತಾರೆ. ಬಾಲಬಸವರು ಕೃಷಿ ಚಟುವಟಿಕೆಯಲ್ಲಾಗುವ ಏರುಪೇರುಗಳನ್ನು ತಮ್ಮ ಕಾಲಜ್ಞಾನದ ಮೂಲಕ ಸಾರುವ ನುಡಿಗಳು ಈ ರೀತಿಯಾಗಿವೆ.

ಮಳೆಗಾಲ ಬ್ಯಾಸಿಗಿ ಬ್ಯಾಸಿಗಿ ಮಳೆಗಾಲ ಅಕ್ಕೈತೆ
ತಿಂಗಳ ತಿಂಗಳಿಗೆ ಮಂಜಿನ ಮಳೆ ಬರುತ್ತೈತೆ
ಮಳೆ ಮಾರು ಬರುತ್ತೈಂದು ಮನದೊಳಗೆ ಸಂತಸ ಪಡುಬ್ಯಾಡ್ರೀ
ಆದಲ್ಲಿ ಆಗಬೇಕ್ರೀ ಆಗದಲ್ಲಿ ಎಲ್ರೀ
ಒಂದು ಊರಿಗೆ ಮಳೆ ಬಂದರೆ ಮತ್ತೊಂದು ಊರಿಗೆ ಮಳೆ ಇಲ್ರೀ
ಒಂದು ಕೇರಿಗೆ ಮಳೆ ಬಂದ್ರೆ ಮತ್ತೊಂದು ಕೇರಿ ಮಳೆ ಇಲ್ರೀ
ಒಂದು ಬ್ಯಾಸಯದೊಳಗ ಅಣ್ಣ ಒಂದು ಎತ್ತು ತೊಯಿಬೇಕ್ರೀ
ಒಂದು ಎತ್ತು ತೊಯಿಬೇಕು ಒಂದು ಎತ್ತು ತೊಯ್ಕಿಲ್ರೀ
ಮಾಗಿ ಮಳೆಗಾಲ ಮಳೆಗಾಲ ಮಾಗಿಗಳಲ್ಲಯ್ಯ

ಸೋಜಿಗದ ಬ್ಯಾಸಿಗಿ ನರಕಲಿ ಬರುತ್ತಾವಯೋರ್‍ರೀ
ಮಂಜಿನ ಮಳೆ ಬಂದು ಮಳಲಪಟ್ಟಿ ಬೆಳೆತ್ತಾವ್ರೀ
ಎಡೆಮ್ಯಾಲಿನ ಫಲ ಮಂಗನಾಳ್ವಿಕೆ ದಿನಮಾನವು ಮುಂದೈತೆ
ತಿಂಗತಿಂಗಳಿಗೊಂದು ಮಳೆಗಾಲ ಆಗಿ ಹೋಯಿತ್ರಯೋ
ಮುಂದೇ ಮೂರು ತಿಂಗಳಿಗೊಂದು ಮಳೆ ಆಗೊದು ಮುಂದೈತ್ತರ್‍ರೀ
ಮಳೆಗಾಲ ಹೋಗಿ ಬ್ಯಾಸಿಗೆಯಾಗೆ ಬೇಕಣ್ಣ
ಬ್ಯಾಸಿಗೆ ಹೋಗಿಯ್ಯ ಮಳೆಗಾಲ ಮುಂದೇ ಆಗೋದೈತ್ರಯೋ
ಹುಂ ಬಸವಾ ಬಸವಾ................... **–ಬಾಲಬಸವ ನಾಗೇಂದ್ರಪ್ಪ, ಮಂಡರಗಟ್ಟೆ**

ಮಳೆಯ ಪ್ರಮಾಣವು ದಿನದಿಂದ ದಿನಕ್ಕೆ ಕುಸಿದು ಹೋಗುವುದನ್ನು ಈ ಮೊದಲೇ ಗ್ರಹಿಸಿರುವ ಬಾಲಬಸವರು ತಮ್ಮ ನುಡಿಗಳಲ್ಲಿ ಮಳೆಯು ತನ್ನ ಪಥ ಬದಲಿಸಿರುವ ಸೂಕ್ಷ್ಮ ಸಂಗತಿಗಳನ್ನು ಹೇಳುತ್ತಾರೆ. ಮಳೆ ಒಂದು ಊರಿಗೆ ಬಂದರೆ ಮತ್ತೊಂದು ಊರಿಗೆ ಇಲ್ಲ. ಒಂದು ಕೇರಿಗೆ ಬಂದರೆ ಮತ್ತೊಂದು ಕೇರಿಗೆ ಮಳೆ ಇಲ್ಲ. ಒಂದು ಬೇಸಾಯದೊಳಗೆ ಒಂದು ಎತ್ತು ನೆನೆಯಬೇಕು. ಮತ್ತೊಂದು ಎತ್ತು ನೆನೆಯುವಾಗಿಲ್ಲ. ಮಾಗಿ ಮಳೆಗಾಲ ಮಾಗಿಗಳಿಗಲ್ಲಯ್ಯ ಇದು ಸೋಜಿಗದ ಬೇಸಿಗೆಯು ನರಕಲಿ(ಭೂಮಿ) ಬರುತ್ತಾವೆ, ಮಳೆಗಾಲ ಹೋಗಿ ಬೇಸಿಗೆಯಾಗಬೇಕು. ಮುಂದೆ ಬೇಸಿಗೆ ಹೋಗಿ ಮಳೆಗಾಲ ಆಗಬೇಕು ಎನ್ನುವ ಈ ನುಡಿಗಳಲ್ಲಿ ಸಹಜವಾಗಿ ಪ್ರಕೃತಿಯಲ್ಲಾದ ಬದಲಾವಣೆ ಮಾನವನ ಅತಿರೇಕದ ವರ್ತನೆಯು ಈ ಎಲ್ಲಾ ಬೆಳವಣಿಗೆಗೆ ಕಾರಣ ಎಂಬುದನ್ನು ಸೂಕ್ಷ್ಮವಾಗಿ ಹೇಳುವ ಕಲೆಗಾರಿಕೆಯು ಬಾಲಬಸವರಲ್ಲಿ ಇರುವುದನ್ನು ನಾವು ಗಮನಿಸಬಹುದಾಗಿದೆ.

೫.೨. ಕೃಷಿ

ವ್ಯವಸಾಯದಲ್ಲಿ ಆಗಿರುವ ಏರುಪೇರುಗಳು

ಬಾಲಬಸವರು ಕೃಷಿ ಚಟುವಟಿಕೆಯಲ್ಲಾಗುವ ಏರುಪೇರುಗಳನ್ನು ತಮ್ಮ ಕಾಲಜ್ಞಾನದ ಮೂಲಕ ಸಾರುವ ನುಡಿಗಳು ಈ ರೀತಿಯಾಗಿವೆ.

ಗುಡ್ಡದ ತಲೆಮ್ಯಾಲೆ ಭೂಮಿ ಮಾಡಿದ್ರಯ್ಯ ಕೇಳಿರಣ್ಣ
ಕರುಗಲ್ಲುವರಿಗೆ (ಬುಡ್ಡೆಕಲ್ಲು) ಬೀಳು ಬಿದ್ದಾವಯ್ಯ ಕೇಳಿರಣ್ಣ
ಗಡೆಕಲ್ಲುತಡೆದು ಹೊಲಮನಿ ಸಾಗಬೇಕ್ರೀ
ಮುಂದೇ ಕರುವುಗಲ್ಲು ತನಕ ಬೀಳು ಬೀಳುತ್ತಾವ್ರೀ **–ಬಾಲಬಸವ ತುಮನೆಪ್ಪ**

ಎನ್ನುವ ಬಾಲಬಸವರ ಮೌಖಿಕ ಸಾಹಿತ್ಯದಲ್ಲಿ ಗುಡ್ಡದ ತಲೆ ಮೇಲೆ ಭೂಮಿ ಹಸನು ಮಾಡಿ ಬೇಸಾಯ ಮಾಡುವ ಕಾಲವು ಬರುತ್ತದೆ ಎಂದಿದ್ದಾರೆ. ಮುಂದುವರಿದು ಊರ ಬುಡ್ಡೆಕಲ್ಲಿನವರಿಗೆ ಬೀಳು ಸಂಗತಿಯು ನಿರ್ಮಾಣವಾಗುವುದನ್ನು ಕಾಲಜ್ಞಾನದ ಮೂಲಕ ಹೇಳುವ ಅವರ ಮಾತಿನಲ್ಲಿ ಊರ ಮುಂದಿರುವ ಕೃಷಿ ಭೂಮಿಯನ್ನು ಕೃಷಿಯೇತರ ಭೂಮಿಯಾಗಿ ಪರಿವರ್ತಿಸಿ ನಿವೇಶನಗಳನ್ನು (ಸೈಟ್) ಮಾಡುವ ಕಾಲ ಮುಂದಿದೆ ಎನ್ನುವ ಅರ್ಥದಲ್ಲಿ ಬಾಲಬಸವರು ಹೇಳಿದ್ದಾರೆ. ಅಲ್ಲದೆ ಊರ ಮುಂದೆ ಇರುವ ಗದ್ದೆಗಳಿಗೆ ನೀರು ಮುಖ್ಯವಾಗಿ ಬೇಕಾಗಿರುತ್ತದೆ. ಆದರೆ ಈಗಿನ ಕಾಲದ ಮಳೆಗಾಲವು ಸಂಪೂರ್ಣವಾಗಿ ಕಡಿಮೆಯಾಗಿ ಕೆರೆಗಳು ಬತ್ತಿಹೋಗಿರುವುದು ಕೂಡ ಒಂದು ಕಾರಣವಾಗಿದೆ. ಹಾಗಾಗಿ ಇವುಗಳು ಪ್ರಸ್ತುತ ದಿನಮಾನಗಳಿಗೂ ಕಾಲಜ್ಞಾನವನ್ನು ತಾಳೆ ಹಾಕಿ ನೋಡಿದಾಗಲು ಅವುಗಳು ಸತ್ಯವಾಗಿರುವುದು ಕಂಡುಬರುತ್ತವೆ. ಇನ್ನೂ ಕೆಲವೊಂದು ನುಡಿಗಳು ಸತ್ಯವಾಗುವ ಕಾಲ ಹತ್ತಿರವಿದೆ ಎನ್ನುವ ಮಾತು ಹಳ್ಳಿಗಾಡಿನ ಜನತೆ ನಂಬಿಕೆಯ ಭಾಗವಾಗಿರುವುದನ್ನು ನಾವು ಕಾಣಬಹುದು.

> ಯುಗಾದಿ ಹೊತ್ತಿಗೆ ನಗೆ ಹೋಗಿ ಹೊಗೆಯಾಗುತ್ತೈತೆ
> ಭರತ ಹುಣ್ಣಿವಿಗೆ ಮುಂದಾ ಊರಿಗೆ ಹೊಲ ಬೀಳುತ್ತೈತೆ
> ಭರತ ಹುಣ್ಣಿವಿಗೆ ಭಿತ್ತಿಗ್ಯಾನದು ಬರುತ್ತೈತೆ
> ಕಾರ ಹುಣ್ಣಿವಿಗೆ ಹೋಕ್ಯಾನದು ಬರುತ್ತೈತೆ
> ಕಾರ ಹುಣ್ಣಿವಿಗೆ ಕಡೆ ಕಂಕೆಯಾಗಿ ಕಂಕಿ ತುಳಿದು ಬಂದ ಬಸವಣ್ಣ
> ಅವತ್ತು ಕರಿ ಹರಿಯಕೆ ತಗೊಂಡು ಹೋಗುತ್ತಾರೆ– **ಬಾಲಬಸವ ಹುಗ್ ಹನುಮಂತಪ್ಪ.**

ಬಾಲಬಸವ ಹುಗ್ಗ್ ಹನುಮಂತಪ್ಪ ಹಾಡಿರುವ ಈ ಕಾಲಜ್ಞಾನದಲ್ಲಿ ಮಳೆಯ ಬದಲಾವಣೆಯ ಕುರಿತು ಹೇಳುತ್ತಾರೆ. ಜನಪದರ ನಂಬಿಕೆಯಲ್ಲಿ ಮಳೆಗಾಲವು ಯುಗಾದಿಯಿಂದ ಆರಂಭವಾಗಬೇಕು. 'ಯುಗಾದಿಗೆ ಉಗ್ಗ್ ನೀರು' ಎನ್ನುವಂತೆ ಯುಗಾದಿ ಸಮಯದಲ್ಲಿ ಅಲ್ಲಲ್ಲಿ ಮಳೆಯಾಗುತ್ತದೆ. ವಾಸ್ತವದಲ್ಲಿ ಮುಂಗಾರು ಮಾರುತಗಳು ಜೂನ್ ತಿಂಗಳಿನಲ್ಲಿ ಪ್ರವೇಶ ಮಾಡುತ್ತವೆ. ನಂತರ ಜೂನ್, ಜುಲೈ, ಆಗಸ್ಟ್ ತಿಂಗಳುಗಳಲ್ಲಿ ಕೃಷಿ ಸಂಪ್ರದಾಯದಂತೆ ಹೊಲದಲ್ಲಿ ಬಿತ್ತುವ ಕಾರ್ಯ ಆರಂಭವಾಗುತ್ತದೆ. ಆದರೆ ಇತ್ತೀಚಿನ ದಿನಮಾನಗಳಲ್ಲಿ ಜನವರಿ ತಿಂಗಳಿಗೆ ಹಿಂಗಾರು ಮಳೆಯಾಗಿ ಭರತ ಹುಣ್ಣಿಮೆಗೆ ಬಿತ್ತುವ ಕಾಲ ಬರುವುದರಿಂದ ಕಾರ ಹುಣ್ಣಿಮೆಗೆ ಭಿತ್ತಿದ ಬೆಳೆಯು ಫಸಲಿಗೆ ಬಂದು ಆ ಕಾಲದಲ್ಲಿ ರಾಶಿ ಮಾಡುವ ಕಾಲ ಬರುತ್ತದೆ ಎನ್ನುವ ಬಾಲಬಸವರ ಮಾತುಗಳಲ್ಲಿ ಕೃಷಿ ಚಟುವಟಿಕೆಯಲ್ಲಾಗುವ ಬದಲಾವಣೆಯ ಮುನ್ಸೂಚನೆಯನ್ನು ಹೇಳುತ್ತಾರೆ. ಅಂತಹ ಸಂದರ್ಭಗಳು ಈಗಾಗಲೇ ನಮ್ಮ ಸುತ್ತಮುತ್ತ

ನಡೆಯುತ್ತಿವೆ. ಕಾಲ ಕಾಲಕ್ಕೆ ಸರಿಯಾಗಿ ಮಳೆಗಾಲದಲ್ಲಿ ಮಳೆಯಾಗದೆ ಬಿಸಿಲು ಹೆಚ್ಚಾಗಿ ಬೇಸಿಗೆಯಂತೆ ಕಾಣುವುದು, ಬೇಸಿಗೆ ಕಾಲದಲ್ಲಿ ಮಳೆಯಾಗುವುದರಿಂದ ವಾತಾವರಣದಲ್ಲಿ ಮಳೆಗಾಲದಂತೆ ಭಾಸವಾಗುವ ದಿನಗಳು ಬಂದಿರುವುದನ್ನು ನಾವು ಈಗಾಗಲೇ ಕಂಡಿದ್ದೇವೆ. ಇದೇ ಸಂಗತಿಯನ್ನು ಬಾಲಬಸವರ ಕಾಲಜ್ಞಾನ ಸಾಹಿತ್ಯವು ತಿಳಿಸುತ್ತದೆ.

ಋತುಮಾನಗಳು ಬದಲಾಗುವುದರೊಂದಿಗೆ ಭೌಗೋಳಿಕ ಪ್ರದೇಶಗಳಲ್ಲಿನ ಸ್ವರೂಪ ಕೂಡ ಬದಲಾಗುವ ಸಂಗತಿಯನ್ನು ಬಾಲಬಸವರ ಮೌಖಿಕ ಸಾಹಿತ್ಯವು ಈ ಕೆಳಗಿನಂತೆ ಹೇಳುತ್ತದೆ.

ಮಲೆನಾಡು ಹೊರನಾಡು ಅಕ್ಕೈತೆ
ಬಯಲು ಸೀಮೆ ಮಲೆನಾಡು ಅಕ್ಕೈತೆ
ಮಲೆನಾಡಿನೋಳಗ ಹತ್ತಿ ನವಣಿ ಬೆಳೆದು
ಗಂಜಿ ಕಾಣ್ದೆ ಹೊಕ್ಕೈತೆ
ಭತ್ತ ಬಿತ್ತಿ ಬಾನ ಕಾಣ್ದೆ ಹೋಕ್ಕೈತೆ **–ಬಾಲಬಸವ ಹುಗ್ ಹನುಮಂತಪ್ಪ.**

ಬಾಲಬಸವ ಹುಗ್ ಹುಮಂತಪ್ಪನವರು ಈ ಕಾಲಜ್ಞಾನದಲ್ಲಿ ಋತುಮಾನದಲ್ಲಾಗುವ ಬದಲಾವಣೆಯಿಂದಾಗಿ ಭೌಗೋಳಿಕ ಪ್ರದೇಶಗಳು ತಮ್ಮ ಸ್ವರೂಪದಲ್ಲಿ ಬದಲಾಗುವಿಕೆಯ ಸಂಗತಿಗಳ ಕುರಿತು ಹೇಳುತ್ತಾರೆ. ಮಲೆನಾಡು ಹೋಗಿ ಬರನಾಡು ಅಗುತ್ತದೆ ಮತ್ತು ಬಯಲು ಸೀಮೆ ಮಲೆನಾಡು ಆಗುತ್ತದೆ ಎಂದು ಹೇಳುತ್ತ, ಮಲೆನಾಡಿನಲ್ಲಿ ಬೆಳೆಯುವ ಕೃಷಿ ಉತ್ಪನ್ನವಾದ ಭತ್ತದ ಬೆಳೆಯು ಮಾಯವಾಗಿ ಹತ್ತಿ, ನವಣೆ ಬೆಳೆಯುವ ಕಾಲ ಬರುತ್ತದೆ ಎನ್ನುವ ಇವರ ನುಡಿಗಳಲ್ಲಿ ಪ್ರಾದೇಶಿಕತೆಯ ಭೌಗೋಳಿಕ ಸ್ವರೂಪವೇ ಬದಲಾಗುವ ಮುನ್ಸೂಚನೆಯನ್ನು ನೀಡಿದ್ದಾರೆ. ಈ ಬದಲಾವಣೆಗಳು ನಿಜವಾಗಿರುವುದನ್ನು ಗಮನಿಸಬಹುದು. ಮುಂದುವರಿದು ಇವರು

ಬಿತ್ತಿ ಬೆಳೆದು ಬೆಳೆಯು ಕಣದಾಗ
ಕಣದಾಗ ರಾಶಿಯನ್ನು ಮಾಡಿ
ರಾಶಿಗೆ ಕೈ ಮುಗಿದು ದೇಶ ಸಂಚಾರ
ಹೋಗೋದು ಬರುತ್ತೈತೆ
ಅದಕ ಮೂರು ಒಂದು ಪಾಲು ಗಾಳಿ, ಒಂದು ಪಾಲು ಮಳೆ
ಬಂಗಾರ ಮಳೆ ಸಿಂಗಾರದ ಬೆಳೆ ಆಕೈತೆ
ಪುಣ್ಯದ ಮಳೆ ಪುಣ್ಯದ ಬೆಳೆ ಬರುತ್ತೈತೆ ಅಂತಾನ
ಈ ವರುಷ ಏನಾಪ್ಪ ಅಂದ್ರೆ

ಮೂರೆ ಮೂರು ಮಳೆ ಅಕ್ಕೈತಿ ಅಂತಾನ
ಬೆಳೆ ಬಂದು ಕೈ ಸಿಕ್ಕಾಗ ನನ್ನದು ಅನ್ನಬೇಕು
ಬೆಳೆದು ಮನಿಗೆ ಬರವರಿಗೂ
ನನ್ನದು ಅನ್ನಂಗಿಲ್ಲ
ಅದ್ಕಾ ಪೀಕು ಮನಿಗೆ ಬಂದಾಗ ನನ್ನದು ಅನ್ನಬೇಕು
ಕಣ್ಣಿಗೆ ಕಂಡಾಗ ಕಂಡಿವೆ ಅನ್ನಬೇಕು
ಉಂಡಾಗ ಉಂಡಿವೆ ಅನ್ನಬೇಕು
ಅದಕ ಸತ್ಯ ಪರೀಕ್ಷೆಯ ಕಾಲೈತಿ ಅಂತಾನ
ಹುಂ ಬಸವಾ ಬಸವಾ.................. **–ಬಾಲಬಸವ ಹುಗ್ ಹನುಮಂತಪ್ಪ**

ಈ ನುಡಿಗಳಲ್ಲಿ ಬಾಲಬಸವ ಹುಗ್ ಹನುಮಂತಪ್ಪನವರು ಬೆಳೆದ ಬೆಳೆಗೆ ಸರಿಯಾದ ಬೆಲೆ ಸಿಗದೆ ರೈತರು ನಷ್ಟ ಅನುಭವಿಸುವ ಸಂಗತಿಯನ್ನು ಹೇಳುತ್ತಾರೆ. ರೈತರು ಭತ್ತ ಬೆಳೆದು ಕಣದಲ್ಲಿ ರಾಶಿ ಮಾಡಿ, ಆ ರಾಶಿಗೆ ಕೈ ಮುಗಿದು ದೇಶ ಸಂಚಾರ ಹೋಗಬೇಕಾದ ಪರಿಸ್ಥಿತಿ ಬರುವುದು ಎನ್ನುವ ಈ ನುಡಿಯು ಈಗ ಸತ್ಯವಾಗಿದೆ. ರಾಶಿ ರಾಶಿ ಬೆಳೆ ಬೆಳೆದರೂ ಅದಕ್ಕೆ ಬೆಲೆ ಸಿಗದೆ ಗುಳೆ ಹೋಗುವ ಪರಿಸ್ಥಿತಿ ನಿರ್ಮಾಣವಾಗಿರುವುದು ಇಂದಿನ ಸಾಮಾಜಿಕ ವಾಸ್ತವ ಸಂಗತಿಯಾಗಿ ನಮ್ಮ ಮುಂದಿದೆ. ರೈತರಿಗೆ ಸರಿಯಾಗಿ ಮಳೆ ಬರದೆ ಹೋಗುವ ಸಮಯದಲ್ಲೂ ಕಷ್ಟ ಪಟ್ಟು ಬಂಗಾರದ ಬೆಳೆ ಬೆಳೆದರೂ ಅದನ್ನು ನಾಶ ಮಾಡಲು ಪುಣ್ಯದ ಮಳೆ ಬರುತ್ತದೆ. ಬೆಳೆ ಬಂದರೂ ಅತಿವೃಷ್ಟಿಯನ್ನು ಪುಣ್ಯದ ಮಳೆಗೆ, ಸಿಂಗಾರದ ಮಳೆಗೆ ಬಾಲಬಸವ ಹುಗ್ ಹುನುಮಂತಪ್ಪನವರು ಹೋಲಿಸಿದ್ದಾರೆ. ಮಳೆ ಬಂದು, ಬೆಳೆ ಬಂದರೂ ಅದು ನನ್ನದು ಎಂದು ಬೀಗುವಂತಿಲ್ಲ. ಹೊಲದ ಬೆಳೆಯು ಮನೆಗೆ ಬರುವವರೆಗೂ ಅದು ನನ್ನದು ಎನ್ನುವ ಹಾಗಿಲ್ಲ ಅದನ್ನು ಕಣ್ಣಿಗೆ ಕಂಡಾಗ ನಾವು ಕಂಡಿದ್ದೇವೆ ಅನ್ನಬೇಕು. ಅದನ್ನು ತಿಂದಿದ್ದೇವೆ ಎಂದು ಹೇಳಬೇಕು. ಅಲ್ಲಿಯವರೆಗೂ ಅದು ನನ್ನ ಬೆಳೆಯಲ್ಲ ಎಂದು ಕೊಳ್ಳಬೇಕು, ಹೊಲದಲ್ಲಿ ಬೆಳೆದ ಬೆಳೆಯು ಯಾವ ಮಾಯದಲ್ಲೂ ಬದಲಾಗಬಹುದು. ಪುಣ್ಯದ ಸಿಂಗಾರದ ಬಾಳೆ ಬಂದರೆ ಬಿತ್ತಿ ಬೆಳೆದ ಬೆಳೆಯು ಕೂಡ ನಿಮಗೆ ಸಿಗದೆ ಹೋಗಬಹುದು ಎನ್ನುವ ಅರಿವಿನ ಸೂಚನೆಯನ್ನು ಬಾಲಬಸವರು ನೀಡುತ್ತಾರೆ.

ಕೃಷಿಯ ಆಧಾರ ಸ್ತಂಭಗಳಾದ ಎತ್ತುಗಳ ಕುರಿತು ಕಾಲಜ್ಞಾನ

ಬಾಲ ಬೀಸುವಂತ ಜೀವಗಳಿಗೆ ಉಳಿವಿಲ್ಲ ಕೇಳಿರಣ್ಣ
ಎತ್ತು ಮಾರಿದವರಿಗೆ ಕತ್ತಿ ಸಿಗೋದಿಲ್ಲ ನೋಡಿರಣ್ಣ

ಜೋಡು ಅರವತ್ತು ವರಹ ಒಂಟಿ ಎತ್ತು ಮಾರಲು ಬೇಕು ಕೇಳಿರಣ್ಣ
ಜೋಡು ಆರವತ್ತು ವರಹ ನೋಡ್ರೀ
ನಾಲರು ಕೂಡಿ ಎರಡೆತ್ತು ಕೊಂಡಿರಿ ಕೇಳಿರಣ್ಣ
ದಿನವಿಡಿ ಬೇಸಾಯ ಮಾಡಲೇ ಬೇಕು ನೋಡಿರಣ್ಣ
ಬಸವನ ಜೋಪಾನ ಮಾಡಲೇ ಬೇಕು ಕೇಳಿರಣ್ಣ
ಎಮ್ಮೆ ಒಕ್ಕಲು ಎಮ್ಮೆ ಹೂಡಲುಬೇಕು ಕೇಳಿರಣ್ಣ
ಎಂದೋ ಎಂದಲೋ ಬೇಡ ಬಂದಾವ ದಿನಮಾನ ನೋಡಿರಣ್ಣ
ಅತ್ತಾತ್ತು ಎನ್ನಬೇಡ ಆಗಮಾನ ಮುಂದ್ಯೆತೆ ದಿನಮಾನ ಕೇಳಿರಣ್ಣ
ಕೆಟ್ಟ ಕಲಿಯುಗದೊಳಗೆ ಏನು? ಹೇಳಲು ಬೇಕು ಬಸವಣ್ಣ
ತ್ಯಾಗ ಮೂಗಿಲಾಗಿ ನಾಡೆಲ್ಲಾ ಕೆಡುತೈತ್ತೇ ನೋಡಿರಣ್ಣ –**ಬಾಲಬಸವ ತುಮನೆಪ್ಪ**

ವ್ಯವಸಾಯಕ್ಕೆ ಪ್ರಧಾನ ಆಕರವಾಗಿ ಎತ್ತುಗಳನ್ನು ಬಳಸಿಕೊಳ್ಳುವ ರೈತರು ಮುಂದಿನ ದಿನಮಾನಗಳಲ್ಲಿ ಕಷ್ಟ ಎದುರಿಸುವುದನ್ನು ಹೇಳುತ್ತಾರೆ. 'ಎತ್ತು ಮಾರಿದರೆ, ಮುಂದೆ ಅವನಿಗೆ ಕತ್ತೆಯು ಕೂಡ ಸಿಗೋದಿಲ್ಲ' ಎನ್ನುವ ಬಾಲಬಸವರ ಮಾತುಗಳು ಅಕ್ಷರಶಃ ನಿಜವಾಗಿವೆ. ಬಾಲ ಬೀಸುವ ಜೀವಗಳಿಗೆ ಉಳಿವಿಲ್ಲ ಎನ್ನುವ ಮಾತಿನಲ್ಲಿ ಬಾಲ ಬೀಸುವ ಎತ್ತು ಆಕಳು, ಕರು, ದನ, ಎಮ್ಮೆ ಮುಂತಾದ ಪ್ರಾಣಿಗಳಿಗೆ ಮುಂದೆ ಕಷ್ಟ ಬರುವುದು ಎಂದಿದ್ದಾರೆ. ಬರಗಾಲದಿಂದಾಗಿ ಈ ಜೀವರಾಶಿಗಳಿಗೆ ನೀರು ಮೇವು ಸಿಗದೆ ಹೋಗಿರುವ ಸಂದರ್ಭದಲ್ಲಿ ಎತ್ತುಗಳ ಬೆಲೆ ಜಾಸ್ತಿಯಾಗುತ್ತವೆ. ಇದರಿಂದ ಎರಡು ಎತ್ತು ಕೊಳ್ಳಲು ಹಣವಿಲ್ಲದೆ ಒಂಟಿ ಎತ್ತಿನ ಬೇಸಾಯವನ್ನು ರೈತರು ಮಾಡುತ್ತಾರೆ. ಮುಂದೆ ಎಮ್ಮೆ ಬೇಸಾಯ ಮಾಡುವ ಕಾಲ ಬರುವುದೆಂದು ಸಾರಿ ಹೇಳಿದ್ದಾರೆ. ನಾಲ್ಕು ಮಂದಿ ಜೋಡಿಯಾಗಿ ಹೊಲ ಬಿತ್ತುವ ಕಾಲ ಬರುವುದು ಎಂದಿದ್ದಾರೆ. ಈ ಎಲ್ಲಾ ಮಾತುಗಳು ನಿಜವಾಗಿವೆ. ಹೊಲ ಉಳುಮೆ ಮಾಡುವ ರೈತರಿಗೆ ಎತ್ತುಗಳು ಸಿಗದೆ ಹೋಗಿರುವುದು ಈ ಪ್ರಸ್ತುತ ದಿನಮಾನಗಳಲ್ಲಿ ನಾವು ಕಾಣಬಹುದು.

ಮಾನವನ ಅತಿ ಆಸೆಯಿಂದಾಗಿ ವ್ಯವಸಾಯದಲ್ಲಿ ಅನೇಕ ಪರಿಣಾಮಗಳು ಉಂಟಾಗುತ್ತಿವೆ. ಮುಖ್ಯವಾಗಿ ಕೃಷಿಪ್ರಧಾನ ಸಮಾಜದಲ್ಲಿ ಆಗುವ ಬದಲಾವಣೆಗಳನ್ನು ಹೇಳುವ ಬಾಲಬಸವರು ಮಳೆಯ ಅವತಾರಗಳು, ಕೃಷಿ ಚಟುವಟಿಕೆಯಲ್ಲಾಗುವ ಬದಲಾವಣೆ ಮತ್ತು ಮುಂದೊದಗಬಹುದಾದ ಅಪಾಯಕಾರಿ ಸಂಗತಿಗಳಿಂದ ಜಾಗೃತರಾಗಿರುವಂತೆ ರೈತರಿಗೆ ಎಚ್ಚರಿಕೆಯನ್ನು ನೀಡುತ್ತಾರೆ. ಹವಾಮಾನದಲ್ಲಾಗುವ ಬದಲಾವಣೆಯ ಪರಿಣಾಮದಿಂದಾಗಿ ಮಳೆ ಕಾಲಮಾನಗಳು ಬದಲಾಗುವವು. ಬಿಸಿಲಿನ ಪ್ರಮಾಣದಲ್ಲಿ ಏರಿಕೆಯಾಗುವುದನ್ನು ತಮ್ಮ ಕಾಲಜ್ಞಾನದಲ್ಲಿ ಹೇಳುತ್ತಾರೆ. ಈ ಮೊದಲೇ ಸಮಾಜವು ಪರಿಪಾಟ ಮಾಡಿಕೊಂಡು ಬಂದಿರುವ ಸಂಗತಿಗಳು ಇನ್ನು ಮುಂದೆ ಬದಲಾಗುತ್ತವೆ.

ಅಂತಹ ಕಾಲವು ಮುಂದೆ ಬರಲಿದೆ. ನೀವು ಎಚ್ಚರದಿಂದ ಬದುಕಬೇಕು, ಸ್ವಲ್ಪ ಯಾಮಾರಿದರೆ ನಿಮ್ಮ ಬದುಕು ಕಷ್ಟವಾಗುವುದು ಎನ್ನುವ ಎಚ್ಚರಿಕೆ ಸಂದೇಶಗಳನ್ನು ಸಮಾಜದಲ್ಲಿನ ಶ್ರೀಸಾಮಾನ್ಯನಿಗೆ, ಕೃಷಿಕರಿಗೆ ಹೇಳುತ್ತಾರೆ. ಕೃಷಿಪ್ರಧಾನವಾದ ಸಮುದಾಯವು ಬಾಲಬಸವರ ಮಾತುಗಳನ್ನು ಗಮನಕ್ಕೆ ತಂದುಕೊಂಡಿದ್ದರೆ ಮುಂದೆ ಎದುರಾಗುವ ಅಪಾಯಗಳನ್ನು ಉಪಾಯದಿಂದ ಎದುರಿಸಿ ಬದುಕು ಕಟ್ಟಿಕೊಳ್ಳಬಹುದಾಗಿತ್ತು. ಅವರ ಮಾತುಗಳನ್ನು ಮೀರಿದ ಕಾರಣ ಈ ದಿನಮಾನಗಳಲ್ಲಿ ರೈತರ ಸಾವಿನ ಸಂಖ್ಯೆ ಹೆಚ್ಚಾಗಿದೆ.

೫.೩. ಮಾರುಕಟ್ಟೆ, ವ್ಯಾಪಾರ ಮುಂತಾದ ವಿದೇಶಿ ಚಿಂತನೆಗಳು :

ಗ್ರಾಮಸಂಸ್ಕೃತಿಯಲ್ಲಿ ರೈತರು ತಾವು ಬೆಳೆದ ಬೆಳೆಗಳನ್ನು ಮಾರುಕಟ್ಟೆಯಲ್ಲಿಟ್ಟು ವ್ಯಾಪಾರ ಮಾಡುವ ಸಂಸ್ಕೃತಿಯನ್ನು ಬೆಳೆಸಿಕೊಳ್ಳದ ಕಾರಣ ಅಂದಿನ ಗ್ರಾಮಸಂಸ್ಕೃತಿಯಲ್ಲಿ ಕೊಡು ಕೊಳ್ಳುವ, ಸಾಟಿ ವಿನಿಮಯ ಪದ್ಧತಿ ಜಾರಿಯಲ್ಲಿತ್ತು. ಈ ಪದ್ಧತಿಯಿಂದ ಇಲ್ಲಿನ ಜನಪದರು ತಮಗೆ ಬೇಕಾದ ಆಹಾರ ಪದಾರ್ಥಗಳನ್ನು ತಾವು ಬೆಳೆದುಕೊಂಡು ಉಳಿದ ಆಹಾರ ಸಾಮಗ್ರಿಗಳನ್ನು ಮತ್ತೊಬ್ಬರಿಂದ ಪಡೆದುಕೊಳ್ಳುತ್ತಿದ್ದರು. ಇದರಿಂದ ತಾವುಗಳೇ ಬೆಳೆದ ಬೆಳೆಯನ್ನು ವಿನಿಮಯ ಮಾಡಿಕೊಳ್ಳುವುದರ ಮೂಲಕ ಗ್ರಾಮಜೀವನ ನಡೆಸುತ್ತಿದ್ದರು. ಇಂತಹ ದೇಶಿ ಚಿಂತನೆಗಳು ಜನತೆಯಿಂದ ದೂರವಾಗುವ, ವಿದೇಶಿ ಮಾರುಕಟ್ಟೆಯ ಚಿಂತನೆಗಳಾದ ಬಂಡವಾಳಶಾಹಿ, ಮಾರುಕಟ್ಟೆ, ವ್ಯಾಪಾರ ಮುಂತಾದ ಸಂಗತಿಗಳು ಬಾಲಬಸವರ ಮೌಖಿಕ ಸಾಹಿತ್ಯದಲ್ಲಿ ಕಂಡುಬರುತ್ತವೆ. ಬ್ರಿಟಿಷರ ಆಗಮನದಿಂದ ಆಹಾರ ಪದಾರ್ಥಗಳು ಮಾರುಕಟ್ಟೆಯನ್ನು ಪ್ರವೇಶ ಮಾಡಿದವು. ಇದರಿಂದಾಗಿ 'ಕೊಂಡು' ತಿನ್ನುವ ಸಂಸ್ಕೃತಿಯು ನಮ್ಮ ಗ್ರಾಮೀಣ ಭಾಗದಲ್ಲಿ ಕಂಡುಬಂತು. ಮಾರುಕಟ್ಟೆಯಲ್ಲಿ ಯಾವ ಯಾವ ಪದಾರ್ಥಗಳು ಹೇಗೆ ಮಾರುತ್ತಾರೆ ಎನ್ನುವ ಕುರಿತು ಬಾಲಬಸವರು ಈ ರೀತಿಯಾಗಿ ಹೇಳುತ್ತಾರೆ.

ಏನೇನು ಗಂದೀರಿ ಏನ್ಯೆಂದು ತಂದೀರಿ ಕೇಳಿರಣ್ಣ
ಎಳ್ಳು ಔಡಲ ನೀರು ಬಂಗಾರ ಜ್ವಾಕಿ ಮಾಡ್ರೀ ನೋಡಿರಣ್ಣ
ಎಳ್ಳು ಔಡಲ ನೀರು ಬಂಗಾರ ಜ್ವಾಕಿ ಮಾಡ್ರೀ ಕೇಳಿರಣ್ಣ
ಲೋಕದ ಪ್ರತಿಗಾಳಿ ಉಪ್ಪು ಜ್ವಾಪನ ಮಾಡ್ರೀ ನೋಡಿರಣ್ಣ
ಲೋಕದ ಪ್ರತಿಗಾಳಿ ಉಪ್ಪು ಜ್ವಾಪನ ಮಾಡ್ರೀ ಕೇಳಿರಣ್ಣ
ಉಪ್ಪು ಜ್ವಾಪನ ಮಾಡ್ರೀ
ಹೊನ್ನಿಗೆ ಸೇರು ಉಪ್ಪು ಓಳ್ಯೋಳೆಯರು ಉಂಬುತ್ತಾರೊ ನೋಡಿರಣ್ಣ
ಅರವತ್ತು ಹೊನ್ನಿಗೆ ಪಲ್ಲ ಔಡ್ಲ ಮಾರಲು ಬೇಕು ನೋಡಿರಣ್ಣ
ಅರವತ್ತು ಹೊನ್ನಿಗೆ ಪಲ್ಲ ಔಡ್ಲ ಮಾರಲು ಬೇಕು ಕೇಳಿರಣ್ಣ

ಎಂಭತ್ತು ಹೊನ್ನಿಗೆ ಪಲ್ಲ ಎಳ್ಳೆ (ಎಳ್ಳು) ಮಾರಲು ಬೇಕು ನೋಡಿರಣ್ಣ
ಎಂಭತ್ತು ಹೊನ್ನು ನೋಡ್ರೀ
ಎಂಭತ್ತು ಹೊನ್ನಿಗೆ ಪಲ್ಲ ಎಳ್ಳೆ (ಎಳ್ಳು) ಮಾರಲು ಬೇಕು ಕೇಳಿರಣ್ಣ
ಘಸಕ್ಕೆ ಸೇರಿನಂತೆ ಅಳ್ಳೆ ಎಣ್ಣೆ ಮಾರಲು ಬೇಕು ಕೇಳಿರಣ್ಣ
ಚವಲಾಕ ಚಿಪ್ಪಿನಂತೆ ಬಾಳೆ ಹಣ್ಣು ಮಾರಲು ಬೇಕು ನೋಡಿರಣ್ಣ
ಮಂದಿಯಾಗ ಬೇಕ್ರೀ
ಚವಲಾಕ ಚಿಪ್ಪಿನಂತೆ ಬಾಳೆ ಹಣ್ಣು ಮಾರಲು ಬೇಕು ಕೇಳಿರಣ್ಣ
ನೆಲ್ಲಕ್ಕಿ ಬಾನ ಕಲ್ಲೇ ಸೀಯೋದಿಲ್ಲ ನೋಡಿರಣ್ಣ
ನೆಲ್ಲಕ್ಕಿ ಬಾನ ಕಲ್ಲೇ ಸೀಯೋದಿಲ್ಲ ಕೇಳಿರಣ್ಣ
ಇರೊದೈದೆ ವರುಷವೇ ಜ್ಞಾಪನ ಮಾಡಿಕೊಳ್ಳಿರೀ ನೋಡಿರಣ್ಣ–**ಬಾಲಬಸವ ತುಮನೆಪ್ಪ**

"ಅಡಿಕೆ ತೆಂಗಿನ ಫಲವೋ ಅದರಿ ಹೋಗಬೇಕಣ್ಣ
ಅಡಿಕೆ ತೆಂಗಿನ ಫಲವು ಅದರಿ ಹೋಗಬೇಕಣ್ಣ
ಎಲೆ ಅಡಿಕೆ ಹಾಕೊರು ಮುಂದೇ ಮಿಡ ಮಿಡ ಮಿಡಕಿ ಸಾಯ ಬೇಕ್ರೀ
ದುಡ್ಡಿಗೆ ಒಂದೊಂದು ಎಲೆಯ ದೊಡ್ಡವರೇ ಕೊಳ್ಳೊದು ಕಾಲ ಮುಂದೈತೆ
ಹಣಕ್ಕೆ ಸೇರು ಅಡಿಕೆ ಮಾರೋದು ಬೇಕಣ್ಣ
ಮಾದ್ದು ಬಲಕ್ಕೋಂದು ಚಿಪ್ಪ ಬಾಳೆ ಹಣ್ಣು ಮಾರಬೇಕಣ್ಣ
ಹುಂ ಬಸವಾ ಬಸವಾ.................... **–ಬಾಲಬಸವ ನಾಗೇಂದ್ರಪ್ಪ**

ಏಳೇ ಹೊನ್ನಿಗೊಂದು ನೂಲು ತುಂಡು ಮಾರಬೇಕ್ರೀ
ಹನ್ನೆರೆಡು ವರಕ್ಕೊಂದು ಬಿಳಿಯ ಸೀರೆ ಮಾರಬೇಕ್ರೀ
ಹೊನ್ನಿಗೆ ಜೋಡು ಗುರುವೇ
ತಂಗಿನ ಕಾಯಿ ಮಾರಬೇಕ್ರೀ **–ಬಾಲಬಸವ ಶಿವಪ್ಪ, ಹರ್ಲಾಪುರ**

ಈ ಮೇಲಿನ ಮೂರು ಕಾಲಜ್ಞಾನ ಸಾಹಿತ್ಯವು ರೈತರು ತಮ್ಮ ಹೊಲದಲ್ಲಿ ಬೆಳೆದ ಜೋಳ, ರಾಗಿ, ನವಣೆ ಮುಂತಾದ ಧಾನ್ಯಗಳನ್ನು ಬೆಳೆದು ತನ್ನ ಮನೆಗೆ ಬೇಕಾದಷ್ಟು ಕಾಳುಗಳನ್ನು ಸಂಗ್ರಹಿಸಿಕೊಳ್ಳುತ್ತಿದ್ದರು. ಎಳ್ಳು, ಔಡಲ ಮುಂತಾದ ಎಣ್ಣೆ ಕಾಳುಗಳಿಂದ ಎಣ್ಣೆ ತಯಾರಿಸಿ ತನ್ನ ಅಗತ್ಯತೆಯನ್ನು ಪೂರೈಸಿಕೊಳ್ಳುತ್ತಿದ್ದರು. ಮುಂದೆ ಜಗತ್ತಿನಲ್ಲಿ ಜನಸಂಖ್ಯೆ ಹೆಚ್ಚಾಗಿ ಅವುಗಳಿಗೆ

ಹೆಚ್ಚಿನ ಬೇಡಿಕೆ ಬಂದಾಗ ವ್ಯಾಪಾರದ ಮಾರುಕಟ್ಟೆಯು ಜಗತ್ತಿನ ಎಲ್ಲಾ ಕಡೆ ವಿಸ್ತರಿಸಿಕೊಂಡಿತ್ತು. ಇದರಿಂದ ಸ್ಥಳೀಯವಾಗಿ ಸಂತೆಗಳು, ಅಂಗಡಿಗಳು ಆರಂಭವಾದವು. ಮೊದಲು ಎಳ್ಳು, ಔಡಲ, ನೀರು, ಉಪ್ಪನ್ನು ಭಾರತೀಯರು ಮಾರುಕಟ್ಟೆಯಲ್ಲಿಟ್ಟು ಮಾರುವ ಕೆಲಸ ಮಾಡುತ್ತಿರಲಿಲ್ಲ. ಆದರೆ ಮುಂದೊಂದು ದಿನ ಅವುಗಳಿಗೆ ಹೆಚ್ಚಿನ ಬೇಡಿಕೆ ಬಂದಾಗ, ಅವುಗಳ ಉತ್ಪಾದನೆ ಕಡಿಮೆಯಾದಾಗ ಅವುಗಳಿಂದ ಹೆಚ್ಚು ಹೆಚ್ಚು ಲಾಭ ಮಾಡಿಕೊಳ್ಳುವ ಉದ್ದೇಶದಿಂದ ಬಂಡವಾಳಶಾಹಿಗಳು ಕೃತಕ ಕೊರತೆಯನ್ನು ಸೃಷ್ಟಿ ಮಾಡಿ ಅವುಗಳನ್ನು ಮಾರುಕಟ್ಟೆಯಲ್ಲಿ ಬೆಲೆ ಹೆಚ್ಚಿಸುವುದರ ಮೂಲಕ ನಮ್ಮಲ್ಲಿ ವ್ಯಾಪಾರದ ಪರಿಕಲ್ಪನೆಯನ್ನು ಹುಟ್ಟು ಹಾಕಿದರು. ಇದರಿಂದ ಬಾಲಬಸವರು ಈ ಕುರಿತು ಎಳ್ಳು, ಔಡಲ, ನೀರು, ಉಪ್ಪು ಮುಂತಾದ ಅಗತ್ಯ ವಸ್ತುಗಳು ಹೇಗೆ ತನ್ನ ಮೂಲ ಸ್ಥಿತಿಯನ್ನು ಕಳೆದುಕೊಂಡು ವ್ಯಾಪಾರದ ಸರಕುಗಳಾಗಿ ಪರಿವರ್ತನೆಯಾಗುತ್ತಿವೆ ಎಂದು ಹೇಳಿದ್ದಾರೆ. ಬಾಲಬಸವರು ಹೇಳಿದಂತೆ ಉಪ್ಪು, ನೀರು, ಎಳ್ಳು, ಔಡಲ, ಅರಳೆ ಎಣ್ಣೆ, ಬಾಳೆ ಹಣ್ಣು, ನೆಲ್ಲಕ್ಕಿ ಬಾನ, ಅಡಿಕೆ, ಎಲೆ ತೆಂಗಿನ ಕಾಯಿ ಮುಂತಾದವುಗಳು ವ್ಯಾಪಾರ ಕೇಂದ್ರದ ವಸ್ತುಗಳಾಗಿ ಮಾರ್ಪಾಡು ಹೊಂದಿದವು. ಈ ರೀತಿಯಾದ ಕೃಷಿ ಉತ್ಪನ್ನಗಳು ಮುಂದೆ ವ್ಯಾಪಾರೀಕರಣಗೊಳ್ಳು ಸಂದರ್ಭಗಳು ಬರುವವು. ಹಾಗಾಗಿ ನೀವು ಇವುಗಳನ್ನು ಜೋಪಾನ ಮಾಡಿಕೊಳ್ಳಿ ಎಂದು ಬಾಲಬಸವರು ಸಮಾಜದ ಜನತೆಯನ್ನು ಕೇಳಿಕೊಂಡರು. ಅವರ ಮಾತಿಗೆ ಬೆಲೆ ಸಿಗದೇ ಹೋಗಿದ್ದರ ಪರಿಣಾಮದಿಂದಾಗಿ ಇವತ್ತು ಮಾರುಕಟ್ಟೆ ನಮ್ಮನ್ನು ಆಳುತ್ತಿದೆ.

ಮಾರುಕಟ್ಟೆ

ಎತ್ತು ಕಾಣದೆ ಕೈಲಿ ಕೆತ್ತಿ ಬಿತ್ತುತಾರಣ್ಣ
ಹತ್ತಿ ಎಣ್ಣಿ ಬೆಣ್ಣಿ ಸಿಗದೆ
ಹತ್ತು ಗಾವುದಕ್ಕೆ ಸಂತೆ ಮಾರ್ವದು
ಭತ್ತ ಮುತ್ತು ನವನೆ(ವನಣೆ) ಮಾರ್ವದು
ಕತ್ತೆ ಜನಕೆ ತಿಳಿಯದಣ್ಣ! **–ಬಾಲಬಸವ ಶಿವಪ್ಪ, ಹರ್ಲಾಪುರ**

ಮುಂದುವರಿದು ಬಾಲಬಸವರು ಸಂತೆ ಮತ್ತು ಮಾರುಕಟ್ಟೆ ಪರಿಕಲ್ಪನೆಯನ್ನು ತಮ್ಮ ಕಾಲಜ್ಞಾನದ ಮೂಲಕ ಬಿಚ್ಚಿಡುತ್ತಾರೆ. ಮನುಷ್ಯನಿಗೆ ಅಗತ್ಯ ವಸ್ತುಗಳು ಸಿಗದೆ ಹೋದಾಗ ಅವುಗಳನ್ನು ಕೊಂಡುಕೊಳ್ಳುವ ಕೇಂದ್ರಗಳಾಗಿ ಮಾರುಕಟ್ಟೆಯು ಸಮಾಜದಲ್ಲಿ ಪ್ರವೇಶ ಮಾಡಿದೆ. ಈ ಮಾರುಕಟ್ಟೆ ಅಥವಾ ಸಂತೆಯಲ್ಲಿ ಹತ್ತಿ, ಎಣ್ಣೆ, ಬೆಣ್ಣೆಯ ಬೆಲೆಯನ್ನು ಹತ್ತು ಪಟ್ಟು ಬೆಲೆ ಹೆಚ್ಚಿಸಿ ಸಂತೆಯಲ್ಲಿ ಮಾರುವುದು ಎಂದು ಹೇಳುತ್ತಾರೆ. ಬಾಲಬಸವರ ಈ ನುಡಿಗಳಲ್ಲಿ ಕೃಷಿ, ಹೈನುಗಾರಿಕೆ ಮುಂತಾದವುಗಳು ಮನೆಯಲ್ಲಿ ಸಿಗಬಹುದಾದ ವಸ್ತುಗಳನ್ನು ಸಂತೆಯಲ್ಲಿ ಕೊಂಡು ತರುವ ಪ್ರಸಂಗ ಮುಂದೆ ಒದಗಿ ಬಂದಿದೆ. ಅವರು ಹೇಳಿದಂತೆಯೇ ಮಾರುಕಟ್ಟೆ, ಸಂತೆ ವ್ಯಾಪಾರ ಮುಂತಾದವುಗಳು ಇವತ್ತಿನ ದಿನಮಾನದಲ್ಲಿ ಹೆಚ್ಚಾಗಿರುವುದನ್ನು ನಾವು ಕಾಣಬಹುದಾಗಿದೆ.

ತತ್ವಪದಕಾರ ಶಿಶುನಾಳ ಶರೀಫ ಕೂಡ ೧೮ನೇ ಶತಮಾನದ ಹೊತ್ತಿಗೆ "ಗಿರಣಿ ವಿಸ್ತಾರ ನೋಡಮ್ಮ" ಎನ್ನುವ ತತ್ವಪದದಲ್ಲಿ ಜಾಗತೀಕರಣದ ಪ್ರಭಾವ, ಮಾರುಕಟ್ಟೆ, ಸಂತೆ, ಹೋಟೆಲ್ ಮುಂತಾದ ಸಂಗತಿಗಳು ಸಮಾಜದಲ್ಲಿ ಆವರಿಸಿಕೊಂಡಿರುವ ಬಗ್ಗೆ ಹೇಳಿದ್ದಾರೆ. ಶಿಶುನಾಳ ಶರೀಫರು ಕೂಡ ಅನುಭಾವಿ ಪರಂಪರೆಯಿಂದ ಬಂದವರು. ಮುಂದೆ ಜಗತ್ತು ಬದಲಾಗುವಿಕೆಯನ್ನು ಗಮನಿಸುತ್ತಿದ್ದ ಇವರು ಗಿರಣಿ ವಿಸ್ತಾರದ ಬಗ್ಗೆ ಮಾತನಾಡಿದ್ದಾರೆ. ಬಾಲಬಸವರು ಜಗತ್ತಿನಲ್ಲಿ ಆಗುವ ಬದಲಾವಣೆಗಳು ಕೃಷಿ ವಸ್ತುವಿನ ಮೇಲೆ ಆಗುತ್ತದೆ ಎಂದು ಹೇಳುತ್ತಾ, ಎಲೆ ಅಡಿಕೆ ತೆಂಗನ್ನು ದುಡ್ಡು ಕೊಟ್ಟು ಕೊಳ್ಳುವ ಕಾಲ ಬರುತ್ತದೆ ಎಂದಿದ್ದರು. ಈಗ ಅದು ನಿಜವಾಗಿದೆ.

೫.೪. ಪ್ರಕೃತಿ

ಪ್ರಕೃತಿಯಲ್ಲಿ ಆಗುವ ಮಹತ್ವದ ಬದಲಾವಣೆಗಳನ್ನು ಬಾಲಬಸವರು ತಮ್ಮ ಕಾಲಜ್ಞಾನದಲ್ಲಿ ಹೇಳುವ ಪ್ರಯತ್ನ ಮಾಡುತ್ತಾರೆ. ಇದು ಜನತೆಗೆ ನೀಡುವ ಎಚ್ಚರಿಕೆಯ ಸಂದೇಶವಾಗಿದೆ. ಮುಂದೊಂದು ದಿನದಲ್ಲಿ ಪ್ರಕೃತಿಯಲ್ಲಿ ಕೇಳರಿಯದಷ್ಟು ಬದಲಾವಣೆ, ವ್ಯತ್ಯಾಸ ಉಂಟಾಗುವುದು. ಈ ರೀತಿಯ ಬದಲಾವಣೆಗೆ ಮಾನವನು ಪ್ರಕೃತಿಗೆ ವಿರುದ್ಧವಾಗಿ ನಡೆದುಕೊಳ್ಳುವುದೇ ಪ್ರಮುಖ ಕಾರಣವಾಗಿದೆ. ಮನುಷ್ಯ ತನ್ನ ಅತಿ ಆಸೆಗೆ ಪ್ರಕೃತಿಯನ್ನು ಹಾಳು ಮಾಡುತ್ತಿದ್ದಾನೆ. ಇದರ ಪರಿಣಾಮವನ್ನು ಮನುಷ್ಯನೇ ಎದುರಿಸಬೇಕಾಗುತ್ತದೆ. ಮನುಷ್ಯ ಭೂಮಿ, ಗಾಳಿ, ನೀರು, ಎಲ್ಲವನ್ನು ಕಲುಷಿತ ಮಾಡುತ್ತಿದ್ದಾನೆ. ಈಗಲೇ ಎಚ್ಚೆತ್ತುಕೊಂಡರೆ ಒಳ್ಳೆಯದು. ಇಲ್ಲದಿದ್ದರೆ ಮುಂದಾಗುವ ಅನಾಹುತಗಳಿಗೆ ಮನುಷ್ಯನೇ ನೇರ ಹೊಣೆಗಾರನಾಗುತ್ತಾನೆ. ನೀರು, ಭೂಮಿ, ಗಾಳಿಯಿಂದ ಉಂಟಾಗುವ ಕಷ್ಟಗಳನ್ನು ಬಾಲಬಸವರು ಹಾಡಿನಲ್ಲಿ ಸರಳವಾಗಿ ಎಲ್ಲರಿಗೂ ತಿಳಿಯುವಂತೆ ಹೇಳುವುದರ ಮೂಲಕ ಜಗತ್ತಿನಲ್ಲಿ ಮುಂದೊದಗಬಹುದಾದ ಸಂಗತಿಗಳನ್ನು ತಿಳಿಸುವುದು ಇವರ ಮೌಖಿಕ ಸಾಹಿತ್ಯದ ಪ್ರಧಾನ ಆಶಯವಾಗಿದೆ.

ಪ್ರಕೃತಿಗೆ ಸಂಬಂಧಿಸಿದ ಕಾಲಜ್ಞಾನ

ಈಶಾನ್ಯ ದಿಕ್ಕಿನಲ್ಲಿಯೇ ಬೀಸೊದು ಬಿರುಗಾಳಿ ಕೇಳಿರಣ್ಣ
ಇದು ಹಿಂದಾತ್ರೀ
ಸೂರ್ಯ ಕೆಳಗಿಳಿದು ಸೂರ್ಯ ತಾಪ ಮೂಡೋದು ನೋಡಿರಣ್ಣ
ಮೂಡಿ ಹೋಯಿತ್ರೀ
ಪಡುವಾಲ ದಿಕ್ಕಿಗೆ ಜೋಡು ಸೂರ್ಯ ಮೂಡಲು ಬೇಕು ಕೇಳಿರಣ್ಣ
ಎರಡು ಸೂರ್ಯ ಮೂಡಬೇಕ್ರೀ
ಏಳು ದಿನದ ಬಿಸುಲೆ ಒಂದೇ ದಿನದಲ್ಲಿ ಕಾಯಬೇಕು ನೋಡಿರಣ್ಣ–
ಬಾಲಬಸವ ತುಮನೆಪ್ಪ

ಬಾಲಬಸವ ತುಮನೆಪ್ಪ ಹಾಡಿದ ಈ ಕಾಲಜ್ಞಾನವು ಪ್ರಕೃತಿಯಲ್ಲಾಗುವ ಬದಲಾವಣೆಗಳನ್ನು ಹೇಳುವ ಕಾರ್ಯ ಮಾಡುತ್ತದೆ. ಈಶಾನ್ಯ ದಿಕ್ಕಿನಲ್ಲಿ ಬೀಸುವ ಬಿರುಗಾಳಿ ಎಂದರೆ ಅದು ಸುನಾಮಿ ಮುನ್ಸೂಚನೆಯಾಗಿತ್ತು. ಅದು ಈಗ ಗತಿಸಿ ಹೋಗಿದೆ. ಮುಂದೆ ಸೂರ್ಯನ ತಾಪ ಹೆಚ್ಚಾಗುವ ಸಂದರ್ಭವನ್ನು ಹೇಳುತ್ತಾರೆ. ವಿಜ್ಞಾನದ ಸಂಗತಿಯಾದ ಜೋಡು ಸೂರ್ಯ ಹುಟ್ಟಿ, ಜಗತ್ತಿನಲ್ಲಿ ಗೋಚರಿಸುವ ವಿಷಯವನ್ನು ಇವರು ತಿಳಿಸುತ್ತಾರೆ. ಏಳು ದಿನದ ಬಿಸಿಲು ಒಂದೇ ದಿನ ಕಾಯಬೇಕು ಎನ್ನುವ ಮಾತಿನಲ್ಲಿ ಜಾಗತಿಕ ತಾಪಮಾನದಲ್ಲಾಗುವ ಬದಲಾವಣೆಯನ್ನು ಸೂಚಿಸುತ್ತದೆ.

ವರುಷದ ಬಿಸಿಲು ಒಂದೇ ದಿನ ಕಾಯುತ್ತೈತೆ
ವರುಷದ ಗಾಳಿ ಒಂದೇ ದಿನ ಬೀಸುತ್ತೈತೆ
ಬೇಲಿಯೊಳಗಿರುವಂತಹ ಮೊಲ ಮುಂಗಲಿ ಮೊದಲಾಗಿ
ಇಲಿ ಬೆಕ್ಕು ಕಡೆಯಾಗಿ ಇರುವೆಗಳೆಲ್ಲಾ ಮೊದಲಾಗಿ
ಇರುವೆ ಎಂಭತ್ತು ಕೋಟಿ ಜೀವರಾಶಿ ಸುಟ್ಟು ಭಸ್ಮವಾಗುತ್ತೈತೆ
ಕಲ್ಲಿಗೆ ಗಟ್ಟಿಯಾದ ಸತ್ಯ ನಾಳೆ ಉಳಿತ್ತೈತೆ
ಸತ್ಯದ ಪರೀಕ್ಷೆ ಕಾಲ ಮುಂದೈತೆ
ಹುಂ ಬಸವಾ ಬಸವಾ.................... **–ಬಾಲಬಸವ ನಾಗೇಂದ್ರಪ್ಪ, ಮಂಡರಘಟ್ಟ**

ಈ ನುಡಿಯಲ್ಲಿ ಪ್ರಪಂಚದ ವಿನಾಶದ ಸೂಚನೆ ಕಾಣುತ್ತವೆ. ಅಂದರೆ ಸೂರ್ಯ ಮತ್ತು ಗಾಳಿಯಿಂದ ಭೂಮಿಗೆ ಮುಂದೆ ಅಪಾಯವಿದೆ ಎನ್ನುವ ಆತಂಕಕಾರಿ ವಿಷಯ ಬಾಲಬಸವರ ಕಾಲಜ್ಞಾನದಲ್ಲಿದೆ. ಒಂದೇ ದಿನದಲ್ಲಿ ವರುಷದ ಬಿಸಿಲು ಮತ್ತು ವರ್ಷದ ಗಾಳಿಯು ಭೂಮಿಗೆ ಅಪ್ಪಳಿಸಿದರೆ ಅದರಿಂದಾಗುವ ನಾಶದ ಭೀಕರತೆ ಎಷ್ಟರಮಟ್ಟಿಗೆ ಇರುತ್ತದೆ ಎಂದರೆ ಸಕಲ ಜೀವರಾಶಿಗಳು ಬದುಕುಳಿಯುವ ಯಾವ ಲಕ್ಷಣಗಳು ಕಾಣಿಸುವುದಿಲ್ಲ. ಹಾಗಾಗಿ ಇರುವೆ ಎಂಬತ್ತು ಕೋಟಿ ಜೀವರಾಶಿಗಳು ಸುಟ್ಟು ಭಸ್ಮವಾಗುವ ಕಾಲ ಮುಂದೆ ಇದೆ ಎನ್ನುವ ಬಾಲಬಸವರು ತಾವು ನುಡಿದ ನುಡಿಗಳು ಇದುವರೆಗೆ ಸತ್ಯವಾಗಿವೆ. ಅದರಂತೆಯೇ ಈ ನುಡಿಗಳು ಕೂಡ ಮುಂದೆ ಸತ್ಯವಾಗಬಹುದು, ಗೊತ್ತಿಲ್ಲ. ಆದರೆ ಪ್ರಪಂಚದ ವಿನಾಶವನ್ನು ಈಗಾಗಲೇ ವಿಜ್ಞಾನಿಗಳು ಅರ್ಥೈಸಿರುವುದರಿಂದ ಈ ಮಾತು ಕೂಡ ಮುಂದೆ ಸತ್ಯವಾಗುವ ಎಲ್ಲಾ ಲಕ್ಷಣಗಳು ಗೋಚರಿಸುತ್ತವೆ. ಇತ್ತೀಚಿನ ದಿನಮಾನಗಳಲ್ಲಿ ಬಿಸಿ ಗಾಳಿಯಿಂದ/ ಸೂರ್ಯನ ಪ್ರಖರ ಬಿಸಿಲಿನಿಂದ ಸತ್ತವರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿರುವುದನ್ನು ಕಾಣಬಹುದು. ಅಲ್ಲದೆ 'ಓಝೋನ್' ಪದರ ಸಂಪೂರ್ಣ ಹಾಳಾಗುವ ಮುನ್ಸೂಚನೆಯನ್ನು ಈ ಕಾಲಜ್ಞಾನವು ನೀಡುತ್ತದೆ. ವಿಜ್ಞಾನದ ಪ್ರಕಾರ ಓಝೋನ್ ಪದರ ನಾಶವಾದರೆ ಭೂಮಿಯಲ್ಲಿರುವ ಸಕಲ

ಜೀವರಾಶಿಗಳು ಸುಟ್ಟು ಹೋಗುವ ಕಾಲ ಹತ್ತಿರವಾಗುತ್ತಿದೆ ಎನ್ನುವ ಸಂಗತಿಗಳನ್ನು ಇವರ ಮೌಖಿಕ ಸಾಹಿತ್ಯ ತಿಳಿಸುವ ಕಾರ್ಯ ಮಾಡುತ್ತದೆ.

೫.೫. ವಿಜ್ಞಾನ

ಮತ್ತೇ ಮುಂದಾ ಕಾಲದಾಗ ಮತ್ತೇನೆಂತಲೂ ಕೇಳ್ತೀರಿ ನೋಡಿರಣ್ಣ
ಚಂದ್ರನ ಮೇಲೆ ಕರೆ ಚುಕ್ಕಿ ಕುಳಿಚಿತು(ಕುಳಿತೀತು) ನೋಡಿರಣ್ಣ
ಚಂದ್ರನ ಮೇಲೆ ಕರೆ ಚುಕ್ಕಿ ಕುಂದ್ರಲೇ ಬೇಕ್ರೀ
ಚಂದ್ರನ ಮೇಲೆ ಕರೆ ಚುಕ್ಕಿ ಕುಳಿಚಿತು(ಕುಳಿತಿತು) ಕೇಳಿರಣ್ಣ
ಆ ಚುಕ್ಕಿ ಕುಳಿತಾಗ ಕುರುವೇನೇಂದು ಕೇಳಿರಣ್ಣ
ಗರ್ಭಿಣಿ ಬಾಲೆಯರಿಗೆ ಮಲೆಹುಣ್ಣು ಮುಂದ್ರಯ್ಯ ನೋಡಿರಣ್ಣ
ಗರ್ಭಿಣಿ ಬಾಲೆಯರಿಗೆ ಮಲೆಹುಣ್ಣು ಮುಂದ್ರಯ್ಯ ಕೇಳಿರಣ್ಣ **–ಬಾಲಬಸವ ತುಮನೆಪ್ಪ**

ಬಾಲಬಸವ ತುಮನೆಪ್ಪ ಹಾಡುವ ಈ ಕಾಲಜ್ಞಾನವು ವಿಜ್ಞಾನ ವಿಷಯಕ್ಕೆ ಸಂಬಂಧಿಸಿದಾಗಿದೆ. ಜನಪದರಿಗೆ ಚಂದ್ರ ದೈವವಾಗಿ ಕಂಡರೆ ವಿಜ್ಞಾನಿಗಳಿಗೆ ಅದೊಂದು ಉಪಗ್ರಹವಷ್ಟೇ. ಜನಪದರ ನಂಬಿಕೆಯಲ್ಲಿ ಚಂದ್ರನು ದೈವದ ಸ್ವರೂಪ. ಆತನ ಮೇಲೆ ಸಾಮಾನ್ಯ ಮನುಷ್ಯ ಹೋಗಿ ಚಂದ್ರ ಲೋಕದಲ್ಲಿ ಇದ್ದು ಬರುತ್ತಾನೆ ಎಂಬುವುದು ನಂಬಲು ಸಾಧ್ಯವಾಗದ ಮಾತು. ಆದರೆ ಮನುಷ್ಯ ತನ್ನ ಬುದ್ಧಿವಂತಿಕೆಯಿಂದಾಗಿ ತಾನು ಧರಿಸಿರುವ ವಸ್ತ್ರದ ಸಹಾಯದಿಂದ ಚಂದ್ರನ ಮೇಲೆ ಹೋಗಿ ಹಿಂದಿರುಗಿ ಬಂದಿರುವುದು ವೈಜ್ಞಾನಿಕವಾಗಿ ಸತ್ಯವಾಗಿದೆ. ಮನುಷ್ಯನು ಚಂದ್ರನ ಮೇಲೆ ಉಪಗ್ರಹದ ಸಹಾಯದಿಂದ ಹೋದಾಗ ಉಪಗ್ರಹವು ಕರೆಚುಕ್ಕಿಯಂತೆ ಕಾಣುತ್ತದೆ. ಉಪಗ್ರಹವು ವೈಜ್ಞಾನಿಕ ಲೋಕದಲ್ಲಿ ಕ್ರಾಂತಿಯುಂಟು ಮಾಡಿದ ಸಂಗತಿಯಾಗಿದೆ. ಚಂದ್ರಲೋಕದ ಪ್ರಯಾಣಕ್ಕೆ ಬಳಸುವ ಉಪಗ್ರಹವು ಅದರ ಮೇಲೆ ಇಳಿಯುತ್ತದೆ. ಅದೇ ಕರೆಚುಕ್ಕಿ ಎನ್ನುವ ಗೂಢ ಅರ್ಥದಲ್ಲಿ ಈ ನುಡಿಯನ್ನು ಬಳಸಿದ್ದಾರೆ. ಸಾಮಾನ್ಯ ಜನತೆಗೆ ಚಂದ್ರಯಾನದ ಕಲ್ಪನೆಯನ್ನು ಉಂಟುಮಾಡುವ ಉದ್ದೇಶ ಇವರಿಗೆ ಇದೆ. ಅಂದರೆ ಜಗತ್ತು ದೇವರ ಮೇಲೂ ಸವಾರಿ ಮಾಡುವವರು ಮುಂದೆ ಬರುತ್ತಾರೆ ಎನ್ನುತ್ತಾರೆ.

ಮುಂದುವರಿದು ವಿಜ್ಞಾನಕ್ಕೆ ಸಂಬಂಧಿಸಿದಂತೆ ಜಗತ್ತಿನಲ್ಲಿ ಮುಂದೆ ಗರ್ಭಿಣಿ ಬಾಲೆಯರಿಗೆ ಮಲೆ ಹುಣ್ಣು ಬರುತ್ತವೆ ಎಂದು ಮುನ್ಸೂಚನೆಯನ್ನು ನೀಡುತ್ತಾರೆ. ಈಗ ಅವರ ನುಡಿಗಳಿಗೆ ಸಾಕ್ಷಿ ಎನ್ನುವಂತೆ 'ಸ್ತನ ಕ್ಯಾನ್ಸರ್' ಎನ್ನುವ ರೋಗವು ಮಹಿಳೆಯರ ರೋಗಕ್ಕೆ ಸಂಬಂಧಿಸಿದ್ದಾಗಿದೆ. ಸ್ತನ ಕ್ಯಾನ್ಸರ್‌ಗೆ ಔಷಧಿ ಕಂಡುಹಿಡಿಯುವುದು ತಡವಾಗುವುದು ಎನ್ನುವ ಮಾತುಗಳು ವಿಜ್ಞಾನಲೋಕಕ್ಕೆ ಸಂಬಂಧಿಸಿದಾಗಿದೆ. ಅವರ ತಮ್ಮ ನುಡಿಯಲ್ಲಿ 'ಹುಣ್ಣು' ಕರೆಚುಕ್ಕಿ ಮುಂತಾದ ರೂಪಕಗಳನ್ನು

ಬಳಸಿಕೊಂಡು ಸಾಮಾನ್ಯ ಜನತೆಗೆ ತಿಳಿಹೇಳುವ ಪರಿಪಾಟವನ್ನು ಬಾಲಬಸವರು ರೂಢಿಸಿಕೊಂಡಿದ್ದಾರೆ. ಜ್ಞಾನ ಮತ್ತು ವಿಜ್ಞಾನಕ್ಕೆ ಸಂಬಂಧಿಸಿದ ಕೆಲವು ಬದಲಾವಣೆಗಳನ್ನು ನಾವು ಇವರ ಕಾಲಜ್ಞಾನದಲ್ಲಿ ಗುರುತಿಸಬಹುದು. ಓದು ಬರೆಯಲು ಬಾರದೆ ಇರುವ ಈ ಬಾಲಬಸವರು ವಿಜ್ಞಾನ ಸಂಗತಿಗಳನ್ನು ಹೇಗೆ ಹೇಳುತ್ತಾರೆ ಎನ್ನುವ ಪ್ರಶ್ನೆ ಈಗಲೂ ನಮ್ಮನ್ನು ಕಾಡಬಹುದು. ಬಾಲಬಸವರು ಗ್ರಹಗತಿ ವಿಚಾರಗಳನ್ನು ವ್ಯಾಪಾರಕ್ಕೆ ಬಳಸಿಕೊಳ್ಳದೆ ಜನತೆಯನ್ನು ಎಚ್ಚರಿಸುವ ರೀತಿಯಲ್ಲಿ ಭವಿಷ್ಯತ್ತನ್ನು ತಮ್ಮ ಕಾಲಜ್ಞಾನದಲ್ಲಿ ನಿರೂಪಿಸುವ ಕಾರ್ಯ ಮಾಡಿಕೊಂಡು ಬಂದಿದ್ದಾರೆ.

ಬಾಲಬಸವರು ವಚನ ಚಳುವಳಿಯ ಸ್ಥಾವರಕ್ಕೆ ಅಂಟಿಕೊಳ್ಳದೆ ಜಂಗಮತ್ವಕ್ಕೆ ಶರಣಾಗಿ ಅವರು ಕಾಯಕತತ್ವವನ್ನು ಇಂದಿಗೂ ಜೀವಂತವಾಗಿಸಿಕೊಂಡು ಬಂದಿದ್ದಾರೆ. ಅವರ ಕಾಲಜ್ಞಾನದಲ್ಲಿ ಬಸವಣ್ಣನನ್ನು ಪುನರ್‌ಸೃಷ್ಟಿ ಮಾಡುವ ಸಂದರ್ಭಗಳನ್ನು ಹೀಗೆ ಹೇಳುತ್ತಾರೆ.

೫.೬. ವಚನ ಚಳವಳಿ

ಮಂಗಳವಾರ ದಿವುಸ ಬೆಣ್ಣೆ ಎಳಲೆ ಬೇಕು ಕೇಳಿರಣ್ಣ
ಚನ್ನಬಸವಣ್ಣನವರೇ ಅಲ್ಲಿಗೆ ಹುಟ್ಟುಲು ಬೇಕು ನೋಡಿರಣ್ಣ
ಚನ್ನಬಸವಣ್ಣನವರೇ ಅಲ್ಲಿಗೆ ಹುಟ್ಟುಲು ಬೇಕು ಕೇಳಿರಣ್ಣ
ಬಸವಣ್ಣ ಹುಟ್ಟಿದುಕ ಕುರುವೇನೆಂದಿರೀ ಕೇಳಿರಣ್ಣ
ಕೈಯಾಗ ಹಿಡಿದಿರುವ ವಣಕಿ ಹಾವಾಗಿ ಹರಿದಾಡಬೇಕು ನೋಡಿರಣ್ಣ
ಕೈಯಾಗ ಹಿಡಿದಿರುವ ವಣಕಿ ಹಾವಾಗಿ ಹರಿದಾಡಬೇಕು ಕೇಳಿರಣ್ಣ
ಚನ್ನಬಸವಣ್ಣ ಹುಟ್ಟಿದನೆಂದು ಡಂಗುರವ ಹೊಡೆಯಲೆ ಬೇಕು ಕೇಳಿರಣ್ಣ
ಚನ್ನಬಸವಣ್ಣ ಹುಟ್ಟಿದನೆಂದು ಡಂಗುರವ ಹೊಡೆಯಲೆ ಬೇಕು ನೋಡಿರಣ್ಣ
ಚನ್ನಬಸವಣ್ಣ ಕಲಿಗೆ ಬರುತ್ತಾರಯ್ಯೊ ಕೇಳಿರಣ್ಣ
ಚನ್ನಬಸವಣ್ಣ ಕಲಿಗೆ ಬರುತ್ತಾರಯ್ಯೊ ನೋಡಿರಣ್ಣ
ಬಸವಣ್ಣ ಬರುವಾಗ ಹೊಸಗಾಲಿ ಆಗುತ್ತಾವ ಕೇಳಿರಣ್ಣ
ಶಿಶುವೇ ಶಿರಿಯೇ ಪಶುವಾಗಿ ಮಾತಾಡ ಬೇಕು ನೋಡಿರಣ್ಣ
ಬಸವಣ್ಣ ಬರುವಾಗ ನೋಡ್ರೀ
ಶಿಶುವೇ ಶಿರಿಯೇ ಪಶುವಾಗಿ ಮಾತಾಡ ಬೇಕು ಕೇಳಿರಣ್ಣ
ಕಣ್ಣಿಲ್ಲದ ಕುರುಡಾಗೆ ಜ್ಯೋತಿ ಬರಬೇಕು ಕೇಳಿರಣ್ಣ
ಕೊಲ್ಲು ಚಿಗಿಯಬೇಕು ಬಲ್ಲು ಹೈನಾಗ ಬೇಕು ಕೇಳಿರಣ್ಣ **–ಬಾಲಬಸವ ತುಮನೆಪ್ಪ**

ಬಾಲಬಸವರ ಈ ನುಡಿಯಲ್ಲಿ ಮುಂದೊಂದು ದಿನ ಮತ್ತೆ ಶರಣರು ಭೂಮಿಗೆ ಬರುತ್ತಾರೆ ಎನ್ನುವ ಆಶಯವನ್ನು ಕಾಣಬಹುದಾಗಿದೆ. ಕಲಿಗೆ ಬಸವಣ್ಣ ಮತ್ತೆ ಹುಟ್ಟಿ ಬರುತ್ತಾನೆ ಎಂದು ಹೇಳುವ ಅವರ ನುಡಿಗಳು ಬಸವಣ್ಣ ಕಲಿಗೆ ಬರುವ ಕಾಲದಲ್ಲಿ ಕಲಿಯಲ್ಲಿ ಕೆಲವೊಂದು ಚಮತ್ಕಾರಗಳು ಜರುಗುತ್ತವೆ. ಹಾಗೆ ಅಂತಹ ಚಮತ್ಕಾರಗಳು ಜರುಗಿದರೆ ಬಸವಣ್ಣ ಕಲಿ ಬಂದಿದ್ದಾನೆ ಎಂದು ಅರ್ಥ ಮಾಡಿಕೊಳ್ಳಬೇಕು ಎನ್ನುತ್ತಿದ್ದಾರೆ. ಆ ಸಮಯದಲ್ಲಿ ಕಲಿಯುಗದಲ್ಲಿ ಜರುಗುವ ಚಮತ್ಕಾರಗಳು ಯಾವುದು ಎಂದರೆ ನೀರಿನಲ್ಲಿ ಬೆಣ್ಣೆ ಮುಳಗಬೇಕು, ಕೈಯಾಗ ಹಿಡಿದಿರುವ ಒನಕೆ ಹಾವಾಗಿ ಹರಿದಾಡಬೇಕು, ಬಸವಣ್ಣ ಕಲಿಗೆ ಬರುವಾಗ ಹೊಸಗಾಲಿ ಆಗುತ್ತಾನೆ. ಶಿಶುವೇ ಶಿರಿಯೇ ಪಶುವಾಗಿ ಮಾತಾಡುತ್ತಾವೆ ಮುಂತಾದ ಕುರುಹುಗಳನ್ನು ರೂಪಕದ ಮೂಲಕ ಹೇಳುವ ಅವರ ಮಾತಿನಲ್ಲಿ ಜಗತ್ತಿನಲ್ಲಿ ಬದಲಾವಣೆ ಕಾಣಬೇಕು, ಅದಕ್ಕೆ ಬಸವಣ್ಣ ಮತ್ತೆ ಹುಟ್ಟಿ ಬರಬೇಕು ಎನ್ನುವ ಆಶಯ ಬಾಲಬಸವರ ನುಡಿಗಳಲ್ಲಿ ಕಾಣಿಸುತ್ತದೆ.

೧೨ನೇ ಶತಮಾನದ ಬಸವಣ್ಣ ಮುಂದೆ ಕೊಡೇಕಲ್ಲು ಬಸವಣ್ಣನಾಗಿ, ಮಂಟೇಸ್ವಾಮಿಯಾಗಿ ಪ್ರತಿರೂಪ ತಾಳಿದರು ಎನ್ನುವ ವಿದ್ವಾಂಸರ ಅಭಿಪ್ರಾಯವನ್ನು ನಾವು ಇಲ್ಲಿಗೆ ಸಮೀಕರಿಸಿ ನೋಡಿದಾಗ ಚನ್ನಬಸವಣ್ಣನ ರೀತಿಯಲ್ಲಿ ಕೊಡೇಕಲ್ಲು ಬಸವಣ್ಣನನ್ನು ಕಾಲಜ್ಞಾನ ಮತ್ತು ಪವಾಡಗಳಿಂದ ಹೆಸರು ಮಾಡಿದ್ದಾನೆ. ಹಾಗೆಯೇ ಮಂಟೇಸ್ವಾಮಿಗಳೂ ಕೂಡ ತಮ್ಮ ಪವಾಡ ಮತ್ತು ಕಲಿ ಸಾರುವ(ಕಾಲಜ್ಞಾನ ಹೇಳುವ) ಮೂಲಕವೇ ಹೆಚ್ಚು ಹೆಚ್ಚು ಜನಪ್ರಿಯರಾಗಿದ್ದಾರೆ. ಈ ಎರಡು ಸಂಗತಿಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಪವಾಡ ಮತ್ತು ಕಾಲಜ್ಞಾನಗಳು ಬಾಲಬಸವರು ಹೇಳಿದಂತೆ ಪುನರ್‌ಸೃಷ್ಟಿಯಾಗುವುದು ೧೫, ೧೬ನೇ ಶತಮಾನದಲ್ಲಿ. ಹಾಗಾಗಿ ನಿಂತು ಹೋದ ವಚನ ಚಳುವಳಿ ಮತ್ತೆ ಸಾಂಸ್ಕೃತಿಕ ನಾಯಕರ ಮೂಲಕ ಈ ಕಾಯಕ ಚಳುವಳಿ ಮುಂದುವರೆದಿರುವುದು ತಾವು ಕಾಣಬಹುದು. ಪಂಚಗಣಾಧೀಶರು, ಮರುಳಸಿದ್ಧ, ಮೈಲಾರ, ಮಂಟೇಸ್ವಾಮಿ, ಶಿವಯೋಗಿ, ಕೈವಾರ ನಾರಾಯಣ ಹೀಗೆ ಹತ್ತು ಹಲವಾರು ಸಾಂಸ್ಕೃತಿಕ ನಾಯಕರ ಮತ್ತೆ ನಿಂತು ಹೋದ ವಚನ ಚಳುವಳಿಯನ್ನು ಮುಂದುವರಿಸಿ ಬಂದವರು. ಅದರ ವಿಕಾಸ ಎಷ್ಟರಮಟ್ಟಿಗೆ ಫಲವಾಗಿತ್ತು ಎನ್ನುವುದು ತಿಳಿದಿಲ್ಲ. ಆದರೆ ಆಯಾ ಕಾಲದಲ್ಲಿ ಅದರ ಪ್ರಭಾವವನ್ನು ನಾವು ಕಾಣಬಹುದು.

೫.೭. ಸಾಮಾಜಿಕ ವಿಡಂಬನೆ

ಕಾಲಜ್ಞಾನವು ಒಂದು ರೀತಿಯ ಭವಿಷ್ಯತ್ತನ್ನು ಹೇಳುವ ಜ್ಞಾನದ ಪ್ರಕಾರವಾದರೂ, ಅದು ಜೋತಿಷ್ಯ, ಪಂಚಾಂಗಕ್ಕಿಂತ ಭಿನ್ನವಾಗಿದೆ. ಕಾಲಜ್ಞಾನದಲ್ಲಿ ಮುಂದಾಗುವ ಘಟನೆಗಳ ಮುನ್ಸೂಚನೆ ನೀಡುತ್ತಾರೆಯೇ ಹೊರತು ಅದು ವ್ಯಕ್ತಿಗತವಾಗಿರುವುದಿಲ್ಲ. ಬಾಲಬಸವರ ಕಾಲಜ್ಞಾನವು ಸಮಾಜ ಮುಖಿಯಾಗಿರುತ್ತದೆ. ಇವರ ಮೌಖಿಕ ಸಾಹಿತ್ಯವು ವೈಯಕ್ತಿಕ ವಿಷಯಕ್ಕೆ ಸಂಬಂಧಿಸಿದ್ದಲ್ಲ, ಅದು ಸಮಾಜಕ್ಕೆ ಸಂಬಂಧಪಟ್ಟದಾಗಿರುತ್ತದೆ. ಜೋತಿಷ್ಯ, ಪಂಚಾಂಗವು ವ್ಯಕ್ತಿಕೇಂದ್ರಿತವಾಗಿರುವುದರಿಂದ,

ಮೇಲ್ವರ್ಗದ ಪುರೋಹಿತರು ವ್ಯಕ್ತಿಗಳಲ್ಲಿ ಭಯ ನಿರ್ಮಾಣ ಮಾಡಿ ಜನತೆಯಿಂದ ಹಣ ಮಾಡುವ ವಿಷಯವನ್ನು ಕಂಡುಕೊಂಡಿದ್ದಾರೆ. ಮೇಲ್ವರ್ಗದ ಈ ಹುನ್ನಾರವನ್ನು ಕೆಳವರ್ಗದಿಂದ ಅದರಲ್ಲೂ, ದಲಿತ ಸಮುದಾಯದಿಂದ ಬಂದಿರುವ ಬಾಲಬಸವರು ಅವರಿಗೆ ಪ್ರತಿರೋಧ ನೀಡುವಂತೆ ಈ ನುಡಿಗಳನ್ನು ಸಾರುತ್ತಾರೆ.

ಪಂಚಾಂಗ ನೋಡಿ ನೀವು ಚಿಂತಿ ಮರಿಯಾಲುಬ್ಯಾಡ್ರೀ ನೋಡಿರಣ್ಣ
ಪಂಚಾಂಗ ನೋಡಿ ನೀವು ಚಿಂತಿ ಮರಿಯಾಲುಬ್ಯಾಡ್ರೀ ಕೇಳಿರಣ್ಣ
ಪುಸ್ತಕ ಪುರದವರು ಎದ್ದು ಬೊಗಳುವ ನಾಯಿಯಂತೆ ನೋಡಿರಣ್ಣ
ಪುಸ್ತಕ ಪುರದವರು ಎದ್ದು ಬೊಗಳುವ ನಾಯಿಯಂತೆ ಕೇಳಿರಣ್ಣ
ಹೊತ್ತಿಗೆ ಹೇಳುವರೆಲ್ಲಾ ಕತ್ತಿಗಳಾಗಲೇ ಬೇಕು ನೋಡಿರಣ್ಣ
ಹೊತ್ತಿಗೆ ಹೇಳುವರೆಲ್ಲಾ ಕತ್ತಿಗಳಾಗಲೇ ಬೇಕು ಕೇಳಿರಣ್ಣ
ಜೋತಿಷ್ಯ ಪಂಚಾಂಗ ಸಟೆಯಾಗಿ ಹೋಗುತ್ತಾವ ಕೇಳಿರಣ್ಣ
ನಾಯಿ ನಂಬಲೂ ಬೇಕು ದೇವ್ರ ನಂಬಲೂ ಬ್ಯಾಡ್ರೀ ನೋಡಿರಣ್ಣ
ದೇವ್ರ ಆಯ್ಕೆ ಹಿಂದಾತುರ್‍ರೀ
ನಾಯಿ ನಂಬಲೂ ಬೇಕು ದೇವ್ರ ನಂಬಲೂ ಬ್ಯಾಡ್ರೀ ಕೇಳಿರಣ್ಣ
ಸತ್ಯವುಳ್ಳ ದೇವ್ರೆಲ್ಲಾ ಬರೀ ಬೆತ್ತಲೆ ತಿರುಗುತ್ತಾವ ನೋಡಿರಣ್ಣ
ಸತ್ಯವುಳ್ಳ ದೇವ್ರೆಲ್ಲಾ ಬರೀ ಬೆತ್ತಲೆ ತಿರುಗುತ್ತಾವ ಕೇಳಿರಣ್ಣ
ವಡ ಮೂಡಿದ ದೇವ್ರೆಲ್ಲಾ ಓಡಾಡೊಕ್ಕೆ ನಿಲ್ಲುತ್ತಾವ ನೋಡಿರಣ್ಣ-**ಬಾಲಬಸವ ತುಮನೆಪ್ಪ**

ವೇದ ಭೂತಗಳು ಹೇತು ಹೋಗ್ವವು
ಅಷ್ಟಮ ಜೋತಿಷ್ಯ ನಷ್ಟವಾಗ್ವದು
ರೊಟ್ಟಿ ಕಾಣದೆ ಹೊಟ್ಟಿ ತುಂಬ್ವದು
ರಟ್ಟಮತಗಳು ಕೆಟ್ಟವಣ್ಣ!
ಸತ್ಯ ಶರಣರು ಸಾರುತಾರಣ್ಣ-**ಬಾಲಬಸವ ಶಿವಪ್ಪ, ಹರ್ಲಾಪುರ**

ಎನ್ನುವ ಬಾಲಬಸವರ ಮಾತುಗಳಲ್ಲಿ ಸಾಮಾನ್ಯವಾಗಿ ಜನತೆಗೆ ನೀತಿಬೋಧನೆ ಮತ್ತು ಅನೈತಿಕತೆಯಿಂದ ಜನತೆಯನ್ನು ಎಚ್ಚರಿಸುವ ಸಂದೇಶಗಳು ಈ ಕಾಲಜ್ಞಾನದಲ್ಲಿವೆ. ವರ್ತಮಾನದಲ್ಲಿ ನಡೆಯುವ ಸಂಗತಿಯನ್ನು ಭವಿಷ್ಯ, ಪಂಚಾಂಗ ಎಂದು ಪುರೋಹಿತಶಾಹಿ ವ್ಯವಸ್ಥೆಯು ತನ್ನ ಆರ್ಥಿಕ ಸಬಲತೆಗಾಗಿ ಮುಗ್ಧ ಜನತೆಯ ನಂಬಿಕೆಯನ್ನು ಬಂಡವಾಳವನ್ನಾಗಿಸಿಕೊಂಡಿದ್ದಾರೆ.

ಮೇಲ್ವರ್ಗದ ಜನತೆಯ ಈ ಹುನ್ನಾರವನ್ನು ಬಾಲಬಸವರು ಪ್ರತಿರೋಧಿಸಿರುವುದು ಇವರ ಕಾಲಜ್ಞಾನದಲ್ಲಿ ಕಾಣಬಹುದು.

ಬಾಲಬಸವರು ಮುಂದುವರಿದು ದೇವರ ಹೆಸರಿನಲ್ಲಿ ಸಮಾಜದಲ್ಲಿನ ಪರಂಪರೆಯು ನಂಬಿಕೆ ಆಚರಣೆಗಳನ್ನು ಜನತೆಯ ತಲೆಯಲ್ಲಿ ತುಂಬಿ ಮೇಲ್ವರ್ಗದವರು ನಡೆಸುವ ವಂಚನೆ ಮೋಸಗಳನ್ನು ಬಯಲಿಗೆ ಎಳೆಯುತ್ತಾರೆ. ದೇವ ಮಾನವರೆಂದು ತಮ್ಮನ್ನು ತಾವೇ ಕರೆದುಕೊಂಡು ತಿರುಗಾಡುವ ದೈವಗಳನ್ನು ವಿಡಂಬಿಸುವುದರ ಮೂಲಕ ದೇವರ ಆಯ್ಕೆ ಕುರಿತು ಈ ಮೇಲಿನ ನುಡಿಗಳನ್ನಾಡುತ್ತಾರೆ. ಮೇಲ್ವರ್ಗದವರ ಪರಂಪರೆಯ ಹುನ್ನಾರವನ್ನು ಬಾಲಬಸವರು ಕಾಲಜ್ಞಾನದ ಮೂಲಕ ಸಾಮಾನ್ಯ ಜನತೆಗೆ ಅರ್ಥವಾಗುವ ಆಡುಮಾತಿನ ಧಾಟಿಯಲ್ಲಿ ತಿಳಿ ಹೇಳುವ ಮಾದರಿಯನ್ನು ಅನುಸರಿಸುತ್ತಾರೆ. ಸಮಾಜದಲ್ಲಿನ ಜನತೆಯನ್ನು ಈ ಮೋಸ, ಮಾಯೆಯಿಂದ ಎಚ್ಚರಿಸುವ ಈ ಬಾಲಬಸವರು ತಮ್ಮ ಪೂರ್ವಜರು ನಂಬಿದ ಕಾಯಕ ತತ್ವವು ಎಲ್ಲ ದೇವರಿಗಿಂತ ಹೆಚ್ಚು ಎಂದು ಸಾರಿ ಹೇಳುತ್ತಾರೆ.

ಬಾಲಬಸವರು ಮಾದಿಗ ಕುಲದಿಂದ ವೀರಶೈವ ಪಂಥವನ್ನು ಅನುಸರಿಸಿದವರು. ತಾವು ವೀರಶೈವರಂತೆ ಲಿಂಗಧಾರಣೆಯಾದರೂ ಶಿವಶರಣರಂತೆ ಜೀವಿಸಿದವರು. ಜಂಗಮ ತತ್ವವನ್ನು ಪಾಲಿಸಿದವರು. ಆದರೂ ತಾವು ತಮ್ಮನ್ನು ಮತ್ತು ಜಂಗಮರನ್ನು ವಿಡಂಬಿಸುತ್ತಾ ಪ್ರಶ್ನೆ ಮಾಡುತ್ತಾರೆ. ಜಾತಿ, ಮಾಂಸ ಮತ್ತು ಜಂಗಮ ಈ ಮೂರು ಸಂಗತಿಗಳು ಒಂದಕ್ಕೊಂದು ಸೇರಿಕೊಳ್ಳುತ್ತವೆ. ಮಾಂಸ ತಿನ್ನೋರು ಮರುಗು ಹಾಕುವ ಸಂಗತಿ, ಮಾಂಸ ತಿನ್ನದೆ ಆಚಾರ ಪಾಲಿಸಿಕೊಂಡು ಬಂದವರು ಮಾಂಸ ತಿನ್ನುವ ಸಂಗತಿಯನ್ನು ಬಾಲಬಸವರ ಕಾಲಜ್ಞಾನ ಈ ರೀತಿಯಾಗಿ ವಿಡಂಬಿಸುತ್ತದೆ.

ಜಂಗಮರೆಲ್ಲಾರು ಲಿಂಗಬಿಟ್ಟು ಉಂಬುತ್ತಾರ ನೋಡಿರಣ್ಣ
ಜಂಗಮರೆಲ್ಲಾರು ಲಿಂಗಬಿಟ್ಟು ಉಂಬುತ್ತಾರ ಕೇಳಿರಣ್ಣ
ಲಿಂಗಕಟ್ಟಿದವರೂ ಮಾಂಸವ ಸವೆದಾರು ನೋಡಿರಣ್ಣ
ಲಿಂಗಕಟ್ಟಿದವರೂ ಮಾಂಸವ ಸವೆದಾರು ಕೇಳಿರಣ್ಣ
ಮಾಂಸವ ತಿನ್ನುವರೆಲ್ಲಾರು ಮರುಗು ಹಾಕಿ ತಿನ್ನುತ್ತಾರೆ ನೋಡಿರಣ್ಣ
ಮಾಂಸವ ತಿನ್ನುವರೆಲ್ಲಾರು ಮರುಗು ಹಾಕಿ ತಿನ್ನುತ್ತಾರೆ ಕೇಳಿರಣ್ಣ
ಆಚಾರವೆಂಬೋದು ಹಳ್ಳಕೂಡಿ ಹೊಯಿತ್ತು ನೋಡಿರಣ್ಣ
ಆಚಾರವೆಂಬೋದು ಹಳ್ಳಕೂಡಿ ಹೊಯಿತ್ತು ಕೇಳಿರಣ್ಣ
ಕಲಿ ಪ್ರಪಂಚವೆಲ್ಲ ಮೂರು ಜಾತಿಗಳಾಗಬೇಕು ನೋಡಿರಣ್ಣ

ಕುಲವೇ ಹದಿನೆಂಟು ಜಾತಿಕೂಡ ಉಣ್ಣಲೇಬೇಕು ಕೇಳಿರಣ್ಣ
ಕುಲವೇ ಹದಿನೆಂಟು ಜಾತಿಕೂಡ ಉಣ್ಣಲೇಬೇಕು ನೋಡಿರಣ್ಣ
ತ್ಯಾಗ ಮುಗಿಲಾಗಿ ಕಲಿಯುಗ ಕೆಡುತೈತೇ ನೋಡಿರಣ್ಣ
ಕಲಿಯುಗ ಕೆಟ್ಟು ಹೊಯಿತ್ರೀ
ತ್ಯಾಗ ಮುಗಿಲಾಗಿ ಕಲಿಯುಗ ಕೆಡುತೈತೇ ಕೇಳಿರಣ್ಣ–**ಬಾಲಬಸವ ತುಮನೆಪ್ಪ**

ಸಮಾಜದ ನಡೆಯನ್ನು ವಿಡಂಬಿಸುವ ಈ ಕಾಲಜ್ಞಾನ ಜಂಗಮತತ್ವದ ನಿರಾಕರಣೆಯನ್ನು, ಆಹಾರಸಂಸ್ಕೃತಿಯ ಮೇಲಾಗುವ ದಬ್ಬಾಳಿಕೆಯನ್ನು ಸೂಕ್ಷ್ಮವಾಗಿ ವಿವರಿಸುತ್ತದೆ. ಮಾಂಸ ತಿನ್ನುವ ಕಾರಣಕ್ಕೆ ದಲಿತರನ್ನು ಊರ ಹೊರಗಿಡುವವರೇ ಮುಂದೆ ಒಂದು ದಿನ ಮಾಂಸ ತಿನ್ನುತ್ತಾರೆ ಎನ್ನುವ ಸಂಗತಿ, ಅವರ ನಡೆ ನುಡಿಗಳಲ್ಲಾಗುವ ಬದಲಾವಣೆಗಳನ್ನು ಪ್ರತಿನಿಧಿಸುತ್ತದೆ. ಜಾತಿ ವಿಷಯವಾಗಿ ಈ ಮೇಲ್ವರ್ಗದವರು ಮಾಡುವ ಶೋಷಣೆಗೆ ಆಹಾರ ಕಾರಣವಾದರೆ, ನೀವು ಮುಂದೆ ಅದೇ ಆಹಾರ ತಿನ್ನುತ್ತೀರಿ ಆಗ ನಿಮ್ಮ ಜಾತಿ ಎಲ್ಲಿಗೆ ಬಂತು, ನೀವು ಎಷ್ಟು ಆಚಾರ ಮಾಡಿದರೂ ಮುಂದೆ ಕುಲ ಹದಿನೆಂಟು ಜಾತಿಗಳು ಒಂದುಗೂಡಿ ತಿನ್ನುವ ಕಾಲ ಬರುತ್ತದೆ ಎಂದ ಬಾಲಬಸವರ ಮಾತು ಈಗ ಸತ್ಯವಾಗುತ್ತಿದೆ.

೫.೮. ಮಹಿಳೆ

ಕಾಲಜ್ಞಾನವು ಪುರುಷಕೇಂದ್ರಿತ ನೆಲೆಯಲ್ಲಿಯೇ ಇರುವುದನ್ನು ಸೂಕ್ಷ್ಮವಾಗಿ ಗಮನಿಸಿದಾಗ ಮಾತ್ರ ನಮಗೆ ತಿಳಿದುಬರುತ್ತದೆ. ಸಮಾಜದಲ್ಲಿ ಮುಂದೆ ಮಹಿಳೆ ತೆಗೆದುಕೊಳ್ಳುವ ನಿರ್ಧಾರಗಳು ಸಮಾಜದಲ್ಲಿ ಸಂಸಾರದ ಸಂಬಂಧವನ್ನು ಹಾಳುಮಾಡುತ್ತವೆ, ಅದರಿಂದ ಸಂಬಂಧಗಳಿಗೆ ಬೆಲೆ ಇಲ್ಲದಂತೆ ಆಗುತ್ತದೆ ಎನ್ನುವ ಸಂಗತಿಗಳು ಮೇಲ್ನೋಟಕ್ಕೆ ಗೋಚರಿಸುತ್ತವೆ. ಆದರೆ ಈ ಮೌಖಿಕ ಸಾಹಿತ್ಯವು ಸುಮಾರು ೧೨ನೇ ಶತಮಾನದಿಂದ ಆರಂಭವಾಗಿ ಇಂದಿನವರೆಗೂ ಜೀವಂತವಿದೆ. ಇದು ನಿರ್ದಿಷ್ಟವಾಗಿ ಯಾವ ಕಾಲಘಟ್ಟದಲ್ಲಿ ಕಾಲಜ್ಞಾನವು ಹಾಡಿನ ಧಾಟಿಗೆ ಬಂದಿದೆ ಎನ್ನುವುದಕ್ಕೆ ಸ್ಪಷ್ಟ ದಾಖಲೆಗಳಿಲ್ಲ. ಆದರೆ ಈ ಕಾಲಜ್ಞಾನ ಹೊರಬರುವ ಸಾಮಾಜಿಕ ಸಂದರ್ಭದಲ್ಲಿ ಮಹಿಳೆಗೆ ಯಾವುದೇ ರೀತಿಯಾದ ಸ್ಥಾನಮಾನಗಳಿರಲಿಲ್ಲ ಎನ್ನುವುದು ತಿಳಿದುಬರುತ್ತದೆ. ಅಂದಿನ ಕಾಲಘಟ್ಟದ ಸಾಮಾಜಿಕ ಒತ್ತಡಗಳು ಈ ಕಾಲಜ್ಞಾನದಲ್ಲಿರುವುದು ಕಾಣಿಸುತ್ತದೆ. ಬಾಲಬಸವರು ಎಂದರೆ ಪುರುಷ ಮತ್ತು ಸ್ತ್ರೀ ಇಬ್ಬರು ಸೇರಿಕೊಂಡಿರುತ್ತಾರೆ. ದೀಕ್ಷೆ ಪಡೆದ ಮಹಿಳೆಯು ಕೂಡ ಕಾಲಜ್ಞಾನವನ್ನು ಸಾರುತ್ತಾಳೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಸಂಗತಿ ಎಂದರೆ ಮಹಿಳೆಯನ್ನು ಕುರಿತಾಗಿ ಅವರ ನಡೆ ನುಡಿಗಳನ್ನು ಪ್ರಶ್ನೆ ಮಾಡುವುದು ಒಬ್ಬ ಮಹಿಳೆಯಾಗಿರುತ್ತಾಳೆ. ಮಹಿಳೆಯು ಕೂಡ ಪುರುಷ ವೇಷಧಾರಿಯಾಗಿರುತ್ತಾರೆ. ಇವರಿಂದಲೇ ಮಹಿಳೆಯ ಕುರಿತು ಸಮಾಜದಲ್ಲಿ ಮುಂದೆ ಆಚಾರ, ಸಂಸ್ಕೃತಿ ಹೇಗೆ ಸ್ಥಾನ ಪಲ್ಲಟವಾಗುತ್ತದೆ ಎನ್ನುವ ನುಡಿಗಳು ಬಾಲಬಸವರ ಮೌಖಿಕ ಸಾಹಿತ್ಯದಲ್ಲಿವೆ.

ದಿನವೇನು ಮಾಡ್ಯವರಯ್ಯ ದುರ್ಗುಣ ಒಳ್ಳೆವಲ್ಲ ನೋಡಿರಣ್ಣ
ಬಿಡ ಬೇಕ್ರೀ ದುರ್ಗುಣ
ದಿನವೇನು ಮಾಡ್ಯವರಯ್ಯ ದುರ್ಗುಣ ಒಳ್ಳೆವಲ್ಲ ಕೇಳಿರಣ್ಣ
ತಂದಿಗೆ ಮಗ ಮನಿಗೆ ಒಬ್ಬಳೆ ಹೆಂಡ್ತಿಯಾಗುತ್ತಾಳೆ ಕೇಳಿರಣ್ಣ
ತಂಗಿಯ ವಡಗೋಡಿ ಸಂಗಮಾಡಿದ ಕರ್ಮ ಕೇಳಿರಣ್ಣ
ಅತ್ತಿಗೆ ಮೈದುನ ಗುತ್ತಿಗೆ ನೆಡೆದಾರೂ ನೋಡಿರಣ್ಣ
ಮೂರೇ ವರುಷದ ಮಗಳೇ ಕೈಸೋತು ಮೈ ನೆರೆದಾಳು ನೋಡಿರಣ್ಣ
ಮೂರೇ ವರುಷದ ಮಗಳೇ ಕೈಸೋತು ಮೈ ನೆರೆದಾಳು ಕೇಳಿರಣ್ಣ –
ಬಾಲಬಸವಿ ಜೋತಮ್ಮ
ಮಾತೆ ಪುತ್ರರ ಸಂಗಮಾಡ್ವರು
ಅಣ್ಣ ತಂಗಿ ಲಗ್ನ ಮಾಡ್ವರು
ವ್ಯಂಗ್ಯದಿನಗಳು ಬಂದ್ವಣ್ಣ–**ಬಾಲಬಸವ ಶಿವಪ್ಪ, ಹರ್ಲಾಪುರ**

ಬಾಲಬಸವರ ಈ ನುಡಿಗಳಲ್ಲಿ ಮನುಷ್ಯ ತನ್ನ ಕಾಲ ಸರಿಯಿಲ್ಲ ಎಂದು ತನ್ನ ತಪ್ಪನ್ನು ಕಾಲದ ಮೇಲೆ ಹಾಕಿ, ಮತ್ತೆ ತಾನು ನಿತ್ಯ ಅದೇ ಕೆಲಸ ಮಾಡುತ್ತಾನೆ. ಅವನ ದುರ್ಗುಣಗಳು ಅವನ ಅವನತಿಗೆ ಕಾರಣವಾಗುತ್ತದೆ ಹೊರತು, ಪಂಚಾಂಗ ಹೇಳುವ ಕರ್ಮ ಫಲದಿಂದಲ್ಲ. ಮಾನವನ ದುರ್ಗುಣಗಳು ಮುಂದೆ ಸಮಾಜದಲ್ಲಿ ಕೆಲವೊಂದು ಬದಲಾವಣೆಗೆ ಕಾರಣವಾಗುತ್ತವೆ. ಮಗನ ಹೆಂಡತಿಯನ್ನು ತಂದೆ ಮದುವೆಯಾಗುವ ಕಾಲ ಬರುತ್ತದೆ. ತಮ್ಮನ ಹೆಂಡತಿಯ ಜೊತೆಗೆ ಅಣ್ಣ ಓಡಿ ಹೋಗುತ್ತಾನೆ. ಅಣ್ಣ ತಂಗಿಯರು ಕೂಡಿ ಸಂಸಾರ ಮಾಡುತ್ತಾರೆ. ಈ ರೀತಿಯಾದ ಘಟನೆಗಳಿಂದ ಸಮಾಜದಲ್ಲಿನ ಕುಟುಂಬಗಳ ಸಂಬಂಧಗಳಿಗೆ ಬೆಲೆ ಇಲ್ಲದಂತಾಗುತ್ತದೆ. ಹಾಗಾಗಿ ಎಚ್ಚರದಿಂದಿರಿ, ಇಂತಹ ಘಟನೆಗಳನ್ನು ಪ್ರೋತ್ಸಾಹಿಸಬೇಡಿ ಎನ್ನುವ ಸಂದೇಶಗಳು ಬಾಲಬಸವರ ಈ ಕಾಲಜ್ಞಾನದಲ್ಲಿವೆ. ಮುಖ್ಯವಾಗಿ ಇಲ್ಲಿ ಗಮನಿಸಬೇಕಾದ ಸಂಗತಿ ಎಂದರೆ ಮಹಿಳೆ. ಮಹಿಳೆಯರ ಸ್ಥಾನಮಾನಗಳಿಗೆ ಯಾವುದೇ ಬೆಲೆ ನೀಡದೆ ಸಮಾಜ ಅವಳನ್ನು ಗುಲಾಮಳಂತೆ ನಡೆಸಿಕೊಂಡಿದೆ. ಈಗಲೂ ಅಂತಹ ಘಟನೆಗಳು ನಮ್ಮ ಮುಂದಿವೆ. ಅವಳಿಗೆ ಮಾನಸಿಕ ಮತ್ತು ದೈಹಿಕ ಹಿಂಸೆ ನೀಡುವ ಈ ಸಮಾಜ ಅವಳಿಗೆ ಮುಕ್ತವಾಗಿ ಜೀವಿಸಲು ಅವಕಾಶವೇ ನೀಡಿಲ್ಲ. ಅವಳನ್ನು ದ್ವಿತೀಯ ದರ್ಜೆಯಾಗಿ ನೋಡುವ ರೀತಿಯಲ್ಲಿಯೇ ಭಾಷಿಕ ನೆಲೆಯಿಂದಲೂ ಕೂಡ ಪುರುಷಕೇಂದ್ರಿತವಾಗಿಯೇ ಕಾಲಜ್ಞಾನದಲ್ಲಿ ಮಹಿಳೆಯನ್ನು ಚಿತ್ರಿಸಲಾಗಿದೆ. ಆದರೆ ಇದನ್ನು ಒಬ್ಬ ಮಹಿಳೆಯೇ ತನಗರಿವಿಲ್ಲದೆ ತಾನೇ ಸಮಾಜದ ಮುಂದೆ ನುಡಿ ಸಾರುವ ಕಾಯಕ ಮಾಡುತ್ತಾಳೆ.

ಬಾಲಬಸವ ಪರಂಪರೆಯಲ್ಲಿ ಶೋಷಣೆಗೆ ಒಳಗಾಗಿರುವ ಮಹಿಳೆ ತನ್ನ ಸಾಮಾಜಿಕ ಜವಾಬ್ದಾರಿಯನ್ನು ನಿರ್ವಹಿಸುವುದರೊಂದಿಗೆ ತನ್ನ ಸುತ್ತಮುತ್ತಲಿನಲ್ಲಿ ಆಗುವ ಅನೇಕ ಸಂಗತಿಗಳನ್ನು ಸೂಕ್ಷ್ಮವಾಗಿ ಗಮನಿಸಿಕೊಂಡು ಅವುಗಳಿಗೆ ಪ್ರತಿಕ್ರಿಯೆ ನೀಡಿದ್ದಾಳೆ. ಬಾಲಬಸವರ ಧಾರ್ಮಿಕ ಸಂಗತಿಗಳು ಅವರ ಹೆಣ್ಣುಮಕ್ಕಳು ಮದುವೆಯಾಗಿ ಸಂಸಾರ ಮಾಡುವುದನ್ನು ತಡೆದಿವೆ. ಅದಕ್ಕೆ ಅನೇಕ ಧಾರ್ಮಿಕ, ಸಾಮಾಜಿಕ ಕಾರಣಗಳಿವೆ. ಇವುಗಳಿಂದ ಬಾಲಬಸವರ ಹೆಣ್ಣುಮಕ್ಕಳು ಮದುವೆಯಾಗದೆ ಬಾಲಬಸವಿಯರಾಗಿ ಜೀವನ ನಿರ್ವಹಿಸುತ್ತಿದ್ದಾರೆ. ಆ ರೀತಿಯಾಗಿರುವುದು ಸಮಾಜದ ದೃಷ್ಟಿಯಲ್ಲಿ ಅವಳು ದೇವದಾಸಿ, ಸೂಳೆ, ಮೈಮಾರಿಕೊಳ್ಳುವವರು ಎಂದು ಜನತೆ ಅದರಲ್ಲೂ ಮೇಲ್ವರ್ಗದ ಪುರುಷರು ಜಾತಿ ಕಾರಣದಿಂದಾಗಿ ಹಾಗೆ ಅವರನ್ನು ಬಂಧಿಸಿದ್ದಾರೆ. ಆದರೆ ವಾಸ್ತವವಾಗಿ ಅವರು ಮೈ ಮಾರಿಕೊಳ್ಳುವಂತಹ ಕೆಲಸಗಳನ್ನು ಮಾಡುವುದಿಲ್ಲ. ಅದು ದೇವರ ಕಾರ್ಯವೆಂದು ನಂಬಿ ತಮ್ಮ ಜೀವನ ನಿರ್ವಹಣೆ ಮಾಡಿಕೊಂಡು ಬಂದಿದ್ದಾರೆ. ಅದೇ ರೀತಿಯಾಗಿ ಮೇಲ್ವರ್ಗದ ಪುರುಷರಿಗೆ ನಮ್ಮ ಮನೆಗೆ ಸೂಳೆ ಮಾಡಲು ಬರುವ ನೀವು ನಿಮ್ಮ ಮನೆಯಲ್ಲಿ ಮುಂದೊಂದು ದಿನ ನಿಮ್ಮ ಮನೆಯ ಹೆಣ್ಣುಮಕ್ಕಳೇ ಸೂಳೆಯರಾಗುತ್ತಾರೆ ಅಂತಹ ದಿನಮಾನಗಳು ಬರುತ್ತವೆ ಎಂದು ಕಾಲಜ್ಞಾನ ನುಡಿದಿದ್ದಾರೆ. ಇದು ಬಾಲಬಸವಿಯ ಪ್ರತಿರೋಧದ ಧ್ವನಿಯಾಗಿ ಗಮನಿಸಬೇಕು.

ಗಂಡವುಳ್ಳ ಗರತಿಯರಿಗೆ ಮರದ ತಾಳಿ ಬರುತ್ತಾವ ನೋಡಿರಣ್ಣ
ಗಂಡವುಳ್ಳ ಗರತಿಯರಿಗೆ ಮರದ ತಾಳಿ ಬರುತ್ತಾವ ಕೇಳಿರಣ್ಣ
ಹಾರರಾರ ಹೆಣ್ಣುಗಳು ಸೂಳೆಯರಾಗಲೇ ಬೇಕು ನೋಡಿರಣ್ಣ
ಹಾರರಾರ ಹೆಣ್ಣುಗಳು ಸೂಳೆಯರಾಗಲೇ ಬೇಕು ಕೇಳಿರಣ್ಣ–**ಬಾಲಬಸವಿ ಜೋತಮ್ಮ**

ಈ ಕಾಲಜ್ಞಾನದಲ್ಲಿ ಸಮಾಜದಲ್ಲಿರುವ ಗರತಿಯ ಬಗ್ಗೆ ಇರುವ ಕಲ್ಪನೆ ಮುಂದೆ ಬದಲಾಗುತ್ತದೆ. ಗರತಿ ಹೆಸರಿನಲ್ಲಿ ಗೃಹಿಣಿ ಮಾಡುವ ಅನಾಚಾರಗಳನ್ನು ರೂಪಕವಾಗಿ ಬಾಲಬಸವರು ಮರದ ತಾಳಿಗೆ ಹೋಲಿಸಿದ್ದಾರೆ. ಸಂಸಾರ ನಿರ್ವಹಿಸುವ ಮಹಿಳೆ ತಾನು ಬದಲಾಗುತ್ತಾಳೆ. ಅದು ಅವಳ ವಿವೇಚನೆಯ ಅಧಿಕಾರವಾದರೆ ಅದರಿಂದ ಸಮಾಜದಲ್ಲಿ ಅನೀತಿ, ಅಶಾಂತಿ ಉಂಟಾಗುತ್ತದೆ. ಹಾಗೆಯೇ ದಲಿತರ ಕೇರಿಗೆ ಹೋಗಿ ಸೂಳೆಯರನ್ನಾಗಿ ಮಾಡುವ ಈ ಸಮಾಜದಲ್ಲಿ ಮುಂದೆ ಬ್ರಾಹ್ಮಣ ಕೇರಿಯಲ್ಲಿಯೂ ಸೂಳೆಯರಾಗುವ ಕಾಲ ಮುಂದಿದೆ ಎಂದಿದ್ದಾರೆ. ನವಸಮಾಜದಲ್ಲಿ ಎಲ್ಲ ವರ್ಗದಲ್ಲಿಯೂ ಕಾರಣವಿದ್ದು ಅಥವಾ ಕಾರಣವಿಲ್ಲದೆಯೋ ಅನಿವಾರ್ಯ ಕಾರಣಗಳಿಂದ ಮಹಿಳೆಯು ಮೈಮಾರಿಕೊಳ್ಳುವ ಕಾಲ ಬಂದಿದೆ. ಅದನ್ನು ಸಾಂಕೇತಿಕವಾಗಿ ಹಾರರಾರ ಹೆಣ್ಣುಮಕ್ಕಳು ಸೂಳೆಯರಾಗಬೇಕು ಎಂದಿದ್ದಾರೆ.

ಸಮಾಜದಲ್ಲಿ ಹೆಣ್ಣನ್ನು ಭೋಗದ ವಸ್ತುವೆಂದು ತಿಳಿದುಕೊಂಡಿರುವ ಪುರುಷಪ್ರಧಾನ ಸಮಾಜವು ತನ್ನ ಆಸೆ, ಆಕಾಂಕ್ಷೆಗಳನ್ನು ಪೂರೈಸಿಕೊಳ್ಳಲು ದೇವರು, ಧರ್ಮ ಸಂಪ್ರದಾಯ, ಆಚರಣೆ, ಪರಂಪರೆ ಮುಂತಾದ ಹೆಸರಿನಲ್ಲಿ ಹೇಗೆ ತಮ್ಮ ಕಾರ್ಯ ಸಿದ್ಧಿಸಿಕೊಳ್ಳುತ್ತಾರೆ. ಅವರು ದಲಿತ ಅಥವಾ ಕೆಳವರ್ಗದ ಹೆಣ್ಣುಮಕ್ಕಳಿಗೆ ಹೇಗೆ ಲೈಂಗಿಕ ಶೋಷಣೆ ನೀಡುತ್ತಾರೆ. ಅವುಗಳಿಗೆ ದೇವರು ಮತ್ತು ಧರ್ಮವನ್ನು ಲೇಪನ ಮಾಡಿ ಅದರಿಂದ ತಮ್ಮ ಪಾರುಪತ್ಯವನ್ನು ಮೆರೆಯುತ್ತಾರೆ ಎನ್ನುವ ಸಂಗತಿಯನ್ನು ಬಾಲಬಸವರು ತಮ್ಮ ಕಾಲಜ್ಞಾನದಲ್ಲಿ ತಿಳಿಸುತ್ತಾರೆ.

ದೇವದಾಸಿ ಪದ್ಧತಿ ಆಚರಣೆ

ಅಣ್ಣ ಹನುಮಂತನ ಮುಂದಾ
ಹನುಮಂತ ದೇವ್ರು ಹರಿಜನದ ಮನಿ ಮುಂದ
ತೊಗಲಿನ ಹಂದ್ರ ಹಾಕಿ ತೊಗಲಿನ ಚಪ್ಪರ ಕಟ್ಟಿ
ಹದಿನಾಲ್ಕು ದಿವಸ ಕತ್ತಲದಲ್ಲಿ ಆಂಜಿನಯ್ಯ
ಹರಿಜನರ ಮನಿಮುಂದಾ ಮದುವೆಯಾಗುತ್ತಾನ-**ಬಾಲಬಸವಹುಗ್ ಹುನುಮಂತಪ್ಪ**

ಬಾಲಬಸವರ ಈ ನುಡಿಗಳಲ್ಲಿ ಕೆಳವರ್ಗದವರು ಶ್ರೀಮಂತರ ಆಚರಣೆಗಳು, ರೂಢಿ ಸಂಪ್ರದಾಯಗಳನ್ನು ಮೀರುವ ಸಾಹಸದ ಕೆಲಸಕ್ಕೆ ಕೈ ಹಾಕಲು ಎದುರುತ್ತಾರೆ. ಇದನ್ನು ಬಂಡವಾಳ ಮಾಡಿಕೊಂಡು ಮೇಲ್ವರ್ಗದ ಜನತೆಯು ಪರಂಪರೆಯ ಹೆಸರಿನಲ್ಲಿ ದೇವದಾಸಿ ಬಿಡುವ ಪದ್ಧತಿಯನ್ನು ಮುಂದುವರಿಸಿಕೊಂಡು ಬಂದಿದ್ದಾರೆ. ಆ ಕಾಲಕ್ಕೆ 'ಸೂಳೆ' ಎಂಬ ಪದವು ಚಾಲ್ತಿಯಲ್ಲಿತ್ತು. ಆದರೆ ಹೆಣ್ಣು ದೇವರ ಹೆಸರಿನಲ್ಲಿ ಮಾತ್ರ ದೇವದಾಸಿ ಬಿಡುವ ಆಚರಣೆ ಮುಂದೊಂದು ದಿನ ಬರುತ್ತದೆ ಎಂದು ಬಾಲಬಸವರು ಸಾರಿದ್ದಾರೆ. ಇಲ್ಲಿ ಮುಖ್ಯವಾಗಿ ಚರ್ಚಿತವಾಗುವ ವಿಷಯವೆಂದರೆ ದೈವಿಕ ಆಚರಣೆಯ ವಿಧಾನದ ಪದ್ಧತಿಗಳು. ಅಂದರೆ ಮಂಗಳವಾರ, ಶುಕ್ರವಾರ ಪಡ್ಲಿಗಿ ತೆಗೆದುಕೊಂಡು ಕನಿಷ್ಠ ನಾಲ್ಕು ಮನೆಯನ್ನಾದರೂ ಊರಾಡಬೇಕು. ಇದು ಆಚರಣೆ ಕ್ರಮ. ಆದರೆ ಈ ಆಚರಣೆಯಲ್ಲೂ ಕೂಡ ಬದಲಾವಣೆ ತಂದು ಯಾರಿಗೂ ತಿಳಿಯದ ಹಾಗೆ ಮನೆಯಲ್ಲಿ ಇದ್ದುಕೊಂಡು ಕೆಲವರಿಗೆ ಮಾತ್ರ ಸೀಮಿತವಾಗುವ ಆಚರಣೆಗಳು ಮುಂದೆ ಬರುತ್ತವೆ. ಅವುಗಳನ್ನು ಜನತೆಯು ಬಹುಬೇಗ ಒಪ್ಪಿಕೊಳ್ಳುತ್ತಾರೆ ಎಂದು ಬಾಲಬಸವರು ಸಾರಿದ್ದಾರೆ.

ಹನುಮಂತ ಮೂಲದ್ರಾವಿಡ ದೇವರಾದರೂ ಅವನಿಗೆ ಪ್ರಾಣವಾಯು ನೀಡಿ ಬ್ರಾಹ್ಮಣರು ತಮ್ಮ ವಶಕ್ಕೆ ತೆಗೆದುಕೊಂಡಿದ್ದಾರೆ. ಬಾಲಬಸವರು ಮತ್ತೆ ಹನುಮಂತನನ್ನು ತಮ್ಮ ಮೂಲಕ್ಕೆ ಕರೆತಂದು ಮದುವೆ ಮಾಡುವ ಪ್ರಕ್ರಿಯೆಗೆ ಮುಂದಾಗಿರುವುದು ಬಾಲಬಸವ ಹುಗ್ ಹುನುಮಂತಪ್ಪ

ಹೇಳಿದ ಕಾಲಜ್ಞಾನದಲ್ಲಿದೆ. ಕಳೆದ ಸುಮಾರು ವರ್ಷಗಳಿಂದ ಈಚೆಗೆ ಹನುಮಂತ ದೇವರಿಗೆ ದೇವದಾಸಿ ಬಿಡುವ ಪದ್ಧತಿಯು ಚಾಲ್ತಿಯಲ್ಲಿದೆ. ಅದು ಕೆಳವರ್ಗದ ದಲಿತರು ಈ ದೇವದಾಸಿ ಪದ್ಧತಿಯನ್ನು ಆಚರಣೆ ಮಾಡುತ್ತಾ ಬಂದಿದ್ದಾರೆ. ಸನ್ಯಾಸಿಯಾದ ಹನುಮಂತ ದೇವರಿಗೂ ಇಲ್ಲಿ ಮದುವೆ ಮಾಡಿಸುವ ಕ್ರಿಯೆ ದಲಿತರ ಸೃಜನಶೀಲತೆಯ ಭಾಗವಾಗಿದೆ. ಸಮಾಜದಲ್ಲಿನ ಪುರುಷ ತನ್ನ ಕಾರ್ಯ ಸಾಧನೆಗೆ ಯಾವೆಲ್ಲಾ ಮಾರ್ಗಗಳನ್ನು ಅನುಸರಿಸಿಯಾದರೂ ಸರಿ ತನ್ನ ಕಾರ್ಯ ಸಿದ್ಧಿಸಿಕೊಳ್ಳುತ್ತಾನೆ. ಆಧುನಿಕತೆ, ಶಿಕ್ಷಣ, ಉದ್ಯೋಗ ಬದಲಾವಣೆ, ವೈಚಾರಿಕತೆ ಏನೆಲ್ಲಾ ಬಂದರೂ ಸಮಾಜವು ತನ್ನ ಅನಿಷ್ಟ ಪದ್ಧತಿಯನ್ನು ಕೈ ಬಿಟ್ಟಿಲ್ಲ. ಅದೇ ಆಚರಣೆಗಳನ್ನು ಕೆಲವೊಂದು ಮಾರ್ಪಾಡು ಮಾಡಿಕೊಂಡು ಸಣ್ಣ ಪುಟ್ಟ ಬದಲಾವಣೆಯೊಂದಿಗೆ ಮತ್ತೆ ಅದೇ ಪದ್ಧತಿಯ ಸ್ವರೂಪದಲ್ಲಿ ಆಚರಣಾತ್ಮಕ ಕ್ರಿಯೆಯ ಮೂಲಕ ಸಮಾಜದಲ್ಲಿ ಮರು ಚಾಲ್ತಿಯಲ್ಲಿವೆ. ಇಂತಹ ಹುನ್ನಾರಗಳನ್ನು ಬಾಲಬಸವಿಯರು ವಿರೋಧಿಸುವ ಅಥವಾ ಅವರ ಪ್ರತಿರೋಧದ ಭಾಗವಾಗಿ ಅವರ ಕಾಲಜ್ಞಾನವನ್ನು ನಾವು ಗನಿಸಬಹುದಾಗಿದೆ.

ಕಾವ್ಯದಲ್ಲಿ ವ್ಯಕ್ತಗೊಂಡಿರುವ ಸಮಾಜದಲ್ಲಿನ ದೇವದಾಸಿ ಆಚರಣೆಯ ಸೂಕ್ಷ್ಮ ವಿಷಯಗಳು

ಬಾಲಬಸವರು ಹಾಡಿರುವ ಮೌಖಿಕ ಕಾವ್ಯವಾದ ಗೋಣಿಬಸಪ್ಪನ ಕಾವ್ಯದಲ್ಲಿ ಮದ್ದಾನಸ್ವಾಮಿ ಮತ್ತು ಕನಕಮ್ಮನಿಗೆ ಮದುವೆಯಾಗಿರುವ ವಿವರ ಲಭ್ಯವಿಲ್ಲ. ಆದರೆ ಕಾವ್ಯದೊಳಗೆ ಮದ್ದಾನಸ್ವಾಮಿ ಅವರಿಗೆ ಕನಕಮ್ಮನ ಮೇಲೆ ಮನಸ್ಸಾಗಿರುವ ಸಂಗತಿಯನ್ನು ಅರಿತ ಪಂಚಗಾಣಾಧೀಶರಾದ ಕೊಟ್ರೇಶ, ಕಂಪೇಶ, ಕೋಲಶಾಂತೇಶ ಮತ್ತು ತಿಪ್ಪೇರುದ್ರೇಶರು ಮದ್ದಾನೇಶನಿಗೆ ಬಾಗಳಿಗೆ ನೀವು ಇಬ್ಬರೂ ಹೋಗಿ ಎಂದು ಹೇಳುತ್ತಾರೆ. ಈ ಸಂಗತಿಯಿಂದ ತಿಳಿದುಬರುವುದೇನೆಂದರೆ ಪಂಚಗಣಾಧೀಶ್ವರರು ತಮ್ಮ ಅಸ್ತಿತ್ವ ಉಳಿಸಿಕೊಳ್ಳಲು ಮುಖ್ಯವಾಗಿ ಮಧ್ಯ ಕರ್ನಾಟಕ ಪ್ರದೇಶದಲ್ಲಿ ಆಚರಣೆಯಲ್ಲಿದ್ದ ದೇವದಾಸಿ ಪದ್ಧತಿಯಿಂದ ಮದ್ದಾನೇಶ್ವರನ ಇಂದ್ರಿಯ ಸರಿದಂತೆ ತಮ್ಮ ಇಂದ್ರಿಯಗಳು ಉದ್ದೀಪನವಾದರೆ ಏನು ಗತಿ ಎಂದು ಉಳಿದ ನಾಲ್ಕು ಮಂದಿ ಶರಣರು ಒಂದೊಂದು ಕಡೆ ಹೋಗಿ ನೆಲೆ ನಿಲ್ಲುತ್ತಾರೆ. ಕನಕಮ್ಮನ ಕರೆದುಕೊಂಡು ಕೂಲಹಳ್ಳಿಗೆ ಹೋದ ಮದ್ದಾನಸ್ವಾಮಿಯ ಜೀವನ ಚರಿತ್ರೆಯು ಮೌಖಿಕ ಕಾವ್ಯದಲ್ಲಾಗಲಿ, ವೀರಶೈವ ಶಿಷ್ಟ ಕಾವ್ಯದಲ್ಲಾಗಲಿ ಸಿಗುವುದಿಲ್ಲ. ಅದಕ್ಕೆ ಕಾರಣ ಅಂದಿನ ಸಾಂಸ್ಕೃತಿಕ ರಾಜಕಾರಣ. ಲಿಂಗಾಯತೀಕರಣ ಕಾರಣವಿರಬಹುದು, ಗೊತ್ತಿಲ್ಲ. ಆದರೆ ಕನಕಮ್ಮ ಮತ್ತು ಮದ್ದಾನಸ್ವಾಮಿಯ ಇಂದ್ರಿಯ ಮೂಲಕ ಜನಿಸಿದ ಗೋಣಿಬಸಪ್ಪ ಮಾತ್ರ ಮೌಖಿಕ ಕಾವ್ಯದಲ್ಲಿ ಕಾಣಿಸುತ್ತಾನೆ. ಗೋಣಿಬಸಪ್ಪನಿಗೆ ತನ್ನ ಜನ್ಮದ ನಂತರ ಎದುರಾಗುವ ಒಂದೇ ಪ್ರಶ್ನೆ ಎಂದರೆ ಅದು ತನ್ನ ತಂದೆ ಯಾರೆಂದು. ಮಧ್ಯ ಕರ್ನಾಟಕ ಮತ್ತು ಉತ್ತರ ಕರ್ನಾಟಕದ ಭಾಗಗಳಲ್ಲಿ ದೇವದಾಸಿಗೆ ಬಿಟ್ಟ ಮಹಿಳೆಯು ಒಂದಕ್ಕಿಂತ ಹೆಚ್ಚು ಗಂಡಸಿನೊಂದಿಗೆ ಜೀವಿಸಬಹುದಾದ ಅವಕಾಶಗಳಿರುವುದರಿಂದ ಈ ಆಚರಣೆಯು ಕನಕಮ್ಮನ ಜೀವನದಲ್ಲೂ ಕಾಣಿಸುತ್ತದೆ. ಮೊದಲು ಮದ್ದಾನಸ್ವಾಮಿಯ ಗಂಡು ಮಗುವಿಗೆ

ಜನ್ಮವಿತ್ತು, ನಂತರ ತನ್ನ ಜೀವನ ನಿರ್ವಹಣೆಗಾಗಿ ಕೂಲಹಳ್ಳಿ ಕೋರಿ ಈರಯ್ಯನೊಂದಿಗೆ ಜೀವನ ಮಾಡುತ್ತಾಳೆ. ಪ್ರಾಯಕ್ಕೆ ಬಂದ ಗೋಣಿಬಸಪ್ಪನಿಗೆ ತನ್ನ ಹುಟ್ಟಿಗೆ ಕಾರಣನಾದವ ಯಾರು? ಎನ್ನುವ ಪ್ರಶ್ನೆ ಎದುರಾಗಿ ತನ್ನ ತಾಯಿ ಬಳಿ ತನ್ನ ತಂದೆಯ ಬಗ್ಗೆ ವಿಚಾರಿಸುತ್ತಾನೆ. ಇದು ಗೋಣಿಬಸಪ್ಪನಿಗೆ ಬುದ್ಧಿ ಬಂದಿರುವ ಕಾರಣವಾಗಿರಬಹುದು ಇಲ್ಲವೆ ಈ ಹಿಂದೆ ನಡೆದಿರುವ ಘಟನೆಗಳನ್ನು ತಿಳಿದುಕೊಳ್ಳುವ ಕಾರಣದಿಂದಾಗಿ ತನ್ನ ನಿಜವಾದ ತಂದೆ ಹಾಗೂ ದೇವದಾಸಿಯ ಮಗನೆಂದು ಕರೆಯುತ್ತಿದ್ದ ಸಮಾಜಕ್ಕೆ ತನ್ನ ಹುಟ್ಟಿನ ಮೂಲದ ಕುರಿತು ಹೇಳುವ ಅನಿವಾರ್ಯತೆಯು ಗೋಣಿಬಸಪ್ಪನಿಗೆ ಸೃಷ್ಟಿಯಾಗಿರಬಹುದು. ಹಾಗಾಗಿ ತನ್ನ ತಂದೆ ಬಗ್ಗೆ ತಾಯಿಯಾದ ಕನಕಮ್ಮನನ್ನು ವಿಚಾರಿಸುತ್ತಾನೆ. ಕನಕಮ್ಮ ಕೂಡ ಯಾಕೆ ನಿಜ ಹೇಳುವುದಿಲ್ಲ ಎನ್ನುವ ಪ್ರಶ್ನೆ ಪ್ರಶ್ನೆಯಾಗಿ ಉಳಿದು ಬಿಡುತ್ತದೆ. ಕನಕಮ್ಮ ಮದ್ದಾನಸ್ವಾಮಿ ಹೆಸರು ಹೇಳದೆ ಕೋರಿ ಈರಯ್ಯನ ಹೆಸರು ಹೇಳುತ್ತಾಳೆ. "ಅಯ್ಯೋ ಗೋಣಿಬಸಪ್ಪ ನೀನು ತಂದಿ ಇಲ್ದಾ ಹುಟ್ಟೀಯೆನಪ್ಪಾ? ಈ ಊರಲ್ಲಿ ಕೋರಿ ಈರಯ್ಯ ಅದನಾಲ್ಲ ಜಂಗಮರಾತ, ಆತನೆ ನನಗೆ ಗಂಡ, ನಿನಗೆ ತಂದೆ"[೩] ಎಂದಾಗ ಗೋಣಿಬಸಪ್ಪ ತನ್ನ ತಾಯಿ ದೇವದಾಸಿಯಾಗುವುದಕ್ಕೆ ಈತನೇ ಕಾರಣವಿರಬಹುದೆಂದು ಭಾವಿಸಿ ಕೋರಿ ಈರಯ್ಯನನ್ನು ಕೊಲೆ ಮಾಡುತ್ತಾನೆ. ತಾಯಿ ಆತನ ಮೃತ ದೇಹ ನೋಡಿ ಕನಕಮ್ಮ ನಾನು ಯಾರಿಗೆ ಗಂಡ ಎಂದು ಕರೆಯಲಿ ನೀನು ಸತ್ತೆಯಲ್ಲ ನನ್ನ ಪತಿಯೇ ಎಂದು ರೋದನ ಮಾಡುತ್ತಾಳೆ. ಅಗ ಗೋಣಿಬಸಪ್ಪ ತನ್ನ ತಾಯಿಯಾದ ಕನಕಮ್ಮನಿಗೆ ಕೋರಿ ಈರಯ್ಯ ನಿನಗೆ ಗಂಡನಲ್ಲ, ನನಗೆ ತಂದೆಯು ಅಲ್ಲ. ನನ್ನ ತಂದೆ ನಿನ್ನ ಗಂಡ ಮದ್ದಾನಸ್ವಾಮಿಗಳು, ನಾನು ಮದ್ದಾನಸ್ವಾಮಿಯ ಮಗನೆಂದು ಹೇಳುತ್ತಾನೆ. ಗೋಣಿ ಬಸಪ್ಪ ಕೋರಿ ಈರಯ್ಯನ ಕೊಲೆ ಮಾಡುವುದು ತನ್ನ ತಾಯಿ ಮೇಲೆ ಇರುವ ಅಪವಾದವನ್ನು ಕಳೆಯುವುದಕ್ಕಾಗಿ ಆಗಿರಬಹುದು ಅಥವಾ ದೇವದಾಸಿ ಮಗನು ನಾನು ಅಲ್ಲ ನನಗೆ ತಂದೆ ಮದ್ದಾನಸ್ವಾಮಿಗಳೆಂದು ಜನಕ್ಕೆ ತಿಳಿಸಿ ಹೇಳುವ ಕಾರ್ಯ ಮಾಡಿರಬಹುದು ಎಂದು ಅರ್ಥೈಸಿಕೊಳ್ಳಬಹುದು ಅಥವಾ ದೇವದಾಸಿ ಮಗನೆಂದು ಸಮಾಜ ನಿಂದಿಸಿರುವುದರಿಂದ ತನ್ನ ತಂದೆಯ ಬಗ್ಗೆ ತಿಳಿದು ಸಮಾಜಕ್ಕೆ ತಾನು ಯಾರೆಂದು ತಿಳಿಸುವ ಕಾರ್ಯ ಮಾಡಿರಬಹುದು.

೫.೯. ಜಾತಿ ಸಂಕರತೆ

ಬಾಲಬಸವರ ಮೌಖಿಕ ಕಾವ್ಯಗಳಾದ ಮರುಳಸಿದ್ಧ ಕಾವ್ಯ ಮತ್ತು ಗೋಣಿಬಸಪ್ಪನ ಕಾವ್ಯಗಳಲ್ಲಿ ಕುಲಸಂಕರಶೀಲ ಮದುವೆಯಿಂದಾಗಿ ಹುಟ್ಟುವ ಮಕ್ಕಳು ಮುಂದೆ ಸಮಾಜದಲ್ಲಿ ಎದುರಿಸುವ ಸಾಮಾಜಿಕ ಸಂಘರ್ಷಗಳಾವುವು ಎನ್ನುವುದು ಮರುಳಸಿದ್ಧನ ಕಾವ್ಯಕ್ಕಿಂತ ಗೋಣಿಬಸಪ್ಪನ ಕಾವ್ಯದಲ್ಲಿಯೇ ಹೆಚ್ಚಾಗಿ ಕಂಡುಬರುತ್ತದೆ.

ದೇವದಾಸಿಯಾದ ಬೇಡರ ಕನಕಮ್ಮ ಮತ್ತು ಮದ್ದಾನಸ್ವಾಮಿಯ ಕೂಡುವಿಕೆಯಿಂದಾಗಿ ಗೋಣಿಬಸಪ್ಪ ಹುಟ್ಟುತ್ತಾನೆ. ಅವರ ಕುಲಸಂಕರದ ಮದುವೆಯ ಕಾರಣದಿಂದಾಗಿ ಮದ್ದಾನಸ್ವಾಮಿಯ

ಚಾರಿತ್ರಿಕ ವಿವರಗಳನ್ನು ವೀರಶೈವ ಸಾಹಿತ್ಯವು ಇತರ ಜಂಗಮರ ಚಾರಿತ್ರಿಕ ಸಂಗತಿಗಳನ್ನು ಕಟ್ಟಿಕೊಟ್ಟಿರುವಂತೆ ಕಟ್ಟಿಕೊಟ್ಟಿಲ್ಲದಿರುವುದನ್ನು ಗಮನಿಸಬಹುದು. ಗೋಣಿಬಸಪ್ಪ ತನ್ನ ತಂದೆಯ ಕುಲ ಸಂಕರದ ಮದುವೆಯಾದ ಪರಿಣಾಮದಿಂದಾಗಿ ಅನೇಕ ಸಮಸ್ಯೆಗಳನ್ನು ಎದುರಿಸುತ್ತಾನೆ. ತಂದೆ ಜಾತಿಯಿಂದ ಜಂಗಮನಾದರು ತಾಯಿಯ ಜಾತಿಯಿಂದಾಗಿ ಗೋಣಿಬಸಪ್ಪ ಬೇಡರ ಕುಲವನಾಗುತ್ತಾನೆ. ಉತ್ತಮ ಕುಲದವರಾದ ಲಿಂಗಾಯತರು ಗೋಣಿಬಸಪ್ಪನಿಗೆ ಹೆಣ್ಣು ಕೊಡುವುದಿಲ್ಲ. ಆದ್ದರಿಂದ ಅವನು ತನ್ನ ಸಂಸಾರವನ್ನು ಉಳಿಸಿಕೊಳ್ಳಲು ಬೇರೆ ಮಾರ್ಗವನ್ನು ಹುಡುಕಿಕೊಳ್ಳುತ್ತಾನೆ. ತನ್ನ ತಂದೆ ತಾಯಿಗಳು ಕುಲಸಂಕರ ಮದುವೆಯಾದಂತೆ ಗೋಣಿಬಸಪ್ಪನು ಕುರುಬರ ಮನೆಯಲ್ಲಿ ಮದುವೆಯಾಗುವುದರ ಮೂಲಕ ಅಂತರ್‌ಜಾತಿ ವಿವಾಹ ಮಾಡಿಕೊಳ್ಳುತ್ತಾನೆ. ಇಲ್ಲಿ ಮದ್ದಾನೇಶ್ವರ ಕನಕಮ್ಮನ ಕೂಡಿದ ರೀತಿ ತುಂಬ ಸರಳವಾಗಿರುತ್ತದೆ. ಹಾಗೇ ಗೋಣಿಬಸಪ್ಪ ಕುರುಬರ ವಡ್ಡಟ್ಟವ್ವನವಳನ್ನು ಮದುವೆಯಾಗುವುದು ಕೂಡ ತುಂಬಾ ಸರಳವಾಗಿದೆ. ಇದು ಇಂದು ಕೂಡ ಕುಲಸಂಕರದ ಮದುವೆ ಚಾಲ್ತಿಯಲ್ಲಿದೆ.

ಒಂದು ದೈವಕ್ಕೆ ನಡೆದುಕೊಳ್ಳುವ ಸಮುದಾಯಗಳ ಸಾಮಾಜಿಕ ಸಂಘರ್ಷಕ್ಕೆ ಈ ಕುಲ ಸಂಕರದ ಮದುವೆ ಕಾರಣವಾಗುತ್ತದೆ. ಅಂದರೆ ಕೂಲಹಳ್ಳಿಯ ಮದ್ದಾನೇಶ್ವರ ಮಠದ ಸ್ವಾಮಿಗಳು ಗೋಣಿಬಸವನ ವಂಶಸ್ಥರಾಗಿದ್ದು ಇವರು ಲಿಂಗಾಯತ ಧರ್ಮವನ್ನು ನಡೆದುಕೊಂಡರೂ ಇವರಿಗೆ ಆ ಕುಲದ ಹೆಣ್ಣುಗಳನ್ನು ಕೊಡುವುದಿಲ್ಲ. ಇದರಿಂದಾಗಿ ಇವರು ಬೇಡರ ಕುಲದ ಹೆಣ್ಣುಮಕ್ಕಳನ್ನು ತಂದು ಲಿಂಗಾಯತೀಕರಿಸಿಕೊಂಡು ಮದುವೆಯಾಗುತ್ತಾರೆ. ಇದರಿಂದಾಗಿ ಸಮಸ್ಯೆಯನ್ನು ಅನುಭವಿಸುವವರು ಲಿಂಗಾಯತರಾದ ಮದ್ದಾನೇಶನಲ್ಲ, ಕನಕಮ್ಮ ಮತ್ತು ಗೋಣಿಬಸವ. ಇದರ ವಿಶೇಷತೆ ಇರುವುದು ಗೋಣಿಬಸಪ್ಪನು ಲಿಂಗಾಯತ ರಾಜಕಾರಣವನ್ನು ಗೆದ್ದು ದೈವವಾಗುವಲ್ಲಿ ದೇವದಾಸಿ ಮಗನೊಬ್ಬನ ತಲ್ಲಣಗಳು ಕಾಣಿಸುತ್ತವೆ. ಅದರ ಆಚರಣೆಗಳನ್ನು ಈಗ ಬಾಲಬಸವರು ಅನುಸರಿಸುತ್ತಿದ್ದಾರೆ. ದೇವದಾಸಿ ಆಚರಣೆಯು ದೈವದ ಭಾಗವಾಗಿ ನೋಡುವ ಮಾದಿಗರಾದ ಬಾಲಬಸವರು ತಮ್ಮ ಧಾರ್ಮಿಕ ಅತಂತ್ರಕ್ಕೆ ಈ ಆಚರಣಾತ್ಮಕ ನೆಲೆಗಳೇ ಕಾರಣವೆಂದು ತಿಳಿದರೂ ಅವುಗಳನ್ನು ಇನ್ನೂ ಜೀವಂತವಾಗಿಸಿ ಕೊಂಡಿರುವುದನ್ನು ಇಂದಿಗೂ ಕಾಣಬಹುದಾಗಿದೆ.

ಮರುಳಸಿದ್ಧನ ಕಾವ್ಯದಲ್ಲಿ ಕುಲಸಂಕರದ ಮದುವೆಯ ಪ್ರಸಂಗಗಳನ್ನು ಹೇಳುತ್ತಾರೆ. ಕಲ್ಯಾಣದಲ್ಲಿ ಹರಳಯ್ಯ ಮತ್ತು ಮಧುವರಸರ ಮಕ್ಕಳಾದ ಕೂಗದ ಮಾರಯ್ಯ ಕಲ್ಯಾಣಮ್ಮನ ಮದುವೆ ಅಂದಿನ ವಚನ ಚಳವಳಿಯ ಕ್ರಾಂತಿಗೆ ಕಾರಣವಾಯಿತು. ಆದರೆ ಬಾಲಬಸವ ತುಮನೆಪ್ಪ ಕಥೆಯನ್ನು ಅಲ್ಲಿಗೆ ನಿಲ್ಲಿಸುವುದಿಲ್ಲ, ಅದನ್ನು ಕಲಿಗೆ ತಂದು ಅವರು ಮುಂದೆ ಮರುಳಸಿದ್ಧ ಹುಟ್ಟಿಗೆ ಕಾರಣರಾಗುತ್ತಾರೆ ಎಂದು ಹಾಡುತ್ತಾರೆ. ಕೂಗದ ಮಾರಯ್ಯ ಮತ್ತು ಕಲ್ಯಾಣಮ್ಮನ ಮದುವೆಯಾಗಿ ಬ್ರಾಮರಿಗೆ ಮಾದ್ರುಗೆ ಬೀಗತನವಾಗುತ್ತೆ. ಇದರಿಂದ ಬ್ರಾಮರಿಗೆ

ಮಧ್ಯಾಹ್ನದ ಮಾದ್ರು ಅಂತ ಕರೆಯುತ್ತಾರೆ ಎನ್ನುವ ಹೇಳಿಕೆಯನ್ನು ಸೂಕ್ಷ್ಮವಾಗಿ ಗಮನಿಸಿದಾಗ ಅವರು ಒಂದು ಕಾಲದಲ್ಲಿ ದಲಿತರಂತೆ ಬದುಕಿದ್ದು ಅವರು ತಮ್ಮ ಚಾಣಾಕ್ಷ ನಡೆಯಿಂದಾಗಿ, ಸಂಸ್ಕೃತ ಶಿಕ್ಷಣವನ್ನು ಕಲಿತ ಪರಿಣಾಮದಿಂದಾಗಿ, ಅವರು ಬ್ರಾಹ್ಮಣರು ಆಗಿರಬಹುದೆಂದು ಊಹಿಸಬಹುದಾಗಿದೆ. ಇವರುಗಳ ಆಚರಣೆಗಳನ್ನು ಗಮನಿಸಿದಾಗ ಈ ಸೂಕ್ಷ್ಮತೆ ಮತ್ತಷ್ಟು ಸ್ಪಷ್ಟವಾಗುತ್ತದೆ. ಬ್ರಾಹ್ಮಣರು ತಮ್ಮ ಮನೆ ಮುಂದೆ ತುಳಸಿ ಗಿಡ ಮತ್ತು ರುದ್ರಾಕ್ಷಿಯನ್ನು ಬಾನಿನೊಳಗೆ ಹಾಕ್ಕೊಂಡು ಅದರಲ್ಲಿ ಪೂಜೆ ಮಾಡುತ್ತಾರೆ. ಮಾದ್ರೂ ಹರಳಯ್ಯನ ಗಲ್ಲಿಬಾನಿಗೆ ಪೂಜೆ ಮಾಡುತ್ತಾರೆ. ಈ ಎರಡು ಆಚರಣೆಗಳಲ್ಲಿ ಸಾಮೀಪ್ಯತೆಯನ್ನು ಕಾಣಬಹುದಾಗಿದೆ.

ಗೋಣಿಬಸಪ್ಪನ ಕಾವ್ಯದಲ್ಲಿ ವರ್ಣಸಂಕರ ಮದುವೆಯ ಪ್ರತಿರೂಪವಾಗಿ ಗೋಣಿಬಸಪ್ಪ ಕಂಡುಬರುತ್ತಾರೆ. ಇದು ಪ್ರಭುತ್ವ ಮತ್ತು ಜಂಗಮತ್ವದ ನಡುವೆ ನಡೆದ ಸಾಮಾಜಿಕ ಸಂಘರ್ಷವಾಗಿದೆ. ಪ್ರಭುತ್ವದಲ್ಲಿ ದೇವದಾಸಿ ಆಚರಣೆಯನ್ನು ಜೀವಂತವಾಗಿಸಿರುವುದನ್ನು ಈ ಕಾವ್ಯದಲ್ಲಿ ನೋಡ ಬಹುದಾಗಿದೆ. ಹರಪರಹಳ್ಳಿ ಪಾಳೇಗಾರರ ಮನೆಯಲ್ಲಿ ಕನಕವ್ವ ದೇವದಾಸಿ. ಈ ದೇವದಾಸಿಯಿಂದ ಪಾಳೇಗಾರನಿಗೆ ಆಗುವ ಅಪಮಾನವನ್ನು ಗೋಣಿಬಸಪ್ಪನ ಕಾವ್ಯದಲ್ಲಿ ಹೀಗೆ ಇದೆ. "ಶಿವನಯ್ಯನಿಗೆ ರಾಜಕೀಯ ಸಿಕ್ಕೈತೆ. ಪಾಳೇಗಾರನಾಗಿ ಹರಪನಹಳ್ಳಿಯ ಸಿಂಹಾಸನ ಆಳ್ತಾನೆ. ಅರಮನಿ ಸ್ಥಳ ಎಲ್ಲ ಚಿಗಟೇರಿಯಲ್ಲಿ. ಒಡಹುಟ್ಟಿದ ಅಕ್ಕ ಕನಕಮ್ಮ ಮನೆಯೊಳಗೆ ವೇಶ್ಯೆ ಬಿಟ್ಟಿತು. ಸೂಳೆ ಬಿಟ್ಟಿತು. ಶಿವನಯ್ಯ ಒಂದೊಂದು ದಿನದಲ್ಲಿ ಸಿಂಹಾಸನದ ಮ್ಯಾಲೆ ಕೂತ್ಕೊಂಡು ಸಿಂಹಾಸನ ಆಳ್ತಾ ಯೋಚನೆ ಮಾಡುತ್ತಾನೆ. "ಅಲೆಲೇಲೆ, ನಾನು ರಾಜ ಸುತ್ತ ಮೂವತ್ಮೂರಹಳ್ಳಿ ಪ್ರಜೆಗಳು ನನ್ನ ಪಾದ್ಕ ಬೀಳ್ತಾರೆ ರಾಜ ಅಂತಾರೆ, ನನ್ನಂತ ರಾಜನ ಮನೆಯಾಗೆ ಸೂಳಿದ್ರೆ ನನ್ನ ಮರ್ಯಾದೆ ಏನು? ಮಾನ ಏನು? ಸಿಂಹಾಸನಕ್ಕೆ ಅಪಮಾನ ಆಗ್ತದೆ ನನ್ನ ಮನೆಯಾಗ ಸೂಳಿ ಇರ್ಬಾದೆಪ್ಪ, ನಮ್ಮಕ್ಕ ಈ ಮನೆಯಲ್ಲಿ ಇರ್ಬಾರ್ದಪ್ಪ. ಈಗ ಹೋಗಿ ನಮ್ಮಕ್ಕನ ಹೊಡ್ದು ಬಡ್ದು ಏನೋ ಅತ್ಲಾಗ ಗದಿಮಿ ಬಿಡ್ಬೇಕು ಎಂದು ಶಿವನಯ್ಯ ಯೋಚನೆ ಮಾಡುತ್ತಾನೆ"[7] ಎನ್ನುವ ಆಲೋಚನೆಯಲ್ಲಿ ದೇವದಾಸಿ ಪದ್ಧತಿಯು ರಾಜನ ಮನೆಯಲ್ಲಿಯೇ ಇದೆ ಎಂದಾಗ, ಅದರಿಂದಾಗ ಬಹುದಾದ ಅಪಮಾನವನ್ನು ತಿಳಿಸುತ್ತದೆ. ಅದೇ ದೇವದಾಸಿ ಆಚರಣೆಯನ್ನು ಸಾಂಸ್ಕೃತೀಕರಣಗೊಳಿಸಿ ಮುಂದುವರಿಸುವ ಮತ್ತೊಂದು ಭಾಗವನ್ನು ಅದೇ ಕಾವ್ಯದಲ್ಲಿ ಕನಕಮ್ಮ ಮತ್ತು ಮದ್ದಾನಸ್ವಾಮಿ ಮದುವೆಯಾಗುವುದನ್ನು ನಾವು ನೋಡಬಹುದು.

ಶಿವಶರಣನಾದ ಮದ್ದಾನೇಶ್ವರ ಬಾಗಳಿ ತೋಟದಲ್ಲಿ ತಂಗಾಳಿ ಸೇವಿಸುತ್ತ(ವಾಕ್) ಬರುವಾಗ ಅದೇ ಮಠಕ್ಕೆ ದೇವದಾಸಿಯಾದ ಕನಕಮ್ಮ ಒದ್ದೆ ಬಟ್ಟೆಯಲ್ಲಿ, ಮಹಾಭಕ್ತಿಯಲ್ಲಿ ಹೂ ತಗೊಂಡು ಪೂಜೆ ಮಾಡೋಕೆ ಬರುತ್ತಾಳೆ. ಇಬ್ಬರು ಒಬ್ಬರನ್ನೊಬ್ಬರು ನೋಡಿಕೊಳ್ಳುತ್ತಾರೆ. ಕನಕಮ್ಮನ ದೇಹ ಸೌಂದರ್ಯಕ್ಕೆ ಮಾರು ಹೋದ ಮದ್ದಾನೇಶ್ವರನ ಇಂದ್ರಿಯ ಸರಿಯುತ್ತವೆ. ಬರೀ ದೃಷ್ಟಿ ಬಿದ್ದಿದಕ್ಕೆ ಇಂದ್ರಿಯಗಳನ್ನು ನಿಗ್ರಹಿಸಿಕೊಂಡ ಜಂಗಮರು ಅದನ್ನು ಮೀರುವ ಕೆಲಸ ಮದ್ದಾನಸ್ವಾಮಿ

ಮಾಡುತ್ತಾನೆ. ಇದು ವರ್ಣಸಂಕರ ಮದುವೆಗೆ ಕಾರಣವಾಗುತ್ತದೆ. ಮದುವೆ ಸಂದರ್ಭವನ್ನು ಬಾಲಬಸವ ತುಮನೆಪ್ಪ ತನ್ನ ಗೋಣಿಬಸಪ್ಪನ ಕಾವ್ಯದಲ್ಲಿ ಈ ರೀತಿಯಾಗಿ ಹೇಳುತ್ತಾನೆ.

> "ಮದ್ದಾನ ಸ್ವಾಮಿಗೆ ಇಂದ್ರ ತಾನೇ ಸರಿಯ ತಡ ಈ ನಾಲ್ಕು ಮಂದಿ ಜೊತಿಗೆ
> ಇತ್ತಲ್ಲಾರಿ ಮಠದಾಗೆ ಕೂಸು ಗೋಣಿಬಸವೇಶ್ವರ.
> ಮಯವಾಗಿ ಹೋಗುತ್ತಾನೆ । ಆ ಸೋಕಿರ ಮೂವ ತಾಜೀಜಿ
> ಕನಕಮ್ಮನ ಹೊಟ್ಟಾಗೆ ಸೇರ್ಯಾನಯೋ । ಆ ಸೋಕಿರ ಮೂವ ತಾಜೀಜಿ
> ಮಗಳ ಹೊಟ್ಟಾಗ ಸೇರ್ಯಾನಯೋ । ಆ ಸೋಕಿರ ಮೂವ ತಾಜೀಜಿ"

ಬಾಗಳಿ ಮಠದಾಗ ಇದ್ದ ಕೂಸು ಮಾಯವಾತಂತ್ರೀ ಅಲ್ಲೇ ಕನಕಮ್ಮನ ಹೊಟ್ಯಾಕ ಸೇರ್ಕಂಡ್ನಂತೆ. ಈ ಸಂಗತಿ ತಿಳಿದ ಉಳಿದ ನಾಲ್ಕು ಮಂದಿ ಶರಣರು "ಆಹಾ ಮದ್ದಾನಸ್ವಾಮಿ ಕೆಟ್ಟ ಕೆಟ್ಟ ಎಂದು ಪಕಪಕ ನಗುತ್ತಾರೆ. ಈ ಸಂಗತಿ ಕನಕಮ್ಮನಿಗೆ ಗೊತ್ತಿಲ್ಲ. ಆಯಮ್ಮ ಪೂಜೆ ಮಾಡಿ ಗುರುಗಳನ್ನು ಬೇಡಿಕೊಳ್ಳುತ್ತಾಳೆ. ನನಗೆ ಮಕ್ಕಳ ಫಲ ಕೊಡಬೇಕೆಂದು. ಅದಕ್ಕೆ ಶಿವಶರಣರು ಜಂಗಮರು ನಾಲ್ಕು ಮಂದಿ ಹೇಳುತ್ತಾರೆ. ಜಗದ್ಗುರುವನ್ನು ಇಟ್ಕೊಂಡು ನಮ್ಮನ್ನು ಮತ್ತೆ ಫಲ ಕೇಳ್ತಿಯಲ್ಲಮ್ಮ ನಿನ್ನ ಹೊಟ್ಟೆ ಒಳಗೆ ಗಂಡುಮಗು ಹುಟ್ಟಾನೆ. ಆತನಿಗೆ ಗೋಣಿಬಸವೇಶ್ವರ ಅಂತ ನಾಮಕರಣ ಮಾಡಮ್ಮ ಅಂತ ಹೇಳುತ್ತಾರೆ. ಕನಕಮ್ಮ ಆಗ್ಲಿ ಗುರುಗಳೇ ಎನ್ನುತ್ತಾಳೆ. ಆಗ ನಾಲ್ಕು ಮಂದಿ ಶರಣರು ಹೊರಗ ಬಂದಾರು. "ಆ ಮದ್ದಾನಸ್ವಾಮಿಗಳೇ ಮತ್ತೇನ್ರಪ್ಪಾ ಏನಿಲ್ಲ ಆದ್ರೆ ನೀ ಕೆಟ್ಹೋದೆ, ಮೈಲಿಗೆಯಾದೆ ನಮ್ಮನ್ನು ಮುಟ್ಟಂಗಿಲ್ಲ ನಮ್ಮ ಹತ್ರ ಬರಾಂಗಿಲ್ಲ, ಕನಕಮ್ಮನೇ ಹೆಂಡ್ತಿ, ನೀನೆ ಗಂಡ ಇನ್ಮುಂದೆ ಕೂಲಹಳ್ಳಿಗೆ ಹೋಗಪ್ಪ ಅಂತ ಹೇಳಿದರು. ಮದ್ದಾನಸ್ವಾಮಿ "ಅಲ್ಲಯ್ಯ ನೀವೆ ನನಗಿನ್ನ ದೊಡ್ಡೋರು ಆಕೆ ನೋಡಿದ್ರೆ ಬ್ಯಾಡರಾಕಿ" ಅಕಿ ಹಿಂದ ಹೋಗಂತಿರಲಯ್ಯ ನನ್ನಂತಾ ಶಿವಶರಣನ್ನ' ಅಗ ಕೊಟ್ರೇಶ ಅಂತಾನೆ "ಆಯ್ತಪ್ಪ ಬರೀ ದೃಷ್ಟಿಗೆ ಕೆಟ್ಹೋದೆ, ನಮ್ತಾಗ ಬರಾಂಗಿಲ್ಲ, ಮುಟ್ಟಂಗಿಲ್ಲ ಆಕಿ ಹಿಂದೆ ಹೋಗ್ಬಿಡು. ಆಯಮ್ಮನೇ ಹೆಂಡ್ತಿ, ನೀನೆ ಗಂಡ."[೫] ಅಂತ ಹೇಳಿ ಕನಕ್ಕಮ್ಮ ಮದ್ದಾನೇಶ್ವರರ ಮದುವೆ ಮಾಡಿ ಕೂಲಹಳ್ಳಿಗೆ ಕಳಿಸಿ ಕೊಡುತ್ತಾರೆ. ಈ ಕಾವ್ಯದಲ್ಲಿ ಕುಲಸಂಕರ ಮದುವೆಯಾಗುವುದಕ್ಕೆ ಪಂಚಗಣಾಧೀಶ್ವರರನ್ನು ಸಾಕ್ಷಿಯನ್ನಾಗಿಸುವ ಕಾರ್ಯವನ್ನು ಬಾಲಬಸವರು ಮಾಡುತ್ತಾರೆ.

೫.೧೦. ತಂತ್ರ ವಿದ್ಯೆ

ಗೋಣಿಬಸಪ್ಪ ಕುರುಬರ ವಡ್ಡಟ್ಟವ್ವನನ್ನು ಮದುವೆಯಾಗಿ ಮಠದ ಸಿಂಹಾಸನ ಆಳ್ವಿಕೆ ಮಾಡುತ್ತಿರುವಾಗ ಮಠದ ಆರ್ಥಿಕ ಸ್ಥಿತಿಗತಿಯನ್ನು ತಿಳಿದುಕೊಂಡ ಹರಪನಹಳ್ಳಿಯ ಸಾಮಂತ ಪಾಳೇಗಾರನಾದ ಚಿಗಟೇರಿ ಶಿವನಯ್ಯ ಆ ಮಠದ ಆಸ್ತಿಗಾಗಿ ತನ್ನ ಸೋದರ ಅಳಿಯನನ್ನು ಕೊಲ್ಲುವ ಪ್ರಯತ್ನ ಮಾಡುತ್ತಾನೆ. ಗೋಣಿಬಸಪ್ಪನ ಮೇಲೆ ನೇರವಾಗಿ ಯುದ್ಧ ಮಾಡದೆ, ತಂತ್ರ

ವಿದ್ಯೆಯ ಸಹಾಯದಿಂದ ಗೋಣಿಬಸಪ್ಪನನ್ನು ಕೊಲ್ಲುವ ಪ್ರಯತ್ನ ಮಾಡುತ್ತಾನೆ. ಅದರ ವಿವರಗಳು ಕಾವ್ಯದಲ್ಲಿ ಈ ರೀತಿಯಾಗಿ ವ್ಯಕ್ತವಾಗಿವೆ. 'ಆ ಗಾಣಿಗಾರೇ ನಮ್ಮೂರೊಳಗೆ 'ಅಂತ್ರ ಮಂತ್ರದ'ವರು ಯಾರಿಲ್ಲೇನಯ್ಯ ಎಂದಾಗ ಗಾಣಿಗಾರು ಹೇಳುತ್ತಾರೆ ಆ ಕಾಳಿ ಕೊಂಡಯ್ಯ ಇದ್ದಾನಯ್ಯ' ಈ ಕಾವ್ಯದಲ್ಲಿ ಕಾಳಿ ಕೊಂಡಯ್ಯನು ಆ ಕಾಲದ ತಂತ್ರವಿದ್ಯೆಯನ್ನು ಬಲ್ಲವನಾಗಿರುತ್ತಾನೆ. ಕಾಳಿ ಕೊಂಡಯ್ಯ ತಾನು ಎಂತಹ ತಂತ್ರ ವಿದ್ಯೆಯ ಪ್ರವೀಣ ಎಂದು ಕಾವ್ಯ ಈ ರೀತಿಯಾಗಿ ವಿವರಿಸುತ್ತದೆ.

"ಹರಹರ ಭಗವಂತ । ತಾನಿ ತಂದಾನಿ ನಾನೋ
ಮರಕ್ಕೆ ಕಾಯ ಕಟ್ಟಿದರ । ತಾನಿ ತಂದಾನಿ ನಾನೋ
ಮರವೇ ಉರಿದವಂತ । ತಾನಿ ತಂದಾನಿ ನಾನೋ
ಸಕ್ಕರಿಯ ನೋಡುಬರುವೇ । ತಾನಿ ತಂದಾನಿ ನಾನೋ
ಕಬ್ಬು ಮಾಡುವೆ ಗುರುವೇ । ತಾನಿ ತಂದಾನಿ ನಾನೋ
ಕಳ್ಳಿಯ ಮಾಡುವೆ ಗುರುವೇ । ತಾನಿ ತಂದಾನಿ ನಾನೋ
ಕಳ್ಳಿಯ ನೋಡು ಗುರುವೇ । ತಾನಿ ತಂದಾನಿ ನಾನೋ
ಹಾವಿ ಮಾಡುವನಂತೇ । ತಾನಿ ತಂದಾನಿ ನಾನೋ
ಕಲ್ಲು ನೋಡು ಗುರುವೇ । ತಾನಿ ತಂದಾನಿ ನಾನೋ
ಸಕ್ರಿಯ ಮಾಡುವನಂತೆ । ತಾನಿ ತಂದಾನಿ ನಾನೋ
ಸುಣ್ಣ ನೋಡು ಗುರುವೇ । ತಾನಿ ತಂದಾನಿ ನಾನೋ
ಬೆಣ್ಣಿಯ ಮಾಡುವಂತನೇ । ತಾನಿ ತಂದಾನಿ ನಾನೋ
ಸಗಣಿಯ ನೋಡು ಗುರುವೇ । ತಾನಿ ತಂದಾನಿ ನಾನೋ
ಬೆಲ್ಲ ಮಾಡುವನಂತೇ ಗುರುವೇ । ತಾನಿ ತಂದಾನಿ ನಾನೋ"[೬]

ರಾಜನ ಮುಂದೆ ಕಾಳಿ ಕೊಂಡಯ್ಯನು ತನ್ನ ಮಂತ್ರ ತಂತ್ರ ವಿದ್ಯೆಯನ್ನು ಪ್ರದರ್ಶನ ಮಾಡುತ್ತಾನೆ. ಕಾಳಿ ಕೊಂಡಯ್ಯನ ತಂತ್ರ ವಿದ್ಯೆಯನ್ನು ನೋಡಿದ ಚಿಗಟೇರಿ ಶಿವನಯ್ಯ ತನ್ನ ವಿರೋಧಿಯನ್ನು ಮಣಿಸಲು ತನಗೆ ಮಂತ್ರ, ತಂತ್ರ ವಿದ್ಯೆಯ ಮೂಲಕ ಸಹಾಯ ಮಾಡುವಂತೆ ಕೇಳಿಕೊಳ್ಳುವುದನ್ನು ಗೋಣಿಬಸಪ್ಪನ ಕಾವ್ಯದಲ್ಲಿ ಈ ರೀತಿಯಾಗಿ ಚಿತ್ರಿಸಲಾಗಿದೆ. "ಕಾಳಿ ಕೊಂಡಯ್ಯ ಒಂದು ಲಕ್ಷವಲ್ಲ ಎರಡು ಲಕ್ಷವಲ್ಲ, ಮೂರು ಲಕ್ಷವಲ್ಲ ಒಂಬತ್ತು ಲಕ್ಷ ಕೊಡ್ತೀನಯ್ಯ ಅವನ ಕೈಕಾಲು ಸುಟ್ಟೊಗಂತದೇ ಮಾಟ ಮಾಡಿಕೊಡು ನಿನಗೆ ಒಂಬತ್ತು ಲಕ್ಷ ಕೊಡ್ತೀನಯ್ಯ ಅಂತ'[೭] ರಾಜ ಕೇಳಿಕೊಳ್ಳುತ್ತಾನೆ. ಮಾಟದ ಮೂರು ಗೊಂಬಿಗಳನ್ನು ಚಲುವಾದಿ ಕಾಳಿ

ಕೊಂಡಯ್ಯ ಮಂತ್ರಿಸಿಕೊಡುತ್ತಾನೆ. ಕೂಲಹಳ್ಳಿ ಗೋಣಿಬಸಪ್ಪನ ಮಠದ ಬಾಗಿಲಲ್ಲಿ ಒಂದು ಗೊಂಬೆ, ಅವನು ಸ್ನಾನ ಮಾಡುವ ಮಜ್ಜನ ಬಾವಿಯಲ್ಲಿ ಇನ್ನೊಂದು ಗೊಂಬೆ, ಅವನು ಕೂರುವ ಗದ್ದಿಗೆ ಕೆಳಗೆ ಮತ್ತೊಂದು ಗೊಂಬೆ. ಒಟ್ಟು ಮೂರು ಮಾಟದ ಗೊಂಬೆಗಳನ್ನು ಮಾಡಿಕೊಟ್ಟಿರುತ್ತಾನೆ. ಅವುಗಳನ್ನು ಕಾಳಿಕೊಂಡಯ್ಯ ಹೇಳಿದ ಜಾಗದಲ್ಲಿ ಇಟ್ಟು ಬಂದಿರುತ್ತಾರೆ. ಅದನ್ನೆಲ್ಲಾ ಗೋಣಿಬಸಪ್ಪ ತನ್ನ ಪ್ರತಿ ತಂತ್ರ ವಿದ್ಯೆಯನ್ನು ಬಳಸಿ ನಿವಾರಿಸಿಕೊಳ್ಳುತ್ತಾ, ಕೊನೆಗೆ ಗೊಂಬೆಗಳನ್ನು ಸುಟ್ಟು ಅವುಗಳನ್ನು ಬಂಗಾರವಾಗಿ ಮಾಡಿಕೊಂಡು ತನ್ನ ಹೆಂಡತಿಯರಿಗೆ ವಾಲಿಕಪ್ಪು ಮಾಡಿಕೊಡುವುದರ ಮೂಲಕ ಮೊದಲ ಮಾಟ ಮಂತ್ರವನ್ನು ನಿವಾರಿಸಿಕೊಳ್ಳುತ್ತಾನೆ.

ಮಾಟ ಮಂತ್ರಕ್ಕೆ ಪ್ರತಿರೋಧ

ಚಲುವಾದಿ ಕಾಳಿ ಕೊಂಡಯ್ಯನ ಮೂರು ಗೊಂಬೆಯ ಮಾಟದ ತಂತ್ರ ವಿದ್ಯೆಯನ್ನು ಗೋಣಿಬಸಪ್ಪ ನಿವಾರಿಸಿಕೊಳ್ಳುವುದು ಪವಾಡಗಳ ಮೂಲಕ ತನ್ನ ದೈವಿ ಶಕ್ತಿಯನ್ನು ಬಳಸಿಕೊಂಡು ಚಲುವಾದಿ ಕಾಳಿ ಕೊಂಡಯ್ಯ ಮಾಡಿರುವ ಮೂರು ಗೊಂಬೆಗಳಿಗೆ ಸ್ವರ್ಗದ ದಾರಿ ತೋರಿ ಅವುಗಳನ್ನು ಶರಣಾಗುವಂತೆ ಮಾಡುತ್ತಾನೆ. ಆ ಮೂರು ಗೊಂಬೆಗಳು ಮೂರು ಸ್ಥಳದಲ್ಲಿ ಇಟ್ಟಿರುತ್ತಾರೆ. ಒಂದು: ಮಜ್ಜನ ಬಾವಿಯಲ್ಲಿ ಗೋಣಿಬಸಪ್ಪ ಸ್ನಾನಕ್ಕೆ ಕುಂತಾಗ ಆತನ ದೈವಿಶಕ್ತಿಯಿಂದ ಅಲ್ಲಿ ಹುದುಗಿರುವ ಮಂತ್ರದ ಗೊಂಬೆ ಮೇಲಕ್ಕೆ ಎದ್ದು ಪರಮಾತ್ಮ ಗುರುವಿನ ಪಾದ ಕಂಡು ಸ್ವರ್ಗ ಸೇರಬೇಕೆಂದು ಗುರುವಿನ ಪಾದಕ್ಕೆ ಬಿದ್ದು ಶರಣಾಗುತ್ತಾದೆ. ಅದನ್ನು ತಗೆದುಕೊಂಡು ತನ್ನ ಪೂಜಾರಿ ಕಲ್ಲಪ್ಪನ ಕೈಗೆ ಕೊಡುತ್ತಾನೆ. ಎರಡು: ಮಠದ ಬಾಗಿಲಿನ ಒಳ ಹುದುಗಿರುವ ಗೊಂಬೆ ಕೂಡ ಗೋಣಿ ಬಸಪ್ಪನನ್ನು ಸುಟ್ಟು ಬೂದಿ ಮಾಡದೆ ಗುರುವಿನ ಪಾದಕ್ಕೆ ಬೀಳುವುದು. ಮೂರು: ಮಠದ ಸಿಂಹಾಸನದ ಬಳಿ ಹುದುಗಿರುವ ಮೂರನೇ ಗೊಂಬೆ ಕೂಡ ಗೋಣಿಬಸಪ್ಪನ ದೈವಿ ಶಕ್ತಿಗೆ ಮಾರು ಹೋಗಿ ಆತನನ್ನು ಸುಡದೇ ಶರಣಾಗುತ್ತದೆ.

ಇದರಿಂದ ಗೋಣಿಬಸಪ್ಪನನ್ನು ಸುಟ್ಟು ಬೂದಿ ಮಾಡಬೇಕೆಂದು ತಯಾರು ಮಾಡಿದ ಮೂರು ಗೊಂಬೆಗಳು ಆತನಿಗೆ ಯಾವ ತೊಂದರೆಯನ್ನು ನೀಡದೆ ಶರಣಾಗುತ್ತವೆ. ಇವುಗಳನ್ನು ಮಠದ ಮುಂಭಾಗದಲ್ಲಿ ಸುಡಲು ಕಲ್ಲಪ್ಪನನ್ನು ಕಳಿಸುತ್ತಾನೆ. ಮೊರವಿ ಗೊಂಬೆಗಳಿಗೆ ಮತ್ತೆ ಜೀವ ಬಂದು ಕಲ್ಲಪ್ಪನ ಕೈಗೆ ಸಿಗದೆ ಗಾಳಿಯಲ್ಲಿ ಹಾರಾಡುತ್ತವೆ. ಅವುಗಳಿಗೆ ಮತ್ತೆ ಶಕ್ತಿ ಬಂದಿದ್ದರ ಪರಿಣಾಮವಾಗಿ ಹಾರಾಡುತ್ತವೆ ಎಂದು ತಿಳಿದ ಗೋಣಿಬಸಪ್ಪ ಅವುಗಳನ್ನು ಹಿಡಿದು ಬುದ್ಧಿ ಮಾತುಗಳನ್ನು ಹೇಳುತ್ತಾನೆ. "ಮೊರವಿ ಗೊಂಬೆಗಳಾ ಅಲ್ಲಿ ದೇವರಗಂಡ, ಹೆಣ್ಣು ದೇವರ ಮಿಂಡ ತುರುಕರ ದೇವರಿಗೆ ಗಂಡ, ಸಿದ್ಧರ ಕೂಡ ಆಡಿ ಸಿದ್ಧರ ವಿದ್ಯೆ ಕಲ್ತೀನಿ ನನಿಗೆ ಅಂತ್ರ ಮಂತ್ರ ಅತ್ತದಿಲ್ಲಾ ಮಾಡಿಕೊಟ್ಟನ ಸುದಿ ಮಾಲೆ ನೋಡಿ ಬೊಟ್ಟಿನಿ ಉರಿಯೊದು ಎಂದಾ." ಈ ರೀತಿ ಹೇಳಿದ ತಕ್ಷಣಕ್ಕೆ ಮೂರು ಮೊರವಿ ಗೊಂಬೆಗಳು ದಗ ದಗ ಉರಿಯುತ್ತವೆ. ಅವುಗಳು ಸುಟ್ಟು ಬೂದಿಯಾದಾಗ, ಅವುಗಳನ್ನು ನೀರಾಕಿ ನೆನೆ ಇಟ್ಟಾಗ ಅವುಗಳ ಅಡಿಯಲ್ಲಿ 'ದಡ್ಲಿ

ಕಾಯಿ' ಎಷ್ಟು ಬಂಗಾರ ಇತ್ತು. ಅದು ಚಲುವಾದಿ ಕಾಳಿ ಕೊಂಡಯ್ಯ ಮೊರವಿ ಗೊಂಬೆ ಮಾಡಲು ಎಷ್ಟು ಹಣ ತಗೊಂಡಿದ್ದನೋ, ಅಷ್ಟು ಹಣದ ಬಂಗಾರವಿತ್ತು. ಆ ಬಂಗಾರದಲ್ಲಿ ಅಕ್ಕಸಾಲಿಗಸಿಗೆ ಹೇಳುತ್ತಾನೆ. ಆ ಶಿವನಪ್ಪ ದಯದಿಂದ ಬಂಗಾರ ಕಂಡೀವಿ. ನಮ್ಮ ದೇಪ್ರಿಗೆ ಕಣ್ಣು ಕೊಂಬಿ ಮಾಡು. ಕ್ವಾರ ಮೀಸೆ ಮಾಡು. ಮತ್ತು ಗಂಡ್ಗೊಡ್ಲಿ ಮಾಡು. ಅದರಾಗೆ ಬಂಗಾರ ಉಳಿದ್ರೆ ನನಿಗಿಬ್ಬರೂ ಸೂಳೆರಾದ ಮಾಳಾದೇವಿ, ಪಿಟ್ವಾದೇವಿಯವರಿಗೆ ವಾಲಿಕಪ್ಪು ಮಾಡು ಅಂತ ಅಕ್ಕಸಾಲಿಗನಿಗೆ ಹೇಳು ಅಂತ ಗೋಣಿಬಸಪ್ಪನು ಕಲ್ಲಪ್ಪನಿಗೆ ಹೇಳುತ್ತಾನೆ.

ಮೊರವಿ ಅಂಗಿಯ ಮಾಟ

ಎರಡನೇ ಮಾಟವು ಗೋಣಿಬಸಪ್ಪನ ದೈವಶಕ್ತಿಗೆ ಮೀರಿದ್ದೇ ಆಗಬೇಕು. ಮಾಟದ ತೀವ್ರತೆ ಹೆಚ್ಚಾಗಬೇಕು ಎಂದು ಚೀಗಟೇರಿ ಶಿವನಯ್ಯ ಮತ್ತೇ ಮಂತ್ರಿ ಮುಂದೇ ಹೇಳುತ್ತಾನೆ. ಅದಕ್ಕೆ ಅಂತಹ ಮಾಟವನ್ನು ಮನುಷ್ಯರು ಮಾಡುವುದಿಲ್ಲ ಗಾಳಿ ಪೂಜೆಪಟ್ಟಣದ ಸಿದ್ಧರು ಇಟ್ಟುಕೊಂಡಿರುವ ದೆವ್ವಗಳ ಮೂಲಕ ಮಾಡಿಸಬೇಕು ಎಂದಾಗ ಚೀಗಟೇರಿ ಶಿವನಯ್ಯ ಈ ಮಾಟದ ವಿದ್ಯೆಯನ್ನು ಮಾಡಿಸಿಕೊಂಡು ಬರಲು ಹರಪನಹಳ್ಳಿಯ ಗಾಣಿಗರನ್ನು ಗಾಳಿ ಪೂಜಪಟ್ಟಣಕ್ಕೆ ಕಳುಹಿಸುತ್ತಾನೆ. ಈ ಗಾಣಿಗರು ಎಂಟು ದಿನದ ದಾರಿಯನ್ನು ಒಂದು ದಿನದ ಮಧ್ಯಾಹ್ನಕ್ಕೆ ಹೋಗಿ ಬಿಡುತ್ತಾರೆ. ಗಾಳಿ ಪೂಜೆ ಪಟ್ಟಣದಲ್ಲಿ ಸಿದ್ಧರು ಕತ್ತೆ, ಕುದುರೆ ಮತ್ತು ಮಂಗನ ಮುಖದವು, ಮುಖವೇ ಇಲ್ಲದವು ಮುಂತಾದ ದೆವ್ವಗಳಿಂದ ಮಾಟದ ಅಂಗಿಯನ್ನು ಮಾಡಿಸಿಕೊಂಡು ಅದನ್ನು ತಂದು ಗೋಣಿಬಸಪ್ಪನನ್ನು ಸಾಯಿಸುವುದು ಈ ಎರಡನೇ ಮಾಟದ ಮುಖ್ಯ ಉದ್ದೇಶವಾಗಿರುತ್ತದೆ. ಅದರಂತೆಯೇ ಗೋಣಿಬಸಪ್ಪ ಈ ಮಾಟದ ಅಂಗಿಯಿಂದಾಗಿ ಸಾಯುತ್ತಾನೆ.

ಹರಪನಹಳ್ಳಿ ಪಾಳೇಗಾರ ಶಿವನಯ್ಯ ಮೊರವಿ ಗೊಂಬೆ ಮಾಟದಿಂದ ಸೋತು ಸುಮ್ಮನೆ ಇರದೆ ಮತ್ತೆ ಗೋಣಿಬಸಪ್ಪನ ಮೇಲೆ ಮಾಟ ಮಾಡಿಸಲು ಮುಂದಾಗುತ್ತಾನೆ. ಈ ಸಲ ಮಾಟದ ತೀವ್ರತೆ ಹೆಚ್ಚಾಗಿರಲೆಂದು ಸಾಧು ಸಂತರ ಸಿದ್ಧರ ಮೊರೆ ಹೋಗುತ್ತಾನೆ. ಗೋಣಿ ಬಸಪ್ಪನ ಮೇಲೆ ಮತ್ತೆ ಮಾಟ ಮಾಡಿಸಲು ಗಾಳಿಪೂಜೆ ಪಟ್ಟಣದಿಂದ ಸಿದ್ಧರ ಕೈಲಿ ಮಾಟ ಮಾಡಿಸುತ್ತಾನೆ. ಮೊರವಿ ಅಂಗಿ ಮಾಡಿಸಿಕೊಂಡು ಬಂದು ಅದನ್ನು ಸ್ವತಃ ಸೋದರ ಮಾವನಾದ ಹರಪನಹಳ್ಳಿ ಪಾಳೇಗಾರ ಚಿಗಟೇರಿ ಶಿವನಯ್ಯ ತನ್ನ ಅಳಿಯನಾದ ಗೋಣಿ ಬಸಪ್ಪನಿಗೆ ಹಾಕಿಸಿ ಆತನನ್ನು ಕೊಲ್ಲಿಸುವ ಪ್ರಯತ್ನ ಮಾಡುತ್ತಾನೆ. ಮೊರವಿ ಅಂಗಿಯನ್ನು ಹಾಕಿಕೊಂಡ ಗೋಣಿ ಬಸಪ್ಪನಿಗೆ ಮೂರು ತಾಸಿನ ನಂತರ ಉರಿ ಕಾಣಿಸಿಕೊಳ್ಳುತ್ತದೆ. ಹೆಬ್ಬೆಟ್ಟಿನಿಂದ ಆರಂಭವಾಗಿ ಮಸ್ತಕದವರಿಗೆ ಉರಿ ಏರಿ ದಗ ದಗ ಉರಿದು ಸತ್ತು ಕೆಳಗೆ ಬೀಳುತ್ತಾನೆ. ಹರಪನಹಳ್ಳಿ ಪಾಳೇಗಾರ ಶಿವನಯ್ಯನ ಎರಡನೇ ಮಾಟದ ತಂತ್ರ ಫಲಿಸಿ ಗೋಣಿಬಸಪ್ಪನ ಪ್ರಾಣ ತೆಗೆಯುತ್ತಾನೆ. ಅಂದರೆ ಇಲ್ಲಿ ದೈವಿ ಶಕ್ತಿಗಿಂತ ಸಿದ್ಧರ ದೆವ್ವಗಳ ಶಕ್ತಿಯೇ ಹೆಚ್ಚಾಗಿ ಗೋಣಿಬಸಪ್ಪ ಪ್ರಾಣ ಬಿಡುತ್ತಾನೆ.

ಮೊರವಿ ಅಂಗಿಯ ಮಾಟ: ಪ್ರತೀಕಾರ :

ಗಾಳಿಪೂಜಿ ಪಟ್ಟಣದ ಸಿದ್ಧರು ಮಾಡಿಕೊಟ್ಟಿದ್ದ ಮಾಟ ಮೊರವಿ ಅಂಗಿ ತೊಟ್ಟ ಪರಿಣಾಮವಾಗಿ ಗೋಣಿಬಸಪ್ಪ ಸಾವನ್ನಪ್ಪುತ್ತಾನೆ. ಈ ಮೊರವಿ ಅಂಗಿಯ ಮಾಟದಿಂದ ಸತ್ತ ಗೋಣಿ ಬಸಪ್ಪನನ್ನು ಬದುಕಿಸುವುದು ಬಾಲಬಸವ. ಬಾಲಬಸವ ಕುಲದಲ್ಲಿ ಮಾದಿಗನಾಗಿರುವುದರಿಂದ ತನ್ನ ನಿಜರೂಪದಿಂದ ಬದುಕಿಸಿಕೊಳ್ಳಲು ಸಾಧ್ಯವಿಲ್ಲ ಹಾಗೂ ಮಾದಿಗ ಎನ್ನುವ ಕಾರಣಕ್ಕೆ ಮಠದ ಒಳಗೆ ಪ್ರವೇಶವಿಲ್ಲದ್ದರಿಂದ, ಆತನು ಹಾವಾಗಿ ಬಂದು ಗುರುವಿನ ಪ್ರಾಣ ಉಳಿಸುತ್ತಾನೆ. ಇದರಿಂದ ಚೇತರಿಸಿಕೊಂಡ ಗೋಣಿಬಸಪ್ಪ ಮಾಟ ಅಂಗಿಯ ಪ್ರತೀಕಾರವಾಗಿ ಚಿಗಟೇರಿ ಶಿವನಯ್ಯ ಹರಪನಹಳ್ಳಿ ಕರೆಕಲ್ಲು ಗುಡ್ಡದಲ್ಲಿ ರಕುತದ ಕಾಲ್‌ಮಡಿ(ಉಚ್ಚೆ)ಯಿಂದಾಗಿ ಮೂರ್ಛೆ ಬೀಳುವಂತೆ ಮಾಡುತ್ತಾನೆ. ಹರಪನಹಳ್ಳಿ ಪಾಳೇಗಾರ ಸಾವು ಬದುಕಿನ ಮಧ್ಯ ಇರುವಾಗ ಗೋಣಿಬಸಪ್ಪ ಆತನ ಮೇಲೆ ಕರುಣೆ ತೋರಿಸಿ ಮತ್ತೇ ಹರಪನಹಳ್ಳಿ ಪಾಳೇಗಾರನಿಗೆ ಜೀವದಾನ ನೀಡಿ ಮಾನವೀಯತೆಯನ್ನು ಮೆರೆಯುತ್ತಾನೆ. ಈ ರೀತಿಯಾಗಿ ಗೋಣಿಬಸಪ್ಪನ ಮೇಲೆ ಮಾಡಿದ ತಂತ್ರ ವಿದ್ಯೆ ಹಾಗೂ ಮಾಟ ಮಂತ್ರದ ಪ್ರಯೋಗ ಮತ್ತು ಪ್ರತೀಕಾರವನ್ನು ಬಾಲಬಸವರು ಹಾಡಿದ ಗೋಣಿಬಸಪ್ಪನ ಕಾವ್ಯದಲ್ಲಿ ಚಿತ್ರಿತವಾಗಿದೆ.

ಅಡಿ ಟಿಪ್ಪಣಿ

೧. ವೀರೇಶ ಬಡಿಗೇರ, **'ತಿಂತಿಣಿ ಮೌನೇಶ್ವರ ವಚನಗಳು,'** ಪು.೧೯

೨. ವೀರೇಶ ಬಡಿಗೇರ, **'ತತ್ವ ಕೊರವಂಜಿ,'** ಪು.೧೫೬

೩. ಬಾಲಬಸವ ಹುಗ್ಗಿ ಹನುಮಂತಪ್ಪ ಹೇಳಿದ ಕಾಲಜ್ಞಾನ

೪. ವೆಂಕಟೇಶ ಇಂದ್ವಾಡಿ, **'ಬಾಲಬಸವ ತುಮನೆಪ್ಪ ಹಾಡಿದ ಗೋಣಿಬಸಪ್ಪನ ಕಾವ್ಯ,'** ಪು.೮೦

೫. ಅದೇ, ಪು.೬೩

೬. ಅದೇ, ಪು.೬೭-೬೮

೭. ಅದೇ, ಪು. ೯೯

೮. ಅದೇ, ಪು.೯೯

ಅಧ್ಯಾಯ : ೬

ಬಾಲಬಸವರ ಮೌಖಿಕ ಸಾಹಿತ್ಯ: ಸಾಂಸ್ಕೃತಿಕ ನಾಯಕರುಗಳು ಮತ್ತು ಸಮುದಾಯ ಪ್ರಜ್ಞೆ

ಅಧ್ಯಾಯ-೬

ಬಾಲಬಸವರ ಮೌಖಿಕ ಸಾಹಿತ್ಯ: ಸಾಂಸ್ಕೃತಿಕ ನಾಯಕರು ಮತ್ತು ಸಮುದಾಯ ಪ್ರಜ್ಞೆ

ಮೌಖಿಕ ಹಾಡುಗಾರಿಕೆ ಪರಂಪರೆಯು ಒಂದು ನಿರ್ದಿಷ್ಟ ಸಮುದಾಯವನ್ನು ಅವಲಂಬಿಸಿರುತ್ತದೆ. ಅಂದರೆ ಒಂದು ಸಮುದಾಯವು ಸಮಾಜದಲ್ಲಿ ತನ್ನ ಅಸ್ತಿತ್ವ ಉಳಿಸಿಕೊಳ್ಳಲು ತನ್ನೊಳಗಿರುವ ಸಾಂಸ್ಕೃತಿಕ ಚರಿತ್ರೆಯನ್ನು ಮರುನಿರ್ಮಾಣ ಮಾಡಲು ತನ್ನ ಸಮುದಾಯದ ಸಾಂಸ್ಕೃತಿಕ ನಾಯಕರು ಬದುಕಿನ ಹೋರಾಟವನ್ನು ಕಥನವಾಗಿ ಕಟ್ಟಿ ಆ ಕಥನದೊಂದಿಗೆ ತಮ್ಮ ಸಾಮಾಜಿಕ ಜೀವನ ನಿರ್ವಹಣೆ ಮಾಡಿಕೊಂಡು ಬಂದಿದ್ದಾರೆ. ದಕ್ಷಿಣ ಕರ್ನಾಟಕದಲ್ಲಿ ನೀಲಗಾರರು ಮಂಟೇಸ್ವಾಮಿ ಕಥೆಯನ್ನು ಹಾಡುತ್ತಾರೆ. ದೇವರಗುಡ್ಡದವರು ಮಲೆಮಾದಪ್ಪನ ಕಥೆಯನ್ನು ಹಾಡುತ್ತಾರೆ. ಬಿಳಿಗಿರಿರಂಗನ ಕಾವ್ಯವನ್ನು ಸೋಲಿಗರು ಹಾಡಿದರೆ, ಉತ್ತರ ಕರ್ನಾಟಕದಲ್ಲಿ ಎಲ್ಲಮ್ಮ ಕಾವ್ಯ ಹಾಡುವ ಜೋಗತಿಯರು, ಮೈಲಾರ ಲಿಂಗಪ್ಪ ಕಥೆ ಹಾಡುವ ಗೊರವರು (ಕುರುಬರು), ಜುಂಜಪ್ಪನ ಕಾವ್ಯ ಹಾಡುವ ಗೊಲ್ಲರು, ಮ್ಯಾಸಬೇಡ ವೀರರ ಕಥೆಗಳನ್ನು ಹಾಡುವ ಬೇಡರು ಮುಂತಾದ ಸಮುದಾಯಗಳು ಮೌಖಿಕ ಕಾವ್ಯಗಳ ಮೂಲಕ ತನ್ನ ಸಮುದಾಯಗಳ ಸ್ಥಳೀಯ ಸಾಂಸ್ಕೃತಿಕ ಚರಿತ್ರೆಯನ್ನು ಕಟ್ಟಿಕೊಂಡಿದ್ದಾರೆ. ಮೌಖಿಕ ಕಥೆ ಮತ್ತು ಕಾವ್ಯಗಳನ್ನು ಹಾಡುವ ಸಮುದಾಯಗಳಿಗೆ ಪರಸ್ಪರವಾದ ಸಾಂಸ್ಕೃತಿಕ ಸಂಬಂಧಗಳಿವೆ.

೧೨ನೇ ಶತಮಾನದ ವಚನ ಚಳುವಳಿ ಮತ್ತು ಕಲ್ಯಾಣದ ಕಾಂತ್ರಿಯ ನಂತರದಲ್ಲಿ ಕಾಣಿಸಿಕೊಂಡ ಪ್ರಮುಖ ಸಾಂಸ್ಕೃತಿಕ ನಾಯಕರಾದ ಬಸವಣ್ಣ, ಹರಳಯ್ಯ, ಮರುಳಸಿದ್ಧ, ಗೋಣಿಬಸಪ್ಪ, ಮದ್ದಾನೇಶ್ವರ, ಕೊಟ್ಟೂರೇಶ್ವರ, ಚನ್ನಬಸವಣ್ಣ ಮುಂತಾದ ಮಧ್ಯಕಾಲೀನ ಶಿವಶರಣರ ಜೀವನ ಮತ್ತು ಸಂಘರ್ಷಮಯ ಬದುಕನ್ನು ಕಥನವಾಗಿ ಕಟ್ಟಿ ಹಾಡುವ ಮೌಖಿಕ ಗಾಯಕ ಪರಂಪರೆ ಎಂದರೆ ಅದು ಬಾಲಬಸವ ಪರಂಪರೆ. ಈ ಗಾಯಕ ಪರಂಪರೆಯು ತಮ್ಮ ಮೌಖಿಕ ಸಾಹಿತ್ಯದಲ್ಲಿ ತಮ್ಮ ಸಮುದಾಯದ ಪರವಾಗಿರುವ ಈ ಸಾಂಸ್ಕೃತಿಕ ನಾಯಕರನ್ನಾಗಿ ಚಿತ್ರಿಸಿದ್ದಾರೆ. ಈ ಸಾಂಸ್ಕೃತಿಕ ನಾಯಕರು ತಮ್ಮದೇ ಆದ ಕಾಯಕ, ಸಮಾಜದಲ್ಲಿನ ಮೌಢ್ಯತೆಯನ್ನು

ಪವಾಡ ಮಾಡುವುದರ ಮೂಲಕ ತಮ್ಮ ಜೀವಿತಾವಧಿಯಲ್ಲಿ ಸಮಾಜದಲ್ಲಿರುವ ಅನೇಕ ಸಾಮಾಜಿಕ ಸಮಸ್ಯೆಗಳಿಗೆ ಉತ್ತರ ಕಂಡುಕೊಳ್ಳುವುದು ಮತ್ತು ಜನತೆಗೆ ತಿಳಿಸುವುದರ ಮೂಲಕವೇ ಜನಪ್ರಿಯರಾದವರು. ಇವರ ಇಡೀ ಜೀವನದ ಸಂಘರ್ಷಮಯ ಬದುಕನ್ನು ಬಾಲಬಸವರು ತಮ್ಮ ಮೌಖಿಕ ಸಾಹಿತ್ಯದ ಮೂಲಕ ಸಮಾಜಕ್ಕೆ ಹೇಳುವ ಕಾರ್ಯವನ್ನು ಮಾಡಿಕೊಂಡು ಬಂದಿದ್ದಾರೆ.

ವಚನಕಾರರು ತಮ್ಮ ಅಭಿವ್ಯಕ್ತಿಧಾರೆಗಳನ್ನು ಶಿಷ್ಟ ಮತ್ತು ಸಂಸ್ಕೃತ ಚೌಕಟ್ಟುಗಳಿಂದ ಬಿಡುಗಡೆಗೊಳಿಸಿ ಅಚ್ಚಗನ್ನಡದ ವಚನಗಳಿಗೆ ಆದ್ಯತೆಯನ್ನು ನೀಡಿದ್ದರಿಂದ, ಕೆಳವರ್ಗದ ಮೌಖಿಕ ಧಾರೆಗಳ ಅಭಿವ್ಯಕ್ತಿಗೆ ನಾಂದಿಯಾಯಿತು. ತಡವಾಗಿಯೇ ಆದರೂ ಮರೆಮಾಚಿದ, ಬಚ್ಚಿಟ್ಟ ತಮ್ಮ ಚರಿತ್ರೆಗಳನ್ನು ಪುರಾಣೀಕರಿಸಿ ಹಾಡುವುದನ್ನು ದಲಿತರು ಕಲಿತರು. ತಡೆದಿಟ್ಟ ನದಿಯಂತೆ ಅಡಗಿದ್ದ ಅವರ ಅಭಿವ್ಯಕ್ತಿ ತಮ್ಮ ಪೂರ್ವಜರ ಬದುಕನ್ನು ತಮ್ಮ ಪರವಾದ ಘಟನೆಗಳನ್ನು ನಿರ್ಮಿಸುವ ಕಥನ ಶಕ್ತಿಯನ್ನು ಕಲಿತಿದ್ದರಿಂದಲೇ, ಅನೇಕ ಸಾಂಸ್ಕೃತಿಕ ನಾಯಕರು ಮಧ್ಯಕಾಲೀನ ಕಾಲಘಟ್ಟದಲ್ಲಿ ಕಾಣಿಸಿಕೊಳ್ಳುತ್ತಾರೆ. ಇವರು ತಮ್ಮ ಕಾಲದಲ್ಲಿ ವೀರಶೈವ ಪಂಥವು ಸಾಂಸ್ಥಿಕವಾಗುತ್ತಿರುವುದನ್ನು ಕಂಡು ಪ್ರತಿಭಟಿಸಿದರು. ಕೆಳವರ್ಗದವರು, ಕುಶಲಕರ್ಮಿಗಳು, ಕಾಯಕಪ್ರಧಾನ ಪರಂಪರೆಯವರೂ ತಮ್ಮ ಸ್ಮೃತಿಗಳಿಂದ ಸಾಂಸ್ಕೃತಿಕ ಅನನ್ಯತೆಯನ್ನು ಕಟ್ಟಿಕೊಡುವ ಪ್ರಯತ್ನ ಮಾಡಿದರು. ಬಸವಣ್ಣನ ನಂತರ ಮಧ್ಯಕಾಲೀನ ಚರಿತ್ರೆಯಲ್ಲಿ ೧೫, ೧೬ ಮತ್ತು ೧೭ನೇ ಶತಮಾನದಲ್ಲಿ ಅಸಂಖ್ಯಾತ ಕೆಳವರ್ಗದ ಸಾಂಸ್ಕೃತಿಕ ನಾಯಕರು ಕಂಡುಬರುತ್ತಾರೆ. ಮರುಳಸಿದ್ಧ, ಮಂಟೇಸ್ವಾಮಿ, ಮಲೆಮಾದಪ್ಪ, ಮದ್ದಾನೇಶ್ವರ, ಕೊಟ್ಟೂರೇಶ್ವರ, ಗೋಣಿಬಸಪ್ಪ, ನಾಯಕನಹಟ್ಟಿ ತಿಪ್ಪೇರುದ್ರಸ್ವಾಮಿ, ತಿಂಥಿಣಿ ಮೋನಪ್ಪ, ಕೊಡೇಕಲ್ಲ ಬಸವಣ್ಣ ಮುಂತಾದವರು ನಮ್ಮ ಮುಂದಿರುವ ಸಾಂಸ್ಕೃತಿಕ ನಾಯಕರು. ಅಲಕ್ಷಿತ ಸಮುದಾಯಗಳ ಸಾಂಸ್ಕೃತಿಕ ನಾಯಕರ ಕುರಿತು ಇನ್ನೂ ಹೆಚ್ಚಿನ ಅಧ್ಯಯನಗಳಾಗಬೇಕಿದೆ. ಬಾಲಬಸವರು ಹಾಡುವ ಕಾವ್ಯಗಳಾದ ಗೋಣಿಬಸಪ್ಪನ ಕಾವ್ಯ ಮತ್ತು ಮರುಳಸಿದ್ಧನ ಕಾವ್ಯಗಳನ್ನು ಪ್ರಧಾನ ಆಕರಗಳನ್ನಾಗಿಸಿಕೊಂಡು ಅದರಲ್ಲಿ ಬರುವ ಬಸವಣ್ಣ, ಹರಳಯ್ಯ, ಪಂಚಗಣಾಧೀಶ್ವರರು, ಮದ್ದಾನೇಶ್ವರ, ಗೋಣಿಬಸಪ್ಪ, ಬಾಲಬಸವ, ಮರುಳಸಿದ್ಧ ಮಹಾದೇವ, ಚನ್ನಬಸವಣ್ಣ ಮುಂತಾದ ಸಾಂಸ್ಕೃತಿಕ ನಾಯಕರು ತಮ್ಮ ಸಮುದಾಯಗಳಲ್ಲಿ ಸಮುದಾಯ ಪ್ರಜ್ಞೆಯನ್ನು ಜಾಗೃತಿಗೊಳಿಸುವಲ್ಲಿ ಯಾವ ಪಾತ್ರ ವಹಿಸುತ್ತಾರೆ? ಅವರ ಜಾತಿ ಕಾರಣದಿಂದ ಅಪಮಾನಕ್ಕೆ ಒಳಗಾಗಿ ಸಂಗತಿಗಳು ಮತ್ತು ಅದನ್ನು ಯಾವ ರೀತಿಯಲ್ಲಿ ಪ್ರತಿರೋಧಿಸುತ್ತಾರೆ ಎನ್ನುವ ವಿಷಯಗಳನ್ನು ಈ ಅಧ್ಯಾಯದಲ್ಲಿ ವಿವರಿಸಲಾಗಿದೆ.

೬.೧. ಬಸವಣ್ಣ

ಬಸವಣ್ಣನು ಪ್ರಭುತ್ವ ಮತ್ತು ಜನಸಮುದಾಯ ಈ ಎರಡನ್ನು ಕಂಡಿದ್ದರಿಂದ ಕುಲ ಸಂಘರ್ಷಕ್ಕೆ ಉತ್ತರ ಹುಡುಕುವ ಸಂಕಷ್ಟಕ್ಕೆ ನಿಲ್ಲುತ್ತಾನೆ. ಮೊದಲು ಪಾರಂಪರಿಕಶಾಸ್ತ್ರ ಆಚರಣೆಯಾದ

ತನ್ನ ಜನಿವಾರವನ್ನು ಕಿತ್ತಾಕಿದ. ನಂತರ ಪ್ರಭುತ್ವದ ಮೂಲಕ ಅದನ್ನು ಸರಿಪಡಿಸಲು ಭಂಡಾರಿಯಾದ. ಸಂಸ್ಕೃತವನ್ನು ನಿರಾಕರಿಸಿದ. ಈಗಾಗಲೇ ಶರಣರು ಬಳಸಿದ್ದ ವಚನ ಎಂಬ ಅಭಿವ್ಯಕ್ತಿ ಮಾದರಿಯನ್ನು ಹೆಚ್ಚು ಪ್ರಚಲಿತಗೊಳಿಸಿದ. ದಾಸೋಹ ಎನ್ನುವ ಪರಿಕಲ್ಪನೆಯನ್ನು ತಂದು ಗಣ ಮೂಲದ ಪರಿಕಲ್ಪನೆಯಾದ 'ಸಾಮೂಹಿಕ ಊಟ' ಎಂದು ತನ್ನ ಗಣಗಳನ್ನು ಲಕ್ಷದ ಮೇಲೆ ತೊಂಬತ್ತಾರು ಸಾವಿರ ಎಂದು ವಿಸ್ತರಿಸಿದ. ತನ್ನ ವಚನ ಚಳುವಳಿಯಲ್ಲಿ ದಲಿತ ಮತ್ತು ದುಡಿಯುವ ಕೆಳವರ್ಗದ ಸಮುದಾಯಗಳಿಗೆ ಸ್ಥಾನ ನೀಡಿ, ಅವರಿಗೆ ಎಲ್ಲರಂತೆ ಲಿಂಗಧಾರಣೆ ಮಾಡಿ, ಅವರನ್ನು ಶಿವಶರಣರಂತೆ ಅನುಭವ ಮಂಟಪದಲ್ಲಿ ಸಮಾನತೆಯ ಸ್ಥಾನ ನೀಡಿದ. ಎಲ್ಲಾ ಜಾತಿಯ ಶರಣರು ದಾಸೋಹದಲ್ಲಿ ಉಣ್ಣಬೇಕೆಂದು ಕನಸು ಕಂಡ. ಜಂಗಮರ ಪ್ರತಿಭಟನೆ ಅನುಭವಿಸಿದ ನಂತರ ದಾರಿ ಕಾಣದೆ ಕುಲಗಳನ್ನು ಒಂದುಗೂಡಿಸುವ ಪ್ರಯತ್ನದಲ್ಲಿ ಹರಳಯ್ಯನ ಮಗ ಮತ್ತು ಮಧುವರಸನ ಮಗಳ ವೈವಾಹಿಕ ಸಂಬಂಧಕ್ಕೆ ಅನುಮತಿಸಿದ. ಕೊನೆಗೆ ಕಲ್ಯಾಣ ಕ್ರಾಂತಿಯನ್ನು ಕಂಡು ಕೂಡಲ ಸಂಗಮದಲ್ಲಿ ಕೊನೆಯಾದ.

ಬಾಲಬಸವ ತುಮನೆಪ್ಪ ಗೋಣಿಬಸಪ್ಪನ ಕಾವ್ಯದಲ್ಲಿ ಮತ್ತು ಮರುಳಸಿದ್ಧನ ಕಾವ್ಯದಲ್ಲೂ ಬಸವಣ್ಣನ ಕುರಿತು ಅನೇಕ ಸಂಗತಿಗಳನ್ನು ಹಾಡುತ್ತಾರೆ. ಕಲ್ಯಾಣದಲ್ಲಿ ಸಾಮೂಹಿಕ ಊಟವನ್ನು ಏರ್ಪಡಿಸಿದಾಗ ಡಾಂಭಿಕ ಶಿವಭಕ್ತಿಯನ್ನು ಪರೀಕ್ಷೆ ಮಾಡಲು ಶಿವನೇ ಅಂಗವಿಕಾರಿಯಾಗಿ ಅನುಭವ ಮಂಟಪಕ್ಕೆ ಬರುತ್ತಾನೆ. ಶಿವಶರಣನಲ್ಲದ ಕಾರಣ ಆತನನ್ನು ಒಳಗಡೆ ಬಿಡುವುದಿಲ್ಲ. ಈ ಕಾರಣಕ್ಕೆ ಅಲ್ಲಿರುವ ಶಿವಶರಣರ ಭಕ್ತಿಯನ್ನು ಬಸವಣ್ಣನಿಗೆ ತಿಳಿಸಲು ಪವಾಡ ಮಾಡುವ ಯೋಚನೆ ಮಾಡಿ ಶಿವ ಅಲ್ಲಿಂದ ಹೊರಟು ಹೋಗುತ್ತಾನೆ. ಬಸವಣ್ಣ ಮತ್ತು ನೀಲಮ್ಮನಿಗೆ ಶಿವನ ಆಗಮನದ ಅರಿವು ಉಂಟಾಗಿ ಅಂಗವಿಕಾರಿಯಾದ ಸ್ವಾಮಿಯನ್ನು ವಿಚಾರಿಸುತ್ತಾರೆ. ಆದರೆ ಶಿವರೂಪದ ಆ ಸ್ವಾಮಿ ಎಷ್ಟೇ ಕರೆದರೂ ಬರುವುದಿಲ್ಲ. ಕೈಹಿಡಿದು ಎಬ್ಬಿಸುವ ಪ್ರಯತ್ನ ಮಾಡುತ್ತಾರೆ. ಬಸವಣ್ಣ ಆತನ ಕೈಹಿಡಿದು ಎತ್ತುವಾಗ ಕೈ ಹಾಗೇ ಬಂದು ಬಿಡುತ್ತದೆ. ಶಿವನ ದೇಹವೆಲ್ಲಾ ರಕ್ತ ಮತ್ತು ಮಾಂಸ ಕೀವಾಗಿ ಬಿಡುತ್ತದೆ. ಅದನ್ನು ಬಸವಣ್ಣ ತೆಗೆದುಕೊಂಡು ಸಾಮೂಹಿಕ ಊಟ ಮಾಡುವ ಸ್ಥಳಕ್ಕೆ ಬಂದಾಗ ರಕ್ತ, ಕೀವಾದ ಶಿವನ ದೇಹ ಬಿದ್ದು ಅಲ್ಲಿನ ಪ್ರದೇಶವೆಲ್ಲ ಗಬ್ಬುನಾಥ ಹೊಡೆಯುತ್ತದೆ. ಇದರಿಂದ ಅಲ್ಲಿನ ಶಿವಶರಣರು ಮಡಿಮೈಲಿಗೆ ಎಂದು ಹೊರಟು ಕಲ್ಯಾಣದ ತಿಪ್ಪರಂಜೆಯ ಕರೆಯಲ್ಲಿ ಮುಳುಗಿ ಏಳುವಾಗ ಅವರ ಲಿಂಗವೆಲ್ಲಾ ಮಾಯವಾಗಿ ಹೋಗುತ್ತವೆ. ಆಗ ಬಸವಣ್ಣ ಶಿವಶರಣರ ಡಾಂಭಿಕ ಭಕ್ತಿಯ ಕಪಟತೆಯನ್ನು ಕಾಣುತ್ತಾನೆ. ಇದರಿಂದ ಬಸವಣ್ಣ ವೀರಶೈವ ಪಂಥದಲ್ಲೂ ಹಿಂದೂ ಧರ್ಮದ ಕಂದಾಚಾರಗಳೇ ಹಾಸು ಹೊಕ್ಕಾಗಿರುವುದನ್ನು ಕಂಡು ಮರುಗುತ್ತಾನೆ. ಮುಂದೆ ಕಲ್ಯಾಣದ ಕಾಂತ್ರಿಯ ನಂತರ ಬಾಲಬಸವರನ್ನು ದತ್ತುಪುತ್ರರೆಂದು ಸ್ವೀಕರಿಸಿರುವುದರಿಂದ ಬಾಲಬಸವರು ನಾವು ಬಸವಣ್ಣನ ಮಕ್ಕಳು. ಆತ ನಮ್ಮನ್ನು ವೀರಶೈವ ಪಂಥದ ಆಚಾರ ವಿಚಾರಗಳನ್ನು ಜನತೆಗೆ ತಿಳಿ ಹೇಳುವ

ಕಾಯಕವನ್ನು ಒಪ್ಪಿಸಿದ್ದಾನೆ ಎಂದು ಹೇಳುತ್ತಾರೆ. ಹಾಗಾಗಿ ಅವರು ತಮ್ಮ ಲೌಕಿಕ ಕಾವ್ಯಗಳನ್ನು ಹಾಡುವಾಗ ಮತ್ತು ಕಾಲಜ್ಞಾನ ಸಾರುವಾಗ ಬಸವಣ್ಣನ ಸ್ತುತಿ ಮಾಡದೇ ಮುಂದೆ ಹೋಗುವುದಿಲ್ಲ. ಹಾಗಾಗಿ ಬಸವಣ್ಣನನ್ನು ತನ್ನ ಸಮುದಾಯದ ಸಾಂಸ್ಕೃತಿಕ ನಾಯಕನೆಂದು ಕರೆದುಕೊಳ್ಳುತ್ತಾರೆ.

೬.೨. ಹರಳಯ್ಯ

ದಲಿತವರ್ಗದ ಶಿವಶರಣರಲ್ಲಿ ಹರಳಯ್ಯನಿಗೆ ತನ್ನದೇ ಆದ ಮಹತ್ವದ ಸ್ಥಾನಮಾನವಿದೆ. ಹರಳಯ್ಯ ಮತ್ತು ಬಸವಣ್ಣನಿಗೆ ಸಂಬಂಧಪಟ್ಟ ಅನೇಕ ಸಂಗತಿಗಳು ಮೌಖಿಕ ಕಾವ್ಯಗಳಲ್ಲಿ, ಕಥೆಗಳಲ್ಲಿ, ನಾಟಕಗಳಲ್ಲಿ ನಾವು ಕಾಣಬಹುದಾಗಿದೆ. ದಲಿತ ಸಮುದಾಯದ ಸಾಂಸ್ಕೃತಿಕ ಅಸ್ತಿತ್ವದ ಭಾಗವಾಗಿ ಹರಳಯ್ಯ ವಚನ ಚಳುವಳಿಯಲ್ಲಿ ಕಂಡುಬರುತ್ತಾನೆ. ಬಸವಣ್ಣನೊಂದಿಗೆ ಕುಲಸಂಕರ ಮದುವೆಗೆ ಕಾರಣವಾಗುವ ಹರಳಯ್ಯ ಅಂದಿನ ಕಾಲಘಟ್ಟದಲ್ಲಿನ ಸಾಮಾಜಿಕ ಕಟ್ಟುಪಾಡುಗಳನ್ನು ಮೀರುವ ಪ್ರಯತ್ನ ಮಾಡುತ್ತಾನೆ. ಇದರಿಂದಾಗಿ ಅನೇಕ ಸಂಕಷ್ಟಗಳನ್ನು ಎದುರಿಸುತ್ತಾನೆ. ಹರಳಯ್ಯನ ಕುರಿತು ಅನೇಕ ಮೌಖಿಕ ಕಾವ್ಯಗಳು ಬಂದಿವೆ. ಆದರೆ ಬಾಲಬಸವರ ಮೌಖಿಕ ಸಾಹಿತ್ಯದಲ್ಲಿ ಹರಳಯ್ಯನು ಮಾದಿಗ ಸಮುದಾಯದ ಪ್ರತಿನಿಧಿಯಾಗಿ ಹೇಗೆ ಸಮುದಾಯದ ಜಾಗೃತಿಗೆ ಕಾರಣವಾಗುತ್ತಾನೆ ಎನ್ನುವುದನ್ನು ಬಾಲಬಸವರು ಹೇಳುತ್ತಾರೆ. ಬಾಲಬಸವರ ಕಾಲಜ್ಞಾನ ಮತ್ತು ಮೌಖಿಕ ಕಾವ್ಯಗಳಲ್ಲಿ ಹರಳಯ್ಯನನ್ನು ದಲಿತರ ಸೃಜನಶೀಲತೆಯ ಭಾಗವಾಗಿ ಚಿತ್ರಿಸಲಾಗಿದೆ.

ದಲಿತ ಸಮುದಾಯದ ಸಾಂಸ್ಕೃತಿಕ ಚರಿತ್ರೆಯ ಭಾಗವಾಗಿ ದಲಿತರ ಅಸ್ತಿತ್ವವನ್ನು ಅವರ ಜ್ಞಾನಮೀಮಾಂಸೆಯಿಂದ ತಮ್ಮ ಇರುವಿಕೆಯನ್ನು ಗುರುತಿಸುವುದು. ಅಂದರೆ ಯಾರು ಮಾಡಲಾಗದ ಕಾರ್ಯವನ್ನು ದಲಿತರ ಮೂಲಕ ಮಾಡಿಸುವುದು. ಇದರಿಂದ ಅವರ ಕುಶಲ ಕುಲ ಕಲೆಗಾರಿಕೆ, ಬುದ್ಧಿಜ್ಞಾನವು ಇತರರಿಗಿಂತ ಭಿನ್ನವಾಗಿದೆ ಎಂದು ಗುರುತಿಸುವುದು. ಗೋಣಿಬಸಪ್ಪನ ಕಥೆಯಲ್ಲಿ ದಲಿತತ್ವದ ನಿರ್ವಚನ ಮಾಡುವಾಗ ಬಾಲಬಸವ ತುಮನೆಪ್ಪ ಬಳಸುವ ಕ್ರಮ ಮಹತ್ವದ್ದಾಗಿದೆ. ಈ ಕಥೆಯಲ್ಲಿ ದಲಿತತ್ವ ಎಂದರೆ ಈ ಲೋಕವನ್ನೇ ಸೃಷ್ಟಿಸಿದ ಪಾರ್ವತಿ ಪರಮೇಶ್ವರರಿಗೆ ಮದುವೆಯಾಗ ಬೇಕಿರುತ್ತದೆ. ಆದರೆ ತಾಳಿ ಮಾಡುವುದು ಯಾರಿಗೂ ತಿಳಿದಿರುವುದಿಲ್ಲ. ತಾಳಿ ಮಾಡುವ ವಿಧಾನ ಅಥವಾ ತಂತ್ರಗಾರಿಕೆ ದಲಿತನಾದ ಹರಳಯ್ಯನಿಗೆ ಮಾತ್ರ ಗೊತ್ತಿರುತ್ತದೆ. ಶಿವ ಪಾರ್ವತಿಯರ ಮದುವೆಗೆ ದಲಿತನಾದ ಹರಳಯ್ಯ ತನ್ನ ಕುಶಲ ತಂತ್ರಗಾರಿಕೆಯ/ ಬುದ್ಧಿವಂತಿಕೆಯಿಂದ ತಂಗಡಿಕೆ ಗಿಡದಿಂದ ತಾಳಿ ಮಾಡಿ ಶಿವ ಪಾರ್ವತಿಯರ ಮದುವೆಗೆ ಸಾಕ್ಷಿಯಾಗುವುದು ದಲಿತತ್ವಕ್ಕೆ ಸಿಕ್ಕ ಗೌರವವಾಗಿದೆ. ಇದನ್ನು ಬಾಲಬಸವ ತುಮನೆಪ್ಪ ಗೋಣಿ ಬಸಪ್ಪನ ಕಾವ್ಯದಲ್ಲಿ ಈ ರೀತಿಯಾಗಿ ವ್ಯಕ್ತಪಡಿಸುತ್ತಾನೆ. "ಕೈಲಾಸಕ್ಕೆ ಹೋದಾಗ ಪಾರ್ವತಿ ಪರಮಾತುರನ್ನ ಲಗ್ನ ಪ್ರಾರಂಭ ಆತಂತ್ರೀ. ಆದಾಗ ಪರಮಾತುಮಗ ತಾಳಿಕಟ್ಟೋ ಮಂಗಳಸೂತ್ರ ಗೊತ್ತಿಲ್ರೀ, ಅಂತ ಮಹಾತುಮುಗ. ಏನು ಕಟ್ಟಬೇಕು ಯ್ಯಾಂಗ ಮಾಡಬೇಕು, ಕಾರ್ಯ ಯ್ಯಾಂಗ

ಮಾಡಬೇಕು ಅಂತ ಅರ್ಥ್ಗ ಗೊತ್ತಿಲ್ಲ. ಆ ಮಹಾತುಮುಗ. ಆಗ ಶರಣ್ರೆಲ್ಲಾ ಸೇರಿಬಿಟ್ಟಾರು. ಸೇರಿದಾಗ ಆಗ ಪರಮಾತುಮ ಹೇಳ್ತಾರೆ. ನರಕಲಿಯೊಳಗೆ, "ಹರಳಯ್ಯನೋರೆ, ನೀನು ನನಿಗಿನ ದೊಡ್ಡನಪ್ಪ ಆದ್ರೆ ಈಗ ಲಗ್ನಾಗ್ತೀನಿ. ಆ ಮಂಗಳಸೂತ್ರ ಯ್ಯಾಂಗ ಕಟ್ಟೇಕು, ಅದು ಎಂತದು ಸ್ವಲ್ಪ ನಿನಗೆ ಗೊತ್ತಂತೆ ಹೇಳ್ಬೇಕು' ಅಂದ. ಅಂದಾಗ ಹರಳಯ್ಯ ಹೇಳ್ದ. ಅಲ್ರೀ ಆಗಿನ ಕಾಲಕ್ಕ ಬಂಗಾರ ಎಲ್ಲಿದ್ದು, ಮಣಿ ಎಲ್ಲಿದ್ದು, ದಾರ ಎಲ್ಲಿದ್ದು, ಇಲ್ಲ. ಈ ನಮ್ಮ ಹರಿಜನ ತಂಗಡಿ ಕಟ್ಟಿಗಿ ಬಡಿತಾರಲ್ರೀ ಹಸೆಕಟ್ಟಿಗಿ ಬಡಿತಾರ. ಆ ತಂಗಡಕಿ ಹೂವು ತಗಂಡ ಬಂದಾ. ಇದೆ ನೋಡ್ರಿ ಮಂಗಳಸೂತ್ರ ಇದನ್ನ ಕಟ್ಡರೀ' ಅಂತ ಹೇಳ್ದ. ಆಗ ಪಾರ್ವತಿ ಕೊರಳಾಕೆ ಆ ತಂಗಡಿ ಹೂವು ಕಟ್ಟಿ ಪರಮಾತುಮ

ಗುರುವೆ ಲಗ್ನ ಆಗ್ಯಾನಯ್ಯೋ । ಸೋಕಿರ ಮೂವ ತಾಜೀಜಿ ।
ಗುರುವೇ ಮದುವೀ ಆಗ್ಯಾನಯ್ಯೋ । ಸೋಕಿರ ಮೂವ ತಾಜೀಜಿ ।
ತಂಗಡಿ ಹೂವೇ ನನ್ನ ದೈವೇ । ಸೋಕಿರ ಮೂವ ತಾಜೀಜಿ ।
ಕೊರಳ ಒಳಗೆ ಕಟ್ಟಾನಯ್ಯೋ । ಸೋಕಿರ ಮೂವ ತಾಜೀಜಿ ।

ಆಗ ತಂಗಡಿಕಿ ಹೂವು ಕಟ್ಟಿದ್ರಂತ್ರೀ ಕೊರಳಾಕೆ. ಅದೇ ಮಂಗಲಸೂತ್ರ. ಈಗ ನೋಡ್ರಿ ಪರೀಕ್ಷೆ ಮಾಡ್ರಿ ಬಂಗಾರದ ಬಣ್ಣ ಮತ್ತೆ ತಾಳಿ ಮಾಟ ಐತ್ರೀ ಆ ಹೂವಲ್ಲಿ"[೧] ದಲಿತರ ಕುಲವೃತ್ತಿಯನ್ನು ಹರಳಯ್ಯನ ಮೂಲಕ ಮಾಡಿಸಿ ಲೋಕ ಸೃಷ್ಟಿ ಮಾಡಿದವರಿಗೆನೇ ತಾಳಿ ನಿರ್ಮಿಸಿ ಕೊಡುವುದರ ಮೂಲಕ ದಲಿತರ ಅಸ್ತಿತ್ವವನ್ನು ಉಳಿಸುವ, ಅವರ ಸಾಂಸ್ಕೃತಿಕ ಚರಿತ್ರೆಯನ್ನು ಕಟ್ಟಿಕೊಳ್ಳಲು ಸಹಾಯ ಮಾಡುತ್ತಾರೆ. ಇಲ್ಲಿ ಬಾಲಬಸವರು ತಮ್ಮ ಮೌಖಿಕ ಸಾಹಿತ್ಯದಲ್ಲಿ ದಲಿತರಲ್ಲಿನ ಕುಶಲ ಬುದ್ಧಿವಂತಿಕೆಯು ಇತರರಿಗಿಂತ ಹೇಗೆ ಭಿನ್ನವಾಗಿದೆ ಎನ್ನುವುದನ್ನು ಹೇಳುವ ಪ್ರಯತ್ನ ಮಾಡುತ್ತಾರೆ. ಜಗತ್ತಿನಲ್ಲಿ ಮೊದಲ ಲಗ್ನವೆಂದರೆ ಅದು ಶಿವ-ಪಾರ್ವತಿಯರ ಮದುವೆ. ಆ ಮದುವೆಗೆ ಬೇಕಾಗುವ ತಾಳಿಯನ್ನು ದಲಿತರು ಮಾಡಿದ್ದಾರೆ. ದಲಿತರಿಗೆ ಕರಕುಶಲ ಕಲೆಗಾರಿಕೆಯ ಪಾರಂಪರಿಕ ಜ್ಞಾನ ತಿಳಿದಿತ್ತು. ತದನಂತರ ಮೇಲ್ವರ್ಗದವರು ಅದನ್ನು ದಲಿತರಿಂದ ಕಸಿದುಕೊಂಡಿದ್ದಾರೆ ಎನ್ನುವ ಸೂಕ್ಷ್ಮ ಅಂಶಗಳನ್ನು ಬಾಲಬಸವರ ಮೌಖಿಕ ಸಾಹಿತ್ಯ ಹೇಳುವ ಪ್ರಯತ್ನ ಮಾಡುತ್ತದೆ. ದಲಿತರಾದ ಬಾಲಬಸವರು ಮೇಲ್ಮುಖ ಚಲನೆ ಹೊಂದಿದ ದಲಿತರು ಇವರಿಗೆ ಇತರೆ ಸಮುದಾಯದಂತೆ ಸಮಾನ ಸ್ಥಾನಮಾನಗಳು ಸಿಕ್ಕಿದರೆ ಅವರು ತಮ್ಮ ಮೂಲ ದಲಿತ ಸಂಸ್ಕೃತಿಯನ್ನು ಮರೆಯುತ್ತಿದ್ದರೇನು, ಆದರೆ ವಚನ ಚಳುವಳಿಯಲ್ಲಿನ ಆಂತರಿಕ ಗೊಂದಲಗಳು ಇವರನ್ನು ವೀರಶೈವರೆಂದು ಒಪ್ಪಿಕೊಳ್ಳದಂತೆ ತಡೆದ ಕಾರಣ ಇವರು ತಮ್ಮ ಮೂಲ ದಲಿತ ಸಂಸ್ಕೃತಿಯ ಬಗ್ಗೆ ಹೆಚ್ಚು ಆಲೋಚಿಸುವಂತೆ ಮಾಡಿವೆ. ಇವರ ದಲಿತತ್ವವು ಇನ್ನೂ ಪ್ರಖರವಾಗಿ ಇವರ ಮೌಖಿಕ ಸಾಹಿತ್ಯದಲ್ಲಿ ಮೂಡಿಬಂದಿದೆ.

ಹರಳಯ್ಯನವರು ವಚನ ಚಳುವಳಿಯಲ್ಲಿನ ಕಾಯಕತತ್ವವನ್ನು ಮೈಗೊಡಿಸಿಕೊಂಡವರು ಇವರ ಕಾಯಕ ನಿಷ್ಠೆಯನ್ನು ಬಾಲಬಸವ ತುಮನೆಪ್ಪ ಹಾಡಿದ ಗೋಣಿಬಸಪ್ಪನ ಕಾವ್ಯ ಮತ್ತು ಮರುಳಸ್ಧಿನ ಕಾವ್ಯದಲ್ಲಿ ಚಿತ್ರಿಸಿದ್ದಾರೆ. ಆ ಪ್ರಸಂಗವೂ ಹೀಗಿದೆ, "ಪರಮಾತ್ಮ ಹಣ್ಣಣ್ಣು ಮುದುಕನಾಗಿ ಜೋಳಿಗಿ ಹಿಡ್ಕಂಡು ಒಂದು ಬೆತ್ತ ಹಿಡ್ಕಂಡು ಮೊದ್ಲು ಎಲ್ಲಿಗೆ ಬಂದ ಪರಮಾತುಮ ಎಂತಿರ್‍ರೀ

ಹರಳಯ್ಯನ ಮನೆಗೆ ಬಂದಾನಯ್ಯೋ । ಸೋಕೀರ ಮೂವ ತಾಜೀಜಿ

ಆಗ ನೋಡ್ರೀ, ಹರಳಯ್ಯ ಆಗ್ಲೂ ಬಡವ, ಈಗ್ಲೂ ಬಡವ, ಒಂದು ಕರ ಸತ್ತಿತ್ತು. ಅದನ್ನು ಮುಂದಿಟ್ಟುಕೊಂಡು ಚಿಂತಿಮಾಡ್ತ ಕುಂತಾಗ ಪರಮಾತುಮ ಹರಳಯ್ಯ ಮನೆ ಮುಂದಕ್ಕೆ ಬಂದು

ಪರಮಾತುಮ ಕ್ವಾರಣ್ಯ ಇಟ್ಟಾನಯ್ಯೋ । ಸೋಕೀರ ಮೂವ ತಾಜೀಜಿ

ಗುರುವೇ ತಾನೇ ಬಂದಾನಯ್ಯೋ । ಸೋಕೀರ ಮೂವ ತಾಜೀಜಿ

ಹರಳಯ್ಯ ಕುಂತಾನಯ್ಯೋ । ಸೋಕೀರ ಮೂವ ತಾಜೀಜಿ

ಪರಮಾತುಮ ಕ್ವಾರಣ್ಯ ಇಟ್ಟಾಗ ಹರಳಯ್ಯ ಮ್ಯಾಲಕ್ಕೆ ನೋಡಿದ ಪರಮಾತುಮ ನಿಂತಾನ್ರೀ, "ಆಹಾ ಪರಮಾತುಮ ಈಗ ಏನು ಗತಿ ಮಾಡ್ಲಿ? ಹಣ ಎಲ್ಲಿಂದ ತರ್‍ಲಿ, ಈಗ ಮುಂದಕ ಹೋಗು ಅಂತೀನಿ ನನಗೆ ಪಾಪ ಬರ್‍ತದೆ, ಆದ್ರೆ ನಾಳೆ ಬಾ ಹೋಗಪ್ಪ ಅಂತೀನಿ ದೋಷ ಬರ್‍ತದಾ, ಆದ್ರೆ ಏನು ನೀಡ್ಲಿ ನನ್ನಲ್ಲಿ ಏನೂ ಇಲ್ಲ ಅಂದು ನಾನು ಏನು ಇಲ್ಲಾಂದು ಕಳ್ಸ ಬಾರ್ದಪ್ಪ ಎಂದು ಆ ಸತ್ತಕರ ತಗೊಂಡು ನೀಡಕ ಹೋದ ಪರಮಾತುಮ ಜೋಳಗಿ ಒಡ್ಡಿದ, ಆ ಜೋಳಗ್ಯಾಕ ಸತ್ತಕರ ಹಾಕಿದ,"[೨] ಎನ್ನುವ ಹಾಡಿನ ಸಾಲುಗಳಲ್ಲಿ ಹರಳಯ್ಯನ ಕಾಯಕ ನಿಷ್ಠೆ ಮತ್ತು ಹಸಿದವನಿಗೆ ದಾಸೋಹ ಮಾಡುವ ಕಾರ್ಯದಲ್ಲಿ ತಾನು ಬದ್ಧನಾಗಿರುವುದು ಕಂಡುಬರುತ್ತದೆ.

ಮರುಳಸಿದ್ಧನ ಕಾವ್ಯದಲ್ಲಿ ಹರಳಯ್ಯ ಮತ್ತು ಬಸವಣ್ಣನ ನಡುವಿನ ಸಂಬಂಧವು ಮತ್ತಷ್ಟು ಹೆಚ್ಚಾಗುತ್ತದೆ. ಈ ಕಾವ್ಯದಲ್ಲಿ ಬರುವ ಮರುಳಸಿದ್ಧ ಮಹಾದೇವನ ತಂದೆ ಕೂಗದ ಮಾರಯ್ಯನು ಹರಳಯ್ಯನ ಮಗ. ಬಸವಣ್ಣ ಮಾಡಿದ ಕುಲಸಂಕರದ ಮದುವೆಯನ್ನು ಕಲ್ಯಾಣದಲ್ಲಿ ಹರಳಯ್ಯನ ಮಗನಾದ ಕೂಗದ ಮಾರಯ್ಯ ಮತ್ತು ಮಧುವರಸರ ಮಗಳಾದ ಕಲ್ಯಾಣಮ್ಮನಿಗೆ ಮದುವೆಯಾಗಿ ಕಲ್ಯಾಣವನ್ನು ಬಿಟ್ಟು ಕಲಿಗೆ ಬರುತ್ತಾರೆ. ಕಲಿಗೆ ಬಂದು ಇವರು ಮರುಳಸಿದ್ಧನ ಜನ್ಮಕ್ಕೆ ಕಾರಣರಾಗುತ್ತಾರೆ. ಮರುಳಸಿದ್ಧರ ಮೂಲಕ ಬಾಲಬಸವರು ತಮ್ಮ ಅಸ್ತಿತ್ವವನ್ನು ಕಟ್ಟಿಕೊಂಡಿದ್ದಾರೆ. ಈ ಎಲ್ಲಾ ಕಾರಣಗಳಿಂದಾಗಿ ಹರಳಯ್ಯನನ್ನು ತಮ್ಮ ಸಮುದಾಯದ ಸಾಂಸ್ಕೃತಿಕ ನಾಯಕನಾಗಿ ಮಾಡಿಕೊಂಡಿದ್ದಾರೆ.

೬.೩. ಪಂಚಗಣಾಧೀಶ್ವರರು

ಕಲ್ಯಾಣದ ಕಾಂತ್ರಿಯಾದ ನಂತರ ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕದ ಭಾಗಳಲ್ಲಿ ವಚನ ಪರಂಪರೆಯ ಭಿನ್ನಧಾರೆಗಳು ಆಚರಣೆಯ ಭಾಗವಾಗಿ ಬೆಳೆದು ಬಂದವು. ಈ ಆಚರಣೆಗಳಲ್ಲಿ ಸಮುದಾಯಗಳ ಪಾಲ್ಗೊಳ್ಳುವಿಕೆ ಅತ್ಯಂತ ಮಹತ್ವದ ಸಂಗತಿಯಾಗಿದೆ. ಸುಮಾರು ೧೬ನೇ ಶತಮಾನದಲ್ಲಿ ಕೊಟ್ಟೂರು ಗುರುಬಸವೇಶ್ವರನ(ಕಾಲ-೧೫೬೦) ನಾಯಕತ್ವದಿಂದ ಪಂಚಗಣಾಧೀಶ್ವರ ಚಳುವಳಿ ಆರಂಭವಾಯಿತು. ಈ ಸಂದರ್ಭದಲ್ಲಿ ಮಧ್ಯ ಕರ್ನಾಟಕದ ಭಾಗದಲ್ಲಿ ಬಹುದೊಡ್ಡ ಸಾಂಸ್ಕೃತಿಕ ವಿಧ್ಯಮಾನವಾಗಿ ಪಂಚಗಣಾಧೀಶ್ವರರ ಕಾಯಕ ಚಳುವಳಿ ಹುಟ್ಟಿಕೊಂಡಿತು. ಈ ಚಳವಳಿಯು ತನ್ನ ಚಲನಗೆ ಮುಖ್ಯವಾಗಿ ಮೌಖಿಕಧಾರೆಗಳನ್ನೇ ಅವಲಂಬಿಸಿರುವುದನ್ನು 'ಬಾಲಬಸವರ ಪರಂಪರೆ'ಯು ಹಾಡುವ ಮೌಖಿಕ ಕಾವ್ಯಗಳ ಮೂಲಕ ನಾವು ಕಾಣಬಹುದು. ಪಂಚ ಗಣಾಧೀಶ್ವರರು ಯಾರು ಯಾರು? ಅವರ ಈ ಕಾಯಕ ಚಳುವಳಿಯಲ್ಲಿ ಅವರ ಪಾತ್ರವೇನು ಎಂಬುದರ ಕುರಿತು ವೆಂಕಟೇಶ ಇಂದ್ವಾಡಿಯವರು ಹೀಗೆ ಹೇಳುತ್ತಾರೆ. "ಪಂಚಗಣಾಧೀಶ್ವರರು ಎಂಬುದು ಶುದ್ಧಾಂಗವಾಗಿ ಜನಪದ ಪರಿಕಲ್ಪನೆಯಲ್ಲ. ಪಂಚಾಚಾರ್ಯರಲ್ಲಿ ಹೇಗೆ ಐದು ಎಂಬ ಸಂಖ್ಯೆಗೆ ಪೀಠಾಧಿಪತಿಗಳನ್ನು ಕೂಡಿಸುವ ಪ್ರಯತ್ನ ಮಾಡಿದರೋ ಹಾಗೇ ಜನಪದರು ಮಾಡಿದ್ದಾರೆ. ಪಂಚಾಚಾರ್ಯರಲ್ಲಿ ಕೇದಾರದ ಪಂಡಿತಾರಾಧ್ಯ, ಕಾಶಿಯ ವಿಶ್ವಾರಾಧ್ಯ ಇದೇ ಕಾಲದವರು ಎಂಬುದಕ್ಕೆ ಆಧಾರಗಳಿಲ್ಲವೋ ಹಾಗೆ ಇಲ್ಲಿಯೂ ಅರಸೀಕೆರೆ ಕೋಲಶಾಂತೇಶ, ಹರಪನಹಳ್ಳಿ ಕೆಂಪೇಶ ಈ ಕಾಲಕ್ಕೆ ಒಗ್ಗುವ ವ್ಯಕ್ತಿಗಳಾಗಿಲ್ಲ. ಶಿಷ್ಟ ಸಾಹಿತ್ಯ ಹೇಗೆ ಕಟ್ಟುವ ಪ್ರಯತ್ನ ಮಾಡಿತೋ ಹಾಗೇ ಜನಪದವು ಕಟ್ಟುವ ಕೆಲಸ ಮಾಡುತ್ತದೆ. ಕೊಟ್ಟೂರು ಗುರುಬಸವ, ಕೂಲಹಳ್ಳಿ ಮದ್ದಾನೇಶ, ನಾಯಕನಹಟ್ಟಿ ತಿಪ್ಪೇಶರು ಮಾತ್ರ ಚಾರಿತ್ರಿಕ ವ್ಯಕ್ತಿಗಳಾಗಿ ಕಾಣಿಸಿಕೊಳ್ಳುತ್ತಾರೆ. ಅರಸೀಕೆರೆಯ ಕೋಲಶಾಂತೇಶ, ಹರಪನಹಳ್ಳಿ ಕೆಂಪೇಶ ಇವರು ಇದೇ ಕಾಲದವರು ಎಂಬುವುದಕ್ಕೆ ಆಕರಗಳು ಇಲ್ಲ"[೩] ಎನ್ನುವ ಇವರ ಮಾತುಗಳಲ್ಲಿ ಜನಪದರು ಕೂಡ ತಮ್ಮ ನೆಲೆಯಲ್ಲಿ 'ಪಂಚ' ಎನ್ನುವುದನ್ನು ಪೂರ್ಣಗೊಳಿಸುವ ಜಾಣ್ಮೆಯನ್ನು ಹೇಗೆ ಮೆರೆದಿದ್ದಾರೆ ಎನ್ನುವುದನ್ನು ತಿಳಿಯಬಹುದಾಗಿದೆ. ಈ ಪಂಚಗಣಾಧೀಶ್ವರರ ಕುರಿತಂತೆ ಸಾಹಿತ್ಯ ಪಠ್ಯಗಳು ತುಂಬಾ ಕಡಿಮೆಯಿವೆ. ಇವರ ಕುರಿತು ಬಂದಿರುವ ಸಾಹಿತ್ಯವನ್ನು ಶಿಷ್ಟ ಸಾಹಿತ್ಯ ಮತ್ತು ಜನಪದ ಸಾಹಿತ್ಯ ಎಂದು ಎರಡು ಭಾಗಗಳಾಗಿ ವಿಂಗಡಿಸಿ ನೋಡಬಹುದು. ಒಂದು: ವೀರಶೈವ ಶಿಷ್ಟ ಸಾಹಿತ್ಯ, ಎರಡು: ಜನಪದರ ಮೌಖಿಕ ಸಾಹಿತ್ಯ. ವೀರಶೈವ ಶಿಷ್ಟ ಸಾಹಿತ್ಯವು ಪಂಚಗಣಾಧೀಶ್ವರರ ಕುರಿತು ಹೆಚ್ಚಿನ ಕೃತಿಗಳನ್ನು ಹೊರತಂದಿಲ್ಲ. ಕಾರಣ ಇವರ ಕಾಲದಲ್ಲಿ ವೀರಶೈವ ಪಂಥವು ಸಾಂಸ್ಥಿಕವಾಗುತ್ತಿರುವುದನ್ನು ಕಂಡು ಅವರು ಪ್ರತಿಭಟಿಸಿದರು. ಧರ್ಮದ ಹೆಸರಿನಲ್ಲಿ ನಡೆಯುತ್ತಿದ್ದ ಅನೇಕ ಕಟ್ಟುಪಾಡುಗಳನ್ನು ವಿರೋಧಿಸಿದರು. ಜಂಗಮತ್ವವನ್ನು ಮೀರಿ ಕುಲಸಂಕರದ ಮದುವೆ ಯಾಗುವುದರ ಮೂಲಕ ತಮಗಿದ್ದ ಸಾಮಾಜಿಕ ಕಳಕಳಿಯನ್ನು

ಸಮಾಜದ ಮುಂದೆ ವ್ಯಕ್ತಪಡಿಸಿದ್ದರ ಪರಿಣಾಮವಾಗಿ ಪಂಚಗಣಾಧೀಶ್ವರರ ಕುರಿತು ವೀರಶೈವ ಶಿಷ್ಟ ಸಾಹಿತ್ಯವು ಇವರ ಚಾರಿತ್ರಿಕ ಸಂಗತಿಗಳನ್ನು ಹೆಚ್ಚಿನ ಪ್ರಮಾಣದಲ್ಲಿ ರಚಿಸಿಲ್ಲ. ಆದರೆ ಇವರಲ್ಲಿ ಕೊಟ್ಟೂರೇಶ್ವನ ಕುರಿತು ಕೆಲವು ಕೃತಿಗಳು ಬಂದಿವೆ. ಅದೆಂದರೆ "ಬಸವ ಲಿಂಗಕವಿ ಬರೆದ ಕೊಟ್ಟೂರು ಬಸವೇಶ್ವರ ಚಾರಿತ್ರ್ಯ(೧೬೭೯) ಎನ್ನುವ ಕೃತಿಯಲ್ಲಿ ಕೊಟ್ಟೂರು ಬಸವನ ಜೀವನವನ್ನು ಸಮಗ್ರವಾಗಿ ವಿವರಿಸಿದ್ದಾರೆ. ಆದರೆ ಈ ಪಂಚಗಣಾಧೀಶ್ವರಲ್ಲಿ ಮದ್ದಾನೇಶ್ವರ, ಕೋಲಶಾಂತ, ತಿಪ್ಪೇಸ್ವಾಮಿ, ಕೆಂಪೇಶ ಇವರನ್ನು ಕುರಿತು ಸಮಗ್ರವಾಗಿ ವಿವರಿಸುವುದಿಲ್ಲ. ಬರೀ ಹೆಸರನ್ನು ಉಲ್ಲೇಖಿಸಿದ್ದಾರೆಯೇ ಹೊರತು ಅವರ ಜೀವನದ ವಿವರಗಳನ್ನು ನೀಡುವುದಿಲ್ಲ. ಗುರುಸಿದ್ಧ ನಂಜೇಶನ ಗುರುರಾಜ ಚಾರಿತ್ರ್ಯದಲ್ಲಿಯೂ ಗುರುಬಸವನ ಪವಾಡಗಳನ್ನು ವಿವರಿಸುತ್ತಾನೆ. ಇನ್ನುಳಿದಂತೆ ಮದ್ದಾನೇಶ್ವರ ಸ್ವಾಮಿಯ ಹೆಸರನ್ನು ನಮೂದಿಸಿದ್ದನ್ನು ಬಿಟ್ಟರೆ ಮತ್ತೆಲ್ಲೂ ಈ ಪಂಚಗಣಾಧಿಶ್ವರರ ಜೀವನದ ವಿವರಗಳು ದೊರೆಯುವುದಿಲ್ಲ. ಮಳೆಯರಾಜನ ಚಾರಿತ್ರ್ಯ-ಸಜ್ಜೆ ಸಿದ್ಧಲಿಂಗರಾಯ, ಚನ್ನಬಸವಪುರಾಣ-ವಿರೂಪಾಕ್ಷಪಂಡಿತ, ಗುರು ಲಿಂಗಜಂಗಮ ಚಾರಿತ್ರ್ಯ-ಮರುಳಸಿದ್ಧೇಶ, ಶ್ರೀ ಪ್ರಭುದೇವರ ಪುರಾಣ-ಎಳಂದೂರು ಹರೀಶ್ವರ ಹಾಗೂ ತೆಲುಗಿನ ಕೃತಿ ಸದ್ಗುರು ರಹಸ್ಯ-ಗುರುಬಸವ ಮುಂತಾದ ಕೃತಿಗಳಲ್ಲಿ ಕೊಟ್ಟೂರು ಗುರುಬಸವರಾಜನ ಕುರಿತಾದ ಮಾಹಿತಿ ಇದೆ ಹೊರತು ಉಳಿದ ಸಂತರ ಮಾಹಿತಿ ಇಲ್ಲ"[೪] ಎನ್ನುವ ಅಂಶಗಳನ್ನು ಗಮನಿಸಿದಾಗ ಯಾಕೆ ಪಂಚಗಣಾಧೀಶ್ವರರಲ್ಲಿ ಕೊಟ್ಟೂರೇಶ್ವರನಿಗಿದ್ದ ಸ್ಥಾನಮಾನಗಳು ಉಳಿದ ನಾಯಕರುಗಳಿಗಿಲ್ಲ ಎನ್ನುವ ಪ್ರಶ್ನೆ ನಮ್ಮನ್ನು ಕಾಡುತ್ತದೆ. ಪಂಚಗಣಾಧೀಶ್ವರರಲ್ಲಿ ಒಬ್ಬನಾದ ಮದ್ದಾನೇಶ್ವರನ ಜೀವನ ಒಂದು ಸಂಘರ್ಷಮಯದಿಂದ ಕೂಡಿದ್ದು, ಈತನ ಬಗ್ಗೆ ಮಧ್ಯಕಾಲೀನ ವೀರಶೈವ ಸಾಹಿತ್ಯದಲ್ಲಿ ಹೆಚ್ಚು ಉಲ್ಲೇಖಗಳು ಕಂಡು ಬರುವುದಿಲ್ಲ. ಕೂಲಹಳ್ಳಿಯಲ್ಲಿನ ಮದ್ದಾನೇಶ್ವರನ ಒಂದು ಗುಡಿ ಬಿಟ್ಟರೆ, ಮತ್ತೇ ಬೇರೆ ಹೇಳಿಕೊಳ್ಳುವಂತಹ ಯಾವ ಕುರುಹುಗಳು ಇರುವುದಿಲ್ಲ. ಇದಕ್ಕೆ ಕಾರಣ ಶಿವಶರಣನಾದ ಮದ್ದಾನೇಶ್ವರ ಜಂಗಮನಾದರೂ ತಾನು ದೇವದಾಸಿಯಾದ ಬ್ಯಾಡರ ಕನಕಮ್ಮನ ವಿವಾಹಪೂರ್ವ ಲೈಂಗಿಕ ಸಂಬಂಧದಿಂದಾಗಿ ಅವರನ್ನು ವೀರಶೈವ ಸಾಹಿತ್ಯ ಚರಿತ್ರೆಯ ದಾಖಲೆಯಿಂದ ದೂರವಿಟ್ಟಿರಬಹುದು ಅಥವಾ ಮದ್ದಾನಸ್ವಾಮಿಯು ಜಂಗಮತ್ವವನ್ನು ಮೀರಿದ ಕಾರಣದಿಂದಲೇ ಶಿಷ್ಟ ವೀರಶೈವ ಸಾಹಿತ್ಯ ಪರಂಪರೆಯಲ್ಲಿ ಮದ್ದಾನೇಶ್ವರನನ್ನು ಕುರಿತು ಒಂದು ವಾಕ್ಯವನ್ನು ಬರೆಯದಂತೆ ತಡೆದಿರಬಹುದು. ಹಾಗೆಯೇ ಈ ದೊಡ್ಡ ಚಳುವಳಿಯನ್ನು ಅಂದಿನ ವೀರಶೈವ ವರ್ಗ ಮುಚ್ಚಿ ಹಾಕುವುದರಲ್ಲೇ ಹೆಚ್ಚು ಆಸಕ್ತವಾಗಿರಬಹುದು ಎಂಬಂತೆ ನಮಗೆ ಭಾಸವಾಗುತ್ತದೆ. ಆದರೆ ಮದ್ದಾನೇಶ್ವರ ದೇವದಾಸಿಯನ್ನು ಮದುವೆಯಾಗಿದ್ದರಿಂದ ಅವನು ಶಿಷ್ಟ ವೀರಶೈವದಿಂದ ಬಿಡುಗಡೆಗೊಂಡು ಜನಪದರ ದೈವವಾಗುತ್ತಾನೆ. ಹೀಗೆ ಜಂಗಮತತ್ವದಿಂದ ಹೊರಗಾದ ವ್ಯಕ್ತಿಯನ್ನೇ ಕೇಂದ್ರವಾಗಿಸಿಕೊಂಡು ಮೌಖಿಕ ಸಮುದಾಯಗಳು ಈ ಪರಂಪರೆಯಲ್ಲಿ ಪ್ರವೇಶ ಪಡೆಯುತ್ತವೆ. ಬೇಡ ಸಮುದಾಯದವರು ಪಂಚಗಣಾಧೀಶ್ವರರಾದ

ಮದ್ದಾನೇಶ್ವನಿಗೆ ನಡೆದುಕೊಳ್ಳುತ್ತಾರೆ ಹಾಗೂ ಮಾದಿಗರಾದ ಬಾಲಬಸವ ಸಮುದಾಯದವರು ಈ ಸಾಂಸ್ಕೃತಿಕ ನಾಯಕನನ್ನು ತಮ್ಮ ಪೂರ್ವಿಕರೆಂದು ಕರೆದುಕೊಂಡು ಅವರ ಜೀವನದ ವಿವರಗಳನ್ನು ಕಥನವಾಗಿ ಕಟ್ಟಿ ಹಾಡುವುದರ ಮೂಲಕ ಒಂದು ಮೌಖಿಕ ಪರಂಪರೆಯನ್ನು ಬೆಳೆಸುತ್ತಾ ಬಂದಿದ್ದಾರೆ.

ಅ. ಸಮಾನತೆ, ಜಾತಿ ಪದ್ಧತಿಯ ನಿರಾಕರಣೆ

ಗೋಣಿಬಸಪ್ಪನ ಕಾವ್ಯದಲ್ಲಿ ವಚನ ಚಳುವಳಿಯ ಪ್ರಧಾನ ಆಶಯವಾದ ಸಮಾನತೆ, ಸಹ ಭೋಜನ ಮತ್ತು ಜಾತಿಪದ್ಧತಿಯನ್ನು ವಿರೋಧಿಸುವ ಕಾರ್ಯವನ್ನು ಪಂಚಗಣಾಧೀಶ್ವರರ ಮೂಲಕ ಮಾಡಿಸುವುದನ್ನು ನಾವು ಕಾಣಬಹುದಾಗಿದೆ. ಪಂಚಗಣಾಧೀಶ್ವರರು ಕಲ್ಯಾಣದೊಳಗೆ ಲೋಕ ಸಂಚಾರ ಮಾಡುವಾಗ ಅವರಿಗೆ ಹಸಿವಾಗುತ್ತದೆ. ಆ ಸಮಯದಲ್ಲಿ ಮಾದಿಗರ ಕುಲದವಳಾದ ವಿಚಾರನಾರಿ ಮನೆಯಲ್ಲಿ ಪಂಚಗಣಾಧೀಶ್ವರರನ್ನು ಭಿಕ್ಷೆ ಕೇಳಿ ಮಾದಿಗರ ಮನೆಯಲ್ಲಿ ಊಟ ಮಾಡಿಸುವುದರ ಮೂಲಕ ಶಿವಶರಣರು ಜಾತಿಪದ್ಧತಿಯನ್ನು ಮೀರುವ ಪ್ರಸಂಗಕ್ಕೆ ಸಾಕ್ಷಿಯಾಗುತ್ತಾರೆ. ಈ ಸಂಗತಿಯನ್ನು ಬಾಲಬಸವ ತುಮನೆಪ್ಪನವರು ಈ ರೀತಿಯಾಗಿ ಹೇಳುತ್ತಾರೆ. “ಕಲ್ಯಾಣದೊಳಗೆ ವಿಚಾರನಾರಿ. ಈ ವಿಚಾರನಾರಿ ಅಂದ್ರೆ ಆಕಿ ಹರಿ ಮತದಾಕಿ. ಆಯಮ್ಮನ ಮನಿಗೆ ಬಂದಾರು ಶರಣ್ರು, 'ಅಯ್ಯೋ ಶರಣ್ರಾ ಮಹಾತ್ಮರು ನಮ್ಮನಿಗೆ ಬಂದ್ರು ನಮ್ಮದು ನೋಡಿದ್ರೆ ಇಂಥ ಜಾತಿ', ಆಯಮ್ಮ ಹೆದರಿದ್ಲು, 'ಮತ್ತೇನು ಗುರುಗಳೇ' 'ಏನಿಲ್ಲಮ್ಮ ನಾವು ಇನ್ನ ಕಲಿಗೆ ಹೋಗ್ತೀವಿ. ಹಸಿವು ಬಾಳ ಕೆಟ್ಟದ್ದು ಹಸಿವಾಗೈತೆ. ಸ್ವಲ್ಪ ಅಡಿಗಿ ಮಾಡಮ್ಮ ಊಟ ಮಾಡಿ ಹೋಗ್‌ಬಿಡ್ತೀವಿ'.ಅಯ್ಯೋ ಗುರುಗಳೇ ಗುರುಗಳೇ ಏನಿದು ಅನ್ಯಾಯ ರೀ' 'ಏನಮ್ಮ' 'ನಾನ್ ನೋಡಿದ್ರೆ ಹರಿಮತದೋಳು ನೀವ್ ಶಿವಶರಣ್ರು ನನ್ನ ಮನಿಗೆ ಎಂಗ ಊಟ ಮಾಡ್ತೀರಿ'. 'ಆ ಹಾಗನ್ನ ಬೇಡಮ್ಮ ಅದು ನಿನಗೆ ದೋಷ. ನಮಗೆ ದೋಷಲ್ಲ. ಸುಮ್ನೆ ನೀನ್ ಅಡಿಗಿ ಮಾಡಮ್ಮ ಅದನ್ನೆಲ್ಲ ಭಿನ್ನಭೇದ ಮಾಡಬೇಡ' ಅಂದ್ರಂತ್ರಿ. ಆಗ ವಿಚಾರನಾರಿ ಅಮೃತ ಪಾಯಸ ಮಾಡಿದ್ಲಂತೆ. ಆಗ ಐದುಮಂದಿ ಶರಣ್ರು ವಿಚಾರನಾರಿ ಮನೆಗೆ ಊಟ ಮಾಡಿ ಆಯಮ್ಮಗೆ ಆಶೀರ್ವಾದ ಕೊಟ್ಟು, ಶರಣರು ಮುಂದೇ ಹೋದರು”[೫] ಅಂದರೆ ಈ ಐದು ಮಂದಿ ಶಿವಶರಣರು ಮಾದಿಗರ ಮನೆಯ ವಿಚಾರನಾರಿ ಮುಟ್ಟಿ ಮಾಡಿದ ಅಡುಗೆಯನ್ನು ತಾವು ಸಹಪಂಕ್ತಿ ಭೋಜನ ಮಾಡುವುದರ ಮೂಲಕ ತಾವು ನರಕಲಿ(ಭೂಮಿ)ಯಲ್ಲಿದ್ದ ಜಾತಿಪದ್ಧತಿಯನ್ನು ಮೀರುವುದು ಮತ್ತು ಸಮಾನತೆಯನ್ನು ಸಾರುವುದು ಹಾಗೂ ಈ ಸಮಾಜದಲ್ಲಿದ್ದ ಜಾತಿಪದ್ಧತಿಯನ್ನು ತಿಳಿಗೊಳಿಸುವುದು ಇವರ ಉದ್ದೇಶವಾಗಿತ್ತು. ಅಲ್ಲದೇ ದಲಿತ ಮಹಿಳೆಯ ಮನೆಯಲ್ಲಿ ಇಷ್ಟಲಿಂಗದ ಪೂಜೆಯನ್ನು ಮಾಡುವುದರಿಂದ ಈ ಲೋಕದಲ್ಲಿ ಎಲ್ಲರೂ ಸಮಾನರು ಗಂಡು ಹೆಣ್ಣು ಎನ್ನುವ ಭೇದಭಾವ ಮಾಡಬಾರದು, ಎಲ್ಲರನ್ನು ಸಮನಾಗಿ ಕಾಣಬೇಕು ಎನ್ನುವುದು ವಚನ ಚಳುವಳಿಯ ಬಹುದೊಡ್ಡ ಆಶಯದ ಅಂಶಗಳನ್ನು ಇವರು ಸಾರುತ್ತಾರೆ.

ಇವರು ಬಸವಣ್ಣನ ನಂತರ ಬಂದ ಶಿವಶರಣರು. ಆತನ ತತ್ವಗಳನ್ನು ಮುಂದುವರಿಸಿಕೊಂಡು ಹೋಗಿರುವುದನ್ನು ನಾವು ಕಾಣಬಹುದಾಗಿದೆ.

ಜಾತೀಯತೆ ಪ್ರಬಲವಾಗಿದ್ದ ಲಿಂಗಾಯತ ಸಮುದಾಯವು ೧೫ನೇ ಶತಮಾನದಲ್ಲಿ ಕೆಲವು ಶಿವಶರಣರು ಜಂಗಮತ್ವವನ್ನು ಮೀರುವ ಪ್ರಯತ್ನ ಮಾಡುತ್ತಾರೆ. ಈ ರೀತಿಯಾದ ವಿದ್ಯಮಾನವು ಮುಂದಿನ ವೀರಶೈವ ಶಿಷ್ಟ ಪಠ್ಯಗಳಿಗೆ ತುಂಬಾ ಮುಜುಗರದ ಸಂಗತಿಯಾಗಿ ಕಾಡಿರಬಹುದು. ಅವರಿಗೆ ಸಂಘಟಕನಾದ ಕೊಟ್ಟೂರೇಶ ಬೇಕು, ಆದರೆ ಆ ಪಟ್ಟಿಯೊಳಗೆ ಜಂಗಮತ್ವ ಮೀರಿದ ಕುಲಗೆಟ್ಟ ಮದ್ದಾನೇಶ್ವರನ ಕುರಿತಾಗಿ ಮತ್ತು ಇವನ ಸಂಕರಶೀಲತೆಯನ್ನು ವಿರಚಿಸುವುದು ಶಿಷ್ಟ ವೀರಶೈವ ಕವಿಗಳಿಗೆ ಕಷ್ಟದ ಸಂಗತಿಯಾಗಿರುವ ಕಾರಣಕ್ಕೆ ವೀರಶೈವ ಶಿಷ್ಟ ಕಾವ್ಯಗಳಲ್ಲಿ ಅವರನ್ನು ಕೈಬಿಟ್ಟಿರಬಹುದು. ಆದ್ದರಿಂದಲೆ ೧೬ನೇ ಶತಮಾನದಲ್ಲಿ ಹುಟ್ಟಿದ ಈ ಬಹುದೊಡ್ಡ ಚಳುವಳಿ ಮುನ್ನಲೆಗೆ ಬರಲೇ ಇಲ್ಲ. ಆದರೆ ಮೌಖಿಕ ಪರಂಪರೆ ಇದನ್ನೇ ಕೇಂದ್ರವಾಗಿಸಿಕೊಂಡು ಪಂಚಗಣಾಧೀಶ್ವರರನ್ನು ಜೀವಂತವಾಗಿ ಉಳಿಸಿವೆ. ಬಾಲಬಸವರ ಮೌಖಿಕ ಸಾಹಿತ್ಯವು ಮುಚ್ಚಿಟ್ಟ ಸಾಂಸ್ಕೃತಿಕ ಚರಿತ್ರೆಯನ್ನು ಹೇಳುವುದರ ಮೂಲಕ ಈ ಎಲ್ಲಾ ವಿದ್ಯಮಾನಗಳು ಜನಪದರ ಬಾಯಿಯಲ್ಲಿ ಮದ್ದಾನೇಶ್ವರಸ್ವಾಮಿಯನ್ನು ಸಾಂಸ್ಕೃತಿಕ ನಾಯಕನನ್ನಾಗಿ ಉಳಿಯುವಂತೆ ಮಾಡಿವೆ.

೬.೪. ಗೋಣಿಬಸವ

ಗೋಣಿಬಸಪ್ಪ ಶಿವಶರಣನಾದ ಮದ್ದಾನೇಶ್ವರಸ್ವಾಮಿಯ ಗೋಣಿಬಸಪ್ಪನು ಈಗಾಗಲೇ ತಿಳಿದಿರುವಂತೆ ವರ್ಣಸಂಕರದಲ್ಲಿ ಹುಟ್ಟುವ ಗೋಣಿಬಸಪ್ಪನ ತಂದೆ ಜಂಗಮ. ತಾಯಿ ಬೇಡರ ಕನಕಮ್ಮ ಇವರಿಬ್ಬರಿಗೆ ಜನಿಸಿದ ಮಗುವೇ ಗೋಣಿಬಸಪ್ಪ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಸಂಗತಿ ಎಂದರೆ ಮದ್ದಾನೇಶ್ವರ ಮತ್ತು ಕನಕಮ್ಮನಿಗೆ ಮದುವೆಯಾಗಿರುವುದಿಲ್ಲ, ಬರಿ ದಿವ್ಯ ದೃಷ್ಟಿಯಿಂದಲೇ ಮಗು ಪಡೆದುಕೊಳ್ಳುವ ಕನಕಮ್ಮ ಅಂದಿನ ಸಮಾಜದಲ್ಲಿನ 'ದೇವದಾಸಿ' ಬಗೆಗಿನ ಸಂಗತಿಯನ್ನು ಸೂಕ್ಷ್ಮವಾಗಿ ತೆರೆದಿಡುತ್ತಾಳೆ. ಬಹುತೇಕ ಕೆಳವರ್ಗದ ಹೆಣ್ಣುಮಕ್ಕಳು ಈ ಅನಿಷ್ಟ ಪದ್ಧತಿಯಿಂದ ಮಕ್ಕಳನ್ನು ಪಡೆಯುವುದು, ಮುಂದೆ ಅದೇ ಮಕ್ಕಳನ್ನು ಸಮಾಜ ನೋಡುವ ಕ್ರಮ ಈ ಎರಡನ್ನು ಕಾವ್ಯ ಸೂಕ್ಷ್ಮವಾಗಿ ವಿವರಿಸುತ್ತದೆ.

ಮೌಖಿಕ ಕಾವ್ಯವು ಸಮಾಜ, ಜನತೆ, ಧಾರ್ಮಿಕತೆ, ಸಾಮಾಜಿಕ ಸಂಘರ್ಷ, ಸಂಪ್ರದಾಯ, ಹೆಣ್ಣುಮಕ್ಕಳ ಆಚರಣೆ, ನಂಬಿಕೆ ಮುಂತಾದ ಅಂಶಗಳಿಗೆ ಹೆಚ್ಚು ಪ್ರಾತಿನಿಧ್ಯ ನೀಡುತ್ತದೆ. ಸಮಾಜವು ಹೇಗೆ ಕಾವ್ಯದೊಳಗೆ ಅಭಿವ್ಯಕ್ತಗೊಂಡಿದೆ, ಅಭಿವ್ಯಕ್ತಗೊಂಡಿರುವ ಸಮಾಜವನ್ನು ಸಾಮಾನ್ಯ ಜನತೆಯು ಹೇಗೆ ಸ್ವೀಕರಿಸುತ್ತಾದೆ ಎನ್ನುವ ವಾಸ್ತವ ಅಂಶವೂ ಕೂಡ ಗಮನಿಸಬೇಕಾಗಿದೆ. ಹಾಗಾಗಿ ಎಲ್ಲ ಮೌಖಿಕ ಕಾವ್ಯಗಳು ನಿರ್ದಿಷ್ಟ ವ್ಯಾಪ್ತಿ ಮತ್ತು ಭೌಗೋಳಿಕತೆಯನ್ನು ಒಳಗೊಂಡಿರುತ್ತವೆ. ಹಾಗೆಯೇ ಈ ಗೋಣಿಬಸಪ್ಪನ ಕಾವ್ಯ ಕೂಡ ಮಧ್ಯ ಕರ್ನಾಟಕದ ಭೂಪ್ರದೇಶವನ್ನು ಕೇಂದ್ರವಾಗಿಸಿಕೊಂಡಿದೆ. ಅಲ್ಲಿನ ಸಾಮಾಜಿಕತೆ, ಚರಿತ್ರೆ, ದೈವತ್ವ ಮತ್ತು ಸಾಮಾನ್ಯ ಜನತೆಯನ್ನು

ದೈವೀಕರಿಸುವ ಕ್ರಿಯೆ ಮುಂತಾದ ವಿಷಯಗಳು ಪ್ರಮುಖವಾಗಿವೆ. ಕೆಳವರ್ಗದ ಜನತೆ ಮತ್ತು ಮೇಲ್ವರ್ಗದ ನಡುವಿನ ಸಾಮಾಜಿಕ ಸಂಘರ್ಷಗಳ ಅಸ್ತಿತ್ವ ಹುಡುಕಾಟ, ಪ್ರಭುತ್ವದ ವಿರೋಧಿ ನೆಲೆಗಳು ಮುಂತಾದ ಸಂಗತಿಗಳನ್ನು ಕಾಣಬಹುದಾಗಿದೆ. ಪಂಚಗಣಾಧೀಶ್ವರರು ತಮ್ಮ ಅಸ್ತಿತ್ವ ಉಳಿಸಿಕೊಳ್ಳಲು ಮುಖ್ಯವಾಗಿ ಮಧ್ಯ ಕರ್ನಾಟಕ ಪ್ರದೇಶದಲ್ಲಿ ಆಚರಣೆಯಲ್ಲಿದ್ದ ದೇವದಾಸಿ ಪದ್ಧತಿಯಿಂದ ಮದ್ದಾನೇಶ್ವರನ ಇಂದ್ರಿಯ ಸರಿದಂತೆ ನಮ್ಮ ಇಂದ್ರಿಯಗಳು ಉದ್ದೀಪನವಾದರೆ ಏನು ಗತಿ ಎಂದು ಉಳಿದ ನಾಲ್ಕು ಮಂದಿ ಶರಣರು ಒಂದೊಂದು ಕಡೆ ಹೋಗಿ ನೆಲೆ ನಿಲ್ಲುತ್ತಾರೆ. ಕನಕಮ್ಮನ ಕರೆದುಕೊಂಡು ಕೂಲಹಳ್ಳಿಗೆ ಹೋದ ಮದ್ದಾನೇಶ್ವರ ಸ್ವಾಮಿಯು ಮೌಖಿಕ ಕಾವ್ಯದಲ್ಲಾಗಲಿ ವೀರಶೈವ ಶಿಷ್ಟ ಕಾವ್ಯದಲ್ಲಾಗಲಿ ಸಿಗುವುದಿಲ್ಲ. ಅದಕ್ಕೆ ಕಾರಣ ಅಂದಿನ ಸಾಂಸ್ಕೃತಿಕ ರಾಜಕಾರಣವು, ಲಿಂಗಾಯತೀಕರಣವು ಗೊತ್ತಿಲ್ಲ. ಕಾರಣವಾಗಿರಬಹುದು. ಆದರೆ ಕನಕಮ್ಮ ಮತ್ತು ಮದ್ದಾನೇಶ್ವರ ಇಂದ್ರಿಯ ಮೂಲಕ ಜನಿಸಿದ ಗೋಣಿಬಸಪ್ಪ ಮೌಖಿಕ ಕಾವ್ಯದಲ್ಲಿ ಕಾಣಿಸುತ್ತಾನೆ. ಗೋಣಿಬಸಪ್ಪನ ಜನ್ಮದ ನಂತರ ಅವನಿಗೆ ಎದುರಾಗುವ ಒಂದೇ ಪ್ರಶ್ನೆ ಎಂದರೆ ಅದು ತನ್ನ ತಂದೆ ಯಾರೆಂದು ಮಧ್ಯ ಕರ್ನಾಟಕ ಮತ್ತು ಉತ್ತರ ಕರ್ನಾಟಕದ ಭಾಗಗಳಲ್ಲಿ ದೇವದಾಸಿಗೆ ಬಿಟ್ಟ ಮಹಿಳೆಯು ಒಂದಕ್ಕಿಂತ ಹೆಚ್ಚು ಗಂಡಸಿನೊಂದಿಗೆ ಜೀವಿಸಬಹುದಾದ ಅವಕಾಶಗಳಿರುವುದರಿಂದ ಈ ಆಚರಣೆಯು ಕನಕಮ್ಮನ ಜೀವನದಲ್ಲಿ ಕಾಣಿಸುತ್ತದೆ. ಮೊದಲು ಮದ್ದಾನೇಶ್ವರಸ್ವಾಮಿ ಗಂಡುಮಗುವಿಗೆ ಜನ್ಮವಿತ್ತು ತನ್ನ ಜೀವನ ನಿರ್ವಹಣೆಗಾಗಿ ಕೂಲಹಳ್ಳಿ ಕೋರಿ ಈರಯ್ಯನೊಂದಿಗೆ ಜೀವನ ಮಾಡುತ್ತಾಳೆ. ಪ್ರಾಯಕ್ಕೆ ಬಂದಾ ಗೋಣಿಬಸಪ್ಪನಿಗೆ ತನ್ನ ಮೂಲಕ್ಕೆ ಕಾರಣನಾದವನು ಯಾರು ಎನ್ನುವ ಪ್ರಶ್ನೆ ಎದುರಾಗಿ ತನ್ನ ತಾಯಿ ಬಳಿ ತನ್ನ ತಂದೆ ಬಗ್ಗೆ ವಿಚಾರಿಸುತ್ತಾನೆ. ಗೋಣಿಬಸಪ್ಪನಿಗೆ ಬುದ್ಧಿ ಬಂದಿರುವ ಕಾರಣವಾಗಿರಬಹುದು ಇಲ್ಲವೆ ಈ ಹಿಂದೆ ನಡೆದಿರುವ ಘಟನೆಗಳನ್ನು ತಿಳಿದುಕೊಂಡಿರುವ ಕಾರಣದಿಂದಾಗಿ ತನ್ನ ನಿಜವಾದ ತಂದೆ ಹಾಗೂ ದೇವದಾಸಿಯ ಮಗನೆಂದು ಕರೆಯುತ್ತಿದ್ದ ಸಮಾಜಕ್ಕೆ ತನ್ನ ಹುಟ್ಟಿನ ಮೂಲದ ಕುರಿತು ಹೇಳುವ ಅನಿವಾರ್ಯತೆ ಗೋಣಿಬಸಪ್ಪನಿಗೆ ಸೃಷ್ಟಿಯಾಗಿರಬಹುದು. ಹಾಗಾಗಿ ತನ್ನ ತಂದೆ ಬಗ್ಗೆ ತಾಯಿಯಾದ ಕನಕಮ್ಮನನ್ನೂ ವಿಚಾರಿಸುತ್ತಾನೆ. ಕನಕಮ್ಮ ಕೂಡ ಯಾಕೆ ನಿಜ ಹೇಳುವುದಿಲ್ಲ ಎನ್ನುವ ಪ್ರಶ್ನೆ ಪ್ರಶ್ನೆಯಾಗಿ ಉಳಿದುಬಿಡುತ್ತದೆ. ಕನಕಮ್ಮ ಮದ್ದಾನೇಶ್ವರ ಸ್ವಾಮಿಯ ಹೆಸರು ಹೇಳದೆ ಕೋರಿ ಈರಯ್ಯನ ಹೆಸರು ಹೇಳುತ್ತಾಳೆ. "ಅಯೋ ಗೋಣಿಬಸಪ್ಪ ನೀನು ತಂದಿ ಇಲ್ದಾ ಹುಟ್ಟೇಯೆನಪ್ಪಾ? ಈ ಊರಲ್ಲಿ ಕೋರಿ ಈರಯ್ಯ ಅದನಾಲ್ಲ ಜಂಗಮ್ರುನಾತ ಆತನೆ ನನಗೆ ಗಂಡ ನಿನಗೆ ತಂದೆ"[೬] ಎಂದಾಗ ಗೋಣಿಬಸಪ್ಪ ತನ್ನ ತಾಯಿ ದೇವದಾಸಿಯಾಗುವುದಕ್ಕೆ ಈತನೇ ಕಾರಣವಿರಬಹುದೆಂದು ಭಾವಿಸಿ ಕೋರಿ ಈರಯ್ಯನನ್ನು ಕೊಲೆ ಮಾಡುತ್ತಾನೆ. ತಾಯಿ ಆತನ ಮೃತ ದೇಹ ನೋಡಿ ಕನಕಮ್ಮ ನಾನು ಯಾರಿಗೆ ಗಂಡ ಅನ್ನಲಯ್ಯ, ಸತ್ತೇ ಹೋಗ್ಯಾನ ನನ್ನ ಪತಿಯೇ ಎಂದು ರೋದನ ಮಾಡುತ್ತಾಳೆ. ಅವಾಗ ಗೋಣಿಬಸಪ್ಪ ತಾಯಿ ಕನಕಮ್ಮನಿಗೆ

ನೀವು ಆಗನ್ಬೇಡಮ್ಮ ಆ ಕೋರಿ ಈರಯ್ಯ ನಿನಗೆ ಗಂಡನಲ್ಲಾ, ನನಗೆ ತಂದಿ ಅಲ್ಲಮ್ಮ. ನನ್ನ ತಂದೆ ನಿನ್ನ ಗಂಡ ಮದ್ದಾನೇಶ್ವರನಸ್ವಾಮಿಗಳು ನಾನು ಮದ್ದಾನೇಶ್ವರಸ್ವಾಮಿಯ ಮಗನೆಂದು ಸಾರಿ ಹೇಳುತ್ತಾನೆ. ಗೋಣಿಬಸಪ್ಪ ಕೋರಿ ಈರಯ್ಯನ ಕೊಲೆ ಮಾಡುವುದು ತನ್ನ ತಾಯಿ ಮೇಲೆ ಇರುವ ಅಪವಾದವನ್ನು ಕಳೆಯುವುದಕ್ಕಾಗಿ ಆಗಿರಬಹುದು ಅಥವಾ ದೇವದಾಸಿ ಮಗನು ನಾನು ಅಲ್ಲ, ನನಗೆ ತಂದೆ ಮದ್ದಾನೇಶ್ವರಸ್ವಾಮಿಗಳೆಂದು ಜನಕ್ಕೆ ತಿಳಿಸಿ ಹೇಳಲು ಈ ಕಾರ್ಯ ಮಾಡಿರಬಹುದು ಎಂದು ಊಹಿಸಬಹುದು ಅಥವಾ ದೇವದಾಸಿ ಮಗನೆಂದು ಸಮಾಜ ನಿಂದಿಸಿರುವುದರಿಂದ ತನ್ನ ತಂದೆಯ ಬಗ್ಗೆ ತಿಳಿದು ಸಮಾಜಕ್ಕೆ ತಾನು ಯಾರೆಂದು ತಿಳಿಸಲು ಈ ಕಾರ್ಯ ಮಾಡಿರಬಹುದಾಗಿದೆ.

ಅಲ್ಲದೆ ಜಂಗಮರಿಂದ ಸಾಮಾಜಿಕ, ಧಾರ್ಮಿಕವಾಗಿಯೂ ಒಪ್ಪಿಕೊಳ್ಳುವಂತೆ ಮಾಡುವ ಉದ್ದೇಶದಿಂದ ಪಂಚಾಗಣಾಧೀಶ್ವರರಲ್ಲಿ ಪ್ರಮುಖವಾದ ಕೊಟ್ರೇಶನ ಸಹಾಯ ಕೇಳುತ್ತಾನೆ. ಇದು ಪ್ರಭುತ್ವ ಮತ್ತು ಸಮಾಜ ಎರಡನ್ನು ತನ್ನ ಕಡೆಗೆ ಸೆಳೆಯುವ ಅಧಿಕಾರ ಸ್ಥಾಪನೆಯ ರಾಜಕಾರಣ ಭಾಗವಾಗಿ ಗೋಣಿಬಸಪ್ಪನ ನಡೆಯನ್ನು ಗಮನಿಸಬೇಕಾಗಿದೆ. ಈ ರೀತಿ ಮಾಡುವುದರಿಂದ ಗೋಣಿಬಸಪ್ಪನು ಸಾಮುದಾಯಿಕ ರಾಜಕಾರಣದ ಸಹಾಯವನ್ನು ಕೊಟ್ರೇಶನಿಂದ ಪಡೆದುಕೊಳ್ಳುತ್ತಾನೆ. ಕಾರಣ ಕೊಟ್ರೇಶ ಕೂಲಹಳ್ಳಿಯಲ್ಲಿ ಬಂದು ನೆಲೆಸುವುದರಿಂದ ಅಲ್ಲಿನ ಆ ಭಾಗ ಜಂಗಮರು ಕೂಡ ನನ್ನನು ಒಪ್ಪಿಕೊಳ್ಳುತ್ತಾರೆ. ಇದರಿಂದ ನನ್ನ ಅಧಿಕಾರ ಸ್ಥಾಪನೆಗೆ ಅಥವಾ ಮಠದ ಆರ್ಥಿಕತೆಯು ಸ್ಥಿರವಾಗಿಲು ಸಹಾಯಕವಾಗುತ್ತದೆ ಎನ್ನುವ ತಂತ್ರಗಳನ್ನು ಬಳಸಿಕೊಳ್ಳುತ್ತಾನೆ. ಅಂದಿನ ಸಾಮಾಜಿಕ ಪರಿಸ್ಥಿತಿಯು ಕೂಡ ಹಾಗೆ ಇರುತ್ತದೆ. ವೀರಶೈವ ಪಂಥ ಅಥವಾ ಧರ್ಮ ಹೆಚ್ಚು ಪ್ರಾಬಲ್ಯವಿರುವುದರಿಂದ ಅವರ ದೈವಗಳ ಅಥವಾ ಸಾಂಸ್ಕೃತಿಕ ಧಾರ್ಮಿಕ ನಾಯಕರ ಮೂಲಕವೇ ಅವರನ್ನು ಅಧೀನದಲ್ಲಿ ಇಟ್ಟುಕೊಳ್ಳುವ ತಂತ್ರಗಾರಿಕೆಯಾಗಿದೆ. ಈ ಎಲ್ಲಾ ತಂತ್ರಗಳು ಫಲಿಸಿದ ಪರಿಣಾಮ ಗೋಣಿಬಸಪ್ಪನ ಆರ್ಥಿಕತೆ ಎಷ್ಟರ ಮಟ್ಟಿಗೆ ವೃದ್ಧಿಯಾಗುತ್ತದೆ ಎಂದು ಕಥೆಯಲ್ಲಿ ಈ ರೀತಿಯಾಗಿ ಬಾಲಬಸವ ತುಮನೆಪ್ಪ ಹೇಳುತ್ತಾನೆ. ಕೂಲಹಳ್ಳಿಯಲ್ಲಿ ಕೊಟ್ರೇಶ ಊರ ಹೊರಗೆ ನೆಲೆಗೊಂಡಿದ್ದರಿಂದ ಅಡ್ಡ ಲಿಂಗದವು, ದೊಡ್ಡ ಲಿಂಗದವು ಕುಲ ಹದಿನೆಂಟು ಜಾತಿಗಳಲ್ಲಿ ಭಿನ್ನ ಭೇದ ಮರೆತು ಗೋಣಿಬಸಪ್ಪನ ಪಾದಕ್ಕೆ ಬೀಳುತ್ತಾರೆ. ಎಲ್ಲಾ ಜಾತಿಯವರು ಪಾದಕ್ಕೆ ಬೀಳುತ್ತಾರೆ.

ಅ. ಜಾತಿಯಿಂದ ಅಪಮಾನ

ಗೋಣಿಬಸಪ್ಪನ ತಾಯಿ ಕನಕಮ್ಮ ಬೇಡರ ಕುಲದವಳು. ತಂದೆ ಮದ್ದಾನಸ್ವಾಮಿಗಳು ಲಿಂಗಾಯತರು. ಗೋಣಿಬಸಪ್ಪ ಕೆಳವರ್ಗದ ದಲಿತ ಸಮುದಾಯಕ್ಕೆ ಸೇರಿದ ಬೇಡರ ಕುಲದವನು ಎಂದು ಅಂದಿನ ಪ್ರಭುತ್ವ ಮತ್ತು ಸಮಾಜ ಪರಿಭಾವಿಸಿತು. ಇದರಿಂದಾಗಿ ತಾನು ಅನುಭವಿಸಿದ ಕಷ್ಟಗಳು ಒಂದೆರಡಲ್ಲ ಸಮುದಾಯ ರಾಜಕಾರಣದಿಂದಾಗಿ ಗೋಣಿಬಸಪ್ಪ ತಾನು ಲಿಂಗಾಯತ

ಸಮುದಾಯದವನು ಎಂದು ನಿರೂಪಿಸುವ ಅಗತ್ಯವಿತ್ತು. ಅಲ್ಲದೆ ತನ್ನ ಸಹಾಯಕ್ಕೆ ಮದ್ದಾನಸ್ವಾಮಿಯೊಂದಿಗೆ ಇದ್ದ ಕೊಟ್ಟೂರು ಗುರುಬಸವೇಶ್ವರರನ್ನು ಕೂಲಹಳ್ಳಿಗೆ ಕರೆಸುವ ನಿರ್ಧಾರ ಮಾಡುತ್ತಾನೆ. ಈ ಎಲ್ಲಾ ಬೆಳವಣಿಗೆಗಳು ನಡೆದರೂ ಗೋಣಿಬಸಪ್ಪ ಅವುಗಳಿಗೆ ಪವಾಡಗಳ ಮೂಲಕವೇ ಉತ್ತರಿಸುತ್ತಾ ಪ್ರಬಲವಾಗಿ ಬೆಳೆದು ಲಿಂಗಾಯತ ಮಠ ಕಟ್ಟಿದ. ಆದರೂ ಲಿಂಗಾಯತ ಸಮುದಾಯ ಇವನ ನಾಯಕತ್ವವನ್ನು ಸುಲಭವಾಗಿ ಒಪ್ಪಿಕೊಂಡಿರುವುದಿಲ್ಲ. ಇದರಿಂದ ತನ್ನ ಸಹಾಯಕ್ಕೆ ದೈವಬಲವನ್ನು ಉಪಯೋಗಿಸಿ ಪವಾಡಗಳ ಮೂಲಕ ಜನ ಮಾನಸದಲ್ಲಿ ಪವಾಡ ಪುರುಷನಾಗುತ್ತಾನೆ. ಬೇಡರ ಸಮುದಾಯದವರು ಹೇಗೆ ಜಂಗಮತ್ವವನ್ನು ಪಡೆಯುತ್ತಾನೆ, ಅವನನ್ನು ಅವಮಾನಿಸುವ ಪ್ರಭುತ್ವದ ಸಂಗತಿಗಳು ಕಾವ್ಯದ ಉದ್ದಕ್ಕೂ ವ್ಯಕ್ತಗೊಳ್ಳುತ್ತವೆ.

ಅಂದಿನ ಕಾಲದಲ್ಲಿನ ಜಂಗಮರು ತಮ್ಮ ರಾಜ್ಯದ ರಾಜನಾದ ಬಾಗಳಿ ಭೂಪನಿಗೆ ಗೋಣಿಬಸಪ್ಪನ ಕುರಿತು ಚಾಡಿ ಹೇಳುತ್ತಾರೆ. ಜಾತಿಯಿಂದ ಬೇಡರ ಕುಲದವನಾದ್ರೂ ನಮ್ಮಂತೆ ಜಂಗಮ ವೇಷ ಹಾಕಿ ಭಿಕ್ಷೆ ಮಾಡುತ್ತಾನೆ. ನಮಗೆ ಸಿಗಬೇಕಾದ ಮಾಲು ಮಟ್ಟಿ ಅವನಿಗೆ ಸಿಗುತ್ತದೆ. ಇದರಿಂದ ನಮ್ಮ ಆರ್ಥಿಕತೆಗೆ ಹೊಡೆತ ಬೀಳುತ್ತದೆ. ತಾವುಗಳು ಗೋಣಿಬಸಪ್ಪನನ್ನು ಕರೆದು ವಿಚಾರಿಸಿ ಎಂದು ಹೇಳುತ್ತಾರೆ. ಇಂತಹ ಪ್ರಸಂಗವನ್ನು ಕಾವ್ಯದಲ್ಲಿ ಬಾಲಬಸವ ತುಮನೆಪ್ಪ ಹೀಗೆ ಹೇಳುತ್ತಾರೆ. "ಗೋಣಿಬಸಪ್ಪ ಬಾಗಳಿಯಾಗೆ ಭಿಕ್ಷಾ ಮಾಡ್ತುನ್ರಿ, ಅಲ್ಲಿಯ ಜಂಗಮರು ಬಾಗಳಿ ಭೂಪ ರಾಜನಿಗೆ ಚಾಡ ಹೇಳುತ್ತಾರೆ. ರಾಜಾಧಿರಾಜ ಅವನ್ನು ನೋಡಿದರೆ ಬ್ಯಾಡರನು, ಬ್ಯಾಡರ ಹೊಟ್ಯಾಗ ಹುಟ್ಟಿ ಬ್ಯಾಡ್ರವನಾಗಿ ಕಮಂಡಲ ಹಿಡ್ಕೊಂಡು ಲಿಂಗ ಹಿಡ್ಕೊಂಡು ರುದ್ರಾಕ್ಷಿ ಭದ್ರಾಕ್ಷಿ ಹಾಕ್ಕೆಂಡು ನೋಡ್ರಿ ಜಂಗಮರ ಹಾಗೆ ಕಂತಿ ಭಿಕ್ಷೆ ಮಾಡುತ್ತಾನೆ. ಬ್ಯಾಡ್ರವನು ಅವನ್ನ ಸಿಂಹಾಸನಕ್ಕೆ ಕರಿಸಿ ಭಿಕ್ಷೆ ಬೇಡೋದನ್ನ ಬಿಡ್ಸಿ ಬಿಡ್ರಿ ಎಂದು ಚಾಡಿ ಹೇಳುತ್ತಾರೆ"[೭] ಈ ಪ್ರಸಂಗದಲ್ಲಿ ಜಾತಿಯಿಂದ ಅಪಮಾನ ಮಾಡುವ ಉದ್ದೇಶವು ಎದ್ದು ಕಾಣುತ್ತದೆ. ಜನಪದ ಮೌಖಿಕ ಕಾವ್ಯಗಳಲ್ಲಿ ಈ ರೀತಿ ಅಪಮಾನ ಸಾಮಾನ್ಯವಾಗಿದ್ದರೂ ಇವುಗಳಿಗೆ ತಮ್ಮ ದೈವಬಲದಿಂದ ಪವಾಡ ಮಾಡುವುದರ ಮೂಲಕವೇ ಉತ್ತರಿಸುವ ಪ್ರಯತ್ನ ಮಾಡುತ್ತಾನೆ. ಹಾಗಾಗಿ ಜನಪದ ಕಾವ್ಯಗಳಲ್ಲಿ ಅತಿಮಾನುಷ ಶಕ್ತಿ ಪವಾಡಗಳು, ತನ್ನ ಅಸ್ತಿತ್ವ ಉಳಿಸಿಕೊಳ್ಳುವ ಸಂದರ್ಭ ಒದಗಿ ಬಂದಾಗ ತಮ್ಮ ಲೀಲೆಗಳ ಮೂಲಕವೇ ತಮ್ಮ ಶಕ್ತಿ ಪ್ರದರ್ಶನ ಮಾಡುವುದನ್ನು ನಾವು ಬಾಲಬಸವರ ಮೌಖಿಕ ಕಾವ್ಯಗಳಲ್ಲಿ ಕಾಣಬಹುದಾಗಿದೆ.

ಆ. ಅವಮಾನದ ಪ್ರತಿರೋಧ: ಹುಲಿ ಸವಾರಿ

ಗೋಣಿಬಸಪ್ಪನು ಬೇಡರ ಜಾತಿಯವನು, ಇವನು ಕಂತೆ ಭಿಕ್ಷೆ ಮಾಡಬಾರದೆಂದು ಅಂದಿನ ಲಿಂಗವಂತ ಸಮುದಾಯವು ಬಾಗಳಿ ಭೂಪನಿಗೆ ಚಾಡಿ ಹೇಳಿ ರಾಜನಿಂದ ಅಪಮಾನ ಮಾಡಿಸುತ್ತಾರೆ. ಈ ಅಪಮಾನವನ್ನು ಗೋಣಿಬಸಪ್ಪ ಹುಲಿ ಸವಾರಿ ಮಾಡುವುದರ ಮೂಲಕ

ಪ್ರತಿಭಟಿಸುತ್ತಾನೆ. ಈ ಸಂಗತಿಯು ಗೋಣಿಬಸಪ್ಪನ ಕಾವ್ಯದಲ್ಲಿ ಈ ರೀತಿಯಾಗಿದೆ. "ಗೋಣಿಬಸವೇಶ್ವರ ಮ್ಯಾಲಕೆದ್ದಾನು, ಪೂಜಿ ಪುನಸ್ಕಾರ ಮಾಡ್ದ, ಬೆಟ್ಟದ ಕಡಿ ನೋಡ್ದ. ಬೆಟ್ಟದ ಕಡೆ ನೋಡಿ ಕೈ ಬೀಸಿದ. ಕೈ ಬೀಸಿದಾಗ ಏಳು ಮೆಟ್ಟಿನ ಹುಲಿರಾಜ ಬಂದು ಗುರುವಿನ ಪಾದ್ಕ ಬಿತ್ತಂತ್ರಿ ಆಗ ಗೋಣಿಬಸಪ್ಪ ಹುಲಿ ಬೆನ್ನ ಮೇಲೆಕೆ ಎಳ್ದು ದಾಗಡಿ ಬಳ್ಳಿ ಹರ್ಕಂಡ, ಕಡಿವಾಣ ಹಾಕ್ಕೆಂಡ, ಹುತ್ತದಾಗ ಕೈ ಇಕ್ಕಿ ಸರ್ಪ ಹಿಡ್ಕಂಡ. ಹುಲಿಮ್ಯಾಲ ಕುತ್ಗಂಡ.

> ಹುಲಿ ಹತ್ಕೆಂಡು ಬಾಗಳಿಗೆ ಬರ್ತಾನಯ್ಯೋ । ಸೋಕಿರ ಮೂವ ತಾಜೀಜಿ।
>
> ಹುಲಿ ಮ್ಯಾಲೆ ಬರ್ತಾನಯ್ಯೋ । ಸೋಕಿರ ಮೂವ ತಾಜೀಜಿ ।
>
> ಹುಲಿ ಹತ್ತ್ಕೆಂಡು ಬರ್ತಾನು. ನೋಡ್ರಿ ಹತ್ತಿದ ಹುಲಿ ಕೆಳಗ ಇಳಿಲಿಲ್ದಂಗ ಊರಕ ಬರ್ತಾನು.

ಇದನ್ನು ಕಂಡ ಜಂಗಮರು ಅಡವಿಗೆ ಬಿದ್ರು, ರೈತ್ರು ಅಡವಿಗೆ ಬಿದ್ದರು, ಭಾಗಳಿ ಭೂಪ ಸದರಿ ಮ್ಯಾಲ ಕುತ್ಗಂಡೇ ಉಚ್ಚೆ ಹೊಯ್ಯುತ್ತಾನೆ"[೮] ಈ ಹುಲಿ ಸವಾರಿಯು ಅವಮಾನವನ್ನು ಪ್ರತಿರೋಧಿಸುವ ಸಂಕೇತವಾಗಿದೆ. ರಾಜ ಮತ್ತು ಜಂಗಮರಿಗೆ ಬುದ್ಧಿ ಕಲಿಸಲು ಗೋಣಿಬಸಪ್ಪ ಈ ಹುಲಿ ಸವಾರಿ ಮಾಡುತ್ತಾನೆ. ಜನಪದ ಮಹಾಕಾವ್ಯಗಳಲ್ಲಿ ಆ ಕಾವ್ಯದ ನಾಯಕ ಹುಲಿ ಸವಾರಿ ಮಾಡುವುದು, ಹುಲಿಯೊಂದಿಗೆ ಹೋರಾಡುವುದು ಸಾಮಾನ್ಯವಾಗಿ ಕಂಡುಬರುತ್ತವೆ.

ಹುಲಿ ಸವಾರಿಯು ಅಧಿಕಾರದ ಸಂಕೇತ. ಈ ಹುಲಿ ಸವಾರಿಯು ಅಧಿಕಾರದ ಮತ್ತು ಅಪಮಾನದ ವಿರುದ್ಧ ಪ್ರತಿರೋಧದ ಸಂಕೇತವಾಗಿ ಅನೇಕ ಮೌಖಿಕ ಕಾವ್ಯಗಳು ನಿರೂಪಿಸುತ್ತವೆ. ಮಲೆ ಮಾದಪ್ಪನ ಕಾವ್ಯದಲ್ಲಿ ಮಾದಪ್ಪ ಕೂಡ ಹುಲಿ ಸವಾರಿ ಮಾಡುತ್ತಾನೆ. ಗಾದ್ರಿಪಾಲ ನಾಯಕನ ಕಾವ್ಯದಲ್ಲಿ ಗಾದ್ರಿಪಾಲ ನಾಯಕ ಹುಲಿಯೊಂದಿಗೆ ಹೋರಾಟ ಮಾಡುತ್ತಾನೆ. ಹೀಗೆ ಅನೇಕ ಮೌಖಿಕ ಕಾವ್ಯಗಳಲ್ಲಿ ಹುಲಿ ಸವಾರಿಯ ಚಿತ್ರಣವನ್ನು ನಾವು ಕಾಣಬಹುದಾಗಿದೆ.

೬.೫. ಬಾಲಬಸವ

ಬಾಲಬಸವ ತುಮನೆಪ್ಪ ಹಾಡುವ ಧಾರ್ಮಿಕ ಕಾವ್ಯಗಳಾದ ಮರುಳಸಿದ್ಧ ಮತ್ತು ಗೋಣಿಬಸಪ್ಪ ಕಾವ್ಯಗಳಲ್ಲಿ ತಮ್ಮ ಸಾಂಸ್ಕೃತಿಕ ಅನನ್ಯತೆಯನ್ನು ಮುನ್ನೆಲೆಗೆ ತರುವ ಉದ್ದೇಶದಿಂದ ಅಥವಾ ಬಾಲಬಸವ ಪರಂಪರೆ ದೀಕ್ಷೆ ತೆಗೆದುಕೊಳ್ಳುವ ಮಠವಾಗಿದ್ದು, ಮೂಲದಲ್ಲಿ ಮಾದಿಗರು ಆ ಮಠದ ವಾರಸುದಾರರು ಎನ್ನುವ ಸಾಂಸ್ಕೃತಿಕ ಚರಿತ್ರೆಯನ್ನು ಮರುಳಸಿದ್ಧನ ಮೂಲಕ ಪುನರ್‌ಸೃಷ್ಟಿ ಮಾಡಲು ಮರುಳಸಿದ್ಧನ ಕಾವ್ಯವನ್ನು ಹಾಡುತ್ತಿರಬಹುದು. ಆದರೆ ಗೋಣಿಬಸಪ್ಪನ ಕಾವ್ಯದಲ್ಲಿ ಮಾತ್ರ ಒಂದು ಕಡೆ ಈ ಬಾಲಬಸವ ಪರಂಪರೆ ಮೂಲಪುರುಷನಾದ ಬಾಲಬಸವನ ವಿವರವು ಕಂಡುಬರುತ್ತದೆ. ಹರಪನಹಳ್ಳಿ ಬಾಲಬಸವ ಮೌಖಿಕ ಕಥೆಯ ಆಧಾರದ ಮೇಲೆ ಅವರ ಮೂಲಪುರುಷ ಮೂಲ ರೇವಣಸಿದ್ಧನಾಗಿದ್ದು, ಅವರಿಂದ ಆತ ಕಾಲಜ್ಞಾನ ಹಾಡುವ ಕಾರ್ಯವನ್ನು

ಪಡೆದುಕೊಂಡಿದ್ದಾಗಿ ಹೇಳುತ್ತಾರೆ. ಆದರೆ ಇವರು ಇತರೆ ಬಾಲಬಸವರಿಗಿಂತ ಗೋಣಿಬಸಪ್ಪನೊಂದಿಗೆ ಹೆಚ್ಚು ಧಾರ್ಮಿಕ ಆಚರಣೆಗಳಲ್ಲಿ ಕಾಣಿಸಿಕೊಳ್ಳುತ್ತಾರೆ. ಹರಪನಹಳ್ಳಿಯ ಬಾಲಬಸವರಿಗೆ ಕೂಲಹಳ್ಳಿ ಜಾತ್ರೆಯಲ್ಲಿ ವಿಶೇಷವಾದ ಸ್ಥಾನವಿದೆ. ಈಗಲೂ ಕೂಲಹಳ್ಳಿ ಮದ್ದಾನಸ್ವಾಮಿ ವಂಶಸ್ಥರು ಬಾಲಬಸವರೊಂದಿಗೆ ಹೆಚ್ಚು ಆತ್ಮೀಯವಾಗಿರುವುದು ಕ್ಷೇತ್ರಕಾರ್ಯದ ಮೂಲಕ ತಿಳಿದುಬಂದಿದೆ. ಅದಕ್ಕೆ ಕಾರಣ ಹುಡುಕುತ್ತಾ ಹೋದಾಗ ಸಿಕ್ಕ ಮಾಹಿತಿ ಎಂದರೆ ಗೋಣಿಬಸಪ್ಪನಿಗೆ ಬಾಲಬಸವ ಜೀವದಾನ ಮಾಡಿರುವುದು. ಆ ವಿವರಗಳು ಬಾಲಬಸವ ತುಮನೆಪ್ಪ ಗೋಣಿಬಸಪ್ಪನ ಕಾವ್ಯದಲ್ಲಿ ಹೇಳುತ್ತಾನೆ. ಹರಪನಹಳ್ಳಿ ಪಾಳೇಗಾರರ ಸಾಮಂತ ಪಾಳೇಗಾರನಾದ ಚಿಗಟೇರಿ ಶಿವನಯ್ಯನು ಗೋಣಿಬಸಪ್ಪನ ಮಠದ ಆಸ್ತಿಯನ್ನು ಪಡೆಯಲು ಗಾಳಿಪೂಜಿ ಪಟ್ಟಣದ ಸಿದ್ಧರಿಂದ ಮಾಟದ ಮೊರವಿ ಅಂಗಿ ಮಾಡಿಸಿಕೊಂಡು ಗೋಣಿಬಸಪ್ಪನಿಗೆ ನೀಡುತ್ತಾನೆ. ಸಾಧು ಸಂತರಾಗಿರುವ, ಶಿವಶರಣನಾಗಿರುವ ಗೋಣಿಬಸಪ್ಪನ ಮೇಲೆ ನೇರವಾಗಿ ಯುದ್ಧ ಮಾಡದೆ ಮಾಟ ಮಂತ್ರ-ತಂತ್ರದಿಂದ ಅತನನ್ನು ಕೊಲ್ಲುವುದಕ್ಕೆ ಪ್ರಯತ್ನ ಮಾಡುತ್ತಾನೆ. ಆ ಪ್ರಯತ್ನದ ಮೊದಲ ಯತ್ನದಲ್ಲಿ ಅವನು ಸೋಲು ಕಂಡರೂ ಎರಡನೇ ಯತ್ನದಲ್ಲಿ ಗೆಲವು ಕಾಣುತ್ತಾನೆ. ಗಾಳಿಪೂಜಿ ಪಟ್ಟಣದ ಸಿದ್ಧರು ದೆವ್ವದ ಮೂಲಕ ಮಾಡಿದ ಮಾರವಿ ಅಂಗಿಯ ಮಾಟ ತಂತ್ರದ ಪ್ರಭಾವದಿಂದಾಗಿ ಗೋಣಿಬಸಪ್ಪ ಸತ್ತುಹೋಗುತ್ತಾನೆ. ಆಗ ಬಾಲಬಸವನ ಪ್ರವೇಶವಾಗುತ್ತದೆ. ಗೋಣಿಬಸಪ್ಪನ ಸಹಾಯಕ್ಕೆ ಬಾಲಬಸವ ಬರುತ್ತಾನೆ. ಹರಪನಹಳ್ಳಿ ಮ್ಯಾಸಗೇರೆಯಲ್ಲಿನ ನೆಲಮಾಳಿಗೆ ಮಠದ ಸನ್ಯಾಸಿ ತೋಟದೊಳಗೆ ಬಾಲಬಸವ ಮಲಗಿ ನಿದ್ದೆ ಮಾಡುತ್ತಿರುತ್ತಾನೆ. ನಿದ್ದೆ ಮಾಡುವ ಸಮಯದಲ್ಲಿ ಗೋಣಿಬಸಪ್ಪನು ಸತ್ತಿರುವ ಸುದ್ದಿಯು ಬಾಲಬಸಪ್ಪನಿಗೆ ಸ್ವಪ್ನದಲ್ಲಿ ಕಾಣಿಸಿಕೊಳ್ಳುತ್ತದೆ. ತಕ್ಷಣಕ್ಕೆ ಬಾಲಬಸವ ಮೇಲಕ್ಕೆ ಎದ್ದು ಇದೇನಪ್ಪ ಎಂದೂ ಕಾಣಿಸಿಕೊಳ್ಳದ, ಎಂದೂ ಬೀಳದ ಸ್ವಪ್ನ ಇವತ್ತು ನನಗೆ ಕಂಡಿತ್ತಲ್ಲಾ, ಇವತ್ತು ಯಾಕೆ ಕನಸಿನಲ್ಲಿ ಗೋಣಿಬಸಪ್ಪ ಸತ್ತಿರುವ ಸಂಗತಿ ಕಂಡಿತ್ತಲಾ ಎಂದು ದುಃಖ ಮಾಡುತ್ತಾನೆ. ಇನ್ನು ಮುಂದೆ ನಾನು ಯಾರಿಗೆ ಗುರುವೇ ಎಂದು ಕರೆಯಲಿ ಎನ್ನುತ್ತಾ ನಾನು 'ಹೆಸರಿಗೆ ಬಾಲಬಸವ, ನೆರಳಿಗೆ ಗೋಣಿಬಸವೇಶ್ವರ. ಬಸವನ್ನ ಬಿಟ್ಟು ಬಾಲ ಇಲ್ಲ ಬಾಲ ಬಿಟ್ಟು ಬಸವ ಇಲ್ಲ' ಎಂದು ಅವರನ್ನು ನೆನೆದು ಅಲ್ಲಿಂದ ಚಿಕ್ಕಹಳ್ಳಿಗೆ ಹೊರಟು ಬಂದು ಮೇಟಿ ಬಣಕಾರನೊಂದಿಗೆ ಮಾತಾಡುತ್ತಾನೆ. ನೋಡಪ್ಪ ಬಣಕಾರ ಗೋಣಿಬಸವೇಶ್ವರರು ಐಕ್ಯವಾದರಂತೆ, ಸತ್ತರಂತೆ. ನೋಡಿ ಬಣಕಾರ ತಡ ಮಾಡುವುದು ಬೇಡ ನೀವು ಹೊಸ ಬಿಂದಿಗಿಯಾಗೆ ಹಾಲು ತಗೊಂಡು ನನ್ನ ಹಿಂದೆ ನೀವು ಬರಬೇಕು ನಾನು ಗುರುವಿನ ಪ್ರಾಣ ವಾಪಸ್ಸು ಪಡೀತೀನಿ ಎಂದು ಬಣಕಾರನಿಗೆ ಬಾಲಬಸವ ಹೇಳುತ್ತಾನೆ. ತಡ ಮಾಡದೆ ಇಬ್ಬರೂ ಅಲ್ಲಿಂದ ಹೊರಡುತ್ತಾರೆ. ಬಾಲಬಸವ ಮತ್ತು ಮೇಟಿ ಬಣಕಾರ ಇಬ್ಬರು ಕೂಲಹಳ್ಳಿ ಕೆರೆಯಂಗಳದಾಕೆ ಬರುತ್ತಾರೆ. ಬಾಲಬಸವ ಮಾದಿಗ ಕುಲದವನಾಗಿದ್ದರಿಂದ ಅವನಿಗೆ ಕೂಲಹಳ್ಳಿ ಮಠದೊಳಗೆ ಪ್ರವೇಶವಿರುವುದಿಲ್ಲ ಆದರೂ ಗೋಣಿಬಸಪ್ಪನನ್ನು ಬದುಕಿಸಬೇಕೆಂಬ

ಹಂಬಲವು ಬಾಲಬಸವನಿಗಿರುತ್ತದೆ. ಅದಕ್ಕಾಗಿ ಬಾಲಬಸವ ಅಲ್ಲಿ ಒಂದು ಪವಾಡ ಮಾಡುತ್ತಾನೆ. ತಾನು ಮನುಷ್ಯ ರೂಪದಿಂದ ಇರುವವರಿಗೂ ಮಾತ್ರ ಅಸ್ಪೃಶ್ಯತೆ ಆಚರಣೆ ಆದರೆ ತಾನು ಪ್ರಾಣಿಯಾದರೆ ಅದಕ್ಕೆ ಯಾವ ಜಾತೀನೂ ಇಲ್ಲ ಎಂದು ಬಾಲಬಸವ ತನ್ನ ಮನುಷ್ಯ ರೂಪವನ್ನು ಕಲ್ಲಿನಿಂದ ಜಜ್ಜಿಕೊಂಡು ಅದರಿಂದ ಒಂದು ಸರ್ಪವಾಗಿ(ಹಾವಾಗಿ) ತನ್ನ ದೇಹವನ್ನು ಮಾರ್ಪಡು ಮಾಡಿಕೊಳ್ಳುತ್ತಾನೆ. ಬಾಲಬಸವ ಹಾವಿನ ರೂಪದಲ್ಲಿಯೇ ಮೇಟಿ ಬಣಕಾರನೊಂದಿಗೆ ಮಾತಾಡುತ್ತಾನೆ, ನೋಡಿರಿ ಬಣಕಾರರೆ ನೀವು ನನ್ನ ಮಠದೊಳಗೆ ಕರೆದುಕೊಂಡು ಹೋಗಬೇಕು. ಹಾವೆಂದು ಯಾರಾದರೂ ನನ್ನ ಹೊಡೆದು ಸಾಯಿಸಬಹುದು. ನಾನು ಮಠದೊಳಗೆ ಹೋಗುವರಿಗೂ ನೀವು ನನ್ನ ರಕ್ಷಣೆ ಮಾಡಿದರೆ ನಾನು ಗೋಣಿಬಸಪ್ಪನ ಪ್ರಾಣ ಉಳಿಸಿಕೊಡುತ್ತೇನೆ. ಇಲ್ಲ ಅಂದ್ರೆ ಈ ಜನರು ನನ್ನ ಹಾವೆಂದು ಭಾವಿಸಿ ಕೊಂದುಹಾಕಿದರೆ ನಾವು ಮಾಡಿದ ಕೆಲಸ ವ್ಯರ್ಥವಾಗುತ್ತದೆ. ಹಾಗಾಗಿ ನೀವು ನನಗೆ ರಕ್ಷಣೆ ನೀಡಬೇಕೆಂದು ಹಾವಿನ ರೂಪದಲ್ಲಿ ಬಾಲಬಸವ ಬಣಕಾರನ ರಕ್ಷಣೆಯಲ್ಲಿ ಮಠದಲ್ಲಿನ ಮಜ್ಜನ ಬಾವಿ ಹತ್ತಿರ ಹೋಗುತ್ತಾರೆ. ಬಾಲಬಸವ ಹಾವಿನ ರೂಪದಲ್ಲಿ ಮುಖ ಎತ್ತಿ ಗೋಣಿಬಸಪ್ಪನ ಸತ್ತ ಶವವನ್ನು ನೋಡಿ ದುಃಖ ಮಾಡುತ್ತಾನೆ. ಗೋಣಿಬಸಪ್ಪನ ದೇಹದ ಮೇಲೆ ಹರಿದಾಡುತ್ತಾನೆ, ಆದರೂ ಗೋಣಿಬಸಪ್ಪನ ಪ್ರಾಣ ಹಿಂದಿರುಗತಿಲಿಲ್ಲ. ಯಾವ ಮಾಟದಾಗಿ ವಿಷವು ಹೆಬ್ಬರಳಿನಿಂದ ಮಸ್ತಕದವರಿಗೆ ಏರಿದೆಯೋ ಅದೇ ರೀತಿ ವಾಪಸ್ಸು ವಿಷವನ್ನು ಇಳಿಸಬೇಕಾಗಿರುತ್ತದೆ. ಅದನ್ನು ಯೋಚನೆ ಮಾಡುತ್ತಾ ಬಾಲಬಸವ ಎರಡು ಮೂರು ಸಲ ಪ್ರಯತ್ನ ಮಾಡುತ್ತಾನೆ. ಆದರೂ ಜೀವ ವಾಪಸ್ಸು ಬರುವುದಿಲ್ಲ. ಗೋಣಿಬಸಪ್ಪನನ್ನು ನೆನೆದು ಬಾಲಬಸವ ಕಣ್ಣೀರು ಹಾಕುತ್ತಾ ದುಃಖ ಮಾಡಿ, ಗುರುವಿನ ಎಡಗಾಲಿನ ಹೆಬ್ಬೆಟ್ಟನ್ನು ಕಚ್ಚಿ ವಿಷ ಎಳೆಯುವ ಸಂಗತಿಯನ್ನು ಬಾಲಬಸವ ತುಮನೆಪ್ಪನವರು ಅಲ್ಲಿನ ಪರಿಸ್ಥಿತಿಯನ್ನು ಕಣ್ಣಿಗೆ ಕಟ್ಟುವಂತೆ ಹಾಡುವ ರೀತಿ ಹೀಗಿದೆ.

"ಸರ್ಪ ಪಾದದ ಮ್ಯಾಲೆ ಹೊರಳೀತೋ । ತಾನಿ ತಂದನಿ ನಾನೋ
ಜಲುಮ ತಿರುಗಾಲಿಲ್ಲೋ । ತಾನಿ ತಂದನಿ ನಾನೋ
ತೊಡೆಮ್ಯಾಲೆ ಹೊರಳೀತೋ । ತಾನಿ ತಂದನಿ ನಾನೋ
ಹೊಟ್ಟೆ ಮ್ಯಾಲೆ ಹೊರಳೀತೋ । ತಾನಿ ತಂದನಿ ನಾನೋ
ಎದಿಮ್ಯಾಲೆ ಹೊರಳೀತೋ । ತಾನಿ ತಂದನಿ ನಾನೋ
ಮುಖಮ್ಯಾಲೆ ಹೊರಳೀತೋ । ತಾನಿ ತಂದನಿ ನಾನೋ
ಏನೇನು ಮಾಡಿದರೂ ಜಲುಮ ತಿರುಗಾಲಿಲ್ಲೋ । ತಾನಿ ತಂದನಿ ನಾನೋ
ಸರ್ಪ ಕಣ್ಣೀರು ಹಾಕುತ್ತೈತೆ, ಯೋಚನೆ ಮಾಡ್ತು, ಎಡಗಾಲಿನ ಹೆಬ್ಬೆಟ್ಟು ಕಚ್ಚಿ

ಬಿಡ್ತುರಿ. ಎಡಗಾಲ ಹೆಬ್ಬುಟ್ಟು ಕಚ್ಚಿ ಹಂಗೇ

ಉರಿಯ ಎಳೆಯುತ್ತೈತೆ । ಆ ಸೋಕೀರ ಮಾವ ತಾಜೀಜೀ

ಅಂಗೇ ಉರಿಯ ಎಳಿಯುತ್ತೈತೆ । ಆ ಸೋಕೀರ ಮಾವ ತಾಜೀಜೀ

ಸರ್ಪ ಹೊಟ್ಯಾಕ ಎಳಿಯತ್ತೈತೇ । ಆ ಸೋಕೀರ ಮಾವ ತಾಜೀಜೀ

ಗುರುವೆ ನಿಚ್ಚಳಾಗುತ್ತಾನೇ । ಆ ಸೋಕೀರ ಮಾವ ತಾಜೀಜೀ

ಗುರುವೆ ಕಣ್ಣಾ ತಗದಾನಯ್ಯೋ । ಆ ಸೋಕೀರ ಮಾವ ತಾಜೀಜೀ

ಗೋಣಿಬಸವ ಬದುಕ್ಯಾನೆ ಸರ್ಪ ಬಿದ್ದು ಸತ್ತಾತೇ । ಆ ಸೋಕೀರ ಮಾವ ತಾಜೀಜೀ"

ಬಾಲಬಸವ ಗೋಣಿಬಸಪ್ಪನ ಪ್ರಾಣ ಉಳಿಸೋಕೆ ಹೋಗಿ ತನ್ನ ಪ್ರಾಣ ಕಳಕೊಂಡಿರುವ ಸ್ಥಿತಿಯನ್ನು ಬಾಲಬಸವ ತುಮನೆಪ್ಪನವರು ತಿಳಿಸುವ ಕಾರ್ಯ ಮಾಡುತ್ತಾರೆ. ಗೋಣಿಬಸಪ್ಪನಿಗೆ ಪ್ರಾಣ ತಿರುಗಿ ಬಂದು ತಾನು ನಿಚ್ಚಳವಾದಾಗ ತನ್ನ ಪಕ್ಕದಲ್ಲಿ ಸತ್ತು ಬಿದ್ದಿದ ಹಾವನ್ನು ನೋಡಿ ಮರುಗುತ್ತಾನೆ. ಬಾಲಬಸವ ನನ್ನ ಪ್ರಾಣ ಉಳಿಸೋಕೆ ಹೋಗಿ ನೀನು ನಿನ್ನ ಪ್ರಾಣ ಕಳಕೊಂಡೆಯಲ್ಲಾಪ್ಪ ಅಂತ ದುಃಖ ಮಾಡುತ್ತಾನೆ. ಕಣ್ಣೀರು ಹಾಕುತ್ತಾನೆ. ಅಲ್ಲಿ ತನ್ನ ಬೆತ್ತದಿಂದ ಸತ್ತ ಹಾವಿನ ಮೇಲೆ ಎರಡು ಸಲ ನಿವಾಳಿಸಿದ ತಕ್ಷಣವೇ ಬಾಲಬಸವ ಹಾವಿನ ರೂಪದಲ್ಲಿದ್ದರಿಂದ ಹಾಗೆಯೇ ಪ್ರಾಣ ವಾಪಸ್ಸು ಬಂದಿತು. ಇಬ್ಬರೂ ಒಬ್ಬರಿಗೊಬ್ಬರು ಪ್ರಾಣವನ್ನು ಉಳಿಸಿಕೊಂಡರು. ಬಾಲಬಸವ ಸರ್ಪವಾಗಿ ವಿಷ ಎಳೆದಿದ್ದರಿಂದ ಉರಿ ಹೆಚ್ಚಾಯಿತು. ತಕ್ಷಣ ಮಜ್ಜನ ಬಾವಿಗೆ ದುಮುಕಿದಾ. ಆ ಬಾವಿಯಾಗೆ ವಿಷ ಕಕ್ಕಿದಾ, ಬಾವಿಯಾಗೆ ವಿಷ ಕಕ್ಕಿದ ತಕ್ಷಣವೇ ಬಾವಿಯಾಗಿನ ನೀರು ಹಸುರು ಬಣ್ಣಕ್ಕೆ ತಿರುಗಿತು

ಬಾಲಬಸವ ಮಜ್ಜನ ಬಾವಿಯಿಂದ ಹೊರಗೆ ಬಂದು ಗೋಣಿಬಸಪ್ಪನ ಹತ್ತಿರ ಬರುತ್ತಾನೆ. ಗೋಣಿಬಸಪ್ಪ ಎದ್ದು ಬಾಲಬಸವನ ಹತ್ತಿರಕ್ಕೆ ಹೋಗಿ ಮಗು, 'ಹೆಸರಿಗೆ ಬಾಲಬಸವ ನೆರವಿಗೆ ಗೋಣಿಬಸವೇಶ್ವರ ಬಸವನ್ನ ಬಿಟ್ಟು ಬಾಲ ಇಲ್ಲ. ಬಾಲ ಬಿಟ್ಟು ಬಸವ ಇಲ್ಲ ಮಗು ನನ್ನ ಪ್ರಾಣ ಪಡೆದೆಪ್ಪ ನೀನು ಏನು ಕೇಳುತ್ತೀಯೋ ಕೇಳಪ್ಪಾ ನೀನು ಕೇಳಿದು ಕೊಟ್ಟು ಬಿಡ್ತೀನಿ' ಎಂದು ತನ್ನ ಪ್ರಾಣ ಉಳಿಸಿದ ಬಾಲಬಸವನಿಗೆ ಹೇಳುತ್ತಾನೆ. ಬಾಲಬಸವ ಗೋಣಿಬಸಪ್ಪನ ಪರಂಪರೆಯಲ್ಲಿ ತಮ್ಮ ಸಾಂಸ್ಕೃತಿಕ ಅನನ್ಯತೆಯನ್ನು ಉಳಿಸಿಕೊಳ್ಳಲು ಹಾಗೂ ಕೂಲಹಳ್ಳಿ ಮಠದಲ್ಲಿ ಸಾಂಸ್ಕೃತಿಕ ಹಕ್ಕುಗಳನ್ನು ಪಡೆದುಕೊಂಡು ಮುಂದಿನ ಬಾಲಬಸವ ಪರಂಪರೆಯ ಜೀವನ ನಿರ್ವಹಣೆಗೆ ಸಹಾಯ ಮಾಡಬೇಕೆಂದು ಹೇಳಿಕೊಂಡ ಸಂಗತಿಯನ್ನು ಬಾಲಬಸವ ತುಮನೆಪ್ಪನವರು ಹೀಗೆ ಹೇಳುತ್ತಾರೆ. "ಏನೂ ಬ್ಯಾಡ್ರೀ ನಿಮ್ಮ ಪ್ರಾಣ ಪಡೆದಿದ್ದಕ್ಕಾಗಿ ನನ್ನ ಕುಟುಂಬಸಹಿತವಾಗಿ ನಿನ್ನ ಮಠಕ್ಕೆ ಬಂದ್ರೆ ನಾನು ತಿಂಗಳು ಇಲ್ಲ, ವರ್ಷ ಇಲ್ಲ, ಒಂದು

ದಿನ ಇಲ್ಲಿ ನಾನು ಇರೋವರಿಗೂ ನನಗೆ ಅನ್ನ ಬುತ್ತಿ ಅಳೀಬೇಕು ಮತ್ತು ಮೂರು ವರ್ಷಕ್ಕೆ ಒಂದ್ಸಲ ಒಂದು ಬಾಲದಾನ ಕೊಡ್ಬೇಕು. ನಿನ್ನ ಪರುಸೆಲಿ ಜಾತ್ರ್ಯಾಗ ಬಂದಂತ ಹಾಲು ಮಾಲನ್ಯಾಗ ನಾಕಾಣಿ ಭಾಗ ಕೊಡಬೇಕು ಮತ್ತೆ ನೀನು ಉಣ್ಣಾಕ ಕುಂತಾಗ ನನ್ನ ಶಬ್ದ ನಿನ್ನ ಕಿವಿಗೆ ಬಿದ್ರೆ ನೀನು ತುತ್ತು ಎತ್ತುಬಾರ್ದ್ರ ನನಗೆ ಮೊದ್ಲು ನೀಡಿ ಹಿಂದೂಗಡೆ ನೀನು ಊಟ ಮಾಡ್ಬೇಕು, ಬಾಲಬಸವ ನಾನು ಹರಪನಹಳ್ಳಿ ಸನ್ಯಾಸಿ ತೋಟದ ನೆಲಮಾಳಿಗೆ ಬಿಟ್ಟು ಬಂದೀನಿ, ಮತ್ತೆ ತಿರುಗಿ ವಾಪಸ್ಸು ಹೋಗುದಿಲ್ಲ. ನಿಮ್ಮ ತಂದೆ ಮದ್ದಾನಸ್ವಾಮಿಯ ಮಠದಾಗ ಎಡಗಡೆ ಒಂದು ತ್ವಲಿಯಾಗೆ ಗ್ವಾಡಿ ಕಟ್ಟಿಸಿಕೊಡು, ಬಸವ ಅಂದರೆ ಬಗಲಾಗ ಇರ್ತೀನಿ, ನೀನು ಎಲ್ಲಿಗ್ಯಾರ ಹೊರಟರೆ ಅದಕ್ಕೆ ನಾನು ಅಡ್ಡ ಬಂದರೆ ನೀನು ಹಿಂದಕ್ಕೆ ತಿರುಗಬೇಕು"[೧೦] ಎಂದು ಎರಡು ವರ ಕೇಳಿದ. ಬಾಲಬಸವಪ್ಪನ ಮಾತಿಗೆ ಗೋಣಿಬಸಪ್ಪ ಹುಂ ಎಂದು ಒಪ್ಪಿಕೊಳ್ಳುತ್ತಾನೆ. ಈ ಎಲ್ಲಾ ಅಂಶಗಳು ಮುಂದೆ ಬಾಲಬಸವರು ಗೋಣಿ ಬಸಪ್ಪನೊಂದಿಗೆ ಸಾಂಸ್ಕೃತಿಕ ಸಂಬಂಧವನ್ನು ಇಟ್ಟುಕೊಳ್ಳಲು ಕಾರಣವಾಯಿತು. ಇದರಿಂದಾಗಿಯೇ ಬಾಲಬಸವ ಪರಂಪರೆಯು ಈ ಪ್ರದೇಶದಲ್ಲಿ ಗಟ್ಟಿಯಾಗಿ ನೆಲೆ ಕಂಡುಕೊಂಡಿತ್ತು. ಗೋಣಿಬಸಪ್ಪನ ಮಠದೊಂದಿಗಿನ ಒಡನಾಟವು ಬಾಲಬಸವರ ಜೀವನ ನಿರ್ವಹಣೆಗೆ ಹೆಚ್ಚು ಸಹಾಯಕವಾಯಿತು. ಈ ಎಲ್ಲ ಕಾರಣಗಳಿಂದ ಬಾಲಬಸವರ ಪರಂಪರೆಯು ತಮ್ಮ ಮೂಲಪುರುಷನಾದ ಬಾಲಬಸವನನ್ನು ತಮ್ಮ ಸಾಂಸ್ಕೃತಿಕ ನಾಯಕನನ್ನಾಗಿಸಿಕೊಂಡು ಅವರ ಹೆಸರಿನಿಂದಲೇ ಇಲ್ಲಿಯವರೆಗೂ ಕಾಲಜ್ಞಾನವನ್ನು ಹೇಳುತ್ತ ಬಂದಿದ್ದಾರೆ.

೬.೬. ಮರುಳಸಿದ್ಧ

ಕರ್ನಾಟಕದಲ್ಲಿ ಅನೇಕ ವಿದ್ವಾಂಸರು ಮರುಳಸಿದ್ಧ ಮಹಾದೇವನ ಜಾತಿ ಮತ್ತು ಜೀವನ ವೃತ್ತಾಂತಗಳನ್ನು ಕುರಿತು ಚರ್ಚೆ ಮಾಡಿದ್ದಾರೆ. ಮರುಳುಸಿದ್ಧನ ಕುರಿತಾಗಿರುವ ಲಿಖಿತ ಪ್ರಮುಖ ಕಾವ್ಯಗಳೆಂದರೆ ಅ.ನ.ಕೃಷ್ಣರಾಯರು ಸಂಪಾದನೆ ಮಾಡಿರುವ 'ದೇವಕವಿಯ ಮರುಳಸಿದ್ಧನ ಕಾವ್ಯ', ತರಳಬಾಳು ಶಿವಮೂರ್ತಿಸ್ವಾಮಿಗಳು ಸಂಪಾದನೆ ಮಾಡಿರುವ 'ಮರುಳಸಿದ್ಧನ ಕಾವ್ಯ',(ಸಾಂಗತ್ಯ) ಎಚ್. ದೇವೀರಪ್ಪ ಮತ್ತು ಮಹಾದೇವ ಬಣಕಾರ ಅವರು ಸಂಪಾದನೆ ಮಾಡಿರುವ 'ವಿಶ್ವಬಂಧು ಮರುಳಸಿದ್ಧ ಹಾಗೂ ಆತನ ಪರಂಪರೆ', ಪಂಡಿತ್ ಎಸ್. ಬಸಪ್ಪನವರು ಸಂಪಾದನೆ ಮಾಡಿರುವ 'ದೇವಕವಿಯ ಮರುಳಸಿದ್ಧನ ಕಾವ್ಯ' ಮುಂತಾದವುಗಳು ಪ್ರಮುಖವಾಗಿವೆ. ದೇವಕವಿಯು ತನ್ನ ಕೃತಿಗೆ ಗದ್ದುಗೆಯ ರಾಮಿ ತಂದೆಯ 'ಗುರು ಬೋಧೆ'ಯ ಪ್ರಭಾವವಿದೆ ಎನ್ನುತ್ತಾನೆ. ಇದುವರೆಗೆ ಬಂದಿರುವ ಲಿಖಿತ ರೂಪದ ದಾಖಲೆಗಳು ಮರುಳಸಿದ್ಧ ಮಹಾದೇವ 'ಮಾದಿಗರ ಮಗ' ಎಂದು ಒಪ್ಪಿಕೊಳ್ಳುತ್ತವೆ. ಮರುಳಸಿದ್ಧನ ಹುಟ್ಟಿನ ಬಗ್ಗೆ ಹಲವಾರು ಚರ್ಚೆಗಳು ನಡೆದಿವೆ. ಕೆಲವು ಚರ್ಚೆಗಳು ಮರುಳಸಿದ್ಧ ಮಹಾದೇವ ಲಿಂಗದಲ್ಲಿ ಉದ್ಭವವಾಗಿದ್ದಾರೆ. ಅವರು ಶಿವನ ಪ್ರಸಾದ. ಭೂಮಿಯಲ್ಲಿ ಅಧರ್ಮವನ್ನು ತಡೆಯಲು ಅವತಾರ ಎತ್ತಿ ಬಂದ ಅವತಾರ ಪುರುಷ ಎನ್ನುವ ವಾದಗಳು ಮರುಳಸಿದ್ಧನನ್ನು ಶೈವೀಕರಿಸುವ ಪ್ರಕ್ರಿಯೆಯಾಗಿ ನೋಡಬಹುದಾಗಿದೆ.

ಮಧ್ಯ ಕರ್ನಾಟಕ ಭೌಗೋಳಿಕ ವ್ಯಾಪ್ತಿಯಲ್ಲಿರುವ ಉಜ್ಜಯಿನಿ ಪ್ರದೇಶದಲ್ಲಿ ಮರುಳಸಿದ್ಧ ಮಹಾದೇವ ಮಾದಿಗರ ಮನೆಯಲ್ಲಿ ಜನ್ಮ ಪಡೆದು ತನ್ನ ಜ್ಞಾನ ಮತ್ತು ಆಚಾರಗಳಿಂದ ಗುರುವಾಗುವ ಸಂಗತಿಯನ್ನು ಬಾಲಬಸವ ತುಮನೆಪ್ಪ ಹಾಡಿದ ಮರುಳಸಿದ್ಧನ ಕಾವ್ಯ ಹೇಳುತ್ತದೆ. ಮುಖ್ಯವಾಗಿ ಈ ಕಾವ್ಯವನ್ನು ಹಾಡುವ ಬಾಲಬಸವರು ಮಾದಿಗ ಸಮುದಾಯದವರು. ಅಲ್ಲದೇ ಮರುಳಸಿದ್ಧ ಮಹಾದೇವ ಕೂಡ ಮಾದಿಗರ ಜಾತಿಯಲ್ಲಿ ಹುಟ್ಟಿದವನು. ಈ ಕಾರಣಕ್ಕೆ ಬಾಲಬಸವರು ಈತನನ್ನು ತಮ್ಮ ಸಮುದಾಯದ ಸಾಂಸ್ಕೃತಿಕ ನಾಯಕನನ್ನಾಗಿಸಿಕೊಂಡಿವೆ. ಈತನ ಜನ್ಮದ ಕಥೆಗಳನ್ನು ಹಾಡುವ ಬಾಲಬಸವರು ತಮ್ಮ ಪೂರ್ವಜರ ಕುಲವೃತ್ತಾಂತ ಮತ್ತು ಕುಲದಲ್ಲಿನ ಪುಣ್ಯ ಪವಾಡಪುರುಷರ ಕಥನಗಳಿಂದ ತಮ್ಮ ಸಮುದಾಯವನ್ನು ಜಾಗೃತಿಗೊಳಿಸುವ ಕಾರ್ಯದ ಭಾಗವಾಗಿ ಬಾಲಬಸವರು ಮರುಳಸಿದ್ಧನ ಕಾವ್ಯನ್ನು ಹಾಡುತ್ತಾರೆ. ಮರುಳಸಿದ್ಧನ ಬದುಕಿನಲ್ಲಿ ಜರುಗಿದ ಸಂಗತಿಗಳನ್ನು ಈ ಕಾವ್ಯದ ಕೇಂದ್ರ ಕಥಾವಸ್ತುವಾಗಿಸಿಕೊಂಡಿದೆ. ಬಾಲಬಸವರು ತಮ್ಮ ಕಾವ್ಯದಲ್ಲಿ ಮುಖ್ಯವಾಗಿ ಮರುಳಸಿದ್ಧರು ಯಾರು? ಆತನ ಜಾತಿ ಯಾವುದು? ಮರುಳಸಿದ್ಧ ಹೇಗೆ ಮರುಳಸಿದ್ಧೇಶ್ವರನಾದ, ಎನ್ನುವ ವಿವರಗಳನ್ನು ಕಾವ್ಯದಲ್ಲಿ ನೀಡುತ್ತಾರೆ. ಮರುಳಸಿದ್ಧರು ಹೀರೆ ಸಿಂಧೋಗಿಯಲ್ಲಿ ಮಠ ಸ್ಥಾಪನೆ ಮಾಡಿ ಆ ಮಠಕ್ಕೆ ಮಾದಿಗರನ್ನೇ ಪೂಜಾರಿಗಳನ್ನಾಗಿ ಮಾಡುತ್ತಾರೆ. ಮರುಳಸಿದ್ಧರ ದೇಶ ಸಂಚಾರ ಮತ್ತು ಪವಾಡಗಳು, ಪೀಠ ಸ್ಥಾಪನೆ ಮುಂತಾದವುಗಳನ್ನು ಮಾಡುವ ಮರುಳಸಿದ್ಧರು ಈ ಮಧ್ಯ ಕರ್ನಾಟಕದಲ್ಲಿ ಪ್ರಬಲವಾದ ಲಿಂಗಾಯತ ಸಮುದಾಯದವರ ಸಮನಾಗಿ ನಿಲ್ಲುವ ಕಾರ್ಯ ಮಾಡುತ್ತಾನೆ. ಇದರ ಭಾಗವಾಗಿ ಉಜ್ಜನಿಯಲ್ಲಿ ಮಠ ಸ್ಥಾಪನೆ ಮಾಡುತ್ತಾನೆ. ಈ ಮಠದ ಮೇಲೆ ಹರಪನಹಳ್ಳಿಯ ಪಾಳೇಗಾರನ ದಾಳಿಯಿಂದಾಗಿ ತಾನು ಉಜ್ಜಯಿನಿ ಪೀಠ ಬಿಟ್ಟು ಸಿರಿಗೇರಿಗೆ ಪ್ರಯಾಣ ಬೆಳೆಸಿ ಅಲ್ಲಿಯೂ ಮತ್ತೊಂದು ಮಠ ಕಟ್ಟುತ್ತಾನೆ. ಈ ಉಜ್ಜಯಿನಿ ಮಠದ ಮೇಲಿನ ದಾಳಿಯ ನಂತರ ಹರಪನಹಳ್ಳಿ ಪಾಳೇಗಾರ ತನ್ನ ಸಿಂಹಾಸನವನ್ನು ಕಳೆದುಕೊಂಡು ಜರಿಮಲೆಗೆ ಬಂದು ವಾಸ ಮಾಡುತ್ತಾನೆ. ಮುಂದೆ ಜರಿಮಲೆಯ ಪಾಳೇಗಾರರಿಂದ ತಪ್ಪಿನ ಎಣ್ಣೆಯ ಕಾಣಿಕೆಯು ಉಜ್ಜಯಿನಿ ಮಠಕ್ಕೆ ಬಂದು ಸೇರುತ್ತದೆ. ಹೀಗೆ ಅನೇಕ ಸಂಗತಿಗಳಿಂದ ಮರುಳಸಿದ್ಧರು ಈ ಪ್ರದೇಶದಲ್ಲಿ ತನ್ನದೇ ಆದ ಪ್ರಭಾವವನ್ನು ಬೀರಿದ್ದಾರೆ. ಬಾಲಬಸವರ ಮೌಖಿಕ ಕಾವ್ಯದಿಂದಲೇ ಈ ಎಲ್ಲಾ ಸಂಗತಿಗಳು ಹೊರಬರುತ್ತವೆ. ಮರುಳಸಿದ್ದನ ಕಾವ್ಯ ಹಾಡುವ ಹರಪನಹಳ್ಳಿ ಮತ್ತು ಬೈರದೇವರಗುಡ್ಡದ ಬಾಲಬಸವ ಪರಂಪರೆಯವರು ಮರುಳಸಿದ್ಧನ ಪೀಠದಿಂದಲೇ ದೀಕ್ಷೆ ಪಡೆದುಕೊಳ್ಳುತ್ತಾರೆ. ಮೂಲತಃ ಮಾದಿಗ ಕುಲದವರಾದ ಬಾಲಬಸವರು ಲಿಂಗದೀಕ್ಷೆ ನಂತರ ಮಾದಿಗರಿಗೆ ಗುರುಗಳಾಗುತ್ತಾರೆ. ಮಾದಿಗ ಕುಲದ ಸಾಂಸ್ಕೃತಿಕ ಚರಿತ್ರೆಯನ್ನು ಬಾಲಬಸವರು ಮರುಳಸಿದ್ಧರ ಮೂಲಕ ಕಟ್ಟಿಕೊಡುವ ಕಾರ್ಯ ಮಾಡುತ್ತಾರೆ.

ಮರುಳಸಿದ್ಧ ಮಹಾದೇವ ಮಾದಿಗ ಕುಲದಲ್ಲಿ ಹುಟ್ಟಿ ತನ್ನ ವಿದ್ವತ್ತಿನಿಂದ ಜಗತ್ತಿಗೆ ಗುರುವಾಗುತ್ತಾನೆ. ಅಂದ್ರೆ 'ಮಾದ್ರಿಗೆ ಮಗ ಸಾದ್ರಿಗೆ ಗುರು ಜಗತ್ತಿಗೆ ಜಗದ್ಗುರು ಮರುಳಸಿದ್ಧ ಮಹಾದೇವ' ಎನ್ನುವ ಬಾಲಬಸವ ತುಮನೆಪ್ಪನವರು ಮರುಳಸಿದ್ಧರ ಕಾವ್ಯದಲ್ಲಿ ಮಾದಿಗರ ಅಸ್ಮಿತೆಯನ್ನು ಗಟ್ಟಿಗೊಳಿಸುವ ಕಾರ್ಯ ಮಾಡುತ್ತಾರೆ.

೬.೭. ಚನ್ನಬಸವಣ್ಣ

ಬಾಲಬಸವರು ವಚನ ಚಳುವಳಿಯ ಭಿನ್ನಧಾರೆಗಳಾಗಿ ಸ್ಥಾವರಕ್ಕೆ ಅಂಟಿಕೊಳ್ಳದೆ ಜಂಗಮತ್ವಕ್ಕೆ ಶರಣಾಗಿ ತಮ್ಮ ಕಾಯಕತತ್ವವನ್ನು ಇಂದಿಗೂ ಜೀವಂತವಾಗಿಸಿಕೊಂಡು ಬಂದಿದ್ದಾರೆ. ಬಾಲಬಸವರು ವೀರಶೈವ ತತ್ವವನ್ನು ನಂಬಿದ ಕಾಯಕ ಯೋಗಿಗಳು. ಇವರು ತಮ್ಮ ಕಾಲದಲ್ಲಿರುವ ಬಸವಣ್ಣ ಮತ್ತು ಚನ್ನಬಸವಣ್ಣರು ಅವತಾರ ಪುರುಷರು ಅವರು ಮತ್ತೆ ಹುಟ್ಟಿ ಬರುತ್ತಾರೆ ಎಂದು ಹೇಳುತ್ತಾರೆ. ಅವರ ಮರುಹುಟ್ಟನ್ನು ತಮ್ಮ ಕಾಲಜ್ಞಾನದಲ್ಲಿ ಬಸವಣ್ಣ ಮತ್ತು ಚನ್ನಬಸವಣ್ಣರನ್ನು ಪುನರ್‌ಸೃಷ್ಟಿ ಮಾಡುತ್ತಾರೆ. ಈ ಸಂದರ್ಭದ ಕಾಲಜ್ಞಾನದ ಲಯಗಾರಿಕೆಯು ಹೀಗಿದೆ–

ಮಂಗಳವಾರ ದಿವುಸ ಬೆಣ್ಣೆ ಏಳಲೆ ಬೇಕು ಕೇಳಿರಣ್ಣ
ಚನ್ನಬಸವಣ್ಣನವರೇ ಅಲ್ಲಿಗೆ ಹುಟ್ಟಲು ಬೇಕು ನೋಡಿರಣ್ಣ
ಚನ್ನಬಸವಣ್ಣನವರೇ ಅಲ್ಲಿಗೆ ಹುಟ್ಟಲು ಬೇಕು ಕೇಳಿರಣ್ಣ
ಬಸವಣ್ಣ ಹುಟ್ಟಿದುಕ ಕುರುವೇನೆಂದಿರೀ ಕೇಳಿರಣ್ಣ
ಕೈಯಾಗ ಹಿಡಿದಿರುವ ವಣಕಿ ಹಾವಾಗಿ ಹರಿದಾಡಬೇಕು ನೋಡಿರಣ್ಣ
ಕೈಯಾಗ ಹಿಡಿದಿರುವ ವಣಕಿ ಹಾವಾಗಿ ಹರಿದಾಡಬೇಕು ಕೇಳಿರಣ್ಣ
ಚನ್ನಬಸವಣ್ಣ ಹುಟ್ಟಿದನೆಂದು ಡಂಗುರವ ಹೊಡೆಯಲೆ ಬೇಕು ಕೇಳಿರಣ್ಣ
ಚನ್ನಬಸವಣ್ಣ ಹುಟ್ಟಿದನೆಂದು ಡಂಗುರವ ಹೊಡೆಯಲೆ ಬೇಕು ನೋಡಿರಣ್ಣ
ಚನ್ನಬಸವಣ್ಣ ಕಲಿಗೆ ಬರುತ್ತಾರಯ್ಯೊ ಕೇಳಿರಣ್ಣ
ಚನ್ನಬಸವಣ್ಣ ಕಲಿಗೆ ಬರುತ್ತಾರಯ್ಯೊ ನೋಡಿರಣ್ಣ
ಬಸವಣ್ಣ ಬರುವಾಗ ಹೊಸಗಾಲಿ ಆಗುತ್ತಾವ ಕೇಳಿರಣ್ಣ
ಶಿಶುವೇ ಶಿರಿಯೇ ಪಶುವಾಗಿ ಮಾತಾಡಬೇಕು ನೋಡಿರಣ್ಣ
ಬಸವಣ್ಣ ಬರುವಾಗ ನೋಡ್ರೀ
ಶಿಶುವೇ ಶಿರಿಯೇ ಪಶುವಾಗಿ ಮಾತಾಡಬೇಕು ಕೇಳಿರಣ್ಣ
ಕಣ್ಣಿಲ್ಲದ ಕುರುಡಾಗೆ ಜ್ಯೋತಿ ಬರಬೇಕು ಕೇಳಿರಣ್ಣ
ಕೊಲ್ಲು ಚಿಗಿಯಬೇಕು ಬಳ್ಳು ಹೈನಾಗ ಬೇಕು ಕೇಳಿರಣ್ಣ

ಕೊಟ್ಟಿದ್ದು ತಿನ್ನದ್ದು ಇಟ್ಟಿದು ಯಾರದೂ ಕೇಳಿರಣ್ಣ
ಕೊಟ್ಟಿದ್ದು ಬಡ್ಡಿಗೆ ಬರದೇ ಹೋದಿತು ಕೇಳಿರಣ್ಣ
ಕೆಟ್ಟ ಕಲಿಯುಗದೂಳಗೆ ಏನು? ಹೇಳಲಿ ಬಸವಣ್ಣ ನೋಡಿರಣ್ಣ
ಕೆಟ್ಟ ಕಲಿಯುಗದೂಳಗೆ ಏನು? ಹೇಳಲಿ ಕೇಳಿರಣ್ಣ
ದಿನವು ಏನು ಮಾಡ್ಯವ್ರ್ಯ ದುರ್ಗುಣ ಒಳ್ಳೆವಲ್ಲ ಕೇಳಿರಣ್ಣ
ಆತಾತು ಅನ್ನಬೇಡ ಆಗಮಾನ ಮುಂದ್ಯೆತೇ ನೋಡಿರಣ್ಣ
ಆತಾತು ಅನ್ನಬೇಡ ಆಗಮಾನ ಮುಂದ್ಯೆತೇ ಕೇಳಿರಣ್ಣ......–**ಬಾಲಬಸವ ತುಮನೆಪ್ಪ**

ಮುಂದೊಂದು ದಿನ ಮತ್ತೆ ಶರಣರು ಭೂಮಿಗೆ ಬರುತ್ತಾರೆ. ಕಲಿಗೆ ಬಸವಣ್ಣ ಮತ್ತೆ ಹುಟ್ಟಿ ಬರುತ್ತಾನೆ. ಎನ್ನುವ ಆಶಯವನ್ನು ವ್ಯಕ್ತಪಡಿಸುವ ಅವರ ನುಡಿಗಳು ಬಸವಣ್ಣ ಕಲಿಗೆ ಬರುವ ಕಾಲದಲ್ಲಿ ಕಲಿಯಲ್ಲ ಕೆಲವೊಂದು ಚಮತ್ಕಾರಗಳು ಜರುಗುತ್ತವೆ. ಹಾಗೆ ಅಂತಹ ಚಮತ್ಕಾರಗಳು ಜರುಗಿದರೆ ಬಸವಣ್ಣ ಕಲಿ ಬಂದಿದ್ದಾನೆ ಎಂದು ಅರ್ಥ. ಮುಂದುವರಿದು ಇವರು–

ಮುಂದೇ ಧರ್ಮವೇ ಉಳಿದಾವೇ ಡಂಗೂರ
ಧರ್ಮವೇ ಗುರುವಂತೆ ಡಂಗೂರ
ಚನ್ನ ಬಸವರಾಜ ಬರುತ್ತಾನೆ ಡಂಗೂರ
ಬಸವಯ್ಯ ಬರುವಾಗ ಡಂಗೋರ
ಮುಂದೆ ಹೊಸ ಕಾಲವಾದೀತ್ರೀ ಡಂಗೂರ
ಶಿಸುವೇ ಶೀಲವನ ಹೇಳಿ ಡಂಗೂರ
ಮುಂದೆ ಪಶುವೇ ಮಾತಾಡ ಬೇಕ್ರೀ ಡಂಗೂರ
ಕೂರಳು ಚಿಗುರ ಬೇಕು ಡಂಗೂರ
ಮುಂದೆ ಬರುಡ ಹೈನಾಗೈತ್ರೀ ಡಂಗೂರ
ಮುಂದೆ ವೈನ ಬದಲಾಗುತ್ಯೆತ್ತೇ ಡಂಗೂರ
ಬೈಲಿ ಮ್ಯಾಗಲ ಮೇಲೆ ತೊಂಡೆ ಡಂಗೂರ
ಮುಂದೆ ಹವಲ ಮುತ್ತು ಆದೀತೆ ಡಂಗೂರ
ಮಜ್ಜಿಗೆ ಒಳಗಿನ ಬೆಣ್ಣೆ ಡಂಗೂರ

ಮುಂದೆ ಸವನಾಗಿ ಮುಳಗಬೇಕ್ರೀ ಡಂಗೂರ
ಸವನಾಗಿ ಮುಳಗಬೇಕ್ರೀ ಡಂಗೂರ
ಮುಂದೆ ಸವನಾಗಿ ತೇಲ ಬೇಕ್ರೀ ಡಂಗೂರ
ತೇಲಿದ್ದೇ ಧರ್ಮವಯ್ಯ ಡಂಗೂರ
ಮುಂದೆ ಮುಳಿಗಿದ್ದೇ ಕರ್ಮವಯ್ಯ ಡಂಗೂರ
ಗುಲಗಂಜಿ ಬಳಗವಯ್ಯ ಡಂಗೂರ
ಮುಂದೆ ಸವತೂಕ ಕರಿದೀತು ಡಂಗೂರ
ಮುಂದೆ ಸವತೂಕ ಕೆಂಪೆತ್ತೀ ಡಂಗೂರ **–ಬಾಲಬಸವ ಶಿವಪ್ಪ, ಹರ್ಲಾಪುರ**

ಆ ಸಮಯದಲ್ಲಿ ಕಲಿಯುಗದಲ್ಲಿ ಜರುಗುವ ಚಮತ್ಕಾರಗಳು ಯಾವುದು ಎಂದರೆ ನೀರಿನಲ್ಲಿ ಬೆಣ್ಣೆ ಮುಳುಗಬೇಕು, ಕೈಯಾಗ ಹಿಡಿದಿರುವ ಒನಕೆ ಹಾವಾಗಿ ಹರಿದಾಡಬೇಕು, ಬಸವಣ್ಣ ಕಲಿಗೆ ಬರುವಾಗ ಹೊಸಗಾಳಿ ಆಗುತ್ತಾನೆ. ಶಿಶುವೇ ಶಿರಿಯೇ ಪಶುವಾಗಿ ಮಾತಾಡತಾವ, ಕಣ್ಣಿಲ್ಲದ ಕುರುಡಗೆ ಬೆಳಕು ಕಾಣುತಾವ, ಒಣಗಿದ ಕೊಲ್ಡು ಚಿಗುರಿ ಹಸಿರಾಗುತಾವ, ಗೊಡ್ಡು ಬಿದ್ದಿರುವ ಹಸು ಹೈನಾಗುತಾವ, ಇಂತಹ ಸಮಯದಲ್ಲಿ ಬಸವಣ್ಣ ನರಕಲಿ ಬರುತ್ತಾನೆ. ಎನ್ನುವ ರೂಪಕದ ಮಾತಿನ ಮೂಲಕ ಜಗತ್ತಿನಲ್ಲಿ ಬದಲಾವಣೆ ಕಾಣಬೇಕು ಎಂದಿದ್ದಾರೆ. ಅದಕ್ಕೆ ಬಸವಣ್ಣ ಮತ್ತು ಚೆನ್ನಬಸವಣ್ಣ ಮತ್ತೆ ಹುಟ್ಟಿ ಬರಬೇಕು ಎನ್ನುವ ಆಶಯ ಬಾಲಬಸವರ ನುಡಿಗಳಲ್ಲಿ ಸಾಂಸ್ಕೃತಿಕ ನಾಯಕರು ಪುನರ್‌ಸೃಷ್ಟಿ ಆಗುತ್ತಾರೆಂದು ಬಾಲಬಸವರ ಮೌಖಿಕ ಸಾಹಿತ್ಯವು ಹೇಳುತ್ತದೆ.

೧೨ನೇ ಶತಮಾನದ ಬಸವಣ್ಣ ಮುಂದೆ ಕೊಡೇಕಲ್ಲು ಬಸವಣ್ಣನಾಗಿ, ಮಂಟೇಸ್ವಾಮಿಯಾಗಿ ಪ್ರತಿರೂಪ ತಾಳಿದರು ಎನ್ನುವ ವಿದ್ವಾಂಸರ ಅಭಿಪ್ರಾಯವನ್ನು ಇಲ್ಲಿಗೆ ಸಮೀಕರಿಸಿ ನೋಡಿದಾಗ, ಚನ್ನಬಸವಣ್ಣ ಎನ್ನುವ ರೀತಿಯಲ್ಲಿ ಕೊಡೇಕಲ್ಲು ಬಸವಣ್ಣನು ಕಾಲಜ್ಞಾನ ಮತ್ತು ಪವಾಡಗಳಿಂದ ಹೆಸರು ಮಾಡಿದ್ದಾನೆ. ಹಾಗೆ ಮಂಟೇಸ್ವಾಮಿಗಳೂ ಕೂಡ ತಮ್ಮ ಪವಾಡ ಮತ್ತು ಕಲಿ ಸಾರುವ (ಕಾಲಜ್ಞಾನ ಹೇಳುವ) ಮೂಲಕವೇ ಹೆಚ್ಚು ಹೆಚ್ಚು ಜನಪ್ರಿಯವಾಗಿದ್ದಾರೆ. ಈ ಎರಡು ಸಂಗತಿಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಪವಾಡ ಮತ್ತು ಕಾಲಜ್ಞಾನಗಳು ಬಾಲಬಸವರು ಹೇಳಿದಂತೆ ಪುನರ್‌ಸೃಷ್ಟಿಯಾಗಿರುವುದನ್ನು ಗಮನಿಸಬಹುದಾಗಿದೆ. ಇದು ೧೫ ಮತ್ತು ೧೬ನೇ ಶತಮಾನದಲ್ಲಿ ಕಂಡುಬರುತ್ತವೆ. ಹಾಗಾಗಿ ನಿಂತುಹೋದ ವಚನ ಚಳುವಳಿ ಮತ್ತು ಶಿವಶರಣರು ಸಾಂಸ್ಕೃತಿಕ ನಾಯಕರ ಮೂಲಕ ಈ ಕಾಯಕ ಚಳುವಳಿ ಮತ್ತು ಕಲಿಗೆ ಅಂದರೆ ಭೂಮಿ ಬಂದಿರುವುದನ್ನು ನಾವು ಕಾಣಬಹುದು. ಪಂಚಗಣಾಧೀಶರು, ಮರುಳಸಿದ್ಧ, ಮೈಲಾರ, ಶಿವಯೋಗಿ, ಕೈವಾರ ನಾರಾಯಣ ಹೀಗೆ ಹತ್ತು ಹಲವಾರು ಸಾಂಸ್ಕೃತಿಕ ನಾಯಕರು ನಿಂತುಹೋದ ವಚನ

ಚಳುವಳಿಯನ್ನು ಮುಂದುವರಿಸಿ ಬಂದರೂ ಅದರ ವಿಕಾಸ ಎಷ್ಟರ ಮಟ್ಟಿಗೆ ಫಲವಾಗಿತ್ತು ತಿಳಿದಿಲ್ಲ. ಆದರೆ ಆಯಾ ಕಾಲದಲ್ಲಿ ಅವರ ಪ್ರಭಾವವನ್ನು ನಾವು ಕಾಣಬಹುದು. ಈ ಸಾಂಸ್ಕೃತಿಕ ನಾಯಕರು ವಚನ ಚಳುವಳಿಯನ್ನು ಜೀವಂತವಾಗಿಸುವಲ್ಲಿ ಸಹಾಯಕರಾಗಿದ್ದಾರೆ. ಅವರನ್ನು ಬಾಲಬಸವರು ತಮ್ಮ ಮೌಖಿಕ ಸಾಹಿತ್ಯದಲ್ಲಿ ಸಾಂಸ್ಕೃತಿಕ ನಾಯಕರನ್ನಾಗಿಸಿರುವುದು ಕಾಣಬಹುದಾಗಿದೆ.

೬.೮. ಸಮುದಾಯ ಪ್ರಜ್ಞೆ

ಸಮುದಾಯವನ್ನು ಒಂದುಗೂಡಿಸುವ ಪ್ರಧಾನ ಆಶಯವನ್ನು ಹೊಂದಿದ್ದ ವಚನ ಚಳುವಳಿಯು ಹನ್ನೆರಡನೆಯ ಶತಮಾನದಲ್ಲಿದ ಅಸಮಾನತೆ, ಶೋಷಣೆ ಲಿಂಗತಾರತಮ್ಯ ಮುಂತಾದ ಸಾಮಾಜಿಕ ಸಂಗತಿಗಳನ್ನು ವಿರೋಧಿಸಿದವನು ಬಸವಣ್ಣ. ಆತನು ರೂಪಿಸಿದ ಸಮ ಸಮಾಜದ ಕಲ್ಪನೆ, ಸಮಾನತೆ ಸಾರುವ ತತ್ವಗಳು ಅಂದಿನ ದಲಿತ ವಚನಕಾರರು ದಲಿತ ಸಮುದಾಯದ ಸಾಕ್ಷಿ ಪ್ರಜ್ಞೆಗಳಾಗಿ ಬೆಳೆಯುವುದಕ್ಕೆ ಕಾರಣವಾಯಿತು. ಜಾತಿ, ಶೋಷಣೆ, ಅಪಮಾನ ಮತ್ತು ಅಸ್ಪೃಶ್ಯತೆ ಮುಂತಾದವುಗಳಿಗೆ ತಮ್ಮದೇ ನೆಲೆಗಳಲ್ಲಿ ದಲಿತ ವಚನಕಾರರು ಪ್ರತಿರೋಧಿಸಿರುವುದನ್ನು ದಲಿತ ಸಾಹಿತ್ಯವು ದಲಿತತ್ವದ ನೆಲೆಯಲ್ಲಿ ಗುರುತಿಸಿದೆ. ಮುಂದೆ ದಲಿತ ಸಾಹಿತ್ಯವು ಹಲವು ಪ್ರಕಾರಗಳಲ್ಲಿ ವಿಸ್ತರಿಸಿಕೊಂಡು ದಲಿತ ಸಮುದಾಯದ ನೋವು ನಲಿವುಗಳು, ಅವರ ಸೃಜನಾತ್ಮಕ ಕ್ರಿಯೆಗಳು, ಅವರ ಬದುಕು ಮತ್ತು ಸಾಮಾಜಿಕ ಸ್ಥಿತಿಗತಿ ಮುಂತಾದವುಗಳಿಂದ ದಲಿತ ಸಮುದಾಯವನ್ನು ಒಂದು ಪ್ರಜ್ಞೆಯ ಭಾಗವಾಗಿಸಿಕೊಂಡು ಅವರಲ್ಲಿ ಅರಿವು ಮೂಡಿಸುವ ಕಾರ್ಯ ಮಾಡಿದೆ. ದಲಿತ ಜಾಗೃತಿ, ದಲಿತ ಸಂವೇದನೆ, ದಲಿತಪ್ರಜ್ಞೆ, ದಲಿತತ್ವ ಹೀಗೆ ಹಲವು ಪರಿಭಾಷೆಗಳ ಮೂಲಕ ದಲಿತರ ಕ್ರಿಯಾತ್ಮಕತೆಯನ್ನು ಕಟ್ಟಿಕೊಡುವ ಕಾರ್ಯ ಮಾಡಿದೆ. ಅರವಿಂದ ಮಾಲಗತ್ತಿಯವರು ದಲಿತ ಪರಿಭಾಷೆಯಾದ ದಲಿತಪ್ರಜ್ಞೆ, ದಲಿತತ್ವವಾಗಿ ಹೇಗೆ ವಿಸ್ತರಿಸಿಕೊಂಡಿದೆ ಎನ್ನುವುದನ್ನು ಹೀಗೆ ವಿವರಿಸುತ್ತಾರೆ. "ದಲಿತ ವಿರೋಧಿ ಅಸ್ತಿತ್ವದ ವಿಚಾರಗಳನ್ನು ಭೂತ-ವರ್ತಮಾನ ಭವಿಷ್ಯತ್ಕಾಲಗಳನ್ನೊಳಗೊಂಡಂತೆ, ಸಾಮಾಜಿಕ, ಆರ್ಥಿಕ, ರಾಜಕೀಯ, ಬೌದ್ಧಿಕ, ಆಧ್ಯಾತ್ಮಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಹೀಗೆ ಎಲ್ಲಾ ರಂಗದಲ್ಲಿ ದಲಿತರ ಮೇಲೆ ಹೇರಿರುವ ಮತ್ತು ಶೋಷಿಸುವ ಅಂತರಾಳದ ಬಗೆಗೆ ಮೂಡುವ ಅರಿವು ಆ ವಸ್ತು ಸ್ಥಿತಿಯಿಂದ ವಿಮೋಚನೆ ಹೊಂದಲು ಮಾಡುತ್ತಿರುವ ಪ್ರಯತ್ನ ಹಾಗೂ ಕ್ರಿಯಾತ್ಮಕವಾಗಿ ಬೆಳವಣಿಗೆ ಹೊಂದುತ್ತೇವೆ ಎಂಬುದರಲ್ಲಿ ನಂಬಿಕೆ ಇದ್ದು, ಹೊಸ ಚರ್ಚೆಗೆ, ಬೆಳವಣಿಗೆಗೆ ಸಾಗುತ್ತೇವೆ ಎಂಬ ಆಶಯ ಹೊಂದಿರುವಂತಹುದನ್ನು ದಲಿತ ಪ್ರಜ್ಞೆ ಎನ್ನುತ್ತಾರೆ"[೧೧] ಮಾಲಗತ್ತಿಯವರ ಮಾತುಗಳು ದಲಿತ ಚಿಂತನೆಯನ್ನು ದಲಿತತ್ವವನ್ನಾಗಿ ವಿಸ್ತರಿಸುವ ಆಲೋಚನೆಯಾಗಿದೆ. ದಲಿತರು ತಾವು ದಲಿತರೆಂದು ಯಾವುದೇ ಮುಲಾಜಿಲ್ಲದೆ ಒಪ್ಪಿಕೊಂಡು, ಬಹಿರಂಗವಾಗಿ ಅದನ್ನು ತಮ್ಮ ಕಾರ್ಯಗಳಲ್ಲಿ ವ್ಯಕ್ತಪಡಿಸಿದಾಗ ಅದರ ಫಲವಾಗಿ ದಲಿತರ 'ದಲಿತತ್ವ'ವು ರೂಪಿತವಾಗುತ್ತದೆ. ಕ್ರಿಯಾತ್ಮಕತೆ,

ಸೃಜನಶೀಲತೆ, ಜ್ಞಾನಮೀಮಾಂಸೆ ಮುಂತಾದವುಗಳನ್ನು ದಲಿತ ವಚನಕಾರರಲ್ಲಿಯೂ ನಾವು ಕಾಣಬಹುದು. ಅವರ ವಚನಗಳ ನಿಲುವು ಕೂಡ ದಲಿತತ್ವದ ಭಾಗವಾಗಿವೆ. ಅದನ್ನು ದಲಿತ ಕ್ರಿಯಾತ್ಮಕತೆ, ದಲಿತ ಜ್ಞಾನಮೀಮಾಂಸೆ, ದಲಿತತ್ವ, ದಲಿತ ಪ್ರಜ್ಞೆಯ ಭಾಗವಾಗಿ ಅಧ್ಯಯನ ಮಾಡುವುದನ್ನು ಒಂದು ಜ್ಞಾನ ಶಿಸ್ತನ್ನಾಗಿಸಿಕೊಂಡು 'ದಲಿತ ಸಾಹಿತ್ಯ' ಬೆಳೆದು ನಿಂತಿದೆ. ದಲಿತ ಸಾಹಿತ್ಯದ ಪ್ರಧಾನ ಆಶಯವಾದ ದಲಿತತ್ವವು ಬಾಲಬಸವರ ಮೌಖಿಕ ಸಾಹಿತ್ಯದಲ್ಲಿ ಹೇಗೆ ಅಭಿವ್ಯಕ್ತಿಗೊಂಡಿದೆ ಎನ್ನುವುದನ್ನು ದಲಿತ ಜ್ಞಾನಮೀಮಾಂಸೆಯ ಭಾಗವಾಗಿರುವ ಬಾಲಬಸವರ ಮೌಖಿಕ ಸಾಹಿತ್ಯವಾದ ಕಾಲಜ್ಞಾನ ಮತ್ತು ಅವರ ಮೌಖಿಕ ಕಾವ್ಯಗಳಲ್ಲಿ ದಲಿತ ಸಮುದಾಯದ ಕ್ರಿಯಾತ್ಮಕ ಕ್ರಿಯೆಗಳು ಯಾವ ಯಾವ ನೆಲೆಗಳಲ್ಲಿ ಅಭಿವ್ಯಕ್ತಿಗೊಂಡಿವೆ.

೬.೯. ದಲಿತ ಸಮುದಾಯ ಪ್ರಜ್ಞೆ :

ದಲಿತ ಪರಿಕಲ್ಪನೆಯು ಸಾಮಾಜಿಕ ಮತ್ತು ಸಾಂಸ್ಕೃತಿಕ ಚಳುವಳಿಯ ಭಾಗವಾಗಿ ಎಪ್ಪತ್ತರ ದಶಕದಲ್ಲಿ ಹುಟ್ಟಿದೆ. ಈ ಕಾಲದಲ್ಲಿ ಅಲಕ್ಷಿತ ಶೋಷಿತರನ್ನು ಒಂದುಗೂಡಿಸುವ, ಅವರನ್ನು ಸಾಮುದಾಯಿಕ ನೆಲೆಯಲ್ಲಿ ಸಂಘಟಿಸುವ, ಜಾಗೃತಿ ಮೂಡಿಸುವುದು 'ದಲಿತ' ಪರಿಕಲ್ಪನೆಯ ಪ್ರಧಾನ ಆಶಯವಾಗಿದೆ. ಇದರ ಭಾಗವಾಗಿ ದಲಿತ ಚಳುವಳಿಯು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ದಲಿತರ ನೋವಿನ ಧ್ವನಿಯಾಗಿ, ಅವರ ಸಾಮಾಜಿಕ ವಾಸ್ತವ ಬದುಕಿನ ವಿವರಣೆಗಳನ್ನೂ ಅಕ್ಷರದ ಮೂಲಕ ಸಾಹಿತ್ಯ ಜಗತ್ತಿಗೆ ಪರಿಚಯಿಸುವ ಕಾರ್ಯ ಮಾಡಿತು. ದಲಿತ ಸಾಹಿತ್ಯಕ್ಕೆ ವಚನ ಚಳುವಳಿಯ ನೇರವಾದ ಪ್ರಭಾವವಿದೆ. ದಲಿತಪ್ರಜ್ಞೆ ಎಂದರೆ ಸಾಮಾಜಿಕವಾಗಿ, ಧಾರ್ಮಿಕವಾಗಿ, ರಾಜಕೀಯವಾಗಿ ಆರ್ಥಿಕವಾಗಿ ಶೋಷಣೆಗೆ, ದಮನಕ್ಕೆ ಒಳಗಾಗಿ ಸಮಾಜದಿಂದ ಬಹಿಷ್ಕೃತರಾಗಿ ಅಸ್ಪೃಶ್ಯತೆಯನ್ನು ಅನುಭವಿಸುವ ದಲಿತ ಸಮುದಾಯದ ಜೀವನವಿಧಾನಗಳ ಸಾಂಸ್ಕೃತಿಕ ಸಂಗತಿಗಳನ್ನು, ಅನುಭವಗಳನ್ನು, ಅವರ ಜ್ಞಾನ ಮತ್ತು ಅಸ್ತಿತ್ವದ ನೆಲೆಗಳನ್ನು ತಿಳಿಯುವುದು 'ದಲಿತ ಸಂವೇದನೆ' ಎನ್ನಬಹುದು. ಸಮಾಜದಲ್ಲಿ ಕಟ್ಟಕಡೆಯ ವ್ಯಕ್ತಿಯಾಗಿರುವ ಮಾದಿಗ ಸಮುದಾಯವು ತನ್ನ ಸಾಂಸ್ಕೃತಿಕ ಜವಾಬ್ದಾರಿಯನ್ನು ನಿರ್ವಹಿಸಿಕೊಂಡು ಹೋದರು. ಅವನಿಗೆ ಸಿಗಬೇಕಾದ ಸಾಮಾಜಿಕ ಮನ್ನಣೆಯು ಸಿಗದೆ ಹೋಗಿದೆ. ಸಮಾಜದಿಂದ ಅಲಕ್ಷ್ಯಕ್ಕೆ ಒಳಗಾಗಿರುವ ಈ ಸಮುದಾಯವು ಮುಂದೆ ಸಮಾಜಕ್ಕೆ ಮಾದರಿಯಾಗುವ ಮುನ್ಸೂಚನೆಯನ್ನು ಬಾಲಬಸವರು ನೀಡುತ್ತಾರೆ. ದಲಿತರ ಸಾಮಾಜಿಕ, ಧಾರ್ಮಿಕ, ಆರ್ಥಿಕ ಮತ್ತು ರಾಜಕೀಯ ವಿಷಯಗಳಲ್ಲಿ ಭಾಗವಹಿಸುವಿಕೆ, ಸಮಾಜದಲ್ಲಿ ಉನ್ನತ ಆಡಳಿತದ ಜವಾಬ್ದಾರಿಯನ್ನು ನಿರ್ವಹಣೆ ಮಾಡುವ ಕುರಿತು ದಲಿತ ಸಂವೇದನೆಯ ಭಾಗವಾಗಿ ಬಾಲಬಸವರು ತಮ್ಮ ಮೌಖಿಕ ಸಾಹಿತ್ಯವಾದ ಕಾಲಜ್ಞಾನದಲ್ಲಿ ಈ ರೀತಿಯಾಗಿ ಹೇಳಿದ್ದಾರೆ.

> ಸಾದರು ಗುರುವಾಗಬೇಕು ಮಾದರು ದೊರೆಯಾಗಬೇಕು ನೋಡಿರಣ್ಣ
> ಸಾದರು ಗುರುವಾಗಬೇಕು ಮಾದರು ದೊರೆಯಾಗಬೇಕು ಕೇಳಿರಣ್ಣ–**ಬಾಲಬಸವ ತುಮನೆಪ್ಪ**

ಬಾಲಬಸವರ ಈ ನುಡಿಗಳಲ್ಲಿ ದಲಿತರ ಏಳಿಗೆ ಅವರ ಅಕ್ಷರ ಮತ್ತು ರಾಜಕೀಯ ಜಾಗೃತಿಯಿಂದಾಗಿ ಆಡಳಿತದಲ್ಲಿ ತಮ್ಮ ಅಸ್ತಿತ್ವವನ್ನು ರಾಜಕೀಯವಾಗಿ ಕಂಡುಕೊಳ್ಳುವ ಪ್ರಯತ್ನದ ಮೇಲೆ ಬೆಳಕು ಚೆಲ್ಲುವ ಕಾರ್ಯ ಮಾಡುತ್ತವೆ. ಮಾದರು ಮುಂದೆ ದೊರೆಯಾಗುತ್ತಾರೆ ಅವರಿಗೆ ಸಾದರು ದಾರಿ ತೋರಿಸುವ ಗುರುಗಳಾಗುತ್ತಾರೆ. ಎಂದಿರುವ ಬಾಲಬಸವರು ಮಾದ್ರು ಮತ್ತು ಸಾದ್ರು ನಡುವಿನ ಸಂಬಂಧಗಳನ್ನು ಗಟ್ಟಿಗೊಳಿಸುತ್ತಾರೆ. ಇಲ್ಲಿ ಮುಖ್ಯವಾಗಿ ಚರ್ಚಿಸಬೇಕಾದ ಸಂಗತಿ ಎಂದರೆ 'ದೊರೆ ಪಟ್ಟ'. ದಲಿತ ಸಮುದಾಯವು ಸಮಾಜದಲ್ಲಿ ಅಲಕ್ಷಿತವಾಗಿ, ಒಂಟಿಯಾಗಿ ಊರ ಹೊರಗೆ ಜೀವನ ನಿರ್ವಹಿಸುತ್ತಿರುವ ಸಮುದಾಯವು ಮುಂದೊಂದು ದಿನ ರಾಜ/ದೊರೆ ಪಟ್ಟಕ್ಕೆ ಬರುತ್ತಾರೆ ಎನ್ನುವ ಬಾಲಬಸವರ ಮಾತುಗಳಲ್ಲಿ ದಲಿತ ಜಾಗೃತಿ ಮತ್ತು ದಲಿತಪ್ರಜ್ಞೆಯನ್ನು ಹುರಿಗೊಳಿಸುವ ಪ್ರಯತ್ನ ಮಾಡುತ್ತಾರೆ. ಬಾಲಬಸವರು ಶೈವೀಕರಣಗೊಂಡರು ಅವರಿಗೆ ಧಾರ್ಮಿಕ ಮಾನ್ಯತೆ ಸಿಗದೆ ಹೋಗಿರುವ ಕಾರಣ ಇವರು ತಮ್ಮ ಮೂಲವನ್ನು ಮರೆತಂತಿಲ್ಲ. ಹಾಗಾಗಿ ತಮ್ಮ ಮೇಲ್ಮುಖ ಚಲನೆಯನ್ನು ಬಲವಂತವಾಗಿ ತಡೆದಿರುವ/ವಿರೋಧಿಸಿರುವ ಪ್ರಬಲ ಲಿಂಗಾಯತ ಸಮುದಾಯಕ್ಕೆ ತಮ್ಮದೇ ಆದ ರೀತಿಯಲ್ಲಿ ಪ್ರತಿರೋಧ ವ್ಯಕ್ತಪಡಿಸುತ್ತಾರೆ. 'ಮಾದ್ರು ಈ ರಾಷ್ಟ್ರದ ದೊರೆಯಾಗುವ ಮುನ್ಸೂಚನೆಯನ್ನು ಸುಮಾರು ವರ್ಷಗಳ ಕಾಲದ ಹಿಂದೆಯೇ ತಿಳಿಸಿದ್ದ ಬಾಲಬಸವರ ನುಡಿಗಳು ಈಗ ಸತ್ಯವಾಗಿದೆ. ಬಾಲಬಸವರು ಹೇಳಿದ/ಸಾರಿದ ನುಡಿಗಳು ಹುಸಿಗೊಳ್ಳುವುದಿಲ್ಲ ಎನ್ನುವ ಮಾತಿನಂತೆಯೇ ಈ ಮಾತು ಕೂಡ ಸತ್ಯವಾಗಿದೆ. ಅಂದರೆ ಈ ದೇಶದ ಪ್ರಥಮ ಪ್ರಜೆಯಾಗಿ ರಾಷ್ಟ್ರಪತಿಯಾದ ರಾಮನಾಥ್ ಕೋವಿಂದ್ ಅವರು ದಲಿತ ಜಾತಿಯವರೇ ಅದರಲ್ಲೂ ಮಾದಿಗ ಜಾತಿಯವರೇ ಎನ್ನುವುದು ಮತ್ತೊಂದು ವಿಶೇಷ. ಇವರನ್ನು ರಾಷ್ಟ್ರಪತಿಯಾಗಿಸಿದ ಉದ್ದೇಶ ಏನೇ ಇದ್ದರು, ಬಾಲಬಸವರು ಹೇಳಿದಂತೆ ಮಾದ್ರು ದೊರೆಯಾಗಿರುವ ವಾಸ್ತವ ಸಂಗತಿಯನ್ನು ನಾವು ಇಲ್ಲಿ ಗಮನಿಸಬಹುದಾಗಿದೆ.

ಬಾಲಬಸವರ ಕಾಲಜ್ಞಾನ ಸಾಹಿತ್ಯದಲ್ಲಿ ದಲಿತ ಸಂವೇದನೆಯ ಜೊತೆಗೆ ತಮ್ಮ ಸಮುದಾಯದ ಸಾಂಸ್ಕೃತಿಕ ಅನನ್ಯತೆಯನ್ನು ಕಟ್ಟಿಕೊಡುವ ಪ್ರಯತ್ನ ಮಾಡುತ್ತಾರೆ. ಯಾವ ಸಮಾಜವು ದಲಿತರನ್ನು ಮುಟ್ಟಿಸಿಕೊಳ್ಳದೆ ಮಡಿ ಮೈಲಿಗೆ ಎಂದು ಮೂಗು ಮುರಿಯುತ್ತಿತೋ ಅದೇ ಸಮಾಜವು ದಲಿತ ಕೇರಿ ಕಡೆಗೆ ಮುಖ ಮಾಡುವುದನ್ನು ಹೀಗೆ ಹೇಳುತ್ತಾರೆ.

> ಜಂಗಮರ ಬಾವಿಯಾಗ ಜಲ ಬತ್ತಿ ಹೋಗುತ್ತಾವ ನೋಡಿರಣ್ಣ
> ಹರಳಯ್ಯನ ಬಾವಿಯಾಗ ಜಲ ಉಕ್ಕಿ ಹರಿತ್ತಾವ ಕೇಳಿರಣ್ಣ
> ಹೊನ್ನಿಗೆ ಸೇರಿನಂತೆ ನೀರು ತುಂಬಿ ಮಾರಲುಬೇಕು ನೋಡಿರಣ್ಣ
> ಸಲೇ ಇಲ್ಲದಾಂಗ ಹಾಗುತ್ತಾವರ್ರೀ
> ಹೊನ್ನಿಗೆ ಸೇರಿನಂತೆ ನೀರು ತುಂಬಿ ಮಾರಲುಬೇಕು ಕೇಳಿರಣ್ಣ–ಬಾಲಬಸವ **ತುಮನೆಪ್ಪ**

ವಾರಿ ನೆಟ್ಟು ಭಿತ್ತಿ ಹೀರೆಹೊಳೆ ಒಣಗುತ್ತೈತೆ
ಹೀರೆಹೊಳೆಯಾಗ ಬಾವಿಯಾಗುತ್ತೈತೆ
ಹೀರೆಹೊಳೆಯಾಗ ವಡ್ಡಿಯಾಗುತ್ತೈತೆ
ಹನ್ನೆರಡು ಕೆರೆಬಾವಿ ಬತ್ತಿ ಜಲ ಬಾದಿ ಆಗುತ್ತೈತೆ
ಮಾತಂಗಿ ಕರಿಬಾನಿಯಲ್ಲಿ ಹುಕ್ಕಿ ಹರಿದನೀರು
ಹರವಿ ಹಾದರಗೇರಿ ಮುಂದಾ
ಚಿಂತಾಲು ಕಟ್ಟಿ ನೀರು ತೂಗಿ ಮಾರುತ್ತೈತೆ
ಸತ್ಯ ಪರೀಕ್ಷೆ ಕಾಲೈತೆ–**ಬಾಲಬಸವ ಹುಗ್ ಹುನುಮಂತಪ್ಪ**

ಜಂಗಮರ ಬಾವಿಯಾಗ ಜಲ ಬತ್ತಿ ಹೋಗುತ್ತಾವ
ಹರಳಯ್ಯ ಬಾವಿಯಾಗ ಜಲ ಉಕ್ಕಿ ಹರಿತ್ತಾವ
ಮಾತಂಗಿ ಕರಿಬಾನಿಯಲ್ಲಿ ಹುಕ್ಕಿಹರಿದ ನೀರು
ಹರವಿ ಹಾದರಕೇರಿ ಮುಂದಾ
ಚಿಂತಾಲು ಕಟ್ಟಿ ನೀರು ತೋಗಿ ಮಾರುತ್ತೈತೆ
ಸತ್ಯದ ಪರೀಕ್ಷೆ ಕಾಲೈಲೆ ಅಂತನಾ
ಹುಂ...... ಬಸವಾ........, ಬಸವಾ....(**ಬಾಲಬಸವ ನಾಗೇಂದ್ರಪ್ಪ**)

ಬಾಲಬಸವರ ಈ ಕಾಲಜ್ಞಾನ ಸಾಹಿತ್ಯದಲ್ಲಿ ನೀರು, ಜಾತಿ ಮತ್ತು ಮಾರುಕಟ್ಟೆ ಮೂರು ವಿಷಯಗಳನ್ನು ಒಳಗೊಂಡಿದೆ. ಈ ಮೂರು ಒಂದಕ್ಕೊಂದು ಹೇಗೆ ಬೆರೆತುಕೊಂಡಿವೆ ಎನ್ನುವ ಸಂಗತಿಯನ್ನು ಗಮನಿಸಬೇಕು. ನೀರು, ಜಾತಿ, ದೇಸಿ ಪರಿಕಲ್ಪನೆಯಾದರೂ ಅದು ಮುಟ್ಟಿಸಿಕೊಳ್ಳುವ ಮತ್ತು ಮುಟ್ಟಿಸಿಕೊಳ್ಳದೇ ಇರುವ ನಡುವಿನ ಅಂತರವನ್ನು ಗುರುತಿಸುವ ಕಾರ್ಯ ಮಾಡುತ್ತದೆ. ಜಾತಿ ಕಾರಣಕ್ಕಾಗಿ ದಲಿತರು ನೀರು ಮುಟ್ಟಿದರೆ ಅದು ಮೈಲಿಗೆ. ಆದರೆ ಮಾರುಕಟ್ಟೆ ವಿಷಯಕ್ಕೆ ಬಂದಾಗ ಜಾತಿ ಲೆಕ್ಕ ಬಾರದೆ ಹೋಗುತ್ತದೆ. ಇಂತಹ ವಾಸ್ತವ ಸಂಗತಿಯನ್ನು ಬಾಲಬಸವರು ನೀರು, ಜಾತಿ ಮತ್ತು ಮಾರುಕಟ್ಟೆಯ ಮೂಲಕ ಸೂಕ್ಷ್ಮವಾಗಿ ಜಾತಿಕೇಂದ್ರಿತ ಆಚರಣೆಯನ್ನು ವಿರೋಧಿಸುತ್ತಾರೆ. ಅವರು ಮಾರುಕಟ್ಟೆ ವಿಷಯಕ್ಕೆ ಬಂದಾಗ ಯಾಕೆ ನೀವು ಮಡಿ ಮೈಲಿಗೆ ಮಾಡದೆ ಹೋಗುತ್ತೀರಿ ಎನ್ನುವ ಪ್ರಶ್ನೆಯನ್ನು ಎತ್ತುತ್ತಾರೆ. ಸಮಾಜದಲ್ಲಿ ಒಂದು ಕಾಲದಲ್ಲಿ ಜಂಗಮರ ಬಾವಿಯ ನೀರನ್ನು ಯಾರು ಮುಟ್ಟುವಂತಿರಲಿಲ್ಲ, ಮುಟ್ಟಿದರೆ ಮೈಲಿಗೆಯಾಗುವ, ಅದನ್ನು ಶುದ್ಧಗೊಳಿಸುವ ಪ್ರಕ್ರಿಯೆ ನಡೆಯುತ್ತಿತ್ತು. ದಲಿತರು ಜಂಗಮರ ಬಾವಿಯ ಮೆಟ್ಟಿಲು

ಸಹ ತುಳಿಯುವಂತಿರಲಿಲ್ಲ. ಇದನ್ನು ಗಮನಿಸಿದ ಬಾಲಬಸವರು ಜಂಗಮರು ಬಾವಿಯಾಗ ನೀರು ಇದ್ದರೆ ಜಾತಿಕೇಂದ್ರಿತ ನೆಲೆಯಲ್ಲಿ ಶೋಷಣೆ ಮಾಡುತ್ತಾರೆ. ಆದರೆ ಅವರ ಬಾವಿಯಲ್ಲಿ ಜಲವೇ ಬತ್ತಿ ಹೋಗಿ, ಹರಳಯ್ಯನ ಬಾವಿಯಲ್ಲಿ ಜಲ ಉಕ್ಕಿ ಹರಿದಂತಹ ನೀರನ್ನು ಚಿಂತಾಲೂ ಕಟ್ಟಿ ಮಾರಿದಾಗ ಅದೇ ನೀರನ್ನು ನೀವು ಹಣ ಕೊಟ್ಟು ಕುಡಿಯುವ ಕಾಲ ಬರುತ್ತದೆ ಎಂದು ಬಾಲಬಸವರು ತಮ್ಮ ಮೌಖಿಕ ಸಾಹಿತ್ಯದಲ್ಲಿ ಹೇಳಿದ್ದಾರೆ. ಈಗ ಅದು ಸತ್ಯವಾಗಿದೆ.

೬.೧೦. ಅಸ್ಪೃಶ್ಯತೆ

ಅಸ್ಪೃಶ್ಯತೆಯು ಮುಟ್ಟುವ ಮತ್ತು ಮುಟ್ಟಿಸಿಕೊಳ್ಳದವರ ನಡುವಿನ ಪರಿಭಾಷೆಯಾಗಿದೆ. ಮೇಲ್ವರ್ಗ ಮತ್ತು ಕೆಳವರ್ಗದ ಸಾಮಾಜಿಕ ಸಂಘರ್ಷಕ್ಕೆ ಕಾರಣವಾದ ಈ ಅಸ್ಪೃಶ್ಯತೆಯ ಆಚರಣೆಯು ಬಾಲಬಸವರ ಮೌಖಿಕ ಸಾಹಿತ್ಯದಲ್ಲೂ ಕಂಡುಬರುತ್ತದೆ. ಮುಟ್ಟಿಸಿಕೊಳ್ಳದ ಮಾದಿಗ ಸಮುದಾಯದಿಂದ ಬಂದಿರುವ ಬಾಲಬಸವ ಪರಂಪರೆಯು ಮೇಲ್ಮುಖ ಚಲನೆಯಿಂದಾಗಿ ಮುಟ್ಟುವ ಸಮುದಾಯವಾಗುವ ಪ್ರಧಾನ ಆಶಯವನ್ನು ಹೊಂದಿತ್ತು. ಆದರೆ ಮೇಲ್ವರ್ಗದವರು ಇವರು ದಲಿತ ಎನ್ನುವ ಕಾರಣಕ್ಕಾಗಿ ಇವರನ್ನು ಒಪ್ಪಿಕೊಳ್ಳದೆ ಮತ್ತೆ ಮುಟ್ಟಿಸಿಕೊಳ್ಳದ ಸ್ಥಿತಿಯನ್ನು ನಿರ್ಮಾಣ ಮಾಡಿದರು. ಇವರು ಧಾರ್ಮಿಕ ಅತಂತ್ರದಿಂದಾಗಿ ಮತ್ತೆ ತಮ್ಮ ಮೂಲ ನೆಲೆಯಲ್ಲಿಯೇ ಜೀವಿಸುವ ಹಾಗೆ ಮಾಡಿತು. ಬಾಲಬಸವರು ಅಸ್ಪೃಶ್ಯತೆಯ ಅವಮಾನವನ್ನು ಅನುಭವಿಸಿರುವ ಇವರು ತಮ್ಮ ಪ್ರತಿರೋಧವನ್ನು ತನ್ನ ಮೌಖಿಕ ಸಾಹಿತ್ಯದಲ್ಲಿ ಅಭಿವ್ಯಕ್ತಪಡಿಸುವ ಬಗೆ ಮಹತ್ವದ್ದಾಗಿದೆ. ಅಸ್ಪೃಶ್ಯತೆಯ ಆಚರಣೆಯ ಕುರಿತು ಬಾಲಬಸವ ತುಮನೆಪ್ಪ ಮರುಳುಸಿದ್ಧನ ಕಾವ್ಯದಲ್ಲಿ ಈ ರೀತಿಯಾಗಿ ಚಿತ್ರಿಸಿದ್ದಾನೆ. "ಹರಳಯ್ಯ ಮಗ ಕೂಗದ ಮಾರಯ್ಯ ಆಹಾ ಜಂಗಮರು, ಶರಣರು ವಸಂತ ಕಾಲ ಬ್ಯಾಸಗೆ ಬಿಸಿಲು ಕಾಲು ಸುಡ್ತುವ. ಈ ಪಾದರಕ್ಷಿ ಮೆಟ್ಟಿ ತಗ್ಯೊಂಡು ಹೋಗರಪ್ಪ ಅಂತ ಹೇಳುತ್ತಾನೆ. ತಕ್ಷಣ ಅದರಗೊಬ್ಬ ನನ್ನಂತ ಅವಿವೇಕ ಏನೆಂಬುತ್ತಾನೆ. ಲೇ ಮಾದಿಗ ನಾವು ಮಹಾಭಕ್ತಿಲೀ ಬೆನ್ನಸಿಡಿಲೇ ಒಂದೊತ್ತಿಲ್ಲೀ ಒಪ್ಪೊತ್ತಿಲ್ಲೀ ಮಹಾಭಕ್ತಿಲಿ ಕಾಶಿಯಾತ್ರೆಗೆ ಹೋಗುತ್ತೀವಿ, ನೀನು ಕೆರ ಅಡ್ಡ ತಂದಿಯಲ್ಲ ಮಾದಿಗ, ಸರಕಳ ಲೇ ಅತಗ ಅಂತ ಅಂದ,"[೨] ಒಳ್ಳೆಯ ಶುಭ ಕಾರ್ಯಗಳಿಗೆ ಹೋಗುವ ದಾರಿಯಲ್ಲಿ ಮಾದಿಗರು ಅಡ್ಡ ಬಂದರೆ ಅಪಶಕುನ ಅಥವಾ ಕೀಳು ಜಾತಿಯನಾದ ಮಾದಿಗ ಎದುರು ಬಂದರೆ ಸಹಿಸಿಕೊಳ್ಳದ ಮನಸ್ಥಿತಿಗಳು ತಮ್ಮಲ್ಲಿನ ಅಸಹನೆಯನ್ನು ಜಾತಿಕೇಂದ್ರಿತ ನೆಲೆಯಲ್ಲಿ ಹೊರ ಹಾಕುವುದನ್ನು ಇಲ್ಲಿ ಕಾಣಬಹುದಾಗಿದೆ. ಹೆಸರಿಗೆ ಶಿವಶರಣರು ಇವರಲ್ಲಿರುವ ಜಾತಿ ಆಚರಣೆಯು ಯಾವ ರೀತಿಯಲ್ಲಿದೆ ಎನ್ನುವುದನ್ನು ಬಾಲಬಸವ ತುಮನೆಪ್ಪ ಇಲ್ಲಿ ಹೇಳುತ್ತಾರೆ. ಮರುಳಸಿದ್ಧನ ಕಾವ್ಯದಲ್ಲಿ ಮತ್ತೊಂದು ಇಂತಹ ಪ್ರಸಂಗ ಕಂಡುಬರುತ್ತದೆ. ಮರುಳಸಿದ್ಧನ ತಂದೆ ಕೂಗದ ಮಾರಯ್ಯ ಕರ್ವಿಮಲ್ಲನ ಗೌಡನ ಹತ್ತಿರ ಸಾಲ ಮಾಡಿದ ತಪ್ಪಿಗೆ ಆತನ ಮಗನಾದ ಮರುಳಸಿದ್ಧರು ಮಾದಿಗ ಜಾತಿ ಎನ್ನುವ ಕಾರಣಕ್ಕಾಗಿ ಅಸ್ಪೃಶ್ಯತೆಯ ಅವಮಾನವನ್ನು

ಅನುಭವಿಸುವುದನ್ನು ಬಾಲಬಸವ ತುಮನೆಪ್ಪನವರು ಹೀಗೆ ಹೇಳುತ್ತಾರೆ. "ಲೇ ಮಾದ್ರು ಸೂಳೆ ಮಗನೇ ನನ್ನ ಮುಟ್ಟಬಾರದಲೇ ಸರಿಯಲೇ ನಡೆಯಲೇ ಹೊರಕೆ ಚಂಡಿಗೆ ವದ್ದು ತಬ್ಬಿ ಬಿಟ್ಟುನೆ ಲೇ... ನನ್ನಗೆ ಮಗನಲ್ಲಯ್ಯ, ನನ್ನ ಹೆಂಡ್ತಿಯರಿಗೋ ಮಗನಲ್ಲಯ್ಯ, ನಿಮ್ಮದು ಕೆರಹೋಲಿಯುವ ಮಾದಿಗ ಜಾತಿ, ಬ್ಯಾರೆ ಜಾತಿಯಲೇ. ನಾವು ನೂರೊಂದು ಲಿಂಗದವರು ಜಂಗಮರು ಒಳಗೆ ಬಂದು ನಮ್ಮದು ಎಲ್ಲಾ ಕೆಡ್ಸಿ ಬಿಟ್ಟಿಯಲ್ಲಾ ಸೂಳೆ ಮಗನೇ"[೧೩] ಹುಟ್ಟಿನಿಂದ ಮರುಳಸಿದ್ಧರು ಜಾತಿಯಲ್ಲಿ ಮಾದಿಗನಾಗಿರುವುದು ಕರ್ವಿ ಮಲ್ಲನ ಗೌಡನಿಗೆ ಮಾತ್ರ ತಿಳಿದಿರುತ್ತದೆ. ಆದರೆ ಮಕ್ಕಳಾಗದ ಈತನ ಹೆಂಡತಿಯರಿಗೆ ಅದು ತಿಳಿದಿರುವುದಿಲ್ಲ. ಹಾಗಾಗಿ ಮರುಳಸಿದ್ಧನನ್ನು ಪ್ರೀತಿಯಿಂದ ಸಾಕಿರುತ್ತಾರೆ. ಮರುಳಸಿದ್ಧ ಹನ್ನೆರಡು ವರ್ಷದ ಪ್ರಾಯಕ್ಕೆ ಬಂದಾಗ ಕೂಗದ ಮಾರಯ್ಯನ ಮಗ ಸತ್ತಿಲ್ಲ ಇನ್ನು ಬದುಕಿದ್ದಾನೆ ಎನ್ನುವ ಸತ್ಯ ಕರ್ವಿಮಲ್ಲನ ಗೌಡನಿಗೆ ತಿಳಿಯುತ್ತದೆ. ಆ ಸಮಯದಲ್ಲಿ ಈ ಮಾತುಗಳನ್ನು ಆಡುತ್ತಾನೆ. ಕರ್ವಿ ಮಲ್ಲನಗೌಡ ಜಾತಿಯಲ್ಲಿ ಲಿಂಗಾಯತ. ಈತನ ಮನೆಯಲ್ಲಿ ಸರ್ವ ಹನ್ನೊಂದಕ್ಕೂ ಲಿಂಗ ಕಟ್ಟಿಕೊಂಡಿರುತ್ತಾನೆ. ಇವರ ಮನೆಯಲ್ಲಿ ಮಾದಿಗರ ಹುಡುಗನಾದ ಮರುಳಸಿದ್ಧನ ಇರುವುದನ್ನು ಕಂಡು ಕರ್ವಿ ಮಲ್ಲನಗೌಡ ಅಸ್ಪೃಶ್ಯತೆಯ ಆಚರಣೆ ಮಾಡುತ್ತಾನೆ. ಈ ಘಟನೆಯು ಅಂದಿನ ಸಮಾಜದಲ್ಲಿ ದಲಿತರ ಸಾಮಾಜಿಕ ಸ್ಥಿತಿಯನ್ನು ತಿಳಿಸುತ್ತದೆ.

ಅಸ್ಪೃಶ್ಯತೆಯ ಆಚರಣೆಯ ಭಾಗವಾಗಿ ಗೋಣಿಬಸಪ್ಪನ ಕಾವ್ಯದಲ್ಲಿ ಬಾಲಬಸವ ಮಾದಿಗ ಸಮುದಾಯದವನು ಎನ್ನುವ ಕಾರಣಕ್ಕಾಗಿ ಗೋಣಿಬಸಪ್ಪನ ದೇವತಾ ಮಠದೊಳಗೆ ಪ್ರವೇಶವಿರುವುದಿಲ್ಲ. ಅಂದಿನ ಸಮಾಜದಲ್ಲಿನ ಅಸ್ಪೃಶ್ಯತೆಯ ಆಚರಣೆಯ ಕುರಿತು ಗೋಣಿಬಸವಪ್ಪ ಕಾವ್ಯದಲ್ಲಿ ಬಾಲಬಸವ ತುಮನೆಪ್ಪ ಈ ರೀತಿಯಾಗಿ ಹೇಳುತ್ತಾನೆ "ಆ ಬಣಕಾರ್ರೇ ಈಗ ನಾನು ಮನುಷ್ಯನೋಗಿ ಸರ್ಪ ಆಕ್ತೀನಿ. ಹೆದರಬ್ಯಾಡ ನನ್ನ ಹೊಡದಾರು, ಬಡದಾರು, ಆ ಮಜ್ಜನ ಬಾವಿಗೆ ತಗಂಡೋಗಿ ನನ್ನ ಬಿಡಪ್ಪಾ. ಗುರುವಿನ ಪ್ರಾಣ ಪಡದುಬಿದ್ತೀನಿ. ಅಂಗಂದು ಬಾಲಬಸವ ಕೈತುಂಬ ಕಲ್ಲ ತಗಂಡಾನು. ತೆಲಿ ಮ್ಯಾಗ ಜಜ್ಜಿಕೊಂಡು ಬಿಟ್ಟ. ಚರ್ಮ ಸುಲಿದು ಕೆಳಗ ಬಿತ್ತು. ಸರ್ಪ ಆದ"[೧೪] ಈ ಕಾವ್ಯದಿಂದ ಅಸ್ಪೃಶ್ಯತೆ ಆಚರಣೆಯ ಭೀಕರತೆಯನ್ನು ತಿಳಿಯಬಹುದಾಗಿದೆ. ಸತ್ತ ವ್ಯಕ್ತಿಯನ್ನು ಬದುಕಿಸಲು ಜಾತಿ ತೊಡಕಾಗುತ್ತದೆ ಎನ್ನುವ ಧೋರಣೆಯು ಅಂದಿನ ಸಮಾಜದಲ್ಲಿ ದಲಿತರ ಸ್ಥಿತಿಗತಿ ಯಾವ ಮಟ್ಟದಲ್ಲಿತ್ತು ಎನ್ನುವುದನ್ನು ನಾವು ಗಮನಿಸಬೇಕಾಗುತ್ತದೆ. ಬಾಲಬಸವ ಈ ಅಸ್ಪೃಶ್ಯತೆಯ ಆಚರಣೆಯನ್ನು ಮೀರದೆ ಬಾಲಬಸವ ಹೇಗೆ ತನ್ನ ಗುರುವಿನ ಪ್ರಾಣ ಉಳಿಸಲು ತಾನು ತನ್ನ ಪ್ರಾಣವನ್ನೇ ಕಳೆದುಕೊಳ್ಳುವ ಮೂಲಕ ಅಸ್ಪೃಶ್ಯತೆಯ ಆಚರಣೆಗೆ ಬಲಿಯಾಗುತ್ತಾನೆ. ಬಾಲಬಸವ ತಾನು ರೂಪಾಂತರವಾಗುವುದರ ಮೂಲಕ ಜಾತಿ ಪದ್ಧತಿಯು ಮನುಷ್ಯನ ಸೃಷ್ಟಿ, ಸಮಾಜದಲ್ಲಿ ಮನುಷ್ಯನಿಗೆ ಮಾತ್ರ ಜಾತಿ, ಮತ, ಧರ್ಮಗಳಿವೆ ಆದರೆ ಪ್ರಾಣಿ ಪಕ್ಷಿಗಳಿಗಿಲ್ಲ ಎನ್ನುವ ಸಂಗತಿಯನ್ನು ಬಾಲಬಸವರ ಮೌಖಿಕ ಸಾಹಿತ್ಯವು ಹೇಳುವ ಪ್ರಯತ್ನ ಮಾಡುತ್ತದೆ.

೬.೧೧. ಅಸ್ಪೃಶ್ಯತೆ ಪ್ರತಿರೋಧ

ಮಾದಿಗ ಜಾತಿಯವರು ಮುಟ್ಟಿಸಿಕೊಳ್ಳಲು ಯೋಗ್ಯರಲ್ಲ ಎನ್ನುವ ಸಮಾಜದ ಅಸ್ಪೃಶ್ಯತೆ ಆಚರಣೆಯ ಭಾಗವಾಗಿ ಬಾಲಬಸವನಿಗೆ ಗೋಣಿಬಸಪ್ಪನ ದೇವತಾ ಮಠದೊಳಗೆ ಪ್ರವೇಶವಿರುವುದಿಲ್ಲ. ಈ ಕಾರಣಕ್ಕಾಗಿ ಬಾಲಬಸವ ಸರ್ಪವಾಗಿ ರೂಪಾಂತರಗೊಂಡು ಮಠವನ್ನು ಪ್ರವೇಶ ಮಾಡಿರುತ್ತಾನೆ. ಮುಂದೆ ಅದೇ ಮಠಕ್ಕೆ ಗೋಣಿಬಸಪ್ಪನನ್ನು ಪ್ರವೇಶ ಮಾಡದಂತೆ ಬಾಲಬಸವ ತಡೆದು, ತಾನು ಅನುಭವಿಸಿದ ಅಸ್ಪೃಶ್ಯತೆಯ ಅವಮಾನವನ್ನು ಪ್ರತಿರೋಧಿಸುವುದನ್ನು ಗೋಣಿಬಸಪ್ಪನ ಕಾವ್ಯದಲ್ಲಿ ಬಾಲಬಸವ ತುಮನೆಪ್ಪನವರು ಹೀಗೆ ನಿರೂಪಿಸುತ್ತಾರೆ. "ಗೋಣಿಬಸಪ್ಪ ಕೂಲಳ್ಳಿಗೆ ಬಂದಾನು. ಸ್ವಲ್ಪ ತಡ ಮಾಡಿದ್ರೆ ದೇವತಾ ಮಠದೊಳಗೆ ಹೋಗಿ ಬಿಡ್ತಿದ್ನರೀ. ಮಠದ ಬಾಗಿಲ ನೀಟಿಗೆ ಬಂದು ನಿಂತುಕೊಂಡಾ. ಹಿಂದಕ್ ವಾಕ್ಯ ಕೊಟ್ಟಿದ್ನಲ್ರೀ, ಬಾಲಬಸವ ಮಠದಾಗ ಇದ್ದ ಸರ್ಪಾಗಿ. ಇನ್ನೇನು ಹಿಂಗಾಲಕಿತ್ತಿ ಮುಂಗಾಲಿಕ್ಕಿ ಬಾಗ್ಲದಾಟಬೇಕು. ಆ ಸಮಯದಾಗೆ ಬಾಲಬಸವ ಸರ್ಪ ಓಡಿಬಂದು ಗೋಣಿಬಸಪ್ಪನ್ನ

ಕಾಲಿಗೆ ಸುತ್ತೇತೈತೋ । ಸೋಕಿರ ಮೂವ ತಾಜೀಜಿ ।
ತಡೊಯೋ ತಡಿಯೋ ನನ್ನಿ ಗುರವೇ । ಸೋಕಿರ ಮೂವ ತಾಜೀಜಿ।

'ಅಯ್ಯೋ ಗರುಗಳೇ ಗುರುಗಳೇ, ಯಾವಾಗ ಮಠಬಿಟ್ಟು ಹೋದ್ರೋ ಅಲ್ಲಿಗೆ ಮುಗಿತಪ್ಪಾ ಒಳಕಾ ಬರಾಕ ನನಿಗೆ ಅಧಿಕಾರಿಲ್ಲ. ಆದ್ರೆ ನೀನು ಇಲ್ಲಿ ಇರಾಂಗಿಲ್ಲ. ಹೋಗಿಬಿಡಪ್ಪಾ. ನಾನು ಅಡ್ಡ ಅದೀನಿ. ನೀನು ಇದಕ್ಕ ಸಂಬಂಧ ಇಲ್ಲ.' ಅದ್ನಂತ್ರೀ ಬಾಲಬಸವ"[೧೫] ಯಾವ ಮಠದಲ್ಲಿ ಮಾದಿಗರಿಗೆ ಪ್ರವೇಶವಿಲ್ಲ ಎಂದು ಈ ಸಮಾಜವು ನಿರ್ಬಂಧಿಸಿತ್ತೋ ತನ್ನದೇ ದೇವತಾ ಮಠಕ್ಕೆ ಗೋಣಿಬಸಪ್ಪ ಬಂದಾಗ ಆತನನ್ನು ಮಠದೊಳಗೆ ಪ್ರವೇಶಿಸದಂತೆ ತಡೆಯುವ ಬಾಲಬಸವ ತನಗಾದ ಅಸ್ಪೃಶ್ಯತೆಯ ಅವಮಾನವನ್ನು ಪ್ರತಿರೋಧಿಸುತ್ತಾನೆ. ಅಸ್ಪೃಶ್ಯತೆಯನ್ನು ಪ್ರತಿರೋಧಿಸುವ ಮತ್ತೊಂದು ಪ್ರಸಂಗ ಮರುಳಸಿದ್ಧನ ಕಾವ್ಯದಲ್ಲಿದೆ. ಮರುಳಸಿದ್ಧರ ತಂದೆ ತಾಯಿ ಚಪ್ಪಲಿ ಮಾಡಿಕೊಂಡು ಕಾಶಿಯಾತ್ರೆಗೆ ಹೋಗುವ ಶಿವಶರಣರಿಗೆ ಉಡುಗೊರೆಯಾಗಿ ನೀಡಿ ಅದರಿಂದ ಪುಣ್ಯ ಕಟ್ಟಿಕೊಳ್ಳವ ಆಶಾ ಭಾವನೆಯನ್ನು ಹೊಂದಿರುತ್ತಾರೆ. ಆ ದಾರಿಯಲ್ಲಿ ಬಂದ ಶಿವಶರಣರು ಈತನು ನೀಡುವ ಚಪ್ಪಲಿಯನ್ನು ತೆಗೆದುಕೊಳ್ಳದೆ, ನಮ್ಮ ದಾರಿಗೆ ಅಡ್ಡ ಬಂದ ಎಂದು ದಾರಿ ಬಿಡಲೇ ಮಾದಿಗ ಎಂದು ಅಸ್ಪೃಶ್ಯತೆಯನ್ನು ಆಚರಿಸುತ್ತಾರೆ. ಇದನ್ನು ಕೂಗದ ಮಾರಯ್ಯ ತನ್ನ ನಿಜಭಕ್ತಿಯನ್ನು ತೋರಿಸುವುದರ ಮೂಲಕ ಅವರ ಅಸ್ಪೃಶ್ಯತೆಯ ಆಚರಣೆಯನ್ನು ಪ್ರತಿರೋಧಿಸುತ್ತಾನೆ. ಈ ಸಂಗತಿಯನ್ನು ಬಾಲಬಸವ ತುಮನೆಪ್ಪ ಮರುಳಸಿದ್ಧನ ಕಾವ್ಯದಲ್ಲಿ ಹೀಗೆ ಹೇಳುತ್ತಾರೆ. "ಬರೀ ಮ್ಯಾಲೆ ಸ್ನಾನ ಮಾಡಕ್ಕೊಂಡು ಒಳಗೆ ಗಬ್ಬು ಇಟ್ಟಕ್ಕೊಂಡು ಹೋದ್ರೆ ಪರಮಾತುಮ ಕಾಣತ್ತಾನೇನೋ, ಒಳಗೆ ಆತ್ಮ ತೊಳಕೊಂಡು, ಮ್ಯಾಲೆ ತೊಳಗೊಂಡು ಮಹಾಭಕ್ತಿಲೇ ಒಪ್ಪೊತ್ತಿಲ್ಲೀ ಒಂದೇ ಮನಸ್ಸಿಲೀ ಕಾಶಿಗೆ ಹೋದಾಗಯ್ಯ ಪರಮಾತುಮ ಕಾಣುತ್ತಾನೇ. ಒಳಗೆ ಹೇಸಿಗೆ ಇಟ್ಟಕೊಂಡ್ರೀ

ಮ್ಯಾಲೆ ನೀವೆ ಮೈತೊಳಕ್ಕೋಂಡ್ರೆ ಪರಮಾತುಮ ಹ್ಯಾಂಗ್ ಕಾಣುತ್ತಾನೆ. ನಿಮ್ಮ ಭಕ್ತಿ ಹ್ಯಾಂಗೆ ಮುಟ್ಟುತೈತೆ ಇಲ್ಲಿ ನೋಡ್ರಿಯ್ಯೆಂದು ಒಂದು ವಸ್ತ್ರ ತಗೊಂಡ ಹೊಟ್ಟಿಯಾಗೆ ನುಂಗಿ ಬಿಟ್ಟ, ಹರಳಯ್ಯನ ಮಗ ಕೂಗದ ಮಾರಯ್ಯ ಹೊಟ್ಟಯಾಗೆ ನುಂಗಿ ಬಾಯಿಗೆ ಓಟು ಇಡಕ್ಕೊಂಡು ಮುಕ್ಕಾಳಾಗಿಟ್ಟು ಇಡಕ್ಕೋಂಡು ನೀರು ಹಾಕಿ, ಹಾಕಿ ಆತ್ಮ ತೊಳೆತ್ತಾನರೀ ತೊಳಿದ ಬಳಿಕೆ ಮ್ಯಾಕೆ ಹೇಳುತ್ತಾನೆ ಹೀಂಗೆ ಆತ್ಮ ತೊಳೆಕ್ಕೊಂಡು ಹೋಗರಯ್ಯ ಪರಮಾತುಮ ಕಾಣುತ್ತಾನೆ, ಬರೇ ಮ್ಯಾಲೆ ತೊಳೆಕ್ಕೊಂಡು ಹೋದ್ರೆ ಏನು ಕಾಣುತ್ತಾನಯ್ಯ ಅಂತಾನ್"[೧೬] ಈ ಕಾವ್ಯದಲ್ಲಿ ಶಿವಶರಣರ ಡಾಂಭಿಕ ಭಕ್ತಿಯನ್ನು ಅಣಕಿಸುವ ಮೂಲಕ ಯಾರನ್ನೂ ಕೂಡ ಜಾತಿ, ವರ್ಗ ವರ್ಣದಿಂದ ಅಪಮಾನ ಮಾಡಬಾರದು. ತಾವು ಮಾಡುವ ಕಾಯಕದಲ್ಲಿ ಶಿವನನ್ನು ಕಾಣಬೇಕು ಎನ್ನುವ ಸಂದೇಶವನ್ನು ಕೂಗದ ಮಾರಯ್ಯ ನೀಡುತ್ತಾನೆ.

೬.೧೨. ದಲಿತರ ಶ್ರಮ ಸಂಸ್ಕೃತಿ

ಬಾಲಬಸವರ ಮೌಖಿಕ ಕಾವ್ಯದಲ್ಲಿ ದಲಿತರು ತಾವು ಮಾಡುವ ಕುಲಕಸುಬಿನ ಮೂಲವನ್ನು ಹೇಳುವುದರೊಂದಿಗೆ ತಮ್ಮ ಕಾಯಕತತ್ವಕ್ಕೆ ಕಾರಣವಾದ ಸಂದರ್ಭಗಳನ್ನು ಹೇಳುತ್ತಾರೆ. ತಾವು ನಿರ್ವಹಿಸುವ ಕಾರ್ಯವನ್ನು ದೇವರು ಅಥವಾ ತಾವು ದೇವರೆಂದು ಭಾವಿಸಿರುವ ತಮ್ಮ ಸಮುದಾಯದ ಸಾಂಸ್ಕೃತಿಕ ನಾಯಕರು ಯಾರಿಂದ ಮತ್ತು ಹೇಗೆ ತಮ್ಮ ಸಮುದಾಯದ ಕುಲವೃತ್ತಿಯನ್ನು ಪಡೆದರು ಎನ್ನುವ ಸಾಂಸ್ಕೃತಿಕ ವಿವರಗಳಿಂದ ತಮ್ಮ ಸಮುದಾಯದ ಸಾಂಸ್ಕೃತಿಕ ಚರಿತ್ರೆಯನ್ನು ಕಟ್ಟಿಕೊಡುವ ಕಾರ್ಯ ಬಾಲಬಸವರ ಮೌಖಿಕ ಸಾಹಿತ್ಯ ಮಾಡುತ್ತದೆ. ಬಾಲಬಸವ ತುಮನೆಪ್ಪನವರು ಗೋಣಿಬಸಪ್ಪನ ಕಾವ್ಯ ಮತ್ತು ಮರುಳಸಿದ್ಧನ ಕಾವ್ಯಗಳಲ್ಲಿ ಈ ಬಗೆಯ ವಿವರಣೆಗಳನ್ನು ನೀಡುತ್ತಾರೆ. ಮಾದಿಗ ಸಮುದಾಯದ ಶ್ರಮಸಂಸ್ಕೃತಿಯಾಗಿರುವ ಚಪ್ಪಲಿ ಹೊಲಿಯುವ ಕಾಯಕದ ಮೂಲವನ್ನು ಬಾಲಬಸವ ತುಮನೆಪ್ಪ ಮರುಳಸಿದ್ಧನ ಕಾವ್ಯದಲ್ಲಿ ಹೀಗೆ ಹೇಳುತ್ತಾನೆ. "ಪರಮಾತುಮ, ಇವ್ನ ನಾನು ಮೆಟ್ಟೋದಿಲ್ಲಪ್ಪ ನಾನು ಮೆಟ್ಟಿದ್ರೆ ಸುಟ್ಟು ಹೋದೇನು. ಇವ್ನ ನಿತ್ಯ ಪೂಜೆ ಮಾಡ್ರಪ್ಪ ನಿಮ್ಮ ಮನೆಗೆ ಇಟ್ಟುಕೊಂಡು. ನೀನು ಶ್ರೀಮಂತ ಆಗ್ತಿ, ಅಂದ್ರೆ ಮರೆಬ್ಯಾಡ ಹಳೇ ಚಪ್ಪಲಿ ನೀನು ಮಾಡೊ ಕಾರ್‍ಯವಲ್ಲ, ಯಾಕೆಂದರೆ ನೀವು ಹೊಸವ್ನ ಮಾಡಬೇಕು ಹರಳಯ್ಯ ನೀವು ಹಳೇವುನ ಮುಟ್ಟ ಬಾರದಯ್ಯ. ಹಳೇವು ಪ್ಯಾಟೆಗೆ ಮುಚ್ಚಿಗಾರ ಅಂತ ಇರುತ್ತಾನ್ಲಲ್ಲಾ ಅವನು ಹಳೇವು ತಯಾರು ಮಾಡಬೇಕು ನೀನು ಯಾವ ಕಾಲಕ್ಕೊ ಹೊಸ ಪಾದರಕ್ಷೆಯನ್ನೇ ಮಾಡಬೇಕಪ್ಪ"[೧೭] ಎನ್ನುವ ಮಾತುಗಳಲ್ಲಿ ದಲಿತರಲ್ಲಿನ ಶ್ರಮಸಂಸ್ಕೃತಿಯ ವಿಭಜನೆಯನ್ನು ನಾವು ಕಾಣಬಹುದಾಗಿದೆ. ದಲಿತರಲ್ಲಿ 'ಮಾದಿಗ' ಮತ್ತು 'ಮುಚ್ಚಿಗಾರ' ಎನ್ನುವ ಈ ಎರಡು ಸಮುದಾಯಗಳು ಚರ್ಮ ಸಂಬಂಧಿತ ಕೆಲಸಗಳನ್ನು ಮಾಡುವ ಕುಲವೃತ್ತಿ ಸಮುದಾಯಗಳಾಗಿವೆ. ಈ ಕಾರ್ಯಭಾರವನ್ನು ಎರಡು ಸಮುದಾಯಗಳಿಗೆ ಹಂಚಿಕೆ ಮಾಡಿಕೊಟ್ಟಿರುವ ವಿವರಗಳನ್ನು ಬಾಲಬಸವರ ಮೌಖಿಕ ಸಾಹಿತ್ಯವು ನಿರೂಪಿಸುತ್ತದೆ.

ತಮ್ಮ ಮೂಲ ಕುಲವೃತ್ತಿಯಲ್ಲಿ ಜಗಳ ಬೇಡ ನಮಗೆ ಆ ದೇವರೆ ಕೊಟ್ಟ ಕಾಯಕ ಇದು ಎಂದು ತಮ್ಮ ತಮ್ಮ ಸಮುದಾಯಗಳ ಸಾಂಸ್ಕೃತಿಕ ಚರಿತ್ರೆಯನ್ನು ಕಟ್ಟಿಕೊಡುವ ಪ್ರಯತ್ನ ಮಾಡುತ್ತಾರೆ. ದಲಿತ ಸಮುದಾಯಗಳಿಗೆ ಕಾಯಕ ತತ್ವವನ್ನು ಹಂಚಿಕೆ ಮಾಡುವ ಮತ್ತೊಂದು ಪ್ರಸಂಗವನ್ನು ಬಾಲಬಸವ ತುಮನೆಪ್ಪ ಹಾಡಿದ ಗೋಣಿಬಸಪ್ಪನ ಕಾವ್ಯದಲ್ಲಿದೆ.

ದಲಿತ ಸಮುದಾಯಗಳಾದ ಮಾದಿಗ-ಚಲುವಾದಿ-ಮಾಸಾಳ(ಮಾಸ್ತಿಕ) ಈ ಮೂರು ಸಮುದಾಯಗಳಿಗೆ ಕಲ್ಯಾಣದಲ್ಲಿ ಬಸವಣ್ಣನ ಕೋಡು ಉದುರಿದಾಗ ಅದನ್ನು ಶ್ರಮಸಂಸ್ಕೃತಿ ಅಥವಾ ವಚನ ಚಳುವಳಿಯ ಪ್ರಧಾನ ಆಶಯವಾದ ಕಾಯಕತತ್ವದ ಅಡಿಯಲ್ಲಿ ತಳ ಸಮುದಾಯದ ದಲಿತರಿಗೆ ನೀಡುತ್ತಾನೆ. ಆ ಸಂಗತಿಯನ್ನು ಕಾವ್ಯದಲ್ಲಿ ಹೀಗೆ ಹೇಳುತ್ತಾರೆ. "ಬಸವಣ್ಣ ಮೂರು ಕೋಡು ಇದ್ದ ಬಳಿಕ, ಆ ಕೊಂಬಿನ ಕೊಳುವಿ ಬಿಚ್ಚೋದುವ್ರೀ, ಆ ಕೊಳುವಿ ಬಿಚ್ಚೋದ ಬಳಿಕ, ಬಸವಣ್ಣನವರು ಬಿಚ್ಚೋದ ಕೊಳುವಿ ಮುಂದಿಟ್ಟುಕೊಂಡು ಚಿಂತಿ ಮಾಡ್ತಾನ, ಆಹಾ ಪರಮಾತುಮ ನನಗೆ ವೃದ್ಧಗಾಲ ಬಂತಪ್ಪ, ಆದ್ರೆ ನನ್ನ ಕೋಡಿನ ಕೊಳುವಿ ಬಿಚ್ಚೋದುವು ಇವ್ನು ಎಲ್ಲಿಡ್ಲಿ? ಯಾವ ಜಾಗದಾಗ ಇಡ್ಲಿ, ಯಾರಿಗೆ ಕೊಡ್ಲಿ ಏನ್ ಮಾಡ್ಲಿ? ಎಂದು ಚಿಂತಿ ಮಾಡಿ, ಬಸವಣ್ಣೋರು ಕಲ್ಯಾಣದಲ್ಲಿ ಚಿಂತೆ ಮಾಡ್ತ ಕುಳಿತಾವ್ರೆ, ಚಿಂತೆ ಮಾಡಿ ಬಸವಣ್ಣೋರು, ಆ ಕೊಳುವಿ ಯಾರಿಗೆ ಕೊಡ್ತಾನ್ರೀ, ಕಲ್ಯಾಣದೊಳಗೆ ಒಂದು ಕೊಳುವಿ-

ಹರಳಯ್ಯನಿಗೆ ಕೊಟ್ಟಾನಯ್ಯೋ । ಸೋಕೀರ ಮೂವ ತಾಜೀಜಿ
ಒಂದೇ ಕೊಳುವಿ ಕೊಟ್ಟಾನಯ್ಯೋ । ಸೋಕೀರ ಮೂವ ತಾಜೀಜಿ

ಹರಳಯ್ಯಗೆ ಒಂದು ಕೊಳವಿ ಕೊಟ್ಟ, ಹರಳಯ್ಯ ಅದನ್ನು ತಗೊಂಡು ತನ್ನ ಮೂರುಕಲ್ಲು ಜೋಪಡಿಗೆ ಬಂದು, ಅದಕ್ಕೆ ನೂರೊಂದು ಪುಷ್ಪ ತಂದು, ಸ್ನಾನ ಮಾಡ್ಸಿ, ಅದಕ್ಕೆ ಪೂಜಿ ಮಾಡಿ ಆ ಕೊಳವಿ ಏನು ಮಾಡಿದ. ಆತ ನಿತ್ಯ ಪಾದರಕ್ಷೆ ಮಾಡುವುದಕ್ಕೆ ಅಡಿಗಲ್ಲು ಮಾಡಿಕೊಂಡ. ನಿತ್ಯ ನಿರ್ಮಿತ ಕಾಲ ಕಲ್ಯಾಣದೊಳಗೆ ಹರಳಯ್ಯನೋರು ಆ ಕೊಳವಿ ಮ್ಯಾಲೆ

ಪಾದರಕ್ಷಿ ಮಾಡುತಾರೋ । ಸೋಕೀರ ಮೂವ ತಾಜೀಜಿ
ಹರಳಯ್ಯೋ ನನ್ನ ದೈವೇ । ಸೋಕೀರ ಮೂವ ತಾಜೀಜಿ
ನಿತ್ಯ ಪಾದರಕ್ಷಿ ಮಾಡುತಾರೋ । ಸೋಕೀರ ಮೂವ ತಾಜೀಜಿ
ಒಂದೇ ಕೊಳವಿ ತಂದಾನಯ್ಯೋ । ಸೋಕೀರ ಮೂವ ತಾಜೀಜಿ.
ಒಂದು ಕೊಳವಿನ ಹರಳಯ್ಯಗೆ ಕೊಟ್ಟ. ಇನ್ನೊಂದು ಯಾರಿಗೆ ಕೊಡ್ತಾನ್ರೀ ಮತ್ತೇ
ಚಲುವಾದಿ ಚೆನ್ನಯ್ಯಗೆ ಕೊಟ್ಟಾನಯ್ಯೋ । ಸೋಕೀರ ಮೂವ ತಾಜೀಜಿ
ಅವನು ಕಾವಿ ಮಾಡಕಂಡು ಹೊಂಟಾನಯ್ಯೋ । ಸೋಕೀರ ಮೂವ ತಾಜೀಜಿ

ಮಾಸಾಳನಿಗೆ ಕೊಟ್ಟಾನಯ್ಯೋ । ಸೋಕೀರ ಮೂವ ತಾಜೀಜಿ
ಅವನು ಕಹಳಿ ಊದ್ತಾ ಹೊಂಟಾನಯ್ಯೋ । ಸೋಕೀರ ಮೂವ ತಾಜೀಜಿ
ಮೂವ್ವರಿಗೆ ಕೊಟ್ಟಾನಯ್ಯೋ । ಸೋಕೀರ ಮೂವ ತಾಜೀಜಿ

ಒಂದು ಕೊಳವಿ ಹರಳಯ್ಯನಿಗೆ ಕೊಟ್ಟ, ಅವನು ಅಡಿಗಲ್ಲು ಮಾಡಿಕೊಂಡ, ಇನ್ನೊಂದು ಚೆಲುವಾದಿ ಚೆನ್ನಯ್ಯನಿಗೆ ಕೊಟ್ಟ, ಅವನು ಕಾವಿ ಮಾಡಿಕೊಂಡ, ಮತ್ತೊಂದು ಮಾಸಾಳನಿಗೆ ಕೊಟ್ಟ, ಅವನು ಕಹಳಿ ಮಾಡಿಕೊಂಡ. ಮೂವರು ತಮ್ಮ ತಮ್ಮ ಕಾಯಕ ಮಾಡೊಕ್ಕೆ ಹೋದ್ರು"[೧೮] ಕಲ್ಯಾಣದಲ್ಲಿ ದಲಿತ ಸಮುದಾಯವು ಬಸವಣ್ಣನ ಕೊಂಬಿನಿಂದ ಹರಳಯ್ಯ-ಮಾದಿಗ. ಚೆನ್ನಯ್ಯ-ಚಲುವಾದಿ. ಮಾಸಾಳ-ಮಾಸ್ಟಿಕ ಈ ಮೂರು ದಲಿತ ಸಮುದಾಯದವರಿಗೆ ತಮ್ಮ ಕುಲವೃತ್ತಿಯನ್ನು ಹಂಚಿಕೆ ಮಾಡಿ ಕಾಯಕ ತತ್ವದ ಅಡಿಯಲ್ಲಿ ಬದುಕು ಕಟ್ಟಿಕೊಳ್ಳುವುದಕ್ಕೆ ಪ್ರರೇಣೆ ನೀಡುವ ಕಾರ್ಯ ಬಸವಣ್ಣ ಮಾಡುತ್ತಾನೆ. ಬಸವಣ್ಣನ ವಚನ ಚಳುವಳಿಯ ಆಶಯವು ಇದೇ ಆಗಿದೆ. ಮರುಳುಸಿದ್ಧರು ಕೂಡ ಕಾಯಕ ಯೋಗಿಗಳಾಗಿದ್ದರು. ಅವರ ತಂದೆ ತಾಯಿಗಳು ಕುಲ ವೃತ್ತಿಯಾದ ಚಪ್ಪಲಿ ಮಾಡುವ ಕಾಯಕ ಮಾಡುತ್ತಿದ್ದರು ಎನ್ನುವ ಸಂಗತಿಯನ್ನು ಬಾಲಬಸವ ತುಮನೆಪ್ಪ ಹಾಡಿದ ಮರುಳುಸಿದ್ಧನ ಕಾವ್ಯದ ಮೂಲಕ ತಿಳಿಸುವ ಪ್ರಯತ್ನ ಮಾಡುತ್ತಾರೆ. ಚಪ್ಪಲಿ ಮಾಡಲು ಬೇಕಾದ ಸಲಕರಣೆಗಳು ಈಗಲೂ ಮರುಳುಸಿದ್ಧರ ಮೂಲ ಮಠದಲ್ಲಿವೆ ಎನ್ನುವುದನ್ನು ಬಾಲಬಸವ ತುಮನೆಪ್ಪ ಮರುಳಸಿದ್ಧನ ಕಾವ್ಯದಲ್ಲಿ ಹೀಗೆ ಹೇಳುತ್ತಾರೆ. "ನಮ್ಮ ಕುಲದ ಸ್ವಾಮಿ ಪಾದರಕ್ಷಿ ಮಾಡೋ ಸಾಮಾಗ್ರಿಯೆಲ್ಲಾ, ಉಜ್ಜನಿ ಮಠದಾಗೈತಂತ್ರೀ ಉಳಿ, ರೆಂಪಿಗೆ, ಅಡಿಗಲ್ಲು, ಕೊಂಬು, ಕೆಬ್ಬುಣ, ಭಡ್ತಿ ಎಲ್ಲಾ ಉಜ್ಜನಿ ಮಠದಾಗೈತಂತ್ರೀ. ಆತನ ಪಾದರಕ್ಷೆ ಮಾಡೋ ಸಾಮಾಗ್ರಿಗಳೆಲ್ಲಾ ಉಜ್ಜನಿ ಮಠದಾಗೈತಂತ್ರೀ."[೧೯] ಎನ್ನುವ ಮಾತುಗಳಲ್ಲಿ ಮರುಳುಸಿದ್ಧರು ಮಾದಿಗರ ಮಗನೆಂದು ಹೇಳುವುದರ ಮೂಲಕ ತಮ್ಮ ಸಮುದಾಯದ ಕುಲ ಮೂಲದ ವಿವರಗಳನ್ನು ಹೇಳುವ ಕಾರ್ಯ ಬಾಲಬಸವರ ಮೌಖಿಕ ಸಾಹಿತ್ಯ ಮಾಡುತ್ತದೆ.

೬.೧೩. ದಲಿತ ಕುಲ ಪುರಾಣ

ಮೌಖಿಕ ಕಾವ್ಯ ಹಾಡುವ ಸಮುದಾಯಗಳು ತಮ್ಮ ಸಾಂಸ್ಕೃತಿಕ ಅನನ್ಯತೆಯನ್ನು ಕಟ್ಟಿಕೊಡುವುದರೊಂದಿಗೆ ಕುಲ ಪುರಾಣವನ್ನು ಹೇಳುವ ಕಾರ್ಯ ಮಾಡುತ್ತವೆ. ದಲಿತ ಕಥನಕಾರರು ದಲಿತ ಕುಲ ಪುರಾಣವನ್ನು ತಮ್ಮ ಕಾವ್ಯದ ಆರಂಭದಲ್ಲಿ ಹಾಡುತ್ತಾರೆ. ಕಾರಣ ಈ ನೆಲದ ಸೃಷ್ಟಿಗೆ ದಲಿತರ ಕೊಡುಗೆ ಸ್ಮರಿಸುವುದು ಒಂದು ವಾಡಿಕೆಯಾಗಿದೆ. ದಲಿತ ಸಮುದಾಯವು ತನ್ನ ಪೂರ್ವಿಕರ ಕೊಡುಗೆಯನ್ನು ಮುಂದಿನ ಪೀಳಿಗೆಗೆ ತಲುಪಿಸುವ ಕಾರ್ಯವನ್ನು ಹಾಡುವ ನೆಲೆಯಲ್ಲಿ ಉಳಿಸಿಕೊಂಡಿದೆ. ಹಾಗಾಗಿ ಬಾಲಬಸವರು ತಮ್ಮ ಪೂರ್ವಿಕರನ್ನು ನೆನೆಯುವ ಸಲುವಾಗಿ ತಮ್ಮ ಕಾವ್ಯದಲ್ಲಿ ದಲಿತ ಸಮುದಾಯದ ಕುಲ

ತಿಲಕರಾದ ಜಾಂಬವ ಮುನಿ ಮತ್ತು ಹರಳಯ್ಯರು ಈ ಭೂಮಿಯನ್ನು ಹೇಗೆ ಗಟ್ಟಿಗೊಳಿಸಿ ಸಕಲ ಜೀವರಾಶಿಗಳು ಬದುಕಲು ಅನುವು ಮಾಡಿಕೊಟ್ಟ ಕಥೆಯನ್ನು ಬಾಲಬಸವ ತುಮನೆಪ್ಪನವರು ಮರುಳಸಿದ್ಧನ ಕಾವ್ಯದಲ್ಲಿ ಈ ರೀತಿಯಾಗಿ ಹಾಡುತ್ತಾರೆ. "ಬಸವಣ್ಣನವರು ಕಲ್ಯಾಣ ಪಟ್ಟಣ ಆಳುತ್ತಾರೆ, ಆ ಸಮಯದೊಳಗೆ ಒಂದಾನೊಂದು ಕಾಲದಲ್ಲಿ ಜಮ್ಮಲಗಡ್ಡೆಯೊಳಗೆ ಓಂ, ಓಂ ಎಂದು ಶಬ್ದ ಬಂತು. ಆ ಜಮ್ಮಲಗಡ್ಡೆಯೊಳಗೆ ಶಬ್ದ ಬಂದಾಗ ಓಂ ಎಂಬ ಶಬ್ದನೋ ಬಂದಾಗ

ಜಾಂಬವಮುನಿ ಹುಟ್ಟ್ಯಾನಯ್ಯೋ । ಆ ಸೋಕೀರ ಮೂವ ತಾಜೀಜಿ
ಜಮ್ಮ ನೀಲ ಗಡ್ಡೆಯೊಳಗೆ । ಆ ಸೋಕೀರ ಮೂವ ತಾಜೀಜಿ
ಜಾಂಬವಮುನಿ ಹುಟ್ಟ್ಯಾನಯ್ಯೋ । ಆ ಸೋಕೀರ ಮೂವ ತಾಜೀಜಿ
ಜಾಂಬವಮುನಿ ಹುಟ್ಟಿದ ಬಳಿಕ ಮುಂದೆ ಏನಾತು ಅಂತ ನೀವು ಕೇಳಬಹುದ್ರಿ, ನೋಡ್ರಿ ಜಾಂಬವಮುನಿಗೆ
ಹರಳಯ್ಯ ಹುಟ್ಟ್ಯಾನಯ್ಯೋ । ಆ ಸೋಕೀರ ಮೂವ ತಾಜೀಜಿ
ಹರಳಯ್ಯ ನನ್ನ ದೈವೇ । ಆ ಸೋಕೀರ ಮೂವ ತಾಜೀಜಿ
ಜಾಂಬವಮುನಿ ಹುಟ್ಟಿದ ಬಳಿಕ ಮುಂದೆ ಹರಳಯ್ಯ ಹುಟ್ಟಿದ್ಯಾ ಹರಳಯ್ಯನಿಗೆ,
ಏಳು ಮಂದಿ ಮಕ್ಕಳಯ್ಯೋ । ಸೋಕೀರ ಮೂವ ತಾಜೀಜಿ
ಬಸವಣ್ಣ ನನ್ನ ದೈವೇ । ಸೋಕೀರ ಮೂವ ತಾಜೀಜಿ
ಬಸವಣ್ಣ ಕೇಳುತ್ತಾನೇ । ಸೋಕೀರ ಮೂವ ತಾಜೀಜಿ

ಏಳು ಮಂದಿ ಮಕ್ಕಳಿದ್ದಾಗ ಆತನಿಗೆ ಹರಳಯ್ಯನಿಗೆ ಹೇಳಿದ ಬಸವಣ್ಣ ಆಯ್ತಪ್ಪ ನಿಮ್ಮಿಂದ ಈ ಭೂಮಿ ಗಟ್ಟಿಯಾಗಬೇಕು. ಈ ಭೂಮಿ ನಾ ಗಟ್ಟಿ ಮಾಡಬೇಕೆಂದ್ರೆ ಯ್ಯಾಂಗ ಮಾಡ್ಲಿ ಅಂದ ಹರಳಯ್ಯ, ಯ್ಯಾಂಗಿಲ್ಲ ನಿನಗೆ ಏಳು ಮಂದಿ ಮಕ್ಕಳು ಇದ್ದಾರಲ್ಲ ಎರಡು ಮೂರುನ್ನ ಉಳವಿಕೊಂಡು ಹಾಲುಮುನಿ, ಹೆಪ್ಪುಮುನಿ, ರುದ್ರಮುನಿ, ಬಿಗಿಮುನಿ ಆ ನಾಲ್ಕು ಮಕ್ಕಳನ್ನ ಕಡಿದು ಭೂಮಿಗೆ ಹಾವುತಿ (ಹಾರ) ಕೊಡು ಭೂಮಿ ಗಟ್ಟಿಯಾಗುತ್ಯೆತ್ತೆಂದ. ಆಗ ಹರಳಯ್ಯ ಬಸವಣ್ಣನ ಮಾತು ಕೇಳಿ ನಾಲ್ಕು ಮಕ್ಕಳನ್ನ ಕಡಿದು ಭೂಮಿಗೆ ಹೆಪ್ಪುಕೊಟ್ಟು ಹರಳಯ್ಯ ಭೂಮಿಗಟ್ಟಿ ಮಾಡಿದ್ನಂತ್ರಿ, ಭೂಮಿ ಗಟ್ಟಿಯಾತಂತ್ರಿ ಆಗ ಕೂಗದ ಮಾರಯ್ಯ ನನ್ನ ಹೆಸರಿಗಿರ್ಲಪ್ಪ ದೀಪ ಹಚ್ಚಲಿಕೆ ನನ್ನ ಹೆಸರು ಹೇಳೋಕೆಂದು ಕೂಗದ ಮಾರಯ್ಯನ ಉಳವಿಕೊಂಡ. ಚಿಕ್ಕಮಗ ಕೂಗದ ಮಾರಯ್ಯನ ಉಳವಿಕೊಂಡು ಭೂಮಿನ ಗಟ್ಟಿಮಾಡಿದ"[೨೦] ಕಾವ್ಯದಲ್ಲಿ ವ್ಯಕ್ತಗೊಂಡಿರುವ ದಲಿತ ಕುಲ ಪುರಾಣಗಳು ಆಯಾ ಮೌಖಿಕ ಕಾವ್ಯಗಳಿಗೆ ಅನುಗುಣವಾಗಿ ಕೆಲವೊಂದು ಸಂಗತಿಗಳನ್ನು ಸೇರಿಸುವ ಕಾರ್ಯ ಮಾಡಿವೆ. ಅದನ್ನು ನಾವು ಇಲ್ಲಿ ಕಾಣಬಹುದಾಗಿದೆ.

ಜಾಂಬವಮುನಿಗೆ ಮತ್ತು ಹರಳಯ್ಯರಿಗೆ ನೇರವಾದ ಸಂಬಂಧವಿಲ್ಲ, ಆದರೆ ಮರುಳಸಿದ್ಧರು ಮಾದಿಗ ಸಮುದಾಯದವನಾಗಿರುವ ಕಾರಣಕ್ಕೆ ಅವರ ಹುಟ್ಟು ಹರಳಯ್ಯನ ಮನೆಯಲ್ಲಿ ನಡೆಯುವಂತೆ ಕಥೆಯನ್ನು ನಿರೂಪಿಸಲಾಗಿದೆ. ಅಂದರೆ ದಲಿತರ ಮೂಲವನ್ನು ಜಾಂಬವಮುನಿ ಮತ್ತು ಹರಳಯ್ಯರ ಮೂಲಕವೇ ಆರಂಭಿಸಬೇಕು. ಹಾಗಾಗಿ ದಲಿತ ಕುಲ ಪುರಾಣವನ್ನು ಬಾಲಬಸವ ತುಮನೆಪ್ಪ ಹೇಳುವುದರಲ್ಲಿ ಕಾವ್ಯದ ಮುಂದುವರಿಕೆಯ ಭಾಗವಾಗಿ ಮರುಳಸಿದ್ಧರು ಈ ಮೂಲದಿಂದಲೇ ಬಂದವರು ಎನ್ನುವುದನ್ನು ಕಾವ್ಯದಲ್ಲಿ ಹೇಳುವ ಪ್ರಯತ್ನ ಮಾಡುತ್ತಾರೆ. ನೀಲಗಾರರು ಮತ್ತು ದೇವರಗುಡ್ಡದವರು ಮಂಟೇಸ್ವಾಮಿ ಕಾವ್ಯ ಹಾಡುವ ಪೂರ್ವದಲ್ಲಿ ದಲಿತ ಕುಲ ಪುರಾಣವನ್ನು ಹಾಡುತ್ತಾರೆ. 'ಜಗತ್ತು ಸೃಷ್ಟಿಯ ಸಾಲು' ಹಾಡುವಾಗ ತಮ್ಮ ಕುಲ ಸ್ವಾಮಿ ಜಾಂಬವಮುನಿ ಈ ಭೂಮಿಯನ್ನು ಹೇಗೆ ಗಟ್ಟಿಗೊಳಿಸಿದ ಎನ್ನುವುದನ್ನು ಇವರು ಹಾಡುತ್ತಾರೆ. ಇದರೊಂದಿಗೆ ಭೂಮಿಯ ವಿಕಾಸದಲ್ಲಿ ದಲಿತರ ಶ್ರಮವಿದೆ ಎನ್ನುವ ಅರ್ಥದಲ್ಲಿ ಈ ಕುಲ ಪುರಾಣವನ್ನು ನಾವು ಗಮನಿಸಬೇಕಾಗಿದೆ.

ಒಟ್ಟಾರೆ ಮಧ್ಯಕಾಲೀನ ಸಾಹಿತ್ಯವು ಶಿವಶರಣರ ಜೀವನ ವೃತ್ತಾಂತಗಳಿಗೆ ಸಂಬಂಧಿಸಿದಂತೆ ಹೆಚ್ಚು ಕಾವ್ಯಗಳು ಲಿಖಿತ ಹಾಗೂ ಮೌಖಿಕ ರೂಪದಲ್ಲಿವೆ. ಬಸವಣ್ಣ, ಚನ್ನಬಸವಣ್ಣ, ಅಲ್ಲಮ ಪ್ರಭುದೇವ, ಹರಳಯ್ಯ, ಸಿದ್ಧರಾಮ, ಅಕ್ಕಮಹಾದೇವಿ ಮುಂತಾದ ಶಿವಶರಣರ ಕುರಿತಾಗಿವೆ. ವಚನ ಸಂಕಲನ ಮತ್ತು ಸಂಪಾದನೆಯ ಕಾಲದಲ್ಲಿ ಶರಣರನ್ನು ಶೈವೀಕರಿಸುವ ಪ್ರಕ್ರಿಯೆಗಳು ನಡೆದಿವೆ, ನಂತರ ಶಿವಶರಣರನ್ನು ಸಮುದಾಯದ ಸಾಂಸ್ಕೃತಿಕ ನಾಯಕರನ್ನಾಗಿಸಿಕೊಂಡು ಅಧ್ಯಯನಗಳು ನಡೆದಿವೆ. ಇದೇ ಮಾದರಿಯಲ್ಲಿ ದಲಿತ, ಕೆಳವರ್ಗಗಳ ಸಮುದಾಯಕ್ಕೆ ಸೇರಿದ ಸಾಂಸ್ಕೃತಿಕ ನಾಯಕರಾದ ಮಲೆಮಾದಪ್ಪ, ಮಂಟೇಸ್ವಾಮಿ, ಜುಂಜಪ್ಪ, ಮೈಲಾರಲಿಂಗಪ್ಪ, ಬೀರದೇವರು, ಎತ್ತಪ್ಪ, ಗೋಣಿಬಸಪ್ಪ, ಮರುಳಸಿದ್ಧ ಮುಂತಾದ ಸಮುದಾಯದ ಸಾಂಸ್ಕೃತಿಕ ನಾಯಕರ ಜೀವನ ಕುರಿತು ಅಧ್ಯಯನಗಳು ಆರಂಭವಾದವು. ಈ ರೀತಿಯ ಅಧ್ಯಯನಗಳು ಅಲಕ್ಷಿತ ಸಮುದಾಯಗಳು ತಮ್ಮ ಅಸ್ತಿತ್ವವನ್ನು ವಚನ ಚಳವಳಿಯ ಮೂಲಕ ಗುರುತಿಸಿಕೊಳ್ಳಲು ಸಹಾಯಕವಾದವು. ದಲಿತ ಬಂಡಾಯ ಸಾಹಿತ್ಯವು ದಲಿತರ ಸಾಂಸ್ಕೃತಿಕ ನಾಯಕರುನ್ನು ಅಧ್ಯಯನ ಮಾಡುವುದಕ್ಕೆ ಆರಂಭಿಸಿದ್ದರ ಪರಿಣಾಮವಾಗಿ ದಲಿತರು ಮಂಟೇಸ್ವಾಮಿ, ಮಲೆಮಾದಪ್ಪ ಮರುಳಸಿದ್ಧ ಮುಂತಾದ ಚಾರಿತ್ರಿಕ ನಾಯಕರನ್ನು ತಮ್ಮ ಸಮುದಾಯದ ಶಕ್ತಿಗಳನ್ನಾಗಿಸಿಕೊಂಡರು.

ಅಡಿಟಿಪ್ಪಣಿ

೧. ವೆಂಕಟೇಶ ಇಂದ್ವಾಡಿ, 'ಬಾಲಬಸವ ತುಮನೆಪ್ಪ ಹಾಡಿದ ಗೋಣಿಬಸಪ್ಪನ ಕಾವ್ಯ,' ಪುಸಂ-೫೮-೫೯

೨. ಅದೇ, ಪು.೫೮-೫೯

೩. ಅದೇ, ಪು.೫೪

೪. ಸತೀಶ್ ಪಾಟಿಲ್, 'ಪಂಚಗಣಾಧೀಶ್ವರರು: ಒಂದು ಸಾಂಸ್ಕೃತಿಕ ಅಧ್ಯಯನ,' ಪು.೨೧೮

೫. ವೆಂಕಟೇಶ ಇಂದ್ವಾಡಿ, 'ಬಾಲಬಸವ ತುಮನೆಪ್ಪ ಹಾಡಿದ ಗೋಣಿಬಸಪ್ಪನ ಕಾವ್ಯ,' ಪು.೫೨-೫೩

೬. ಅದೇ, ಪು.೮೦

೭. ಅದೇ, ಪು.೮೭

೮. ಅದೇ, ಪು.೮೮

೯. ಅದೇ, ಪು.೮೭

೧೦. ಅದೇ, ಪು.೫೬-೫೭

೧೧. ಅರವಿಂದ ಮಾಲಗತ್ತಿ, ಸಾಹಿತ್ಯ ಸಂಸ್ಕೃತಿ ಮತ್ತು ದಲಿತ ಪ್ರಜ್ಞೆ,'ಪು.ಸಂ. ೧೧೫-೧೧೬

೧೨. ಮರುಳಸಿದ್ಧನ ಕಾವ್ಯ ಅಪ್ರಕಟಿತ

೧೩. ಮರುಳಸಿದ್ಧನ ಕಾವ್ಯ ಅಪ್ರಕಟಿತ

೧೪. ವೆಂಕಟೇಶ ಇಂದ್ವಾಡಿ, 'ಬಾಲಬಸವ ತುಮನೆಪ್ಪ ಹಾಡಿದ ಗೋಣಿಬಸಪ್ಪನ ಕಾವ್ಯ,'ಪು.೫೮-೮೯

೧೫. ಅದೇ, ಪು.೮೮

೧೬. ಮರುಳಸಿದ್ಧನ ಕಾವ್ಯ ಅಪ್ರಕಟಿತ

೧೭. ಮರುಳಸಿದ್ಧನ ಕಾವ್ಯ ಅಪ್ರಕಟಿತ

೧೮. ವೆಂಕಟೇಶ ಇಂದ್ವಾಡಿ, 'ಬಾಲಬಸವ ತುಮನೆಪ್ಪ ಹಾಡಿದ ಗೋಣಿಬಸಪ್ಪನ ಕಾವ್ಯ,'ಪು.೫೨-೫೩

೧೯. ಮರುಳಸಿದ್ಧನ ಕಾವ್ಯ ಅಪ್ರಕಟಿತ

೨೦. ಮರುಳಸಿದ್ಧನ ಕಾವ್ಯ ಅಪ್ರಕಟಿತ

ಅಧ್ಯಾಯ : ೭

ಬಾಲಬಸವರ ಮೌಖಿಕ ಸಾಹಿತ್ಯ: ಪ್ರಭುತ್ವ ಮತ್ತು ಚರಿತ್ರೆ

೭.೧. ಪ್ರಭುತ್ವ

೭.೨. ಪಾಳೇಗಾರರರು

ಅ. ಹರಪನಹಳ್ಳಿ ಪಾಳೇಗಾರರು

ಆ. ಜರ್ಮಲೆ ಪಾಳೇಗಾರರು

ಇ. ಸಂಡೂರು ಪಾಳೇಗಾರರು

ಈ. ಗುಡೇಕೋಟೆ ಪಾಳೇಗಾರರು

೭.೩. ಪ್ರಭುತ್ವ, ಧರ್ಮ ಮತ್ತು ಜಾತಿ

೭.೪. ಪ್ರಭುತ್ವ ಮತ್ತು ಮಠದ ಆಸ್ತಿ

೭.೫. ಯುದ್ಧ

೭.೬. ವಂತಿಕೆ (ತೆರಿಗೆ)

೭.೭. ಅಧಿಕಾರ (ಚುನಾವಣೆ)

೭.೮. ಚರಿತ್ರೆ

೭.೯. ವಿಜಯನಗರ ಸಾಮ್ರಾಜ್ಯ, ಕಂಪಲಿಯ ಕುಮಾರರಾಮ

೭.೧೦. ವಿಜಯನಗರ ಸಾಮ್ರಾಜ್ಯ ಚಾರಿತ್ರಿಕ ಸಂಗತಿಗಳು

ಅಧ್ಯಾಯ-೭

ಬಾಲಬಸವರ ಮೌಖಿಕ ಸಾಹಿತ್ಯ : ಪ್ರಭುತ್ವ ಮತ್ತು ಚರಿತ್ರೆ

ಪ್ರವೇಶಿಕೆ

ಚರಿತ್ರೆಯು ಗತಕಾಲದ ನೆನಪು. ಈ ಗತಕಾಲದ ನೆನಪನ್ನು ಒಂದು ವ್ಯವಸ್ಥಿತ ರೂಪದಲ್ಲಿ ಕಟ್ಟಿಕೊಂಡು ಚಾರಿತ್ರಿಕ ಪ್ರಜ್ಞೆಯಿಂದ ಅಧ್ಯಯನ ಮಾಡುವುದನ್ನು ನಮಗೆ ಕಲಿಸಿದ್ದು ಪಾಶ್ಚಿಮಾತ್ಯರು. ಅವರು ಅನುಸರಿಸಿದ ಮಾನದಂಡಗಳನ್ನೇ ನಾವು ಲಿಖಿತ ಚರಿತ್ರೆಯನ್ನು ದಾಖಲು ಮಾಡುವಾಗ ಅನುಸರಿಸಿಕೊಂಡು ಬಂದಿದ್ದೇವೆ. ಇದರ ಪೂರ್ವದಲ್ಲಿ ನಮ್ಮ ಪೂರ್ವಜರು ತಮ್ಮ ಮೌಖಿಕತೆಯ ಆಕರಗಳಿಂದ ತಮ್ಮ ಸಮುದಾಯದ ಸಾಂಸ್ಕೃತಿಕ ಚರಿತ್ರೆಯನ್ನು ನಂಬಿಕೆ, ಆಚರಣೆ, ಸಂಪ್ರದಾಯ ಮುಂತಾದವುಗಳಿಂದ ಕಟ್ಟಿಕೊಳ್ಳುತ್ತಿದ್ದರು. ಅಂದರೆ ಸಮುದಾಯಗಳು ಸಾಂಸ್ಕೃತಿಕ ಭಾಗವಾಗಿರುವ ಈ ಪರಂಪರೆಯು ಒಂದು ಸಮಾಜ ಅಥವಾ ಒಂದು ಜಾತಿಗೆ ಸೀಮಿತವಾಗದೆ. ಅವು ಇಡೀ ಜನಸಮುದಾಯ ಅಥವಾ ಸಮಾಜದ ಭಾಗವಾಗಿದ್ದವು. ಇದರಿಂದ ಜನಪದರು ತಮ್ಮ ಸಾಂಸ್ಕೃತಿಕ ಚರಿತ್ರೆಯನ್ನು ನೃತ್ಯ ಮಾಡುವ, ಕಥೆ ಹೇಳುವ ಮತ್ತು ಕಾವ್ಯ ಹಾಡುವುದರ ಮೂಲಕ ಅಂದಿನ ಸಮಾಜದಲ್ಲಿನ ಸಂಗತಿಗಳನ್ನು ಕಟ್ಟಿ ಕೊಡುವ ಕಾರ್ಯ ಮಾಡುತ್ತಿದ್ದರು. ಪ್ರಭುತ್ವದ ನೇರ ಅಥವಾ ಪರೋಕ್ಷ ದಾಳಿ, ಜನತೆಯ ಮೇಲೆ ಹೇರಿರುವ ದಬ್ಬಾಳಿಕೆ, ಶೋಷಣೆ, ಮುಂತಾದ ಸಾಮಾಜಿಕ ಅಂಶಗಳನ್ನು ಮೌಖಿಕ ಸಾಹಿತ್ಯವು ತನ್ನೊಳಗೆ ಹಿಡಿದಿಡುವ ಕೆಲಸ ಮಾಡುತ್ತಿದ್ದವು.

ಭಾರತೀಯರಿಗೆ ಚಾರಿತ್ರಿಕ ಪ್ರಜ್ಞೆ ಇಲ್ಲ ಎನ್ನುವ ಪಾಶ್ಚಾತ್ಯ ವಿದ್ವಾಂಸರ ಮಾತುಗಳು ಈ ನೆಲದ ಮೌಖಿಕ ಪರಂಪರೆ ನೀಡುವ ಆಕರಗಳನ್ನು ನಿರ್ಲಕ್ಷಿಸಿ ಲಿಖಿತ ಇತಿಹಾಸವನ್ನು ನಿರ್ಮಿಸಿದ್ದಾರೆ. ಅಂದರೆ ಚರಿತ್ರೆ ಕಟ್ಟುವಾಗ ಲಿಖಿತ, ಅಲಿಖಿತ ಎರಡು ಆಕರಗಳನ್ನು ಬಳಸಿಕೊಂಡು ಚರಿತ್ರೆಯನ್ನು ನಿರ್ಮಿಸಿದಾಗ ಮಾತ್ರ ಅದು ವಾಸ್ತವದ ಚರಿತ್ರೆಗೆ ಹತ್ತಿರವಿರುತ್ತದೆ. ಚರಿತ್ರೆಯಲ್ಲಿ ಲಿಖಿತ ಆಕರಗಳು ನೀಡದ ಎಷ್ಟೊ ಸಂಗತಿಗಳನ್ನು ಮೌಖಿಕ ಆಕರಗಳು ನೀಡುತ್ತವೆ. ಆದರೆ

ಈ ಮೌಖಿಕ ಪರಂಪರೆಯ ಜ್ಞಾನ ಮೀಮಾಂಸೆಯು ಅನಕ್ಷರಸ್ಥರಾದ ಕೆಳವರ್ಗದ ದಲಿತ ಸಮುದಾಯಗಳ ಬಾಯಿಂದ ಬಾಯಿಗೆ ಬಂದಿರುವುದರಿಂದ, ಈ ಮೌಖಿಕ ಆಕರಗಳನ್ನು ಚರಿತ್ರೆಯ ಆಕರಗಳಾಗಿ ಬಳಸಿಕೊಳ್ಳುವ ಮನಸ್ಥಿತಿ ಇಲ್ಲವಾದ ಕಾರಣ ಅಂದಿನ ಬ್ರಿಟಿಷರು ಸಂಸ್ಕೃತ, ವೇದಶಾಸ್ತ್ರ ಪುರಾಣಗಳನ್ನು ಬಲ್ಲ ಪಂಡಿತ ಬ್ರಾಹ್ಮಣರ ಜ್ಞಾನವನ್ನು ಹೆಚ್ಚು ಅವಲಂಬಿಸಿದರಿಂದ ಇತಿಹಾಸದ ಪುಟಗಳಲ್ಲಿ ಕೇಳವರ್ಗದ ಧಾರ್ಮಿಕ, ಸಾಂಸ್ಕೃತಿಕ ನಾಯಕರ ಜೀವನ ಚರಿತ್ರೆಗಳು ದಾಖಲಾಗದೆ ಹೋಗಿದೆ. ಉದಾ–ಮಾದಿಗನಾದ ಮಲೆ ಮಾದಪ್ಪನ ಜೀವನವು ಸಂಘರ್ಷದಿಂದ ಕೂಡಿದೆ. ಆದರೆ ದಲಿತ ಸಮುದಾಯದ ಸಾಂಸ್ಕೃತಿಕ, ಧಾರ್ಮಿಕ ವ್ಯಕ್ತಿಯಾದ ಮಾದಪ್ಪನ ಜೀವನ ಚರಿತ್ರೆಯು ಲಿಖಿತವಾಗಿರದೆ ಮೌಖಿಕ ಕಾವ್ಯಗಳಲ್ಲಿ ಹೆಚ್ಚು ಜೀವಂತಿಕೆ ಪಡೆದುಕೊಂಡಿದೆ. ಮೌಖಿಕ ಪರಂಪರೆಯಲ್ಲಿ ನಮ್ಮ ಸ್ಥಳೀಯ ಸಾಂಸ್ಕೃತಿಕ ನಾಯಕರ ಜೀವನ ಚರಿತ್ರೆಯನ್ನು ಬಾಯಿಯಿಂದ ಬಾಯಿಗೆ, ತಲೆಯಿಂದ ತಲೆಗೆ, ತಲೆಮಾರಿನಿಂದ ತಲೆಮಾರಿಗೆ ವರ್ಗಾಯಿಸಿಕೊಂಡು ಜೀವಂತಿಕೆಯಿಂದ ಇರುವಂತೆ ಮಾಡಿವೆ. ಜನಪದರು ತಮ್ಮ ಮೌಖಿಕ ಕಾವ್ಯಗಳ ಮೂಲಕ ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯ ಮತ್ತೊಂದು ಭಾಗವನ್ನು ಅನಾವರಣಗೊಳಿಸುವ ಕಾರ್ಯ ಮಾಡುತ್ತಾರೆ. ಕರ್ನಾಟಕದಲ್ಲಿನ ಶಿವಶರಣ, ಧಾರ್ಮಿಕ ನಾಯಕರು ಸಾಂಸ್ಕೃತಿಕ ನಾಯಕರು ಮತ್ತು ಸ್ಥಳೀಯ ಪಾಳೇಗಾರರ ಬದುಕನ್ನು ಮೌಖಿಕ ಕಾವ್ಯಗಳಲ್ಲಿ ಜನಪದರು ಹಿಡಿದಿಟ್ಟಿದ್ದಾರೆ. ಮೌಖಿಕ ಕಾವ್ಯಗಳಲ್ಲಿರುವ ಚಾರಿತ್ರಿಕ ವಿವರಗಳು ಲಿಖಿತ ಚರಿತ್ರೆಯಲ್ಲಿ ಕಂಡುಬರುವುದಿಲ್ಲ. ಆದರೆ ಮೌಖಿಕ ಕಾವ್ಯಗಳು ನೀಡುವ ಸಾಂಸ್ಕೃತಿಕ ವಿವರಗಳು ಕರ್ನಾಟಕದ ಮತ್ತೊಂದು ಚರಿತ್ರೆಯ ಭಾಗವನ್ನು ತೆರೆದಿಡುವ ಪ್ರಯತ್ನ ಮಾಡುತ್ತವೆ. ಇದಕ್ಕೆ ಉದಾ–ಲಿಖಿತ ಚರಿತ್ರೆಯಲ್ಲಿ ಕರ್ನಾಟಕದ ಸುವರ್ಣ ಯುಗವೆಂದು ಕರೆಯುವ ವಿಜಯನಗರ ಸಾಮ್ರಾಜ್ಯದ ವಿವರಗಳು ಲಿಖಿತ ಸಾಹಿತ್ಯಿಕ ಆಕರಗಳಿಂದ ಚರಿತ್ರೆಯು ನಿರ್ಮಾಣವಾಗಿದೆ. ಆದರೆ ಆ ಸಮಾಜದಲ್ಲಿನ ಜನಸಾಮಾನ್ಯರ ಜೀವನದ ಸಾಂಸ್ಕೃತಿಕ ವಿವರಗಳು ಲಿಖಿತ ಸಾಹಿತ್ಯಿಕ ಚರಿತ್ರೆಯಲ್ಲಿ ಕಾಣುವುದಿಲ್ಲ. ಅಷ್ಟೆ ಅಲ್ಲದೆ ಜನಪದ ಕಥೆಗಳು, ಕಾವ್ಯಗಳು ಕೂಡ ಈ ವಿಜಯನಗರ ಸಾಮ್ರಾಜ್ಯದ ಬಗ್ಗೆ ವಿವರಗಳನ್ನು ನೀಡುವುದಿಲ್ಲ. ಈ ಎರಡು ಬಗೆಯಲ್ಲಿ ವಿವೇಚಿಸಿ ನೋಡಿದಾಗ ಅಲ್ಲಿನ ಸ್ಥಳೀಯರು ಈ ವಿಜಯನಗರ ಸಾಮ್ರಾಜ್ಯದ ಮೇಲೆ ಇರಬಹುದಾದ ಅಸಹನೆ ಎಷ್ಟು ಎಂದು ಊಹಿಸಬಹುದು. ಅದೇ ಪಕ್ಕದ ಸಂಸ್ಥಾನವಾದ ಕಂಪ್ಲಿಯ ಕಂಪಲಿರಾಯನ ಮಗನಾದ ಕುಮಾರರಾಮನ ಕುರಿತು ಲಿಖಿತ ಆಕರಗಳು ಕಡಿಮೆಯಾದರೂ ಅವನ ಕುರಿತಂತೆ ಅನೇಕ ಮೌಖಿಕ ಆಕರಗಳು ಇಂದಿಗೂ ಆತನನ್ನೂ ಜೀವಂತವಾಗಿಸಿವೆ. ಕುಮಾರರಾಮನ ಕುರಿತು ಅನೇಕ ಮೌಖಿಕ ಕಾವ್ಯಗಳು ಆತನ ಸಂಘರ್ಷಮಯ ಬದುಕಿನ ವಿವರಗಳನ್ನು ಕಟ್ಟಿಕೊಡುತ್ತವೆ. ಆತನ ಕುರಿತು ಇಂದಿಗೂ ಹಂಪಿ ಪರಿಸರದಲ್ಲಿ ನಡೆಯುವ ಉತ್ಸವ, ಜಾತ್ರೆ ಮತ್ತು ಆಚರಣೆಗಳು ಆತನನ್ನು ಮತ್ತಷ್ಟು ಜೀವಂತಿಕೆಯಿಂದ ಇಡುವ ಪ್ರಯತ್ನ ಮಾಡಿವೆ.

ಮೌಖಿಕ ಚರಿತ್ರೆಯ ಜೀವಂತಿಕೆ ಮತ್ತು ಚಲನಶೀಲತೆಯನ್ನು ಕುರಿತು ಮೊಗಳ್ಳಿ ಗಣೇಶ ಅವರು ಈ ರೀತಿಯಾದ ಅಭಿಪ್ರಾಯಪಡುತ್ತಾರೆ. "ಯಾವುದು ಚಲನಶೀಲವೋ ಅದು ಉಳಿಯುತ್ತದೆ. ಯಾವುದು ಚಲನೆಗೆ ವಿರುದ್ಧವಾಗಿ, ಕೋಟೆ-ಕೊತ್ತಲ-ಬತ್ತೇರುಗಳನ್ನು, ಅರಮನೆ-ಗುರುಮನೆಗಳನ್ನು ಕಟ್ಟಿಕೊಂಡು ಯುದ್ಧದಾಹಿಯಾಗಿರುತ್ತದೋ ಅಥವಾ ಲೋಲುಪ್ತವಾಗಿರುತ್ತದೋ ಅಥವಾ ಹಿಂಸಾತ್ಮಕವಾಗಿರುತ್ತದೋ ಅಂತದು ಇತಿಹಾಸವಲ್ಲ, ಇತಿಹಾಸವು ನಿರಂತರ ಚಲನಶೀಲವಾದುದು. ಮೌಖಿಕ ಕಥನಗಳು ಸದಾ ಬಹುರೂಪಿ ಆಕೃತಿಗಳಲ್ಲಿ ಚಲನಶೀಲವಾದ ಅಭಿವ್ಯಕ್ತಿಗಳಲ್ಲಿ ಕಾಲದ ಹಂಗನ್ನು ಮೀರುತ್ತಿರುತ್ತವೆ. ಚಲನೆಯೇ ಅವರವರ ಅಸ್ತಿತ್ವವನ್ನು ಸ್ಥಾಪಿಸುವುದು, ಸದಾ ವಿಸ್ತರಣೆಗೊಳ್ಳುವ ಸ್ವಭಾವ ಮೌಖಿಕ ಕಥನಗಳಿಗೆ ಪ್ರವೃತ್ತಿಯಂತಾಗಿದೆ."[೧] ಇವರ ಮಾತುಗಳಲ್ಲಿ ಲಿಖಿತ ಪರಂಪರೆಗಿಂತ ಮೌಖಿಕ ಪರಂಪರೆ ಹೆಚ್ಚು ಚಲನಶೀಲವಾದದು ಎಂದು ಹೇಳುತ್ತಾರೆ. ಮೌಖಿಕ ಕಾವ್ಯ ಅಥವಾ ಕಥನಗಳು ಕಟ್ಟಿಕೊಡುವ ಚಾರಿತ್ರಿಕ ಆಕರ ಮತ್ತು ಆ ಸಂಗತಿಗಳು ನಿರಂತರವಾಗಿ ಚಲನಶೀಲತೆ ಅಥವಾ ಜೀವಂತಿಕೆಗೆ ಸಾಕ್ಷಿಯಾಗಿರುತ್ತವೆ. ಈ ಸಂಗತಿಯು ಕುಮಾರರಾಮನ ಸ್ಥಳೀಯ ಮೌಖಿಕ ಕಥೆಗಳಲ್ಲಿ, ಆಚರಣೆಗಳಲ್ಲಿ ನಾವು ಕಾಣಬಹುದಾಗಿದೆ. ಅದೇ ರೀತಿ ತುಳುನಾಡಿನ ಸಾಂಸ್ಕೃತಿಕ ಚರಿತ್ರೆಯು ಅಕ್ಷರ ಮತ್ತು ಮೌಖಿಕದ ನಡುವೆ ತನ್ನ ಸ್ಥಾನಮಾನವನ್ನು ಉಳಿಸಿಕೊಂಡಿದೆ. ಪುರುಷೋತ್ತಮ ಬಿಳಿಮಲೆಯವರು ಮೌಖಿಕ ಕಾವ್ಯ, ಕಥೆಗಳ ಕುರಿತು ಈ ರೀತಿಯಾಗಿ ಹೇಳುತ್ತಾರೆ. "ಇದು ಅಕ್ಷರ ಪರವಾಗಿರುವವರ ತರ್ಕ. ಅಂದರೆ ವಾಸ್ತವವಾಗಿ ಮೌಖಿಕ ರೂಪದಲ್ಲಿರುವಂತದ್ದು ಅಶಾಶ್ವತ. ಏನೂ ಆಗಿರುವುದಿಲ್ಲ ಅದು ಕಂಠಸ್ಥ ಪರಂಪರೆಯಲ್ಲಿ ಉಳಿದಿರುತ್ತದೆ. ಇಡೀ ಜಾನಪದವೇ ಹಾಗೆ ಉಳಿದು ಬೆಳೆದಿದೆ. ಅಕ್ಷರ ಬಂಧನ ಇಲ್ಲದ್ದಿದ್ದರಿಂದ ಅದು ಹೆಚ್ಚು ಲವಲವಿಕೆಯಿಂದ ಬೆಳೆಯುತ್ತದೆ"[೨] ಎಂದು ಹೇಳುವ ಇವರ ಮಾತುಗಳಲ್ಲಿ ಜಾನಪದವು ಅಲಿಖಿತವಾಗಿದ್ದರೂ, ಅದು ನಿರೂಪಿಸುವ ಚಾರಿತ್ರಿಕ ಅಂಶಗಳು ಹೆಚ್ಚು ಜೀವಂತಿಕೆಯಿಂದ ಕೂಡಿರುತ್ತವೆ. ಅವು ವಾಸ್ತವಿಕತೆಗೆ ಹೆಚ್ಚು ಹತ್ತಿರವಾಗಿರುತ್ತವೆ ಎನ್ನುವ ಅಭಿಪ್ರಾಯ ಪಡುತ್ತಾರೆ.

ಕರ್ನಾಟಕ ಸಾಂಸ್ಕೃತಿಕ ಚರಿತ್ರೆಯನ್ನು ತಿಳಿಯಲು ಲಿಖಿತ ಆಕರಗಳನ್ನು ನಂಬಿ ಚರಿತ್ರೆ ಕಟ್ಟುವ ಕಾರ್ಯ ಮಾಡಿರುವ ಮೊದಲ ಕಾಲಘಟ್ಟದ ಇತಿಹಾಸಕಾರರು, ಪಾಶ್ಚಾತ್ಯರ ಮಾದರಿಯನ್ನು ಹೆಚ್ಚು ಅವಲಂಬಿಸಿ ಲಿಖಿತ ಚರಿತ್ರೆಯೊಂದಿಗೆ ಮೌಖಿಕ ಆಕರಗಳನ್ನು ಬಳಸಿಕೊಂಡು ಚರಿತ್ರೆ ನಿರ್ಮಾಣ ಮಾಡುವ ಕೆಲಸವನ್ನು ಅವರು ಮಾಡಲಿಲ್ಲ. ಹಾಗಾಗಿ ಕರ್ನಾಟಕದ ಚರಿತ್ರೆಯು ಬಹುತೇಕ ರಾಜರ ಕಥೆಯಾಗಿದೆ. ಈ ಕಥೆಗಳಲ್ಲಿ ಶ್ರೀಸಾಮಾನ್ಯರು ಕಂಡುಬರುವುದಿಲ್ಲ. ರಾಜನ ಮತ ಧರ್ಮದ ಸಂಕೇತಗಳಾದ ದೇವಾಲಯಗಳು, ಕೋಟೆ-ಕೊತ್ತಲಗಳು, ಅರಮನೆಗಳು ಮುಂತಾದವುಗಳ ನಿರ್ಮಾಣದ ಕುರಿತ ವಿವರಗಳಿರುತ್ತವೇ ಹೊರತು, ಅಂದಿನ ಸಮಾಜದಲ್ಲಿನ ಧರ್ಮವು ಜಾತಿ ಹೆಸರಿನಲ್ಲಿ ನಡೆಸಿದ ಶೋಷಣೆ ಅಥವಾ ಆ ಶೋಷಣೆ ಅಡಿಯಲ್ಲಿ ಬದುಕಿದ

ಶ್ರೀಸಾಮಾನ್ಯರ ಬದುಕಿನ ವಿವರಗಳಲ್ಲಾಗಲಿ, ಜಾತಿ ವಿರುದ್ಧ ಹೋರಾಡಿದ ಸಾಂಸ್ಕೃತಿಕ ನಾಯಕರ ವಿವರಗಳ ಉಲ್ಲೇಖವಿರುವುದಿಲ್ಲ. ರಾಜರ ವಂಶಾವಳಿಯ ನೆಲೆಯಲ್ಲಿ ರಚಿತವಾದ ಚರಿತ್ರೆಯನ್ನು ಪುನಃ ಸೃಷ್ಟಿಸುವ-ಬರೆಯುವ ಅನಿವಾರ್ಯತೆ ಈಗ ಸಂಶೋಧಕರ/ಅಧ್ಯಯನಕಾರರ ಮುಂದಿದೆ. ಹಾಗಾಗಿ ಚರಿತ್ರೆಯಲ್ಲಿ ದಾಖಲಾಗದ ಮೌಖಿಕ ಆಕರಗಳನ್ನು ಪರಿಗಣಿಸಿ ಅವುಗಳಿಂದ ಕೆಳವರ್ಗದ ಜನ ಸಮುದಾಯಗಳ ಸಾಂಸ್ಕೃತಿಕ, ಸ್ಥಳೀಯ ಚರಿತ್ರೆ ಕಟ್ಟುವ ಕಾರ್ಯವಾಗಬೇಕಿದೆ. ಈ ನಿಟ್ಟಿನಲ್ಲಿ ಬಾಲಬಸವರ ಮೌಖಿಕ ಸಾಹಿತ್ಯವನ್ನು ಆಧಾರವಾಗಿಟ್ಟುಕೊಂಡು ಮಧ್ಯ ಕರ್ನಾಟಕದ ಸ್ಥಳೀಯ ಪಾಳೇಗಾರರ ಮತ್ತು ಪ್ರಭುತ್ವದ ಭಾಗವಾಗಿರುವ ಚರಿತ್ರೆಯನ್ನು ಮೌಖಿಕ ನೆಲೆಯಲ್ಲಿ ಅಧ್ಯಯನ ಮಾಡುವುದು ಈ ಸಂಶೋಧನೆಯ ಪ್ರಧಾನ ಆಶಯವಾಗಿದೆ.

ಈ ಸಂಶೋಧನೆಯಲ್ಲಿ ಸ್ಥಳೀಯ ಸಾಂಸ್ಕೃತಿಕ ಚರಿತ್ರೆಯ ಭಾಗವಾದ ಪ್ರಭುತ್ವದ ಆಡಳಿತವು ಬಾಲಬಸವರ ಮೌಖಿಕ ಸಾಹಿತ್ಯದಲ್ಲಿ ಹೇಗೆ ವ್ಯಕ್ತಗೊಂಡಿದೆ. ಅವು ನೀಡುವ ವಿವರಗಳು ಲಿಖಿತ ಚರಿತ್ರೆಯಲ್ಲಿ ಯಾಕೆ ದಾಖಲಾಗಿಲ್ಲ ಎನ್ನುವ ಕುರಿತು ಅಧ್ಯಯನ ಮಾಡಬೇಕಿದೆ. ಬಾಲಬಸವರು ಮಧ್ಯ ಕರ್ನಾಟಕದ ಭೌಗೋಳಿಕ ಪ್ರದೇಶದ ವ್ಯಾಪ್ತಿಯಲ್ಲಿ ಬರುವುದರಿಂದ ಈ ಮಧ್ಯ ಕರ್ನಾಟಕದ ಪ್ರಮುಖ ಪಾಳೇಗಾರರಾದ ಸಂಡೂರು ಪಾಳೇಗಾರರು, ಹರಪನಹಳ್ಳಿ ಪಾಳೇಗಾರರು, ಜರಿಮಲೆ ಪಾಳೇಗಾರರು, ಗುಡೇಕೋಟೆ ಪಾಳೇಗಾರರ ಸ್ಥಳೀಯ ಸಾಂಸ್ಕೃತಿಕ ಚರಿತ್ರೆಯ ಮತ್ತೊಂದು ಮಗ್ಗಲನ್ನು ತಿಳಿಯಬಹುದಾಗಿದೆ. ಮಧ್ಯ ಕರ್ನಾಟಕದಲ್ಲಿನ ಸಾಂಸ್ಕೃತಿಕ ನಾಯಕರಾದ ಗೋಣಿಬಸಪ್ಪ ಮತ್ತು ಮರುಳಸಿದ್ಧರ ಬದುಕಿನಲ್ಲಿ ನಡೆಸಿದ ಸಂಘರ್ಷಮಯ ಜೀವನದ ವಿವರಗಳನ್ನು ಈ ಮೌಖಿಕ ಕಾವ್ಯಗಳು ಹೇಳುವುದರಿಂದ ಅವರ ಬದುಕಿನ ವಿವರಗಳು ಚಾರಿತ್ರಿಕ ದಾಖಲೆಗಳೊಂದಿಗೆ ಅಧ್ಯಯನ ಮಾಡಬೇಕಿದೆ. ಅಲ್ಲದೆ ಬಾಲಬಸವ ಪರಂಪರೆಯ ಮೌಖಿಕ ಸಾಹಿತ್ಯವಾದ ಕಾಲಜ್ಞಾನದಲ್ಲಿ ವ್ಯಕ್ತಗೊಂಡಿರುವಂತಹ ದೆಹಲಿ ಸುಲ್ತಾನನ ದಾಳಿ, ಕಂಪಲಿ ಸಂಸ್ಥಾನ, ವಿಜಯನಗರ ಸಾಮ್ರಾಜ್ಯ ಪತನ, ಬಹಮನಿ ಸಾಮ್ರಾಜ್ಯ ಮುಂತಾದ ಚಾರಿತ್ರಿಕ ಸಂಗತಿಗಳ ಬಗ್ಗೆ ಅಧ್ಯಯನ ಮಾಡುವುದು ಈ ಅಧ್ಯಾಯದ ಮುಖ್ಯ ಉದ್ದೇಶವಾಗಿದೆ.

ಬಾಲಬಸವರ ಮೌಖಿಕ ಸಾಹಿತ್ಯದಲ್ಲಿ ಕಾಲಜ್ಞಾನವು ಬಾಲಬಸವ ಪರಂಪರೆಯ ಪ್ರಧಾನವಾದ ಮೌಖಿಕ ಸಾಹಿತ್ಯ. ಈ ಕಾಲಜ್ಞಾನ ಸಾಹಿತ್ಯವು "ಮುಂದೊದಗುವ ಸಂಗತಿಯನ್ನು ಆತ್ಮ ಬಲದಿಂದ ವರ್ತಮಾನದಲ್ಲಿ ಇದ್ದುಕೊಂಡು ಭವಿಷ್ಯತ್ ಕಾಲದಲ್ಲಿ ಜರಗುವ ಸಂಗತಿಗಳನ್ನು ಸಾಮಾನ್ಯ ಜನತೆಗೆ ಹೇಳುವ ಸಾಹಿತ್ಯವಾಗಿದೆ."[3] ಕಾಲಜ್ಞಾನ ಸಾಹಿತ್ಯವು ಬಾಲಬಸವ ಪರಂಪರೆಯ ವೃತ್ತಿ ಕಾಯಕವಾಗಿದೆ. ಕಾಲಜ್ಞಾನ ಸಾಹಿತ್ಯದಲ್ಲಿರುವ ಚಾರಿತ್ರಿಕ ಅಂಶಗಳಾದ ವಿಜಯನಗರ ಸಾಮ್ರಾಜ್ಯ, ಕಿತ್ತೂರು ಸಂಸ್ಥಾನ, ಬಹಮನಿ ಸಾಮ್ರಾಜ್ಯ, ದೆಹಲಿ ಸುಲ್ತಾನರ ದಾಳಿ, ವಚನ ಚಳುವಳಿ ಮುಂತಾದ ಚಾರಿತ್ರಿಕ ಸಂಗತಿಗಳ ಬಗ್ಗೆ ಹಲವು ನಿಖರವಾದ ಸತ್ಯ ಸಂಗತಿಗಳನ್ನು ನಿರೂಪಿಸಿದೆ. ಬಾಲಬಸವರ ಮೌಖಿಕ ಸಾಹಿತ್ಯದಲ್ಲಿರುವ ಪ್ರಭುತ್ವ ಮತ್ತು ಲಿಖಿತ ಚರಿತ್ರೆಯಲ್ಲಿ

ದಾಖಲಾಗದೆ ಹೋದ ಸಂಗತಿಗಳನ್ನು ಬಾಲಬಸವರ ಮೌಖಿಕ ಸಾಹಿತ್ಯದ ನೆರವಿನಿಂದ ಪುನಃ ಸಾಂಸ್ಕೃತಿಕ ಚರಿತ್ರೆಯನ್ನು ಜನಪದದ ಹಿನ್ನೆಲೆಯಲ್ಲಿ ಕಟ್ಟುವ ಅಥವಾ ಅಧ್ಯಯನ ಮಾಡುವ ಸಾಧ್ಯತೆಗಳನ್ನು ಕುರಿತು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

೭.೧. ಪ್ರಭುತ್ವ

ಬಾಲಬಸವರ ಮೌಖಿಕ ಕಾವ್ಯಗಳಲ್ಲಿ 'ಪ್ರಭುತ್ವ'ದ ಆಡಳಿತ ಭಾಗವಾಗಿ ರಾಜಕೀಯ, ಧಾರ್ಮಿಕ ಮತ್ತು ಸಾಮಾಜಿಕ ವಿಷಯಗಳು ಮರುಳಸಿದ್ಧನ ಕಾವ್ಯ, ಗೋಣಿಬಸಪ್ಪನ ಕಾವ್ಯ ಮತ್ತು ಕಾಲಜ್ಞಾನದಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಬಾಲಬಸವರ ಮೌಖಿಕ ಸಾಹಿತ್ಯ ಚಾರಿತ್ರಿಕ ಸಂಗತಿಗಳ ಕುರಿತು ಹೆಚ್ಚು ಹೆಚ್ಚು ವಾಸ್ತವದ ನೆಲೆಯಲ್ಲಿ ಚರ್ಚೆ ಮಾಡುವಂತಹ ಆಕರಗಳನ್ನು ಒದಗಿಸಿಕೊಡುತ್ತದೆ. ಮರುಳಸಿದ್ಧ ಮತ್ತು ಗೋಣಿಬಸಪ್ಪರು ಚಾರಿತ್ರಿಕ ಪುರುಷರಾಗಿದ್ದು, ಅವರ ಜೀವಿತಾವಧಿಯ ಕಾಲದಲ್ಲಿ ಅಂದಿನ ಪ್ರಭುತ್ವವು ಅವರೊಂದಿಗೆ ನಡೆದುಕೊಂಡಿರುವ ಸಂಗತಿಗಳನ್ನು ಬಾಲಬಸವರ ಮೌಖಿಕ ಸಾಹಿತ್ಯ ನಿರೂಪಿಸುತ್ತದೆ. ಪ್ರಭುತ್ವವು ಸಮಾಜದಲ್ಲಿ ಧರ್ಮ ಮತ್ತು ರಾಜಕೀಯವನ್ನು ಒಂದುಗೂಡಿಸಿಕೊಂಡು ಆಡಳಿತ ಮಾಡುವ ಕಾಲವಾಗಿದ್ದರಿಂದ, ಸಹಜವಾಗಿ ಧಾರ್ಮಿಕ ಕಟ್ಟುಪಾಡುಗಳ ವಿರುದ್ಧ ಈ ಚಾರಿತ್ರಿಕ ಪುರುಷರು ಪ್ರತಿರೋಧ ಒಡ್ಡುವ ಕಾರ್ಯ ಮಾಡಿದ್ದಾರೆ. ಧಾರ್ಮಿಕ ಮತ್ತು ರಾಜಕೀಯ ವಿಷಯಗಳೇ ಕರ್ನಾಟಕದಲ್ಲಿರುವ ಮೌಖಿಕ ಕಾವ್ಯಗಳ ಪ್ರಧಾನ ಕಥಾವಸ್ತುಗಳಾಗಿವೆ. ಅವುಗಳಲ್ಲಿ ಕೆಳವರ್ಗದ ಸಮುದಾಯಗಳ ಸಾಂಸ್ಕೃತಿಕ ನಾಯಕರು ಪ್ರಭುತ್ವದ ಜನವಿರೋಧಿ ನೀತಿಗಳನ್ನು ವಿರೋಧಿಸುತ್ತಾ, ಪವಾಡಗಳನ್ನು ಮಾಡುವುದರ ಮೂಲಕ ಪ್ರಭುತ್ವದ ದುರಾಡಳಿತವನ್ನು ಸದೆಬಡಿದು ಜನಸಾಮಾನ್ಯರಿಗೆ ಹತ್ತಿರವಾಗುತ್ತಾರೆ.

ಗೋಣಿಬಸಪ್ಪನ ಕಾವ್ಯದಲ್ಲಿ ಪ್ರಭುತ್ವದ ಭಾಗವಾದ ಪಾಳೇಗಾರರು, ಅವರ ಆಡಳಿತದ ವೈಖರಿ, ಯುದ್ಧದ ರಣತಂತ್ರಗಳು, ಮಠದ ಮೇಲಿನ ದಾಳಿ ಮತ್ತು ಮತ ಧರ್ಮ ಮುಂತಾದ ವಿಷಯಗಳಿಗೆ ಸಂಬಂಧಿಸಿದಂತೆ ಬಾಲಬಸವರು ತಾವು ಹಾಡುವ ಕಾವ್ಯಗಳಲ್ಲಿ ಹಲವು ಚಾರಿತ್ರಿಕ ಸಂಗತಿಗಳನ್ನು ಹೇಳುತ್ತಾರೆ. ಬಾಲಬಸವ ತುಮನೆಪ್ಪ ಹಾಡಿದ ಕಾವ್ಯಗಳಾದ ಗೋಣಿಬಸಪ್ಪನ ಕಾವ್ಯ ಮತ್ತು ಮರುಳಸಿದ್ಧನ ಕಾವ್ಯಗಳಲ್ಲಿರುವ ಚಾರಿತ್ರಿಕ ಅಂಶಗಳು ಈ ಮಧ್ಯ ಕರ್ನಾಟಕವನ್ನು ವಿಜಯನಗರ ಸಾಮ್ರಾಜ್ಯದ ನಂತರ ಆಳ್ವಿಕೆ ಮಾಡಿದ ಪಾಳೇಗಾರರನ್ನು ಕುರಿತಾಗಿವೆ.

೭.೨. ಪಾಳೇಗಾರರು

ವಿಜಯನಗರ ಸಾಮ್ರಾಜ್ಯದಲ್ಲಿನ ಬೇಡ ಬುಡಕಟ್ಟಿನ ಸಮುದಾಯದವರು ತಮ್ಮದೇ ಆದ ಸೈನ್ಯ ವ್ಯವಸ್ಥೆಯನ್ನು ಮಾಡಿಕೊಂಡಿದ್ದರು. ಇವರು ಬುಡಕಟ್ಟು ಸಮುದಾಯಗಳಿಗೆ ಸೇರಿದವರಾಗಿದ್ದರಿಂದ ತುಂಬಾ ಶಕ್ತಿಶಾಲಿಗಳು ಹಾಗೂ ಬಲಶಾಲಿಗಳಾಗಿದ್ದರು. ಇದರಿಂದಾಗಿ ಇವರ ಸೈನ್ಯದ ನೆರವನ್ನು ವಿಜಯನಗರ ಸಾಮ್ರಾಜ್ಯವು ಯುದ್ಧದ ಸಮಯದಲ್ಲಿ ಪಡೆದುಕೊಳ್ಳುತ್ತಿತ್ತು.

ಇವರಿಗೆ ವಿಜಯನಗರ ಅರಸರು ನೀಡಿದ ಪ್ರೋತ್ಸಾಹದಿಂದಾಗಿ ಈ ಮಧ್ಯ ಕರ್ನಾಟಕ ಭೌಗೋಳಿಕ ಪ್ರದೇಶದಲ್ಲಿ ಹಲವು ಸಣ್ಣ ಸಣ್ಣ ಪಾಳೇಪಟ್ಟುಗಳಾಗಿ ಕಾರ್ಯ ನಿರ್ವಹಿಸುತ್ತಿದ್ದವು. ೧೫೬೫ರ ವಿಜಯನಗರ ಸಾಮ್ರಾಜ್ಯ ಪತನದಿಂದ ಇಲ್ಲಿನ ಸಣ್ಣ ಸಣ್ಣ ಪಾಳೇಪಟ್ಟುಗಳು ಸ್ವತಂತ್ರ ಸಂಸ್ಥಾನ ಅಥವಾ ರಾಜ್ಯಗಳಾದವು. ವಿಜಯನಗರ ಸಾಮ್ರಾಜ್ಯ ಪತನದ ಸಮಯದಲ್ಲಿ ಈ ಭೌಗೋಳಿಕ ಪ್ರದೇಶದಲ್ಲಿ ಸುಮಾರು ೭೭ ಪಾಳೇಪಟ್ಟುಗಳಿದ್ದವು. ಈ ಪಾಳೇಪಟ್ಟುಗಳು ಮುಂದೆ ತಮ್ಮದೇ ಆದ ಸ್ವತಂತ್ರ ರಾಜ್ಯ ನಿರ್ಮಿಸಿಕೊಂಡು ತಮ್ಮನ್ನು ಪಾಳೇಗಾರರೆಂದು ಕರೆದುಕೊಂಡರು.

ಪಾಳೇಗಾರರು ಎನ್ನುವ ಪದದ ಅರ್ಥ ಕುರಿತು ಸಿ.ಆರ್.ಶ್ಯಾಮಲ ಅವರು ಈ ರೀತಿಯಾದ ಅಭಿಪ್ರಾಯ ಪಡುತ್ತಾರೆ. "ಅಮರನಾಯಕರು ಯುದ್ಧದ ಸಮಯದಲ್ಲಿ ತಮ್ಮ ಸೈನ್ಯವನ್ನು ರಾಜನ ಸೇನಾ ಬಿಡಾರಕ್ಕೆ ಕಳುಹಿಸಿ, ಪ್ರಭುಗಳ ದರ್ಶನಕ್ಕೆ ಹೋದಾಗಲೆಲ್ಲ ರಾಜಧಾನಿಯ ಹೊರಗಿನ 'ಪಾಳೆಯ' ಎಂಬ ಸೇನಾ ಬಿಡಾರದಲ್ಲಿ ನಿಲ್ಲುತ್ತಿದ್ದರು. ಪಾಳೆಯ ಎಂದರೆ ದಂಡು, ಸೈನ್ಯ, ವಿಭಾಗ, ಶಿಬಿರ, ಠಾಣ್ಯ. ಇದರ ಮುಖ್ಯಸ್ಥನೇ ಪಾಳೇಯಗಾರ. ವಿಜಯನಗರ ಸಾಮ್ರಾಜ್ಯದಲ್ಲಿ ಇಂತಹ ಇನ್ನೂರು ಪಾಳೇಗಾರರು ಇದ್ದರೆಂಬುದು ತಿಳಿದುಬರುತ್ತದೆ."[೪] ಅಂದರೆ ವಿಜಯನಗರ ಪೂರ್ವದಲ್ಲೂ ಪಾಳೇಗಾರರು ಇದ್ದರು. ಅವರು ಪಶುಪಾಲನೆಯನ್ನು ತಮ್ಮ ಕುಲವೃತ್ತಿಯನ್ನಾಗಿ ಮಾಡಿಕೊಂಡಿದ್ದರು. ದನ ಮತ್ತು ಪಶುಗಳ ರಕ್ಷಣೆಗಾಗಿ ತಮ್ಮದೇ ಆದ ಸೈನ್ಯವನ್ನು ಕಟ್ಟಿಕೊಂಡಿದ್ದರು. ಇವರು ಹೆಚ್ಚಾಗಿ ತುಂಗಭದ್ರಾ ಮತ್ತು ವೇದಾವತಿ ನದಿಯ ಚಿನ್ನಹಗರಿ ಪ್ರದೇಶದಲ್ಲಿ ವಾಸವಾಗಿದ್ದರು. ಪಾಳೇಗಾರ ಎಂಬ ಪದವು ಶಾಸನ ಗಳಲ್ಲಿ ಕಂಡುಬರುವುದಿಲ್ಲ. ಶಾಸನಗಳಲ್ಲಿ ಪಾಳೇಗಾರರನ್ನು ಅಮರನಾಯಕ ಎಂದು ಉಲ್ಲೇಖಿಸಿವೆ. ಅಮರ ಎಂದರೆ ಒಂದು ಸಾವಿರ ಕಾಲ್ದಳದ ಮುಖಂಡ ಅಥವಾ ಒಡೆಯ. ಈತನು ಕಾಲಾಳು ಮತ್ತು ಅಶ್ವದಳವನ್ನು ಒಳಗೊಂಡ ಸೈನ್ಯವನ್ನು ಹೊಂದಿರುತ್ತಿದ್ದನು. ಈ ಸೈನ್ಯದ ಮುಂದಾಳತ್ವವನ್ನು ವಹಿಸಿ ಸಾಮ್ರಾಟನ ಆಜ್ಞೆಯನ್ನು ಪಾಲಿಸಬೇಕಾಗಿತ್ತು. ಇದರಿಂದಾಗಿ ಅಮರ ನಾಯಕನಿಗೆ ಸಾಕಷ್ಟು ಭೂಪ್ರದೇಶ ಮತ್ತು ಸೈನ್ಯದ ಒಡೆತನ ಇರುವುದರಿಂದ ಸ್ಥಳೀಯವಾಗಿ ಹೆಚ್ಚು ಪ್ರಭಾವಶಾಲಿಯಾಗಿರುತ್ತಿದ್ದನು. ಮಧ್ಯ ಕರ್ನಾಟಕದ ಭೌಗೋಳಿಕ ಪ್ರದೇಶದಲ್ಲಿ ಈ ಪಾಳೇಗಾರರ ಚರಿತ್ರೆಯು ಅಷ್ಟಾಗಿ ಕಂಡುಬರುವುದಿಲ್ಲ. ಕೆಲವೇ ಕೆಲವು ಪ್ರಮುಖ ಪಾಳೇಗಾರರಿಗೆ ಮಾತ್ರ ಚರಿತ್ರೆಯಲ್ಲಿ ಸ್ಥಾನ ಸಿಕ್ಕಿದೆ. ಹಾಗಾಗಿ ಈ ಸ್ಥಳೀಯ ಚರಿತ್ರೆಯು ಹೆಚ್ಚಾಗಿ ಮೌಖಿಕ ಕಾವ್ಯ ಮತ್ತು ಕಥನಗಳಲ್ಲಿ ಕಂಡುಬರುತ್ತಾರೆ.

ಕ್ರಿ.ಶ.೧೫೬೫ರಲ್ಲಿ ಮುಸ್ಲಿಮರ ದಾಳಿಯಿಂದಾಗಿ ವಿಜಯನಗರ ಸಾಮ್ರಾಜ್ಯವು ಪತನವಾಯಿತು. ಇದರಿಂದ ಮಧ್ಯ ಕರ್ನಾಟಕದಲ್ಲಿ ಚಿತ್ರದುರ್ಗ, ಹರಪನಹಳ್ಳಿ, ಹಾಗಲವಾಡಿ, ಕೆಳದಿ, ಮುಂತಾದವುಗಳು ಸ್ವತಂತ್ರ ಸಂಸ್ಥಾನಗಳಾದವು. ಬಳ್ಳಾರಿ ಜಿಲ್ಲೆಯಲ್ಲಿ ಹಲವು ಪಾಳೇಗಾರರು ಸ್ವತಂತ್ರವಾಗಿ ಆಳ್ವಿಕೆ ಮಾಡಿದ್ದಾರೆ. ಅದರಲ್ಲಿ ಪ್ರಮುಖವಾಗಿ ಹರಪನಹಳ್ಳಿ ಪಾಳೇಗಾರರು, ಜರಿಮಲಿ ಪಾಳೇಗಾರರು, ಬಳ್ಳಾರಿ ಪಾಳೇಗಾರರು, ಸಂಡೂರು ಪಾಳೇಗಾರರು, ಗುಡೇಕೋಟೆ ಪಾಳೇಗಾರರು ಮುಂತಾದವರು. ಇವರಲ್ಲಿನ ಆಂತರಿಕ ಕಚ್ಚಾಟ, ಅಧಿಕಾರ ವಿಸ್ತೀರ್ಣಾಕಾಂಕ್ಷೆ, ಮೊದಲಾದ ಕಾರಣಗಳಿಂದಾಗಿ

ಹದಿನೆಂಟನೆ ಶತಮಾನದ ಆರಂಭದ ಹೊತ್ತಿಗೆ ಅನೇಕ ಪಾಳೇಗಾರರ ಆಳ್ವಿಕೆಯು ಶಿಥಿಲವಾದವು.

ಅ. ಹರಪನಹಳ್ಳಿ ಪಾಳೇಯಗಾರರು :

ಹರಪನಹಳ್ಳಿ ಪಾಳೇಗಾರರ ಕುರಿತು ಲಿಖಿತ ಚರಿತ್ರೆಯಲ್ಲಿರುವ ಸಂಗತಿಗಳನ್ನು ವಿವೇಚಿಸಿದಾಗ, ಅದರಲ್ಲಿರುವ ಚಾರಿತ್ರಿಕ ದಾಖಲೆಗಳು ತುಂಬಾ ಕಡಿಮೆ. ವಿಜಯನಗರ ಸಾಮ್ರಾಜ್ಯ ಪತನದ ನಂತರ ಸ್ವತಂತ್ರ ಪಾಳೆಯಪಟ್ಟುಗಳನ್ನು ಕಟ್ಟಿಕೊಂಡ ಬೇಡ ಬುಡಕಟ್ಟುಗಳು ಬಳ್ಳಾರಿ ಜಿಲ್ಲೆಯನ್ನು ಹಲವು ಪಾಳೇಗಾರ ಮನೆತನಗಳು ಆಳ್ವಿಕೆ ಮಾಡಿವೆ. ಅದರಲ್ಲಿ ಪ್ರಮುಖರೆಂದರೆ ಹರಪನಹಳ್ಳಿ ಪಾಳೇಗಾರರು. ಇವರು ತುಂಬಾ ಪರಾಕ್ರಮಿಗಳು ಹಾಗೂ ಸುಧೀರ್ಘ ಇತಿಹಾಸ ಹೊಂದಿದ ಪಾಳೇಗಾರರು. ಹರಪನಹಳ್ಳಿ ಪಾಳೇಗಾರರ ಮೂಲವನ್ನು ಕುರಿತು ಸ್ಥಳೀಯ ಇತಿಹಾಸತಜ್ಞರಾದ ಕುಂ.ಬಾ. ಸದಾಶಿವಪ್ಪನವರು ಈ ರೀತಿಯಾಗಿ ಹೇಳುತ್ತಾರೆ. "ವಿಜಯನಗರ ಸಾಮ್ರಾಜ್ಯದ ಸೈನ್ಯದಲ್ಲಿ ಸೈನ್ಯಾಧಿಕಾರಿಯಾದ ದಾದಯ್ಯ ನಾಯಕ ಮತ್ತು ಅವರ ಸೋದರ ರಂಗಣ್ಣ ನಾಯಕರು ವಿಜಯನಗರ ಸಾಮ್ರಾಜ್ಯ ಹಾಳಾದ ಕೆಲವು ಭಾಗಗಳಿಗೆ ಬಂದು ಬೇಡರ ಪಡೆಯನ್ನು ರಚಿಸಿದನು. ನಿತ್ಯ ನಾಲ್ಕಾರು ಹಳ್ಳಿಗಳ ಗೌಡರನ್ನು ಹೆದರಿಸಿ ಮೂವತ್ತಮೂರು ಹಳ್ಳಿಗಳನ್ನು ತಮ್ಮ ಸ್ವಾಧೀನ ಪಡೆದುಕೊಂಡರು. ದುಷ್ಟರನ್ನು ಕಳ್ಳರನ್ನು ದಂಡಿಸಿ ಜನಸಾಮಾನ್ಯರಿಗೆ ಶಾಂತಿಯಿಂದ ಬಾಳಲು ಭದ್ರತೆ ಒದಗಿಸಿದರು. ಕ್ರಿ.ಶ.೧೫೬೫ರಿಂದ ೨೭ ವರ್ಷಗಳ ಕಾಲ ಅದೇ ನಾಯಕ ಹರಪನಹಳ್ಳಿಯನ್ನು ಆಳ್ವಿಕೆ ಮಾಡಿದನು. ಚಿತ್ರದುರ್ಗದ ಮತ್ತಿ ತಿಮ್ಮಣ್ಣ ನಾಯಕನ ಮಗಳು ಹೊನ್ನ ನಾಗತಿಯನ್ನು ಮಡದಿಯನ್ನಾಗಿ ಸ್ವೀಕರಿಸಿದ ಹರಪನಹಳ್ಳಿ ಉಚ್ಚಂಗಿದುರ್ಗಗಳನ್ನು ಪ್ರಮುಖ ರಾಜಧಾನಿಗಳಾಗಿರಿಸಿಕೊಂಡು ರಾಜ್ಯವಾಳಿದ"[೫] ಎಂದು ಹರಪನಹಳ್ಳಿ ಪಾಳೇಗಾರರ ಮೂಲಪುರುಷ ಮತ್ತು ಅವರು ಸ್ವತಂತ್ರ ಪಾಳೇಗಾರಿಕೆಯನ್ನು ಸ್ಥಾಪನೆ ಮಾಡಿದ್ದರ ಕುರಿತು ಹೇಳುತ್ತಾರೆ.

ಬಾಲಬಸವ ತುಮನೆಪ್ಪ ಹಾಡುವ ಗೋಣಿಬಸಪ್ಪನ ಕಾವ್ಯ ಮತ್ತು ಮರುಳಸಿದ್ಧನ ಕಾವ್ಯಗಳಲ್ಲಿ ಈ ಹರಪನಹಳ್ಳಿಯ ಪಾಳೆಯಗಾರರು ಪ್ರಮುಖ ಸ್ಥಾನ ಪಡೆದುಕೊಂಡಿದ್ದಾರೆ. ಹರಪನಹಳ್ಳಿ ಪಾಳೇಗಾರರು ಮತ್ತು ಅವರ ಸಾಮಂತ ಪಾಳೇಗಾರನಾದ ಚಿಗಟೇರಿ ಶಿವನಯ್ಯನಿಂದಾಗಿ ಗೋಣಿ ಬಸಪ್ಪ ಮತ್ತು ಹರಪನಹಳ್ಳಿ ಪಾಳೇಗಾರರಿಂದ ಮರುಳಸಿದ್ಧರು ಅನುಭವಿಸಿದ ನೋವು, ಅಪಮಾನ, ಹಿಂಸೆ ಮುಂತಾದವುಗಳು ಬಾಲಬಸವ ತುಮನೆಪ್ಪ ಹಾಡುವ ಮೌಖಿಕ ಕಾವ್ಯಗಳ ಕಥಾ ವಸ್ತುಗಳಾಗಿವೆ.

ಹರಪನಹಳ್ಳಿಯನ್ನು ಕೇಂದ್ರವಾಗಿಸಿಕೊಂಡು ಆಳ್ವಿಕೆ ಮಾಡಿದ ಪಾಳೇಯಗಾರರ ಹೆಸರು ಮತ್ತು ಆಳಿದ ಕಾಲವನ್ನು ಸಿ. ಆರ್. ಶ್ಯಾಮಲ ಅವರು ಈ ಕೆಳಗಿರುವಂತಹ ಪಟ್ಟಿಯನ್ನು ಕೊಟ್ಟಿದ್ದಾರೆ.

ಪಾಳೆಯಗಾರರ ಹೆಸರು	**ಆಳಿದ ಕಾಲ**
* ದಾದಯ್ಯ ನಾಯಕ	ಕ್ರಿ.ಶ. = ೧೫೫೬-೪೫೯೨

* ರಂಗಣ್ಣ ನಾಯಕ ಕ್ರಿ.ಶ. = ೧೫೯೨-೧೬೧೬
* ಭರ್ಮ ನಾಯಕ ಕ್ರಿ.ಶ. = ೧೬೧೬-೧೬೫೦
* ಓಬಣ್ಣ ನಾಯಕ ಕ್ರಿ.ಶ. = ೧೬೫೦-೧೬೬೫
* ವೀರ ಮುಮ್ಮಡಿ ನಾಯಕ ಕ್ರಿ.ಶ. = ೧೬೫೫-೧೬೬೭
* ಮುಮ್ಮಡಿ ನಾಯಕ ಕ್ರಿ.ಶ. = ೧೬೬೭-೧೬೮೭
* ಮೊದಲನೆಯ ಬಸವಂತ ನಾಯಕ ಕ್ರಿ.ಶ. = ೧೬೮೬-೧೭೦೫
* ಮರಿಕೊಟ್ರಪ್ಪ ನಾಯಕ ಕ್ರಿ.ಶ. = ೧೭೦೫-೧೭೧೫
* ಎರಡನೇಯ ಬಸವಂತ ನಾಯಕ ಕ್ರಿ.ಶ. = ೧೭೧೫-೧೭೧೬
* ಹಿರಿಯಾಮ್ಮಾಜಿ ನಾಯಕಿ ಕ್ರಿ.ಶ. = ೧೭೧೬-೧೭೨೧
* ಮದಿ ಬಸಪ್ಪ ನಾಯಕ ಕ್ರಿ.ಶ. = ೧೭೨೧-೧೭೪೧
* ಮೊದಲನೆಯ ವೀರಬಸಪ್ಪ ನಾಯಕ ಕ್ರಿ.ಶ. = ೧೭೪೧-೧೭೪೨
* ಮೊದಲನೆಯ ಸೋಮಶೇಖರ ನಾಯಕ ಕ್ರಿ.ಶ. = ೧೭೪೨-೧೭೬೬
* ಎರಡನೆಯ ವೀರಬಸಪ್ಪ ನಾಯಕ ಕ್ರಿ.ಶ. = ೧೭೬೬-೧೭೬೮
* ಬಸಪ್ಪ ನಾಯಕ ಕ್ರಿ.ಶ. = ೧೭೬೮-೧೭೮೭
* ಎರಡನೆಯ ಸೋಮಶೇಖರ ನಾಯಕ ಕ್ರಿ.ಶ. = ೧೭೮೭-೧೭೯೯

ಹರಪನಹಳ್ಳಿ ಪಾಳೇಗಾರರ ಸಾಮಂತ ದೊರೆಗಳು/ಪಾಳೇಗಾರರು

ಸಾಮಂತ ಪಾಳೇಗಾರರ ಹೆಸರು	**ಆಳ್ವಿಕೆ ಮಾಡಿದ ಸ್ಥಳ**	**ಕಾಲ**
* ರಂಗನಾಯಕ	ಬಾಗಳಿ	ಕ್ರಿ.ಶ.೧೫೫೮
* ಓಬರ ನಾಯಕ	ತಂಬ್ರಹಳ್ಳಿ	ಕ್ರಿ.ಶ.೧೬೧೬
* ಶಿವಪ್ಪ ನಾಯಕ	ಚಿಗಟೇರಿ	ಕ್ರಿ.ಶ.೧೬೮೭

* ಬಸವ ನಾಯಕ ಕುಂಟೂರು ಕ್ರಿ.ಶ.೧೭೨೧
* ಕೆಂಚನಾಯಕ ನೀಲಗುಂದ ಕ್ರಿ.ಶ.೧೭೪೨
* ಸಂಜೀವ ನಾಯಕ ಸೈನ್ಯಾಧಿಕಾರಿ ಕ್ರಿ.ಶ. ೭೪೨ರನಂತರ
* ಭರಮನಗೌಡ ಸೈನ್ಯಾಧಿಕಾರಿ ಕ್ರಿ.ಶ.೧೭೬೮ರ ನಂತರ
* ರಾಮಯ್ಯ ನಾಯಕ ವೀರದುರ್ಗ ಕ್ರಿ.ಶ. ೧೭೮೭ರನಂತರ

ಚಿಗಟೇರಿ ಶಿವನಯ್ಯ ಅಥವಾ ಶಿವಪ್ಪನಾಯಕ :

ಲಿಖಿತ ಚರಿತ್ರೆಯ ದಾಖಲೆಗಳಲ್ಲಿರುವಂತೆ ಚಿಗಟೇರಿ ಶಿವನಯ್ಯ ಹರಪನಹಳ್ಳಿಯ ಸಾಮಂತ ಪಾಳೇಗಾರನಾಗಿದ್ದನು. ಚಿಗಟೇರಿಯು ಹರಪನಹಳ್ಳಿಯ ವ್ಯಾಪ್ತಿಯಲ್ಲಿ ಬರುವ ಒಂದು ಸಣ್ಣ ಗ್ರಾಮವಾಗಿದೆ. ಈ ಪ್ರದೇಶವನ್ನು ಹರಪನಹಳ್ಳಿಯ ಪಾಳೇಗಾರರ ಆಜ್ಞೆಯ ಮೇರೆಗೆ ಅಲ್ಲಿನ ಊರಗೌಡ ಅಲ್ಲಿ ಆಳ್ವಿಕೆ ಮಾಡುತ್ತಿದ್ದನು. ಇವರಿಗೆ ತಳವಾರನಾಗಿದ್ದ ಚಿಗಟೇರಿ ಶಿವನಯ್ಯ ಮುಂದೆ ಸಾಮಂತ ಪಾಳೇಗಾರನಾದ ಸಂಗತಿಯನ್ನು ಸಿ.ಆರ್. ಶ್ಯಾಮಲ ಅವರು ಹೀಗೆ ಹೇಳುತ್ತಾರೆ. "ಒಮ್ಮೆ ಗೌಡರಿಂದ ಪಾಳೇಗಾರನಾದ ಮೊದಲನೆಯ ಬಸವಂತಪ್ಪ ನಾಯಕನಿಗೆ ಒಂದು ಪತ್ರವನ್ನು ತಂದಿದ್ದನು. ಆಗ ಪಾಳೇಗಾರ ಬಾಗಳಿಯ ಸಿದ್ಧನಗೌಡನೊಡನೆ ಜೂಜಾಡುತ್ತಿದ್ದನು. ಆಗ ಸೋಲುವುದರಲ್ಲಿದ್ದ ಪಾಳೇಗಾರನಿಗೆ ಚಿಗಟೇರಿ ಶಿವನಯ್ಯ ಸನ್ನೆ ಮಾಡಿ ಗೆಲುವಂತೆ ಮಾಡಿದನು. ಇದರಿಂದ ಸಂತೋಷಗೊಂಡ ಹರಪನಹಳ್ಳಿ ಪಾಳೇಗಾರ ಇವನನ್ನು ಚಿಗಟೇರಿಯ ಸಾಮಂತ ಅರಸನನ್ನಾಗಿ ಮಾಡಿದನು. ಇವನು ತನ್ನ ಒಡೆಯನಿಗೆ ವಿಧೇಯನಾಗಿ ನಿಷ್ಠಾವಂತನಾಗಿ ಇದ್ದುದರಿಂದ ಹರಪನಹಳ್ಳಿ ಪಾಳೇಗಾರ ಬಸವಂತನಾಯಕ ಇವನನ್ನು ಕುಮಾರ ಶಿವಪ್ಪನಾಯಕನೆಂದು ಕರೆಯುತ್ತಿದ್ದನು. ಈತನ ಕಾಲ ಸುಮಾರು ಕ್ರಿಶ ೧೬೮೭ ಎಂದು ಹೇಳಲಾಗುತ್ತದೆ"[೬] ಎಂದು ಚಿಗಟೇರಿ ಶಿವನಯ್ಯ ಸಾಮಂತ ಪಾಳೇಗಾರನಾದ ಸಂದರ್ಭವನ್ನು ಹೇಳುತ್ತಾರೆ. ಚಿಗಟೇರಿ ಶಿವನಯ್ಯ ಸಾಮಂತ ಪಾಳೇಗಾರನಾಗಿ, ಚಿಗಟೇರಿಯ ಕೋಟೆಗೆ ಆತನನ್ನು ಯಾವ ಕಾರಣಕ್ಕಾಗಿ ಸಾಮಂತ ದೊರೆಯನ್ನಾಗಿ ಮಾಡಿದರು ಎನ್ನುವ ಸಂಗತಿಯನ್ನು ಕುರಿತು ಸ್ಥಳೀಯ ಇತಿಹಾಸತಜ್ಞರಾದ ಕುಂ.ಬಾ. ಸದಾಶಿವಪ್ಪನವರು ಈ ರೀತಿಯಾಗಿ ಹೇಳುತ್ತಾರೆ. "ಚಿಗಟೇರಿ ಶಿವಪ್ಪ ಒಬ್ಬ ತಳವಾರ. ಆತನು ಹರಪನಹಳ್ಳಿ ಪಾಳೇಗಾರನಾದ ಮೊದಲನೇ ಬಸವಂತ ನಾಯಕ(೧೬೮೭-೧೭೦೫) ಇವರಿಗೆ ಅಧೀನನಾಗಿದ್ದನು. ಈ ಚಿಗಟೇರಿ ಶಿವಪ್ಪನ ರಾಜ ಭಕ್ತಿ ಮೆಚ್ಚಿ ಈ ತಳವಾರನಿಗೆ ಪಾಳೇಯಗಾರ ಪಟ್ಟ ಕಟ್ಟಿ ಚಿಗಟೇರಿ ಕೋಟೆಗೆ ಅರಸನೆಂದು ಸಾರಿ ಆಜ್ಞೆಯನ್ನು ಕಳಿಸಿದನು. ಹೀಗೆ ಅರಸನಾದ ಶಿವಪ್ಪನು, ಹರಪನಹಳ್ಳಿ ಅರಸರಿಗೆ ವಿಧೇಯನಾಗಿ ಚಿಗಟೇರಿ ಕೋಟೆಯನ್ನು ಕೆಲಕಾಲ ಆಳ್ವಿಕೆ ಮಾಡಿದನು."[೭] ಎಂದು ಹೇಳುತ್ತಾರೆ. ಹರಪನಹಳ್ಳಿ ಪಾಳೇಗಾರರ ಚಾರಿತ್ರಿಕ ಇತಿಹಾಸದ ಕುರಿತು ಇತಿಹಾಸತಜ್ಞರಾದ ಸಿ.ಆರ್.ಶ್ಯಾಮಲ ಮತ್ತು ಕುಂ.ಬಾ. ಸದಾಶಿವಪ್ಪವನರು

ಪಾಳೇಗಾರರ ಮೂಲ, ಅವರ ಆಡಳಿತ ವ್ಯವಸ್ಥೆ, ಸೈನ್ಯ ನಿರ್ವಹಣೆ, ಅವರ ಯುದ್ಧಗಳು, ರಾಜನೀತಿಗಳು ಕಲೆ ಮತ್ತು ವಾಸ್ತುಶಿಲ್ಪ ಕುರಿತು ಇತಿಹಾಸವನ್ನು ಬರೆದಿದ್ದಾರೆ. ಇವರು ನೀಡುವ ಆಧಾರಗಳು ಚಾರಿತ್ರಿಕ ದಾಖಲೆಗಳು ಈ ದಾಖಲೆಗಳನ್ನು ಆಧಾರವಾಗಿಸಿಕೊಂಡು ನೋಡಿದಾಗ ಬಾಲಬಸವರ ಮೌಖಿಕ ಕಾವ್ಯವಾದ ತುಮನೆಪ್ಪ ಹಾಡಿದ ಗೋಣಿ ಬಸವನ ಕಾವ್ಯದಲ್ಲಿ ಬರುವ ಹರಪನಹಳ್ಳಿ ಸಾಮಂತ ಪಾಳೇಗಾರನಾದ ಚಿಗಟೇರಿ ಶಿವನಯ್ಯ ದೊರೆಯನ್ನೇ ಹರಪನಹಳ್ಳಿ ಪಾಳೇಗಾರನೆಂದು ಕರೆದಿದ್ದಾರೆ. ಲಿಖಿತ ದಾಖಲೆಗಳು ಹೇಳುವಂತೆ ಚಿಗಟೇರಿ ಶಿವನಯ್ಯನಿಗೆ ರಾಜಕೀಯ ಸಿಕ್ಕ ಬಗೆಯನ್ನು ಬಾಲಬಸವ ತುಮನೆಪ್ಪ ಹಾಡುವ ಗೋಣಿಬಸಪ್ಪನ ಕಾವ್ಯದಲ್ಲಿರುವ ಈ ರೀತಿಯಾಗಿ ಹೇಳುತ್ತಾರೆ,

"ಕಲಿಯೊಳಗೆ ...

ಚಿಗಟೇರಿ ಗ್ರಾಮದಾಗೆ । ಆ ರಾಜ ಶಿವನೆನ ಮಾದೇವು ಮನವೇ.
ಚಿಗಟೇರಿ ಶಿವಪ್ಪನವರೇ । ಆ ರಾಜೋ ಶಿವನೆನ ಮಾದೇವು ಮನವೇ.
ಅಕ್ಕ ತಮ್ಮ ಇದ್ದಾರಯ್ಯೋ । ಆ ಸೋದರ ಮಾವ ತಾಜೀಜಿ
ಚಿಗಟೇರಿ ನಮ್ಮ ದೈವ । ಆ ಸೋದರ ಮಾವ ತಾಜೀಜಿ

ಶಿವನಯ್ಯರಿಗೆ ರಾಜಕೀಯ ಸಿಕ್ಕಿತೆ, ಆತ ಹರಪನಹಳ್ಳಿ ಸಿಂಹಾಸನ ಆಳುತ್ತಾನೆ. ಅರಮನೆ, ಸ್ಥಳ ಎಲ್ಲಾ ಚಿಗಟೇರಿ."[೮] ಎಂದು ಲಿಖಿತ ಚರಿತ್ರೆಯಲ್ಲಿ ದಾಖಲಾಗಿರುವಂತೆ, ಮೌಖಿಕ ಕಾವ್ಯದಲ್ಲಿ ಕೂಡ ಅದೇ ರೀತಿಯಾಗಿ ಹೇಳುತ್ತಾನೆ. ಹಾಗಾಗಿ ಲಿಖಿತ ಚರಿತ್ರೆಯಲ್ಲಿರುವ ಹರಪನಹಳ್ಳಿ ಸಾಮಂತ ಪಾಳೇಗಾರನೇ ಈ ಚಿಗಟೇರಿ ಶಿವನಯ್ಯ ಎನ್ನುವುದು ಈ ಹೇಳಿಕೆಗಳಿಂದ ಸ್ಪಷ್ಟವಾಗಿ ಕಂಡುಬರುತ್ತದೆ.

ಇತಿಹಾಸಕಾರರು ಲಿಖಿತ ಚರಿತ್ರೆಯಲ್ಲಿ ಹರಪನಹಳ್ಳಿ ಪಾಳೇಗಾರರ ಆಳ್ವಿಕೆ ಮಾಡಿದ ಕಾಲ ಮತ್ತು ಅವರ ಸಾಧನೆಗಳನ್ನು ಮಾತ್ರ ತಿಳಿಸುತ್ತಾರೆ. ಆದರೆ ಅದೇ ಕಾಲಘಟ್ಟದಲ್ಲಿ ನಡೆದುಹೋದ ಸಾಮಾಜಿಕ, ಸಾಂಸ್ಕೃತಿಕ ವಿದ್ಯಮಾನಗಳನ್ನು ಲಿಖಿತ ಚರಿತ್ರೆಯು ಗುರುತಿಸದೆ ಹೋಗಿರುವುದನ್ನು ಬಾಲಬಸವರ ಮೌಖಿಕ ಆಕರಗಳಿಂದ ತಿಳಿಯಬಹುದಾಗಿದೆ. ಮೌಖಿಕ ಸಾಹಿತ್ಯದಲ್ಲಿರುವ ಬಸವಂತಪ್ಪ ನಾಯಕ ಮತ್ತು ಚಿಗಟೇರಿ ಸಾಮಂತ ಪಾಳೇಗಾರನಾದ ಚಿಗಟೇರಿ ಶಿವನಯ್ಯ ಅವರ ಕಾಲದಲ್ಲಿ ನಡೆದ ಚಾರಿತ್ರಿಕ ಸಂಗತಿಗಳು ಈ ಬಾಲಬಸವರ ಮೌಖಿಕ ಕಾವ್ಯದಲ್ಲಿವೆ. ಅಂದರೆ ಮರುಳಸಿದ್ಧನ ಮೇಲೆ ದಾಳಿ ಮಾಡಿದ ಬಸವಂತಪ್ಪ ನಾಯಕ ಹರಪನಹಳ್ಳಿ ಪಾಳೇಗಾರರ ಎನ್ನುವುದು ಲಿಖಿತ ಚರಿತ್ರೆಯಲ್ಲಿ ಸ್ಪಷ್ಟವಾಗಿದೆ. ಆದರೆ ದಾಳಿಯ ಉದ್ದೇಶ ಮತ್ತು ಅದರಿಂದಾದ ಪರಿಣಾಮಗಳನ್ನು ಲಿಖಿತ ಚರಿತ್ರೆಯಲ್ಲಿ ದಾಖಲಿಸಿಲ್ಲ. ಮೌಖಿಕ ಆಕರಗಳು ನೀಡುವ ಚಾರಿತ್ರಿಕ ಸಂಗತಿಗಳಿಗೆ ಕಾರಣನಾದ ಬಸವಂತಪ್ಪ ನಾಯಕ ಯಾರು? ಅವನ

ಕಾಲವೇನು? ಅದೇ ಕಾಲಘಟ್ಟದಲ್ಲಿ ಮರುಳಸಿದ್ಧನಿದ್ದನೇ? ಬಸವಂತಪ್ಪ ನಾಯಕ ಯಾಕೆ ಹರಪನಹಳ್ಳಿ ಬಿಟ್ಟು ಜರಿಮಲೆ ಸಂಸ್ಥಾನಕ್ಕೆ ಬಂದ ಎನ್ನುವ ಕುರಿತು ಅಧ್ಯಯನಗಳು ನಡೆಯಬೇಕಾಗಿದೆ. ಅದೇ ರೀತಿ ಚಿಗಟೇರಿ ಶಿವನಯ್ಯ ಕುರಿತು ಲಿಖಿತ ಚಾರಿತ್ರಿಕ ದಾಖಲೆಗಳು ಕೂಡ ಅತೀ ಕಡಿಮೆ. ಆದರೆ ಆತನು ಹರಪನಹಳ್ಳಿಯ ಸಾಮಂತ ಪಾಳೇಗಾರ ಎನ್ನುವುದು ಚರಿತ್ರೆಯಲ್ಲಿ ಸ್ಪಷ್ಟವಾಗಿದೆ. ಚಿಗಟೇರಿ ಶಿವನಯ್ಯ ಮತ್ತು ಗೋಣಿಬಸಪ್ಪನು ಸಮಕಾಲೀನವರೇ ಎನ್ನುವುದರ ಕುರಿತು ಮತ್ತಷ್ಟು ಅಧ್ಯಯನ ಮಾಡಬೇಕಾಗಿದೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಸಂಗತಿ ಎಂದರೆ ಗೋಣಿಬಸಪ್ಪ. ಹರಪನಹಳ್ಳಿ ಪಾಳೇಗಾರರ ಕಾಲದಲ್ಲಿ ಗೋಣಿಸಬಪ್ಪನು ಇದ್ದ ಎನ್ನುವುದಕ್ಕೆ ಯಾವ ದಾಖಲೆಗಳಿಲ್ಲ. ಆದರೆ ಚಿಗಟೇರಿ ಶಿವನಯ್ಯನ ಕುರಿತು ಮಾತ್ರ ಚರಿತ್ರೆಕಾರರು ಹೇಳುತ್ತಾರೆ. ಹಾಗಾದರೆ ಚಾರಿತ್ರಿಕ, ಸಾಂಸ್ಕೃತಿಕ ನಾಯಕನಾದ ಗೋಣಿಬಸಪ್ಪನಿಗೆ ಚರಿತ್ರೆಯಲ್ಲಿ ಯಾಕೆ ಸ್ಥಾನ ನೀಡಿಲ್ಲ? ಎನ್ನುವ ಪ್ರಶ್ನೆ ನಮ್ಮ ಮುಂದೆ ಎದುರಾಗುತ್ತದೆ.

ಚಿಗಟೇರಿ ಶಿವನಯ್ಯನಿಗೂ ಗೋಣಿಬಸಪ್ಪನಿಗೂ ಇರುವ ಸಂಬಂಧ

ಬಾಲಬಸವ ತುಮನೆಪ್ಪ ಹಾಡುವ ಗೋಣಿಬಸಪ್ಪನ ಕಾವ್ಯದಲ್ಲಿನ ಚಿಗಟೇರಿ ಶಿವಯ್ಯನನ್ನು ಹರಪನಹಳ್ಳಿ ಪಾಳೇಗಾರ ಎಂದು ಕರೆಯುತ್ತಾರೆ. ಮೂಲದಲ್ಲಿ ಹರಪನಹಳ್ಳಿಯ ಪಾಳೇಗಾರರು ಬೇರೆಯಾಗಿದ್ದಾರೆ. ಆ ಕಾಲಘಟ್ಟದಲ್ಲಿ ಹರಪನಹಳ್ಳಿಯನ್ನು ಸೋಮಶೇಖರನ ಸಾಮಂತ ರಾಜ ಆಳ್ವಿಕೆ ಮಾಡುತ್ತಿದ್ದನು. ಚಿಗಟೇರಿ ಶಿವನಯ್ಯ ಗೋಣಿಬಸಪ್ಪನ ಸೋದರಮಾವ. ಚಿಗಟೇರಿ ಶಿವನಯ್ಯ ತನ್ನ ಅಕ್ಕನ ಮಗನಾದ ಗೋಣಿಬಸಪ್ಪನಿಗೆ ಅನೇಕ ರೀತಿಯಲ್ಲಿ ಕಷ್ಟ ಕಾರ್ಪಣ್ಯಗಳನ್ನು ನೀಡುತ್ತಾನೆ. ಇದಕ್ಕೆ ಕಾರಣ ಗೋಣಿ ಬಸಪ್ಪನ ಮಠದ ಆಸ್ತಿ ವಿಷಯ ಮತ್ತು ಸೋದರಿ ಕನಕಮ್ಮ ಹಾಕಿದ ಸವಾಲು. ಈ ಎರಡು ಕಾರಣಗಳಿಂದ ಚಿಗಟೇರಿ ಶಿವನಯ್ಯ ಪದೇ ಪದೇ ಗೋಣಿಬಸಪ್ಪನ ಮೇಲೆ ಮಾಟ, ಮಂತ್ರ, ಅಂತ್ರ ತಂತ್ರ, ಬೇಡರ ಸೈನ್ಯವನ್ನು ಆತನ ಮೇಲೆ ದಾಳಿ ಮಾಡುವಂತೆ ಆಜ್ಞೆ ಮಾಡುತ್ತಾನೆ. ಕೊನೆಗೆ ಯುದ್ಧ ಸಾರಿ, ಯುದ್ಧದಲ್ಲಿ ಗುಮ್ಮಗೋಳದ ಪಿಕನಗೌಡನ ಮಕ್ಕಳ ಕೈಯಲ್ಲಿ ಚಿಗಟೇರಿ ಶಿವನಯ್ಯ ಮರಣ ಹೊಂದುತ್ತಾನೆ. ಈ ಎಲ್ಲ ಸಂಗತಿಗಳು ಲಿಖಿತ ಚರಿತ್ರೆಯಲ್ಲಿ ದಾಖಲಾಗಿಲ್ಲ. ಬಾಲಬಸವರ ಮೌಖಿಕ ಕಾವ್ಯಗಳಲ್ಲಿರುವ ಚಾರಿತ್ರಿಕ ಸ್ಥಳಗಳು, ಮಠ ಮಾನ್ಯಗಳು ವಾಸ್ತವವಾಗಿ ಈಗಲೂ ಕಂಡುಬರುತ್ತವೆ.

ಗೋಣಿಬಸಪ್ಪನ ತಾಯಿ ದೇವದಾಸಿಯಾಗಿರುವ ಕಾರಣಕ್ಕೆ ಚಿಗಟೇರಿ ಶಿವನಯ್ಯ ಸೋದರಿಯನ್ನು ಪ್ರಭುತ್ವದ ಕಣ್ಣಿನಿಂದ ನೋಡಿ ಅವಳನ್ನು ಅರಮನೆಯಿಂದ ಹೊರಹಾಕುತ್ತಾನೆ. ಪ್ರಭುತ್ವದಲ್ಲಿ ದೇವದಾಸಿ ಆಚರಣೆ ಸಾಮಾನ್ಯ ಜನತೆಯಲ್ಲಿರಬೇಕು. ಆದರೆ ಶಿವನಯ್ಯ ಹತ್ತು ಊರ ದೊರೆ. ದೊರೆಯ ಮನೆಯಲ್ಲಿ ಈ ದೇವದಾಸಿ ಪದ್ಧತಿಯು ಇದೆ ಎಂದರೆ ರಾಜನಿಗೆ ಅವಮಾನ ಎಂದು ಭಾವಿಸಿದ ಚಿಗಟೇರಿ ಶಿವನಯ್ಯ ತನ್ನ ಅಕ್ಕನಾದ ಕನಕಮ್ಮನನ್ನು ಮನೆಯಿಂದ ಹೊರ ಹಾಕುವುದರ ಮೂಲಕ ತನ್ನ ಪ್ರಭುತ್ವದ ದಬ್ಬಾಳಿಕೆಯನ್ನು ಮೆರೆಯುತ್ತಾನೆ. ಕನಕಮ್ಮ ತಾನು

ಗಂಡು ಮಗುವಿಗೆ ಜನ್ಮ ನೀಡಿದಾಗ ತನಗೆ ಅವಮಾನ ಮಾಡಿ, ಮನೆಯಿಂದ ಹೊರಹಾಕಿದ ತನ್ನ ತಮ್ಮನ ವಿರುದ್ಧ ಶಪಥ ಮಾಡುವುದರ ಕುರಿತು ಬಾಲಬಸವ ತುಮನೆಪ್ಪ ಹಾಡಿದ ಗೋಣಿಬಸಪ್ಪನ ಕಾವ್ಯದಲ್ಲಿ ಹೀಗಿದೆ. "ಶಿವನಯ್ಯ ನಿನಗೆ ಅಳಿಯ ಹುಟ್ಟಿದ. ನನಗೆ ಇದೇ ಬಡತನ ಇರ್ಲಿ, ನಿನಗೆ ಸಿಂಹಾಸನ ಇರ್ಲಿ, ಯಾವ ಕಾಲಕ್ಕಾದ್ರೂ ಕೂಡ

ರಾಜಾ ಪಟ್ಟ ನನ್ನದೈಯ್ಯೋ । ಆ ಸೋಕಿರ ಮೂವ ತಾಜೀಜಿ
ನಿನ್ನ ಅಳಿಯ ಹುಟ್ಯಾನಯ್ಯೋ । ಆ ಸೋಕಿರ ಮೂವ ತಾಜೀಜಿ"[೯]

ಎಂದು ತನಗೆ ಈ ಹಿಂದೆ ನೀಡಿದ ಬೋಕಿಪಟ್ಟವನ್ನು ಮತ್ತೆ ವಾಪಸ್ ನಿನಗೆ ನೀಡುತ್ತೇನೆ. ಪ್ರಭುತ್ವ ಸಿಂಹಾಸನ, ನಿನ್ನ ರಾಜಕೀಯ ಯಾವುದು ಶಾಶ್ವತವಲ್ಲ, ಅದನ್ನು ನನ್ನ ಮಗ ಮರಳಿ ಪಡೆದುಕೊಳ್ಳುತ್ತಾನೆ. ಎನ್ನುವ ಆಶಯವನ್ನು ಕನಕಮ್ಮ ತನಗೆ ಗಂಡುಮಗು ಹುಟ್ಟಿದ ಸಂದರ್ಭದಲ್ಲಿ ಹೇಳುತ್ತಾಳೆ. ಕನಕಮ್ಮನನ್ನು ಹಿಂದೆ ಶಿವನಯ್ಯ ಅರಮನೆಯಿಂದ ಹೊರಹಾಕಿದಾಗ ರಾಜಪಟ್ಟ ನಿನ್ನದಯ್ಯ, ಬೋಕಿಪಟ್ಟ ನನ್ನದು ಎಂದು ಕರೆದುಕೊಂಡಿರುತ್ತಾಳೆ. ಹಾಗೆಯೇ ನನ್ನ ಮಗ ಹುಟ್ಟಿದಾಗ ತನಗಾದ ಅವಮಾನವನ್ನು ಮಗನ ಮೂಲಕ ತೀರಿಸಿಕೊಳ್ಳುವ ಸಲುವಾಗಿ 'ರಾಜಪಟ್ಟ ನನ್ನದೈಯ್ಯೋ' ಎಂದು ಹೇಳಿಕೊಳ್ಳುವಾಗ ತಾನು ಈ ಹಿಂದೆ ಪ್ರಭುತ್ವವು ಮಾಡಿದ ಅವಮಾನವನ್ನು ವಿರೋಧಿಸುವ ಮಹಿಳೆಯಾಗಿ ಕಾಣುತ್ತಾಳೆ.

ಜರಿಮಲೆ ಪಾಳೇಗಾರರು

ಜರಿಮಲೆ ಸಂಸ್ಥಾನದ ಪಾಳೇಗಾರರು ಕೂಡ್ಲಿಗಿ ಭೌಗೋಳಿಕ ಪ್ರದೇಶದಲ್ಲಿ ಆಳ್ವಿಕೆ ಮಾಡಿದವರು. ಇವರು ಮೂಲತಃ ಕಂಚಿಯ ಕಡೆಯವರು. ಜಾತಿಯಲ್ಲಿ ಬೇಡರು. ಇವರು ವಿಜಯನಗರ ಸಾಳುವ ವೀರ ನರಸಿಂಹನ ಕಾಲದಿಂದ ಟಿಪ್ಪು ಸುಲ್ತಾನನವರೆಗೆ ಅಂದರೆ ಕ್ರಿ.ಶ.೧೪೮೫ ರಿಂದ ೧೭೮೭ರವರೆಗೆ ಸುಮಾರು ೩೦೦ ವರ್ಷಗಳ ಕಾಲ ಜರಿಮಲೆಯ ಪಾಳೇಗಾರರು ಜರಿಮಲೆ ಸಂಸ್ಥಾನವನ್ನು ಆಳ್ವಿಕೆ ಮಾಡಿದ್ದಾರೆ. ಸಿ.ಆರ್.ಶ್ಯಾಮಲ ಅವರು ಜರಿಮಲೆ ಸಂಸ್ಥಾನದ ಪಾಳೇಗಾರರ ಬಗ್ಗೆ ಈ ರೀತಿಯಾದ ಅಭಿಪ್ರಾಯಪಡುತ್ತಾರೆ. "ಪಾಪಣ್ಣ ನಾಯಕ ಸಾಳುವ ವೀರನರಸಿಂಹನ ಸೈನ್ಯದಲ್ಲಿದ್ದವನು. ಇವನ ಶೌರ್ಯ ಮತ್ತು ಸಾಹಸಗಳನ್ನು ನೋಡಿದ ಚಕ್ರವರ್ತಿ ಈತನಿಗೆ ಜರಿಮಲೆ, ವಡ್ಡು-ದರೋಜಿಗಳನ್ನು ಬಳುವಳಿಯಾಗಿ ನೀಡಿದನು. ಮುಂದೆ ಇವನ ಮಗನಾದ ಪೆನ್ನಪ್ಪ ನಾಯಕ ಮತ್ತು ಆತನ ಮಕ್ಕಳಾದ ಬಸವಂತರಾಜ, ಭೂಮಿ ರಾಜ ಮತ್ತು ಭೂಮಿ ಸಿದ್ಧರಾಜ ಎಂಬ ಧೈರ್ಯ, ಸಾಹಸಿಗಳಾದ ಮೂರು ಜನ ಗಂಡುಮಕ್ಕಳು, ಜಂಪಾನಾಗತಿ ಎಂಬ ಹೆಣ್ಣುಮಗಳು ಇದ್ದರು. ಜಂಪಾನಾಗತಿಯನ್ನು ಹರಪನಹಳ್ಳಿ ದಾದಾ ನಾಯಕನಿಗೆ ಮದುವೆ ಮಾಡಿಕೊಟ್ಟಿದ್ದರಿಂದ ಪೆನ್ನಪ್ಪ ನಾಯಕನ ನಂತರ ಹಿರಿಯ ಮಗನಾದ ಬಸವಂತರಾಜನಿಗೆ ಪಟ್ಟ ಕಟ್ಟಿದರು."[೧೦] ಜರಿಮಲೆಯಲ್ಲಿ ಆಳ್ವಿಕೆ ಮಾಡಿದ ಪಾಳೇಗಾರರ ಮೂಲ ಮತ್ತು ಅವರ

ನಂತರ ಯಾರ್ಯಾರು ಆಳ್ವಿಕೆ ಮಾಡಿದ್ದಾರೆ ಎನ್ನುವ ಕುರಿತು ಮಾಹಿತಿಯನ್ನು ನೀಡುತ್ತಾರೆ.

ಲಿಖಿತ ಚರಿತ್ರೆಯಲ್ಲಿ ಪೆನ್ನಪ್ಪ ನಾಯಕನ ಮಗನಾದ 'ಬಸವಂತಪ್ಪ ರಾಜ' ಎಂದು ದಾಖಲಾಗಿದೆ. ಇದೇ ಬಸವಂತರಾಜ ಹರಪನಹಳ್ಳಿಗೂ ಸಂಬಂಧಪಟ್ಟವನು ಎಂಬುದಕ್ಕೆ ಬಸವಂತಪ್ಪ ರಾಜನಿಗೆ ರಾಜಪಟ್ಟ ಕಟ್ಟಿದ್ದು ಹರಪನಹಳ್ಳಿಯ ಪಾಳೇಗಾರನಾದ ದಾದಾ ನಾಯಕ. ಹಾಗಾಗಿ ಹರಪನಹಳ್ಳಿ ಮತ್ತು ಜರಿಮಲೆ ನಾಯಕರಲ್ಲಿ ಕೊಡುಕೊಳ್ಳುವ ಸಂಬಂಧವಿತ್ತು. ಈ ಕಾರಣಕ್ಕಾಗಿ ಬಾಲಬಸವರು ತಮ್ಮ ಮೌಖಿಕ ಕಾವ್ಯಗಳಲ್ಲಿ ಪ್ರಧಾನವಾಗಿ ಹರಪನಹಳ್ಳಿಯ ಸಾಮಂತ ಪಾಳೇಗಾರರನಾದ ಚಿಗಟೇರಿ ಶಿವನಯ್ಯ ಮತ್ತು ಜರಿಮಲೆ ಸಂಸ್ಥಾನದ ಪಾಳೇಗಾರನಾದ ಬಸವಂತಪ್ಪ ರಾಜನನ್ನು ಕೇಂದ್ರವಾಗಿಸಿಕೊಂಡು ಮೌಖಿಕ ಕಾವ್ಯಗಳನ್ನು ಹಾಡುತ್ತಾರೆ. ಬಾಲಬಸವ ತುಮನೆಪ್ಪ ಹಾಡುವ ಗೋಣಿಬಸಪ್ಪನ ಕಾವ್ಯದಲ್ಲಿರುವ ಚಿಗಟೇರಿ ಶಿವನಯ್ಯ ಚಾರಿತ್ರಿಕವಾಗಿ ಹರಪನಹಳ್ಳಿ ಪಾಳೇಗಾರರ ಸಾಮಂತ ಪಾಳೇಗಾರ. ಮರುಳಸಿದ್ಧನ ಕಾವ್ಯದಲ್ಲಿ ಬರುವ ಬಸವಂತಪ್ಪ ರಾಜ ಕೂಡ ಹರಪನಹಳ್ಳಿ ಮತ್ತು ಜರಿಮಲೆಯ ಪಾಳೇಗಾರ ಎನ್ನುವುದಕ್ಕೆ ಲಿಖಿತ ಚರಿತ್ರೆಗಳು ಸಾಕ್ಷಿಯಾಗಿವೆ.

ಲಿಖಿತ ಚಾರಿತ್ರಿಕ ದಾಖಲೆಗಳಲ್ಲಿ ಮೆಕೆಂಜಿಯ ಹಸ್ತಪ್ರತಿಯು ಒಂದು ಚಾರಿತ್ರಿಕ ದಾಖಲೆಯಾಗಿದೆ. ಆ ಹಸ್ತಪ್ರತಿಯಲ್ಲಿ ಬಸವಂತರಾಜ ಕುರಿತು ಉಲ್ಲೇಖವಿರುವುದನ್ನು ಸಿ.ಆರ್.ಶ್ಯಾಮಲ ಹೀಗೆ ಹೇಳುತ್ತಾರೆ. "ಮೆಕೆಂಜಿಯ ಹಸ್ತಪ್ರತಿಯಲ್ಲಿ ಪೆನ್ನಪ್ಪ ನಾಯಕನ ನಂತರ ಅವನ ಹಿರಿಯ ಮಗನಾದ ಬಸವಂತರಾಜ ಆತನಿಗೆ ಸಹಾಯಕರಾಗಿದ್ದ ಕಾಲದಲ್ಲಿ ಭೂಮಿರಾಜ, ಭೂದಿಸಿದ್ಧರಾಜ ಆತನಿಗೆ ಸಹಾಯಕರಾಗಿದ್ದು, ರಾಜ್ಯದ ಉನ್ನತಿಗೆ ಕಾರಣರಾದರು. ಅಲ್ಲದೆ ಬಸವಂತರಾಜ ತನ್ನ ರಾಜ್ಯವನ್ನು ಏಳು ಜನ ಮಕ್ಕಳಿಗೆ ಹಂಚಿದನೆಂದು ಮೆಕೆಂಜಿಯು ತನ್ನ ದಾಖಲೆಯಲ್ಲಿ ಹೇಳುತ್ತಾನೆ."[೧೧] ಎಂದು ಬಸವಂತಪ್ಪ ರಾಜನ ಕುರಿತು ಸ್ಪಷ್ಟವಾದ ದಾಖಲೆಯನ್ನು ನೀಡುತ್ತಾರೆ.

ಒಟ್ಟಾರೆ ಚಾರಿತ್ರಿಕ ದಾಖಲೆಗಳಲ್ಲಿರುವ ಸಂಗತಿಯನ್ನು ಸೂಕ್ಷ್ಮವಾಗಿ ಗಮನಿಸಿದಾಗ ಹರಪನಹಳ್ಳಿ ಮತ್ತು ಜರಿಮಲೆ ಪಾಳೆಯಗಾರರು ಮಧ್ಯ ಕರ್ನಾಟಕದಲ್ಲಿನ ವಿಜಯನಗರ ಸಾಮ್ರಾಜ್ಯವು ಪತನವಾದ ನಂತರದಿಂದ ಟಿಪ್ಪುವಿನ ಪತನದವರೆಗೆ ಈ ಭೂಪ್ರದೇಶವನ್ನು ಆಳ್ವಿಕೆ ಮಾಡಿರುವುದನ್ನು ಚಾರಿತ್ರಿಕ ಆಕರಗಳು ದೃಢೀಕರಿಸಿವೆ. ಅಲ್ಲದೆ ಈ ಎರಡು ಪಾಳೇಗಾರರ ಮನೆತನಗಳಲ್ಲಿರುವ ಧಾರ್ಮಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಚರಿತ್ರೆಯು ಅಲ್ಪ ಪ್ರಮಾಣದಲ್ಲಿ ಸಿಕ್ಕಿರುವ ದಾಖಲೆಗಳಿಂದ ಇತಿಹಾಸ ತಜ್ಞರು ಕಟ್ಟಿಕೊಟ್ಟಿದ್ದಾರೆ. ಆದರೆ ಇವುಗಳಲ್ಲಿ ಅಂದಿನ ಸಾಮಾಜಿಕ, ಸಾಂಸ್ಕೃತಿಕ ವಿಷಯಗಳು ಅಷ್ಟಾಗಿ ಕಂಡುಬರುವುದಿಲ್ಲ. ಇದರಿಂದ ಹರಪನಹಳ್ಳಿ ಪಾಳೇಗಾರರ ಸಾಮಂತ ಪಾಳೇಗಾರ ಚಿಗಟೇರಿ ಶಿವನಯ್ಯ ಮತ್ತು ಗೋಣಿಬಸಪ್ಪನ ನಡುವಿನ ಸಂಘರ್ಷಮಯ ಚರಿತ್ರೆಯನ್ನು ಬಾಲಬಸವ ತುಮನೆಪ್ಪ ತನ್ನ ಮೌಖಿಕ ಕಾವ್ಯದಲ್ಲಿ ಕಟ್ಟಿಕೊಡುತ್ತಾರೆ. ಅದೇ ರೀತಿ ಜರಿಮಲೆ ಮತ್ತು ಹರಪನಹಳ್ಳಿಯ ಪಾಳೇಗಾರನಾದ ಬಸವಂತಪ್ಪ ರಾಜ ಮತ್ತು ಮರುಳಸಿದ್ಧನ ನಡುವಿನ ಚಾರಿತ್ರಿಕ ಸಂಗತಿಯನ್ನು ಮರುಳಸಿದ್ಧನ ಕಾವ್ಯದ ಮೂಲಕ ನಿರೂಪಿಸುವ ಕಾರ್ಯವನ್ನು

ಬಾಲಬಸವ ಪರಂಪರೆಯ ಮೌಖಿಕ ಸಾಹಿತ್ಯವು ಮಾಡುತ್ತದೆ.

ಹರಪನಹಳ್ಳಿಯ ಪಾಳೇಗಾರರು ಮತ್ತು ಜರಿಮಲೆ ಪಾಳೇಗಾರರು ತಮ್ಮ ಸಾಮ್ರಾಜ್ಯ ವಿಸ್ತರಣೆ, ಯುದ್ಧ, ದತ್ತಿ ದಾನಗಳ ಬಗ್ಗೆ ಶಾಸನಗಳಿವೆ. ಇವರು ವಿಜಯನಗರ ಸಾಮ್ರಾಜ್ಯದ ಪತನದ ನಂತರ ಮಧ್ಯ ಕರ್ನಾಟಕದ ಭೂಭಾಗವನ್ನು ಆಳ್ವಿಕೆ ಮಾಡಿದವರು. ಸ್ಥಳೀಯರಾಗಿದ್ದರಿಂದ ಇವರ ಚರಿತ್ರೆಗಳು ಇತಿಹಾಸದಲ್ಲಿ ಅಲ್ಪ ಪ್ರಮಾಣದಲ್ಲಿ ದಾಖಲಾಗಿವೆ. ಚಾರಿತ್ರಿಕ ದಾಖಲೆಗಳು ಕೆಲವೊಂದು ಸೂಕ್ಷ್ಮ ಸಂಗತಿಗಳನ್ನು ದಾಖಲಿಸದೇ ಹೋಗಿರಬಹುದು. ಇವರ ಕಾಲದಲ್ಲಿದ್ದ ಚಾರಿತ್ರಿಕ ಮತ್ತು ಸಾಂಸ್ಕೃತಿಕ ನಾಯಕರಾದ ಗೋಣಿಬಸಪ್ಪ ಮತ್ತು ಮರುಳಸಿದ್ಧ ಮಹಾದೇವ ಬಗ್ಗೆ ಲಿಖಿತ ಚಾರಿತ್ರಿಕ ದಾಖಲೆಗಳು ಕಡಿಮೆ. ಆದರೆ ಅವರ ಜೀವನಚರಿತ್ರೆಯ ಸಂಘರ್ಷಮಯ ಬದುಕಿನ ವಿವರಗಳನ್ನು ಸ್ಥಳೀಯ ಮೌಖಿಕ ಕಥೆ ಮತ್ತು ಕಾವ್ಯಗಳಲ್ಲಿ ಕಾಣಬಹುದಾಗಿದೆ. ಬಾಲಬಸವರು ಮೂಲತಃ ಹರಪನಹಳ್ಳಿಯ ಸನ್ಯಾಸಿ ಮಠದವರು. ಇವರಿಗೆ ದೀಕ್ಷೆ ನೀಡುವ ಮಠ ಎಂದರೆ ಅದು ಉಜ್ಜಯಿನಿಯ ಮರುಳಸಿದ್ಧೇಶ್ವರ ಮಠ. ಬಾಲಬಸವರು ದೈವಕ್ಕೆ ನಡೆದುಕೊಳ್ಳುವುದು ಗೋಣಿಬಸಪ್ಪನಿಗೆ. ಈ ಎರಡು ಕಾರಣಗಳಿಂದ ಇವರ ಪರಂಪರೆಯವರ ಬಾಯಿಯಲ್ಲಿ ಈ ಇಬ್ಬರ ಬಗ್ಗೆ ಕಥೆ ಕಟ್ಟಿ ಹಾಡುವ ಪರಿಪಾಟ ಬೆಳೆದಿರಬೇಕು. ಇದರಿಂದ ಇವರು ಮಧ್ಯ ಕರ್ನಾಟಕದ ಸಾಂಸ್ಕೃತಿಕ ನಾಯಕರುಗಳಾದ ಗೋಣಿಬಸಪ್ಪ ಮತ್ತು ಮರುಳಸಿದ್ಧನ ಕುರಿತು ಮೌಖಿಕ ಕಾವ್ಯಗಳನ್ನು ಹಾಡುತ್ತಾರೆ. ಇವರ ಮೌಖಿಕ ಕಾವ್ಯಗಳಲ್ಲಿ ಸ್ಥಳೀಯ ಚಾರಿತ್ರಿಕ ಅಂಶಗಳು ಹೆಚ್ಚಾಗಿ ಕಂಡುಬರುತ್ತವೆ. ಗೋಣಿಬಸಪ್ಪನ ಸೋದರಮಾವನಾದ ಹರಪನಹಳ್ಳಿ ಸಾಮಂತ ಪಾಳೇಗಾರ ಚಿಗಟೇರಿ ಶಿವನಯ್ಯನ ಯುದ್ಧ, ದಾಳಿ, ಮಾಟ ಮಂತ್ರಗಳ ಮೂಲಕ ಗೋಣಿಬಸಪ್ಪನಿಗೆ ನೀಡುವ ಹಿಂಸೆ, ಕಾವ್ಯದಲ್ಲಿ ವ್ಯಕ್ತಗೊಂಡಿರುವ ಸಂಗತಿಗಳು ಮತ್ತು ಸ್ಥಳಗಳು ಚಾರಿತ್ರಿಕ ಸ್ಥಳಗಳಾಗಿವೆ. ಇದರಿಂದ ಇವರ ನಡುವೆ ನಡೆದಿರಬಹುದಾದ ಸಂಗತಿಗಳನ್ನು ನಾವು ಬಾಲಬಸವ ತುಮನೆಪ್ಪ ಹಾಡುವ ಗೋಣಿಬಸಪ್ಪನ ಕಾವ್ಯದಲ್ಲಿ ಕಾಣಬಹುದು. ಅದೇ ರೀತಿ ಜರಿಮಲೆ ಪಾಳೇಗಾರನಾದ ಬಸವಂತರಾಜ ಮತ್ತು ಮರುಳಸಿದ್ಧನ ನಡುವೆ ನಡೆದ ಸಾಮಾಜಿಕ ಘರ್ಷಣೆಯು ಉಜ್ಜಯಿನಿ ಮಠದ ಮೇಲಾಗಿದೆ. ಇದು ಚರಿತ್ರೆಯಲ್ಲಿ ಎಲ್ಲಿಯೂ ದಾಖಲಾಗಿಲ್ಲ. ಹಾಗಾಗಿ ಇವರ ನಡುವಿನ ಚಾರಿತ್ರಿಕ ಸಂಗತಿಯನ್ನು ಮರುಳಸಿದ್ಧನ ಕಾವ್ಯ ನೀಡುವ ಆಕರಗಳ ಮೂಲಕ ನೋಡಬಹುದಾಗಿದೆ.

ಸ್ಥಳೀಯ ಚರಿತ್ರೆಯಲ್ಲಿ ಅನೇಕ ಗೊಂದಲಗಳಿವೆ. ಧಾರ್ಮಿಕ ಅಸಮಾನತೆಯ ಕಟ್ಟುಪಾಡು ಕಂದಾಚಾರಗಳನ್ನು ವಿರೋಧಿಸುವ ಸಿದ್ಧ ಅವತಾರ ಪುರುಷರ ಬಗ್ಗೆ ಲಿಖಿತ ಚರಿತ್ರೆಯಲ್ಲಿ ದಾಖಲಾಗದೆ ಹೋಗಿರುವುದರಿಂದ ಅವುಗಳನ್ನು ಮೌಖಿಕ ಕಾವ್ಯಗಳು ತಮ್ಮ ಸ್ಮೃತಿಪಟಲದಲ್ಲಿ ದಾಖಲಿಸಿಕೊಂಡ ಪರಿಣಾಮವಾಗಿ ಅವರ ಜೀವನಕಥೆಗಳು ಮೌಖಿಕ ಹಾಡಿನ ರೂಪದಲ್ಲಿ ತಮ್ಮ

ಮುಂದಿವೆ. ಮೌಖಿಕ ಕಾವ್ಯಗಳನ್ನು ಹಾಡುವ ಕಲಾವಿದರು ತಮ್ಮ ಮತ್ತು ಸಮಾಜದ ನಡುವಿನ ಚಾರಿತ್ರಿಕ ಸಂಗತಿಗಳ ಕೊಂಡಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ದಕ್ಷಿಣ ಕರ್ನಾಟಕದಲ್ಲಿ ಅದರಲ್ಲೂ ಮೈಸೂರು ಭಾಗದಲ್ಲಿರುವ ನೀಲಗಾರರು ಮತ್ತು ದೇವರಗುಡ್ಡದವರು ಕೂಡ ಇದೇ ಮಾದರಿಯನ್ನು ಬಳಸಿಕೊಂಡು ಕಥೆ ಮಾಡುತ್ತಾರೆ. ಆ ಪ್ರದೇಶದಲ್ಲಿ ಮಲೆ ಮಾದಪ್ಪ ಮತ್ತು ಮಂಟೇಸ್ವಾಮಿಯವರ ಜೀವನದಲ್ಲಿ ಧರ್ಮ, ಪ್ರಭುತ್ವ ಮತ್ತು ಸಮಾಜ ಅವರಿಗೆ ಅನೇಕ ಕಷ್ಟಗಳನ್ನು ನೀಡುತ್ತವೆ. ಅವುಗಳನ್ನು ಪರಿಹರಿಸಲು ಪವಾಡಗಳನ್ನು ಮಾಡುವುದರ ಮೂಲಕ ಸಮುದಾಯಗಳ ಸಾಂಸ್ಕೃತಿಕ ನಾಯಕರಾಗಿದ್ದಾರೆ. ಇದರ ಕುರಿತು ಇತಿಹಾಸದಲ್ಲಿ ದಾಖಲಾಗಿರುವ ಸಂಗತಿ ಅತಿ ಕಡಿಮೆ. ಆದರೆ ನೀಲಗಾರರು ಮತ್ತು ದೇವರಗುಡ್ಡದವರು ಮೌಖಿಕ ಕಾವ್ಯಗಳಲ್ಲಿ ಅವರ ಜೀವನದ ಕುರಿತಾದ ಸಂಪೂರ್ಣ ವಿವರಗಳನ್ನು ನಾವು ಕಾಣಬಹುದಾಗಿದೆ. ಅದೇ ಮಾದರಿಯಲ್ಲಿ ಮಧ್ಯ ಕರ್ನಾಟಕದಲ್ಲಿನ ಗೋಣಿಬಸಪ್ಪ ಮತ್ತು ಮರುಳಸಿದ್ಧನು ಕೂಡ ಈ ಭಾಗದ ಸಾಂಸ್ಕೃತಿಕ ಚಾರಿತ್ರಿಕ ನಾಯಕರ ಕುರಿತು ಚರಿತ್ರೆಯಲ್ಲಿ ಉಲ್ಲೇಖವಿರುವುದು ತೀರ ಅತ್ಯಲ್ಪ. ಇವರ ಸಂಘರ್ಷಮಯ ಬದುಕಿಗೆ ಧರ್ಮ, ಜಾತಿ, ಪ್ರಭುತ್ವ ಮತ್ತು ಸಮಾಜವು ಹೇಗೆ ಕಾರಣವಾಗಿದೆ. ಎಂಬುದನ್ನು ಈ ಭಾಗದಲ್ಲಿನ ಮೌಖಿಕ ಪರಂಪರೆಯಾದ ಬಾಲಬಸವರ ಮೌಖಿಕ ಕಾವ್ಯಗಳನ್ನು ಆಕರವಾಗಿ ಬಳಸಿಕೊಂಡು ಸ್ಥಳೀಯ ಮತ್ತು ಸಾಂಸ್ಕೃತಿಕ ಚರಿತ್ರೆಯನ್ನು ಅಧ್ಯಯನ ಮಾಡುವ ಕಾರ್ಯ ನಡೆಯಬೇಕಾಗಿದೆ.

ಬಾಲಬಸವ ತುಮನೆಪ್ಪ ಹಾಡುವ ಗೋಣಿಬಸಪ್ಪನ ಕಾವ್ಯ ಮತ್ತು ಮರುಳಸಿದ್ಧನ ಕಾವ್ಯಗಳು ಮಧ್ಯ ಕರ್ನಾಟಕದ ಸ್ಥಳೀಯ ಮತ್ತು ಸಾಂಸ್ಕೃತಿಕ ಚರಿತ್ರೆಗೆ ಸಂಬಂಧಿಸಿದಂತೆ ಕೆಲವೊಂದು ಮಾಹಿತಿ ನೀಡುವ ಕಾರ್ಯ ಮಾಡುತ್ತವೆ. ಮುಖ್ಯವಾಗಿ ಹರಪನಹಳ್ಳಿ ಸಾಮಂತ ಪಾಳೇಗಾರರು ಮತ್ತು ಜರಿಮಲೆ ಪಾಳೇಗಾರರಿಗೆ ಸಂಬಂಧಿಸಿದ ಚರಿತ್ರೆಯಾಗಿದೆ. ಲಿಖಿತ ಚರಿತ್ರೆಯಲ್ಲಿ ದಾಖಲಾಗದ ಸ್ಥಳೀಯ ಚರಿತ್ರೆಯನ್ನು ಬಾಲಬಸವರ ಮೌಖಿಕ ಕಾವ್ಯಗಳು ಕಟ್ಟಿ ಕೊಡುವಲ್ಲಿ ಸಹಾಯ ಮಾಡುತ್ತವೆ. ಪಾಳೇಗಾರರು ಬಾಲಬಸವರ ಮೌಖಿಕ ಕಾವ್ಯಗಳಲ್ಲಿ ಪ್ರಭುತ್ವದ ಭಾಗವಾಗಿ ಕಂಡುಬರುತ್ತಾರೆ. ಇವರ ಈ ಪ್ರಭುತ್ವದ ನೀತಿಗಳೇ ಗೋಣಿಬಸಪ್ಪ ಮತ್ತು ಮರುಳಸಿದ್ಧರ ಜೀವನಚರಿತ್ರೆ ಸಂಘರ್ಷದಿಂದ ಕೂಡಿರುವುದಕ್ಕೆ ಕಾರಣ. ಈ ಇಬ್ಬರ ನಡುವಿನ ಸಂಗತಿಗಳನ್ನು ಬಾಲಬಸವರ ಮೌಖಿಕ ಕಾವ್ಯಗಳು ವಿವರಿಸುತ್ತವೆ.

ಯಾವುದೇ ಮೌಖಿಕ ಕಾವ್ಯಗಳನ್ನು ತೆಗೆದುಕೊಂಡರೂ ಅಲ್ಲಿನ ಪ್ರಭುತ್ವದ ನಡೆಯು ಜನತೆಗೆ ಮಾರಕವಾಗಿರುತ್ತದೆ. ಅವರ ಈ ಆಳ್ವಿಕೆಯ ನಡತೆಯನ್ನು ಪ್ರಶ್ನಿಸುವ, ಅದರ ವಿರುದ್ಧ ಹೋರಾಡುವ ಸಂಗತಿಗಳೇ ಮೌಖಿಕ ಕಾವ್ಯಗಳ ಪ್ರಧಾನ ಕಥಾವಸ್ತುಗಳಾಗಿರುತ್ತವೆ. ಅಂದರೆ ಸಾಂಸ್ಕೃತಿಕ ನಾಯಕರು ಜನತೆಯ ಪರವಾಗಿ ಧ್ವನಿ ಎತ್ತಿ ಆಡಳಿತದಲ್ಲಿನ ಅಶಿಸ್ತು, ಅಧರ್ಮ, ಅರಾಜಕತೆ ಯನ್ನು ಖಂಡಿಸುವ ಮೂಲಕ ಪ್ರತಿರೋಧನೆ ಒಡ್ಡುತ್ತಾರೆ. ಹಾಗಾಗಿ ಇವರನ್ನು

ಪ್ರಭುತ್ವ ಮತ್ತು ಸಮಾಜವು ಅವರನ್ನು ಹಿಂಸಿಸುವ, ಅವರನ್ನು ಸದೆ ಬಡಿಯಲು ಯುದ್ಧ ಸಾರುವ, ಅವರ ಮಠಗಳ ಮೇಲೆ ದಾಳಿ ಮಾಡುವುದರ ಮೂಲಕ ಅವರುಗಳನ್ನು ಕಟ್ಟಿ ಹಾಕುವ ಪ್ರಯತ್ನ ಮಾಡಿಕೊಂಡು ಬರುತ್ತವೆ. ಈ ಎಲ್ಲಾ ದಾಳಿಗಳನ್ನು, ಹಿಂಸೆಗಳನ್ನು ಸಾಂಸ್ಕೃತಿಕ ಚಾರಿತ್ರಿಕ ನಾಯಕರು ಪವಾಡಗಳ ಮೂಲಕ ಅವರ ದಾಳಿಗಳನ್ನು ಗೆದ್ದು ಅವರಿಗೆ ತಕ್ಕ ಪಾಠ ಕಲಿಸುತ್ತಾರೆ. ಜನಪದರು ಸಾಮಾನ್ಯ ಜನತೆಯ ನೆಲೆಯಿಂದ ಪ್ರಭುತ್ವವನ್ನು ನೋಡಿದ್ದರ ಪರಿಣಾಮವಾಗಿ ಅದರಲ್ಲಿ ಜನತೆಯ ಪಾಲ್ಗೊಳ್ಳುವಿಕೆ ಹೆಚ್ಚಾಗಿ ಕಂಡು ಬರುತ್ತದೆ. ಪ್ರಭುತ್ವವು ಸಾಮಾನ್ಯ ಜನತೆಯನ್ನು ಚರಿತ್ರೆಯಿಂದ ದೂರವಿಡುವ ಕೆಲಸ ಮೊದಲಿನಿಂದಲೂ ಮಾಡಿಕೊಂಡು ಬಂದಿವೆ. ಹಾಗಾಗಿ ಅವರ ಲಿಖಿತ ಚರಿತ್ರೆಯಲ್ಲಿ ಜನಪದರ ಮೌಖಿಕ ಸಾಹಿತ್ಯದ ಆಕರಗಳಿಗೆ ಯಾವುದೇ ಮನ್ನಣೆ ಸಿಗುವುದಿಲ್ಲ ಮತ್ತು ಅವರು ನೀಡುವುದಿಲ್ಲ. ಇದರ ಪರಿಣಾಮ ನಮ್ಮ ಮುಂದಿರುವ ಈ ಲಿಖಿತ ಚರಿತ್ರೆಯೇ ಸಾಕ್ಷಿಯಾಗಿದೆ.

ಮಧ್ಯ ಕರ್ನಾಟಕವನ್ನು ವಿಜಯನಗರ ಸಾಮ್ರಾಜ್ಯದ ನಂತರ ಆಳ್ವಿಕೆ ಮಾಡಿದವರು ಇಲ್ಲಿನ ಸ್ಥಳೀಯ ಪಾಳೇಗಾರರು. ವಿಜಯನಗರ ಸಾಮ್ರಾಜ್ಯ ಪತನವಾದ ಈ ಭೂಭಾಗದಲ್ಲಿ ಸುಮಾರು ೭೭ ಪಾಳೇಪಟ್ಟುಗಳಿದ್ದವು ಎನ್ನುವುದು ತಿಳಿದುಬರುತ್ತದೆ. ಆದರೆ ಅವರ ಇತಿಹಾಸವನ್ನು ಸ್ಪಷ್ಟವಾಗಿ ಹೇಳುವ ದಾಖಲೆಗಳಿಲ್ಲ. ಇದ್ದರೂ ಅಪೂರ್ಣ ಮತ್ತು ಅಸ್ಪಷ್ಟತೆಯಿಂದ ಕೂಡಿವೆ. ಈ ಪ್ರಾದೇಶಿಕ ಪರಿಸರದ ೭೭ ಪಾಳೇಪಟ್ಟುಗಳಲ್ಲಿ ಜರುಗಿರುವ ಸಾಂಸ್ಕೃತಿಕ ಪಲ್ಲಟ ಅಥವಾ ರಾಜಕೀಯ ಸ್ಥಿತ್ಯಂತರಗಳು ಅವರ ಸಾಮಾಜಿಕ ಬದುಕಿನ ವಿವರಗಳು ನಮಗೆ ಲಭ್ಯವಿಲ್ಲದೆ ಹೋಗಿವೆ. ಅವರ ಈ ಸ್ಥಳೀಯ ಸಾಂಸ್ಕೃತಿಕ ಚರಿತ್ರೆಯನ್ನು ಇಲ್ಲಿನ ಮೌಖಿಕ ಕಾವ್ಯಗಳು, ಕಥೆಗಳು, ಹಾಡುಗಳಲ್ಲಿ ನಾವು ಕೆಲವೊಂದು ಸಂಗತಿಗಳನ್ನು ಕಾಣಬಹುದಾಗಿದೆ. ಮೌಖಿಕ ಕಾವ್ಯಗಳು ನಿರೂಪಿಸುವ ಸ್ಥಳೀಯ ಸಾಂಸ್ಕೃತಿಕ ಚರಿತ್ರೆಯ ನೈಜತೆಯ ಪ್ರಮಾಣವು ಎಷ್ಟರ ಮಟ್ಟಿಗೆ ವಾಸ್ತವದಿಂದ ಕೂಡಿದೆ ಎನ್ನುವುದಕ್ಕೆ ಆಧಾರಗಳಿಲ್ಲ. ಆದರೆ ಮೌಖಿಕ ಆಕರಗಳಿಂದಲೂ ಚರಿತ್ರೆಯನ್ನು ಕಟ್ಟುವ ಕಾರ್ಯ ಆರಂಭವಾದಾಗ ಮಾತ್ರ ಈ ಮೌಖಿಕ ಕಾವ್ಯಗಳ ನಿರೂಪಿಸುವ ಸತ್ಯ ಸಂಗತಿಗಳ ಬಗ್ಗೆ ಚರ್ಚೆ ಮಾಡಲು ಸಾಧ್ಯವಾಗುತ್ತದೆ.

ಇ. ಸಂಡೂರು ಪಾಳೇಗಾರರು

ಸ್ಥಳೀಯ ಚರಿತ್ರೆಯನ್ನು ಬಾಲಬಸವರು ತಮ್ಮದೇ ನೆಲೆಯಲ್ಲಿ ಕಟ್ಟಿಕೊಡುವ ಕಾರ್ಯ ಮಾಡುತ್ತಾರೆ. ಅವರು ಹಾಡುವ ಸಂಡೂರು ರಾಜನ ಕಾವ್ಯದಲ್ಲಿ ಸ್ಥಳೀತ ಪ್ರಾದೇಶಿಕತೆಯನ್ನು ಕೇಂದ್ರವಾಗಿಸಿಕೊಂಡು ಕಥೆ ಕಟ್ಟಿದ್ದಾರೆ. ಕಥೆಯ ನಿರೂಪಣೆಯು ಕಾಲ್ಪನಿಕ ಎನ್ನಿಸಿದರೂ ಇಲ್ಲಿನ ಸ್ಥಳೀಯ ಜನಪದ ನಂಬಿಕೆಯನ್ನು ಗಟ್ಟಿಗೊಳಿಸುವ ಕಾರ್ಯ ಈ ಕಾವ್ಯ ಮಾಡುತ್ತದೆ. ಬಾಲಬಸವ ತುಮನೆಪ್ಪನವರು ಸಂಡೂರು ರಾಜನ ಕಾವ್ಯದ ಮುಖ್ಯ ಕಥಾವಸ್ತು ಎಂದರೆ ಕೊಟ್ಟ ಮಾತಿಗೆ ತನ್ನ ರಾಜ್ಯವನ್ನು ಬುಡಬುಡಕಿಗೆ ಕೊಡುವುದು. ಸಂಡೂರು ಪಾಳೇಗಾರರು

ಚಾರಿತ್ರಿಕವಾಗಿ ಇದ್ದವರು. ಅವರ ಲಿಖಿತ ಚರಿತ್ರೆಯು ಸ್ಪಷ್ಟವಾಗಿಲ್ಲ ಎಂದು ಸಿ.ಆರ್.ಶ್ಯಾಮಲ ಹೀಗೆ ಅವರು ಹೀಗೆ ಅಭಿಪ್ರಾಯ ಪಡುತ್ತಾರೆ. "ಸಂಡೂರು ಪಾಳೇಗಾರರ ಚರಿತ್ರೆ ನಮಗೆ ಬಳ್ಳಾರಿ ಪ್ರದೇಶದ ಕೈಫಿಯತ್ತುಗಳಿಂದ ತಿಳಿದು ಬರುತ್ತದೆಯಲ್ಲದೆ ಬೇರೆ ಎಲ್ಲೂ ದೊರೆಯದು. ಈ ಲಿಖಿತ ಚರಿತ್ರೆಯಲ್ಲಿ ಪಾಳೇಗಾರರ ಹೆಸರುಗಳು, ಅವರು ಆಳಿದ ಪ್ರದೇಶಗಳ ಹೆಸರುಗಳನ್ನು ಬಿಟ್ಟರೆ ಬೇರೆ ಏನೂ ಸಿಗುವುದಿಲ್ಲ."[೧೨] ಎನ್ನುವ ಮಾತುಗಳಲ್ಲಿ ಸಂಡೂರು ಪಾಳೇಗಾರರ ಬಗ್ಗೆ ಇವರು ಲಿಖಿತ ಚರಿತ್ರೆಯು ಸ್ಪಷ್ಟವಾಗಿಲ್ಲದಿರುವುದನ್ನು ಹೇಳುತ್ತಾರೆ.

ಈ. ಗುಡೇಕೋಟೆ ಪಾಳೇಗಾರರು

ಇತಿಹಾಸತಜ್ಞರಾದ ಸಿ. ಆರ್. ಶ್ಯಾಮಲ ಅವರು ತಮ್ಮ ಸಂಶೋಧನಾ ಕೃತಿಯಾದ ಪೂರ್ವಕರ್ನಾಟಕದ ಪಾಳೇಗಾರರ ಚರಿತ್ರೆಯಲ್ಲಿ ಗುಡೇಕೋಟೆ ಪಾಳೇಗಾರರ ಮೂಲ ಕುರಿತು ಹೀಗೆ ಹೇಳುತ್ತಾರೆ. "ಗುಡೇಕೋಟೆ ಪಾಳೇಗಾರರ ಮೂಲದವು ಗೊಂದಲಗಳಿಂದ ಕೂಡಿದೆ. ಕೈಫಿಯತ್ತು ಹಾಗೂ ವಂಶಾವಳಿಗಳಲ್ಲಿ ಕಾಲಗಳ ಹೊಂದಾಣಿಕೆಯಾಗದೆ ಒಂದೇ ಹೆಸರು ಮತ್ತೆ ಮತ್ತೆ ಬರುವುದರಿಂದ ಯಾರು ಯಾರಿಗೆ ಹೇಗೆ ಸಂಬಂಧ? ಯಾರು ಏನು ಕೆಲಸ ಮಾಡಿದರು? ಇವರ ಮೂಲಪುರುಷ ಯಾರು? ಎಂದು ತಿಳಿಯುವುದೇ ಕಷ್ಟವಾಗುತ್ತದೆ"[೧೩] ಎಂದು ಹೇಳುವಾಗ ಲಿಖಿತ ಚರಿತ್ರೆಯ ದಾಖಲೆಗಳಲ್ಲಿ ಅವರ ಮೂಲ ಪುರುಷರ ಬಗ್ಗೆ ಉಲ್ಲೇಖ ಅಸ್ಪಷ್ಟವಾಗಿರುವುದನ್ನು ಹೇಳುತ್ತಾರೆ. ಬಾಲಬಸವರ ತುಮನೆಪ್ಪ ಹಾಡುವ ಸಂಡೂರು ರಾಜನ ಕಥೆಯು ಕಾಲ್ಪನಿಕ ಕಥೆಯಂತೆ ಕಂಡರೂ ಅಲ್ಲಿರುವ ಕೆಲವೊಂದು ಸಂಗತಿಗಳು ಇತಿಹಾಸದ ದಾಖಲೆಗಳಂತೆ ಕಂಡುಬರುತ್ತವೆ. ಚಿಕ್ರಶೇಖರ ರಾಜ ಸಂಡೂರು ನಗರವನ್ನು ಆಳ್ವಿಕೆ ಮಾಡುತ್ತಿರುತ್ತಾನೆ. ಆತ ತನ್ನ ಚಿಕ್ಕ ಮಡದಿಯ ಮಾತು ಕೇಳಿ ತನ್ನ ಇಬ್ಬರು ಮಕ್ಕಳನ್ನು ಕಾಡಿನಲ್ಲಿ ಕಡಿಯುವುದಕ್ಕೆ ಕಳಿಸಿಕೊಡುತ್ತಾನೆ. ಅಣ್ಣ ತಮ್ಮರು ಬುದ್ಧಿವಂತರಾಗಿರುವುದರಿಂದ ತಪ್ಪಿಸಿಕೊಂಡು ಮುಂದೆ ವನವಾಸ ಅನುಭವಿಸಿ ಮತ್ತೆ ರಾಜರಾಗುತ್ತಾರೆ. ಮುಂದೆ ಅವರಿಗೆ ಮಕ್ಕಳಾಗುವುದಿಲ್ಲ. ಅರಮನೆಗೆ ಭಿಕ್ಷೆಗೆ ಬಂದು ಎಣ್ಣೆ ಜೋಗಿ, ಬುಡಬುಡಿಕೆಯವನ ವರದಿಂದ ಮಕ್ಕಳಾಗುತ್ತವೆ. ಅದಕ್ಕೆ ಪ್ರತಿಯಾಗಿ ರಾಜ್ಯ ಬಿಟ್ಟುಕೊಡುವ ಆಣೆ, ಕೊಟ್ಟಿರುತ್ತಾರೆ. ಅದರಂತೆ ರಾಜರಿಗೆ ಮಕ್ಕಳಾಗುತ್ತವೆ. ಸುಮಾರು ವರ್ಷಗಳ ನಂತರ ವಾಪಸ್ಸು ಬಂದ ಬುಡಬುಡಿಕೆ ರಾಜ್ಯ ಕೇಳುತ್ತಾನೆ. ಈ ಪಾಳೇಗಾರರು ಕೊಟ್ಟ ಮಾತಿನಂತೆ ತಮ್ಮ ಸಂಡೂರು ರಾಜ್ಯವನ್ನು ಬಿಟ್ಟು ಗುಡೇಕೋಟೆಗೆ ಸೇರಿಕೊಳ್ಳುತ್ತಾರೆ. ಸಂಡೂರು ಪ್ರದೇಶವನ್ನು ವಿಜಯನಗರ ಪೂರ್ವ ಮತ್ತು ವಿಜಯ ನಗರ ಪತನದ ನಂತರದ ಕಾಲದಲ್ಲಿ ಇಲ್ಲಿನ ಸ್ಥಳೀಯ ಪಾಳೇಗಾರರ ಆಳ್ವಿಕೆ ಮಾಡಿದ್ದಾರೆ ಎನ್ನುವುದಕ್ಕೆ ಅನೇಕ ಲಿಖಿತ ಚರಿತ್ರೆಯಲ್ಲಿ ದಾಖಲೆಗಳಿವೆ. ಇವುಗಳ ಕುರಿತು ಇನ್ನೂ ಹೆಚ್ಚಿನ ಅಧ್ಯಯನಗಳು ನಡೆಯ ಬೇಕಿದೆ.

೭.೩. ಪ್ರಭುತ್ವ, ಧರ್ಮ ಮತ್ತು ಜಾತಿ

ಗೋಣಿಬಸಪ್ಪ ಜಾತಿಯಿಂದ ಬೇಡರ ಕುಲದವನಾಗಿರುವ ಕಾರಣ ಕೂಲಹಳ್ಳಿ ಮತ್ತು ಬಾಗಳಿಯ ಸುತ್ತಮುತ್ತ ಶಿವಶರಣನಂತೆ ಕಂತಿಭಿಕ್ಷೆ ಬೇಡುವ ಕಾಯಕ ಮಾಡುತ್ತಾನೆ. ಜಾತಿಯ ವಿಚಾರವಾಗಿ ಲಿಂಗಾಯತರು ಈ ಸಂಗತಿಯನ್ನು ಬಾಗಳಿಯ ಸಾಮಂತ ದೊರೆಯಾದ ಬಾಗಳಿ ಭೂಪನಿಗೆ ದೂರು ನೀಡುತ್ತಾರೆ. ಬೇಡರ ಕುಲದವನಾದ ಗೋಣಿಬಸವ ನಮ್ಮ ಊರುಗಳಲ್ಲಿ ಕಂತಿಭಿಕ್ಷೆ ಬೇಡುತ್ತಿದ್ದಾನೆ. ಅವನು ಬರೀ ಭಿಕ್ಷೆ ಬೇಡಿದರೆ ಸರಿ ಆದರೆ, ಅವನು ಜಂಗಮರಂತೆ ವೇಷ ಹಾಕಿ ಕಂತೆಭಿಕ್ಷೆ ಮಾಡುತ್ತಾನೆ. ಇದರಿಂದ ಜಂಗಮರ ಆದಾಯಕ್ಕೆ ತೊಂದರೆಯಾಗಿದೆ. ಪ್ರಭುತ್ವದ ಭಾಗವಾಗಿರುವ ತಾವುಗಳು ಧರ್ಮ ವಿರೋಧಿಯನ್ನು ಕರೆದು ಬುದ್ಧಿ ಹೇಳಬೇಕು ಇಲ್ಲದಿದ್ದರೆ, ಧರ್ಮ ಹಾಳಾಗುತ್ತದೆ. ಧರ್ಮವನ್ನು ರಕ್ಷಿಸುವ ಕಾರ್ಯ ಪ್ರಭುತ್ವದ ಮೇಲೆ ಇದೆ ಎಂದು ಗೋಣಿಬಸವನ ವಿರುದ್ಧ ದೂರು ನೀಡುತ್ತಾರೆ. ಜಂಗಮನಲ್ಲದವನು, ಜಂಗಮರಂತೆ ವೇಷ ಹಾಕಿ ಕಂತೆಭಿಕ್ಷೆ ಮಾಡುವುದು ಧರ್ಮ ಅಥವಾ ಜಾತಿಯನ್ನು ಕುಲಗೆಡಿಸುವ ಕಾರ್ಯ ಮಾಡುತ್ತಿರುವ ಗೋಣಿಬಸಪ್ಪನನ್ನು ಶಿಕ್ಷೆಗೆ ಗುರಿ ಪಡಿಸುವುದು ಅವರ ಉದ್ದೇಶವಾಗಿರುತ್ತದೆ.

ಈ ಸಂಗತಿಯನ್ನು ಬಾಲಬಸವ ತುಮನೆಪ್ಪ ಗೋಣಿಬಸಪ್ಪನ ಕಾವ್ಯದಲ್ಲಿ ಈ ರೀತಿಯಾಗಿ ಹೇಳುತ್ತಾನೆ. "ಬಾಗಾಳ್ಯಾಗೆ ಭಿಕ್ಷಾ ಮಾಡುವಾಗ ಅಲ್ಲಿನ ಜಂಗಮರು ಮಾತಾಡುತ್ತಾರೆ. 'ನೋಡಿ ಆಗಿನ್ ಕಾಲಕ್ಕೆ ಬಾಗಳಿ ಭೂಪ ಅಂತ ರಾಜನಿದ್ದ. ಆತನಲ್ಲಿಗೆ ಬಂದು ನೋಡ್ರಿ ಆ ದೊರೆಗೆ ಚಾಡಿ ಹೇಳುತ್ತಾರೆ. ರಾಜಾಧಿರಾಜ ಅವ್ನೊಡಿದ್ರೆ ಬ್ಯಾಡರನು, ಬ್ಯಾಡರ ಹೊಟ್ಟ್ಯಾಗ ಹುಟ್ಟಿ ಬ್ಯಾಡ್ರವನಾಗಿ ಕಮಂಡಲ ಹಿಡ್ಕಂಡು ಲಿಂಗ ಹಿಡ್ಕಂಡು ರುದ್ರಾಕ್ಷಿ ಭದ್ರಾಕ್ಷಿ ಅಕ್ಕೆಂಡು ನೊಡ್ರಿ ನಮ್ಮಂಗ ಕಂತಿ ಭಿಕ್ಷಾ ಮಾಡ್ತಾನೆ. ನೋಡಿ ಅವನೇನು ನಮಗೆ ಹುಟ್ಟ್ಯಾನೇನ್ರೀ?. ಅವ್ನು ಬ್ಯಾಡ್ರನು, ಅವನ್ನ ಸಿಂಹಾಸನಕ್ಕೆ ಕರಿಯಾಕ ಕಳ್ಸಿ ಕಂತಿಭಿಕ್ಷಾ ಮಾಡುವುದನ್ನು ಬಿಡ್ಸಿಬಿಡ್ರಿ" ಎಂದು ಜಂಗಮರು ರಾಜನಿಗೆ ಚಾಡಿ ಹೇಳಿದ್ರು"[೧೪] ಪ್ರಭುತ್ವವು ಧರ್ಮವನ್ನು ರಕ್ಷಣೆ ಮಾಡಬೇಕು ಎನ್ನುವುದು ಧರ್ಮದ ನಿಯಮ. ಹಾಗಾಗಿ ಲಿಂಗಾಯತ ಧರ್ಮವನ್ನು ಬಾಗಳಿಯ ದೊರೆಯು ಪ್ರಭುತ್ವದ ಅಡಿಯಲ್ಲಿ ರಕ್ಷಣೆ ಮಾಡುವುದು ಅನಿವಾರ್ಯವಾಗಿರುತ್ತದೆ. ಈ ನಿಟ್ಟಿನಲ್ಲಿ ಬಾಗಳಿಯ ದೊರೆಯಾದ ಭೂಪ ತನ್ನ ಅಧಿಕಾರವನ್ನು ಚಲಾಯಿಸಲು ಮುಂದಾಗುತ್ತಾನೆ. ಬಾಗಳಿಯ ಪ್ರದೇಶದಲ್ಲಿ ಕಂತಿಭಿಕ್ಷೆ ಮಾಡುವ ಬ್ಯಾಡರ ಗೋಣಿ ಬಸಪ್ಪನನ್ನು ಕರೆದು ವಿಚಾರಣೆ ಮಾಡುತ್ತಾನೆ. ಆ ವಿಚಾರಣೆಯು ಪ್ರಭುತ್ವದ ಧ್ವನಿಯಾಗಿರುತ್ತದೆ ಅದನ್ನು ಬಾಲಬಸವ ತುಮನೆಪ್ಪ ಈ ಇಬ್ಬರ ನಡುವಿನ ಸಂಭಾಷಣೆಯನ್ನು ಈ ರೀತಿಯಾಗಿ ಹೇಳುತ್ತಾರೆ. "ಆ ನೀನು ಯಾರಯ್ಯ? ನಿನ್ನ ಮತ ಯಾವುದು? ನನ್ನ ಹೆಸರು ಗೋಣಿಬಸವೇಶ್ವರ, ನಮ್ಮನ್ನ ಬ್ಯಾಡ್ರು ಅಂತಾರ್ರೀ. ಮತ್ತೇ ಬ್ಯಾಡ್ರಾದ ಬಳಿಕ ಕಾವಿ, ಕಮಂಡಲ, ರುದ್ರಾಕ್ಷಿ, ಭದ್ರಾಕ್ಷಿ, ಲಿಂಗ ಇವುನೆಲ್ಲಾ ನಿನಗೆ ಯಾರು ಕೊಟ್ಟ್ರಯ್ಯ? ಏನು ಹೇಳ್ತಿಯೋ ಇಲ್ಲೋ ಕಂಬಕ್ಕೆ ಕಟ್ಟಿ ಕೈ ಕಾಲು ಕತ್ತರಿಸಿ ಬಿಡ್ಲೋ."[೧೫] ಎನ್ನುವ ಮಾತುಗಳಲ್ಲಿ ಪ್ರಭುತ್ವವು ಜಾಗೃತವಾಗಿ ಧರ್ಮದ ಭಾಗವಾಗಿ ಕಂಡುಬರುತ್ತದೆ. ಧರ್ಮ ಮತ್ತು

ಪ್ರಭುತ್ವ ಒಂದಕ್ಕೊಂದು ಪೂರಕವಾಗಿ ಅಥವಾ ಒಂದರೊಳಗೊಂದಿರುತ್ತದೆ. ಕೆಳವರ್ಗದ ದಲಿತ ಸಮುದಾಯದ ವ್ಯಕ್ತಿಯು ಲಿಂಗಾಯತನಂತೆ ವೇಷ ಧರಿಸಿ ಕಂತೆಭಿಕ್ಷೆ ಬೇಡುವುದು ಅಪರಾಧ ಎಂದು ಪರಿಗಣಿಸಿದ ಪ್ರಭುತ್ವ ತನ್ನ ಅಧಿಕಾರವನ್ನು ಗೋಣಿಬಸಪ್ಪನ ಮೇಲೆ ಹೇರುತ್ತದೆ. ಮುಂದೆ ನೀನು ಕಂತೆಭಿಕ್ಷೆ ಮಾಡಬಾರದು. ಅದು ಲಿಂಗಾಯತ ಸಮುದಾಯಕ್ಕೆ ಮಾತ್ರ ಮೀಸಲು. ನೀನು ಬೇಕಿದ್ದರೆ ಭಿಕ್ಷೆ ಬೇಡಿಕೊಂಡು ಇರು. ಆದರೆ ಜಂಗಮರ ಆದಾಯಕ್ಕೆ ತೊಂದರೆ ಮಾಡಬೇಡ ಎನ್ನುವ ಬಾಗಳಿ ಭೂಪನ ಮಾತುಗಳಲ್ಲಿ ಪ್ರಭುತ್ವವು ಧರ್ಮದ ಪರವಾಗಿ ನಡೆದುಕೊಂಡಿರುವುದು ಕಂಡುಬರುತ್ತದೆ. ಇದರಿಂದ ಅಂದಿನ ಸಮಾಜದಲ್ಲಿ ಲಿಂಗಾಯತ ಸಮುದಾಯವು ಎಷ್ಟರಮಟ್ಟಿಗೆ ಪ್ರಭಾವವಾಗಿರ ಬಹುದೆಂದು ನಾವು ಊಹಿಸಬಹುದಾಗಿದೆ. ಪ್ರಭುತ್ವ ವಿಧಿಸಿದ ನಿರ್ಬಂಧವನ್ನು ಗೋಣಿಬಸಪ್ಪ ಮತ್ತೆ ಮುರಿಯುತ್ತಾನೆ. ಪ್ರಭುತ್ವದ ಅಪಮಾನವನ್ನು ಹುಲಿ ಸವಾರಿ ಮಾಡುವುದರ ಮೂಲಕ ತನಗಾದ ಅಪಮಾನವನ್ನು ಪ್ರತಿಭಟಿಸುತ್ತಾನೆ. ಹುಲಿ ಎಂದರೆ ಅಧಿಕಾರದ ಸಂಕೇತ, ಬಲದ ಸಂಕೇತ. ರಾಜರಿಗಿಂತ ಶ್ರೇಷ್ಠವಾದ ಸ್ಥಾನವೆಂದರೆ, ಅದು ಹುಲಿ ಸಿಂಹಾಸನ. ಹುಲಿ ಸವಾರಿ ಮಾಡುವುದರ ಮೂಲಕ ಗೋಣಿಬಸಪ್ಪ ತನ್ನ ಅಸ್ತಿತ್ವವನ್ನು ಸ್ಥಾಪನೆ ಮಾಡಿಕೊಳ್ಳುತ್ತಾನೆ.

ಜಾತಿ ಕಾರಣಕ್ಕಾಗಿ ಪ್ರಭುತ್ವ ಮಾಡಿದ ಅಪಮಾನ ಮತ್ತು ಕಂತೆಭಿಕ್ಷೆ ಮಾಡುವುದನ್ನು ತಡೆದಾಗ ಗೋಣಿಬಸಪ್ಪ ತಾನು ಜಂಗಮರ ಮಗನೆಂದು, ಮದ್ದಾನೇಶ್ವರಸ್ವಾಮಿ ತನ್ನ ತಂದೆ ಎಂದು ಸಮಾಜಕ್ಕೆ ತಿಳಿಸುವ ಕಾರ್ಯ ಮಾಡುತ್ತಾನೆ. ಅದರ ಭಾಗವಾಗಿ ಕೂಲಹಳ್ಳಿಯಲ್ಲಿ ತಾನೊಂದು ಮಠ ಸ್ಥಾಪನೆ ಮಾಡುತ್ತಾನೆ. ಮಠ ಸ್ಥಾಪನೆ ಮಾಡಿದ ನಂತರ ಅಲ್ಲಿ ತನ್ನ ಇರುವಿಕೆಯನ್ನು ಅಲ್ಲಿನ ರಾಜಪ್ರಭುತ್ವ ಮತ್ತು ಲಿಂಗಾಯತರಿಗೆ ತಿಳಿಯಪಡಿಸುವುದು ಅಗತ್ಯವಿರುತ್ತದೆ. ಜಂಗಮತ್ವವನ್ನು ಸಹಕಾರ ಗೊಳಿಸುವುದಕ್ಕೆ ಗೋಣಿಬಸಪ್ಪ ಹುಲಿ ಸವಾರಿ ಮಾಡುವುದರ ಮೂಲಕ ಬಾಗಳಿಯ ಭೂಪನೇ ತನ್ನ ಹತ್ತಿರವೇ ಪ್ರಾಣಭಿಕ್ಷೆ ಬೇಡುವಂತೆ ಮಾಡಿ, ಇದರಿಂದ ತನ್ನ ಕಾರ್ಯ ಸಿದ್ಧಿಸಿಕೊಳ್ಳುತ್ತಾನೆ.

ಕೂಲಹಳ್ಳಿಯಲ್ಲಿ ಮಠ ಸ್ಥಾಪನೆ ಮಾಡಿ, ತನ್ನ ಅಸ್ತಿತ್ವವನ್ನು ಮತ್ತಷ್ಟು ಗಟ್ಟಿಗೊಳಿಸಲು ಗೋಣಿಬಸಪ್ಪ ಜಂಗಮರ ಧಾರ್ಮಿಕ ನಾಯಕನಾದ ಶ್ರೀ ಕೊಟ್ಟೂರು ಗುರುಬಸವನ ಬಳಿ ಬಂದು ತನಗೆ ಸಹಾಯ ಮಾಡುವಂತೆ ಕೇಳಿಕೊಳ್ಳುತ್ತಾನೆ. ಇದರ ಮುಖ್ಯ ಉದ್ದೇಶ ಜಂಗಮತ್ವ ಗೋಣಿಬಸಪ್ಪ ಹುಟ್ಟಿನಿಂದ ಬೇಡರ ಕುಲದವನಾದರೂ ಅವನ ತಂದೆ ಜಂಗಮ ಶಿವಶರಣ ಮದ್ದಾನಸ್ವಾಮಿ. ಹಾಗಾಗಿ ಜಂಗಮತ್ವವನ್ನು ಪುನರ್‌ಸ್ಥಾಪಿಸುವ ಕಾರ್ಯ ಮಾಡಬೇಕಾಗಿರುತ್ತದೆ. ಅಂದಿನ ಕಾಲದ ಜಂಗಮರು ಗೋಣಿಬಸಪ್ಪನನ್ನು ಸಾಮಾಜಿಕವಾಗಿಯೂ, ಧಾರ್ಮಿಕವಾಗಿಯೂ ಒಪ್ಪಿಕೊಳ್ಳುವಂತೆ ಮಾಡುವ ಉದ್ದೇಶದಿಂದಾಗಿ ಪಂಚಗಣಾಧೀಶ್ವರರಲ್ಲಿ ಪ್ರಮುಖ ಸ್ಥಾನ ಪಡೆದ ಕೊಟ್ರೇಶನ ಸಹಾಯವನ್ನು ಗೋಣಿಬಸಪ್ಪ ಕೇಳುತ್ತಾನೆ. ಇದರಿಂದ ಪ್ರಭುತ್ವ ಮತ್ತು ಧರ್ಮ ಎರಡನ್ನು ತನ್ನೆಡೆಗೆ ಸೆಳೆದು ಅಧಿಕಾರ(ಮಠ) ಸ್ಥಾಪನೆಯ ಸಾಂಸ್ಕೃತಿಕ ರಾಜಕಾರಣದ ಭಾಗವಾಗಿ

ಇದನ್ನು ಗುರುತಿಸಬಹುದಾಗಿದೆ. ಗೋಣಿಬಸಪ್ಪನಿಗೆ ಕೊಟ್ರೇಶನು ಸಹಾಯ ಮಾಡುವುದರಿಂದ ಜಂಗಮ ಸಮುದಾಯವು ಗೋಣಿಬಸಪ್ಪನನ್ನು ಒಪ್ಪಿಕೊಳ್ಳುವ ಸಾಧ್ಯತೆ ಹೆಚ್ಚಾಗಿರುವ ಕಾರಣ ಕೊಟ್ರೇಶನನ್ನು ಕೂಲಹಳ್ಳಿಗೆ ಕರೆತಂದು ಆ ಭಾಗದ ಜಂಗಮರಿಗೆ ತಾನು ಲಿಂಗಧಾರಿ ಜಂಗಮ ಎನ್ನುವ ಸಂದೇಶ ಸಾರಬೇಕಾಗಿರುತ್ತದೆ. ಕೊಟ್ರೇಶನು ಕೂಲಹಳ್ಳಿಗೆ ಬಂದು ನೆಲೆಸಿರುವುದರಿಂದ ಆ ಪ್ರದೇಶದ ಜನರು, ಜಂಗಮರು ಕೂಡ ನನ್ನನ್ನು ಒಪ್ಪಿಕೊಳ್ಳುತ್ತಾರೆ, ಇದರಿಂದ ಮಠ ಸ್ಥಾಪನೆ ಮಾಡಿ ಅದರ ಆರ್ಥಿಕತೆಯು ಮುಂದೆ ಸ್ಥಿರವಾಗಿರಲೂ ಸಹಾಯಕವಾಗುತ್ತದೆ ಎನ್ನುವ ಆಲೋಚನೆಯನ್ನು ಗೋಣಿಬಸಪ್ಪ ಮಾಡಿರುತ್ತಾನೆ. ಅಂದಿನ ಸಾಮಾಜಿಕ ಪರಿಸ್ಥಿತಿಯು ಕೂಡ ಹಾಗೆ ಇರುತ್ತದೆ. ವೀರಶೈವ ಪಂಥ ಅಥವಾ ಧರ್ಮ ಆ ಸಮಯದಲ್ಲಿ ಹೆಚ್ಚು ಪ್ರಾಬಲ್ಯವಿರುವುದರಿಂದ, ಅವರ ದೈವಗಳ ಅಥವಾ ಧಾರ್ಮಿಕ ನಾಯಕರ ಮೂಲಕವೇ ಅವರನ್ನು ಅಧೀನದಲ್ಲಿ ಇಟ್ಟುಕೊಳ್ಳುವ ತಂತ್ರಗಾರಿಕೆಯನ್ನು ಗೋಣಿಬಸಪ್ಪ ಬಳಸುತ್ತಾನೆ. ಈ ಎಲ್ಲಾ ತಂತ್ರಗಳು ಫಲಿಸಿದ ಪರಿಣಾಮವಾಗಿ ಗೋಣಿಬಸಪ್ಪನ ಮಠದ ಆರ್ಥಿಕತೆ, ಸಮುದಾಯಗಳ ಭಾಗವಹಿಸುವಿಕೆ ವೃದ್ಧಿಯಾಗುತ್ತದೆ ಎನ್ನುವ ಸಂಗತಿಯನ್ನು ಬಾಲಬಸವ ತುಮನೆಪ್ಪ ಗೋಣಿಬಸಪ್ಪನ ಕಾವ್ಯದಲ್ಲಿ ಈ ರೀತಿಯಾಗಿ ಹೇಳುತ್ತಾನೆ. “ಕೊಟ್ರೇಶ ಕೂಲಹಳ್ಳಿಯ ಊರ ಹೊರಗೆ ನೆಲೆಗೊಂಡಿದ್ದರಿಂದ ಅಲ್ಲಿನ ಅಡ್ಡ ಲಿಂಗದವರು, ದೊಡ್ಡ ಲಿಂಗದವರು ಕುಲ ಹದಿನೆಂಟು ಜಾತಿಗಳಲ್ಲಿ ಭಿನ್ನ ಭೇದ ಮರೆತು ಗೋಣಿಬಸಪ್ಪನ ಪಾದಕ್ಕೆ ಬೀಳುತ್ತಾರೆ. ಎಲ್ಲಾ ಜಾತಿಯವರು ಪಾದಕ್ಕೆ ಬೀಳುತ್ತಾರೆ. ಎಲ್ಲಾ ಜಾತಿ ಪಾದಕ್ಕೆ ಬಿದ್ದು ಪೂಜೆ ಮಾಡುತ್ತಾ ಆತನನ್ನು ಒಪ್ಪಿಕೊಳ್ಳುತ್ತಾರೆ. ಇದರಿಂದ ಕೂಲಹಳ್ಳಿ ಗೋಣಿಬಸಪ್ಪನ ಮಠಕ್ಕೆ ಹಾಲು ಮಾಲು ಬಂದು ಬೀಳುತೈತೆ. ಯಾವ ಯಾವ ಹಾಲು ಮಾಲು ಯಾವ ಯಾವ ಜಾತಿಗಳಿಂದ ಬರುತ್ತಾವೆ ಅಂತ ಕೇಳ್‌ಬೌದ್ರಿ

ಹರಹರ ಭಗವಂತ । ತಾನಿತಂದನಿ ತಾನೋ
ಕುರುಬರ ಮನೆಯಿಂದಾ । ತಾನಿತಂದನಿ ತಾನೋ
ಕುರಿಹಿಂಡೇ ಬರುತ್ತೈತೇ । ತಾನಿತಂದನಿ ತಾನೋ
ವಕ್ಕಲಿಗರ ಮನಿಯಿಂದೋ । ತಾನಿತಂದನಿ ತಾನೋ
ಎತ್ತು ಎಮ್ಮೆ ಬರುತ್ತೈತೋ । ತಾನಿತಂದನಿ ತಾನೋ
ಮೇವಾರ ಮನಿಯಿಂದೋ । ತಾನಿತಂದನಿ ತಾನೋ
ಜವಳಿಪೆಂಡಿ ಬರುತ್ತೈತೋ । ತಾನಿತಂದನಿ ತಾನೋ
ಉಪ್ಪಾರ ಮನಿಯಿಂದೋ। ತಾನಿತಂದನಿ ತಾನೋ
ಸೊಪ್ಪುಸೆದೆ ಬರುತ್ತೈತೋ । ತಾನಿತಂದನಿ ತಾನೋ

ಮಾದಿಗರ ಮನಿಯಿಂದೋ । ತಾನಿತಂದನಿ ತಾನೋ
ಮಿಣಿಕಣ್ಣಿ ಬರುತ್ತೈತೋ । ತಾನಿತಂದನಿ ತಾನೋ
ವರುವರ್ಷಕ್ಕೆ ನೋಡಿರಪ್ಪ । ತಾನಿತಂದನಿ ತಾನೋ
ಏಳು ಖಂಡಾಗ ಎಳ್ಳೋ । ತಾನಿತಂದನಿ ತಾನೋ
ಬೆಂಕಿಕಾಳು ಬೀಳುತ್ತೈತೇ । ತಾನಿತಂದನಿ ತಾನೋ
ಕ್ವಾಟಿ ಕಟ್ಟುತ್ತೈತೇ । ತಾನಿತಂದನಿ ತಾನೋ
ಕ್ವತಲ್ತ ಕಟುತ್ತೈತೇ । ತಾನಿತಂದನಿ ತಾನೋ
ಹರಳ ಅರವಟ್ಟಿಗಿ । ತಾನಿತಂದನಿ ತಾನೋ
ಕುರಿಗಳ ಕಟ್ಟುತ್ತೈತೇ । ತಾನಿತಂದನಿ ತಾನೋ"[೧೬]

ಎನ್ನುವ ಸಾಲುಗಳು ಗೋಣಿಬಸಪ್ಪನ ಮಠದ ಆರ್ಥಿಕ ಸ್ಥಿತಿಗತಿಯು ಬದಲಾಗುವುದರೊಂದಿಗೆ ತನ್ನ ಮಠಕ್ಕೆ ಯಾವ ಯಾವ ಸಮುದಾಯಗಳು ನಡೆದುಕೊಳ್ಳುತ್ತವೆ, ಇದರಿಂದಾಗಿ ಗೋಣಿಬಸಪ್ಪನ ಸಾಮಾಜಿಕ ಸ್ಥಿತಿಗತಿಗಳು ಹೇಗೆ ಬದಲಾಗಿವೆ. ಅವುಗಳಿಂದ ಗೋಣಿಬಸಪ್ಪನು ಸಾಂಸ್ಕೃತಿಕ, ಧಾರ್ಮಿಕ, ಸಾಮುದಾಯಿಕವಾಗಿ ಹೇಗೆ ವಿಕಾಸಗೊಳ್ಳುತ್ತದೆ ಮತ್ತು ಅದರಲ್ಲಿನ ಅವನ ಪರಿಶ್ರಮ ಎಷ್ಟು ಅಡಗಿದೆ ಎನ್ನುವ ವಿಷಯಗಳು ತಿಳಿದುಬರುತ್ತದೆ. ಮುಖ್ಯವಾಗಿ ಮಧ್ಯ ಕರ್ನಾಟಕದಲ್ಲಿ ಲಿಂಗಾಯತರ ವಿರುದ್ಧವಾಗಿ ಮಠ ಸ್ಥಾಪನೆ ಮಾಡುವುದು ಅಷ್ಟು ಸುಲಭದ ಕಾರ್ಯವಲ್ಲ. ಈ ಕಾರ್ಯವನ್ನು ಗೋಣಿಬಸಪ್ಪನು ಅತ್ಯಂತ ಜಾಗೃತಿ ಮತ್ತು ಎಚ್ಚರಿಕೆಯಿಂದ ಕಾರ್ಯ ಸಾಧಿಸುತ್ತಾನೆ. ಪ್ರಭುತ್ವವು ಧರ್ಮದ ಭಾಗವಾಗಿರುವುದರಿಂದ ಮೊದಲು ಪ್ರಭುತ್ವವನ್ನು ಗೆದ್ದು ನಂತರ ಧರ್ಮದ ಎಳೆಗಳನ್ನು ಬಿಡಿಸಿಕೊಂಡು ಗೋಣಿಬಸಪ್ಪ ಜಂಗಮತ್ವವನ್ನು ಸಾಧಿಸುತ್ತಾನೆ. ವೀರಶೈವ ಪಂಥದವರು ಮಧ್ಯ ಕರ್ನಾಟಕದ ಭೌಗೋಳಿಕ ಪ್ರದೇಶದಲ್ಲಿ ಹೆಚ್ಚಾಗಿರುವುದರಿಂದ, ಇಲ್ಲಿ ಜಂಗಮತ್ವವು ಅತ್ಯಂತ ಪ್ರಮುಖವಾದ ಸ್ಥಾನ ಪಡೆದುಕೊಂಡಿದೆ. ತಂದೆಯು ಬೇಡರ ಕನಕಮ್ಮನ ಮದುವೆಯಾಗಿ ಜಂಗಮತ್ವ ಮೀರುತ್ತಾನೆ. ಆದರೆ ಗೋಣಿಬಸಪ್ಪ ಬೇಡರ ಹೊಟ್ಟೆಯಲ್ಲಿ ಹುಟ್ಟಿ ಮಠ ಸ್ಥಾಪನೆ ಮಾಡಲು, ಜಂಗಮತ್ವ ಪಡೆದುಕೊಳ್ಳಲು ಹರಸಾಹಸ ಪಡುತ್ತಾನೆ. ಮುಂದೆ ಗೋಣಿಬಸಪ್ಪ ತಂದೆಯನ್ನೇ ಅನುಸರಿಸಿ ಕುರುಬ ಸಮುದಾಯದ ವಡ್ಡಟ್ಟವ್ವನನ್ನು ಮದುವೆಯಾಗುವುದರ ಮೂಲಕ ಕುಲಸಂಕರ ಮದುವೆಗೆ ಸಾಕ್ಷಿಯಾಗುತ್ತಾನೆ. ತಂದೆಯಂತೆ ಸಂಸಾರಿಯಾಗಿ ಜಂಗಮತ್ವವನ್ನು ಮೀರುತ್ತಾನೆ.

೭.೪ ಮಠದ ಆಸ್ತಿಯ ಮೇಲೆ ಪ್ರಭುತ್ವದ ಕಣ್ಣು

ಕೂಲಹಳ್ಳಿಯಲ್ಲಿ ಗೋಣಿಬಸಪ್ಪ ಮಠ ಸ್ಥಾಪನೆ ಮಾಡಿದ ಮೇಲೆ ಅಲ್ಲಿನ ಸುತ್ತಮುತ್ತಲಿನ

ಜನತೆಯು ಗೋಣಿಬಸಪ್ಪನ ಪವಾಡಗಳಿಂದ ಆಕರ್ಷಿತರಾಗಿ 'ದೈವ' ಎಂದು ಆ ಮಠಕ್ಕೆ ನಡೆದುಕೊಳ್ಳುತ್ತಾರೆ. ಇದರಿಂದ ಮಠದ ಆಸ್ತಿ ಮತ್ತು ಜನಪ್ರಿಯತೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತದೆ. ಮಠದ ಆಸ್ತಿ ಹೆಚ್ಚಾದಂತೆಲ್ಲಾ ಅದರ ವಿರುದ್ಧ ವಿರೋಧಿಗಳು ಹೆಚ್ಚಾಗುತ್ತಾರೆ. ಗೋಣಿಬಸಪ್ಪನ ಈ ಬೆಳವಣಿಗೆ ನೋಡಿ ಪ್ರಭುತ್ವದ ಭಾಗವಾದ ಹರಪನಹಳ್ಳಿ ಪಾಳೇಗಾರರ ಸಾಮಂತ ದೊರೆಯಾದ ಚಿಗಟೇರಿ ಶಿವನಯ್ಯನು ಗೋಣಿಬಸಪ್ಪನ ಮಠದ ಆಸ್ತಿಯ ಮೇಲೆ ಕಣ್ಣು ಹಾಕುತ್ತಾನೆ. ಜನತೆಯ ಬಾಯಿಯಲ್ಲಿ ಮಠದ ಸ್ಥಿತಿಗತಿಗಳನ್ನು ತಿಳಿದುಕೊಂಡ ಹರಪನಹಳ್ಳಿ ಪಾಳೇಗಾರ ಸಾಮಂತ ಚಿಗಟೇರಿ ಶಿವನಯ್ಯ ಮಠದ ಮೇಲೆ ದಾಳಿ ಮಾಡುವ ಸಂಚು ರೂಪಿಸುತ್ತಾನೆ.

ಪ್ರಭುತ್ವದ ಪ್ರಧಾನ ಆಶಯವೇ ದಾಳಿ ಮಾಡುವುದು, ಯುದ್ಧ ಮಾಡುವುದು ಮತ್ತು ಮತ್ತೊಬ್ಬರ ಆಸ್ತಿಯನ್ನು ವಶಪಡಿಸಿಕೊಳ್ಳುವುದು. ಈ ಸಂಗತಿಗಳು ಬಾಲಬಸವರ ಮೌಖಿಕ ಕಾವ್ಯಗಳಾದ ಗೋಣಿಬಸಪ್ಪ ಕಾವ್ಯ ಮತ್ತು ಮರುಳಸಿದ್ಧನ ಕಾವ್ಯದಲ್ಲೂ ಕಾಣಬಹುದು. ಗೋಣಿಬಸಪ್ಪ ಅಂದಿನ ಧಾರ್ಮಿಕ ಮತ್ತು ಸಾಮಾಜಿಕತೆಯನ್ನು ಒಂದುಗೂಡಿಸಿ ಮಠ ನಿರ್ಮಾಣ ಮಾಡುತ್ತಾನೆ. ಕೊಟ್ರೇಶನ ಸಹಾಯದಿಂದಾಗಿ ಪ್ರಬಲ ದುಡಿಯುವ ವರ್ಗವಾದ ಕೃಷಿ ಒಡೆತನದ ಒಕ್ಕಲಿಗ ಸಮುದಾಯವಾದ ಲಿಂಗಾಯತರು ಮತ್ತು ಇತರೆ ಸಮುದಾಯದವರು ಈತನಿಗೆ 'ದೈವ' ಎಂದು ನಡೆದುಕೊಂಡಿದ್ದಾರೆ. ಪರಿಣಾಮವಾಗಿ ಮಠದ ಆಸ್ತಿಯು ಹೆಚ್ಚಳವಾಗುತ್ತದೆ. ಹರಪನಹಳ್ಳಿ ಪಾಳೇಗಾರರಿಗೆ ಸೇರಿದ ಕೂಲಹಳ್ಳಿಯಲ್ಲಿ ಈ ರೀತಿಯಾದ ಬೆಳವಣಿಗೆಯು ರಾಜನ ಕಣ್ಣಿಗೆ ಕುಕ್ಕುವಂತೆ ಮಾಡುತ್ತದೆ. ಗೋಣಿಬಸಪ್ಪನ ಪೂರ್ವಾಪರ ವಿಚಾರಿಸಿದಾಗ ಚಿಗಟೇರಿ ಶಿವನಯ್ಯನ ಸೋದರಿಯಾದ ಕನಕಮ್ಮನ ಮಗನೆಂದು ತಿಳಿದುಬರುತ್ತದೆ. ರಾಜನಾದ ಚಿಗಟೇರಿ ಶಿವನಯ್ಯ ಬೇಡರ ಕುಲದವನು. ಅಂದಿನ ಕಾಲದಲ್ಲಿ ಅವರ ಮನೆಯಲ್ಲಿ ದೇವದಾಸಿ ಆಚರಣೆ ರೂಢಿಯಲ್ಲಿರುತ್ತದೆ. ರಾಜನ ಮನೆಯಲ್ಲಿ ಸೂಳೆಗಾರಿಕೆ ಸರಿಯಲ್ಲ ಎಂದು ಕನಕಮ್ಮನನ್ನು ಅರಮನೆಯಿಂದ ಹೊರ ಹಾಕಲಾಗಿರುತ್ತದೆ. ಕನಕಮ್ಮ ರಾಜನಿಗೆ ಸವಾಲು ಹಾಕಿ ಹೊರಬರುತ್ತಾಳೆ. ಇವತ್ತು ನಿನಗೆ ರಾಜಪಟ್ಟವಿರಬಹುದು ನನಗೆ ಬೋಕಿಪಟ್ಟ ಇರಬಹುದು. ಇದೇ ಮುಂದೆ ನಿನಗೆ ಬೋಕಿಪಟ್ಟ ಸಿಗುತ್ತದೆ. ನನಗೆ ನನ್ನ ಮಗನಿಂದ ರಾಜಪಟ್ಟ ಸಿಗುತ್ತದೆ ಎಂದು ತಮ್ಮನಿಗೆ ಸವಾಲು ಹಾಕಿರುವ ಸಂಗತಿಯನ್ನು ರಾಜ ನೆನೆಯುತ್ತಾನೆ. ಅಕ್ಕನೇ ಪ್ರಭುತ್ವದ ವಿರುದ್ಧ ತನ್ನ ಮಗನನ್ನು ತಯಾರು ಮಾಡಿದ್ದಾಳೆ ಎಂದು ಭಾವಿಸಿ ಚಿಗಟೇರಿ ಶಿವನಯ್ಯ ತನ್ನ ಸೋದರ ಅಳಿಯನಾದ ಗೋಣಿಬಸಪ್ಪನ ಕೊಲೆ ಮಾಡಿಸುವ ಪ್ರಯತ್ನ ಮಾಡುತ್ತಾನೆ. ಗೋಣಿಬಸಪ್ಪ ಸತ್ತರೆ ಅವನ ಆಸ್ತಿ, ಮಠಮಾನ್ಯವು ಸಕಲ ಸರ್ವ ಹನ್ನೊಂದು ನನಗೆ ಬರುತ್ತದೆ ಎಂದು ಕೂಲಹಳ್ಳಿಯ ಮಠದ ಆಸ್ತಿಯ ಮೇಲೆ ಕಣ್ಣು ಹಾಕುತ್ತಾನೆ. ಇದರ ಭಾಗವಾಗಿ ಗೋಣಿ ಬಸಪ್ಪನ ಮಾಟ ಮಂತ್ರ ಅಂತ್ರ-ತಂತ್ರದ ಸಹಾಯದಿಂದ ಕೊಲೆ ಮಾಡಿಸುವ ಯತ್ನದಲ್ಲಿ ವಿಫಲನಾಗುತ್ತಾನೆ.

ಚಿಗಟೇರಿ ಶಿವನಯ್ಯ ಗೋಣಿಬಸಪ್ಪನನ್ನು ಸಾಯಿಸಲು ಎರಡು ಮಾಟ ಮಂತ್ರ ತಂತ್ರ ವಿದ್ಯೆಯನ್ನು ಪ್ರಯೋಗಿಸುತ್ತಾನೆ. ಒಂದು ಮೊರವಿ ಗೊಂಬಿಯ ಮೂಲಕ ಗೋಣಿ ಬಸಪ್ಪನನ್ನು ಸಾಯಿಸಲು ನೋಡುತ್ತಾರೆ. ಅವು ಗೋಣಿಬಸಪ್ಪನ ಪವಾಡಕ್ಕೆ ಶರಣಾಗುತ್ತವೆ. ನಂತರ ಎರಡನೇ ಮಾಟವು ತುಂಬಾ ಅಪಾಯಕಾರಿಯಾಗಿರುತ್ತದೆ. ಈ ಮಾಟವನ್ನು ಮನುಷ್ಯರು ಮಾಡದೇ ದೆವ್ವಗಳಿಂದ ಮಾಡಿಸುವ ಸಿದ್ಧರನ್ನು ಹುಡುಕಿಕೊಂಡು ಗಾಳಿ ಪೂಜ ಪಟ್ಟಣಕ್ಕೆ ರಾಜ ತನ್ನ ಗಾಣಿಗರನ್ನು ಕಳಿಸುತ್ತಾನೆ. ಅವರು ಗಾಳಿಪೂಜ ಪಟ್ಟಣದಲ್ಲಿ ದೆವ್ವಗಳು ತಯಾರು ಮಾಡಿದ ಮಾಟದ ಅಂಗಿಯನ್ನು ತಂದು ಚಿಗಟೇರಿ ಶಿವನಯ್ಯನಿಗೆ ಕೊಡುತ್ತಾರೆ. ಆ ಮಾಟದ ಅಂಗಿಯನ್ನು ಗೋಣಿಬಸಪ್ಪನಿಗೆ ತೊಡಿಸಿ ಅತನನ್ನು ಸಾಯಿಸಲು ಚಿಗಟೇರಿ ಪಾಳೇಗಾರನಾದ ಶಿವನಯ್ಯನೇ ಕೂಲಹಳ್ಳಿ ಮಠಕ್ಕೆ ಬರುತ್ತಾನೆ. ಮಠದ ಆವರಣದಲ್ಲಿ ಗೋಣಿಬಸಪ್ಪನಿಗೆ ಹೇಳುವ ಮಾತುಗಳು ಪ್ರಭುತ್ವದ ಧ್ವನಿಯಾಗಿರುವುದನ್ನು ಬಾಲಬಸವ ತುಮನೆಪ್ಪ ಗೋಣಿಬಸಪ್ಪನ ಕಾವ್ಯದಲ್ಲಿ ಈ ರೀತಿಯಾಗಿ ಹೇಳುತ್ತಾನೆ. "ಎಲೆ ಗೋಣಿಬಸವ ಹಿರಿಯರು ಮಾಡಿದ್ದ ಹರಕಿ ಇತ್ತಲೇ ಒಪ್ಪಿಸಾಕ ಬಂದೀನಿ. ಅದರಾಗ ಬಂಗಾರದ ಅಂಗಿ ಐತಿ, ತೊಟ್ಟಕಳಲೇ ನೋಡಿ ಹೋಗಿ ಬಿಡ್ತೀನಿ'. 'ಬಸವ ಯಾರು ಅಂಗಿ ಮುಟ್ಟಂಗಿಲ್ಲ. ಯಾರು ಹಿಡಿಯಂಗಿಲ್ಲ. ಯಾರು ತಂದು ಕೊಡಂಗಿಲ್ಲ. ನೀನಾಗಿ ಬೇಕಾದ್ರೆ ಇಳಿದು ತಗಂಡ ತೊಟ್ಟಕಳಲೇ."[೧೭] ಎಂದು ಹೇಳುವ ಮಾತುಗಳಲ್ಲಿ ಪ್ರಭುತ್ವದ ದಬ್ಬಾಳಿಕೆಯನ್ನು ದರ್ಪವನ್ನು ಕಾಣಹುದಾಗಿದೆ. ಚಿಗಟೇರಿ ಶಿವನಯ್ಯನ ಈ ಮಾತುಗಳನ್ನು ಮೀರದ ಗೋಣಿಬಸಪ್ಪ ಮಾಟದ ಅಂಗಿಯನ್ನು ಹಾಕಿಕೊಂಡು ಸ್ವಲ್ಪ ಸಮಯದ ನಂತರ ಆ ಅಂಗಿಯ ಶಕ್ತಿಯಿಂದಾಗಿ ಗೋಣಿಬಸಪ್ಪ ದಗ ದಗನೇ ಹುರಿದು ಸುಟ್ಟು ಬೂದಿಯಾಗುತ್ತಾನೆ. ಈ ಘಟನೆಯನ್ನು ಕಣ್ಣು ತುಂಬಾ ನೋಡಿದ ಚಿಗಟೇರಿ ಶಿವನಯ್ಯನ ಸಂತೋಷವು ಗೋಣಿಬಸಪ್ಪನ ಕಾವ್ಯದಲ್ಲಿ ಈ ರೀತಿಯಾಗಿದೆ. "ಗೋಣಿಬಸವೇಶ್ವರ ದಗ ದಗ ಉರಿದು ಸುಟ್ಟು ಸತ್ತು ಬಿದ್ದನಂತ್ರೀ. ಅದನ್ನು ನೋಡಿದ ಚಿಗಟೇರಿ ಶಿವನಯ್ಯ ಕ್ವಾರೆ ಹೊಡಿಯುತಾನೇ ಸಾವಿರಾರು ಭಕ್ತರನ್ನು ಮಠ ಬಿಟ್ಟ ಹೊಂಡುಸ್ತಾನು. ಆ ಭಕ್ತರೇ ಈ ಮಠ ಇಲ್ಲಿಗೆ ನನ್ನ ಸ್ವಾಧೀನಾತು. ಇವ್ನ ಹಿರೇ ತೋಪು ನನ್ನ ಸ್ವಾಧೀನಾತು. ಆ ಕರಕಿ ಪಟ್ಟಿ, ಮನೇವು ನನ್ನ ಸ್ವಾಧೀನಾತು ಇನ್ನ ಹೆಂಣ್ತಿ.

ನನ್ನ ವಾಸಿ ಆಗ್ಯಳಯ್ಯೋ । ಆ ಸೋಕೀರ ಮೂವ ತಾಜೀಜಿ
ಮಠ ಬಿಟ್ಟೆ ಹೊಂಡಸ್ತಾನೇ । ಆ ಸೋಕೀರ ಮೂವ ತಾಜೀಜಿ

ರಾಜಾಧಿರಾಜ ಚಿಗಟೇರಿ ಶಿವನಯ್ಯ ಮಠಬಿಟ್ಟು ಹೊಂಡಸ್ತಾನ್ರಿ ಭಕ್ತರನ್ನು ಸಾವ್‌ರಾರು ಸೂಳೆರನ್ನ ಹೊಂಡುಸ್ತನ್ರೀ"[೧೮] ಎನ್ನುವ ಮಾತುಗಳಲ್ಲಿ ಚಿಗಟೇರಿ ಶಿವನಯ್ಯನಿಗೆ ಗೋಣಿಬಸಪ್ಪನ

ಮಠದ ಸಕಲ ಅಸ್ತಿ ಪಾಸ್ತಿಯೊಂದಿಗೆ ಅವನ ಹೆಂಡತಿ ಮತ್ತು ಸೂಳೆಯರನ್ನು ತಾನು ಅನುಭವಿಸಬಹುದು ಎನ್ನುವ ಆಲೋಚನೆಗಳು ಪ್ರಭುತ್ವದ ಆಲೋಚನೆಗಳಾಗಿವೆ ಎನ್ನುವುದನ್ನು ಗಮನಿಸಬೇಕಾಗುತ್ತದೆ.

ಉಜ್ಜಯಿನಿ ಮರುಳಸಿದ್ಧರ ಮಠದ ಮೇಲೆ ದಾಳಿ :

ಲಿಖಿತ ಚರಿತ್ರೆಯನ್ನು ಬರೆದಿರುವ ಇತಿಹಾಸಕಾರರು ಕೆಲವೊಂದು ಚಾರಿತ್ರಿಕ ಘಟನೆಗಳು ಮತ್ತು ಆ ಘಟನೆಯಿಂದಾದ ಪರಿಣಾಮಗಳನ್ನು ಸ್ಪಷ್ಟವಾಗಿ ಹೇಳದೆ ಹೋದ ಕಾರಣ ಅಲ್ಲಿನ ಸ್ಥಳೀಯ ಸಾಂಸ್ಕೃತಿಕ ಚರಿತ್ರೆಯು ಅಪೂರ್ಣವೆನಿಸುವುದು. ಇದಕ್ಕೆ ಸಾಕ್ಷಿಯನ್ನುವಂತೆ ಉಜ್ಜಯಿನಿ ಮರುಳಸಿದ್ಧರ ಮಠದ ಧಾರ್ಮಿಕ ಮತ್ತು ಆರ್ಥಿಕ ಸಂಘರ್ಷವನ್ನು ನೋಡಬಹುದಾಗಿದೆ. ಉಜ್ಜಯಿನಿ ಮಠ ಮತ್ತು ಸಿರಿಗೇರಿ ಮಠಗಳ ನಡುವೆ ವೈಮನಸ್ಸು ಇಂದಿಗೂ ಜೀವಂತವಾಗಿದೆ. ಅಂದರೆ ಉಜ್ಜಯಿನಿ ಮಠ ಯಾರಿಗೆ ಸೇರಬೇಕು ಎನ್ನುವುದರ ಕುರಿತು ಕೋರ್ಟಿನಲ್ಲಿ ವ್ಯಾಜ್ಯ ಇರುವುದರಿಂದ ಈ ಎರಡು ಮಠಗಳ ನಡುವೆ ಧಾರ್ಮಿಕ ಮತ್ತು ಆರ್ಥಿಕ ಸಂಘರ್ಷವಿದೆ. ಈ ಸಂಘರ್ಷಕ್ಕೆ ಮೂಲ ಕಾರಣ ಯಾರು? ಯಾವ ಕಾರಣಕ್ಕಾಗಿ ಮರುಳಸಿದ್ಧರು ಉಜ್ಜಯಿನಿ ಮಠವನ್ನು ಬಿಡುವ ಪ್ರಸಂಗ ಬರುತ್ತದೆ. ಅದರಿಂದಾದ ಪರಿಣಾಮಗಳಾವುವು? ಎನ್ನುವ ಸಂಗತಿಯನ್ನು ಬಿಚ್ಚಿಡುವ ಕಾರ್ಯ ಬಾಲಬಸವರ ಮೌಖಿಕ ಸಾಹಿತ್ಯ ಮಾಡುತ್ತದೆ. ಮರುಳಸಿದ್ಧನ ಕಾವ್ಯವನ್ನು ಹಾಡುವ ಬೈರದೇವರಗುಡ್ಡದ ಬಾಲಬಸವ ಪರಂಪರೆಯವರು ಮರುಳಸಿದ್ಧರ ಮಠದಲ್ಲಿ ದೀಕ್ಷೆ ಪಡೆಯುತ್ತಾರೆ. ಮರುಳಸಿದ್ಧ ಮಹಾದೇವರನ್ನು ತಮ್ಮ ಸಾಂಸ್ಕೃತಿಕ ನಾಯಕನೆಂದು ಒಪ್ಪಿಕೊಂಡಿದ್ದಾರೆ. ಮೌಖಿಕ ಕಾವ್ಯದಲ್ಲಿ ಮರುಳಸಿದ್ಧ ಮಹಾದೇವನನ್ನು ಕುರಿತು ಹೀಗೆ ಹೇಳುತ್ತಾರೆ 'ಮಾದ್ರಿಗೆ ಮಗ ಸಾದ್ರಿಗೆ ಗುರು ಜಗದ್ಗುರು ಮರುಳಸಿದ್ಧ ಮಹಾದೇವ' ಎಂದು ಹೇಳುತ್ತಾರೆ. ಇದರಿಂದ ತಮ್ಮ ಅಸ್ತಿತ್ವವನ್ನು ಕಟ್ಟಿಕೊಳ್ಳುವ ಅಥವಾ ಅಸ್ತಿತ್ವವನ್ನು ಮರುಳಸಿದ್ಧರೊಂದಿಗೆ ಗಟ್ಟಿಗೊಳಿಸುವ ಕಾರ್ಯವನ್ನು ಬಾಲಬಸವರು ಮಾಡುತ್ತಾರೆ.

ಬಾಲಬಸವ ತುಮನೆಪ್ಪ ಹಾಡುವ ಮರುಳಸಿದ್ಧನ ಕಾವ್ಯದಲ್ಲಿರುವ ಪ್ರಧಾನವಾದ ಅಂಶಗಳೆಂದರೆ ಮರುಳಸಿದ್ಧನ ಸಂಘರ್ಷಮಯ ಜೀವನ. ಪ್ರಭುತ್ವವನ್ನು ಎದುರು ಹಾಕಿಕೊಂಡು ಮಠ ಕಟ್ಟಿದಾಗ ಅದು ಯಾವ ರೀತಿಯಲ್ಲಿ ಆ ಮಠದ ಮೇಲೆ ದಾಳಿ ಮಾಡುತ್ತದೆ ಎನ್ನುವುದನ್ನು ಪ್ರಭುತ್ವದ ಆಡಳಿತದ ಭಾಗವಾಗಿ ನೋಡಬಹುದಾಗಿದೆ. ಮರುಳಸಿದ್ಧನು ಮಾದಿಗರ ಮಗನಾದರೂ ಈ ಮಧ್ಯ ಕರ್ನಾಟಕದಲ್ಲಿ ಲಿಂಗಾಯತರ ಸಮಕ್ಕೆ ನಿಂತು ಮಠ ಕಟ್ಟುವುದು ಸಾಮಾನ್ಯವಾದ ಮಾತಲ್ಲ. ಆ ಮಠದ ಮೇಲೆ ಪ್ರಭುತ್ವವು ದಾಳಿ ಮಾಡಿ ಮರುಳಸಿದ್ಧರು ಉಜ್ಜನಿ ಮಠ ಬಿಟ್ಟು ಸಿರಿಗೇರಿಗೆ ಹೋಗುವ ಸಂಗತಿಗಳು ಚಾರಿತ್ರಿಕವಾಗಿ ಸತ್ಯ ಸಂಗತಿಗಳಾಗಿವೆ. ಈ ಚಾರಿತ್ರಿಕ

ಘಟನೆಗಳನ್ನು ಯಾವುದೇ ಲಿಖಿತ ದಾಖಲೆಗಳು ದಾಖಲಿಸುವ ಪ್ರಯತ್ನವಾಗಿಲ್ಲ. ಆದರೆ ಬಾಲಬಸವರ ಮೌಖಿಕ ಸಾಹಿತ್ಯವು ಆ ಸ್ಥಳೀಯ ಸಾಂಸ್ಕೃತಿಕ ಚರಿತ್ರೆಯನ್ನು ತಮ್ಮ ಮೌಖಿಕ ಕಾವ್ಯದಲ್ಲಿ ಹೇಳುವ ಕಾರ್ಯ ಮಾಡುತ್ತದೆ.

೭.೫. ಯುದ್ಧ

ಪ್ರಭುತ್ವವು ಯುದ್ಧದಾಹಿಯಾಗಿರುವುದು ಸಾಮಾನ್ಯ ಸಂಗತಿ. ಲಿಖಿತ ಚರಿತ್ರೆಯಲ್ಲಿ ಅನೇಕ ಯುದ್ಧದ ದಾಖಲೆಗಳು ಸಿಗುತ್ತವೆ. ಆದರೆ ಬಾಲಬಸವರ ಮೌಖಿಕ ಕಾವ್ಯದಲ್ಲಿರುವ ಹರಪನಹಳ್ಳಿ ಪಾಳೇಗಾರರ ಸಾಮಂತನಾದ ಚಿಗಟೇರಿ ಶಿವನಯ್ಯ ಮತ್ತು ಪಿಕನಗೌಡನ ಮಕ್ಕಳೊಂದಿಗೆ ನಡೆದ ಯುದ್ಧದ ಸಂಗತಿಗಳು ಲಿಖಿತ ಚರಿತ್ರೆಯಲ್ಲಿ ಕಂಡುಬರುವುದಿಲ್ಲ. ಗೋಣಿಬಸಪ್ಪ ಎಲ್ಲೂ ಯುದ್ಧ ಮಾಡುವುದಿಲ್ಲ. ಬದಲಿಗೆ ಗುಮ್ಮಗೋಳದ ಪಿಕನಗೌಡನ ಮಕ್ಕಳ ಮೂಲಕ ಯುದ್ಧ ಮಾಡಿಸುತ್ತಾನೆ. ಈ ಯುದ್ಧ ಸಂಗತಿಯನ್ನು ಬಾಲಬಸವ ತುಮನೆಪ್ಪ ಈ ಗೋಣಿಬಸವನ ಕಾವ್ಯದಲ್ಲಿ ಈ ರೀತಿಯಾಗಿ ಹೇಳುತ್ತಾನೆ. "ಗೋಣಿಬಸವೇಶ್ವರ ಗುಮ್ಮಗೋಳದಾಗೆ ಪಿಕನಗೌಡನ ಮನೆಯಾಗ ಮೂರು ತಿಂಗಳು ಕಾಲ ಇದ್ದಾಗ. ಹರಪನಹಳ್ಳಿ ಪಾಳೇಗಾರನಿಗೆ ಈ ಸುದ್ದಿ ಮುಟ್ಟಿತಂತ್ರೀ. ಅವಾಗ ಚಿಗಟೇರಿ ಪಾಳೇಗಾರ ಶಿವನಯ್ಯ ಸಿಂಹಾಸನದಲ್ಲಿ ಕುಳಿತುಕೊಂಡು ಗೋಣಿಬಸವೇಶ್ವರನ ಮೇಲೆ ಹಲ್ಲು ಕಡಿತಾನ್, ತನ್ನ ಗೊಂಡದ ಮೀಸೆ ಮ್ಯಾಗ ಕೈ, ಹಾಕಿ ಪಕ ಪಕ ನಗುತಾನ್. ಕಿಲ ಕಿಲ ನಗುತಾನ್, ಅವಗಿನ ಕಾಲಕ್ಕೆ ಪೆನ್ನಿಲ್ಲಾ ಕಾಗ್ದ ಇಲ್ಲಾ. ತಾಳಿಗರಿ ತಗಂಡು, ಅಂಕಳಿ ಮುಳ್ಳು ತಗಂಡು, ಗುಮ್ಮಗೋಳದ ಪಿಕನಗೌಡನಿಗೆ ವಾಲಿ ಬರಿತಾನಂತರೀ. ಏನು ಬರಿತಾನು 'ಗುಮ್ಮಗೋಳದ ಪಿಕನಗೌಡ ನಿನ್ನ ಮನಿಯೊಳಗೆ ಗೋಣಿಬಸವ ಅದನಂತೆ. ಈ ವಾಲಿ ನೋಡಿದ ತಕ್ಷಣ ಅವ್ನ ತಗಂಡ ಬಂದು ನನ್ನ ಕೈಯಾಗ ಕೊಡಬೇಕು. ನೀನು ಆತಿಥ್ಯಾ ಮಾಡಿ, ಅವ್ನ, ಅಲ್ಲೇ ಇಟ್ಟಗಂಡ್ರೇ, ಹನ್ನೆರಡು ಸಾವಿರ ಬೇಡ್ಕಿ, ಅಲ್ಲ ಹನ್ನೆರಡು ಮತ್ತು ಹನ್ನೆರಡು ಇಪ್ಪತ್ನಾಲ್ಕು ಸಾವಿರ ಸೈನ್ಯ ತಗಂಡು ಬಂದು ನಿಮ್ಮೂರಿಗೆ ಮುತ್ತಿಗೆ ಹಾಕಿ ಯುದ್ಧ ಮಾಡಿ ಗೋಣಿಬಸವನ್ನ ತಗಂಡು ಬರ್ತೀನಿ. ಎಂದು ವಾಲಿ ಬರೆದು ದುಂಡಾಳಕೈ ಕೊಟ್ಟು ಕಳಸಿದ್ಯಾ"[೧೯] ಎನ್ನುವ ಈ ಮಾತುಗಳಲ್ಲಿ ಯುದ್ಧ ಸಾಧ್ಯತೆಯನ್ನು ಅಥವಾ ವಿರೋಧಿಗಳನ್ನು ಎದುರಿಸುವ ಪ್ರಯತ್ನವಾಗಿ ಕಂಡುಬರುತ್ತದೆ. ಯುದ್ಧಪೂರ್ವದಲ್ಲಿ ಪ್ರಭುತ್ವವು ಶತ್ರುಗಳು ಶರಣಾಗುವಂತೆ ಮಾಡುವ ಮೊದಲ ಕೆಲಸ ಎಂದರೆ ಅದು ವಾಲಿ ಬರೆದು ಕಳಿಸುವುದು. ಅದರ ಜೊತೆಗೆ ನಮ್ಮ ಪ್ರಭುತ್ವದ ಸೈನ್ಯ ಎಷ್ಟು ಇದೆ. ನೀವು ಶರಣಾಗದಿದ್ದರೆ, ಸೈನ್ಯದ ದಾಳಿಯಿಂದ ಆಗುವ ಅನಾಹುತಗಳನ್ನು ಮೊದಲೆ ಎಚ್ಚರಿಸುವುದು ಪ್ರಭುತ್ವದ ಯುದ್ಧ ತಂತ್ರವಾಗಿರುತ್ತದೆ.

ಯುದ್ಧದ ದಾಳಿಯಿಂದಾಗುವ ಪರಿಣಾಮ

ಹರಪನಹಳ್ಳಿ ಪಾಳೇಗಾರ ಶಿವನಯ್ಯನ ವಾಲಿ ನೋಡಿದ ತಕ್ಷಣವೇ ಗುಮ್ಮಗೋಳದ

ಪಿಕನಗೌಡ ಹೆದರಿದ ಪ್ರಭುತ್ವದ ವಿರೋಧವನ್ನು ಕಟ್ಟಿಕೊಂಡರೆ ನನ್ನ ಗುಮ್ಮಗೋಳ ಏನಾಗುತ್ತದೆ ಎಂದು ಗೋಣಿಬಸಪ್ಪನಿಗೆ ಬಂದು ವಿವರಿಸುತ್ತಾನೆ. "ಗುರುಗಳೇ ಗುರುಗಳೇ ರಾಜ ಬರ್‍ತಾನಂತೆ. ಯುದ್ಧ ಮಾಡಿ ನನ್ನೂರು ಹಾಳುಮಾಡಿ ಹೊಕ್ಕಾನಂತೆ. ನಿನ್ನ ಕಾಲಾಗೇ ನನ್ನೂರು ಹಾಳಾಗೋಕತೆ ದಯಮಾಡ್ರಿ ರಾಜ ಬರ್‍ತಾನಂತೆ. ಊರು ಹಾಳಾಗಿ ಹೊಕ್ಕಾತೇ ನಡ್ರಿ ಹೋಗಿ ಬರ್‍ರೀ ಅಂತ ಗೋಣಿ ಬಸವೇಶ್ವರನಿಗೆ ಬೇಡಿಕೊಳ್ಳುತ್ತಾನೆ"[೨೦] ಎನ್ನುವ ಈ ಸಾಲುಗಳಲ್ಲಿ ಪ್ರಭುತ್ವವು ದಾಳಿ ಮಾಡಿದ ಊರುಗಳಲ್ಲಿ ಏನಾಗುತ್ತದೆ ಎನ್ನುವ ವಿವರಗಳನ್ನು ತಿಳಿಸುತ್ತದೆ. ಯುದ್ಧದಾಹಿಗಳಾದ ರಾಜರು ತಮ್ಮ ಅಧಿಕಾರ ಬಲವರ್ಧನೆಗಾಗಿ ಮತ್ತೊಬ್ಬರ ಮೇಲೆ ದಾಳಿ ಮಾಡುವುದು, ಯುದ್ಧ ಮಾಡುವುದು ಸಾಮಾನ್ಯವಾಗಿದೆ. ಆದರೆ ಇಲ್ಲಿ ಆಸ್ತಿಗಿಂತ ಗೋಣಿಬಸಪ್ಪನು ಮುಖ್ಯವಾಗಿ ಕಾಣುತ್ತಾನೆ. ಈತನಿಗೆ ಆಶ್ರಯ ನೀಡಿದ ಗುಮ್ಮಗೋಳದ ಪಿಕನಗೌಡನ ಮೇಲೆ ಯುದ್ಧ ಸಾರುವುದು ಪ್ರಭುತ್ವದ ಭಾಗವಾಗಿ ನೋಡಬೇಕಾಗುತ್ತದೆ.

ಅ. ಯುದ್ಧ ಕಲೆ : ಸಾಮುಶಕ್ತಿ ಗರಡಿಮನೆ

ಗೋಣಿಬಸಪ್ಪ ಹರಪನಹಳ್ಳಿ ಪಾಳೇಗಾರರ ಉಪಟಳ ತಾಳಲಾರದೆ ತುಂಗಭದ್ರಾ ನದಿ ದಾಟಿ ಗುಮ್ಮಗೋಳ ಸೇರಿಕೊಳ್ಳುತ್ತಾನೆ. ಗೋಣಿಬಸಪ್ಪನನ್ನು ಬೆನ್ನಟ್ಟಿಕೊಂಡು ಬಂದ ಹರಪನಹಳ್ಳಿ ಬ್ಯಾಡರ ಸೈನಿಕರೆಲ್ಲಾ ತುಂಗಭದ್ರಾ ನದಿಯಲ್ಲಿ ಮುಳುಗಿ ಸತ್ತುಹೋಗುತ್ತಾರೆ. ಇಷ್ಟೆಲ್ಲಾ ಆದರೂ ಹರಪನಹಳ್ಳಿ ಪಾಳೇಗಾರನಿಗೆ ಗೋಣಿಬಸಪ್ಪನ ಮೇಲೆ ಸಿಟ್ಟು ಹೋಗುವುದಿಲ್ಲ ಎನ್ನುವ ಸಂಗತಿ ಗೋಣಿಬಸಪ್ಪನಿಗೂ ತಿಳಿದಿತ್ತು. ಈ ಕಾರಣಕ್ಕಾಗಿ ಗೋಣಿಬಸಪ್ಪ ಪ್ರಭುತ್ವದ ಸೈನ್ಯವನ್ನು ಸಮರ್ಥವಾಗಿ ಎದುರಿಸುವ ತಂತ್ರಗಾರಿಕೆ ಕಲೆಗಳನ್ನು ಕಲಿತುಕೊಂಡಿದ್ದರಿಂದ ಗುಮ್ಮಗೋಳದ ಪಿಕನಗೌಡನ ಐದು ಜನ ಮಕ್ಕಳಿಗೆ ಯುದ್ಧ ತರಬೇತಿ, ಸಮರ ಕಲೆಗಳ ತಂತ್ರಗಾರಿಕೆಗಳನ್ನು ಕಲಿಸುವ ಪ್ರಯತ್ನ ಮಾಡುತ್ತಾನೆ. ಸಾಮುಶಕ್ತಿ ಎಂದರೆ ಗರಡಿ ಮನೆಯಲ್ಲಿ ಯುದ್ಧ ತರಬೇತಿ ನೀಡುವ ತಂತ್ರಗಾರಿಕೆ. ಇದನ್ನು ಆ ಐದು ಜನ ಮಕ್ಕಳಿಗೆ ಗೋಣಿಬಸಪ್ಪ ಆರು ತಿಂಗಳು ಕಾಲ ಯುದ್ಧ ತರಬೇತಿಯನ್ನು ನೀಡುತ್ತಾನೆ. ಗೋಣಿಬಸಪ್ಪ ಜಂಗಮನಾದ್ರೂ, ಶಿವಶರಣನಾದ್ರೂ ಈ ಸಮರ ಕಲೆಯನ್ನು ಕಲಿತುಕೊಂಡಿರುತ್ತಾನೆ. ಇದಕ್ಕೆ ಸಾಕ್ಷಿ ಎನ್ನುವಂತೆ ಕೂಲಹಳ್ಳಿ ಮಠದೊಳಗಿನ ಗರಡಿಮನೆ. ಆ ಗರಡಿ ಮನೆಯಲ್ಲಿ ಗೋಣಿಬಸಪ್ಪ ಸಾಮು ಮಾಡುವುದರ ಮೂಲಕ ಈ ಯುದ್ಧ ತಂತ್ರಗಾರಿಕೆಯನ್ನು ಕಲಿತುಕೊಂಡಿರಬಹುದು ಎನ್ನುವ ಕುರುಹುಗಳು ಈಗಲೂ ಮಠದೊಳಗೆ ಕಂಡುಬರುತ್ತವೆ. ಜಂಗಮರು ಕೊಲೆ ಮಾಡಬಾರದು, ಅದರಲ್ಲಿಯೂ ತಾನೇ ತನ್ನ ಸೋದರ ಮಾವನನ್ನು ಕೊಲೆ ಮಾಡಬಾರದು ಎಂದು ಗೋಣಿಬಸಪ್ಪ ಗುಮ್ಮಗೋಳದ ಪಿಕನಗೌಡನ ಐದು ಮಕ್ಕಳಿಗೆ 'ಸಾಮು'ವಿದ್ಯೆಯನ್ನು ಕಲಿಸಿ, ಪ್ರಭುತ್ವದ ವಿರುದ್ಧ ಹೋರಾಡುವಂತೆ ಅವರನ್ನು ಅಣಿ ಮಾಡುತ್ತಾನೆ ಎನ್ನುವುದನ್ನು ಬಾಲಬಸವ ತುಮನೆಪ್ಪ ಗೋಣಿಬಸಪ್ಪನ ಕಾವ್ಯ ಹಾಡುವಾಗ ಈ ರೀತಿಯಾಗಿ ಹೇಳುತ್ತಾನೆ

“ಹರಹರ ಭಗವಂತಾ । ತಾನಿ ತಂದನಿ ತಾನೋ ।
ಕುತನಿ ಕುಡಿ ಚಣ್ಣೋ । ತಾನಿ ತಂದನಿ ತಾನೋ ।
ಕೊಂಡೆದಾ ನಡುಕಟ್ಟೋ । ತಾನಿ ತಂದನಿ ತಾನೋ ।
ಕೊಳ್ಳಾಗ ಇರದಾಳೆ । ತಾನಿ ತಂದನಿ ತಾನೋ ।
ರಟ್ಟೆಗೆ ರಣಬಿಲ್ಲೇ । ತಾನಿ ತಂದನಿ ತಾನೋ ।
ಮುಂಗೈ ಬಂಗಾರ ತಾಯತೋ । ತಾನಿ ತಂದನಿ ತಾನೋ ।
ತಯ್ಯಾರು ಮಾಡ್ಯಾನೋ । ತಾನಿ ತಂದನಿ ತಾನೋ ।”[೨೧]

ಸಾಮು ವಿದ್ಯೆಯನ್ನು ಅದರ ಪಟ್ಟುಗಳನ್ನು ಗೋಣಿಬಸವ ಪಿಕನಗೌಡನ ಐದು ಜನ ಮಕ್ಕಳಿಗೆ ಯುದ್ಧ ತಂತ್ರಗಾರಿಕೆಯ ಭಾಗವಾಗಿ ಕಲಿಸಿ, ಅವರನ್ನು ಹರಪನಹಳ್ಳಿ ಸಾಮಂತ ಪಾಳೇಗಾರನಾದ ಶಿವನಯ್ಯನ ಮೇಲೆ ಯುದ್ಧ ಮಾಡಲು ಐದು ಖಡ್ಗ ಕೊಟ್ಟು ‘ಮಕ್ಕಳಾ ಮಕ್ಕಳಾ ವೈರಿ ಖಡ್ಗ ಅಡಿಯಾಗಲಿ ನಿಮ್ಮ ಬಡ್ಗ ಮೇಲಾಗ್ಲಪ್ಪಾ’ ಎಂದು ಹರಸಿ ಯುದ್ಧಕ್ಕೆ ಕಳಿಸಿಕೊಡುತ್ತಾನೆ. ಇವರು ರಣರಂಗಕ್ಕೆ ಹೋದಾಗ ಗೋಣಿಬಸವೇಶ್ವರ ಮತ್ತು ಪಿಕನಗೌಡ ಮೇಲು ಮಹಡಿ ಹತ್ತಿ ಅವರ ಯುದ್ಧವನ್ನು ನೋಡುತ್ತಾರೆ. ಬಾಲಬಸವ ತುಮನೆಪ್ಪನವರು ಅಲ್ಲಿ ನಡೆಯುವ ಯುದ್ಧದ ವರ್ಣನೆಯನ್ನು ಈ ರೀತಿಯಾಗಿ ಹೇಳುತ್ತಾರೆ.

“ಇನ್ಯಾಕ ಅನುಮಾನಣ್ಣ ಅನುಮಾನೋ ಜೀಜಿ.
ಅವರೇ ಭೂಮಿ ಬಿಟ್ಟಾರಣ್ಣಾ ಬಿಟ್ಟಾರೋ ಜೀಜಿ
ವೇಗದಲ್ಲಿ ಹೋಗ್ಯಾರಣ್ಣ ಹೋಗ್ಯಾರೋ ಜೀಜಿ
ಹೆಣ ಮ್ಯಾಕ ತೂರ್ಯಾರಣ್ಣಾ ತೂರ್ಯಾರೋ ಜೀಜಿ
ಮಕ್ಕಳ ಕತ್ತಿಗೆ ಒಡ್ಡ್ಯಾರಣ್ಣಾ ಒಡ್ಡ್ಯಾರೋ ಜೀಜಿ
ನಿಂಬೆಹಣ್ಣಾ ಹೆಚ್ಚಿದಂಗೇ ಹೆಚ್ಚ್ಯಾರೋ ಜೀಜಿ
ಮಕ್ಕಳು ಯುದ್ದ ಮಾಡ್ಯಾರಣ್ಣೋ ಮಾಡ್ಯಾರೋ ಜೀಜಿ
ರಗುತ ಕಾಲುವೆ ಹರದಾದಣ್ಣ ಹರಿದವೋ ಜೀಜಿ
ಸೈನ್ಯ ಎಲ್ಲಾ ಸೋತಾವಣ್ಣ ಸೋತಾವು ಜೀಜಿ”[೨೨]

ಎಂದು ಹಾಡುವ ಈ ಸಾಲುಗಳಲ್ಲಿ ಅಲ್ಲಿ ನಡೆದ ಯುದ್ಧ ಯಾವ ರೀತಿಯಾಗಿತ್ತು ಎಂಬುದನ್ನು ಹೇಳುತ್ತದೆ. ಗುಮ್ಮಗೋಳದ ಪಿಕನಗೌಡನ ಮಕ್ಕಳು ಮತ್ತು ಹರಪನಹಳ್ಳಿಯ ಪಾಳೇಗಾರರ ಸಾಮಂತ ದೊರೆಯಾದ ಚಿಗಟೇರಿ ಶಿವನಯ್ಯರ ನಡುವೆ ನಡೆದ ಯುದ್ಧವು

ಭೀಕರವಾಗಿತ್ತು. ಪಿಕನಗೌಡರ ಮಕ್ಕಳು ನಡೆಸಿದ ವೇಗದ ದಾಳಿಯು ಚಿಗಟೇರಿ ಶಿವನಯ್ಯನ ಸೈನ್ಯವನ್ನು ನಿಂಬೆಹಣ್ಣು ಕತ್ತರಿಸಿದಂತೆ ಕತ್ತರಿಸಿ ಹಾಕಿದರು. ಯುದ್ಧದ ರಣರಂಗವೆಲ್ಲಾ ರಕ್ತದ ಕಾಲುವೆ ಹರಿಯುವಂತೆ ಹೆಣಗಳ ದೇಹದಿಂದ ರಕ್ತ ಹರಿಯುತ್ತಿತ್ತು. ಈ ಯುದ್ಧದಲ್ಲಿ ಚಿಗಟೇರಿ ಶಿವನಯ್ಯನ ಸೈನ್ಯವು ಸೋತು ಹೋಗಿರುವ ಸಂಗತಿಯನ್ನು ಇಲ್ಲಿ ವರ್ಣಿಸುತ್ತಾರೆ.

ಯುದ್ಧದಲ್ಲಿ ಗೋಣಿಬಸಪ್ಪನ ಸೋದರವಾವ ಸೋತ ಸ್ಥಿತಿಯು ಯುದ್ಧ ವರ್ಣನೆಯು ಮುಂದುವರಿದ ಭಾಗವಾಗಿ ನೋಡುವುದಾದರೆ. "ಸೈನ್ಯಲ್ಲಾ ಸತ್ತು ಕೊಟ್ಟೋತಂತ್ರೀ. ಶಿವನಪ್ಪ ಒಬ್ಬ ಉಳಕಂಡ್ನಂತೆ. ಐದು ಮಕ್ಕಳು ಸೈನ್ಯವೆಲ್ಲಾ ಹಾಳು ಮಾಡಿದಾಗ ಶಿವನಪ್ಪ ಒಬ್ನ ಉಳಕಂಡ. ಕೆಕ್ಕರಿಸಿ ಅತ್ತಿತ್ತಾ ನೋಡುತ್ತಾನೆ. ಸೈನ್ಯವಲ್ಲ. ರಕ್ತದ ಕಾಲವೆ ಹರೀತೈತೆ. ಆಗ ಐದು ಮಂದಿ ಮಕ್ಕಳು ಉಸಿರು ಬಿಟ್ಟ ಶಿವನಪ್ಪನಯ್ಯ ಕಡೆಗು ಹೋಗಿ ಮುತ್ತಿಗೆ ಹಾಕಿದ್ರೂ, ಖಡ್ಗ ಎತ್ತಿ ಬಿಟ್ರು ಆಗ ಗೋಣಿಬಸಪ್ಪ ಕೂಗಿ ಹೇಳುತ್ತಾನೆ. ಮಕ್ಕಳೇ ಮಕ್ಕಳೇ ನನಗೆ ಸ್ವಾದರ ಮಾವಪ್ಪ ನನ್ನ ಮಾವನ್ನ ಕಡಿಬ್ಯಾಡ್ರೊ, ಕೊಲ್ಲಬ್ಯಾಡ್ರಿ, ಕೂಗಿ ಹೇಳುತ್ತಾನೆ. ಆಗ ಐದು ಜನರು ಗುರುಗಳೇ ನಿಮ್ಮ ಮಾತು ಕೇಳಿ ಇವ್ನ ಬಿಟ್ರೆ ನಮಗೆ ಮುಂದೆ ಉಳುವಿಲ್ಲ ಅಂತ ಹೇಳಿ ಶಿವನಯ್ಯನನ್ನು ಕಡಿತಾರ."[೨೩] ಪಿಕನಗೌಡನ ಮಕ್ಕಳು ಗೋಣಿಬಸಪ್ಪನ ಮಾತು ಕೇಳದೇ ಚಿಗಟೇರಿ ಪಾಳೇಗಾರನಾದ ಶಿವನಯ್ಯನ ತಲೆ ಕತ್ತರಿಸಿದಾಗ ಆತನ ಡಿಂಭ ನೆಲಕ್ಕೆ ಬೀಳುತ್ತದೆ. ಅನತಿ ದೂರ ಗಾಳಿಯಲ್ಲಿ ತಲೆ ತೇಲಿಕೊಂಡು ಗೋಣಿಬಸಪ್ಪನ ತೊಡೆ ಮೇಲೆ ಬಂದು ಬಿದ್ದಾಗ ಗೋಣಿಬಸಪ್ಪ ರೋದ ಮಾಡುತ್ತಾ ಹೇಳುತ್ತಾನೆ. ಇಲ್ಲಿಗೆ ಹನ್ನೆರಡು ವರ್ಷ ನಿನ್ನ ಕೂಡ ಕಾದಾಟ ನಾನೇ ಮಾಡಿದೆ. ಈಗ ಯಾರ ಜೊತೆ ಕಾದಾಟ ಮಾಡಲಿ ಅಂತ ನೆನೆದು ದುಃಖ ಮಾಡಿ ಶಿವನಯ್ಯನ ತಲೆಯನ್ನು ನದಿಯಲ್ಲಿ ತೇಲಿ ಬಿಡುತ್ತಾನೆ. ಅಲ್ಲಿಗೆ ಚಿಗಟೇರಿ ಶಿವನಯ್ಯನ ಕಥೆ ಮುಗಿಯುತ್ತದೆ. ಈ ಮೌಖಿಕ ಕಾವ್ಯ ನಿರೂಪಿಸುವ ಯುದ್ಧದ ಚಾರಿತ್ರಿಕ ಸಂಗತಿಯು ಲಿಖಿತ ಚರಿತ್ರೆಯಲ್ಲಿ ಕಂಡುಬರುವುದಿಲ್ಲ.

ವಂತಿಕೆ (ತೆರಿಗೆ)

ಪ್ರಭುತ್ವವು ತನ್ನ ಆಡಳಿತಾತ್ಮಕ ಯೋಜನೆಗಳನ್ನು ಜಾರಿಗೆ ತರಲು ಜನತೆಯ ದುಡಿಮೆಯನ್ನು ಅವಲಂಬಿಸಿದೆ. ಇದರಿಂದಾಗಿ ರಾಜ್ಯ ಅಥವಾ ರಾಷ್ಟ್ರದ ಪ್ರಭುತ್ವಗಳು ತನ್ನ ಅಧಿಕಾರ ವಿಸ್ತರಣೆ, ಯುದ್ಧ, ಮೋಜಿನ ಅಧಿಕಾರಕ್ಕಾಗಿ ದೇಶದ ಸಾಮಾನ್ಯ ಪ್ರಜೆಗಳ ವಂತಿಗೆಯ ಮೇಲೆ ಯಾವಾಗಲೂ ಕಣ್ಣಿಟ್ಟಿರುತ್ತದೆ. ಹಾಗಾಗಿ ಕಾಲ ಕಾಲಕ್ಕೆ ಜನತೆಯ ಮೇಲೆ ವಿಧಿಸುವ, ತೆರಿಗೆಯನ್ನು ಪರಿಷ್ಕರಿಸುವ ಕಾರ್ಯ ಮಾಡುತ್ತದೆ. ಪ್ರಭುತ್ವವು ಯಾವ ಯಾವ ತೆರಿಗೆಯನ್ನು ಯಾವುದರ ಮೇಲೆ ಹಾಕುತ್ತಾರೆ? ಇದರಿಂದ ಸಾಮಾನ್ಯ ಜನತೆಯ ಮೇಲೆ ಆಗುವ ಪರಿಣಾಮಗಳನ್ನು ಬಾಲಬಸವರ ಮೌಖಿಕ ಸಾಹಿತ್ಯವು ತಿಳಿಸುವ ಪ್ರಯತ್ನ ಮಾಡುತ್ತದೆ. ಜನತೆಯ ಮೇಲೆ ವಿಧಿಸುವ ತೆರಿಗೆಯ

ಸ್ವರೂಪವನ್ನು ಕುರಿತು ಬಾಲಬಸವ ನಾಗೇಂದ್ರಪ್ಪನವರು ಈ ರೀತಿಯಾಗಿ ಹೇಳುತ್ತಾರೆ.

ಲೆಕ್ಕದ ಮ್ಯಾಲೆ ಲೆಕ್ಕ ದಂಡದ ಮ್ಯಾಲೆ ದಂಡ
ಉಂಡ ಊಟಕ್ಕೊ ಲೆಕ್ಕ ಕುಡಿಯೋ ನೀರಿಗೂ ಲೆಕ್ಕ
ಹತ್ತ ಕಲ್ಲಿಗೋ ಲೆಕ್ಕ ಸುಟ್ಟಿರುವ ರೊಟ್ಟಿಗೂ ಲೆಕ್ಕ
ಹಿತ್ತಲಾಗಿರುವ ನುಗ್ಗಿ ಮರಕ್ಕೋ ಲೆಕ್ಕ
ಕಟ್ಟಿಗೆ ಗುಡಿಗೋ ಲೆಕ್ಕ ಸುಣ್ಣದ ಗ್ವಾಡಿಗೂ ಲೆಕ್ಕ
ಸೊಳೆಯ ಮಿಂಡ್ರಿಗೂ ಲೆಕ್ಕ
ಗಂಡು ಹೆಣ್ಣಿಗೆ ಗುರುವೇ ಮಗಳು ದರಿದ್ರಳಾಗಿ ಹುಟ್ಟ ಬೇಕ್ರಿ
ಗಂಡಿಗೆ ಮೂರೇ ಹಣ ಹೆಣ್ಣಿಗೆ ಆರೇ ಹಣ
ಆರು ಮೂರು ಒಂಭತ್ತು ಹಣ ಮತ್ತೇ ಕಟ್ಟದೋ ಬರುತಾವರ್ರೀ
ಬಸವಹೊ............... **–ಬಾಲಬಸವ ನಾಗೇಂದ್ರಪ್ಪ, ಮಂಡರಗಟ್ಟೆ**

ಪ್ರಭುತ್ವವು ವಿಧಿಸುವ ತೆರಿಗೆಯ ಬಗೆಯಲ್ಲಿ ಅನೇಕ ಸಂಗತಿಗಳನ್ನು ಜನತೆಗೆ ಹೇಳುವ ಕಾರ್ಯ ಬಾಲಬಸವರ ಮೌಖಿಕ ಸಾಹಿತ್ಯ ಮಾಡುತ್ತದೆ. ಅಂದರೆ ಸಮಾಜದಲ್ಲಿ ಊಟಕ್ಕೆ ಲೆಕ್ಕ ಹಾಕುವ ಕಾಲ ಬರುವುದು, ಕುಡಿಯುವ ನೀರಿಗೂ ಲೆಕ್ಕ ಹಾಕುವ ಕಾಲ ಬರುವುದು, ಮನೆಯಲ್ಲಿ ಬೆಳೆಯುವ ದವಸ ಧಾನ್ಯಗಳಿಗೂ ಲೆಕ್ಕ ಹಾಕುವ ಕಾಲ ಬರುವುದು ಮತ್ತು ಸೊಳೆ ಮಿಂಡ್ರಿಗೂ ಲೆಕ್ಕ ಹಾಕುವ ಕಾಲ ಬರುವುದು ಎಂದು ಹೇಳುವ ಬಾಲಬಸವರು ಮುಂದೆ ಪ್ರಭುತ್ವ ಈ ನೆಲೆಯಲ್ಲಿ ಲೆಕ್ಕ ಹಾಕಿ ದಂಡ ವಿಧಿಸುವ ಕಾಲ ಬರುವುದೆಂದಿದ್ದಾರೆ. ಅದು ಈಗ ಸತ್ಯವಾಗಿದೆ. ಈ ಲೆಕ್ಕ ಎನ್ನುವುದನ್ನು ನಾವು ತೆರಿಗೆ ಎಂದಾಗ ವಾಸ್ತವದ ಸ್ಥಿತಿಗತಿ ತಿಳಿದುಬರುತ್ತದೆ. ತೆರಿಗೆ ವಿಚಾರದಲ್ಲಿ ಇದುವರೆಗಿನ ಎಲ್ಲಾ ಪ್ರಭುತ್ವಗಳು ಜನತೆಯ ತೆರಿಗೆಯ ಹಣದಿಂದಲೇ ಸರ್ಕಾರಗಳು ನಡೆದುಕೊಂಡುಬಂದಿವೆ. ಈ ಹಿಂದಿನ ಸರ್ಕಾರಗಳಲ್ಲಿ ಕೆಲವೊಂದಕ್ಕೆ ರಿಯಾಯಿತಿ ನೀಡಲಾಗಿತ್ತು. ಆದರೆ ಪ್ರಸ್ತುತ ಕೇಂದ್ರ ಸರ್ಕಾರದ ಜಿಎಸ್‌ಟಿ ತೆರಿಗೆಯನ್ನು ಬಾಲಬಸವರ ಮೌಖಿಕ ಸಾಹಿತ್ಯಕ್ಕೆ ಅನ್ವಯಿಸಿ ನೋಡಿದಾಗ ಸತ್ಯ ಸಂಗತಿಯು ತಿಳಿದುಬರುತ್ತದೆ. ಈ ಮೊದಲು ಊಟಕ್ಕೆ ಯಾವುದೇ ತೆರಿಗೆಯನ್ನು ವಿಧಿಸಿರಲಿಲ್ಲ. ಆದರೆ ಮೋದಿ ಸರ್ಕಾರ ಜಿಎಸ್‌ಟಿಯನ್ನು ತಂದ ಮೇಲೆ ಒಂದೇ ಊಟದಲ್ಲಿ ರಾಜ್ಯ ಮತ್ತು ಕೇಂದ್ರಕ್ಕೆ ಎರಡು ತೆರಿಗೆಯನ್ನು ನೀಡಬೇಕಾಗಿದೆ. ಇದರಿಂದ ಸಾಮಾನ್ಯ ಜನತೆಯ ಮೇಲೆ ಆರ್ಥಿಕ ಹೊರೆಯಾಗಿದೆ. ಈ ವಿಚಾರವನ್ನು ಬಾಲಬಸವರು ಸುಮಾರು ವರ್ಷಗಳ ಹಿಂದೆಯೇ ಹೇಳಿದ್ದರು. ಅದು ಈಗ ಅಕ್ಷರಶಃ ನಿಜವಾಗಿದೆ.

ಚುನಾವಣೆ (ಅಧಿಕಾರ)

ಪ್ರಭುತ್ವವನ್ನು ಆಳ್ವಿಕೆ ಮಾಡಲು ಮೊದಲು ರಾಜರಿದ್ದರು, ಈಗ ಪ್ರಜಾಪ್ರಭುತ್ವದಲ್ಲಿ ಜನ ಪ್ರತಿನಿಧಿಗಳಿರುತ್ತಾರೆ. ಅವರನ್ನು ಚುನಾವಣೆಯ ಮೂಲಕ ಆಯ್ಕೆ ಮಾಡುವ ಕ್ರಮವಿದೆ. ಈ ಕ್ರಮವು ಯಾವ ಹಂತಕ್ಕೆ ಬಂದಿದೆ ಎನ್ನುವ ಕುರಿತು ಹರ್ಲಾಪುರದ ಬಾಲಬಸವ ಶಿವಪ್ಪನವರು ಈ ರೀತಿಯಾಗಿ ಹೇಳುತ್ತಾನೆ.

ದೀಢಿ ದುಡ್ಡಿಗೆ ಒಡೆಯನಾದಿ ನಾಡ ಗೌಡಿಕೆ ಮಾಡದೆ ಹೋದೆ
ಮೂರಾರು ದುಡ್ಡಿಗೆ ದೊರೆಯ ದೌಲತ್ತು ಮಾರುತಾದಣ್ಣ
ಕಾಡು ಮನೆ ಬಿತ್ತು ಹಾದಿ ಪೊಡವಿ ಎದ್ದು ಬಡಿದವಣ್ಣ
ತಪ್ಪು ಇದ್ದರೆ ತೆಗೆದು ಹಾಕಣ್ಣ ಈ ಬಸವ ಸಾಕ್ಷಿ
ಹುಸಿಯು ಹೊಗೆವ ನುಡಿಯು ಅಲ್ಲಣ್ಣ-**ಬಾಲಬಸವ ಶಿವಪ್ಪ. ಹರ್ಲಾಪುರ**

ಸದ್ಯದ ರಾಜಕೀಯ ಪರಿಸ್ಥಿತಿಯ ಬಗ್ಗೆ ಜನತೆಗೆ ತಿಳಿ ಹೇಳುವ ಕಾರ್ಯ ಬಾಲಬಸವರ ಮೌಖಿಕ ಸಾಹಿತ್ಯದಲ್ಲಿ ಕಂಡುಬರುತ್ತದೆ. ಮುಖ್ಯವಾಗಿ ನಾಡ ಗೌಡಿಕೆ ಮಾಡುವ ಚುನಾಯಿತ ಪ್ರತಿನಿಧಿಯ ಪರಿಸ್ಥಿತಿಯು ಇಲ್ಲಿ ಕಂಡುಬರುತ್ತದೆ. ಅಂದರೆ ಕಡಿಮೆ ದುಡ್ಡಿನಲ್ಲಿ ಚುನಾಯಿತನಾಗಿ ಮೂರಾರು ದುಡ್ಡಿಗೆ ತನ್ನ ದೌಲತ್ತು ಮತ್ತೊಬ್ಬರಿಗೆ ಮಾರಿಕೊಳ್ಳುವ ಪರಿಸ್ಥಿತಿ ಮುಂದೆ ಬರುವುದೆಂದು ಹೇಳಿದ್ದರು. ಅದು ಈಗ ಸತ್ಯವಾಗಿ ರಾಜಕೀಯದಲ್ಲಿ ಕುದುರೆ ವ್ಯಾಪಾರವು ಜೋರಾಗಿರುವ ಇಂದಿನ ಸಂಗತಿಯನ್ನು ಬಾಲಬಸವರ ಮೌಖಿಕ ಸಾಹಿತ್ಯದಲ್ಲಿ ಕಾಣಬಹುದಾಗಿದೆ.

೭.೭. ಚರಿತ್ರೆ

ಬಾಲಬಸವರ ಮೌಖಿಕ ಸಾಹಿತ್ಯದಲ್ಲಿ ಅನೇಕ ಚಾರಿತ್ರಿಕ ಸಂಗತಿಗಳಿವೆ. ಬಾಲಬಸವ ಹುಗ್ ಹುನುಮಂತಪ್ಪ ಹಾಡುವ ಕಾಲಜ್ಞಾನದಲ್ಲಿ ಕಿತ್ತೂರು ಸಂಸ್ಥಾನದ ಬಗ್ಗೆ ಚರಿತ್ರೆಯಲ್ಲಿ ದಾಖಲಾಗದ ಸಂಗತಿಗಳನ್ನು ಹೀಗೆ ಹೇಳುತ್ತಾರೆ.

ಹತ್ತು ಊರು ಮುರಿದು ಕಿತ್ತೂರು ಕಟ್ಟತ್ತೈತೆ ಅಂತನಾ
ಕಿತ್ತೂರು ದೇಸಾಯಿಯರಿಗೆ ಮತ್ತೆ ಪಟ್ಟಕಗಾಗಿ
೭೮೦ ವರುಷ ರಾಜ ಪಟ್ಟ ಕೊಟ್ಟು
ಹೆಂಡ್ರೂ ಕೊಳ್ಳಗಾ ಮಂಗಳಸೂತ್ರ ಮರದ ತಾಳಿ ಬರುತ್ತೈತೆ
ಮರದ ತಾಳಿ ಕಾಲಗ ಶಿರಹಟ್ಟಿ ಹಾಳಗುತ್ತೈತೆ
ವರವಿ ಪಟ್ಟಣ ಕಟ್ಟಿ ಕಡೆಕೋಳಿ ಜಲ್ಲಿಗೇರಿ
ಕಡೆ ಬಾಗಲು ಆಗುತ್ತೈತೆ ಅಂತನಾ

ಮುಳಗುಂದದ ಬಾಗಲಿಗೆ ಮಳೆ ಬಡಿಯಾಗ ಬರುತ್ತೈತೆ
ಧಾರವಾಡ ದಾರಿಯಾಗುತ್ತೈತೆ
ಹುಬ್ಬಳ್ಳಿ ಹುಡಿಉದ್ದು ಹಾರುತ್ತೈತೆ
ಲಕ್ಕುಂಡಿ ಲೆಕ್ಕ ಹಾಕೈತೆ
ಗುರುವಿನ ಕೋಟೆಯಲ್ಲಿ ರಕ್ತದ ಕಾಲುವೆ ಹರಿತ್ತೈತೆ
ಕೊಪ್ಪಳದಲ್ಲಿ ತುಪ್ಪಳ ಹಾರಿ
ಬಸಪ್ಪಜ್ಜ ಬಾಗಿಲು ತಗದು ಬೈಲಿಗೆ ಬರುತ್ತಾನಾ
ಬರುಬೇಕಾದೆ ನಂಬಿದವರ ಮನೆಯಲಿ ಕಂದ ಆಗುತ್ತಾರ
ಜಾತಿ ಹೀನಾವರ ಮನೆಯಲಿ ಜ್ಯೋತಿಯಾಗಿ ಉಳಿತಾನ
ನಂಬಿದು ಪರವಾಗಿ ಕರ ಕಸನೆಂಬ ಆಕೈತಿ ಆಂತನಾ
ಅದಕ್ಕೆ ಸತ್ಯ ಪರೀಕ್ಷೆ ಕಾಲ ಅಂತಾನಾ– **ಬಾಲಬಸವ ಹುಗ್ ಹುನುಮಂತಪ್ಪ**

ಬಾಲಬಸವರು ತಾವು ಸಮಾಜದ ಮಧ್ಯದಲ್ಲಿದ್ದುಕೊಂಡು ತಮ್ಮ ಸುತ್ತಮುತ್ತ ನಡೆಯುವ ಚಾರಿತ್ರಿಕ ಸಂಗತಿಗಳನ್ನು ಸೂಕ್ಷ್ಮವಾಗಿ ಗ್ರಹಿಸಿದ ವಿಚಾರಗಳನ್ನು ತಮ್ಮ ಕಾಲಜ್ಞಾನದ ವಸ್ತುವನ್ನಾಗಿಸಿಕೊಂಡಿರುವುದು ಕಂಡುಬರುತ್ತದೆ. ಕಿತ್ತೂರು ಸಂಸ್ಥಾನದ ಪ್ರಮುಖ ಪ್ರದೇಶಗಳಾದ ಶಿರಹಟ್ಟಿ, ಕಡಕೋಳ, ಮುಳುಗುಂದ, ಧಾರವಾಡ, ಹುಬ್ಬಳ್ಳಿ, ಲಕ್ಕುಂಡಿ, ಕೊಪ್ಪಳ ಮುಂತಾದ ಪ್ರದೇಶಗಳಲ್ಲಿ ರಾಜಕೀಯ ಸ್ಥಿತಿಗತಿಗಳು ಹೇಗೆ ಬದಲಾಗುತ್ತವೆ ಹಾಗೂ ರಾಜಕೀಯ ಅಸ್ಥಿರತೆಗಳು, ಆಂತರಿಕ ಕಚ್ಚಾಟಗಳು, ಹೆಣ್ಣು, ಹೊನ್ನು, ಮಣ್ಣು ಮುಂತಾದ ಆಂತರಿಕ ವಿಚಾರಗಳನ್ನು ಬಾಲಬಸವರ ಮೌಖಿಕ ಸಾಹಿತ್ಯ ವಿವರಿಸುವ ಪ್ರಯತ್ನ ಮಾಡುತ್ತದೆ. ಈ ಸಂಗತಿಗಳು ಲಿಖಿತ ಚರಿತ್ರೆಯಲ್ಲಿ ದಾಖಲಾಗದೆ ಇರುವುದನ್ನು ನಾವು ಗಮನಿಸಬೇಕಾಗಿದೆ.

ದೇಶದಲ್ಲಿ ಮುಂದೆ ಬದಲಾಗುವ ರಾಜಕೀಯ, ಸಾಮಾಜಿಕ ಸಂಗತಿಗಳನ್ನು ಕುರಿತು ಬಾಲಬಸವ ನಾಗೇಂದ್ರಪ್ಪನವರು ಈ ರೀತಿಯಾದ ಕಾಲಜ್ಞಾನವನ್ನು ಹೇಳುತ್ತಾರೆ. ಇವರ ಕಾಲಜ್ಞಾನದಲ್ಲಿ ದೇಶಕ್ಕೆ ಮುಸ್ಲಿಮರು, ಆಂಗ್ಲರು ಬರುವುದನ್ನು ಹೇಳುತ್ತಾರೆ

ಮುಂದೇ ಮುಸಲ್ಮಾನರಿಗೆ ಪಟ್ಟ ಕಟ್ಟ ಬೇಕ್ರೀ
ತೊಗಲು ಬಿಲ್ಲೆಯೆಂದು ರಾಜ್ಯಕ್ಕೆ ನಡೆಸಬೇಕ್ರೀ
ಸಿದ್ಧಾರ್ಥಿಗೆ ಮೊದಲಾಗಿ ಶ್ರೀ ಮುಖವು ಕಡೆಯಾಗಿ
ಎದ್ದು ಹೋದ ಕಪಿಗಳು ನಮ್ಮ ದೇಶಕ್ಕೆ ಬರುತ್ತಾವರ್‍ರೀ [ಮಂಗನಮಾರಿ]
ಮಂಗನಮಾರಿಯವರು ಅಂಗಕೀಳಬೇಕ್ರೀ

ಲಿಂಗ ಹೇಳೊದಿದ್ದರೆ ಭಂಗ ಪಡಿಸಿ ಹೋಗುತ್ತಾರ್ರೀ
ಹತ್ತು ಬೆರಳಿಗೆ ಭತ್ತಿ ಸುತ್ತೊರೂ ಬರುತ್ತಾರ್ರೀ
ಅಂಗದೊಳಗ ಲಿಂಗ ಕಂಡೆನಪ್ಪ ಶರಣ
ಶರಣ ಶಂಕರನ ಕಂಡೆನಪ್ಪ
ಬಸವಹೊ............... **ಬಾಲಬಸವ ನಾಗೇಂದ್ರಪ್ಪನವರು**

ಕಾಲಜ್ಞಾನ ೧೬ನೇ ಶತಮಾನದಲ್ಲಿ ಹೆಚ್ಚು ಜನಪ್ರಿಯವಾದ ಮೌಖಿಕ ಸಾಹಿತ್ಯ. ಈ ಸಾಹಿತ್ಯದ ರಚನೆಯು ಯಾವ ಕಾಲಘಟ್ಟದಲ್ಲಿ ನಡೆಯಿತು ಎನ್ನುವುದಕ್ಕೆ ನಿರ್ದಿಷ್ಟವಾದ ಅಧ್ಯಯನಗಳು ನಡೆದಿಲ್ಲ. ಆದರೆ ಕಾಲಜ್ಞಾನದಲ್ಲಿರುವ ವಸ್ತು, ವಿಚಾರ, ಚಾರಿತ್ರಿಕ ವಿಚಾರಗಳು ಇದರ ಕಾಲವನ್ನು ವಿಜಯನಗರ ಪೂರ್ವಕ್ಕೂ ಕರೆದುಕೊಂಡು ಹೋಗುತ್ತವೆ. ಮುಂದೆ ಮುಸ್ಲಿಂ, ಆಂಗ್ಲರು ಈ ದೇಶಕ್ಕೆ ಬರುವ ಸಂಗತಿಯನ್ನು ಸೂಕ್ಷ್ಮವಾಗಿ ನೋಡಿದಾಗ ಬಾಲಬಸವರಿಗೆ ಮುಂದೆ ನಮ್ಮ ನಾಡಿನಲ್ಲಾಗುವ ರಾಜಕೀಯ ಬದಲಾವಣೆಗಳನ್ನು ಹೇಳುವುದರ ಮೂಲಕ ನಾವು ಜಾಗೃತರಾಗಿರಬೇಕು ಎನ್ನುವ ಸಂದೇಶವನ್ನು ಬಾಲಬಸವರ ಕಾಲಜ್ಞಾನ ಸಾರುತ್ತದೆ.

ವಿಜಯನಗರ ಸಾಮ್ರಾಜ್ಯ, ಕಂಪಲಿಯ ಕುಮಾರರಾಮನ ಉತ್ತರದೊಂದಿಗಿನ ಸಂಘರ್ಷ

ವಿಜಯನಗರ ಸಾಮ್ರಾಜ್ಯದ ಪೂರ್ವದಲ್ಲಿ ಅನೇಕ ಸಂಸ್ಥಾನಗಳು ಈ ಪ್ರದೇಶವನ್ನು ಆಳ್ವಿಕೆ ಮಾಡುತ್ತಿದ್ದವು. ಈ ಸಂದರ್ಭದಲ್ಲಿ ಜರುಗಿದ ರಾಜಕೀಯ ಬದಲಾವಣೆಗಳು, ಉತ್ತರ ದೇಶದ ದಾಳಿ ಹಾಗೂ ಕಂಪಲಿ ಸಂಸ್ಥಾನದ ಕುಮಾರ ರಾಮನ ಕೊಲೆ ಮುಂತಾದ ಚಾರಿತ್ರಿಕ ಸಂಗತಿಗಳನ್ನು ಬಾಲಬಸವರ ಮೌಖಿಕ ಸಾಹಿತ್ಯವಾದ ಕಾಲಜ್ಞಾನದಲ್ಲಿವೆ. ಶ್ರೀ ವಿದ್ಯಾರಣ್ಯರು ಕಾಶಿಯಿಂದ ಬಂದು ವಿರೂಪಾಕ್ಷನ ದರ್ಶನ ಮಾಡಿ ಹಕ್ಕ-ಬುಕ್ಕರ ನೆರವಿನಿಂದ ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪನೆ ಮಾಡುತ್ತಾರೆ. ಆಕಾಶದಲ್ಲಿ ಧೂಮಕೇತು ಕಂಡ ಕಾರಣಕ್ಕೆ ಆದರಿಂದ ಉಂಟಾಗುವ ಆಪಾಯದಿಂದ ಸಾಮ್ರಾಜ್ಯದಲ್ಲಿ ಮರಣಗಳು ನಡೆಯುತ್ತವೆ ಎನ್ನುವ ಸಂಗತಿಯನ್ನು ಹೇಳುತ್ತಾರೆ. ಆದರ ಭಾಗವಾಗಿ ಕಂಪಲಿಯ ಕುಮಾರರಾಮನ ಮರಣವಾಗುತ್ತದೆ. ಈ ಚಾರಿತ್ರಿಕ ಸಂಗತಿಗಳನ್ನು ಕೆ.ಕೆ.ಪುರದ ಬಾಲಬಸವ ಪರಂಪರೆಯ ಕಾಲಜ್ಞಾನದಲ್ಲಿ ಹೀಗೆ ವ್ಯಕ್ತಗೊಂಡಿದೆ. "ಚೈತ್ರ ಶುದ್ಧ ೧೦ ಗುರುವಾರ ಉದಯವಾದ ೧೨ ಗಳಿಗೆ ಪಟ್ಟವ ಕಟ್ಟಿಕೊಂಡು ನಾಲ್ವರು ಆಳುತ್ತಾ ಮ್ಯಾಲೆ ವಿಜಯನಗರದ ವಿಜಯರಾಜ್ಯ, ವರುಷ ಆಳುವಾಗ ಉತ್ತರದಿಂದ ವಿದ್ಯಾಣ್ಯರು ನೋಡಿ ರಾಯರು ಬಂದು ವಿರೂಪಾಕ್ಷನ ದರುಶನವಾಗಿ ವರಮಂ ಪಡೆದು ತನ್ನ ಹೆಸರಿಲಿ ಬಂದು ಪುರವಂ ಪ್ರಜೋತ್ಪತ್ತಿ ನಾಮಸಂವತ್ಸರದಲ್ಲಿ ರಚಿಸಿ ವಿದ್ಯಾನಗರವೆಂಬ ಹೆಸರನ್ನಿಟ್ಟುಯಿರುವ ಈಶ್ವರನಾಮ ಸಂವತ್ಸರದಲ್ಲಿ ಧೂಮಕೇತ್ವ ಮೂಡಲು ಮುಂದೆ ವಿದ್ಯಾನಗರ ಕಟ್ಟಿದ ವರುಷಕ್ಕೆ ವಿಜಯರಾಯಗೆ ಮರಣವಾಗುವುದೋ, ಅಮ್ಯಾಲೆ ಆ ಬಲ್ಲಾಳರಾಯನ ತಳವಾರ ಮುಮ್ಮಡಿಸಿಂಗ

ಬಂದು ನಿಲ್ಲೀರಾ, ಆತನ ಮಗ ಕಂಪಿಲ ರಾಯ ಬಲ್ಲಿದನಾಗಿ ನಗರವ ೪೦ ವರುಷ ಆಳುವಾಗ ಆತನ ಮಗ ಕೊಮಾರರಾಯ ೨೦ ವರುಷ ಆಳುತ್ತಾ ರಾಯರಗಂಡ ದುಲಿತಾಳಮಿಂಡನೆಂದು ಕಾಲಂ ಪಡೆಯವನು ಹಿಟ್ಟುಕೊಂಡು ಹೊಗಳಿಸಿಕೊಂಡಿರುವ ಅಷ್ಟಕ್ಕೆ ಡಿಳ್ಳಿಯಿಂದ ನೇಮಿಯ ದಂಡು ಬಂದು ರಾಮನಕೊಂದು ತಲೆಯ ಕಾಶಿಗೆ ಕಳುಹಿಸಲು ಹೊಯ್ದು ವಿಶ್ವನಾಥನ ಸನ್ನಿಧಿಯಲ್ಲಿಯಿಡಲು ಅದು ಪೂಜೆಗೊಳ್ಳು ಇತ್ತಿಹದು"[೪] ಕಂಪಲಿ ಸಂಸ್ಥಾನವು ಮಧ್ಯ ಕರ್ನಾಟಕವನ್ನು ವ್ಯಾಪ್ತಿಯನ್ನಾಗಿಸಿಕೊಂಡು ರಾಜ್ಯಭಾರ ಮಾಡುವ ಒಂದು ಸಣ್ಣ ರಾಜ್ಯವಾಗಿತ್ತು. ಈ ಪ್ರದೇಶವು ತುಂಗಭದ್ರಾ ನದಿ ದಡದಲ್ಲಿನ ಸಮೃದ್ಧಿಯಿಂದರುವ ರಾಜ್ಯವಾಗಿತ್ತು. ಈ ಪ್ರದೇಶವನ್ನು ವಶಪಡಿಸಿಕೊಳ್ಳುಲು ಅನೇಕ ರಾಜಮನೆತನಗಳು ಪ್ರಯತ್ನಪಟ್ಟರೂ ಯಾವ ಸ್ಥಳೀಯ ರಾಜಮನೆತನಗಳು ಈ ಕಂಪಲಿ ಸಂಸ್ಥಾನದ ಮೇಲೆ ಯುದ್ಧ ಮಾಡುವ ಸಾಹಸ ಮಾಡಲಿಲ್ಲ. ಕಾರಣ ಕುಮಾರರಾಮನ ಪರಾಕ್ರಮ. ಈ ಸಂಸ್ಥಾನವನ್ನು ರಕ್ಷಣೆ ಮಾಡುವ ಜವಾಬ್ದಾರಿಯನ್ನು ಹೊತ್ತುಕೊಂಡಿದ್ದ ಕುಮಾರರಾಮ ದಿಲ್ಲಿಯ ಸುಲ್ತಾನನ ವಿರುದ್ಧವಾಗಿ ಹೋರಾಡಿ ಒಂದು ಸಾರಿ ಅವರನ್ನು ಹಿಮ್ಮೆಟ್ಟಿದನು. ನಂತರ ಕಂಪಲಿಯ ಸಂಸ್ಥಾನದಲ್ಲಿ ಜರುಗಿದ ಅನೇಕ ಸಾಮಾಜಿಕ ಸಂಗತಿಗಳು ಕುಮಾರರಾಮನನ್ನು ವಿಚಲಿತನನ್ನಾಗಿ ಮಾಡಿದವು. ಅದೇ ಸಮಯದಲ್ಲಿ ದಿಲ್ಲಿ ಸುಲ್ತಾನ ಕಂಪಲಿ ಸಂಸ್ಥಾನದ ಮೇಲೆ ದಾಳಿ ಮಾಡಿ ಕುತಂತ್ರದಿಂದ ಕುಮಾರ ರಾಮನನ್ನು ಕೊಂದುಹಾಕಿದರು.

ವಿಜಯನಗರ ಸಾಮ್ರಾಜ್ಯದ ಪೂರ್ವದಲ್ಲಿ ನಡೆದ ರಾಜಕೀಯ ಸಂಗತಿಗಳು ಬಾಲಬಸವರ ಮೌಖಿಕ ಸಾಹಿತ್ಯದಲ್ಲಿವೆ. ಈ ಭೌಗೋಳಿಕ ಪ್ರದೇಶವನ್ನು ಆಕ್ರಮಿಸಿಕೊಳ್ಳುವ ಪ್ರಯತ್ನ ಅನೇಕ ಬಾರಿ ನಡೆದಿದೆ. ದೆಹಲಿ ಸುಲ್ತಾನ್ ಈ ಪ್ರದೇಶದ ಮೇಲೆ ದಾಳಿ ಮಾಡುವ ಚಾರಿತ್ರಿಕ ವಿಚಾರಗಳನ್ನು ಕೆ.ಕೆ.ಪುರದ ಬಾಲಬಸವರ ಕಾಲಜ್ಞಾನವು ಹೀಗೆ ಹೇಳುತ್ತಾದೆ. "ಭೂಮಿಯಗಾಳವ ರಾಯರಾಳಿಕೆ ಪೇಳುವೆನು ಹ್ಯಾಗೆಂದರೆ ಮೂರು ವಕಿತಿಂಗಳಿಗೆ ನಾವು ಕಲ್ಯಾಣ ಬಿಟ್ಟ ಮೇಲೆ ಅಳಿಯ ಬಿಜ್ಜಳ ಆರು ವರುಷ ಹಾಳಿ ಅಳಿಯವ ಅಯ್ಯಾ೯ಲೆ ವುರುಗಲ್ಲು ಪ್ರತಾಪರಾಯ ೧೨ ವರ್ಷ ಆಳುವಜ್ಜಕ್ಕೆ ಖಾನಶಕ್ ಖಾನನೆಂಬ ಡಿಳ್ಳಿಯ ಸುರಿತಾಳನ(ಸುಲ್ತಾನ್) ಕಡೆಯವರು ಬಂದು ಕಲ್ಯಾಣ ಹಾಳುಮಾಡಿ ಕಲ್ಲು ಕುಟ್ಟಿ ಕರಕೇರಿಯನೂ ಕಲಬ್ರುಗಿ ರಚಿಸಿ ಕಲ್ಪದೊಳು ಮಗ ಮುದ್ದು ಸುರಿಹಳನ ಹಿಟ್ಟು ಹೋಗಲು ಮತ್ತು ವುರುಗಲ್ಲು ಪ್ರತಾಪನೂ ಕಲ್ಲುಬುರುಗಿರಬಿಸಿ ಕಲ್ಪದೊಳೆ ಮಗ ಮುದ್ದು ಸುರಿತಾಳನ್(ಸುಲ್ತಾನ್) ಬಿಟ್ಟು ಹೋಗಲು ಮತ್ತು ವುರುಗಲ್ಲು ಪ್ರತಾಪನು ಆಳಿದ ಕಲ್ಯಾಣವ ಹೊಂದಕ್ಕು ಅಂಜೆಜೆ ೨ ವರ್ಷ ಆಳುವದರೊಳಗಾಗಿ ಮತ್ತು ವುರುಗಲ್ಲು ಸುರಿಕಾಳನಪರ ಬಗೆಯೋ ಬಾಬಸಾಹೇಬನ ದಂಡು ಬಂದು ಪ್ರತಾಪನ ಮುರಿದು ಬಳಿಕ ಮೇದಾರ ಕೇತ್ಯೆರ್ಯನ(ಕೇತಯ್ಯ) ಕೇರಿಯಲ್ಲಿ ಬಿದರೆಯಂಬ ದುರ್ಗವಂಕಟ್ಟಿ ಅಲ್ಲಿ ೨೫೧ ಕಟ್ಟಿ ಅಲ್ಲಿ ೨೫೨ ವರುಷ ಆಳುವದರೊಳಗಾಗಿ ಮಸೂದಿ ಕಟ್ಟಿಸಬೇಕೆಂದು ಖಾಜಖಾನಶರೊಮಲ್ಲಾಜಿ ಹಾಕಿ ಮೊರೆಂಬುವದು ಮುದ್ವರು ಕೂಡಿ ಕಟ್ಟುತ್ತಾ ಕದನ ಹೊಡಿ

ಕದಲೊಡೆ ತಮಗೆ ತಮಗೆ ಪಾಚಲಾಗಿ ಭೋವನುಗಳು ಆಳುಕಿರವಾ ಮುಂದ ಹಂಪಿಯಲ್ಲಿ ಡಿಳ್ಳಿಯ ನಗರ ಆಳುವ ಬಲ್ಲಾಳ ಬಂದು"[೨೫] ವಿಜಯನಗರ ಸಾಮ್ರಾಜ್ಯದ ಪೂರ್ವದಲ್ಲಿನ ಕರ್ನಾಟಕವನ್ನು ಉತ್ತರದ ದೆಹಲಿ ಸುಲ್ತಾನ ದಾಳಿ ಮಾಡುತ್ತಾನೆ. ಇದರ ಫಲವಾಗಿ ಮಧ್ಯ ಕರ್ನಾಟಕದಲ್ಲಿ ದೆಹಲಿ ಸುಲ್ತಾನನ ಪ್ರವೇಶವಾಗುತ್ತದೆ. ಅಲ್ಲದೆ ಬಹಮನಿ ಸಾಮ್ರಾಜ್ಯದ ವಿಸ್ತರಣೆಯಾಗುತ್ತದೆ.

ವಿಜಯನಗರ ಸಾಮ್ರಾಜ್ಯದ ಚಾರಿತ್ರಿಕ ಸಂಗತಿಗಳು : ವಿಜಯನಗರ ಸಾಮ್ರಾಜ್ಯ ಮತ್ತು ಬಹಮನಿ ಸುಲ್ತಾನರ ಸಂಘರ್ಷ

ಬಾಲಬಸವರ ಮೌಖಿಕ ಸಾಹಿತ್ಯವಾದ ಕಾಲಜ್ಞಾನವು ವಿಜಯನಗರ ಸಾಮ್ರಾಜ್ಯದ ಆಂತರಿಕ ವಿಷಯಗಳನ್ನು ಸೂಕ್ಷ್ಮವಾಗಿ ಬಿಚ್ಚಿಡುವ ಕಾರ್ಯ ಮಾಡುತ್ತದೆ. ಶಿಷ್ಟ ಚರಿತ್ರೆಯು ಹೇಳದ ವಿಜಯನಗರ ಸಾಮ್ರಾಜದಲ್ಲಿ ನಡೆದ ಆಂತರಿಕ ಸಂಗತಿಗಳು, ದೊರೆಗಳ ಸಾಂಸಾರಿಕ ವಿಷಯಗಳು ಈ ಕಾಲಜ್ಞಾನದಲ್ಲಿ ಕಂಡುಬರುತ್ತವೆ. ಈ ಸಂಗತಿಯನ್ನು ಕೆಕೆ.ಪುರದ ಬಾಲಬಸವರ ಕಾಲಜ್ಞಾನದಲ್ಲಿ ಹೀಗಿದೆ ವ್ಯಕ್ತವಾಗಿದೆ. "ಇತ್ತ ವಿದ್ಯಾನಗರವ ಕಟ್ಟಿಯಲ್ಲಿ ಶಾಲಿವಾಹನ ಶಕೆ ೧೩೧೪ರಲ್ಲಿ ನಡೆಯುವ ಧಾತು ನಾಮ ಸಂವತ್ಸರದಲ್ಲಿ ವೈಶಾಖ ಶುದ್ಧದಲ್ಲಿ ಕುರುಬರ ಹರಿಹರಗೆ ಪಟ್ಟುವಾಗಿ ಮುಂದೆ ೧೫೭ ವರುಷ ಹದಿನಾರು ಮಂದಿ ಆಳುವರು ಅದು ಹ್ಯಾಗೆಂದರೆ ಅವರ ಹೆಸರೇನು ಎಷ್ಟು, ಎಷ್ಟು ವರುಷ ಆಳುವರೆಂದರೆ ಹರಿಹರ ೨೨ ವರ್ಷ ಬುಕ್ಕಾ ೨೦ ವರುಷ. ಪ್ರಹುಡ(ಪ್ರೌಢದೇವರಾಯ) ೧೪ ವರುಷ ವೀರಬುಜ ೧೨ ವರುಷ ಭೋಜ ೬ ವರ್ಷ ಮಲ್ಲಿಕಾರ್ಜುನ ೯ ವರುಷಾಕ್ಕೆ ೧೨ ವರುಷ ಕಳಾಸ್ತ್ರೀ ೧೦ ವರುಷ ಆಳುವದರದೊಳಗಾಗಿ ಪರಸಿಂದು ಬಂದು, ವಾರಂಥ ಕಪಿನಗುಡಿ ನಾಯಕ ನರಸಿಂಹ್ಯ ಬಂದು ಕಳಸ್ತ್ರೀಯ್ಯನ ಬಿಡಿಸಿ ೧೬ ವರುಷ ಆಳಲೂ ಆತನ ಮಗ ಕೆಮ್ಮರಾಜ ೭ ವರುಷಕ್ಕೆ ಆಳಲು ಮತ್ತು ಕಳಹುಯ್ಯ ಆಳಬೇಕೆಂಬಷ್ಟಕ್ಕೆ ಆತನ ಮಗನಾದ ಹುಚ್ಚು, ವಿರೂಪಾಕ್ಷೆಂಬುವನು ಮಂತ್ರಿಯ ಮಡದಿಗೆ ಮನಸ್ಸಿಟ್ಟುಯಿರುವದಂ ಮಂತ್ರಿ ತಿಳಿದು ಮನ ಮುನಿಸಾಗಿ ಹೆಂಡತಿಯ ಕರೆದುಕೊಂಡು ಪಶ್ಚಿಮದ ಆರಾಣ್ಯಕ್ಕೆ ಹೋಗಲು ಮತ್ತು ಆ ವಿರೂಪಾಕ್ಷೆಗೆ ಹೆಣ್ಣಿನ ಭ್ರಾಂತಿ ಹತ್ತಿ ಹೆತ್ತ ತಂದೆಯಾದ ಕಳಾಪ್ರಿಯ ಕೊಂದು ಬಂದು ವರುರ್ಷ ಬೋಳುಬತ್ತಲೆ ಅಡವಿಗಿಡಾಗಿ ಹೋಗಲು ಆ ರಾಜ್ಯಕ್ಕೆ ಕರ್ತರಿಲ್ಲದಿರಲಾಗಿ ಮತ್ತೆ ಕುರುಬರ ಆಳಿಕೆ ಸರಿ ಆಗಿ ಅವರ ಆಳಾದ ಮಂತ್ರಿ ಅರಸನು ವಿರುಪಾಕ್ಷನು ಹುಚ್ಚು, ಹತ್ತಿ ಕೆಟ್ಟು, ಹೊಂದನೆಂದು ಹೇಳಿ ತಿರುಗಿ ಬಂದು ನಗರ ಹೊಕ್ಕು ೭ ವರುಷ ಆಳಿಯಲು ಅವರ ಹಿರಿಯ ಮಗನಾದ ವೀರು ನರಸಿಂಹ ಲಕ್ಷ್ಮಿಯರೆಗೆ ಮಿಗಿಲೆನಿಸುವನು ಹ್ಯಾಗೆಂದರೆ ಆನಂತ ಶೈವನೆಂಬ ದೇವರ ಪ್ರತಿಕ್ಷೆ ಮಾಡಿ ಅನೇಕ ತೆರದಿ ಗುಡಿ ಗೋಪುರಾದಿಗಳನ್ನು ರಚಿಸಿದ ಆದರ ದರ್ವದಿ ಪುಣ್ಯ ವರ್ತನೆಯ ಫಲವಾಗಿ

೨೦ ವರುಷ ಆಳುವಗಿತಕ್ಕೆ ಆತನ ಮಗನೆಂಬ ಭಜ ಬಲನು ಬುದ್ಧಿಕಲಿಕೆ ತಮ್ಮ ತಂದೆಯಾದ ವೀರನರಸಿಂಹ್ಮನ ಕೊಂದು ಮಲತಾಯಿಗೆ ಮನಸೋತು ಮರಳಿ ಪಾಪವೆಂದು ಅರಿತು ಪಶ್ಚಿಮಕ್ಕೆ ಹೊಗಿ ಮುಳು ಮುಳಯ್ಯನರಿಗಿ ನಗರಕ್ಕೆ ಬಂದು ೫ ವರುಷ ಆಳಲು, ಆಮ್ಯಾಲೆ ಚಂದ ವಿಜಯಗಂಡ ೨೫ ವರುಷಕ್ಕೆ ಆಳುವಾಗ ಬಳಿಕ ಗೋಕರ್ಣಸಲೆ ಕೃಷ್ಣನೆಂಬುವನು ೨೪ ವರುಷ ಆಳುವಗು ಅತ್ತ ಕನಕಗಿರಿಯ ಎಮ್ಮೆ ಬಸವಣ್ಣ ಮನಿಪುರಕ್ಕೆ ಬರಲಾಗ ಅಚ್ಚುತರಾಯ ೧೩ ವರುಷ ಆಳುವ ದೊರಳಾಗಾಗಿ ದಿಕ್ಕಾ ದಿಕ್ಕಿಗೆ ಪುಂಡೆದ್ದು ರಾಜ್ಯಕ್ಕೆ ನಿಚ್ಚಾಳಿ ಇಲ್ಲದಾಗ ದಕ್ಷಿಣ ದೇಶದ ಅರಸನ ಅರಮನಿಯ ದಾಸಿಯ ಬಸರಲ್ಲಿ ಹುಟ್ಟಿ ತಿರುಮಲೆಯ ಕುಟುಂಬದಲ್ಲಿ ಜನಿಸಿ ಬಂದು ತನದಿಂದ ಬಹುಜಗಳವಂ ಗಂಟಿಕಕ್ಕೆ ದೊರೆದೊಗಳ ಮುರಿದು ಅಚ್ಚುತನ ಆಯಿಶೈವರ ವಶ ಮಾಡಿಕೊಂಡು ಲಕ್ಷ್ಮೀ ಮಾಯಾಶೆಯ ಬಿಟ್ಟು ಕುಂಟ ಕುರುಡರಿಗೆ ಸೂರ್ಯಾಡಿ ವಿರುಪಾಕ್ಷನ ದ್ವಾರನ ವಂಬತ್ತು ತ್ರಂಬರ ಲಿಂಗವ ಶೆರುನೆಯಂ ಮಾಡಿ ಒಂದು ವರುಷ ಆಳಿ ಆಳಿವರು ಆಮ್ಯಾಲೆ ಅಚ್ಚುತನ ಆಳಿಯಿನಾದ ಗುತ್ತಿ ಜಾಗದ ಪ್ರಾತಪರಾಯ ಮಗರಾಯ ರಾಜ ತನ್ನ ಬಳಗವಂ ಕೂಡಿ ಕೊಂಡು ಬಲವಂತರಾಗಿ ಮನಿಪುರಕ್ಕೆ ಬಂದು ಅಳಿಯ ಪಟ್ಟದು ಕಟ್ಟಿಕೊಂಡು ದಿಟ್ಟ ತನದಿ ಡಿಳ್ಳಿಯವರಿಗೆ ಮೂರು ಮಲತು ಕಾಶಿಗೆ ಹೋಗಿ ನಳಿನಾಭಕರ್ಯ್ಯ ದ್ರರ್ವ್ಯವ ತೆಗೆದುಕೊಂಡು ಪಾಂಡುರಂಗ ಮಿಲನ ಆಯಿದು ಮೇಣವಿನ ಸುವರ್ಣದ ಮೂರ್ತಿ ತೆಕ್ಕೊಂಡು ಘಳಲನೆ ತಿರಿಗಿ ಹಂಪೆ ಪಟ್ಟಣಕ್ಕೆ ಬಂದು ಆಳುತ್ತ ೧೮ ವರುಷಕ್ಕೆ ಮದಗವಂ ಕಟ್ಟಿನೆ ಆ ವರುಷಕ್ಕೆ ೨೪ ವರುಷ ದಾಳಿಕೆ ತುಂಬಿ ಆವನು ಹ್ಯಾಗೆಂದರೆ ಅಕುಬರಕೋಜಿಮಾಮಿ ಚಿತ್ರಪ್ರಾಣಿ ಸಹ ದಂಡೆತ್ತಿ ರಾಮನ ಮ್ಯಾಲೆ ಬಂದು ಬಲ್ಲೂಕಪ್ಪರವೆಂಬ ಕರಡಿಯ ಕಲ್ಲಲ್ಲಿ ಕಡಿದಾಡಿ ರಾಮನ ಕಡಿದು ಕಲಿಶಖಿ ೪೭೭೬ ಕ್ಕೆ ನಡೆಯುವ ಕ್ರೋಧಿ ನಾಮ ಸಂವತ್ಸರಕ್ಕೆ ರಾಮನ ತಲೆಯ ಹೊಡೆದು ಭೌತಿ ಬಂಡಾರಕ್ಕೆ ಬಂಡಾರವ ತೆಗೆಯಲಿಕ್ಕೆ ಹೋಗಿ ತಮ ತಮಗೆ ಸಾಧ್ಯವಾಗದೇ ದೇವರೊಡಗೊಂಡಿ ಗೋಪರಗಳ ಕೆಡವಿ ಆಸ್ತಿನಪುರಕ್ಕೆ ಹೋಗಲು ಅ ವಿದ್ಯಾನಗರವ ಕೆಟ್ಟು ಅಳಾಗಿ ೧೭೯ ವರುಷ ತುಂಬಲಿದು ಕಟ್ಟು ವಡಿದು ಬಳಿಕ ಅಳಿಯ ರಾಮನಾಳಿದ ಮ್ಯಾಲೆ ತುರುಕರಿಗೆ ರಾಜ್ಯವಾಗಿ ವಿಜಯಪುರದಲ್ಲಿ ಅತ್ತು ಪಾಂಡು ನಗರ ನಾಳಿದವರೋಳು ಹಕ್ತನೆ ತಲೆಯ ಸುರಿತಾಳನ ಸತ್ಯೆಂದ್ರರಿಗೆ ಪಾಶ್ಚಿಗೆಯಾಗಿ ೨೦ವರುಷ ಆಳುತ್ತಾರುವಾಗ ಹಿಂದೆ ಮೊಘಲರೊ ಸುಂತಾಳನ ಹಂಶದ ಇಪ್ಪತ್ತೋದನೆಯ ತಲೆಯ ಅದರಂಗುಜೇಬು (ಔರಂಗಜೇಬು) ಬರುವರು ಅವನ್ಯಾರೆಂದರೆ ಪೂರ್ವದ ನಗರನ ಮೊಮ್ಮಗನಾಸ ಭಾಗೀರಥನವರಂಗ ಶಹಾನನ ಉದರದಲ್ಲಿ ವುದುಸಿ ಅದರಂಗ ಬಾಬು ಜನಸಿ ಬುಜಬಲದಿಂದ ವಿಜಯಪುರಕ್ಕೆ ಬಂದು ಶಾಲಿವಾಹನ ಶಕೆ ೧೯೦೮ (೧೬೦೮) ರಲ್ಲಿ ನಡೆದ ಅಕ್ಷಯ ನಾಮ ಸಂವತ್ಸರದ ಅಶ್ವೀಜ ಬಹುಳ ೧೮ನೇ ವಿಜಯಪುರ ವಳ ಕೊಲಿಲಿ ತೆಕ್ಕೊಂಡು ಬಂದು ವರ್ಷದೊಳಗೆ ಭಾಗನಗರ ಹೊಂಕ್ಕು ಸುರಿತಾಳ ಶಿಖೇಂದ್ರನ ಶರೆ ಹಿಡಿದು. ಭಾವ ವೃಪಶ್ಚಿಮಕ್ಕೆ ದುರಿದು ಅಲ್ಲಿದೀಗ ಶಹಾ ಅಬ್ದುಲ್‌ನ ಬಾಬರೆಂಬ ಜಿರಾರಂ ಕರೆದು ಪೇಳಿದನದೆಂತೆಂದರೆ ಹಿಂದೆ ಅಳಿಯರಾಮ ನಾಳಿದ ಮ್ಯಾಲೆ ದಕ್ಷಿಣದೊಳಿರುವ ವಕ್ಕಲು."[೬] ಬಾಲಬಸವ ಪರಂಪರೆಯ ಕಾಲಜ್ಞಾನವು ವಿಜಯನಗರದ ಮೌಖಿಕ ಚರಿತ್ರೆಯನ್ನು ಅನಾವರಣಗೊಳಿಸುತ್ತದೆ.

ಅಡಿಟಿಪ್ಪಣಿ

೧. ಮೊಗಳ್ಳಿ ಗಣೇಶ, **'ಅವ್ಯಕ್ತ ಚರಿತ್ರೆ,'** ಪು.೧೮೨

೨. ಪುರುಷೋತ್ತಮ ಬಿಳಿಮಲೆ, **'ಕೂಡುಕಟ್ಟು,** ಪು.೯೧

೩. ವೆಂಕಟೇಶ ಇಂದ್ವಾಡಿ ಅವರ ಹೇಳಿಕೆ

೪. ಸಿ.ಆರ್.ಶ್ಯಾಮಲ, **'ಪೂರ್ವ ಕರ್ನಾಟಕದ ಪಾಳೆಯಗಾರರು,'** ಪು.೧೧

೫. ಕುಂ.ಬಾ.ಸದಾಶಿವಪ್ಪ, **'ಹರಪನಹಳ್ಳಿ ಪಾಳೆಯಗಾರರ ಇತಿಹಾಸ ದರ್ಶನ,'** ಪು.೨

೬. ಸಿ.ಆರ್ ಶ್ಯಾಮಲ, **'ಪೂರ್ವ ಕರ್ನಾಟಕದ ಪಾಳೇಗಾರರು,'** ಪು.೧೦೩

೭. ಕುಂ.ಬಾ.ಸದಾಶಿವಪ್ಪ, **'ಹರಪನಹಳ್ಳಿ ಪಾಳೆಯಗಾರರ ಇತಿಹಾಸ ದರ್ಶನ,'** ಪು.೩೯,೪೦

೮. ವೆಂಕಟೇಶ ಇಂದ್ವಾಡಿ, **'ಬಾಲಬಸವ ತುಮನೆಪ್ಪ ಹಾಡಿದ ಗೋಣಿಬಸಪ್ಪನ ಕಾವ್ಯ,'** ಪು.೬೩

೯. ಅದೇ, ಪು.೭೫

೧೦. ಸಿ.ಆರ್.ಶ್ಯಾಮಲ, **'ಪೂರ್ವಕರ್ನಾಟಕದ ಪಾಳೇಗಾರರ ಚರಿತ್ರೆ,'** ಪು.೭೩

೧೧. ಅದೇ, ಪು.೭೪

೧೨. ಅದೇ, ಪು.೬೫-೬೬

೧೩. ಅದೇ, ಪುಸಂ-೮೦

೧೪. ಅದೇ, ಪು.೮೭

೧೫. ಅದೇ, ಪು.೮೭

೧೬. ಅದೇ, ಪು. ೯೩

೧೭. ಅದೇ, ಪು.೧೨೫

೧೮. ಅದೇ, ಪು.೧೨೭

೧೯. ಅದೇ, ಪು.೧೬೨

೨೦. ಅದೇ, ಪು.೧೬೩

೨೧. ಅದೇ, ಪು.೧೬೪

೨೨. ಅದೇ, ಪುಸಂ-೧೬೫

೨೩. ಅದೇ, ಪು.೧೬೫

೨೪. ಕೆಕೆ.ಪುರದ ಬಾಲಬಸವರ ಕಾಲಜ್ಞಾನ

೨೫. ಅದೇ

೨೬. ಅದೇ

ಅಧ್ಯಾಯ : ೮
ಸಮಾರೋಪ

* ಅಧ್ಯಯನದ ಫಲಿತಗಳು
* ಅನುಬಂಧ
* ಸಂದರ್ಶನದ ವಿವರಗಳು
* ಛಾಯಾಚಿತ್ರಗಳು
* ಆಕರ ಗ್ರಂಥಗಳು

ಅಧ್ಯಾಯ : ೮
ಸಮಾರೋಪ

ವಚನ ಚಳವಳಿಯ ವಿಭಿನ್ನಧಾರೆಯಾಗಿರುವ ಬಾಲಬಸವ ಸಂಪ್ರದಾಯವು ಸಮುದಾಯ ಕೇಂದ್ರಿತ ಆಚರಣಾತ್ಮಕ ಪಂಥವಾಗಿದೆ. ಈ ಪಂಥವು ದಲಿತ(ಮಾದಿಗ) ಸಮುದಾಯದ ಸಾಂಸ್ಕೃತಿಕ ಅನನ್ಯತೆಯನ್ನು, ಸ್ಥಳೀಯ ಸಾಂಸ್ಕೃತಿಕ ಚರಿತ್ರೆಯನ್ನು ಕಟ್ಟಿಕೊಡುವ ಕಾರ್ಯ ಮಾಡಿದೆ. ವಚನ ಚಳುವಳಿ ಮತ್ತು ಬಸವಣ್ಣನ ಪ್ರಭಾವದಿಂದ ವೀರಶೈವ ಧರ್ಮವನ್ನು ಅನುಸರಿಸಿದರೂ ಇವರನ್ನು ಇದುವರೆಗೂ ವೀರಶೈವ ಲಿಂಗಾಯತರೆಂದು ಗುರುತಿಸಿಲ್ಲ. ಹಾಗಾಗಿ ಇವರು ಧಾರ್ಮಿಕವಾಗಿ ಅತಂತ್ರ ಸ್ಥಿತಿಯಲ್ಲಿರುವುದರಿಂದ ಇದೊಂದು ಸಮಸ್ಯಾತ್ಮಕ ಕುಲವಾಗಿ ಇನ್ನೂ ನಮ್ಮೊಂದಿಗೆ ಜೀವಂತವಾಗಿದೆ. ತನ್ನ ಮೌಖಿಕ ಧಾರೆಯ ಮೂಲಕ ಸಮುದಾಯಗಳ ಸ್ಥಳೀಯ ಸಾಂಸ್ಕೃತಿಕ ಚರಿತ್ರೆಯ ಕುರುಹುಗಳನ್ನು ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ವರ್ಗಾಯಿಸಿಕೊಂಡು ಬಂದಿದೆ. ವಚನ ಚಳುವಳಿಯ ಪಳೆಯುಳಿಕೆಯನ್ನು ಜೀವಂತವಾಗಿಸಿಕೊಂಡು ಬರುವುದು ಅಷ್ಟು ಸುಲಭದ ಮಾತಲ್ಲ, ಅದನ್ನು ಈ ಬಾಲಬಸವ ಸಂಪ್ರದಾಯವು ತನ್ನ ಜ್ಞಾನ ಮತ್ತು ಗಾಯನಮೀಮಾಂಸೆಯ ಮೂಲಕ ಉಳಿಸಿಕೊಂಡು ಬಂದಿದೆ. ಈ ಪರಂಪರೆಯ ಮೌಖಿಕ ಸಾಹಿತ್ಯದಲ್ಲಿರುವ ಸಮಾಜಕೇಂದ್ರಿತ ಚಿಂತನೆಗಳು, ನೀತಿಪಾಠಗಳಿಂದ ಸಾಮಾನ್ಯ ಜನತೆಯಲ್ಲಿ ಅರಿವು ಮತ್ತು ಜಾಗೃತಿ ಮೂಡಿಸುವ ಕಾರ್ಯವನ್ನು ಮಾಡುತ್ತಾ ಬಂದಿದೆ. ಇವರ ಈ ಸಾಂಸ್ಕೃತಿಕ ಕೊಡುಗೆಗಳನ್ನು ಅಧ್ಯಯನ ಮಾಡಿದಾಗ ಮಾತ್ರ ಅವರ ಶ್ರಮವು ಸ್ಪಷ್ಟವಾಗುತ್ತದೆ.

ಬಾಲಬಸವರು ಸಾಮಾಜಿಕ ವ್ಯವಸ್ಥೆಯಿಂದ ಹೊರದೂಡಲ್ಪಟ್ಟ ದಲಿತ ಸಮುದಾಯದವರು, ಅವರು ಈ ಸಾಮಾಜಿಕ ವ್ಯವಸ್ಥೆಯಲ್ಲಿನ ಲೋಪದೋಷಗಳನ್ನು ಗುರುತಿಸಿ, ಅವುಗಳಿಗೆ ಚಿಕಿತ್ಸೆ ನೀಡುವ ಜ್ಞಾನಧಾರೆಗಳಾಗಿದ್ದಾರೆ. ಇವರ ಮೌಖಿಕ ಸಾಹಿತ್ಯದಲ್ಲಿ ಸಾಮಾಜಿಕ ಸ್ವಾಸ್ಥ್ಯ ಕಾಪಾಡುವ ಸಾಮಾಜಿಕ ಹೊಣೆಗಾರಿಕೆಯನ್ನು ನಿಭಾಯಿಸಿಕೊಂಡು ಬಂದಿದ್ದಾರೆ. ಇವರ ಮೌಖಿಕ ಸಾಹಿತ್ಯದಲ್ಲಿನ

ಲಯ, ತಾಳ, ಕಥನ ಕಟ್ಟುವ ಕಲೆಗಾರಿಕೆ ಅವರು ಅಭಿವ್ಯಕ್ತಿಸುವ ಕಥನ ಮಾದರಿಯು ಅವರ ಜಾಣತನಕ್ಕೆ ಸಾಕ್ಷಿಯಾಗಿದೆ. ಸಮಾಜದಿಂದ ನೋವುಂಡರೂ ಸಮಾಜಕ್ಕೆ ಒಳಿತನ್ನು ಬಯಸುವ ಮನಸ್ಥಿತಿಯೇ ಬಾಲಬಸವ ಸಂಪ್ರದಾಯವು ಜೀವಂತಿಕೆಯಿಂದ ಉಳಿಯಲು ಸಾಧ್ಯವಾಗಿದೆ. ಬಾಲಬಸವರ ಮೌಖಿಕ ಸಾಹಿತ್ಯದಲ್ಲಿ ಸಮಾಜದಲ್ಲಿನ ಸಾಮಾನ್ಯ ಜನತೆಯ ನೋವು ನಲಿವುಗಳ ನೈಜ ರೂಪದ ಬದುಕಿನ ಚಿತ್ರಣಗಳು, ಸಾಂಸಾರಿಕ ಬದುಕಿನ ಬವಣೆಗಳು, ದಲಿತ ಸಮುದಾಯಗಳ ಸಾಮಾಜಿಕ ಜೀವನದ ವಿವರಗಳಿಗೆ ಬಾಲಬಸವರ ಮೌಖಿಕ ಸಾಹಿತ್ಯವು ಧ್ವನಿಯಾಗಿದೆ. ಬಾಲಬಸವರು ಅಲಕ್ಷಿತ ಮಾದಿಗ ಸಮುದಾಯದ ಸಾಂಸ್ಕೃತಿಕ ನಾಯಕರನ್ನು ಜೀವಂತವಾಗಿರುವ ಇವರ ಮೌಖಿಕ ಕಾವ್ಯಗಳು ಸ್ಥಳೀಯ ಸಾಂಸ್ಕೃತಿಕ ನಾಯಕರ ಚರಿತ್ರೆಯನ್ನು ಕಟ್ಟಿಕೊಡುವಲ್ಲಿ ಸಹಾಯಕವಾಗಿವೆ. ಇವರ ಮೌಖಿಕ ಸಾಹಿತ್ಯದಲ್ಲಿ ಸಮಾಜದ ಜನತೆಯ ಬದುಕಿಗೆ ಪ್ರೇರಣೆ ಮತ್ತು ಆತ್ಮವಿಶ್ವಾಸಗಳನ್ನು ತುಂಬುವ ಕಾರ್ಯ ಮಾಡುತ್ತದೆ. ಬಾಲಬಸವರ ಪ್ರಮುಖ ಮೌಖಿಕ ಕಾವ್ಯಗಳಾದ ಗೋಣಿಬಸಪ್ಪನ ಕಾವ್ಯ ಮತ್ತು ಮರುಳಸಿದ್ಧರ ಕಾವ್ಯಗಳು ಕಟ್ಟುಕಥೆಗಳಾಗದೆ ಅವರ ಸಂಘರ್ಷಮಯ ಬದುಕಿನ ಹೋರಾಟಕ್ಕೆ ಹಿಡಿದ ಕೈಗನ್ನಡಿಯಾಗಿವೆ. ಅಲ್ಲದೆ ಸಾಂಸ್ಕೃತಿಕ ನಾಯಕರು ಈ ಸಮಾಜದ ಅನಿಷ್ಟ ಪದ್ಧತಿಗಳ ವಿರುದ್ಧ ಹೋರಾಡಿದ ಸಂಗತಿಗಳನ್ನು ಬಾಲಬಸವರ ಮೌಖಿಕ ಕಾವ್ಯಗಳು ನಿರೂಪಿಸುತ್ತವೆ. ಬಾಲಬಸವರ ಮೌಖಿಕ ಸಾಹಿತ್ಯದಲ್ಲಿನ ಸಾಮಾಜಿಕತೆಯ ಜೀವನ ವಿಧಾನ, ನಂಬಿಕೆ, ಅವರ ಆಹಾರಸಂಸ್ಕೃತಿ, ಬೇಟೆ, ತಂತ್ರವಿದ್ಯೆ ಮತ್ತು ಮಾಟ ಮಂತ್ರ ಮುಂತಾದವುಗಳಲ್ಲಿ ಅಂದಿನ ಸಾಮಾಜಿಕ ಸಾಮಾನ್ಯ ಜನತೆಯ ಬದುಕು ಕಾಣಿಸುತ್ತದೆ. ಅದರಲ್ಲಿ ವಿಶೇಷವಾಗಿ ಮಾದಿಗ ಸಮುದಾಯದ ದಲಿತ ಸಂವೇದನೆಯು ಸಮುದಾಯಕೇಂದ್ರಿತವಾಗಿ ಜಾಗೃತಗೊಂಡಿರುವುದನ್ನು ನಾವು ಕಾಣಬಹುದು. ಅಲ್ಲದೆ ಅವರ ಪ್ರತಿರೋಧ ಹೋರಾಟವು ತಮ್ಮ ನೆಲಮೂಲದ ಸಂಸ್ಕೃತಿಯನ್ನು ಜೀವಂತವಾಗಿಸುವ ಪ್ರಯತ್ನವಾಗಿ ನಾವು ಗುರುತಿಸಬಹುದಾಗಿದೆ.

ಕಲ್ಯಾಣ ಕ್ರಾಂತಿಯನ್ನು ಎದುರುಗೊಂಡಿದ್ದ ಬಾಲಬಸವ ಪರಂಪರೆಯು ಅಂದಿನ ಸಮಾಜದ ಪ್ರಬಲ ಜಾತಿಯನ್ನು ಅಣಕಿಸುವ ಸಾಹಸದ ಕಾರ್ಯ ಮಾಡಿದೆ. ಅವರ ಮೌಖಿಕ ಸಾಹಿತ್ಯದಲ್ಲಿ ಹೇಳುವಂತೆ 'ಲಿಂಗ ಕಟ್ಟಿದವರಲ್ಲಿ ಮಾಂಸವ ಸೇವಿಸಿದರೂ, ಪಂಚಾಂಗ ಹೇಳುವರೆಲ್ಲ ಕತ್ತೆಗಳಾಗಬೇಕು ಹಾರಾರ ಹೆಣ್ಣುಮಕ್ಕಳು ಸೂಳೆಯರಾಗಲೆಬೇಕು' ಎನ್ನುವ ನುಡಿಗಳಲ್ಲಿ ಅಂದಿನ ಸಾಮಾಜಿಕತೆಯನ್ನು ಪ್ರತಿರೋಧಿಸುವ ಧೋರಣೆಯಾಗಿದೆ. ಬಾಲಬಸವರು ಮಾದಿಗ ಸಮುದಾಯದ ಮೂಲದಿಂದ ಬಂದವರಾಗಿರುವುದರಿಂದ ಇವರ ಮೌಖಿಕ ಸಾಹಿತ್ಯದಲ್ಲಿ ದಲಿತ ಕೆಳವರ್ಗದ ಸಾಂಸ್ಕೃತಿಕ ಜ್ಞಾನಧಾರೆಗಳು, ಉನ್ನತವರ್ಗದ ಜ್ಞಾನಧಾರೆಗಳಿಗೆ ಮುಖಾಮುಖಿ ಜನತೆಯಲ್ಲಿ ವೈಚಾರಿಕತೆ, ಪ್ರತಿರೋಧ ಜಾಗೃತಿ ಮೂಡಿಸುವ ಕಾರ್ಯವನ್ನು ಮಾಡಿದೆ. ಶಿಷ್ಟ ಸಾಹಿತ್ಯದಲ್ಲಿರುವ ಸಾಂಸ್ಕೃತಿಕ ನಾಯಕರು ಜೀವನ ಚಿತ್ರಣಗಳಿಗಿಂತ ಬಾಲಬಸವರ ಮೌಖಿಕ ಕಾವ್ಯಗಳಲ್ಲಿ ಭಿನ್ನವಾಗಿವೆ.

ಬಾಲಬಸವ ಮೌಖಿಕ ಸಾಹಿತ್ಯದಲ್ಲಿ ದೇಶೀಯತೆ ಅಂದರೆ ಸ್ಥಳೀಯ ಸಾಂಸ್ಕೃತಿಕ ಚರಿತ್ರೆ ಮತ್ತು ಸಾಂಸ್ಕೃತಿಕ ನಾಯಕರ ಕೇಂದ್ರವಾಗಿಸಿಕೊಂಡಿದೆ. ಬಾಲಬಸವರ ಮೌಖಿಕ ಕಾವ್ಯಗಳಲ್ಲಿ ಹೊಸದೊಂದು ಸೈದ್ಧಾಂತಿಕ ದಲಿತತ್ವದ ನೆಲೆಯ ರೂಪಗೊಂಡಿದೆ. ಅಲ್ಲದೆ ಈ ದಲಿತತ್ವವು ದಲಿತ ಸಮುದಾಯಗಳ ಸಾಂಸ್ಕೃತಿಕ ಅನನ್ಯತೆಯನ್ನು ಹೊಸ ರೀತಿಯಲ್ಲಿ ಕಟ್ಟಿಕೊಡುವ ಪ್ರಯತ್ನ ಮಾಡುತ್ತದೆ. ಇವರ ಆಲೋಚನೆಗಳಲ್ಲಿ ವಿಭಿನ್ನ ಜನಸಮುದಾಯಗಳ ಬಹುಸಂಸ್ಕೃತಿಗಳ ಜೀವಪರ ಕಾಳಜಿಯನ್ನು ಕಾಣುತ್ತೇವೆ.

ಬಾಲಬಸವರ ಮೌಖಿಕ ಸಾಹಿತ್ಯದಲ್ಲಿ ಮಾನವೀಯತೆಯ ಮೌಲ್ಯಗಳೊಂದಿಗೆ ಸಮಾಜದಲ್ಲಿ ಜನತೆಯು ತಮ್ಮ ಸುತ್ತಮುತ್ತಲಿನ ಸಾಮಾಜಿಕ ಪರಿಸರದಲ್ಲಾಗುವ ಬದಲಾವಣೆಗಳಿಂದ ಎಚ್ಚರವಾಗಿರುವಂತೆ ಸಂದೇಶ ನೀಡುವ ನೀತಿಕೇಂದ್ರಿತವಾದ ಪಠ್ಯವಾಗಿವೆ. ದಲಿತ ಸಂವೇದನೆಗಳ ಮೂಲಕ ಸಮಾಜದ ಅನಿಷ್ಟ ಪದ್ಧತಿಗಳನ್ನು ಬಿಡುವಂತೆ ಅದರಿಂದ ಸಮುದಾಯವು ಜಾಗೃತವಾಗಿರುವುದನ್ನು ಪ್ರೇರೇಪಿಸುತ್ತಾ, ಜನತೆಯಲ್ಲಿ ತಾತ್ವಿಕ ಚಿಂತನೆಗಳನ್ನು ಬಿತ್ತುವ ಕಾರ್ಯ ಬಾಲಬಸವರ ಮೌಖಿಕ ಸಾಹಿತ್ಯವು ಮಾಡುತ್ತದೆ.

ಬಾಲಬಸವರು ಹಾಡುವ ಮೌಖಿಕ ಸಾಹಿತ್ಯದಲ್ಲಿ ಕಾಲಜ್ಞಾನ ಮತ್ತು ಕಾವ್ಯಗಳೆಂಬ ಎರಡು ಬಗೆಯ ಮೌಖಿಕ ಸಾಹಿತ್ಯವಿದೆ. ಈ ಎರಡು ಬಗೆಯ ಪ್ರಕಾರಗಳಲ್ಲಿ ದಲಿತತ್ವವು ಮಹತ್ವದ ಸ್ಥಾನ ಪಡೆದುಕೊಂಡಿದೆ. ದಲಿತರ ನೆಲೆಯಿಂದ ಈ ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯನ್ನು ನೋಡಿದಾಗ ಮಾತ್ರ ದಲಿತರ ಕೊಡುಗೆಯನ್ನು ಅಥವಾ ಅವರ ಸಮುದಾಯಗಳ ಸಾಂಸ್ಕೃತಿಕ ಅನನ್ಯತೆಯನ್ನು ನಾವು ಗುರುತಿಸಬಹುದಾಗಿದೆ.

ಬಾಲಬಸವರ ಮೌಖಿಕ ಸಾಹಿತ್ಯದಲ್ಲಿ ವ್ಯಕ್ತಗೊಂಡಿರುವ ಸಾಂಸ್ಕೃತಿಕ ನೆಲೆಗಳ ಅಧ್ಯಯನದಿಂದ ಕಂಡುಕೊಂಡಿರುವ ಪ್ರಮುಖ ಫಲಿತಗಳು ಈ ಕೆಳಗಿನಂತಿವೆ.

* **ಅಧ್ಯಯನದ ಫಲಿತಗಳು :**

ಬಾಲಬಸವರನ್ನು ಶರಣ(ವಚನ) ಚಳವಳಿಯ ಭಿನ್ನಧಾರೆಗಳೆಂದು ಗುರುತಿಸಬಹುದಾಗಿದೆ.

ಬಾಲಬಸವರ ಮೂಲ ಕುರಿತು ಪುರಾಣ, ಐತಿಹ್ಯ, ದಂತಕಥೆಗಳು ಹಾಗೂ ಮೌಖಿಕ ರೂಪದಲ್ಲಿರುವ ಸಂಗತಿಗಳು ಏನೇ ಹೇಳಿದರೂ ಅವುಗಳಿಗೆ ಯಾವುದೇ ರೀತಿಯ ಪುರಾವೆಗಳು ಸಿಗುವುದಿಲ್ಲ. ಆದರೆ ಅವರ ವಾಸ್ತವಿಕ ಜೀವನವನ್ನು ಗಮನಿಸಿದಾಗ ಅವರು ವಚನ ಚಳವಳಿ ಭಾಗವಾಗಿ ಕಂಡುಬರುತ್ತಾರೆ. ಅವರು ಧರಿಸುವ ಉಡುಗೆ ತೊಡುಗೆಗಳು, ಅವರ ಕಾಯಕತತ್ವ, ಜೀವಿಸುವ ವಿಧಾನ ಮುಂತಾದವುಗಳನ್ನು ಆಧಾರವಾಗಿಸಿಕೊಂಡು ಬಾಲಬಸವರನ್ನು ವಚನ ಚಳವಳಿಯ ಭಿನ್ನಧಾರೆಗಳೆಂದು ಗುರುತಿಸಬಹುದಾಗಿದೆ.

* ಬಾಲಬಸವರ ಸಾಂಸ್ಕೃತಿಕ ಹಕ್ಕುದಾರಿಕೆಯ ಸ್ಥಳಗಳು ಅವರ ಮೂಲ ಸ್ಥಳಗಳಲ್ಲ. ಅವರು ಈ ಮೊದಲು ಒಂದೇ ಕಡೆ ವಾಸವಿದ್ದು, ವಚನ ಚಳವಳಿ ಮುಗಿದ ಬಳಿಕ ಇವರು ತಮ್ಮ ಜೀವನ ನಿರ್ವಹಣೆಗಾಗಿ ಕರ್ನಾಟಕದ ಹಲವು ಕಡೆಗೆ ವಲಸೆ ಹೋಗಿದ್ದಾರೆ. ಉದಾ- ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲ್ಲೂಕು ಮಂಡರಘಟ್ಟದ ಬಾಲಬಸವರು ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆಯ ತಾಲ್ಲೂಕಿನ ರಾಮಘಟ್ಟಕ್ಕೆ ಭೂಮಿ ಮತ್ತು ಆರ್ಥಿಕ ವಿಷಯಕ್ಕಾಗಿ ವಲಸೆ ಹೋಗಿರುವುದು ಕ್ಷೇತ್ರಕಾರ್ಯದ ಸಮಯದಲ್ಲಿ ತಿಳಿದ ಸಂಗತಿಯಾಗಿದೆ.

* ಬಾಲಬಸವರ ಕಾಲಜ್ಞಾನ ಸಾರುವ ಕಾಯಕವು ಬಹುತೇಕವಾಗಿ ಎಲ್ಲಾ ಕಡೆಗೂ ಒಂದೇ ಮಾದರಿಯಾಗಿದೆ. ಆದರೆ ಹಾಡಿನ ಲಯಗಾರಿಕೆಯಲ್ಲಿ ಭಿನ್ನವಾಗಿದೆ. ಕೂಡ್ಲಿಗಿಯ ತಾಲ್ಲೂಕು ಬೈರದೇವರಗುಡ್ಡದ ಬಾಲಬಸವ ತುಮನೆಪ್ಪ ಕಾಲಜ್ಞಾನದ ಜೊತೆಗೆ ಮಧ್ಯಕಾಲೀನ ಶಿವಶರಣರ ಜೀವನದ ಮುಖ್ಯ ಘಟನೆಗಳನ್ನು ಕಥನವಾಗಿ ಕಟ್ಟಿ ಹಾಡುತ್ತಾರೆ. ಅವುಗಳನ್ನು ಅವರು ಮೌಖಿಕ ಕಾವ್ಯ ರೀತಿಯಲ್ಲಿ ಹಾಡುತ್ತಾರೆ.

* ಬಾಲಬಸವರಿಗೆ ಕಾಲಜ್ಞಾನ ಮತ್ತು ಬಸವಣ್ಣರಿಂದಾಗಿ ಸಾಮಾಜಿಕವಾಗಿ ಮನ್ನಣೆ ಸಿಕ್ಕಿದೆ. ಆದರೆ ಆರ್ಥಿಕವಾಗಿ ಇವರ ಪರಿಸ್ಥಿತಿಯು ಯಾವುದೇ ರೀತಿ ಬದಲಾಗಿಲ್ಲ. ಧಾರ್ಮಿಕವಾಗಿ ಇವರು ಇನ್ನೂ ಅತಂತ್ರ ಸ್ಥಿತಿಯಲ್ಲಿದ್ದಾರೆ.

* ದ್ವಂದ್ವ ಮನಸ್ಥಿತಿಯಲ್ಲಿರುವ ಬಾಲಬಸವ ಪರಂಪರೆ ಹೊಸ ತಲೆಮಾರಿನವರು ಈಗ ತಮ್ಮ ಸಂಪ್ರದಾಯವನ್ನು ಬಿಟ್ಟು ಮತ್ತೆ ಮಾದಿಗ ಕುಲಕ್ಕೆ ಸೇರಿಕೊಳ್ಳುವ ಕಡೆ ಆಸಕ್ತರಾಗಿದ್ದಾರೆ. ಇನ್ನೂ ಕೆಲವರು ಆದಾಯದ ಮೂಲಗಳನ್ನು ಹರಸಿ ವಲಸೆ ಹೋಗುವ ಆಲೋಚನೆಯಲ್ಲಿದ್ದಾರೆ. ಅವರು ತಮ್ಮ ಮೂಲ ಕುಲವೃತ್ತಿಯನ್ನು ಬಿಡುವ ಧೈರ್ಯ ಮಾಡಿದರೂ, ಅದನ್ನೇ ಒಪ್ಪಿಕೊಳ್ಳುವ ದ್ವಂದ್ವ ಮನಸ್ಥಿತಿಯು ಹೊಸ ತಲೆಮಾರಿನ ಬಾಲಬಸವರಲ್ಲಿ ಕಂಡುಬರುತ್ತದೆ.

* ಬಾಲಬಸವರು ಆಧುನಿಕತೆಗೆ ಮುಖಾಮುಖಿಯಾಗಿರುವ ಈ ಸಂದರ್ಭದಲ್ಲಿ ಬಾಲಬಸವ ಪರಂಪರೆಯಲ್ಲಿ ಎರಡು ಕವಲುಗಳಾಗಿವೆ. ಬಾಲಬಸವ ಪದ್ಧತಿಯನ್ನು ಕೈಬಿಡುವ ಸಲುವಾಗಿ ಅನೇಕರು ದೀಕ್ಷೆಯನ್ನು ನಿರಾಕರಿಸಿದ್ದಾರೆ. ಆಧುನಿಕ ಶಿಕ್ಷಣದ ಪ್ರಭಾವದಿಂದಾಗಿ, ಉನ್ನತ ವಿಚಾರಶೀಲತೆ, ಆಲೋಚನೆ, ಓದು, ಸಂಘಟನೆಗಳ ನೆರವಿನಿಂದ ತಮ್ಮ ಬದುಕಿನ ಶೈಲಿಯಲ್ಲಿ ಬದಲಾವಣೆ ಇದಕ್ಕೆ ಕಾರಣವಾಗಿದೆ. ಮತ್ತೊಂದು ಕವಲು ಅದೇ ಸಮಾಜವನ್ನೇ ನಂಬಿ ಬದುಕುತ್ತಿದ್ದಾರೆ. ಅದರಿಂದ ಬಿಡಿಸಿಕೊಳ್ಳಲಾಗದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಕುಲ ಕಸುಬಿನಿಂದಲೇ ತಮ್ಮ ಜೀವನ ನಡೆಸುತ್ತಿದ್ದಾರೆ. ಆದರೆ ಒಂದು ಬದಲಾವಣೆಯೆಂದರೆ ಬೈರದೇವರಗುಡ್ಡ ಮತ್ತು ಹರಪನಹಳ್ಳಿಯಲ್ಲಿ ಬಿಟ್ಟರೆ ಉಳಿದ ಎಲ್ಲಾ ಕಡೆ ಈ ಬಾಲಬಸವಿ ಪದ್ಧತಿಯನ್ನು ಧಿಕ್ಕರಿಸಿರುವುದು ಕಂಡುಬರುತ್ತದೆ. ಆದರೆ ಇತ್ತೀಚಿನ ದಿನಮಾನಗಳಲ್ಲಿ ಬಾಲಬಸವಿ ಪದ್ಧತಿಯನ್ನು ಕೈ ಬಿಡುವ ಪ್ರಸಂಗಗಳು ಹೆಚ್ಚಾಗಿ ಕಂಡುಬರುತ್ತಿವೆ.

* ಸಮಾಜದಲ್ಲಿರುವ ಅಸ್ಪೃಶ್ಯತೆ, ದೇವದಾಸಿಗಳಂತಹ ಆಚರಣೆಗಳನ್ನು ತನ್ನ ಸೃಜನಾತ್ಮಕ ಕ್ರಿಯೆಗಳ ಮೂಲಕವೇ ಪ್ರತಿರೋಧವನ್ನು ಒಡ್ಡುವುದನ್ನು, ಬಾಲಬಸವರ ಮೌಖಿಕ ಸಾಹಿತ್ಯದಲ್ಲಿ ಕಾಣಬಹುದಾಗಿದೆ.

* ಬಾಲಬಸವಿಯರಲ್ಲಿರುವ ಲೋಕಜ್ಞಾನ ಮೀಮಾಂಸೆಯು ಸಮಾಜದಲ್ಲಿನ ಮಹಿಳೆಯ ಅಲಕ್ಷಿತ ಜ್ಞಾನಧಾರೆಯ ಮಹತ್ವವನ್ನು ತಿಳಿಸುತ್ತದೆ.

* ವಚನ ಚಳವಳಿ ಮತ್ತು ನಂತರ ಕಾಲದ ಶಿವಶರಣರ, ಚಾರಿತ್ರಿಕ, ಸಾಂಸ್ಕೃತಿಕ ನಾಯಕರ ಜೀವನಗಳು ಬಾಲಬಸವರ ಮೌಖಿಕ ಕಾವ್ಯಗಳ ಕಥಾವಸ್ತುವಾಗಿವೆ. ಮುಖ್ಯವಾಗಿ ಬಸವಣ್ಣ, ಹರಳಯ್ಯ, ಮರುಳಸಿದ್ಧ, ಗೋಣಿಬಸಪ್ಪ ಜೀವನದ ಮುಖ್ಯ ಘಟನೆಗಳನ್ನು ಕಥನವಾಗಿ ಕಟ್ಟಿ ಹಾಡುವುದರ ಮೂಲಕ ಸಾಂಸ್ಕೃತಿಕ ನಾಯಕರ ಬದುಕು ಮತ್ತು ಹೋರಾಟಗಳ ಮೂಲಕ ಸಮುದಾಯಗಳಲ್ಲಿ ದಲಿತಪ್ರಜ್ಞೆಯನ್ನು ಉಂಟುಮಾಡುತ್ತವೆ.

* ಕರ್ನಾಟಕದ ಭೌಗೋಳಿಕ ಪ್ರದೇಶಕ್ಕೂ ಬಾಲಬಸವರ ಸಾಂಸ್ಕೃತಿಕ ನೆಲೆಗಳಿಗೂ ಮಳೆಯ ನಂಬಿಕೆಯನ್ನು ಕೃಷಿಕರೊಂದಿಗಿನ ಸಂಬಂಧವನ್ನು ಕಾಲಜ್ಞಾನ ಸಾಹಿತ್ಯವು ಗಟ್ಟಿಗೊಳಿಸುತ್ತದೆ.

* ಕಾಯಕತತ್ವ, ತಂತ್ರವಿದ್ಯೆ, ಅವಮಾನಗಳ ಪ್ರತಿರೋಧ, ವಿಜ್ಞಾನ, ಪ್ರಕೃತಿ ವಿನಾಶ ಮುಂತಾದವುಗಳಿಂದ ಮನುಷ್ಯನ ಮೇಲೆ ಆಗುವ ಪರಿಣಾಮಗಳನ್ನು ತಿಳಿಸುತ್ತವೆ.

* ಬಾಲಬಸವರ ಮೌಖಿಕ ಸಾಹಿತ್ಯದಲ್ಲಿ ಸ್ಥಳೀಯ ಸಾಂಸ್ಕೃತಿಕ ಚರಿತ್ರೆಯ ಅಂಶಗಳು ಹಾಗೂ ಲಿಖಿತ ಚರಿತ್ರೆಯಲ್ಲಿ ದಾಖಲಾಗದ ಅನೇಕ ಸಂಗತಿಗಳು ಇವರ ಅಭಿವ್ಯಕ್ತಿ ನೆಲೆಗಳಲ್ಲಿ ಪ್ರಧಾನವಾಗಿ ಕಾಣಬಹುದಾಗಿದೆ. ಸಂಡೂರು ರಾಜನ ಕಥೆ, ಗೋಣಿಬಸಪ್ಪನ ಕಾವ್ಯ, ಮರುಳಸಿದ್ಧನ ಕಾವ್ಯ, ಹರಪನಹಳ್ಳಿ ಪಾಳೇಗಾರರು, ಜರಿಮಲೆ ಪಾಳೇಗಾರರು, ಸಂಡೂರು ಪಾಳೇಗಾರರು, ಗುಡೇಕೋಟೆಯ ಪಾಳೇಗಾರರ ಸ್ಥಳೀಯ ಚರಿತ್ರೆಯನ್ನು ಕಟ್ಟುವಲ್ಲಿ ಬಾಲ ಬಸವರ ಮೌಖಿಕ ಆಕರಗಳು ತುಂಬಾ ಮಹತ್ವದ ಕಾರ್ಯ ಮಾಡುತ್ತವೆ.

* ಬಾಲಬಸವರು ಮತ್ತು ದೇವರ ಗುಡ್ಡ ಹಾಗೂ ನೀಲಗಾರರ ನಡುವಿನ ಸಂಬಂಧ ಒಂದು ರೀತಿಯಲ್ಲಿ ಸಾಮೀಪ್ಯತೆಯನ್ನು ಹೊಂದಿದೆ. ಜಾತಿ, ಹಾಡುವ ಕಾವ್ಯಗಳು, ದೀಕ್ಷೆ, ವೇಷ ಭೂಷಣ, ಬಳಸುವ ಪರಿಕರಗಳು ಮುಂತಾದವುಗಳಲ್ಲಿ ಇವರ ನಡುವೆ ಒಂದು ಸಾಮಾಜಿಕ ಸಂಬಂಧವಿದೆ.

* ಬಾಲಬಸವರ ಮೌಖಿಕ ಸಾಹಿತ್ಯವನ್ನು ಕಾಲಜ್ಞಾನ ಮತ್ತು ಮೌಖಿಕ ಕಾವ್ಯವೆಂಬ ಎರಡು ಬಗೆಯಲ್ಲಿ ಕಾಣುತ್ತೇವೆ. ಕಾಲಜ್ಞಾನವು ಬಹುತೇಕ ಕರ್ನಾಟಕದಲ್ಲಿ ಬಾಲಬಸವರು ಹಾಡುತ್ತಾರೆ. ಆದರೆ ಮೌಖಿಕ ಕಾವ್ಯಗಳನ್ನು ಬೈರದೇವರ ಹರಪನಹಳ್ಳಿಯ ಬಾಲಬಸವ ಪರಂಪರೆಯ ಹಿರಿಯ

ತಲೆಮಾರಿನ ಬಾಲಬಸವ ತುಮನೆಪ್ಪ ಮಾತ್ರ ಹಾಡುತ್ತಾರೆ. ಮತ್ತೆ ಯಾರೂ ಮೌಖಿಕ ಕಾವ್ಯಗಳನ್ನು ಹಾಡುವುದಿಲ್ಲ.

* ಬಾಲಬಸವ ಪರಂಪರೆಯಲ್ಲಿ ಹಾಡುವ ಕಾಲಜ್ಞಾನದ ವಸ್ತು ಒಂದೇ ಆದರೂ ಲಯ ಮತ್ತು ಹಾಡುವ ಧಾಟಿಯು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿವೆ. ಅದರೆ ಒಂದು ಪ್ರದೇಶದಲ್ಲಿನ ಬಾಲಬಸವ ಪರಂಪರೆಯ ಕುಟುಂಬವು ಒಂದು ಲಯ ಮತ್ತು ಹಾಡುವ ಧಾಟಿಯನ್ನು ಹಾಗೆ ಮುಂದುವರಿಸಿಕೊಂಡು ಹೋಗುತ್ತಿದ್ದಾರೆ.

* ಕನ್ನಡದಲ್ಲಿರುವ ಕಾಲಜ್ಞಾನ ಸಾಹಿತ್ಯಕ್ಕೂ ಬಾಲಬಸವರ ಕಾಲಜ್ಞಾನ ಸಾಹಿತ್ಯಕ್ಕೂ ಕೆಲವೊಂದು ಸಾಮೀಪ್ಯತೆ ಕಂಡುಬಂದರೂ, ಬಾಲಬಸವರಲ್ಲಿ ದಲಿತಪ್ರಜ್ಞೆಯು ಹೆಚ್ಚಾಗಿ ಕಂಡುಬರುತ್ತದೆ. ಅವುಗಳೆಂದರೆ ವಿಡಂಬನೆ, ಪ್ರತಿರೋಧ, ಪ್ರಭುತ್ವದ ನಡೆ ಮುಂತಾದವುಗಳು.

* ಬಾಲಬಸವರು ಮಾದಿಗ ಸಮುದಾಯದವರು, ಲಿಂಗಾಯತರು ಇವರನ್ನು ಒಪ್ಪಿಕೊಂಡಿಲ್ಲ ಇದರಿಂದ ಇವರ ಮೌಖಿಕ ಕಾವ್ಯಗಳಲ್ಲಿ 'ದಲಿತ ಸಮುದಾಯದ ಸಾಂಸ್ಕೃತಿಕ ನಾಯಕರ' ಸಂಘರ್ಷಮಯವಾದ ಹೋರಾಟದ ಜೀವನವನ್ನು ಕಾಣುತ್ತೇವೆ. ಇವರ ಮೂಲಕ ಬಾಲಬಸವರ ಮೌಖಿಕ ಕಾವ್ಯಗಳು ದಲಿತಪ್ರಜ್ಞೆಯನ್ನು ಜಾಗೃತಿಗೊಳಿಸುವ ಪ್ರಯತ್ನ ಹರಳಯ್ಯ, ಬಾಲಬಸವ, ಮರುಳಸಿದ್ಧ, ಗೋಣಿಬಸಪ್ಪ ಮುಂತಾದ ಸಾಂಸ್ಕೃತಿಕ ನಾಯಕರುಗಳ ಮೂಲಕ ಮಾಡುತ್ತದೆ.

* ಸಾಂಸ್ಕೃತಿಕ ನಾಯಕರು ಧರ್ಮದ ಕಟ್ಟುಪಾಡುಗಳನ್ನು ಮೀರಿದವರು, ಜಂಗಮತ್ವವನ್ನು ಬಿಟ್ಟವರು, ಕುಲಸಂಕರ ಮದುವೆಯಾದವರು, ವೀರಶೈವ ಪಂಥವು ಸಾಂಸ್ಥೀಕರಣವಾಗುವುದನ್ನು ವಿರೋಧಿಸಿದರು. ಜನಪದರು ತಮ್ಮ ಬಾಯಿಯಲ್ಲಿ ಪಂಚಗಣಾಧೀಶ್ವರರು ಇದ್ದಾರೆ ಹೊರತು, ಶಿಷ್ಟ ವೀರಶೈವ ಸಾಹಿತ್ಯದಲ್ಲಿ ಅವರ ಕುರಿತು ಉಲ್ಲೇಖಗಳಿಲ್ಲ, ಇದು ಮೌಖಿಕ ಕಾವ್ಯಗಳಿಗಿರುವ ಜೀವಪರತೆಯನ್ನು ಕಾಣಬಹುದಾಗಿದೆ.

* ಸಾಂಸ್ಕೃತಿಕ ನಾಯಕರು ವಚನ ಚಳವಳಿಯ ಕಾಯಕನಿಷ್ಠೆಯನ್ನು ಮುಂದುವರಿಸಿ ಕೊಂಡು ಬಂದವರು, ಇವರು ಸಮಾಜದಲ್ಲಿ 'ದಲಿತ ಸಮುದಾಯಗಳ ಸಾಂಸ್ಕೃತಿಕ ಅನನ್ಯತೆಯನ್ನು' ಕಟ್ಟಿಕೊಡುವಲ್ಲಿ ಹೋರಾಟ ಮಾಡಿದ್ದಾರೆ.

ಅನುಬಂಧ

ಸಂದರ್ಶನದ ವಿವರಗಳು: ವಕ್ತೃ ವಿವರಗಳು

ಕ್ರಸಂ	ಹೆಸರು	ವಯಸ್ಸು	ಊರು	ತಾಲ್ಲೂಕು	ಉದ್ಯೋಗ
೧.	ತುಮನೆಪ್ಪ	೬೫	ಬೈರದೇವರಗುಡ್ಡ	ಕೂಡ್ಲಿಗಿ	ಬಾಲಬಸವರು
೨.	ಬಸವರಾಜಪ್ಪ	೪೫	ಹರಪನಹಳ್ಳಿ	ಹರಪನಹಳ್ಳಿ	ಬಾಲಬಸವರು
೩.	ಹಾಲಮ್ಮ	೫೦	ಹರಪನಹಳ್ಳಿ	ಹರಪನಹಳ್ಳಿ	ಬಾಲಬಸವಿಯರು
೪.	ಮಹಾದೇವಿ	೩೩	ಹರಪನಹಳ್ಳಿ	ಹರಪನಹಳ್ಳಿ	ಬಾಲಬಸವಿಯರು
೫.	ಬಾಲಜ್ಜ	೩೦	ಹರಪನಹಳ್ಳಿ	ಹರಪನಹಳ್ಳಿ	ಬಾಲಬಸವರು
೬.	ಜ್ಯೋತಿ	೨೬	ಹರಪನಹಳ್ಳಿ	ಹರಪನಹಳ್ಳಿ	ಬಾಲಬಸವಿ
೭.	ಮಂಜಪ್ಪ ಬಿ	೩೨	ದೊಗ್ಗಳ್ಳಿ	ಹರಿಹರ	ಗ್ರಾಪಂ ಸದಸ್ಯ
೮.	ಹನುಮಂತಪ್ಪ	೬೦	ದೊಗ್ಗಳ್ಳಿ	ಹರಿಹರ	ಬಾಲಬಸವರು
೯.	ಈರಪ್ಪ	೬೯	ದೊಗ್ಗಳ್ಳಿ	ಹರಿಹರ	ವ್ಯವಸಾಯ
೧೦.	ನಾಗೇಂದ್ರ	೩೮	ದೊಗ್ಗಳ್ಳಿ	ಹರಿಹರ	ಬಾಲಬಸವ
೧೧.	ಕೃಷ್ಣಪ್ಪ	೪೮	ಹಿರಿಯೂರು	ಹಿರಿಯೂರು	ನಿಲಯ ಪಾಲಕ
೧೨.	ಮಾರ್ಕಂಡೇಶ್ವರ	೬೬	ಕೋಡಿಮಠ	ಹಿರಿಯೂರು	ಮಠದ ಗುರುಗಳು
೧೩.	ಹುಗ್ ಹನುಮಂತಪ್ಪ	೬೩	ಹೀಲದಹಳ್ಳಿ	ರಾಣೆಬೆನ್ನೂರು	ಬಾಲಬಸವರು
೧೪.	ಹಾಲಮ್ಮ	೫೫	ಹೀಲದಹಳ್ಳಿ	ರಾಣೆಬೆನ್ನೂರು	ಮನೆಕೆಲಸ
೧೫.	ಸೋಮಲಿಂಗಪ್ಪ	೪೨	ಹೀಲದಹಳ್ಳಿ	ರಾಣೆಬೆನ್ನೂರು	ವ್ಯವಸಾಯ
೧೬.	ಗಜೇಂದ್ರ	೩೦	ಹೀಲದಹಳ್ಳಿ	ರಾಣೆಬೆನ್ನೂರು	ಸಮಾಜ ಸೇವೆ
೧೭.	ಮಹಾದೇವಪ್ಪ	೪೫	ಹೀಲದಹಳ್ಳಿ	ರಾಣೆಬೆನ್ನೂರು	ಬಾಲಬಸವರು
೧೮.	ಸಣ್ಣ ಬಸಣ್ಣ	೩೫	ಹೀಲದಹಳ್ಳಿ	ರಾಣೆಬೆನ್ನೂರು	ಬಾಲಬಸವರು
೧೯.	ನಾಗರಾಜಪ್ಪ	೪೦	ಗಂಜನಹಳ್ಳಿ	ಹೊನ್ನಾಳಿ	ಬಾಲಬಸವರು
೨೦.	ಕರಿಬಸಪ್ಪ	೪೫	ನ್ಯಾಮತಿ	ಹೊನ್ನಾಳಿ	ಬಾಲಬಸವರು
೨೧.	ಜಗದೀಶ	೩೮	ನ್ಯಾಮತಿ	ಹೊನ್ನಾಳಿ	ಬಾಲಬಸವರು
೨೨.	ರುದ್ರೇಶ	೩೫	ನ್ಯಾಮತಿ	ಹೊನ್ನಾಳಿ	ಬಾಲಬಸವರು

೨೩.	ನಾಗೇಂದ್ರಪ್ಪ	೭೦	ರಾಮಘಟ್ಟ	ಹೊಳಲ್ಕೆರೆ	ಬಾಲಬಸವರು
೨೪.	ಲೋಕಪ್ಪ	೪೫	ರಾಮಘಟ್ಟ	ಹೊಳಲ್ಕೆರೆ	ಬಾಲಬಸವರು
೨೫.	ಹನುಮಂತಪ್ಪ	೬೫	ರಾಮಘಟ್ಟ	ಹೊಳಲ್ಕೆರೆ	ಬಾಲಬಸವರು
೨೬.	ಗೋಣೆಪ್ಪ	೩೬	ರಾಮಘಟ್ಟ	ಹೊಳಲ್ಕೆರೆ	ಬಾಲಬಸವರು
೨೭.	ಬಸವರಾಜಪ್ಪ	೪೪	ರಾಮಘಟ್ಟ	ಹೊಳಲ್ಕೆರೆ	ಬಾಲಬಸವರು
೨೮.	ಶಿವಪ್ಪ	೪೫	ಹರ್ಲಾಪುರ	ಗದಗ	ಬಾಲಬಸವರು
೨೯.	ಮಲ್ಲಪ್ಪ	೪೬	ಹರ್ಲಾಪುರ	ಗದಗ	ಬಾಲಬಸವರು
೩೦.	ಯಲ್ಲಪ್ಪ	೫೯	ಹರ್ಲಾಪುರ	ಗದಗ	ಬಾಲಬಸವರು
೩೧.	ಸತೀಶ ಪಾಟೀಲ್	೩೬	ಕೊಟ್ಟೂರು	ಕೊಟ್ಟೂರು	ಸಹ ಪ್ರಾಧ್ಯಾಪಕರು
೩೨.	ಮಂಜುನಾಥ	೫೦	ಬಳ್ಳಾರಿ	ಬಳ್ಳಾರಿ	ಪ್ರಾಧ್ಯಾಪಕರು
೩೩.	ಕೆ.ಆರ್. ಬಸವರಾಜ	೪೯	ಬೊಮ್ಮಗಟ್ಟ	ಮೊಳಕಾಲ್ಮೂರು	ಬಾಲಬಸವರು
೩೪.	ಚಂದ್ರಶೇಖರ	೬೫	ಕೆ.ಕೆ.ಪುರ	ಮೊಳಕಾಲ್ಮೂರು	ಬಾಲಬಸವರು
೩೫.	ಶಿವಕುಮಾರ್	೪೮	ಬಾಗಳಿ	ಹರಪನಹಳ್ಳಿ	ಪ್ರಾಧ್ಯಾಪಕರು
೩೬.	ನಾಗೇಂದ್ರಪ್ಪ	೩೪	ಮಂಟರಘಟ್ಟ	ಚನ್ನಗಿರಿ	ಬಾಲಬಸವರು
೩೭.	ಹುಲುಗಪ್ಪ	೪೫	ಗೊಲ್ಲರಹಳ್ಳಿ	ಕೊಟ್ಟೂರು	ವ್ಯವಸಾಯ
೩೮.	ಮೂಗಮ್ಮ	೬೦	ಕೂಡ್ಲಿಗಿ	ಕೂಡ್ಲಿಗಿ	ಮನೆಕೆಲಸ
೩೯.	ಈರಮ್ಮ	೬೬	ಬೈರದೇವರಗುಡ್ಡ	ಕೂಡ್ಲಿಗಿ	ಮನೆಕೆಲಸ
೪೦.	ದುರುಗೇಶ	೩೬	ಕೂಡ್ಲಿಗಿ	ಕೂಡ್ಲಿಗಿ	ಪಪಂ* ಸದಸ್ಯ
೪೧.	ಅರವಿಂದ ಮಾಲಗತ್ತಿ	೫೮	ಮೈಸೂರು	ಮೈಸೂರು	ವಿಶ್ರಾಂತ ಪ್ರಾಧ್ಯಾಪಕರು
೪೨.	ಕೃಷ್ಣಮೂರ್ತಿ ಹನೂರು	೬೦	ಮೈಸೂರು	ಮೈಸೂರು	ವಿಶ್ರಾಂತ ಪ್ರಾಧ್ಯಾಪಕರು
೪೩.	ಕೆ. ರಾಮಯ್ಯ	೬೩	ಕೋಟಗಾನಹಳ್ಳಿ	ಕೋಲಾರ	ಸಂಸ್ಕೃತಿ ಚಿಂತಕ
೪೪.	ಕೆ.ಆರ್. ದುರ್ಗಾದಾಸ್	೬೫	ಮೈಸೂರು	ಮೈಸೂರು	ವಿಶ್ರಾಂತ ಪ್ರಾಧ್ಯಾಪಕರು


೪೫.	ಯಲ್ಲಪ್ಪ ಕೆ.ಕೆ.ಪುರ	೫೫	ಮೈಸೂರು	ಮೈಸೂರು	ದಲಿತಸಂಸ್ಕೃತಿ ಚಿಂತಕ
೪೬.	ಶಿಲ್ಪ ಬಿ.ಕೆ.	೨೪	ಬೀರೂರು	ಕಡೂರು	ಪಿಎಚ್.ಡಿ ವಿದ್ಯಾರ್ಥಿನಿ
೪೭.	ಯಲ್ಲಜ್ಜ ಬಿ.	೬೦	ನೇರಲಕೆರೆ	ತರೀಕೆರೆ	ಬೇಸಾಯ
೪೮.	ಮಂಜುನಾಥ	೪೪	ನೇರಲಕೆರೆ	ತರೀಕೆರೆ	ಕೂಲಿ
೪೯.	ಕುಮಾರಸ್ವಾಮಿ	೪೬	ನೇರಲಕೆರೆ	ತರೀಕೆರೆ	ವಾಟರ್ ಮ್ಯಾನ್
೫೦.	ರೇಣುಕಪ್ಪ	೪೫	ನೇರಲಕೆರೆ	ತರೀಕೆರೆ	ಕೆ.ಇ.ಬಿ.
೫೧.	ಸ್ವರೂಪ	೧೯	ಹರಪನಹಳ್ಳಿ	ಹರಪನಹಳ್ಳಿ	ಬಾಲಬಸವ
೫೨.	ಗೋಣೆಮ್ಮ	೩೪	ಹರಪನಹಳ್ಳಿ	ಹರಪನಹಳ್ಳಿ	ಬಾಲಬಸವಿ
೫೩.	ದೇವಕ್ಕ	೧೮	ಹರಪನಹಳ್ಳಿ	ಹರಪನಹಳ್ಳಿ	ವಿದ್ಯಾಭ್ಯಾಸ
೫೪.	ಮೈಲಕ್ಕ	೨೮	ಹರಪನಹಳ್ಳಿ	ಹರಪನಹಳ್ಳಿ	ಬಾಲಬಸವಿ
೫೫.	ರೇಣುಕಮ್ಮ	೪೫	ಹರಪನಹಳ್ಳಿ	ಹರಪನಹಳ್ಳಿ	ಮನೆಗೆಲಸ
೫೬.	ಶಿವಮ್ಮ	೩೨	ಹರಪನಹಳ್ಳಿ	ಹರಪನಹಳ್ಳಿ	ಮನೆಗೆಲಸ
೫೭.	ಮೂಗಪ್ಪ	೪೫	ರಾಮಪುರ	ಕೊಟ್ಟೂರು	ವ್ಯವಸಾಯ
೫೮.	ಹಂದೇರ ಮೂಗಮ್ಮ	೩೫	ಹೀರೆಹೆಗ್ಡಾಳು	ಕೂಡ್ಲಿಗಿ	ಪ್ರಾಧ್ಯಾಪಕರು
೫೯.	ಲೋಕೇಶ	೩೬	ಗಂಗಮ್ಮನಹಳ್ಳಿ	ಕೊಟ್ಟೂರು	ವ್ಯವಸಾಯ
೬೦.	ಪೂಜಾರಪ್ಪ	೩೮	ದೊಡ್ಡಗೊಲ್ಲರಹಟ್ಟಿ	ಕೂಡ್ಲಿಗಿ	ಪೂಜಾರಿಕೆ
೬೧.	ಬಸವರಾಜ	೩೯	ಕೂಡ್ಲಿಗಿ	ಕೂಡ್ಲಿಗಿ	ಪೂಜಾರಿಕೆ
೬೨.	ಚೌಡಪ್ಪ ಎಸ್.	೮೪	ಕೂಡ್ಲಿಗಿ	ಕೂಡ್ಲಿಗಿ	ವ್ಯವಸಾಯ
೬೩.	ರುದ್ರಪ್ಪ ಎಸ್.	೩೬	ಕೂಡ್ಲಿಗಿ	ಕೂಡ್ಲಿಗಿ	ಪೌರಕಾರ್ಮಿಕ
೬೪.	ರಾಮಪ್ಪ ಜಿ.	೩೫	ಮೈದೂರು	ಹರಪನಹಳ್ಳಿ	ಸಂಶೋಧಕರು
೬೫.	ಹಾಲಪ್ಪ	೫೦	ಶಿವಪುರ	ಕೂಡ್ಲಿಗಿ	ವ್ಯವಸಾಯ
೬೬.	ಹುಲಿಯಪ್ಪ	೨೮	ಬೋಮ್ಮಗಟ್ಟ	ಸಂಡೂರು	ಕಾರ್ಮಿಕ
೬೭.	ದುರುಗಮ್ಮ	೪೮	ಸಂಡೂರು	ಸಂಡೂರು	ಮನೆಕೆಲಸ
೬೮.	ಚಾರೇಶ ಎಸ್.	೩೬	ಕೂಡ್ಲಿಗಿ	ಕೂಡ್ಲಿಗಿ	ಸಂಶೋಧಕರು

೧೯.	ಕರಿಬಸಪ್ಪ	೫೮	ಹಾರಕಬಾವಿ	ಹಾರಕಬಾವಿ	ಶಿಕ್ಷಕರು
೨೦.	ಅಜ್ಜಣ್ಣ	೫೨	ಕೊಟ್ಟೂರು	ಕೊಟ್ಟೂರು	ಶಿಕ್ಷಕರು


*ಪಪಂ– ಪಟ್ಟಣ ಪಂಚಾಯ್ತಿ

*ಗ್ರಾಪಂ– ಗ್ರಾಮ ಪಂಚಾಯ್ತಿ

ಛಾಯಾಚಿತ್ರಗಳು



ಬಾಲಬಸವ ತುಮನೆಪ್ಪ ಬೈರದೇವರಗುಡ್ಡ



ಬಾಲಬಸವ ನಾಗೇಂದ್ರಪ್ಪ ಮಂಡರಗಟ್ಟ



ಬಾಲಬಸವ ಹುಗ್ ಹನುಮಂತಪ್ಪ

ಮತ್ತು ಬಾಲಬಸವ ಮರಿಯಪ್ಪ, ಹೀಲದಹಳ್ಳಿ



ಬಾಲಬಸವರ ನಾಗರಾಜಪ್ಪ, ಗಂಜಗನಹಳ್ಳಿ, ನ್ಯಾಮತಿ



ಬಾಲಬಸವ ಶಿವಪ್ಪ, ಹರ್ಲಾಪುರ, ಗದಗ



ಬಾಲಬಸವ ಬಾಲಜ್ಜ, ಹರಪನಹಳ್ಳಿ



ಬಾಲಬಸವಿ ಜ್ಯೋತಿ, ಹರಪನಹಳ್ಳಿ



ಬಾಲಬಸವಿ ಹಾಲಮ್ಮ ಮತ್ತು ಅವರ ಮಗಳು ಬಾಲಬಸವಿ ಮಹಾದೇವಕ್ಕ ಹಾಗೂ ಸಂಶೋಧಕರು



ಬಾಲಬಸವ ನಾಗೇಂದ್ರಪ್ಪ ಮಂಡರಘಟ್ಟದಲ್ಲಿ ಕಾಲಜ್ಞಾನ ಸಂಗ್ರಹದ ಕ್ಷೇತ್ರಕಾರ್ಯದಲ್ಲಿ ಸಂಶೋಧಕರು



ಮೌಖಿಕ ಕಾವ್ಯ ಹಾಡುವ ಬಾಲಬಸವರ ಮೇಳ



ಕ್ಷೇತ್ರಕಾರ್ಯ ಸಮಯದಲ್ಲಿ ಗುಮ್ಮಗೋಳದ ಶ್ರೀ ಗೋಣಿಬಸಪ್ಪನ ಗದ್ದುಗೆ ಬಳಿ ಶ್ರೀ ಪ್ರಕಾಶಸ್ವಾಮಿ ದೇವಸ್ಥಾನ ಪ್ರಧಾನರೊಂದಿಗೆ ಹಾಗೂ ಬಾಲಬಸವ ತುಮನೆಪ್ಪ, ಹುಲುಗಪ್ಪ ಹಾಗೂ ಸಂಶೋಧಕರು



ಹಿರೇಸಿಂಧೋಗಿಯ ಶ್ರೀ ಮರುಳಸಿದ್ಧರ ಗದ್ದುಗೆ ಬಳಿ ಬಾಲಬಸವ ತುಮನೆಪ್ಪ ಹಾಗೂ ಸಂಶೋಧಕರು



ಬಾಲಬಸವ ವಾಸವಾದ ಸ್ಥಳ ಹರಪನಹಳ್ಳಿ ನೆಲದ ಮಾಳಿಗೆ ತೋಟ



ಹರಪನಹಳ್ಳಿ ಬಾಲಬಸವರು ವಾಸ ಮಾಡುವ ಗುಡಿಸಿಲುಗಳು



ಮದ್ದಾನೇಶ್ವರ ಸ್ವಾಮಿ ಮಠ, ಕೂಲಹಳ್ಳಿ, ಹರಪನಹಳ್ಳಿ ತಾಲ್ಲೂಕು, ಬಳ್ಳಾರಿ ಜಿಲ್ಲೆ



ಕೂಲಹಳ್ಳಿ ಮದ್ದಾನೇಶ್ವರ ಮಠದಲ್ಲಿ ಹಾವಿನ ರೂಪದಲ್ಲಿ ಬಾಲಬಸವನ ಉಬ್ಬುಶಿಲ್ಪ



ಶ್ರೀ ಗೋಣಿಬಸವೇಶ್ವರ, ಕೂಲಹಳ್ಳಿ ಮಠ, ಹರಪನಹಳ್ಳಿ ತಾಲ್ಲೂಕು, ಬಳ್ಳಾರಿ ಜಿಲ್ಲೆ



ಶ್ರೀ ಗೋಣಿಬಸಪ್ಪನ ಮಠದ ಹೊರಭಾಗ, ಗೊಮ್ಮಗೋಳ



ಗುಮ್ಮಗೋಳದ ಮಠದಲ್ಲಿ ಗೋಣಿಬಸಪ್ಪ ಐಕ್ಯವಾದ ಸ್ಥಳ



ಹಿರೇಸಿಂಧೋಗಿಯ ಮರುಳಸಿದ್ಧ ಮಹಾದೇವರ ಗದ್ದುಗೆಯ ಸ್ಥಳ



ಮರುಳಸಿದ್ಧರ ಮಳೆಯ ಕೀಲುಗಳು ಹಿರೇಸಿಂಧೋಗಿ ಮಠ. ಕೊಪ್ಪಳ ಜಿಲ್ಲೆ



ಜರ್ಮಲಿಯ ಪಾಳೇಗಾರರು ಉಜ್ಜಯಿನಿಯ ಮರುಳಸಿದ್ಧನ ಗರ್ಭಗುಡಿಯ ಶಿಖರಕ್ಕೆ ತೈಲ ಎರೆಯುವ ಸಮಯ



ಉಜ್ಜಯಿನಿ ಮಠದ ಶ್ರೀ ಮರುಳಸಿದ್ಧೇಶ್ವರ ಕೊಟ್ಟೂರು (ತಾ)



ಉಜ್ಜಯಿನಿ ಮಠದ ಹೊರಭಾಗ ಕೊಟ್ಟೂರು (ತಾ)



ಜರ್ಮಲಿಯ ಪಾಳೇಗಾರರು ಉಜ್ಜಯಿನಿಯ ಮರುಳಸಿದ್ಧನ ಗರ್ಭಗುಡಿಯ ಶಿಖರಕ್ಕೆ ತೈಲ ಎರೆಯುವ ಸ್ಥಳ.



ಕಾಲಜ್ಞಾನ ಸಾರುವ ಹೀಲದಹಳ್ಳಿ ಬಾಲಬಸವ (ಸಂಗ್ರಹ)



ಬಾಲಬಸವರಿಗೆ ದಾನ ನೀಡುತ್ತಿರುವ ಸಂದರ್ಭದ ಚಿತ್ರ(ಸಂಗ್ರಹ)

ಆಕರ ಗ್ರಂಥಸೂಚಿ

ಅಂಬಳಿಕೆ ಹಿರಿಯಣ್ಣ, ೧೯೯೮, **'ಜನಪದ ಸಿದ್ಧಾಂತಗಳು'**, ಜಿ.ಎಸ್. ಗ್ರಂಥಮಾಲೆ, ಮೈಸೂರು.

ಅಂಬಳಿಕೆ ಹಿರಿಯಣ್ಣ, ೧೯೯೪, **'ಜನಪದ ಆಲೋಚನ'**, ಪ್ರಜ್ವಲ ಪ್ರಕಾಶನ, ಮೈಸೂರು.

ಅಂಬಳಿಕೆ ಹಿರಿಯಣ್ಣ, ೨೦೦೧, **'ಸಾಂಸ್ಕೃತಿಕ ಅನನ್ಯತೆ' ಸೈದ್ಧಾಂತಿಕ ಜಾನಪದ**, ಪ್ರಜ್ವಲ ಪ್ರಕಾಶನ, ಮೈಸೂರು.

ಅಂಬಳಿಕೆ ಹಿರಿಯಣ್ಣ, ೨೦೦೬, **'ವೃತ್ತಿ ಗಾಯಕರು'**, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಅರವಿಂದ ಮಾಲಗತ್ತಿ, ೨೦೧೪, **'ಸೀಮಾತೀತ ಕನ್ನಡ ಸಾಹಿತ್ಯ ಚರಿತ್ರೆ ಸಂಪುಟ–೩**, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಅರವಿಂದ ಮಾಲಗತ್ತಿ, ೨೦೧೪, **'ಸೀಮಾತೀತ ಕನ್ನಡ ಸಾಹಿತ್ಯ ಚರಿತ್ರೆ ಸಂಪುಟ–೪**, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಅರವಿಂದ ಮಾಲಗತ್ತಿ, ೨೦೧೪, **'ಸಾಹಿತ್ಯ ಸಂಸ್ಕೃತಿ ಮತ್ತು ದಲಿತ ಸಾಹಿತ್ಯ'**, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು.

ಅರವಿಂದ ಮಾಲಗತ್ತಿ, ೧೯೯೯, **'ದಲಿತಯುಗ ಮತ್ತು ದಲಿತ ಸಾಹಿತ್ಯ'**, ಚೇತನ ಬುಕ್ ಹೌಸ್, ಮೈಸೂರು.

ಅರುಣ್ ಜೋಳದಕೂಡ್ಲಿಗಿ, ೨೦೧೬, **'ಗಂಟಿಚೋರ್ ಸಮುದಾಯ,'** ಡಾ.ಬಿ.ಆರ್ ಅಂಬೇಡ್ಕರ್ ಅಧ್ಯಯನ ಕೇಂದ್ರ, ಬೆಂಗಳೂರು.

ಅರ್ಜುನ ಗೊಳಸಂಗಿ, ೧೯೯೫, **'ಗೊಳಸಂಗಿ ಗ್ರಾಮ: ಒಂದು ಸಾಂಸ್ಕೃತಿಕ ಅಧ್ಯಯನ'**, ಮಲ್ಲಿಕಾರ್ಜುನ
ಪ್ರಕಾಶನ, ಗೊಳಸಂಗಿ.

ಉಮಾಪತಿ(ಸಂ), ೨೦೧೦, **'ಕಾಲಜ್ಞಾನ ವಚನ ಸಾಹಿತ್ಯ'**, ಪ್ರಕಾಶಕರು: ಪ್ರೊ. ಎಸ್ ಉಮಾಪತಿ ದಾವಣಗೆರೆ.

ಓಬಳೇಶ ಕೆ.ಎ., ೨೦೧೭. **'ಅಸ್ಮಿತೆ ಮತ್ತು ಆತ್ಮವಿಮರ್ಶೆ'**, ಅರುಣ ಪ್ರಕಾಶನ, ಬೆಂಗಳೂರು.

ಕಲಬುರ್ಗಿ ಎಂ.ಎಂ., ೧೯೯೮, **'ಶಾಸನಗಳಲ್ಲಿ ಶಿವಶರಣರು'**, ವೀರಶೈವ ಅಧ್ಯಯನ ಸಂಸ್ಥೆ, ಗದಗ.

ಕೃಷ್ಣ ಮೂರ್ತಿ ಮ.ಸು, ೨೦೧೦, **'ಸಿದ್ಧ ಸಾಹಿತ್ಯ'**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಕಾಳೇಗೌಡ ನಾಗವಾರ, ೧೯೯೬, **'ಜನಪದ ಸಾಹಿತ್ಯ'**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಕೇಶವನ್ ಪ್ರಸಾದ್(ಸಂ), ೧೯೯೭, **'ಮಲೆಮಾದೇಶ್ವರ'**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಕೊಸಾಂಬಿ ಡಿ.ಡಿ., ೨೦೧೩. **'ಪುರಾಣ ಮತ್ತು ವಾಸ್ತವ'**, ಚಿಂತನ ಪುಸ್ತಕ, ಬೆಂಗಳೂರು.

ಗಂಗಾಧರ ದೈವಜ್ಞ(ಸಂ), ೧೯೯೯, **'ಮಾಳಿಂಗರಾಯನ ಕಾವ್ಯ'**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಗಂಗಾಧರ ದೈವಜ್ಞ (ಸಂ), ೨೦೧೦, **'ಗೊಂದಲಿಗರು'**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಗುರುಪ್ರಸಾದ್ ಕಂಟಲಗೆರೆ, ೨೦೧೯, **'ದಲಿತ ಸಾಂಸ್ಕೃತಿಕ ಕಥನಗಳ ಅಧ್ಯಯನ'**, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ಗುರುಪ್ರಸಾದ್, ೨೦೧೪, **'ನೀಲಗಾರರು: ಸಂಕಥನ'** ಬಂಗಾರಿ ಪಬ್ಲಿಕೇಷನ್, ಗೊಟಗೋಡಿ, ಹಾವೇರಿ.

ಚಂದ್ರಶೇಖರ ಕಂಬಾರ(ಸಂ), ೧೯೮೫, **'ಕನ್ನಡ ಜನಪದ ವಿಶ್ವಕೋಶ,'**(ಸಂ.೧, ೨), ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಚಲುವರಾಜು, ೧೯೯೭, **'ಜುಂಜಪ್ಪ'**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಚಲುವರಾಜು, ೧೯೧೫, **'ಬಲಿಚಕ್ರವರ್ತಿ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಚನ್ನಣ್ಣ ವಾಲೀಕಾರ, ೧೯೯೨, **'ಒಂದು ಗ್ರಾಮದ ಜನಪದ ಅಧ್ಯಯನ'**, ಅಕ್ಷರ ಪ್ರಕಾಶನ, ಸಾಗರ.

ಚನ್ನಣ್ಣ ವಾಲೀಕಾರ, ೧೯೯೩, **'ಜನಪದಲೋಕ'**, ದಲಿತ ಬಂಡಾಯ ವಿಚಾರ ಪ್ರಚಾರ ಸಮಿತಿ, ಗುಲಬರ್ಗಾ.

ಚಿನ್ನಸ್ವಾಮಿ ಸೋಸಲೆ, ೨೦೧೨, **'ದಲಿತರ ಬದುಕು ಮೆಲುಕು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಚಿದಾನಂದಮೂರ್ತಿ, ೧೯೮೫, **'ಮಧ್ಯಕಾಲೀನ ಕನ್ನಡ ಸಾಹಿತ್ಯ ಮತ್ತು ಅಸ್ಪೃಶ್ಯತೆ'**, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಚಿದಾನಂದಮೂರ್ತಿ ಎಂ., ೧೯೭೦, **'ಸಂಶೋಧನಾ ತರಂಗ ಸಂಪುಟ-೨'**, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

ತಿಪ್ಪೆರುದ್ರಸ್ವಾಮಿ ಎಚ್, ೨೦೦೪, **'ವಚನ ಸಾಹಿತ್ಯ: ವೈಚಾರಿಕತೆ ಅಧ್ಯಯನ'**, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ತಿಪ್ಪೆರುದ್ರಸ್ವಾಮಿ ಎಚ್., ೨೦೧೬ (೧೪ನೇ). **'ಕರ್ಣಾಟಕ ಸಂಸ್ಕೃತಿ ಸಮೀಕ್ಷೆ'**, ಡಿ.ವಿ.ಕೆ ಪ್ರಕಾಶನ, ಮೈಸೂರು.

ನಟರಾಜ ಬೂದಾಳು, ೨೦೧೬, **'ಕನ್ನಡ ಕಾವ್ಯ ಮಿಮಾಂಸೆ,'** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ನಾಗರಾಜು ಡಿ.ಆರ್., ೧೯೯೯, **'ಅಲ್ಲಮಪ್ರಭು ಮತ್ತು ಶೈವಪ್ರತಿಭೆ'**, ಅಕ್ಷರ ಪ್ರಕಾಶನ, ಹೆಗ್ಗೋಡು.

ನಾಗರಾಜು ಡಿ.ಆರ್., ೨೦೦೯, **'ಅಮೃತ ಮತ್ತು ಗರುಡ'**, ಅಕ್ಷರ ಪ್ರಕಾಶನ, ಹೆಗ್ಗೋಡು.

ನಾಗರಾಜು ಡಿ.ಆರ್., ೨೦೧೫, **'ಶಕ್ತಿ ಶಾರದೆ ಮೇಳ'**, ಅಕ್ಷರ ಪ್ರಕಾಶನ, ಹೆಗ್ಗೋಡು.

ನಾವಡ ಎ. ವಿ., ೨೦೦೦, **'ಮೌಖಿಕಕಾವ್ಯ ಸಂಯೋಜನೆ'**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ನಾರಾಯಣಸ್ವಾಮಿ. ಜಿ., ೨೦೦೮, **'ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ದಲಿತ ಸಂವೇದನೆ': ಒಂದು ಅಧ್ಯಯನ,** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ದೇವರಾಜು ಓ., ೨೦೧೩, **'ಮಧ್ಯಕಾಲೀನ ಕರ್ನಾಟಕ ಚರಿತ್ರೆಯಲ್ಲಿ ದಲಿತರು'**, ಪಲ್ಲವ ಪ್ರಕಾಶನ, ಚನ್ನಪಟ್ಟಣ.

ದೇವಯ್ಯ ಹರವೆ, ೨೦೧೫, **'ದಲಿತ ಸಾಹಿತ್ಯ ಮತ್ತು ಇತರೆ ಲೇಖನಗಳು,** ಕನ್ನಡ ಸಾಹಿತ್ಯ ಪರಿಷತ್ತು. ಬೆಂಗಳೂರು.

ಪಡಶಟ್ಟಿ ಎಂ.ಎಂ., ೧೯೯೬, **'ತಿಂಥಿಣಿ ಮೋನಪ್ಪಯ್ಯ: ಒಂದು ಅಧ್ಯಯನ'**, ವೀರಶೈವ ಅಧ್ಯಯನ ಸಂಸ್ಥೆ, ಗದಗ.

ಪರಮಶಿವಯ್ಯ ಜೀ.ಶಂ., ೨೦೧೬, **'ದಕ್ಷಿಣ ಕರ್ನಾಟಕ ಜನಪದ ಕಾವ್ಯ ಪ್ರಕಾರಗಳು'** ಅಭಿನವ ಪ್ರಕಾಶನ, ಬೆಂಗಳೂರು.

ಪುಟ್ಟಯ್ಯ ಬಿ.ಎಂ., ೨೦೧೮, **'ಅಲಕ್ಷಿತ ವಚನಕಾರರ ಲೋಕದೃಷ್ಟಿ'**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಪುಟ್ಟಯ್ಯ ಬಿ.ಎಂ, ೨೦೧೬, **'ಶ್ರಮ ಭಾಷೆ'**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಪುರುಷೋತ್ತಮ ಬಿಳಿಮಲೆ, ಚಲುವರಾಜು, ೧೯೯೬. **'ಹಂಪಿ ಜಾನಪದ'**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಪುರುಷೋತ್ತಮ ಬಿಳಿಮಲೆ, ೧೯೯೭, **'ಕೂಡುಕಟ್ಟು'**, ಆನಂದ ಕಂದ ಗ್ರಂಥಮಾಲೆ, ಮೂಲ್ಲಾಡಿಹಳ್ಳಿ.

ಪುರುಷೋತ್ತಮ ಬಿಳಿಮಲೆ, ೧೯೯೯, **'ಕುಮಾರರಾಮ'**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಪ್ರಭಾಕರ ಎ.ಎಸ್., ೧೯೯೯, **'ಮ್ಯಾಸಬೇಡರ ಕಥನಗಳು'**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

ಬಸವರಾಜ ಎಲ್(ಸಂ)., ೧೯೬೩, **'ಶಿವದಾಸ ಗೀತಾಂಜಲಿ'**, ಜಗದ್ಗುರು ಶ್ರೀಶಿವರಾತ್ರೇಶ್ವರ ಗ್ರಂಥಮಾಲೆ, ಮೈಸೂರು.

ಬಸವರಾಜು ಕುರುಬರ, ೨೦೦೪, **'ಜನಪದ ಮಹಾಕಾವ್ಯಗಳು ನಿರ್ಮಾಣ ಪ್ರತಿಭೆಯ ನೆಲೆಗಳು'**, ಗೀತಾಂಜಲಿ ಪಬ್ಲಿಕೇಷನ್ಸ್, ಬೆಂಗಳೂರು.

ಬಸವಲಿಂಗ ಸೊಪ್ಪಿನಮಠ, ೧೯೯೫, **'ಕೊಡೇಕಲ್ ಬಸವಣ್ಣ ಒಂದು ಅಧ್ಯಯನ'**, ಕೊಡೇಕಲ್ಲು ಬಸವಣ್ಣ ಅಧ್ಯಯನ ಸಂಸ್ಥೆ, ಕೊಡೇಕಲ್ಲು.

ಬೋರಲಿಂಗಯ್ಯ ಹಿ.ಚಿ (ಸಂ)., ೧೯೯೭, **'ಮಂಟೇಸ್ವಾಮಿ'**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

ಬೋರಲಿಂಗಯ್ಯ ಹಿ.ಚಿ., ೨೦೧೮, **'ಕರ್ನಾಟಕ ಜನಪದ ಮಹಾಕಾವ್ಯ ಮೀಮಾಂಸೆ ಮತ್ತು ತಾತ್ವಿಕತೆ'**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

ಬೋರಲಿಂಗಯ್ಯ ಹಿ.ಚಿ (ಸಂ),. ೨೦೧೫, **'ಕರ್ನಾಟಕ ಜನಪದ ಕಲೆಗಳ ಕೋಶ'**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

ಭಾಸ್ಕರ್ ಪ್ರಸಾದ ಬಿ.ಆರ್., ೨೦೧೭, **'ಆಸಾದಿ'**, ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನ ಸಂಸ್ಥೆ. ಬೆಂಗಳೂರು.

ಮಂಜುನಾಥ ಬೇವಿನಕಟ್ಟಿ (ಸಂ), ೧೯೯೭, **'ಮೈಲಾರಲಿಂಗನ ಕಾವ್ಯ'**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

ಮಂಜುನಾಥ ಸಿ.ಯು., ೨೦೧೨, **'ಶಾಸನಗಳು ಮತ್ತು ಕರ್ನಾಟಕ ಸಂಸ್ಕೃತಿ'**, ಚಿತ್ಕಲಾ ಪ್ರಕಾಶನ, ಕುಪ್ಪಂ.

ಮಹಾದೇವ ಶಂಕನಪುರ, ೨೦೦೧, **'ಮಾರಿಹಬ್ಬಗಳು'**, ಪ್ರಕಾಶಕರು ಪಿಎಂಎಸ್ಆರ್ ಸಂಸ್ಥೆ ಕೊಳ್ಳೇಗಾಲ.

ಮಹೇಶ ತಿಪ್ಪಶೆಟ್ಟಿ, ೨೦೧೪, **'ಬಸವತತ್ವ: ಸಾಮಾಜೀಕ ಬದಲಾವಣೆ'**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಮಾಣಿಕರಾವ ಧನಶ್ರೀ, ೨೦೧೩, **'ಕನ್ನಡದಲ್ಲಿ ಕಾಲಜ್ಞಾನ ಸಾಹಿತ್ಯ'**, ರೂಪ ಪ್ರಕಾಶನ, ಮೈಸೂರು.

ಮುತ್ತಯ್ಯ, ೨೦೦೮, **'ಕನ್ನಡ ಜನಪದ ಮಹಾಕಾವ್ಯಗಳು ಮತ್ತು ಪ್ರತಿಸಂಸ್ಕೃತಿ'**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಮುದೇನೂರು ಸಂಗಣ್ಣ, ೧೯೯೩, **'ಗೊಂದಲಿಗರ ದೇವೇಂದ್ರಪ್ಪನವರ ಆಟಗಳು'**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಮೈಲ್ಲಹಳ್ಳಿ ರೇವಣ್ಣ (ಸಂ)., ೨೦೧೩, **'ದಲಿತ ಸಂತರು'**, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಮೊಗಳ್ಳಿ ಗಣೇಶ, ೨೦೦೯, **'ಅವ್ಯಕ್ತ ಚರಿತ್ರೆ'**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಮೊಗಳ್ಳಿ ಗಣೇಶ, ೨೦೧೫, **'ಜಾತಿ ಮೀಮಾಂಸೆ'**, ಅಭಿನವ ಪ್ರಕಾಶನ, ಬೆಂಗಳೂರು.

ಮೇತ್ರಿ ಕೆ.ಎಂ., ೧೯೯೭, **'ಕುಮಾರರಾಮ ಮತ್ತು ಕೃಷ್ಣಗೊಲ್ಲರ ಮಹಾಕಾವ್ಯ'**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಮೋಹನ ಕುಂಟಾರ್, ೨೦೧೨, **'ಸಮುದಾಯಗಳ ಕನ್ನಡ ಪರಂಪರೆ'**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಮೋಹನಕೃಷ್ಣ ರೈ, ೨೦೧೭, **'ಪ್ರಭುತ್ವ ಮತ್ತು ಜನತೆ'**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

ಯೋಗಿ ನಾರೇಯಣ ಯತೀಂದ್ರ, ೨೦೧೫, **'ಕೈವಾರ ಸದ್ಗುರು ಶ್ರೀ ಯೋಗಿ ನಾರೇಯಣ ವಿರಚಿತ ಕಾಲಜ್ಞಾನ-ಭವಿಷ್ಯವಾಣಿ'**, ಪ್ರಕಾಶಕರು: ಶ್ರೀ ಯೋಗಿನಾರೇಯಣ ಮಠ, ಶ್ರೀ ಕ್ಷೇತ್ರ ಕೈವಾರ.

ರಂಗಸ್ವಾಮಿ ಬಿ. ಅರ್ಚಕ, ೧೯೭೧, **'ಹುಟ್ಟಿದ ಹಳ್ಳಿ'** ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

ರಾಜಶೇಖರ ಪಿ.ಕೆ., ೨೦೦೩, **'ಜಾನಪದ ಸಂಭ್ರಮ'**, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

ರಾಜೇಂದ್ರ ಚೆನ್ನಿ, ೧೯೮೯, **'ದೇಶಿವಾದ,'** ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ರಾಮಚಂದ್ರೇಗೌಡ ಹಿ.ಶಿ., ೧೯೯೮, **'ಜಾನಪದ: ಸಾಂಸ್ಕೃತಿಕ ಆಯಾಮಗಳು'**, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

ರಾಮಚಂದ್ರೇಗೌಡ ಹಿ.ಶಿ., ೧೯೮೭, **'ಜಾನಪದ ಅಂತರಂಗ'**, ಮಾನವಿ ಪ್ರಕಾಶನ, ಮೈಸೂರು.

ರವೀಂದ್ರನಾಥ ಕೆ. (ಸಂ)., ೨೦೦೦, **'ಬಸವಯುಗದ ವಚನೇತರ ಸಾಹಿತ್ಯ'**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ರವಿಕುಮಾರ ನೀಹ, ೨೦೧೯, **'ದಲಿತ ಸಾಹಿತ್ಯ ಮೀಮಾಂಸೆ'**, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ರಹಮತ್ ತರೀಕೆರೆ, ೨೦೧೪, **'ಸಂಶೋಧನ ಮೀಮಾಂಸೆ'**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ರಹಮತ್ ತರೀಕೆರೆ, ೨೦೧೭, **‘ಕರ್ನಾಟಕ ಶಾಕ್ತಪಂಥ’**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ರಹಮತ್ ತರೀಕೆರೆ, ೨೦೧೮, **‘ಕನ್ನಡ ಸಂಶೋಧನೆ ತಾತ್ವಿಕ ವಿಚಾರ’**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ರಹಮತ್ ತರೀಕೆರೆ, ೨೦೧೫, **‘ಸಾಂಸ್ಕೃತಿಕ ಅಧ್ಯಯನ’**, ಅಭಿನವ ಪ್ರಕಾಶನ, ಬೆಂಗಳೂರು.

ರಹಮತ್ ತರೀಕೆರೆ, ಅರುಣ್ ಜೋಳದಕೂಡ್ಲಿಗಿ (ಸಂ)., ೨೦೧೭, **‘ತತ್ವಪದ ಪ್ರವೇಶಿಕೆ’** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

ಲಕ್ಕಪ್ಪಗೌಡ ಎಚ್.ಜೆ. (ಸಂ)., ೧೯೯೫., **‘ಜಾನಪದ ಕೈಪಿಡಿ’**, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

ಲಕ್ಷ್ಮಣ್ ತೆಲಗಾವಿ(ಸಂ),. ೨೦೦೩, **‘ಸ್ಥಳೀಯ ಚರಿತ್ರೆ ಅಧ್ಯಯನದ ತಾತ್ವಿಕತೆ ಮತ್ತು ಸ್ವರೂಪ’**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಲಕ್ಷ್ಮೀಪತಿ ಕೋಲಾರ, ೨೦೧೬, **‘ದಕ್ಷಿಣ ದಂಡಾಜೀವಿಕ’**, ಶಾಹು ಪ್ರಕಾಶನ, ಕೋಲಾರ.

ವಿಜಯ್ ಪೂಣಚ್ಚ ತಂಬಂಡ, ೨೦೦೪, **‘ಪಳಮೆ’**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವಿಜಯ್ ಪೂಣಚ್ಚ ತಂಬಂಡ, ೨೦೦೯, **‘ಕೆಳವರ್ಗದ ಪ್ರತಿಭಟನೆ ಸಬಾಲ್ಟರ್ನ್ ಚರಿತ್ರೆ’**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವಿದ್ಯಾಶಂಕರ ಎಸ್., ೨೦೦೯, **‘ಹೀಗೊಬ್ಬ ಸರ್ವಜ್ಞ’**, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು.

ವಿವೇಕ ರೈ, ೧೯೯೫, **‘ಅನ್ವಯಿಕ ಜಾನಪದ’**, ಕನ್ನಡ ಪುಸ್ತಕ ಪಾಧಿಕಾರ, ಬೆಂಗಳೂರು.

ವಿಶ್ವನಾಥ ಮರತೂರು, ೨೦೧೯, **‘ಜಾಗತೀಕರಣ ಮತ್ತು ದಲಿತರ ಸಂಕಷ್ಟಗಳು: ಒಂದು ಒಳನೋಟ’**, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ವೀರಣ್ಣ ದಂಡೆ, ೨೦೦೪, **‘ಜನಪದ ಕಾವ್ಯಮೀಮಾಂಸೆ ಹಾಗೂ ವಿಮರ್ಶಾ ಪ್ರಸ್ಥಾನಗಳು’**, ಕನ್ನಡ ಪುಸ್ತಕ

ಪ್ರಾಧಿಕಾರ, ಬೆಂಗಳೂರು.

ವೀರೇಶ ಬಡಿಗೇರ, ೨೦೦೭, **‘ಬಾಚಿಕಾಯಕದ ಬಸವಯ್ಯ: ವೃತ್ತಿ ಹಾಗೂ ತತ್ವಮೀಮಾಂಸೆ’**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವೀರೇಶ ಬಡಿಗೇರ(ಸಂ.), ೨೦೧೬, **‘ತಿಂತಿಣಿ ಮೌನೇಶ್ವರರ ವಚನಗಳು’** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

ವೀರೇಶ ಬಡಿಗೇರ, ೨೦೧೯, **'ಪಾಂಚಾಳ ಸಾಹಿತ್ಯ ಮತ್ತು ಸಂಸ್ಕೃತಿ'**, ಮಯ ಪ್ರಕಾಶನ, ಕಮಲಾಪುರ.

ವೆಂಕಟೇಶ ಇಂದ್ವಾಡಿ(ಸಂ)., ೧೯೯೭, **'ಧರೆಗೆ ದೊಡ್ಡವರ ಕಥೆ'**, ವಿಶ್ವಾಲಯ ಪ್ರಕಾಶನ, ಬೆಂಗಳೂರು.

ವೆಂಕಟೇಶ ಇಂದ್ವಾಡಿ೧೯೯೯, **'ಮಂಟೇಸ್ವಾಮಿ ಪರಂಪರೆ'**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವೆಂಕಟೇಶ ಇಂದ್ವಾಡಿ(ಸಂ)., ೨೦೦೬, **'ಬಾಲಬಸವ ತುಮನೆಪ್ಪ ಹಾಡಿದ ಗೋಣಿ ಬಸಪ್ಪನ ಕಾವ್ಯ'**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವೆಂಕಟೇಶ ಇಂದ್ವಾಡಿ, ೨೦೦೭, **'ಸೂತಕವೆಂಬ ರೂಪಕ'**, ಕಂಸಾಳೆ ಪ್ರಕಾಶನ, ಮೈಸೂರು.

ವೆಂಕಟೇಶ ಇಂದ್ವಾಡಿ(ಸಂ), ೨೦೦೮, **'ಮಲೆಯ ಮಾದಪ್ಪನ ಮಹಾಕಾವ್ಯ: ಸಾಂಸ್ಕೃತಿಕ ಮುಖಾಮುಖಿ'**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವೆಂಕಟೇಶ ಇಂದ್ವಾಡಿ(ಸಂ), ೧೯೯೭, **'ಮಂಟೇಸ್ವಾಮಿ ಓದು ಪಠ್ಯ'**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವೆಂಕಟೇಶ ಇಂದ್ವಾಡಿ(ಸಂ), ೨೦೧೦, **'ಸಿರಿ ಜನಪದ ಕಾವ್ಯ: ಸಾಂಸ್ಕೃತಿಕ ಮುಖಾಮುಖಿ'**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಶಶಿಧರ. ಎಸ್. ಬಿ., ೨೦೧೫, **'ಶ್ರೀ ಗೋಣಿ ಬಸವೇಶ್ವರರ ಜೀವನ ಚರಿತ್ರೆ'**, ಪ್ರಕಾಶ ಕೂಲಹಳ್ಳಿ ಶ್ರೀ ಗೋಣಿ ಬಸವೇಶ್ವರ ಟ್ರಸ್ಟ್, ಕೂಲಹಳ್ಳಿ.

ಶ್ಯಾಮಲ ಸಿ.ಆರ್, ೨೦೧೭, **'ಪೂರ್ವ ಕರ್ನಾಟಕದ ಪಾಳೆಯಗಾರರು'**, ಕನ್ನಡ ವಿಭಾಗ ಮುಂಬೈ ವಿಶ್ವವಿದ್ಯಾಲಯ, ಕಲಿನಾ, ಮುಂಬೈ.

ಶಾರದ, ೨೦೧೯, **'ದಲಿತ ಸಾಹಿತ್ಯ ಮತ್ತು ಚಳುವಳಿಯ ಅಂತರ್ ಸಂಬಂಧ'**, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ಶಿವಾನಂದ ಎಸ್. ವಿರಕ್ತಮಠ,(ಸಂ), ೧೯೯೯, **'ರಾಚಪ್ಪಯ್ಯನ ಕೃತಿಗಳು'**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಶಿವಾನಂದ ಎಸ್. ವಿರಕ್ತಮಠ, ೨೦೦೫, **'ಅಮರಕಲ್ಯಾಣ'**, ನುಡಿ ಪ್ರಕಾಶನ, ಹೊಸಪೇಟೆ.

ಶಿವಾನಂದ ಎಸ್ ವಿರಕ್ತಮಠ(ಸಂ.) ೨೦೧೨, **'ಮಹಿಳಾ ಅಧ್ಯಯನ'**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಶಿವಾನಂದ ಕೆಳಗಿನಮನಿ, ೨೦೦೯, **'ಮಾದಿಗ–ಲಿಂಗಾಯತರ ಸಾಂಸ್ಕೃತಿಕ ಅಧ್ಯಯನ'**, ಶ್ರೀ ಶಿರಡಿ ಎಂಟರ್‌ಪ್ರೈಸಸ್ ಪ್ರಕಾಶನ, ಬೆಂಗಳೂರು.

ಶಿವಾನಂದ ಕೆಳಗಿನಮನಿ, ೨೦೧೮, **'ಮಾದರ ಚನ್ನಯ್ಯ ಬಹುಮುಖಿ ಅಧ್ಯಯನ'**, ಶ್ರೀ ಶಿರಡಿ ಎಂಟರ್ ಪ್ರೈಸಸ್ ಪ್ರಕಾಶನ, ಬೆಂಗಳೂರು.

ಶೈಲಜ ಹಿರೇಮಠ, ೧೯೯೯, **'ಪಾತರದವರು'**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಶೈಲಜ ಹಿರೇಮಠ, ೨೦೧೨, **'ಹರದೇಶಿ–ನಾಗೇಶಿ ಕಲಿ ಮತ್ತು ಕಲಾವಿದರು ಲಿಂಗಸಂಬಂಧಿ ಅಧ್ಯಯನ'**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಶೈಲಜ ಹಿರೇಮಠ, ೨೦೦೩, **'ಸ್ತ್ರೀ ಕಥನ'**, ಭುವನ ಪ್ರಕಾಶನ, ಎಂ.ಪಿ ಪ್ರಕಾಶ ನಗರ ಹೊಸಪೇಟೆ.

ಸಿದ್ಧರಾಮಯ್ಯ ಎಸ್.ಜಿ., ೨೦೧೩, **'ವಚನ ಸಂಸ್ಕೃತಿ–ಸಾಹಿತ್ಯ ಸಂಗತಿ'**, ಸಪ್ನ ಬುಕ್ ಹೌಸ್, ಬೆಂಗಳೂರು.

ಸವುಕಾರ ಕಾಂಬಳೆ, ೨೦೦೨, **'ಲಿಂಗಾಯತ ಅಸ್ಪೃಶ್ಯರು ಒಂದು ಅಧ್ಯಯನ'**, ವೀರಶೈವ ಅಧ್ಯಯನ ಸಂಸ್ಥೆ, ಗದಗ.

ಸುಜಾತ ಅಕ್ಕಿ, ೨೦೧೬, **'ನಮ್ಮೂರು ತಂಬ್ರಹಳ್ಳಿ**, ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ಗೊಟಗೋಡಿ.

ಹಳ್ಳಿಕೇರಿ ಎಫ್.ಟಿ., ೧೯೯೯, **'ಎಮ್ಮೆ ಬಸವನ ಕಾಲಜ್ಞಾನ ಸಾಹಿತ್ಯ'**, ಪ್ರಸಾರಾಂಗ, ಕನ್ನಡ ವಿಶ್ವ ವಿದ್ಯಾಲಯ, ಹಂಪಿ.

ಹಿರೇಮಠ ಎಸ್.ಎಸ್., ೧೯೯೭, **'ಪಂಚಣಾಧೀಶ್ವರ ಒಂದು ಅವಲೋಕನ'**, ಶ್ರೀ ಸಿದ್ಧವೀರ ಶಿವಾಚಾರ್ಯಜ್ಞಾನ ಪ್ರಕಾಶನ, ಬಳ್ಳಾರಿ.

ಅಪ್ರಕಟಿತ ಪ್ರಬಂಧಗಳು

ನಾಗರಾಜಯ್ಯ ವಿ.ಎಚ್, **'ಕರ್ನಾಟಕ ಆದಿಜಾಂಬವ ಮಾತಂಗ ಪರಂಪರೆ: ಸಾಂಸ್ಕೃತಿಕ ವಿಶ್ಲೇಷಣೆ'**. ಕ.ವಿ.ವಿ ಹಂಪಿ.

ಮಂಜುನಾಥ ಬಿ.ಆರ್., **'ಬಾಲಬಸವರು: ಒಂದು ಅಧ್ಯಯನ'**. ಗುಲಬುರ್ಗ ವಿಶ್ವವಿದ್ಯಾಲಯ ಗುಲಬರ್ಗ

ರಾಧ ಟಿ., **'ದೇವದಾಸಿಯರ ತೌಲನಿಕ ಅಧ್ಯಯನ'**. ಕ.ವಿ.ವಿ ಹಂಪಿ.

ರೇಖಾ, **'ಪಂಚಗಣಾಧೀಶ್ವರರು: ಪವಾಡಗಳು ಸಂಕಥನ'**. ಕ.ವಿ.ವಿ ಹಂಪಿ.


ಸತೀಶ ಪಾಟೀಲ, **'ಪಂಚಗಣಾಧೀಶ್ವರರು: ಸಾಂಸ್ಕೃತಿಕ ಅಧ್ಯಯನ'**. ಕ.ವಿ.ವಿ ಹಂಪಿ.

ಶ್ರೀನಿವಾಸಮೂರ್ತಿ. **‘ವಿಶ್ವ ಬಂಧು ಮರುಳಸಿದ್ಧ: ಒಂದು ಅಧ್ಯಯನ’**. ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

‘ಕರ್ನಾಟಕದಲ್ಲಿ ಮರುಳಸಿದ್ಧನ ನೆಲೆಗಳು ಮತ್ತು ಸ್ಮಾರಕಗಳು: ಚಾರಿತ್ರಿಕ ಅಧ್ಯಯನ.’ ಕ.ವಿ.ವಿ ಹಂಪಿ.

ಲೇಖನ :

ಎಲ್ಲಪ್ಪ ಕೆ.ಕೆ. ಪುರ, ೪, ಮಾರ್ಚ್–೧೯೯೯, **‘ಕಾಲಜ್ಞಾನದ ಬಾಲಬಸವರು’**, ಸುಧಾ ವಾರಪತ್ರಿಕೆ.



ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ